VIDYA DAYINI

1894 to 1914

VIDYADAYINI

(*An Educational Magazine.*)

793

ವಿದ್ಯಾದಾಯಿನಿ.

ಸಂಪುಟ ೨.

(೧೮೯೪ನೇ ಜನವರಿಯಿಂದ ಡಿಸಂಬರ್‌ವರೆಗೆ.)

1894.

MYSORE:

PRINTED AT THE GRADUATES' TRADING ASSOCIATION PRESS.

1894

ವಿಷಯಸೂಚನೆ.

——:0:——

		ಪುಟಗಳು.
೧.	ಗುರುಶಿಷ್ಯರ ಸಂಬಂಧ ..	೧, ೩೩, ೧೦೫
೨.	ಕಷ್ಟದಲ್ಲಿಯೂ ವಿದ್ಯಾಭ್ಯಾಸಮಾಡೋಣ	೪೧
೩.	ವಿದ್ಯಾಭ್ಯಾಸ	೧೩೭
೪.	ಓದುಗಾರಿಕೆ	೩೫
೫.	ಪರೀಕ್ಷೆಗೆ ಹೋಗಿರತಕ್ಕ ವಿದ್ಯಾರ್ಥಿಗಳು ಜ್ಞಾಪಕದಲ್ಲಿಡತಕ್ಕ ..	
	ಮುಖ್ಯಾಂಶಗಳು	೨೬೫, ೨೪೬
೬.	ಟೆಕ್ಸ್‌ಟ್‌ಬುಕ್ ಕಮಿಟಿಯ ರಿಪೋರ್ಟು ..	೧೩೦, ೧೫೩, ೧೭೩
೭.	ವಿದ್ಯಾಭ್ಯಾಸದ ಇಲಾಖೆಯ ರಿಪೋರ್ಟು	೩೬, ೧೯೨, ೨೧೫, ೨೩೪
೮.	ಪ್ರಸಿದ್ಧ ಪುರುಷರು.	
	ಮಹಾರಾಣಿ ಸುವರ್ಣಮಾಯಿ	೧೩೨
	ಫಾಮಸ್ ಆರ್ನಲ್ಡ್	೨೮೯
	ಬಾಳಾಜಿ ವಿಶ್ವನಾಥಭಟ್ಟ	೨೪೬
೯.	ಶಾಸ್ತ್ರ	
	ಕೊಪ್ಪರ್	೧೩೬, ೪೧
	ವಸ್ತುಸಂಬಂಧವಾದ ಪ್ರಾಕೃತಿಕ ಬದಲಾವಣೆಗಳು ..	೯೪
೧೦.	ಶಾರೀರಭಾಗ. ..	೩೬, ೪೪, ೧೦೦, ೨೦೦, ೨೩೬
೧೧.	ಪ್ರಾಣಿಶಾಸ್ತ್ರ	
	ಕಪಟ (ಬಾವಲಿ)	೧೩೯
	ಉಷ್ಟ್ರಪಕ್ಷಿ	೧೩೩
	ಅಳಲು	೨೩೦
	ಸಿಂಹ	೨೩೩

೧೬. ಸಸ್ಯಶಾಸ್ತ್ರ.

ತೆಂಗು ೧೪

ಬತ್ತ ೧೪

ನೆಲಗಡಲೆ ೧೪

ಕಬ್ಬು ೧೪

ಗಂಧದ ಮರ ೧೪

೧೩. ವಸ್ತುಪಾಠ.

ಕಿತ್ತಲೆಹಣ್ಣು ೧೪

ಉಪ್ಪು ೧೪

ಶೇಎಲೆ ೧೪

ಕಾಗದ ೧೪

ಕರ್ಪೂರ ೧೪

ದೀಪದ ಕಡ್ಡಿ ೧೪

ಉಕ್ಕಿನಪೇನ ೧೪

ಸ್ಲೇಟು ೧೪

ಹಿಮ ಮತ್ತು ಮಂಜು ೧೪

೧೪. ಶಿಕ್ಷಣಪದ್ಧತಿ ೪೪, ೧೧೩, ೧೪

ಪ್ರಥಮ ಶಿಕ್ಷಣವು ೧೪

ಪಾಠಕ್ರಮ ೧೪

ಭೂವಿವರಣೆಪಾಠ ೧೪

೧೫. ಕೆಂಡರ್‌ಗಾರ್ಟ್ ೧೪೫, ೧೪೯, ೧೪

೧೬. ಗಣಿತಶಾಸ್ತ್ರ, ಗಣಿತ .. ೧೪೫, ೪೪, ೬೦, ೯೧, ೧೪೬, ೧೪೪

.. ೧೬೬, ೧೯೪, ೧೧೨, ೧೪೩, ೧೬೧, ೧೪

೧೭. ಕರ್ನಾಟಕಪಂಡಿತಪರೀಕ್ಷೆ .. ೧೦೧, ೧

೧೪. ಮೈಸೂರು ದೇಶೀಯ ಪರೀಕ್ಷೆಗಳು .. ೩೧, ೧

೧೯. ಪ್ರಶ್ನೆಪತ್ರಿಕೆಗಳು .. ೧೬, ೪೯, ೧೮೩, ೨೪೧, ೨೬೭

೨೦. ಹಾಡುಗಳು

ಮಕ್ಕಳಿಗೆ ಬುದ್ಧಿವಾದ ೨೪

ಮಾತೃಭಕ್ತಿ ೫೪

ಇರುವೆ ೭೩

ಅಂಗಸಾಧನೆ ೧೧೩

ಕಣ್ಣಾಮುಚ್ಚಿ ೧೪೬

ನದಿಯುವರ್ಣನೆ ೨೧೪

ಸದುಪದೇಶ ೨೪೩

ಕಥೆಗಳು

ಒಳ್ಳೇಮನಸ್ಸು ೨೪೪

ಸನ್ಮಿತ್ರರು ೪೨

ಸತ್ಯವಂತರಾದಕಟ್ಟಿಗೆಯವರು ೨೩೩

ಜಗಳದಿಂದುಂಟಾಗುವಕೇಡು ೨೭೯

ಲೋವರ್‌ಸೆಕೆಂಡರಿಪರೀಕ್ಷಾಗ್ರಂಥದಟಿಪ್ಪಣಿ ೧೫೧, ೧೭೪, ೧೦೩, ೨೨೧

೨೩. ಸೂಚನೆಗಳು ಮತ್ತು ಸಮಾಚಾರಗಳು ೨೭, ೫೫, ೭೪, ೧೦೨, ೧೪೪, ೧೬೪, ೧೭೪, ೨೪೩, ೨೭೧

ಚಿತ್ರಗಳು

೧. ತೆಂಗು ೭

೨. ರಕ್ತದಬೊಟ್ಟುಗಳು ೨೦೧

೩. ಹೃದಯಕಮಲ ೨೦೨

೪. ರಕ್ತಾಭಿಸರಣ ೨೦೩, ೨೭೩

೫. ಕಪಟ(ಬಾವಲಿ) ೧೪೦

೬. ಉಷ್ಟ್ರಪಕ್ಷಿ ೧೬೩

೭. ಕಬ್ಬು ೨೫೭

೮. ಸಿಂಹ ೨೭೪

ವಿಷಯಗಳನ್ನು ಬರೆದವರ ಹೆಸರು.

೧. ಎಡಿಟರ್

೨. ಮಾ। ರಾ। ಸಿ. ಕೃಷ್ಣರಾವ್, ಬಿ. ಎ.

೩. ಶೇ। ಜಯರಾಯಾಚಾರ್ಯರು. (ಆರಮನೆಯವಿದ್ವಾಂಸರು)

೪. ಮಾ। ರಾ। ಆರ್. ಹೆಚ್. ದೇಶಪಾಂಡೆ, ಎಂ. ಎ.

ಮಾ। ರಾ। ಎಂ. ಟಿ. ನಾರಸೈಂಗಾರ್, ಎಂ. ಎ.

೫. ಎಂ. ಎಸ್. ಪುಟ್ಟಣ್ಣ, ಬಿ. ಎ.

೬. ಮಾ। ರಾ। ಎ. ಬೇಟೆರಾಯದೀಕ್ಷಿತರು.

೭. ಶೇ। ಹೊಟಗಾನಹಳ್ಳಿ ರಾಮಶೇಷಶಾಸ್ತ್ರಿಗಳು.

೮. ಶೇ। ರಾಘವೇಂದ್ರಾಚಾರ್ಯರು.

೯. ಮಾ। ರಾ। ಪಿ. ರಾಘವೇಂದ್ರರಾವ್, ಬಿ. ಎ. ಬಿ. ಎಲ್.

೧೦. ಮಾ। ರಾ। ಕೆ. ರಾಮಾನುಜಐಂಗಾರ್.

೧೧. ಮಾ। ರಾ। ಕೆ. ರಾಮಸ್ವಾಮೈಂಗಾರ್.

೧೨. ಮಾ। ರಾ। ಬಿ. ಎಸ್. ರಾಶೋಜಿರಾವ್, ಬಿ. ಎ.

೧೩. ನಾ। ರಾ। ಕೊ. ಕಂ. ವೆಂಕಟಶಾಮೈಯ, ಬಿ. ಎ.

೧೪. ಮಾ। ರಾ। ಡಿ. ವೆಂಕಟರಾಮೈಯ, ಬಿ. ಎ.

೧೫. ಮಾ। ರಾ। ಎಸ್. ವೆಂಕಟೇಶೈಂಗಾರ್, ಬಿ. ಎ.

೧೬. ಮಾ। ರಾ। ಎಂ. ಬಿ. ಶ್ರೀನಿವಾಸಐಂಗಾರ್, ಬಿ. ಎ.

೧೭. ಮಾ। ರಾ। ಎಲ್. ಸುಬ್ಬರಾವ್.

೧೮. ಮಾ। ರಾ। ಎ. ಹರಿಯಣ್ಣ, ಬಿ. ಎ.

MYSORE GOVERNMENT
ORIENTAL LIBRARY.

ವಿದ್ಯಾದಾಯಿನಿ.

ಭಾಗ ೨.] ಜನವರಿ ೧೯೯೪. [ಸಂಚಿಕೆ ೧.

೧. ಗುರುಶಿಷ್ಯಸಂಬಂಧ.

ನಮ್ಮ ಹಿಂದುಗಳಲ್ಲಿ ಗುರುವು ಒಬ್ಬ ತಂದೆ ಎಂದು ಭಾವಿಸುತ್ತಾರೆ. ನಮ್ಮನ್ನು ಈ ಪ್ರಪಂಚದಲ್ಲಿ ಉತ್ಪತ್ತಿ ಮಾಡಿ ನಮ್ಮದೇಹವನ್ನು ಪೋಷಣೆಮಾಡ ತಕ್ಕವನು ಜನಕತಂದೆ ಎನಿಸಿಕೊಳ್ಳುತಾನೆ. ನಮ್ಮ ಬುದ್ಧಿಯನ್ನು ಪೋಷಣೆ ಮಾಡಿ ವಿವೇಕವನ್ನು ಹೆಚ್ಚಿಸತಕ್ಕವನು ಗುರುತಂದೆ ಎನಿಸಿಗೊಳ್ಳುತಾನೆ. ಲೋಕದಲ್ಲಿ ದೇಹಶಕ್ತಿಗಿಂತಲೂ ಬುದ್ಧಿಶಕ್ತಿಯೆ ಉತ್ತಮವಾದಕಾರಣ, ಜನಕ ತಂದೆಗಿಂತಲೂ ಗುರುವು ಹೆಚ್ಚೆಂದು ಭಾವಿಸುವರು. ಒಳ್ಳೆಗುರುವು ಸಿಕ್ಕುವುದಾದರೆ ಶಿಷ್ಯನು ಎಷ್ಟುದೂರವಾದರೂ ಹೋಗುತ್ತಿದ್ದರು. ಪೂರ್ವಕಾಲದಲ್ಲಿ ಕಾಶಿ, ಬಂಗಾಳದಲ್ಲಿರುವ ನಡಿಯ (Nuddia) ಅಥವಾ ನವದ್ವೀಪ, ಉಜ್ಜಯನಿ, ಪ್ರಾಣೆ, ಇವೇ ಮೊದಲಾದ ಸ್ಥಳಗಳಿಗೆ ವಿದ್ಯಾಕಾಲಕ್ಷೇಪಕ್ಕೊಸ್ಕರ ಜನರು ಹೋಗುತ್ತಿದ್ದದ್ದು ಪ್ರಸಿದ್ಧವಾಗಿದೆ. ವಿದ್ಯೆಯನ್ನು ಕಲಿಯುವುದಕ್ಕಾದರೂ ದೇಶ ಗಳಿಗೆ ಹೋಗುವ ಪದ್ಧತಿ ಮುಸಲ್ಮಾನರಲ್ಲಿಯೂ ಈಗಿನ ಯೂರೋಪ್ ಜನ ರಲ್ಲಿಯೂ ಉಂಟು.

ನಮ್ಮ ಸಂಸ್ಕೃತ ವಿದ್ಯಾರ್ಥಿಗಳು ಪೂರ್ವಕಾಲದಲ್ಲಿ ಗುರುವಿನ ಮನೆಗೆ ಹೋಗಿ, ಅಲ್ಲಿ ಚಿಲ್ಲರೇ ಕೆಲಸಗಳನ್ನು ಮಾಡಿ, ಗುರುವಿನ ಶುಶ್ರೂಷೆಯನ್ನು ಯಾವಾಗಲೂ ಭಕ್ತಿಯಿಂದ ಆಚರಿಸುತಾ, ಗುರುವಿನ ಸಮಯವನ್ನು ನೋಡಿ ವಿದ್ಯವನ್ನು ಕಲಿಯುತಾ, ಪಂಡಿತರಾಗುತ್ತಿದ್ದರು. ಇವರು ಎಂಥಾ ದೊಡ್ಡವಾ ದಿಷ್ಯನನ್ನು ಸಂಪಾದಿಸಿದಾಗ್ಯೂ, ಆ ಗುರುವು ತಮಗಿಂತಲೂ ಎಷ್ಟು ಕಡಮೆ ಯಾಗಿದ್ದಾಗ್ಯೂ, ಆಗುರುವಿನಲ್ಲಿ ಅವರಿಗೆ ಲೇಶವೂ ಮರ್ಯಾದೆ ಕಡಮೆಯಾಗುತ್ತಿರಲಿಲ್ಲ. ಒಂದು ಅಕ್ಷರವನ್ನು ಹೇಳಿಕೊಟ್ಟವನೂ ಗುರುವೇ, ನಾಲ್ಕು ವೇದ

ಗಳನ್ನೂ ಆರು ಶಾಸ್ತ್ರಗಳನ್ನೂ ಹೇಳಿಕೊಟ್ಟವನೂ ಗುರುವೇ. ಸಕಲ ವೇದಶಾಸ್ತ್ರಗಳಲ್ಲಿಯೂ ಆ ಒಂದು ಅಕ್ಷರ ಸೇರಿಲ್ಲವೆ? ಅಂಥಾ ಒಂದು ಅಕ್ಷರವು ಪೂರ್ವದಲ್ಲಿ ತಿಳಿದಿದ್ದ ಕಾರಣ, ಉಳಿದ ಅಂಶಗಳನ್ನೆಲ್ಲಾ ಕಲಿಯುವಾಗ ಪೂರ್ವದಲ್ಲಿಯೇ ತಿಳಿದಿದ್ದ ಆ ಒಂದು ಅಕ್ಷರವನ್ನು ಕಲಿಯುವ ಶ್ರಮವು ಶಿಷ್ಯರಿಗೆ ಉಳಿಯಲಿಲ್ಲವೆ? ಆದ್ದರಿಂದ ಅಂಥಾ ಏಕಾಕ್ಷರ ಬೋಧಕನು ಗುರುವೇ ಸರಿ ಎಂದು ಭಾವಿಸುತಿದ್ದರು. ಗುರುವಿಗೆ ತರ್ಪಣಾದಿಗಳನ್ನು ಸಹಾ ಕೊಡುವುದುಂಟು. ಗುರುವನ್ನು ಶಿಷ್ಯರು ಸ್ವತಃ ನಿಂದಿಸದೇ ಇರುವುದೂ ಅಲ್ಲದೆ, ಇತರರು ಯಾರಾದರೂ ಎಷ್ಟು ಸ್ವಲ್ಪವಾಗಿ ಗುರುವಿನ ವಿಷಯದಲ್ಲಿ ಅಪಭಾಷಣ ಮಾತನಾಡಿದರೂ ಸರಿಯೆ, ಶಿಷ್ಯರು ಸಹಿಸುತಿರಲಿಲ್ಲ. ಗುರುವಿನ ವಿದ್ಯವೇ ತಮ್ಮಲ್ಲಿ ಪ್ರತಿಫಲಿಸಿರುವಕಾರಣ, ಗುರು ನಿಂದೆಯಿಂದ ತಮ್ಮನ್ನು ದೂಷಿಸಿದ ಹಾಗಾಯಿತೆಂಬ ಕೋಪದಿಂದ, ಸ್ವಪ್ರತಿಷ್ಠೆಯನ್ನು ಸ್ಥಾಪಿಸಿಕೊಳ್ಳುವುದಕ್ಕಾಗಿ ಗುರುನಿಂದಕರನ್ನು ಖಂಡಿಸತಕ್ಕ ಸ್ವಪ್ರಯೋಜನಪರರಾಯಿರಾದ ಶಿಷ್ಯರು ಕೆಲವರು ಇದ್ದಾಗ್ಯೂ, ಗುರುವೇ ಪರದೈವವೆಂದು ತಿಳಿದಿರತಕ್ಕ ನಮ್ಮವರಲ್ಲಿ ಅಂಥಾ ಸ್ವಪ್ರತಿಷ್ಠಾಬುದ್ಧಿಯು ಬರುತ್ತ ಬರುತ್ತಾ ಪೂರ್ಣವಾಗಿ ನೆಲೆಗೊಂಡಿದೆ.

ಮುಸಲ್ಮಾನರಲ್ಲಿಕೂಡ ಪಾಗಿರ್ದಗಳಿಗೆ ಉಸ್ತಾದರಲ್ಲಿ ಅತ್ಯಂತ ಮರ್ಯಾದೆಯುಂಟು. ಶಿಷ್ಯರು ಎಂಥಾದೊಡ್ಡ ಪದವಿಯಲ್ಲಿದ್ದರೂ ಸರಿಯೆ, ಎಂಥಾ ನವಾಬನ ಮಕ್ಕಳಾದರೂ ಸರಿಯೆ, ಉಸ್ತಾದನನ್ನು ಕಂಡಕ್ಷಣದಲ್ಲಿಯೇ ದೂರದಲ್ಲಿ ನಿಂತು ಹೆಗಲಮೇಲಿನ ವಸ್ತ್ರವನ್ನು ತೆಗೆದು ಕಂಕುಳಲ್ಲಿ ಇರಿಸಿಗೊಂಡು ಬಗ್ಗಿ ಎರಡು ಮೂರುಸಾರಿ ಸಲಾಂ ಮಾಡುವರು. ಶಿಷ್ಯರು ದೊಡ್ಡವರಾದಮೇಲೆ ಸಹಿತ ಗುರುವಿನಲ್ಲಿ ಭಕ್ತಿ ಕಡಮೆಯಾಗುವದಿಲ್ಲ.

ಇದು ಹೀಗಿರಲಾಗಿ ಈಚೆಗೆ ವಿದ್ಯಾರ್ಥಿಗಳಲ್ಲಿ ಗುರುಭಕ್ತಿ ಕಡಮೆಯಾಯಿತು. ಇಂಗ್ಲೀಷರು ಈ ದೇಶವನ್ನು ಜಯಿಸಿ ಎಲ್ಲೆಲ್ಲಿಯೂ ಸ್ಕೂಲುಗಳೆಂಬ ಮಠಗಳನ್ನೂ ಕಾಲೇಜುಗಳೆಂಬ ವಿದ್ಯಾಶಾಲೆಯನ್ನೂ ಸ್ಥಾಪನೆ ಮಾಡಿ, ತಮ್ಮ ದೇಶದಲ್ಲಿ ಪಾಠ ಹೇಳುವ ರೀತಿಯಲ್ಲಿ ಜನರನ್ನು ತಯಾರು ಮಾಡುತ್ತಾ ಇರುವುದು ಲೋಕಪ್ರಸಿದ್ಧವಾಗಿದೆಯಷ್ಟೆ. ಅಂಥಾ ಪಾಠಶಾಲೆ

ಗಳಲ್ಲಿ ತರಗತಿಗಳೆಂದು ವಿಭಾಗವಾಗಿದೆ. ಹುಡುಗರು ಆಯಾ ತರಗತಿಗಳಲ್ಲಿ ೬ ತಿಂಗಳು ಅಥವಾ ಒಂದು ವರುಷದವರೆಗೂ ಓದಿ ಮುಂದಿನ ತರಗತಿಗೆ ಹೋಗುವರು. ಹೀಗೆಯೇ ಅಲ್ಲಲ್ಲಿ ಓದಿ ಮುಂಬು ಮುಂದಕ್ಕೆ ಮೇಲ್ತರಗತಿಗಳಿಗೆ ಹೋಗುತಾ ಹೆಚ್ಚು ಹೆಚ್ಚಾಗಿ ಓದಿ ವಿದ್ಯಾನಂತರೆನಿಸಿಗೊಳ್ಳುವರು. ವಿದ್ಯಾರ್ಥಿಗಳ ಒಟ್ಟು ಸಂಖ್ಯೆಯಲ್ಲಿ ಸೇಕಡ ೯೯ ಜನ ಈರೀತಿಯಲ್ಲಿ ಓರಣಗೊಂಡಿರುವ ಪಾಠಶಾಲೆಗಳಲ್ಲಿಯೂ ವಿದ್ಯಾಶಾಲೆಗಳಲ್ಲಿಯೂ ಓದುತ್ತಿದ್ದರಾದಕಾರಣ, ಗುರು ಶಿಷ್ಯಭಾವನನ್ನು ಎಲ್ಲಿಯಾದರೂ ಹುಡುಕಿಕೊಂಡು ಹೋಗಬೇಕಾದರೆ ಈ ಸ್ಥಳ ಹೊರತು ಮತ್ತೆಯಾವುದೂ ಕಾಣಿಸುವದಿಲ್ಲ: ಸುಮಾರಾಗಿ ಈ ಪಾಠಶಾಲೆ ವಿದ್ಯಾಶಾಲೆಗಳಿಗೇ ಗುರುಭಕ್ತಿಯೂ ಈ ದೇಶದಲ್ಲಿ ಸಂಕೋಚಿಯಾಗಿ ನಿಂತಹಾಗೆ ತೋರುವುದು. ಆದ್ದರಿಂದ ಗುರುಶಿಷ್ಯರ ಸಂಬಂಧ ಇಲ್ಲಿ ಎಷ್ಟರಮಟ್ಟಿಗೆ ಇದೆ ಎಂದು ವಿಚಾರಮಾಡೋಣ.

ಮೇಲೆ ಹೇಳಿದಂತೆ ತರಗತಿಗಳು ವಿಂಗಡವಾಗಿ ಪ್ರತಿ ತರಗತಿಗೂ ಯೋಗ್ಯರಾದ ಉಪಾಧ್ಯಾಯರು ಅಥವಾ ಮಾಸ್ತರು ನೇಮಿಸಲ್ಪಟ್ಟಿದಾರೆ. ಹುಡುಗರು ಇಂಥಾ ತರಗತಿಗಳಲ್ಲಿ ಓದಿ ಮುಂದಕ್ಕೆ ಹೋದಮೇಲೆ, ಕೂಡಲೆ ತಾವು ಓದಿರುವುದು ಇಷ್ಟೆಂದು ಅದರ ಅಳತೆಯೂ ತೂಕವೂ ಮನಸ್ಸಿಗೆ ಬರುವುದೇ ಹೊರತು, ತನುಗೆ ತಿಳಿಯದೇ ಇರತಕ್ಕ ಅಂಶಗಳ ಪರಿಮಾಣ ಇಷ್ಟೆಂದು ಅದರ ಮನಸ್ಸಿಗೆ ಬರುವುದೇ ಇಲ್ಲ. ತಾವು ತಿಳಿದುಕೊಂಡಿರುವ ಅಲ್ಪವೇ ಅಪಾರವೆಂದು, ಕೂಪ ಕೂರ್ಮದಹಾಗೆ, ವರ್ತಿಸುವ ಸ್ವಭಾವವು ಅನನುಭವಿಗಳಾದ ಬಾಲಕರಲ್ಲಿ ತೋರಿಬರುವುದು ಆಶ್ಚರ್ಯವಲ್ಲವಾದಕಾರಣ, ನಾವು ಇಷ್ಟೊಮ್ಮಟ್ಟಿಗೆ ಕಲಿತೆವೆಂದು ತಿಳಿದುಕೊಳ್ಳುವರು. ಇಂಥಾ ತಿಳುವಳಿಕೆಯ ಸಂಗಡಲೇ ಗರ್ವವೆಚ್ಚುತಾ ಬರುವುದು. ಹೀಗೆ ಗರ್ವ ಹೆಚ್ಚಿದ್ದಕ್ಕೆ ಮೊದಲು ಗುರುತು ಗುರುವನ್ನು ತಿರಸ್ಕರಿಸಿ ಮಾತನಾಡುವುದು, ಹ್ಯಾಗೆಂದರೆ:

ಈಗಿನ ಪಾಠಶಾಲಾ ವಿದ್ಯಾರ್ಥಿಗಳು ಕಿವಿಯ ಮೇಲ್ಭಾಗದವರೆಗೂ ತಲೆ ಚಿಪ್ಪುನಮಾತ್ರ ಮುಚ್ಚುವಹಾಗೆ ಒಂದು ಟೋಪಿಯನ್ನು ಇಟ್ಟು, ಸೊಂಟದವರೆಗೂ ಬರತಕ್ಕ ಒಂದು ಕೋಟನ್ನೂ ತೊಟ್ಟು, ಉಪವಸ್ತ್ರವಾದರೆ ಕುರಾಯಿಯನ್ನೂ ವೇಜಾವನ್ನೂ ಸಾಕಿಕೊಂಡು, ಅನುದಪನ್ನರಾ

ದರೆ ಕತಾರಿಗಚ್ಚೆಯನ್ನೂ ಹಾಕಿ ಪಂಚೆಯನ್ನುಟ್ಟು, ಕೈಲಿ ಸಂಣ
ಬೆತ್ತವನ್ನು ಹಿಡಿದು ಅದನ್ನು ಬಳುಕಿಸಿ ಅಲ್ಲಾಡಿಸುತ್ತಾ, ಗುಜ
ಹೊತ್ತಿನಲ್ಲಿ "ವಾಕಿಂಗ್" ಹೋಗುತ್ತಾ ತಂತಮ್ಮೊಳಗೆ—ಸುಬ್ಬಿಂ
ಸಾರ್ ಕರುಡ! ರಂಗಣ್ಣಾಸಾರ್ ಕುಂಟ! ನಮ್ಮ ಸಾರಿಗೆ ಇವತ್ತು ಒಂ
ಲೆಕ್ಕವನ್ನು ಮಾಡುವುದಕ್ಕೇ ತಿಳಿಯಲಿಲ್ಲ, ಹೊತ್ತಾಯಿತೆಂದು ಅವ್ವ
ಲ್ಲಿಯೇ ಸೂಕ್ಕಲನ್ನು ಬಿಟ್ಟು ಬಿಟ್ಟರು! ನಮ್ಮ ಮೇಷ್ಟರು ಎಫ್. ಂ
ಮಾಡಿದರಂತೆ, ಬಿ. ಎ. ಮಾಡಿದಾರಂತೆ; ಇವರೆಲ್ಲಾ ಹಳೇಪರೀಕ್ಷೆ ಕೊಟ್ಟ
ನರು; ಈಗಿನ ಎಗ್ಜಾಮಿನೇಷನ್ ಪ್ಯಾಸ್ ಮಾಡಲಿ ತಿಳಿಯುತ್ತೆ, ಬಿಡಿ
ಬಿ, ಈ ಮೇಷ್ಟರಿಗೆ ಏನು ತಿಳೀತೆ? ಒಂದುಪಕ್ಷಕ್ಕೆ ನಾವೇ ಅವರಿಗಿ
ವಾಸಿ; ನಮಗೆ ಪಾಠ ಹೇಳುವುದಕ್ಕೆ ಅವನಿಗೆ ಯೋಗ್ಯತೆ ಇಲ್ಲ; ಅವ್ಯ
ಮಟ್ಟಿಗೆ ಇವರಲ್ಲಿ ಹುರುಡಿದ್ದರೆ ಮೇಲಿನ ಕಳಾಸಿಗೇ ಪಾಠಾ ಹೇಳುವುದಕ
ಹಾಕ್ಕೊಂಡಿಬ್ಬರು; ನಮಗೆ ಎಷ್ಟು ಹೇಳಿಕೊಟ್ಟಿದಾರೆಯೋ ಅಷ್ಟೇ ಅವರ
ಬರುವುದೆಲ್ಲಾ; ಹೆಚ್ಚಾಗಿ ಬರದು"—ಹೀಗೆಂದು ನಾನಾವಿಧದಲ್ಲಿ ಆಯ
ಹುಡುಗನ ಮನಸ್ಸಿಂಬ ಪೈಳ್ಳು ಹರಟೆಯನ್ನು ಹರಟುವುದು ಕಿವಿಯಾ
ಕೇಳಿದ್ದೀಹೊರತು, ಊಹಿಸಿ ಹೇಳುವ ಮಾತಲ್ಲ. ಇಂಥಾ ಗುರುಭಕ್ತಿ
ವಿಷಯರಾಗಿರುವ ಉಪಾಧ್ಯಾಯರ ಬಡತನಕ್ಕೆ ಪಲಾಯನವೇ ನಿಕ್ಷೇಪ
ಗುರುವಿನ ವಿಷಯದಲ್ಲಿ ಈ ಅಭಿಪ್ರಾಯವನ್ನು ಇಟ್ಟುಗೊಂಡು ಓದತಕ್ಕ
ಹುಡುಗರಿಗೆ ಅವರ ಹರಟೆಗೆ ತಕ್ಕಂಥಾ ವಿದ್ಯ ಬಂದೀತೇ ಅಲ್ಲದೆ ಮತ್ತೊಬ್ಬರ
ಇಲ್ಲ, ಓದುವುದೇ ಸ್ವಲ್ಪ; ಅಜ್ಞಾನದಿಂದ ಅದೇ ಮಹತ್ತೆಂದು ಯೋಚಿ
ನಾವು ಇಷ್ಟು ಬಲ್ಲೆವಲ್ಲಾ ಎಂಬ ತಿಳುವಳಿಕೆಗೆ ತರಗತಿಗಳಲ್ಲಿ ಮೇಲ
ಮೇಲಕ್ಕೆ ಹೋಗುತ್ತಾಇರುವುದೇ ಕಾರಣವಾಗಿದೆ; ಇದರಿಂದಲೇ ಅರೆಗಾ
ಹುಟ್ಟುವುದು. ಮಹಾಗರ್ವಕ್ಕೆ ಅಲ್ಪವಿದ್ಯವೇ ಬೀಜ. "ವಿದ್ಯಾ
ನುದ್ಯವನ್ನು ಕೂಡಿಬರೆ ಚೆನ್ನಾಗಿ ಕೂಡಿಯಬೇಕು; ಇಲ್ಲದಿದ್ದರೆ, ಅದನ್ನು
ತುಟಿಗೆ ಸೋಕಿಸಿ ಚಪ್ಪರಿಸುವುದುಕೂಡ ಕೂಡದು; ಈ ಮದ್ಯವನ್ನು
ಒಂದು ಗುಟುಕು ಕುಡಿದರೆ ತಲೆಹತ್ತಿ ಜ್ಞಾನ ತಪ್ಪುವುದು. ಹೆಚ್ಚಾಗಿ
ಕುಡಿದರೆ ತಪ್ಪಿಹೋಗಿದ್ದ ಜ್ಞಾನ ಮತ್ತೆ ಸರಿಯಾಗುವುದು"—ಎಂದ
ಹೇಳಿದ ಪೋಪ (Pope) ನೆಂಬ ಒಬ್ಬಾನೊಬ್ಬ ಇಂಗ್ಲೀಷ್ ಮಹಾಕವಿಯ

ಮಾತು ಇನ್ನೊಂದಾ ಅನುಭವ ರಸಾಯನವ್ರೋ ನಾನು ಹೇಳಲಾರೆ. ಹೀಗೆ ಕರಗತಿಗಳ ಒದುಗಾರಿಕೆಯುಲ್ಲಿ ಅಲ್ಪವಿದ್ಯನೀದ ಉಂಟಾಗುವ ಅರೆಗರ್ವದ ಸುಂದಕವ್ರುಅನಿವಾರ್ಯವಾಗಿದೆ.

ಹುಡುಗರಲ್ಲಿ ಗುರುಭಕ್ತಿ ಕಡಮೆಯಾಗುವ್ರದಕ್ಕೆ ಇನ್ನೊಂದೇ ಕಾರಣವಲ್ಲ. ನಮ್ಮಲ್ಲಿ ಉಪಾಧ್ಯಾಯರು ವಿದ್ಯಾನನ್ನೂ ಕಲಿಸುತಿದ್ದುದಲ್ಲದೆ ಸ್ವಮತ ರಹಸ್ಯಗಳನ್ನೂ ನೀತಿಸಂಗತಿಗಳನ್ನೂ ಹೇಳಿಕೊಡುತಿದ್ದರು. ಇದರಿಂದ ಗುರುಭಕ್ತಿ ನಮ್ಮಲ್ಲಿ ಚೆನ್ನಾಗಿ ನಾಟುವ್ರದಕ್ಕೆ ಕಾರಣವಾಗಿತ್ತು. ಈಗ ಹಾಗಲ್ಲ, ದೊಡ್ಡ ವಿದ್ಯಾಶಾಲೆಗಳಲ್ಲಿ ಉದ್ಯೋಗವನ್ನೂ ಪಾಠ ಹೇಳತಕ್ಕ ಉಪಾಧ್ಯಾಯರು ಪ್ರಾಯೇಣ ಕ್ರಿಸ್ತಮತದವರಾಗಿದಾರೆ; ಅಥವಾ ಯಾವ ಮತದಲ್ಲಿಯೂ ಅಲ್ಪಸ್ವಲ್ಪ ಸಂದೇಹವನ್ನಿಟ್ಟುಗೊಂಡು ಪೇಚಾಡತಕ್ಕ ಸಂಶಯಾತ್ಮರಾದ ಪಂಡಿತಶಿಖಾಮಣಿಗಳಾಗಿದಾರೆ. ಇವರು ಕ್ರಿಸ್ತಮತಾವಲಂಬಿಗಳಾದರೆ, ಅವರ ಬೋಧನೆಯಲ್ಲಿ ಆಮತದ ಹೆಮ್ಮೆಯ ಆಲಾಪನೆ ಹಾನಾಗಿಯೋ ಅಥವಾ ಹೊಕ್ಕಾಗಿಯೋ ಸೇರಿಕೊಂಡಿರುವ್ರದು; ಸಂಶಯಾತ್ಮರಾದ ಪಂಡಿತರಾದರೆ ಅವರ ಬೋಧನೆಯು ದೈವಭಕ್ತಿಯನ್ನು ಸ್ವಲ್ಪ ಅಲ್ಲಾಡಿಸಿ ನಾಸ್ತಿಕವಾದದ ಕರಗನ್ನು ಕೊಂಚ ಸೋಕುವ್ರದು. ಇವೆರಡರಲ್ಲಿ ಯಾವ ಬೋಧನೆಯಾದರೂ ಸರಿಯೇ, ಸ್ವಮತದಲ್ಲಿ ಭಕ್ತಿಯನ್ನು ಕಡಮೆ ಮಾಡುವ್ರದಕ್ಕೆ ಸಂಶಯವಿಲ್ಲ. ನಮ್ಮ ಮತಾನುಸಾರವಾದ ದೈವಭಕ್ತಿಯೇ ಕಡಮೆಯಾಗುವಾಗ, ಗುರುಭಕ್ತಿಯು ಬಲವಾಗಿ ನಿಂತಿರುವ್ರದು ಸಂಶಯವೇ ಸರಿ.

ಹೀಗೆ ಗುರುಭಕ್ತಿ ಕಡಮೆಯಾಗುವ್ರದಕ್ಕೆ ಈ ಎರಡು ಕಾರಣಗಳು ಮುಖ್ಯವಾಗಿ ತೋರುವ್ರವು. ಇದು ಹೀಗಿರಲಾಗಿ, ಮೇಲೆ ಹೇಳಿರುವ ಗರ್ವವೆಂಬುವ್ರದು ವಿದ್ಯಾಗರ್ವ. ಇತರರಿಗಿಂತಲೂ ನಾನು ಹೆಚ್ಚಾಗಿ ಬಲ್ಲೆನೆಂಬ ಅಹಂಭಾವವಿರುವತನಕ ಗುರುವಿನ ಮಾತಿನಲ್ಲಿ ಗೌರವ ಹುಟ್ಟುವ್ರದಿಲ್ಲ. ಇಂಥಾ ಗೌರವ ಹೋದಕೂಡಲೆ ಶಿಷ್ಯರ ವಿದ್ಯಾಭಿವೃದ್ಧಿ ನಿಂತು ಹೋಗುವ್ರದು. ಮುಂದಿನ ಅಭಿವೃದ್ಧಿಯೆಲ್ಲಾ ಅಹಂಕಾರದ ಫಲಾಭಿವೃದ್ಧಿಯೇ ಹೊರತು ಬೇರೆ ಇಲ್ಲ. ಹೇಳಿದ್ದನ್ನು ನಂಬಿ ಕಲಿತುಗೊಳ್ಳುವ್ರದೇ ಶಿಷ್ಯರ ಮೊದಲ ಕೆಲಸ; ಅದಕ್ಕೆ ಕಾರಣವನ್ನು ಕ್ರಮೇಣ ತಿಳಿದುಕೊಳ್ಳಬಹುದು.

"ಇದಕ್ಕೆ ಕಾರಣವೇನು, ಅದಕ್ಕೆ ಕಾರಣವೇನು"—ಎಂದು ವಿದ್ಯಾರ್ಥಿಗಳ ಪ್ರಶ್ನೆ ಮಾಡಿ ಉಪಾಧ್ಯಾಯರು ತನುಗೆ ಅದನ್ನು ಸರಿಯಾಗಿ ಹೇಳದೆ ಹೋದರೆ, ಆ ಅಂಶ ಗುರುಗಳಿಗೆ ತಿಳಿಯದೆಂದು ಭಾವಿಸಬಾರದು. ಸರಿಯಾದ ಕಾರಣವನ್ನು ಹೇಳಿದರೆ ಹುಡುಗರಿಗೆ ತಿಳಿದುಕೊಳ್ಳುವುದಕ್ಕೆ ಶಕ್ತಿ ಸಾಲದು ಆಥವಾ ತಿಳಿದುಕೊಂಡಾಗ್ಯೂ, ವಿಷಯ ಕ್ಲಿಷ್ಟವಾದಕಾರಣ, ತಿಳಿದುಕೊಳ್ಳಬೇಕೆಂಬ ಪ್ರಯತ್ನವು ಎಳೇ ದೇಹಕ್ಕೂ ಬುದ್ಧಿಗೂ ತೊಂದರೆಯನ್ನುಂಟುಮಾಡುವುದು. ಈ ತಾತ್ಪರ್ಯದಿಂದಲೇ ಅನುಭವಶಾಲಿಗಳಾದ ಅನೇಕ ಉಪಾಧ್ಯಾಯರು ಕಾರಣವನ್ನು ಕಾಲವಶಿತು ಹೇಳೋಣವೆಂದು ಸುಮ್ಮನಾಗುತ್ತಾರೆ. ಇದರಿಂದ ವಿದ್ಯಾರ್ಥಿಗಳಿಗೆ ಗುಣವೇ ಹೊರತು ದೋಷವಿಲ್ಲ ಮುಂದೆ ಪ್ರಜ್ಞೆ ಹೆಚ್ಚಾಗುತ್ತಾ ಬಂದಹಾಗೆಲ್ಲಾ ಗುರು ಮಾಡಿದ ಕೆಲಸ ಸರಿ ಎಂದು ಶಿಷ್ಯರು ತಾವಾಗಿಯೇ ತಿಳಿದುಕೊಳ್ಳುವರು. ಈ ವಿಷಯದಲ್ಲಿ ಒಂದು ಸಣ್ಣ ಕಥೆ ಇದೆ. ಅದು ಮುಂದಿನ ಸಂಚಿಕೆಯಲ್ಲಿ ತಿಳಿಯುವುದು.

ಎಂ. ಎಸ್. ಪುಟ್ಟಣ, ಬಿ. ಎ

ತೆಂಗು.

ಸಂಕ್ರಾಂತಿವೃತ್ತಗಳಲ್ಲಿ ಬೆಳೆಯುವ ಅತ್ಯಂತ ಪ್ರಯೋಜನಗಳಾದ ಬೆಳೆಗಳಲ್ಲಿ ತೆಂಗು ಒಂದಾಗಿದೆ. ಮಲಯಾಳದಲ್ಲಿ ಭೂಮಿಯೂ, ಸಮುದ್ರದಲುಪ್ಪಾದ ವಾಯುವೂ ತೆಂಗಿಗೆ ಕೇವಲ ಅನುಕೂಲವಾಗಿರುವದರಿಂದ, ಗೋಕರ್ಣದಿಂದ ಮೊದಲುಗೊಂಡು ಕನ್ಯಾಕುಮಾರಿಯವರೆಗೂ ತೆಂಗಿನನುಯವಾಗಿರುವುದು ಆದುದರಿಂದಲೇ ಆ ದೇಶಕ್ಕೆ ಕೇರಳ ರಾಜ್ಯವೆಂದು ಹೆಸರು. ತೆಂಗು ಬೆಳೆಯತಕ್ಕ ಸ್ಥಳಗಳಲ್ಲಿ ಸರಾಸರಿ ೪೦ ಅಡಿಗಳಿಗೆ ಕಡಮೆಇಲ್ಲದಷ್ಟು ಶಾಖವಿರಬೇಕು ಮತ್ತು ವರ್ಷಂದಕ್ಕೆ ೭೦ ಅಂಗುಲಗಳಿಗೆ ಕಡಮೆಇಲ್ಲದೆಮಳೆ ಬೀಳಬೇಕು

ವಿವರಣೆ:—ಇದು ಗಿಡವಾಗಿರುವ ಕಂಬದಿಂದ ೩೦ ರಿಂದ ೬೦ ಅಡಿಗಳ ಎತ್ತರದವರೆಗೂ ಬೆಳೆಯುತ್ತದೆ. ಬುಡದಲ್ಲಿ ಇದರ ಸುತ್ತಳತೆ ಸುಮಾರು ೪ ಅಡಿ; ಅಗ್ರಭಾಗದಲ್ಲಿ ಸುಮಾರು ೩ ಅಡಿ. ಇದರ ಎಲೆಗಳಿಗೆ ಗರಿಗಳೆನ್ನುವರು. ಕಿಡಿಯ ಅಗ್ರಭಾಗದಲ್ಲಿರುವ ಈ ಗರಿಗಳ ಉದ್ದವು ಸುಮಾರು ೧೫ ಅಡಿ

ಗಳವರೆಗಿರುತ್ತೆ. ಗರಿಗಳ ನಡುವೆ ಕಾಯಿಗಳ ಗೊಂಚಲುಗಳಿರುವವು. ಫಲವ
ತ್ತಾದ ಭೂಮಿಯಲ್ಲಿ ಬೆಳೆದಿರುವ ಗಿಡಗಳಲ್ಲಿ ಪ್ರತಿಯೊಂದರಲ್ಲಿಯೂ ೪ ರಿಂದ
೧೨ ಗೊಂಚಲುಗಳವರೆಗೂ ಇರುತ್ತವೆ. ಇದರಿಂದ ಗಿಡ ಒಂದಕ್ಕೆ ಸರಾಸರಿ
೪೦ ರಿಂದ ೧೨೦ ಕಾಯಿಗಳವರೆಗೆ ಆಗುವವು. ಕಾಯಿಯು ಮೇಲಣ ಸಿಪ್ಪೆಯು
ಹಸುರಾಗಿಯೂ ಮೃದುವಾಗಿಯೂ ಇದೆ. ಇದಕ್ಕೂ ತೆಂಗಿನ ಚಿಪ್ಪಿಗೂ ಮಧ್ಯೆ
ನಾರು ಇರುವುದು. ಕಾಯಿಯ ಬುಡದಲ್ಲಿ ಕಪ್ಪಾದ ಮೂರು ಕಣ್ಣುಗಳಿರುವವು.
ಇವುಗಳಲ್ಲಿ ಒಂದು ಕಣ್ಣಿನಿಂದನಾತ್ರ ನೊಳಕೆಯು ಹೊರಕ್ಕೆ ಹೊರಡುತ್ತೆ.

ತೆಂಗಿನಫಲಕ್ಕೆ ಅನುಕೂಲವಾದ ಭೂಮಿಗಳು:—ಪ್ರಥಮತಃ ಭೂ
ಗುಣವನ್ನು ಪರೀಕ್ಷಿಸಿ ಒಂದು ಆಳವಾದ ಅಗಿಯಬೇಕು. ಕಲ್ಲು ಪರೆ
ಗಳು ಇದ್ದರೆ ಅಂಥಾ ಭೂಮಿಯನ್ನು ಎಷ್ಟು ಚೆನ್ನಾಗಿದ್ದರೂ ತ್ಯಜಿಸ
ಬೇಕು. ಒಂದು ಆಳವಾದ ಕೆಳಗೆ ಮಣ್ಣು ಸಾಧಾರಣವಾಗಿ ಮರಳು ಮಿಶ್ರ
ವಾಗಿಯೂ ಉಪ್ಪಿನ ಸಂಬಂಧವುಳ್ಳದ್ದಾಗಿಯೂ ಇದ್ದರೆ ಒಳ್ಳೆಯದು. ವಿಶೇಷ
ತೇವವಿದ್ದಕಡೆ ತೆಂಗು ಪ್ರಬಲಿಸುವುದಿಲ್ಲ. ಸಮುದ್ರ ಅಥವ ನದೀತೀರ
ಉತ್ತಮವಾದದ್ದು. ಕೆರೆ ಕೆಳಗಣ ಪ್ರದೇಶವೂ, ಒಳಗೆರೆಯೂ, ಎರೆ ಅಥವಾ
ಕೆಬ್ಬಿ ಮಿಶ್ರವಾದ ಮರಳುಭೂಮಿಯೂ ಅನುಕೂಲವಾಗಿರುವವು.

ಬಿತ್ತನೆಕಾಯಿಗಳು:—ಸುಮಾರು ೭೦ ವರ್ಷಗಳ ವಯಸ್ಸಾದ
ತರುವಿಂದ, ಸ್ವಲ್ಪವೇ ಕಾಯಿಗಳಿರತಕ್ಕ ಗೊಂಚಲುಗಳಲ್ಲಿ ಚೆನ್ನಾಗಿ ಬಲಿತ

ದೊಡ್ಡ ಕಣ್ಣುಗಳುಳ್ಳವುಗಳನ್ನು ಆರಿಸಿ ತೆಗೆಯಬೇಕು. ಮುದಿಯಾದ ಮರಗಳ ಕಾಯಿಗಳಿಗೆ ಕಣ್ಣು ಅತಿ ಚಿಕ್ಕದಾಗಿರುವುದರಿಂದ ಮೊಳಕೆಯು ತೆಳ್ಳಗೂ, ಉದ್ದವಾಗಿಯೂ ಬಲಹೀನವಾಗಿಯೂ ಇರುವುದು. ಅಂಥಾ ಮೊಳಕೆಯು ಬಿಡುಕಿದ್ದೀತಾದರೆ ಗಿಡದಲ್ಲಿ ಫಲವು ಕೊಂಚವಾಗಿಯೇ ಆಗುವದು. ಎಳೇ ಮರಗಳ ಕಾಯಿಗಳನ್ನು ತೆಗೆದು ನೆಟ್ಟರೆ, ಅವುಗಳು ಕೊಳೆತು ಹೋಗುವವು; ಅಥವಾ ಮೊಳಕೆಯು ಎದ್ದರೆ ೧೫—೨೦ ವರ್ಷಗಳವರೆಗೂ ಫಲಕ್ಕೆ ಬರುವುದಿಲ್ಲ. ಪಕ್ವವಾಗುವದಕ್ಕೆ ಮುಂಚೆಯೇ ಕಾಯಿಗಳು ಉದುರಿ ಹೋಗುವವು. ನೆಡುವುದಕ್ಕೆ ಉಪಯೋಗಿಸುವ ಕಾಯಿಗಳನ್ನು ಕೆಳಕ್ಕೆ ಬೀಳಿಸಕೂಡದು. ಬುಟ್ಟಿಯಿಂದಾಗಲಿ, ಹಗ್ಗದಿಂದಾಗಲಿ ಕೆಳಕ್ಕಿಳಿಸಬೇಕು. ಗಿಡವಿಂದ ತೆಗೆದವೇಳೆ ಒಂದು ತಿಂಗಳಿಗೆ ಕಡಮೆ ಇಲ್ಲದೆ ಚೆನ್ನಾಗಿ ಒಣಗಿಸಿ ಅನಂತರ ಅವುಗಳನ್ನು ನೆಡುವದಕ್ಕೆ ಉಪಯೋಗಿಸಬೇಕು.

ಹೋಪಿಸುವ ಕ್ರಮ:—ಭೂಮಿಯನ್ನು ಸುಮಾರು ಮೂರು ಅಡಿಗಳ ಆಳ ಚೆನ್ನಾಗಿ ಅಗೆದು, ಮಣ್ಣಿನೊಂದಿಗೆ ಕೆಸುಮಣ್ಣು, ಮರಳು, ಗೊಬ್ಬರ, ಬೂದಿ, ಸ್ವಲ್ಪ ಉಪ್ಪು ಇವುಗಳನ್ನು ಸೇರಿಸಬೇಕು. ಭೂಮಿಯಲ್ಲಿ ಜೇಡಿ ಮಣ್ಣು ಹೆಚ್ಚಾಗಿದ್ದರೆ ಅಲ್ಲಲ್ಲಿ ಸೊಪ್ಪು, ಸೋಗೆ ಹಾಕಿ, ಬೆಂಕಿಯನ್ನು ಹತ್ತಿಸಿ ಸುಡಬೇಕು. ಹೀಗೆ ಸುಡುವದರಿಂದ ಮಣ್ಣು ಪುಡಿಪುಡಿಯಾಗುತ್ತದೆ. ಈ ಪುಡಿಯನ್ನು ಚೆನ್ನಾಗಿ ಹರಡಿ, ೧೦—೧೫ ದಿವಸಗಳವರೆಗೂ ಉಪ್ಪಿನ ನೀರಿನಲ್ಲಿ ನೆನೆಹಾಕಿದ್ದ ಬೀಜಗಳನ್ನು ಸುಮಾರು ಎರಡು ಅಂಗುಲದವರೆಗೆ ಭೂಮಿಯ ಮೇಲೆ ಕಾಣುವಂತೆ ಒಂದರ ಹತ್ತಿರ ಮತ್ತೊಂದನ್ನು ಹೂಳಬೇಕು. ಕಾಯಿಗಳನ್ನು ಒಂದಕ್ಕೊಂದು ತಾಕುವಂತೆ ಹೂಳಬಹುದು. ಆದರೆ ಮಧ್ಯದಲ್ಲಿ ಎರಡುನೂರು ಅಡಿಗಳ ಸ್ಥಳವನ್ನು ಬಿಡುವದು ಒಳ್ಳೆಯದು.

ಈ ಕಾಲದಲ್ಲಿ ಅವುಗಳಿಗೆ ಮುಖ್ಯ ನೀರಾವರಿಯಾದದ್ದು ಗೆದ್ದಲು. ಬೂದಿಯನ್ನು ಸೇರಿಸುವದರಿಂದ ಇದರಿಂದ ಕಾಯಿಗಳ ರಕ್ಷಣೆಯಾಗುವುದು.

ನಾಟಿಹಾಕುವದು:—ಸಸಿಗಳಿಗೆ ಆರು ತಿಂಗಳುಗಳಾದನಂತರ ನಾಟೀ ಹಾಕತಕ್ಕದ್ದು. ಆದರೆ ಭೂಮಿಯು ತಗ್ಗಿನಲ್ಲಿದ್ದು ಆಗಾಗ್ಗೆ ಪ್ರವಾಹಗ

ಳಿಂಬ ನೀರು ನಿಲ್ಲುವಾದರೆ ಸಸಿಗಳಿಗೆ ಒಂದು ವರುಷವಾದ ಮೇಲೆ ಅವುಗಳನ್ನು ನಾಟ ಹಾಕುವದಕ್ಕೆ ಉಪಯೋಗಿಸಬೇಕು.

ಒಂದು ವಟ್ಟ್ಲನಲ್ಲಿ ಮೂರು ವರುಷವಿದ್ದು ಅನಂತರ ಮತ್ತೊಂದಕ್ಕೆ ನಾಟ ಹಾಕಿ, ಅಲ್ಲಿ ಎರಡು ವರ್ಷ ಬೆಳೆದನಂತರ ಬೇಕಾದಕಡೆಗೆ ನಾಟ ಹಾಕುವ ಪದ್ಧತಿಯು ಕೆಲವುಕಡೆ ಉಂಟು. ಮಳೆಗಾಲಕ್ಕೆ ಸ್ವಲ್ಪ ಮುಂಚೆಯೇ ನಾಟ ಹಾಕಬೇಕು. ಜೌಗು ಭೂಮಿಯಾಗಿದ್ದಲ್ಲಿ ಬಿಸಲು ಕಾಲ ಉತ್ತಮವಾಪದ್ದು. ಗುಂಡಿಗಳು ೩—೪ ಅಡಿಗಳ ಆಳವಿರಬೇಕು. ಎರಡು ಗುಂಡಿಗಳ ಮಧ್ಯೆ ಸುಮಾರು ೭೦ ಅಡಿಗಳ ಸ್ಥಳವಿರಬೇಕು. ನಾಟ ಹಾಕುವದಕ್ಕೆ ೬ ತಿಂಗಳ ಮುಂಚಿತವಾಗಿಯೇ ಗುಂಡಿಗಳನ್ನು ಅಗೆದು, ಗೊಬ್ಬರ, ಬೂದಿ ಮುಂತಾದವುಗಳಿಂದ ತುಂಬಬೇಕು. ಸಶ್ಯಾವಿಗಳ ಗೊಬ್ಬರದಲ್ಲಿ ಪಾಪಾಸುಕಳ್ಳು ಉತ್ತಮವಾದದ್ದು. ಮೂರು ತಿಂಗಳಾಗುವವರೆಗೂ ಸಸಿಗಳಿಗೆ ಸ್ವಲ್ಪ ನೆರಳಿರಬೇಕು. ಗೆದ್ದಲು ಇಲಿ ಮುಂತಾದವುಗಳ ಬಾಧೆಯನ್ನು ತಪ್ಪಿಸುವದಕ್ಕೂ, ಸಸಿಗಳಿಗೆ ನೆರಳನ್ನು ಕೊಡುವದಕ್ಕೂ, ಅರಾರೂಟ್ ಗಿಡವನ್ನು ಕೆಲವು ಪ್ರದೇಶಗಳಲ್ಲಿ ಬೆಳೆಯುತ್ತಾರೆ. ೬ ತಿಂಗಳಲ್ಲಿಯೇ ಮೊಳಕೆ ಬರುತ್ತದೆ. ಅದುವರೆಗೂ ನೀರು ಹಾಕುತ್ತಿರಬೇಕು.

ಎರಡನೆಯ ವರ್ಷ ಮರಗಳಸುತ್ತಲೂ ಅಗೆದು, ಬೂದಿಯನ್ನು ಹಾಕಬೇಕು. ಹೂವು ಬಿಡುವವರೆಗೂ, ಮಳೆಗಾಲ ಪ್ರಾರಂಭವಾಗುವದಕ್ಕೆ ಸ್ವಲ್ಪ ಮುಂಚಿತವಾಗಿಯೇ ಅಗೆದು ಗೊಬ್ಬರ ಹಾಕುತ್ತಿರಬೇಕು. ಮತ್ತು ಮಟ್ಟಿಗಳು ಒಂದಕ್ಕೊಂದು ತಾಕದಂತೆ ಬೊಗ್ಗಿಸುತ್ತಿರಬೇಕು. ನಾಲ್ಕನೆಯ ವರ್ಷದಲ್ಲಿ ಬುಡವು ಮೇಲಕ್ಕೆ ಕಾಣಿಸಿಕೊಳ್ಳುತ್ತದೆ. ಆಗ ೧೦ ಮಟ್ಟಿಗಳಿರುತ್ತವೆ. ಐದನೆಯ ವರ್ಷಕ್ಕೆ ೨೦ ಮಟ್ಟಿಗಳಾಗುತ್ತವೆ. ಚೆನ್ನಾಗಿ ಬೆಳೆದು ಫಲವನ್ನು ಕೊಡುವ ಕಾಲದಲ್ಲಿ ೩೬ ರಿಂದ ೪೮ ರವರೆಗೂ ಇರಬೇಕು. ನಿಕೋಬರ್ ದ್ವೀಪದಲ್ಲಿ ಏಳನೆಯ ವರ್ಷದಲ್ಲಿಯೂ, ಮಲಯಾಳದಲ್ಲಿ ಆರನೆಯ ವರ್ಷದಲ್ಲಿಯೂ, ಮೈಸೂರು ದೇಶದಲ್ಲಿ ೯—೧೦ ನೇ ವರ್ಷಗಳಲ್ಲಿಯೂ ಹೂವು ಬಿಡುತ್ತದೆ. ಹೂವು ಬಿಟ್ಟ ೬ ತಿಂಗಳನಂತರ ಕಾಯಿಯು ಬಲಿಯುವದಕ್ಕೆ ಪ್ರಾರಂಭಿಸಿ ಒಂದು ವರ್ಷಕ್ಕೆ ಪೂರ್ಣಪಕ್ವವಾಗುತ್ತದೆ. ಫಲವತ್ತಾದ ಭೂಮಿಯಾಗಿದ್ದು ಚೆನ್ನಾಗಿ ಆರೈಕೆಯಾಗಿ

ದ್ದರೆ ಪ್ರತಿತಿಂಗಳಲ್ಲಿಯೂ ಒಂದೊಂದು ಹೂವಿನ ಗೊಂಚಲು ಬಿಟ್ಟು ವರ್ಷ ಒಂದಕ್ಕೆ ೧೨೦ ರಿಂದ ೧೫೦ ರ ವರೆಗೂ ಕಾಯಿಗಳಾಗಬೇಕು. ಆದರೆ ಸಾಧಾರಣವಾಗಿ ೪—೯ ಗೊಂಚಲುಗಳಿಗಿಂತ ಹೆಚ್ಚಾಗಿ ಬಿಡುವದಿಲ್ಲ. ಗಿಡ ಒಂದಕ್ಕೆ ಸರಾಸರಿ ೬೦ ಕಾಯಿಗಳಂತೆ, ಅಂದಾಜು ಕಟ್ಟಬಹುದು. ಮಲೆಯಾಳದಲ್ಲಿ ಕಾಯಿ ಬಿಡುವ ವರ್ಷದಲ್ಲಿಮಾತ್ರ ಹೆಂಡ ತೆಗೆಯುವದುಂಟು. ಹೀಗೆ ತೆಗೆಯುವದರಿಂದ ಕಾಯಿಗಳು ಹೆಚ್ಚಾಗಿ ಬಿಡುವವೆಂದು ಹೇಳುತ್ತಾರೆ. ಮೈಸೂರು ಸೀಮೆಯಲ್ಲಿ ಈ ಪದ್ಧತಿಯು ಇಲ್ಲ. ತೆಂಗಿನ ಮರಗಳಿಂದ ಒಂದೆರಡು ವರ್ಷಗಳಿಗಿಂತ ಹೆಚ್ಚಾದ ಕಾಲ ಹೆಂಡವನ್ನು ತೆಗೆದರೆ ಫಲವು ಕಡಿಮೆಯಾಗುತ್ತದೆ. ಆದರೆ ಫಲ ಬಿಡುವದಕ್ಕೆ ಪ್ರಾರಂಭವಾದಮೇಲೆ ೫—೬ ವರ್ಷಕ್ಕೆ ಒಂದು ಸಾರಿ ಹೆಂಡವನ್ನು ತೆಗೆಯುವದರಿಂದ ಕಾಯಿಗಳು ರುಚಿಯಾಗುವದಲ್ಲದೆ ಹೆಚ್ಚಾಗಿಯೂ ಬಿಡುವುದು.

ಪಕ್ವವಾಗುವದಕ್ಕೆ ಮುಂಚೆ ಒಂದೊಂದು ಗೊಂಚಲಿನಿಂದ ಕೆಲವು ಕಾಯಿಗಳನ್ನು ತೆಗೆದು ಬಿಡುವ್ರದುಂಟು. ಇವ್ರುಗಳಿಗೆ ಎಳನೀರು ಎನ್ನುತ್ತಾರೆ. ಹೀಗೆ ಕೆಲವು ಕಾಯಿಗಳನ್ನು ತೆಗೆಯುವದರಿಂದ ಇತರ ಕಾಯಿಗಳು ಚೆನ್ನಾಗಿ ಒಲಿಯುವದಕ್ಕೆ ಆಸ್ಪದಕೊಟ್ಟಹಾಗೆ ಆಗುತ್ತದೆ.

ವರ್ಷಕ್ಕೆ ಎರಡಾವರ್ತಿ ಮರಗಳ ಸುತ್ತಲೂ ಮಣ್ಣನ್ನು ಚೆನ್ನಾಗಿ ಕೆದಕಿ ಸೊಪ್ಪು, ಕಸ, ಕಡ್ಡಿಗಳಿಲ್ಲದಂತೆ ನೋಡಿಕೊಳ್ಳುತ್ತಿರಬೇಕು. ಮಳೆ ನೀರನ್ನೂ ಕೊಂಚ ಹೋಗದಂತೆ ಮರಗಳ ಸುತ್ತಲೂ ಪಾತಿ ಕಟ್ಟಬೇಕು. ಮತ್ತೂ ವರ್ಷಕ್ಕೊಂದಾವರ್ತಿ ಪ್ರತಿ ಮರವನ್ನೂ ಪರೀಕ್ಷಿಸಬೇಕು. ಮರದ ಅಗ್ರಭಾಗದಲ್ಲಿ ಹುಳುಗಳಿಲ್ಲದಂತೆ ನೋಡಿಕೊಳ್ಳುತಿರಬೇಕು. ಮಲಯಾಳದಲ್ಲಿ ಭೂಮಿಯಮೇಲೆ ಕಾಣಿಸುವ ಬೇರುಗಳನ್ನು ಮಳೆಗಾಲ ಪ್ರಾರಂಭವಾಗುವದಕ್ಕೆ ಮುಂಚೆಯೇ ಕತ್ತರಿಸುತ್ತಾರೆ, ಅಥವಾ ಸುಡುತ್ತಾರೆ. ಮೈಸೂರು ದೇಶದಲ್ಲಿ ಮರಗಳ ಸುತ್ತಲೂ ಎರಡು ಮೂರುವೇಳೆ ಉಳುತ್ತಾರೆ. ಇದರಿಂದ ಚಿಕ್ಕ ಚಿಕ್ಕ ಬೇರುಗಳೆಲ್ಲಾ ನಶಿಸಿ ಹೋಗುತ್ತವೆ. ಹೀಗೆ ನಶಿಸಿ ಹೋಗುವದರಿಂದ ಮರಗಳಿಗೆ ಬೆಳೆಯುವದಕ್ಕೆ ಅವಕಾಶ ಕೊಟ್ಟಂತೆ ಆಗುತ್ತದೆ. ವರ್ಷಕ್ಕೆ ೪—೫ ಸೋಗೆಗಳು ಹಣಗಿ ಹೋಗುವವು. ಬಿಸಲು ಕಾಲದಲ್ಲಿ ಅವುಗಳನ್ನು ತೆಗೆದು ಬಿಡಬೇಕು.

ಭೇದಗಳು—ಹಸರು:—ಚೆನ್ನಾಗಿ ಒಣಗುವವರೆಗೂ ಹಸುರಾಗಿದ್ದು ಅನಂತರ ಬೂದು ಬಣ್ಣವನ್ನು ಹೊಂದುತ್ತದೆ.

ಕಪ್ಪು:—ಇದು ಕಪ್ಪುಛಾಯೆಯುಳ್ಳದ್ದು.

ಗೌಳಿಪಾತ್ರೆ:—ಈ ಜಾತಿಯ ಕಾಯಿಯೇ ಅತ್ಯುತ್ತಮವಾದದ್ದು. ಕಾಯಿಯು ಗುಂಡಾಗಿಯೂ ನೋಡುವದಕ್ಕೆ ಸುಂದರವಾಗಿಯೂ ಇದೆ.

ಕೆಂಪು:—ಈ ಜಾತಿಯ ಎಳನೀರನ್ನು ಪಂಡಿತರು ಔಷಧವಾಗಿ ಉಪಯೋಗಿಸುವರು. ನೀರು ಸಿಹಿಯಾಗಿಲ್ಲದಿದ್ದರೂ ತಂಪಾದದ್ದೆಂದು ಸಿಡಬಿದ್ದವರಿಗೆ ಕೊಡುತ್ತಾರೆ.

ಈ ವರ್ಣಭೇದಗಳಿಲ್ಲದೆ ಹಿಪ್ಪು ತೆಂಗಿನಕಾಯಿ ಎಂತಲೂ, ಹಾಲು ತೆಂಗಿನಕಾಯಿ ಎಂತಲೂ, ನಾರು ತೆಂಗಿನಕಾಯಿ ಎಂತಲೂ ೩ ಭೇದಗಳುಂಟು. ಹಿಪ್ಪುತೆಂಗಿನಕಾಯಿಯ ಕೊಬ್ಬರಿಯು ಮುಂದವಾಗಿಯೂ, ಮೃದುವಾಗಿಯೂ ಇದೆ. ಹಾಲುತೆಂಗಿನಕಾಯಿಯ ಕೊಬ್ಬರಿಯಲ್ಲಿ ತುಂಬಾ ಹಾಲು ಬರುವದರಿಂದ ಎಣ್ಣೆಯನ್ನು ತೆಗೆಯುವದಕ್ಕೆ ಉಪಯೋಗವಾಗುತ್ತದೆ. ನಾರು ತೆಂಗಿನಕಾಯಿಯ ಕೊಬ್ಬರಿ ರುಚಿ ಇಲ್ಲದೆ ತಿನ್ನುವದಕ್ಕೆ ಸಪ್ಪೆಯಾಗಿದೆ.

ಉಪಯೋಗಗಳು:—ತೆಂಗಿನ ನಾರಿನಿಂದ ಹಗ್ಗವನ್ನೂ ಬಲೆಯನ್ನೂ ಮಾಡುತ್ತಾರೆ. ಹಸನಾದ ನಾರನ್ನು ಮಾಡಬೇಕಾದರೆ ಕಾಯಿಯು ಬಲಿಯುವದಕ್ಕೆ ಮುಂಚೆ ಅದರ ಸಿಪ್ಪೆಯನ್ನು ತೆಗೆದು ಎರಡು ಮೂರು ದಿನಸಗಳವರೆಗೂ ನೀರಿನಲ್ಲಿ ನೆನೆಹಾಕಿ, ಚಿಟ್ಟುಗಳಿಂದ ಬಿಡಿಸಿ, ಮೊಂಡಾದ ಚೂರಿಯಿಂದ ಹೆರೆದು, ಬಿಸಲಿನಲ್ಲಿ ಒಣಗಿಸಬೇಕು. ಹಣ್ಣಾದ ಕಾಯಿಯಿಂದ ತೆಗೆದ ತೆಂಗನ್ನು ಸ್ವಲ್ಪಕಾಲ ನೀರಿನಲ್ಲಿ ನೆನಸಿ, ದೊಣ್ಣೆಗಳಿಂದ ಬಡಿದು ಬಿಡಿಸುತ್ತಾರೆ.

ತೆಂಗಿನ ಚಂಗು, ಇದು ಹಾಸಿಗೆ ದಿಂಬು ಮುಂತಾದವುಗಳನ್ನು ಮಾಡುವದಕ್ಕೆ ಉಪಯೋಗವಾಗುತ್ತದೆ. ಕಾಯಿಯು ಬಲಿಯುವದಕ್ಕೆ ಮುಂಚೆ ಎಳನೀರು ಎಂಬದಾಗಿ ಕುಡಿಯುವದಕ್ಕಾಗುತ್ತದೆ. ಪಕ್ವವಾಗುತ ನೀರು ಕಡಮೆಯಾಗಿ ಒಳಗಿರುವ ಕಾಯಿಯು ಬಲಿಯುತ್ತದೆ. ಬಲಿತ ಕಾಯಿಗೆ ಕೊಬ್ಬರಿ ಎಂದು ಹೆಸರು. ಇದನ್ನು ತೆಗೆದು, ಚೆನ್ನಾಗಿ ಒಣಗಿಸಿ ಮಾರಾಟಕ್ಕೆ ಕಳು

ಹಿಸುತ್ತಾರೆ. ಕೊಬ್ಬರಿಯನ್ನು ನಾನಾವಿಧವಾಗಿ ಅಡಿಗೆಗೆ ಉಪಯೋಗಿಸುತ್ತಾರೆ. ಮತ್ತು ಅದರಿಂದ ಎಣ್ಣೆಯನ್ನು ತೆಗೆಯುತ್ತಾರೆ. ತೆಂಗಿನ ಚಿಪ್ಪಿನಿಂದ ಸೌಟುಗಳೂ ಹಲ್ಲುಪುಡಿಯೂ ಆಗುತ್ತವೆ. ತೆಂಗಿನ ಬುರುಡೆಗಳ ಹೊರಭಾಗಗಳನ್ನು ನುಣುಪಾಡಿ, ಚಿತ್ರಗಳನ್ನು ಕೆತ್ತಿ ಸುಂದರವಾದ ಸಾಮಾನುಗಳನ್ನು ಮಾಡುತ್ತಾರೆ. ಮರದಿಂದ ಹೆಂಡವನ್ನು ತೆಗೆಯುವರೆಂದು ಮೇಲಿನಿಂದ ತಿಳಿಸಿದೆ. ತೆಂಗಿನ ಮರದಿಂದ ತೊಲೆಗಳೂ ಕಂಬಗಳೂ ಆಗುತ್ತವೆ. ಒಳಗಿನ ತಿರುಳನ್ನು ತೆಗೆದು, ನೀರು ಹೋಗುವ ದೋಣಿಗಳನ್ನೂ ಜಲಘಾರೆಗಳನ್ನೂ ಕೊಳವೆಗಳನ್ನೂ ಮಾಡುತ್ತಾರೆ. ಅಡಿಕೆಗೆ ಬದಲಾಗಿ ಕೆಲವರು ಇದರ ಬೀಜವನ್ನು ಉಪಯೋಗಿಸುವರು. ಗರಿಗಳಿಂದ ಚಾಪೆ, ಬುಟ್ಟಿ ಪೊರಕೆಮುಂತಾದವುಗಳಾಗುತ್ತವೆ. ತೆಂಗಿನ ಕಡ್ಡಿಯಿಂದ ಕೊಡಪಿಗಳನ್ನು ಮಾಡಿ ವಿಮಾನುಗಳನ್ನು ಹಿಡಿಯುತ್ತಾರೆ. ಹೆಂಡದಿಂದ ಬೆಲ್ಲವಾಗುತ್ತದೆ.

ಕೊಬರಿಯನ್ನು ತುಂಡು ತುಂಡು ಮಾಡಿ ನೀರಿನಲ್ಲಿ ಜೀಯಿಸಿ, ತೆಗೆದು ಕುಟ್ಟಿ, ಹಿಂಡಿದರೆ ಹಾಲು ಬರುವುದು. ಈ ಹಾಲನ್ನು ಕಾಯಿಸಿ, ನೊರೆಯನ್ನು ತೆಗೆದುಹಾಕಿ, ಪುನಃ ಕಾಯಿಸಿದರೆ, ತುಪ್ಪವು ಸುವಾಸನೆಯಾಗಿಯೂ ರುಚಿಕರವಾಗಿಯೂ ಇರುವುದು.

ಹಿಂಡಿಯನ್ನು ಹಂದಿ, ಕೋಳಿ ಮುಂತಾದವುಗಳಿಗೆ ಆಹಾರವಾಗಿಯೂ ಗಾಣದಿಂದ ತೆಗೆದ ಎಣ್ಣೆಯನ್ನು ವೀಪಕೊಕ್ಕ ಯಂತ್ರಗಳಿಗೂ ಉಪಯೋಗಿಸುತ್ತಾರೆ.

ತೆಂಗಿನ ತೋಟಗಳಿಗೆ ಹಾನಿಗಳು—ಗೆದ್ದಲು:—ಕಾಯಿಗಳನ್ನು ಹೂಳುವದಕ್ಕೆ ಮುಂಚೆ ನೀರಿನಲ್ಲಿ ಉಪ್ಪನ್ನೂ, ತೊಪ್ಪೆಯನ್ನೂ, ಕಲಸಿ ಹಚ್ಚಬೇಕು. ಸಸಿಗಳ ಸುತ್ತಲೂ ಆಗಾಗ್ಗೆ ಬೂದಿಯನ್ನೂ ಮಣಳನ್ನೂ ಚೆಲ್ಲುತ್ತಿರಬೇಕು.

ದನಗಳು—ಬೀಜದ ಗಿಣ್ಣು ರುಚಿಯಾಗಿರುವದರಿಂದ ದನಕರುಗಳು ತಿಂದುಬಿಡುತ್ತವೆ. ಇವುಗಳು ಪ್ರವೇಶಿಸುವದಕ್ಕೆ ಆಗದಂತೆ ಬೇಲಿಗಳನ್ನು ಹಾಕಬೇಕು.

ದುಂಬಿ:—ಸೀಯು ಎಳೆಯದಾಗಿದ್ದಾಗ ದುಂಬಿಗಳು ಅದನ್ನು ಕೊರೆದು ತಿರುಳಿನೊಳಗೆ ಮೊಟ್ಟೆಯನ್ನು ಇಡುತ್ತವೆ; ಅವು ಒಡೆದು ಹುಳುವಾಗಿ, ತಿರುಳನ್ನೆಲ್ಲಾ ತಿಂದುಬಿಡುತ್ತವೆ. ಇಂಥಾ ಸೊಸಿಗಳನ್ನು ಕಿತ್ತು ಸುಡಬೇಕು. ಆಗಾಗ್ಗೆ ನೋಡುತ್ತಾ ದುಂಬಿಯು ಕೊರೆದೊಡನೆಯೇ ಮೊಟ್ಟೆಯನ್ನೂ ಹುಳುವನ್ನೂ ಕಿತ್ತು ಹಾಕುತ್ತಿದ್ದರೆ ಒಳ್ಳೇದು.

ಹೆಗ್ಗಣ, ಇಲಿ, ಅಳಲು ಮುಂತಾದವುಗಳು:—ಇವುಗಳು ಮರವನ್ನು ಹತ್ತದಂತೆ ಮರದ ಬುಡಕ್ಕೆ ಸುಮಾರು ಎರಡು ಮೂರು ಅಡಿಗಳವರೆಗೂ ತಗಡನ್ನು ಬಡಿಯುವ ಪದ್ಧತಿ ಕೆಲವುಕಡೆಯುಂಟು.

ಹ್ಯಾದ:—ಇವುಗಳನ್ನು ಓಡಿಸುವದಕ್ಕಾಗಿ, ತಗಡಿನ ತುಂಟಿಗಳನ್ನು ಕಪ್ಪು ಗಾಳಿಯಿಂದ ಒಂದು ಕಡ್ಡಿಯು ಬಂದು ಬಡಿಯುವಂತೆ ವಾಡಿಗಿಡದ ಅಗ್ರಭಾಗಕ್ಕೆ ತಗಲಿಸುತ್ತಾರೆ. ಹ್ಯಾದವು ಕಾಯಿಯನ್ನು ಮೂಸಿನೋಡಿದ್ದೀತಾದರೆ ಕಾಯಿಯು ಕೊಳೆತು ಹೋಗುವುದು, ಇಲ್ಲವಾದರೆ ನೀರು ತ್ತಿ ಹೋಗುವದೆಂದು ಜನರು ಹೇಳುತ್ತಾರೆ.

ಎಲ್. ಸುಬ್ಬರಾವ್.

ಕ್ಲೋರೀನ್. 1.

ಪೀಲ್ ಎಂಬಾತನು ೧೭೭೪ನೇ ಇಸವಿಯಲ್ಲಿ ಕ್ಲೋರೀನ್ ಅನಿಲವನ್ನು ಂಡು ಹಿಡಿದನು. ಡೇವಿ ಎಂಬುವನು ತನ್ನ ಶೋಧನೆಯಿಂದ ೧೮೦೯ನೇ ರುಷದಲ್ಲಿ ಕ್ಲೋರೀನ್ ಮೂಲವಸ್ತುವೆಂದು ತೋರಿಸಿದನಂದಿನಿಂದ ಸಂಯೋಗನ್ಯವಸ್ತುವೆಂದು ತಿಳಿಯಲ್ಪಟ್ಟಿತು. ಈ ಅನಿಲವು ಸೃಜಸ್ಥಿತಿಯಲ್ಲಿ ಕ್ಕದಿದ್ದರೂ ಅದನ್ನು ಅದರ ಸಂಯೋಗಜನ್ಯಪದಾರ್ಥಗಳಿಂದ ಸುಲಭವಾಗಿ ಯಾರ್ಮಾಡಬಹುದು. ಕ್ಲೋರೀನ್ ಅನೇಕ ಲೋಹಗಳೊಡನೆ ಸಂಯೋಗವಾಗಿ ಸಿಕ್ಕುವುದು. ಕ್ಲೋರೀನ್ ಸಂಯೋಗಪದಾರ್ಥಗಳಲ್ಲಿ ಉಪ್ಪು, ವಿಶೇಷವಾಗಿ ಗಣಿಗಳಲ್ಲಿ ಸಿಕ್ಕುತ್ತದೆ. ಇದಕ್ಕೆ ಕಲ್ಲುಪ್ಪೆಂದು ಹೆಸರು. ಸಮುದ್ರದ ರಿನಲ್ಲಿಯೂ ಉಪ್ಪು ವಿಶೇಷವಾಗಿ ಕರಗಿರುವುದು. ಕ್ಲೋರೀನ್ ಅನಿಲವು, ೋಡಿಯಂ ಲೋಹವು ಎರಡು ಸಂಯೋಗವಾಗಿ ಉಪ್ಪು ಉಂಟಾಗುತ್ತದೆ.

ಕ್ಲೋರೀನ್ ಅನಿಲವು ಒಂದುನಿಫ ಅಸಹ್ಯವಾದ ಕಮುವಾದ ದುರ್ವಾಸನೆಯುಳ್ಳದ್ದು. ಕ್ಲೋರೀನ್ ಮಿಶ್ರವಾಗಿರುವ ವಾಯುವನ್ನು ಉಛ್ವಾಸಿಸಿದರೆ ಗಂಟಲು ಮೂಗುಗಳ ಒಳಚರ್ಮವು ಊದಿಕೊಂಡು ನೋವು ಉಂಟಾಗುತ್ತದೆ. ವಿಶೇಷವಾಗಿ ಕ್ಲೋರೀನ್ ಬೆರೆದಿರುವ ವಾಯುವನ್ನು ಉಛ್ವಾಸಿಸುವುದರಿಂದ ಕೆಲವು ವೇಳೆಗಳಲ್ಲಿ ಮರಣ ಕೂಡ ಸಂಭವಿಸಬಹುದು. ಕ್ಲೋರೀನ್ ಕಣ್ಣಿಗೆ ಕಾಣುವಂತಾ ಒಂದು ವಿಜಾತೀಯವಾದ ಅರಶಿನ ಹಸರುಬಣ್ಣ ಉಳ್ಳದ್ದು. ಆದರೆ ಶೈತ್ಯವನ್ನುಂಟುಮಾಡುವದರಿಂದಲೂ, ಹೆಚ್ಚಾಗಿ ಅನುಕೋಣವರಿಂದಲೂ ಕ್ಲೋರೀನನ್ನು ಜಲರೂಪಕ್ಕೆ ತರಬಹುದು. ಜಲಾವಸ್ಥೆಯಲ್ಲಿ ಅರಶಿನಬಣ್ಣ ಉಳ್ಳದ್ದಾಗಿಯೂ ಭಾರವಾಗಿಯೂ ಇರುವುದು. ಜಲಾವಸ್ಥೆಯಲ್ಲಿ ಕ್ಲೋರೀನಿಗೆ ಶೈತ್ಯವನ್ನುಂಟುಮಾಡೋಣದರಿಂದ ಶಿಲಾವಸ್ಥೆಗೆ ಬದಲಾಯಿಸುತ್ತದೆ.

ಕ್ಲೋರೀನ್ ಅನಿಲರೂಪದಲ್ಲಿರುವದರಿಂದ ಇದನ್ನು ತಯಾರಾದ ಸೀಸೆಗಳಲ್ಲಿ ತುಂಬುವಬಗೆ ಹ್ಯಾಗೆ? ಜಲಜನಕ ಅಮ್ಲಜನಕಗಳಂತೆ ನೀರು ತುಂಬಿದ ಸೀಸೆಗಳಲ್ಲಿ ಹಿಂಡಿಯುವದಕ್ಕಾಗುವುದಿಲ್ಲ. ಏಕೆಂದರೆ ಈ ಅನಿಲವನ್ನು ನೀರು ಹೀರಿಕೊಳ್ಳುತ್ತದೆ. ಆದರೆ ವಾಯುವಿಗಿಂತ ಸುಮಾರು ಎರಡವರೆಯಷ್ಟು ಹೆಚ್ಚು ಭಾರವಾದುದರಿಂದ ವಾಯು ತುಂಬಿದ ಸೀಸೆಗಳಲ್ಲಿ ಸೇರಿಸಬಹುದು. ಹ್ಯಾಗೆಂದರೆ:—ಒಂದು ಪಂಚಪಾತ್ರೆಯ ತುಂಬ ನೀರನ್ನು ತುಂಬಿ ಪಾತ್ರೆಗೆ ಒಂದು ಗಾಜಿನಕೊಳವಿಯ ಮೂಲಕ ಪಾದರಸವನ್ನು ಸುರಿದರೆ ಪಾದರಸವು ನೀರಿಗಿಂತ ಭಾರವಾದುದರಿಂದ ಪಾತ್ರೆಯ ಕೆಳಗೆ ನಿಂತು ನೀರೆಲ್ಲಾ ಸುರಿದುಹೋಗಿ ಕಡೆಗೆ ಪಾತ್ರೆಯತುಂಬ ಪಾದರಸ ತುಂಬಿಕೊಳ್ಳುತ್ತದೆ. ಇದರಂತೆಯೇ ವಾಯು ತುಂಬಿರುವ ಸೀಸೆಯೊಳಕ್ಕೆ ಕ್ಲೋರೀನ್ ಬರುವ ಕೊಳವೆಯನ್ನಿಟ್ಟರೆ, ಕ್ಲೋರೀನ್ ವಾಯುವಿಗಿಂತ ಭಾರವಾದುದರಿಂದ ಅದನ್ನು ಹೊರಗೆ ತಳ್ಳಿ ತಾನು ಆ ಸ್ಥಳವನ್ನು ಆಕ್ರಮಿಸಿಕೊಳ್ಳುತ್ತದೆ. ಕ್ಲೋರೀನ್ ಚದರಿಹೋಗದೇ ಇರುವದಕ್ಕೋಸ್ಕರವೇ ಕೊಳವಿಯನ್ನು ಸೀಸೆಯೊಳಗಿಡಬೇಕು. ಅನೇಕ ಲೋಹಗಳನ್ನು ಬೂಳಾಗುವಂತೆ ಪುಡಿಮಾಡಿ ಕ್ಲೋರೀನ್ ತುಂಬಿರುವ ಸೀಸೆಗೆ ಹಾಕಿದರೆ ಅವುಗಳು ತಾನಾಗಿಯೇ ಉರಿಯುತ್ತವೆ. ಉರಿಯುವಾಗ ಕ್ಲೋರೀನಿಗೂ, ಲೋಹಕ್ಕೂ

ಸಂಯೋಗ ಉಂಟಾಗಿ ಕ್ಲೋರೈಡ್ ಎಂಬ ಪದಾರ್ಥ ಹುಟ್ಟುತ್ತದೆ. ಶಂಖವೊನಿ, ಆರಸನಿಕ್ ಲೋಹಗಳನ್ನು ಪುಡಿಮಾಡಿ ಹಾಕಿದರೆ ಉರಿಯುತ್ತವೆ. ತಾಂಬ್ರದ ರೇಖುಕೂಡ ಕ್ಲೋರೀನ್ ವಾಯುವಿನಲ್ಲಿ ಉರಿಯುತ್ತದೆ. ಕ್ಲೋರೀನ್ ಇತರ ವಸ್ತುಗಳೊಡನೆ ಸಂಯೋಗವಾಗಿ ಹುಟ್ಟುವ ಪದಾರ್ಥಗಳಿಗೆ ಕ್ಲೋರೈಡ್ಸ್ ಎಂಬಿದಾಗಿ ಹೆಸರು.

ಕ್ಲೋರೀನ್ ತಾನಾಗಿ ಉರಿಯುವುದಿಲ್ಲ. ಜಲಜನಕದೊಡನೆ ಸಂಯೋಗವಾಗಿ ಹೈಡ್ರೊಕ್ಲಾರಿಕ್ ಆಸಿಡ್ (Hydrogen Chloride, or Hydrochloric Acid) ಎಂಬ ಆಮ್ಲ ಉಂಟಾಗುವುದೇ ಕ್ಲೋರೀನಿನ ಮುಖ್ಯ ಲಕ್ಷಣವಾಗಿದೆ. ಕ್ಲೋರೀನ್, ಜಲಜನಕ ಇವೆರಡು ಅನಿಲಗಳನ್ನು ಸಮ ಅಳತೆಗಳಲ್ಲಿ ಮಿಶ್ರಮಾಡಿ (Equal volumes) ಮಿಶ್ರವನ್ನು ಸೂರ್ಯನ ಬೆಳಕಿನಲ್ಲಿಡುವುದರಿಂದಲೂ, ಅಲ್ಲದೆ, ಮಿಶ್ರಕ್ಕೆ ಜ್ವಾಲೆಯ ಸಂಪರ್ಕವನ್ನುಂಟುಮಾಡುವುದರಿಂದಲೂ, ಬಹಳಶಬ್ದ ಉಂಟಾಗಿ ಎರಡು ಅನಿಲಗಳು ಸಂಯೋಗವಾಗುತ್ತವೆ. ಸಂಯೋಗದಿಂದ ಜನಿಸುವ ಪದಾರ್ಥವೇ ಹೈಡ್ರೊಕ್ಲಾರಿಕ್ ಆಸಿಡ್.

ಸೂರ್ಯನ ಬೆಳಕಿನಲ್ಲಿ ನೀರನ್ನು ಖಂಡಿಸಿ ಅದರ ಜಲಜನಕದೊಡನೆ ಸಂಯೋಗವಾಗುವ ಶಕ್ತಿಯೂ ಕೂಡ ಕ್ಲೋರೀನಿಗೆ ಇದೆ. ಕ್ಲೋರೀನ್ ಜಲಜನಕಗಳಿಗೆ ಪರಸ್ಪರ ಸ್ನೇಹಭಾವವಿರುವುದನ್ನು ಸುಲಭವಾಗಿ ತೋರಿಸಬಹುದು. ಕ್ಲೋರೀನ್ ತುಂಬಿರುವ ನೀರೆಯೊಳಕ್ಕೆ ಉರಿಯುವ ಮೇಣದ ಬತ್ತಿಯನ್ನು ತಳ್ಳಿದರೆ ಜ್ವಾಲೆಯು ಮುಂಕಾಗಿ ವಿಶೇಷವಾಗಿ ಹೊಗೆಯನ್ನು ಹುಟ್ಟಿಸುತ್ತಾ ಉರಿಯುತ್ತದೆ. ಹೊಗೆ ಉಂಟಾಗುವುದಕ್ಕೆ ಕಾರಣವೆನೆಂದರೆ—ಮೇಣದಲ್ಲಿ ಇಂಗಾಲ, ಜಲಜನಕ ಇವೆರಡು ವಸ್ತುಗಳು ಸಂಯೋಗಸ್ಥಿತಿಯಲ್ಲಿವೆ. ಇವೆರಡರಲ್ಲಿ ಜಲಜನಕಕ್ಕೂ ಕ್ಲೋರೀನಿಗೂ ಸ್ನೇಹಭಾವವು ಹೆಚ್ಚಾಗಿರುವುದರಿಂದ ಮೇಣದಲ್ಲಿನ ಜಲಜನಕಮಾತ್ರ ಕ್ಲೋರೀನಿನೊಡನೆ ಸಂಯೋಗವಾಗಿ ಹೈಡ್ರೊಕ್ಲಾರಿಕ್ ಆಸಿಡ್ ಉಂಟಾಗುತ್ತದೆ. ಇಂಗಲವು ಹೊಗೆಯ ರೂಪದಲ್ಲಿ ಹೊರಡಿಸಲ್ಪಡುತ್ತದೆ.

ಕ್ಲೋರೀನ್ ಅನಿಲಕ್ಕೆ ಒಂದು ಆಶ್ಚರ್ಯಕರವಾದ ಗುಣ ಉಂಟು. ಅದ್ಯಾವುದೆಂದರೆ—ಸಸ್ಯಗಳಿಂದುಂಟಾಗುವ ಬಣ್ಣಗಳನ್ನು ಹೋಗಲಾಡಿಸುವ ಶಕ್ತಿ; ಎಂದರೆ ಗಿಡಗಳಿಂದ ತಯಾರಾಗುವ ಕೆಂಪು ಹಸರು ಬಣ್ಣಗಳನ್ನು

ಕ್ಲೋರೀನ್ ಅನಿಲವು ಒಂದುವಿಧ ಅಸಹ್ಯವಾದ ಕಟುವಾದ ದುರ್ವಾಸನೆಯುಳ್ಳದ್ದು. ಕ್ಲೋರೀನ್ ಮಿಶ್ರವಾಗಿರುವ ವಾಯುವನ್ನು ಉಛ್ವಾಸಿಸಿದರೆ ಗಂಟಲು ಮೂಗುಗಳ ಒಳಚರ್ಮವು ಊದಿಕೊಂಡು ನೋವು ಉಂಟಾಗುತ್ತದೆ. ವಿಶೇಷವಾಗಿ ಕ್ಲೋರೀನ್ ಜಿರವಿರುವ ವಾಯುವನ್ನು ಉಛ್ವಾಸಿಸುವುದರಿಂದ ಕೆಲವು ವೇಳೆಗಳಲ್ಲಿ ಮರಣ ಕೂಡ ಸಂಭವಿಸಬಹುದು. ಕ್ಲೋರೀನ್ ಕಣ್ಣಿಗೆ ಕಾಣುವಂತಾ ಒಂದು ವಿಜಾತೀಯವಾದ ಅರಶಿನ ಹಸರು ಬಣ್ಣ ಉಳ್ಳದ್ದು. ಆದರೆ ಶೈತ್ಯವನ್ನುಂಟುಮಾಡುವದರಿಂದಲೂ ಹೆಚ್ಚಾಗಿ ಅನುಕೋಣವರಿಂದಲೂ ಕ್ಲೋರೀನನ್ನು ಜಲರೂಪಕ್ಕೆ ತರಬಹುದು. ಜಲಾವಸ್ಥೆಯಲ್ಲಿ ಅರಶಿನಬಣ್ಣ ಉಳ್ಳದ್ದಾಗಿಯೂ ಭಾರವಾಗಿಯೂ ಇರುವುದು. ಜಲಾವಸ್ಥೆಯಲ್ಲಿ ಕ್ಲೋರೀನಿಗೆ ಶೈತ್ಯವನ್ನುಂಟುಮಾಡೋಣದರಿಂದ ಶಿಲಾವಸ್ಥೆಗೆ ಬದಲಾಯಿಸುತ್ತದೆ.

ಕ್ಲೋರೀನ್ ಅನಿಲರೂಪದಲ್ಲಿರುವದರಿಂದ ಇದನ್ನು ತಯಾರಾದ ಸೀಸೆಗಳಲ್ಲಿ ತುಂಬುವಬಗೆ ಹ್ಯಾಗೆ? ಜಲಜನಕ ಆಮ್ಲಜನಕಗಳಂತೆ ಸೀಸೆ ತುಂಬಿದ ಸೀಸೆಗಳಲ್ಲಿ ಹಿಡಿಯುವಹಾಗುವುದಿಲ್ಲ. ಏಕೆಂದರೆ ಈ ಅನಿಲವನ್ನು ನೀರು ಹೀರಿಕೊಳ್ಳುತ್ತದೆ. ಆದರೆ ವಾಯುವಿಗಿಂತ ಸುಮಾರು ಎರಡರಷ್ಟು ಹೆಚ್ಚು ಭಾರವಾದುದರಿಂದ ವಾಯು ತುಂಬಿದ ಸೀಸೆಗಳಲ್ಲಿ ಸೇರಿಸಬಹುದು. ಹ್ಯಾಗೆಂದರೆ:—ಒಂದು ಪಂಚಪಾತ್ರೆಯ ತುಂಬ ನೀರನ್ನು ತುಂಬಿ ಪಾತ್ರೆಗೆ ಒಂದು ಗಾಜಿನಕೊಳವಿಯ ಮೂಲಕ ಪಾದರಸವನ್ನು ಸುರಿದರೆ ಪಾದರಸವು ನೀರಿಗಿಂತ ಭಾರವಾದುದರಿಂದ ಪಾತ್ರೆಯ ಕೆಳಗೆ ನಿಂತ ನೀರೆಲ್ಲಾ ಸುರಿದುಹೋಗಿ ಕಡೆಗೆ ಪಾತ್ರೆಯತುಂಬ ಪಾದರಸ ತುಂಬಿಕೊಳ್ಳುತ್ತದೆ. ಇದರಂತೆಯೇ ವಾಯು ತುಂಬಿರುವ ಸೀಸೆಯೊಳಕ್ಕೆ ಕ್ಲೋರೀನ್ ಬರುವ ಕೊಳವೆಯನ್ನಿಟ್ಟರೆ, ಕ್ಲೋರೀನ್ ವಾಯುವಿಗಿಂತ ಭಾರವಾದುದರಿಂದ ಅದನ್ನು ಹೊರಗೆ ತಳ್ಳಿ ತಾನು ಆ ಸ್ಥಳವನ್ನು ಆಕ್ರಮಿಸಿಕೊಳ್ಳುತ್ತದೆ. ಕ್ಲೋರೀನ್ ಚದರಿಹೋಗದೇ ಇರುವದಕ್ಕೋಸ್ಕರವೇ ಕೊಳವೆಯನ್ನು ಸೀಸೆಯೊಳಗಿಡಬೇಕು ಅನೇಕ ಲೋಹಗಳನ್ನು ಚೂಳಾಗುವಂತೆ ಪುಡಿಮಾಡಿ ಕ್ಲೋರೀನ್ ತುಂಬಿರುವ ಸೀಸೆಗೆ ಹಾಕಿದರೆ ಅವುಗಳು ತಾವಾಗಿಯೇ ಉರಿಯುತ್ತವೆ. ಉರಿಯುವಾಗ ಕ್ಲೋರೀನಿಗೂ, ಲೋಹಕ್ಕೂ

ಸಂಯೋಗ ಉಂಟಾಗಿ ಕ್ಲೋರೈಡ್ ಎಂಬ ಪದಾರ್ಥ ಹುಟ್ಟುತ್ತದೆ ಅಂಬುವೊನಿ, ಆರಸನಿಕ್ ಲೋಹಗಳನ್ನು ಪುಡಿಮಾಡಿ ಹಾಕಿದರೆ ಉರಿಯುತ್ತವೆ. ತಾಂಬ್ರದ ರೇಖುಕೂಡ ಕ್ಲೋರೀನ್ ವಾಯುವಿನಲ್ಲಿ ಉರಿಯುತ್ತದೆ ಕ್ಲೋರೀನ್ ಇತರ ವಸ್ತುಗಳೊಡನೆ ಸಂಯೋಗವಾಗಿ ಹುಟ್ಟುವ ಪದಾರ್ಥಗಳಿಗೆ ಕ್ಲೋರೈಡ್ಸ್ ಎಂಬುದಾಗಿ ಹೆಸರು.

ಕ್ಲೋರೀನ್ ತಾನಾಗಿ ಉರಿಯುವುದಿಲ್ಲ. ಜಲಜನಕದೊಡನೆ ಸಂಯೋಗವಾಗಿ ಹೈಡ್ರೊಕ್ಲಾರಿಕ್ ಆಸಿಡ್ (Hydrogen Chloride, or Hydrochloric Acid) ಎಂಬ ಆಮ್ಲ ಉಂಟಾಗುವುದೇ ಕ್ಲೋರೀನಿನ ಮುಖ್ಯ ಲಕ್ಷಣವಾಗಿದೆ. ಕ್ಲೋರೀನ್, ಜಲಜನಕ ಇವೆರಡು ಅನಿಲಗಳನ್ನು ಸಮ ಅಳತೆಗಳಲ್ಲಿ ಮಿಶ್ರಮಾಡಿ (Equal volumes) ಮಿಶ್ರನನ್ನು ಸೂರ್ಯನ ಬೆಳಕಿನಲ್ಲಿಡುವುದರಿಂದಲೂ, ಅಲ್ಲದೆ, ಮಿಶ್ರಕ್ಕೆ ಜ್ವಾಲೆಯ ಸಂಪರ್ಕವನ್ನುಂಟುಮಾಡುವುದರಿಂದಲೂ, ಬಹಳಶಬ್ದ ಉಂಟಾಗಿ ಎರಡು ಅನಿಲಗಳು ಸಂಯೋಗವಾಗುತ್ತವೆ. ಸಂಯೋಗದಿಂದ ಜನಿಸುವ ಪದಾರ್ಥವೇ ಹೈಡ್ರೊಕ್ಲಾರಿಕ್ ಆಸಿಡ್.

ಸೂರ್ಯನ ಬೆಳಕಿನಲ್ಲಿ ನೀರನ್ನು ಖಂಡಿಸಿ ಅದರ ಜಲಜನಕದೊಡನೆ ಸಂಯೋಗವಾಗುವ ಶಕ್ತಿಯೂ ಕೂಡ ಕ್ಲೋರೀನಿಗೆ ಇದೆ. ಕ್ಲೋರೀನ್ ಜಲಜನಕಗಳಿಗೆ ಪರಸ್ಪರ ಸ್ನೇಹಭಾವವಿರುವುದನ್ನು ಸುಲಭವಾಗಿ ತೋರಿಸಬಹುದು. ಕ್ಲೋರೀನ್ ತುಂಬಿರುವ ಸೀಸೆಯೊಳಕ್ಕೆ ಉರಿಯುವ ಮೇಣದ ಬತ್ತಿಯನ್ನು ತಳ್ಳಿದರೆ ಜ್ವಾಲೆಯು ಮಂಕಾಗಿ ವಿಶೇಷವಾಗಿ ಹೊಗೆಯನ್ನು ಹುಟ್ಟಿಸುತ್ತಾ ಉರಿಯುತ್ತದೆ. ಹೊಗೆ ಉಂಟಾಗುವುದಕ್ಕೆ ಕಾರಣವೆನೆಂದರೆ—ಮೇಣದಲ್ಲಿ ಇಂಗಾಲ, ಜಲಜನಕ ಇವೆರಡು ವಸ್ತುಗಳು ಸಂಯೋಗಸ್ಥಿತಿಯಲ್ಲಿವೆ. ಇವೆರಡರಲ್ಲಿ ಜಲಜನಕಕ್ಕೂ ಕ್ಲೋರೀನಿಗೂ ಸ್ನೇಹಭಾವವು ಹೆಚ್ಚಾಗಿರುವುದರಿಂದ ಮೇಣದಲ್ಲಿನ ಜಲಜನಕಮಾತ್ರ ಕ್ಲೋರೀನಿನೊಡನೆ ಸಂಯೋಗವಾಗಿ ಹೈಡ್ರೊಕ್ಲಾರಿಕ್ ಆಸಿಡ್ ಉಂಟಾಗುತ್ತದೆ. ಇಂಗಾಲವು ಹೊಗೆಯ ರೂಪದಲ್ಲಿ ಹೊರಡಿಸಲ್ಪಡುತ್ತದೆ.

ಕ್ಲೋರೀನ್ ಅನಿಲಕ್ಕೆ ಒಂದು ಆಶ್ಚರ್ಯಕರವಾದ ಗುಣ ಉಂಟು. ಅದ್ಯಾವದೆಂದರೆ—ಸಸ್ಯಗಳಿಂದುಂಟಾಗುವ ಬಣ್ಣಗಳನ್ನು ಹೋಗಲಾಡಿಸುವ ಶಕ್ತಿ; ಎಂದರೆ ಗಿಡಗಳಿಂದ ತಯಾರಾಗುವ ಕೆಂಪು ಹಸರು ಬಣ್ಣಗಳನ್ನು

ನಾಶಮಾಡುತ್ತದೆ. ಈ ಗುಣವನ್ನು ಕೆಳಗೆ ಹೇಳಿರುವ ಮೇರೆ ಸುಲಭವಾ
ತೋರಿಸಬಹುದು. ಕೊಳ್ಳೀರೀಕ್ ತುಂಬಿರುವ ಸೀಸೆಯೊಳಕ್ಕೆ ಕೆಂ
ಅಲ್ಪಾಕ್ಬಟ್ಟೆಯ ಚೂರನ್ನು ಹಾಕಿದರೆ ಬಣ್ಣ ಹೋಗದೆ ಮುಂಚಿನಂತೆ
ಇರುತ್ತದೆ. ಬಟ್ಟೆಯನ್ನು ಕೊಂಚ ಒದ್ದೆ ಮಾಡಿ ಹಾಕಿದರೆ ಕೆಲವು ನಿಮಿ
ಗಳಲ್ಲಿಯೇ ಬಣ್ಣವೆಲ್ಲಾ ಹೋಗಿ ಬಟ್ಟೆಯ ಚೂರು ಬಿಳ್ಳಗಾಗುತ್ತದೆ. ಇ
ದರಿಂದ ಕೊಳ್ಳೀರೀಕ್, ನೀರಿನ ಸಾನ್ನಿಧ್ಯದಲ್ಲಿ ಬಣ್ಣವನ್ನು ಹೋಗಲಾಡಿ
ತ್ತದೆಂದು ಗೊತ್ತಾಗುತ್ತದೆ. ಹೂಗಳ ಬಣ್ಣವನ್ನು ಕೂಡ ನಾಶಮ
ಬಿಳ್ಳಗೆ ಮಾಡುತ್ತದೆ. ಗುಲಾಬಿ, ಚಂಡುಮಲ್ಲಿಗೆ ಹೂಗಳನ್ನು ಕೊಳ್ಳೀ
ತುಂಬಿರುವ ಸೀಸೆಯೊಳಗೆ ಹಾಕಿದರೆ ಬಿಳ್ಳಗಾಗುತ್ತದೆ. ಬರಿಯುವದ
ನಾವು ಉಪಯೋಗಿಸುವ ಮಸಿಯ ಕಪ್ಪುಬಣ್ಣವನ್ನು ನಾಶಮಾಡುತ್ತ
ಕೊಳ್ಳೀರೀನಿರುವ ಸೀಸೆಗೆ ಕೊಂಚ ಮಸಿಯನ್ನು ಸುರಿದು, ಸೀಸೆಯ
ಮುಚ್ಚಿ, ಅಳ್ಳಾಡಿಸಿದರೆ ಮಸಿಯು ಬಿಳ್ಳಗಾಗುತ್ತದೆ. ಕೊಳ್ಳೀರೀನಿಗೆ ಇಂ
ಗುಣವಿರುವದರಿಂದ ಅದು ಅನೇಕ ಕೈಗಾರಿಕೆಗಳಲ್ಲಿ ಉಪಯೋಗಿಸಲ್ಪಡುತ್ತ

ಎಸ್. ವೆಂಕಟೇಶಯ್ಯಂಗಾರ್, ಬಿ. ಎ.

ಮೈಸೂರು ದೇಶೀಯ ಪರೀಕ್ಷೆ.

ಪಾಕಶಾಸ್ತ್ರ.

I. ಪಾಕಕ್ಕೆ ಉಪಯೋಗಿಸತಕ್ಕ ನೀರು ಹ್ಯಾಗಿರ ಬೇಕು?

II. ಅಡಿಗೆಯನ್ನು ಮಾಡತಕ್ಕವರು ಮೊದಲೇ ಏನೇನುಸಿದ್ಧ ಮಾ
ಕೊಳ್ಳಬೇಕು?

III. ಬೇಳೇ ಹುಳಿಯನ್ನು ಮಾಡುವ ವಿಧಾನವನ್ನು ಬರೆಯಿರಿ.

IV. ಪದಾರ್ಥಗಳನ್ನು ಎಷ್ಟು ವಿಧವಾಗಿ ಪಾಕ ಮಾಡುತ್ತಾರೆ; ಪ್ರ
ಒಂದಕ್ಕೂ ಎರಡೆರಡು ಉದಾಹರಣೆಗಳನ್ನು ಕೊಡಿ.

V. (1) ತೊಗರಿ ಬೇಳೆ ಹುಳಿ ತೊವ್ವೆ, (2) ಚಪ್ಪರದವರೇ ಕಾಳ
ಪಲ್ಯ, ಇವುಗಳಿಗೆ ಬೀಳ ಬೇಕಾದ ಪದಾರ್ಥಗಳು ಯಾವವು?

VI. (1) ಹೆಸರು ಬೇಳೆ ಕೋಸುಂಬರಿ, (2) ಪಡನಲಕಾಯಿ ಮಜ್ಜಿಗೇ ಪಳದ್ಯ, (3) ಕಾದಸೇವ್ರುಗೇ ಪಾಯಸ, (4) ಭಕಾಳಭಾತ್ ಇವುಗಳಿಗೆ ಬೇಕಾದಕ್ಕ ಪದಾರ್ಥಗಳನ್ನು, ಮಾಡತಕ್ಕ ವಿಧಾನವನ್ನೂ ಸಹ ಸಂಕ್ಷೇಪವಾಗಿ ಬರೆಯಿರಿ.

ಮಹಾರಾಣಿ ಸುವರ್ಣಮಾಯಿ.

ಮಹಾರಾಣಿ ಸುವರ್ಣಮಾಯಿಯ ಹೆಸರನ್ನು [illegible] ಎಲ್ಲರೂ ಕೇಳಿದಾರೆ; ಇತರ ಪಾಶ್ಚಾತ್ಯರಲ್ಲಿಯೂ ಈಕೆಯ ಕೀರ್ತಿಯು ಹರಡಿಕೊಂಡಿದೆ. ಸುವರ್ಣಮಾಯಿಯ ಹೆಸರು ಕರ್ಣನ ಹೆಸರಿನಂತೆ ಪಾತ್ರತ್ವಕ್ಕೆ ಪರ್ಯಾಯವದವಾಗಿದೆ; ಈಕೆಯು ಪಟ್ಟುರುವ ಚಿಂತಚಿಂತೆಯನ್ನು ಮತ್ತು ಮಾಡಿರುವ ಲೋಕೋಪಕಾರವನ್ನು ಜನರು ಸ್ಮರಿಸಿ ಇವಳಲ್ಲಿ ಭಕ್ತಿಯನ್ನೂ ವಿಶ್ವಾಸವನ್ನೂ ಇಟ್ಟುಗೊಂಡಿದಾರೆ. ವಿಧವೆಯರ ದುಃಖವನ್ನು ಶಮನಗೊಳಿಸುವದರಲ್ಲಾಗಲಿ, ಹಸಿವಿನಿಂದ ಬಳಲಿರುವವರಿಗೆ ಅನ್ನದಾನವನ್ನು ಮಾಡುವದರಲ್ಲಾಗಲಿ, ಬಟ್ಟೆಯಿಲ್ಲದೆ ಚಳಿಯಲ್ಲಿ ನಡುಗುವವರಿಗೆ ವಸ್ತ್ರಗಳನ್ನು ಕೊಡುವುದರಲ್ಲಾಗಲಿ, ಮನೆ ಇಲ್ಲದ ಜನರಿಗೆ ಮನೆಯನ್ನು ಕಟ್ಟಿಸಿ ಕೊಡುವುದರಲ್ಲಾಗಲಿ, ವಿದ್ಯಾಭ್ಯಾಸದಲ್ಲಿ ಕುತೂಹಲರಾದ ವಿದ್ಯಾರ್ಥಿಗಳಿಗೂ, ತನ್ನ ಯೋಗ್ಯತೆಯನ್ನು ಪ್ರಕಾಶಪಡಿಸಲುದ್ಯುಕ್ತರಾಗಿ ಶ್ರಮಪಡುತ್ತಲಿರುವ ಗ್ರಂಥಕರ್ತರಿಗೂ ಸಹಾಯಮಾಡುವುದರಲ್ಲಾಗಲಿ, ರೋಗಪೀಡಿತರಾದ ಜನರಿಗೆ ಔಷಧಾದಿಗಳಿಂದ ಉಪಶಮನಗೊಳಿಸುವುದರಲ್ಲಾಗಲಿ, ಮಹಾರಾಣಿ ಸುವರ್ಣಮಾಯಿಯು ಮುಂದಾಳಾಗಿದಾಳೆ. ಗುಣಾಢ್ಯಳಾದ ಇವಳ ಚರಿತ್ರೆಯನ್ನು ತಿಳಿಯುವದು ಶ್ರೇಯಸ್ಕರವಾದುದರಿಂದ ಸಮಸ್ತ ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನೀಯರು ತಿಳಿಯತಕ್ಕದ್ದು ಅವಶ್ಯಕ.

ಗುಣಸಂಪನ್ನೆಯಾದ ಈಕೆಯು ವಿವಾಹಮೂಲಕ ಕಾಸಿಂಬಾಜಾರದ

ಜನಿಸಾನುಡಾರರ ಮನೆತನಕ್ಕೆ ಸೇರಿದನಳು. ಈ ಮನೆತನದ ಮೂಲ ಪುರುಷನಾದ ಕೃಷ್ಣಕಾಂತನಂವಿನಿಯಂಬಾತನು ಗೌರ್ನರ್‌ಜನರಲ್ ವಾರನ್ ಹೇಸ್ಟ್ಟಿಂಗ್ಸಿನ ಕಾಲವಲ್ಲಿ ಅವನಿಗೆ ಆಪತ್ಕಾಲದಲ್ಲಿ ಸಹಾಯಮಾಡಿ ಆತನ ವಿಶ್ವಾಸಕ್ಕೆ ಪಾತ್ರನಾಗಿ ಐಶ್ವರ್ಯವನ್ನೂ ಉನ್ನತ ಪದವಿಯನ್ನೂ ಸಂಪಾದಿಸಿದನು. ಇವನ ವಂಶೀಕನಾದ ಕೃಷ್ಣನಾಥರಾಯಿಯಂಬವನೇ ಸುವರ್ಣವಾಯಿಯ ಗಂಡನು. ೧೮೭೭ನೇ ಇಸವಿಯಲ್ಲಿ ಭಟ್ಟತೊಳವೆಂಬ ಗ್ರಾಮದಲ್ಲಿ ಸುವರ್ಣವಾಯಿಯು ಹುಟ್ಟಿದಳು. ೧೮೩೪ನೇ ಇಸವಿಯಲ್ಲಿ, ಹನ್ನೊಂದನೆಯ ವಯಸ್ಸಿನಲ್ಲಿ ವಿವಾಹವಾಯಿತು. ವಿವಾಹವಾದ ಆರುವರ್ಷಗಳ ನಂತರ, ೧೮೪೦ನೇ ಇಸವಿಯಲ್ಲಿ ಆಕೆಯ ಪತಿಯು ಬುದ್ಧಿ ಸ್ಥಿರವಿಲ್ಲವಾದುದರಿಂದ ಆತ್ಮಹತ್ಯವನ್ನು ಮಾಡಿಕೊಂಡನು.

ಹೀಗೆ ಹದಿನೇಳನೆಯ ವಯಸ್ಸಿನಲ್ಲಿ ಸುವರ್ಣವಾಯಿಗೆ ಪತಿವಿಯೋಗದುಃಖವು ಪ್ರಾಪ್ತವಾಯಿತು. ಸಾಧಾರಣವಾಗಿ ಸ್ತ್ರೀಯರಿಗೆ ಈ ಒಂದು ದುಃಖವೇ ಸಾಕಾದಷ್ಟು ದುಃಖವಾಗಿರುತ್ತೆ. ಆದರೆ ವ್ಯಸನ ಪ್ರಾಪ್ತವಾದಾಗ ಒಂದೊಂದಾಗಿ ಬರುವದಿಲ್ಲ, ಒಟ್ಟಿಗೆ ಒಡಗಿ ಮನುಷ್ಯನಬಾಳಿಕೆಯನ್ನು ಕರ್ಕಶವಾಗಿ ಮಾಡುತ್ತದೆ. ಸುವರ್ಣವಾಯಿಗೆ ಈ ದುರ್ದಶೆಯುಂಟಾಯಿತು. ಕೃಷ್ಣನಾಥರಾಯಿಯು ಸಾಯುವದಕ್ಕೆ ಮುಂಚೆ ತನ್ನ ನಂತರ ತನಿಗೆ ಇದ್ದ ಸಮಸ್ತ ಆಸ್ತಿಯನ್ನೂ ಈಸ್ಟ್ ಇಂಡಿಯಾ ಕಂಪೆನಿಯವರಿಗೆ ಕೊಟ್ಟುರುವದಾಗಿ ವಿಲ್ ಶಾಸನವನ್ನು ಬರೆದಿಟ್ಟಿದ್ದನು. ಈ ಶಾಸನದ ಪ್ರಕಾರ, ಆತನು ಮರಣವನ್ನು ಹೊಂದಿದಮೇಲೆ ಕಂಪೆನಿಯವರು ಆಸ್ತಿಯನ್ನೆಲ್ಲ ಸ್ವಾಧೀನಪಡಿಸಿಕೊಂಡರು. ಸುವರ್ಣವಾಯಿಯ ದುಃಖಕ್ಕೆ ಪಾರವಿಲ್ಲದಂತಾಯಿತು. ಪತಿವಿಯೋಗದುಃಖ ಸ್ರೋಂದುಕಡೆ, ಮತ್ತೊಂದುಕಡೆ ಈಸ್ಟ್ ಇಂಡಿಯಾ ಕಂಪೆನಿಯವರಿಗೆ ಆಸ್ತಿಯನ್ನು ಒಪ್ಪಿಸಿ ಅವರು ಕನಿಕರವಿಟ್ಟು ನಿಟ್ಟ ಶೇಷದಿಂದ ಜೀವಿಸಬೇಕಾಯಿತೆಂಬ ಖೇದ. ಹೀಗೆ ಕಷ್ಟಗಳು ಒಡಗಿ ಬರೂ ಸುವರ್ಣವಾಯಿಯು ಧೈರ್ಯಗುಂದಲಿಲ್ಲ.

ತನ್ನ ಗಂಡನು ವಿಲ್ ಶಾಸನವನ್ನು ಬರೆದ ಕಾಲವಲ್ಲಿ ಬುದ್ಧಿಭ್ರಮಣೆಯುಳ್ಳವನಾಗಿದ್ದನೆಂತಲೂ, ಅದರಿಂದ ಆ ವಿಲ್‌ಶಾಸನದಪ್ರಕಾರ ಈಸ್ಟ್ ಇಂಡಿಯಾ ಕಂಪೆನಿಯವರು ಆಸ್ತಿಗಳನ್ನು ಸ್ವಾಧೀನಪಡಿಸಿಕೊಂಡದ್ದು

ಅಕ್ರಮವೆಂತಲೂ, ಅವುಗಳಿಗೆಲ್ಲಾ ತಾನು ಬಾಧ್ಯಸ್ಥಳಾದುದರಿಂದ ತನಗೆ
ನೇರಬೇಕೆಂತಲೂ ಕಲ್ಕತ್ತಾ ಪಟ್ಟಣದಲ್ಲಿದ್ದ ಸುಪ್ರೀಮ್ ಕೋರ್ಟಿನಲ್ಲಿ
ದಾವ ಮಾಡಿದಳು. ಇದರ ವಿಚಾರಣೆಯು ಮೂರು ವರ್ಷಗಳ ಕಾಲ ನಡೆದು
ಕೊನೆಗೆ ೧೮೮೩ನೇ ಇಸವಿಯಲ್ಲಿ ಸುವರ್ಣಮಾಯಿಯು ಹೇಳಿದ ಕಾರಣ
ಳೆಲ್ಲ ವಾಸ್ತವವೆಂದು ಗೊತ್ತಾಗಿ ಆಸ್ತಿಗಳಿಗೆಲ್ಲ ಅವಳೇ ಬಾಧ್ಯಸ್ತಳಾದುದ
ರಿಂದ ಅವುಗಳೆಲ್ಲ ಅವಳ ಸ್ವಾಧೀನಕ್ಕೆ ಬಿಡತಕ್ಕದ್ದೆಂದು ತೀರ್ಮಾನವಾ
ಯಿತು. ಹೀಗೆ ಅನ್ಯಾಕ್ರಾಂತವಾಗಿದ್ದ ಆಸ್ತಿಯು ನ್ಯಾಯವಾಗಿ ಕೈ
ಸೇರಿದಾರಭ್ಯ ಸುವರ್ಣಮಾಯಿಯು ಅದರ ಹುಟ್ಟುವಳಿಯನ್ನು ತನ್ನ ಶರೀರ
ಪೋಷಣೆಗೂ ಮತ್ತು ಆತ್ಮಸಂತೋಷಕ್ಕೆ ಉಪಯೋಗಿಸದೆ ಜನರ ಕಷ್ಟ
ನಿವಾರಣೆಗೋಸ್ಕರ ಅದನ್ನು ವಿನಿಯೋಗಿಸುತ್ತಿದ್ದಾಳೆ. ಇದಕ್ಕಾಗಿ ಅ
ಳನ್ನು ನಾವು ಎಷ್ಟು ಸ್ಮರಿಸಿದರೂ ಸ್ವಲ್ಪವೇಸರಿ

ಸುವರ್ಣಮಾಯಿಗೆ ಪತಿವಿಯೋಗವಾಗುವುದಾಗ ಇನ್ನೂ ಪ್ರಾಯ
ವಯಸ್ಸು. ಇದಲ್ಲದೆ ಯಾವಶಾಸ್ತ್ರ ಪರಿಚಯವೂ ವಿಶೇಷವಿರಲಿಲ್ಲ. ಆದರೂ
ಶೋಕೋಪಕಾರದಲ್ಲಿಯೇ ನಿರತಳಾಗಿ ಸಮಸ್ತರಿಗೂ ಮೇಲುಕಜ್ಜಿಯನ್ನು
ಹಾಕಿಕೊಟ್ಟಿರುವದು ಪರಮಾಶ್ಚರ್ಯ. ಆಸ್ತಿಯು ಸ್ವಾಧೀನವಾದಕೂಡ್ಲೆ
ಗಾಜೀವಲೋಚನನೆಂಬುವನನ್ನು ತನ್ನ ದಿವಾನನನ್ನಾಗಿ ನೇಮಿಸಿ ಪರೋಪ
ಕಾರಬುದ್ಧಿಯುಳ್ಳ ಆತನಸಹಾಯದಿಂದ ಪೂರ್ವದಲ್ಲಿ ಮಾಡಿದ್ದ ಸಾಲಗಳನ್ನೆಲ್ಲ
ಸ್ವಲ್ಪದಿವಸದಲ್ಲಿ ತೀರಿಸಿದಳು. ಅನಂತರ ತನ್ನ ರೈತರಿಗೆ ಅನುಕೂಲ
ಗಳನ್ನು ಕಲ್ಪಿಸುವದರಲ್ಲಿಯೂ, ಜಾತಿಭೇದ ಮತಭೇದಗಳಿಲ್ಲದೆ ಕಷ್ಟಪೀಡಿತ
ರಾದ ಜನರಿಗೆ ಕಷ್ಟಗಳನ್ನು ನಿವಾರಣೆ ಮಾಡುವದರಲ್ಲಿಯೂ, ಪಾಠಶಾಲೆ
ವೈದ್ಯಶಾಲೆ ಮುಂತಾದ ಧರ್ಮಶಾಲೆಗಳಿಗೆ ದ್ರವ್ಯಸಹಾಯ ಮಾಡುವದ
ರಲ್ಲಿಯೂ, ತನ್ನ ಆದಾಯವನ್ನು ವಿನಿಯೋಗಿಸುವದಕ್ಕೆ ಉಪಕ್ರಮಿಸಿದಳು
ಇಂಡಿಯಾ ಗೌರ್ನಮೆಂಟಿನವರು ಇವಳ ಗುಣಾತಿಶಯಗಳಿಗೆ ಮೆಚ್ಚಿ
೧೮೭೯ನೇ ಇಸವಿಯಲ್ಲಿ 'ಮಹಾರಾಣಿ' ಎಂಬ ಬಿರುದನ್ನು ಕೊಟ್ಟರು
೧೮೭೮ನೇ ಇಸವಿಯಲ್ಲಿ ಬಂಗಾಳಾಪ್ರಾಂತ್ಯದಲ್ಲಿ ಕ್ಷಾಮವುಂಟಾಗಿ ಬಹ
ಜನರು ಲಯವಾಗುತ್ತಿರುವಾಗ ಸುವರ್ಣಮಾಯಿಯು ಅನ್ನಛತ್ರಗಳನ್ನಿಡಿಸಿ
ಹಿಡಿಗಳನ್ನು ಕೊಡಿಸಿ, ಇನ್ನೂ ಇತರ ವಿಧಗಳಲ್ಲಿ ಜನರನ್ನು ಕಾಪಾಡಿ ಸಕಲ

ರಕ್ಕೆ ಸಹಾಯವಾಡಿದಳು. ಈ ಉಪಕಾರಕ್ಕಾಗಿ ಇಂಗ್ಲೀಷ್ ಗೌನ
ಮೆಂಟಿನವರು ಮಹಾರಾಣಿಯು ಬಂಗಾಳಾ ಲೆಫ್ಟಿನೆಂಟ್ ಗೌರ್ನರವರಿಗೆ ತಿಳಿ
ಒಬ್ಬ ಹುಡುಗನನ್ನು ದತ್ತು ಮಾಡಿಕೊಂಡರೆ ಆ ಮಗನಿಗೆ 'ಮಹಾರಾಜ
ಎಂಬ ಬಿರುದನ್ನು ಕೊಡುವದಾಗಿ ತಿಳಿಸಿದರು. ೧೮೭೭ನೇ ಇಸವಿಯ
ಇಂಡಿಯಾದೇಶದಲ್ಲಿ ಯಾರಿಗೂ ಕೊಡದೆ ಇದ್ದ 'ಕ್ರೌನ್ ಆಫ್ ಇಂಡಿಯ' ಎಂ
ಶ್ರೇಷ್ಠವಾದ ಬಿರುದನ್ನು ಕೊಟ್ಟರು. ಈ ಬಿರುದಿಗೆ ಸಂಬಂಧಪಟ್ಟ
ಮುದ್ರೆಯನ್ನೂ ಲೇಖನವನ್ನೂ ಮಹಾರಾಣಿಗೆ ಒಪ್ಪಿಸುವಾಗ ಬಂಗಾಳಲೆಫ್ಟಿ
ನೆಂಟ್ ಗೌರ್ನರ್ ಪ್ರತಿನಿಧಿಯಾಗಿದ್ದ ಪೀಕಾಕ್ ಸಾಹೇಬನು ದರಬಾರಿನ
ಸುವರ್ಣಮಾಲೆಯ ಗುಣಾತಿಶಯಗಳನ್ನು ಈಪ್ರಕಾರ ವರ್ಣಿಸಿದನು :—

" ಈಗ ಶ್ರೀಮತ್ ಮಹಾರಾಣಿಯವರು ನಿಮ್ಮ ಪಾತ್ರತ್ವಕ್ಕೂ, ಲೋ
ಕೋಪಕಾರಕ್ಕೂ ಮೆಚ್ಚಿ ಈ ಬಿರುದನ್ನು ಜಯಪಾಲಿಸಿದ್ದಾರೆ. ಇಲ್ಲಿ ನೇ
ರುವ ಜನರಲ್ಲಿ ಅನೇಕರಿಗೆ ನನಗೆ ತಿಳಿದಿರುವದಕ್ಕಿಂತ ಅಧಿಕವಾಗಿ ನೀವ
ಮಾಡಿರುವ ಧರ್ಮಗಳು ಮತ್ತು ನೀವು ನಿಮ್ಮ ಆಸ್ತಿಗೆ ಸಂಬಂಧಪಟ್ಟ
ಅಡಳಿತಗಳಲ್ಲಿ ವಿತರಣೆಯಿಂದ ಮೇಲ್ವಿಚಾರಣೆ ಮಾಡುತಿರುವದು ಮುಂತಾ
ವಿಷಯಗಳು ತಿಳಿದಿರಬಹುದು. ಆದರೂ ಇಲ್ಲಿರುವವರಲ್ಲಿ ಮತ್ತೆಕೆಲವರಿ
ನೀವು ಧರ್ಮಿಷ್ಠರೆಂದು ಮಾತ್ರ ತಿಳಿದು, ನೀವು ಮಾಡಿರುವ ಧರ್ಮಗ
ವಿವರಗಳು ತಿಳಿಯದೆ ಇರಬಹುದು. ಪ್ರಾರಂಭ್ಯ ನೀವು ಮಾಡಿರು
ಧರ್ಮಗಳನ್ನು ನಾನು ವಿವರಿಸುವದನವಶ್ಯಕ. ಈಬಿಗೆ ನೀವು ಮಾಡಿರು
ಧರ್ಮಗಳನ್ನು ನಿವರಿಸಿದರೇ ಸಾಕಾಗಿರುತ್ತೆ. ಈ ಪಟ್ಟಿಯನ್ನು ನೋಡ
ನವರಿಗೆಲ್ಲ ಕಷ್ಟನಿವಾರಣೆಯೇ ಮುಖ್ಯಾಭಿಪ್ರಾಯವಾಗಿಟ್ಟುಕೊಂಡ
ಸಹಾಯವನ್ನು ಅಪೇಕ್ಷಿಸುತ್ತಿದ್ದ ಕಾರ್ಯಗಳಿಗೆಲ್ಲ ಸಹಾಯ ಮಾಡಿ ಅವ್ರ
ಳನ್ನು ನೆರವೇರುವಂತೆ ಮಾಡಿರುವಿರೆಂತ ವ್ಯಕ್ತವಾಗುತ್ತೆ. ಇದಲ್ಲದೆ ಮೂರ
ಲಕ್ಷ ರೂಪಾಯಿಗೆ ಅಧಿಕವಾಗಿ ಪುಸ್ತಕಭಂಡಾರಗಳಿಗೂ, ಬಡವರು ಮುಂತ
ವರಿಗೂ ಕೊಟ್ಟಿರುತ್ತೀರಿ. ಹೀಗೆ ಸ್ವಲ್ಪಕಾಲದಲ್ಲಿಯೇ ಒಟ್ಟು ಐದ
ಕಾಲುಲಕ್ಷ ರೂಪಾಯಿ ಪರೆಗೆ ದಾನ ಮಾಡಿರುತ್ತೀರಿ. ಇದು ನಿಮ್ಮ ಹುಟ್ಟು
ಳಿಯಲ್ಲಿ ಸ್ವಲ್ಪ ಹೆಚ್ಚುಕಡಿಮೆ ಆರರಲ್ಲಿ ಒಂದುಪಾಲಾಗಿದೆ. ನೀವು ಮಾ
ಡುವ ಧರ್ಮದಲ್ಲಿ ಬಹು ಹಣ ಮೆಚ್ಚಿ ಮಾಡಿರುವದುಮಾತ್ರವೇ ವಿಶೇಷವ

ಈ ದೇಶದಲ್ಲಿ ತಮ್ಮ ಹೆಸರು ಜನರಿಗೆ ತಿಳಿದು ತಾವು ದಾನಿಗಳೆಂದು ಕೀರ್ತಿ ಬರಲೆಂಬ ಅಪೇಕ್ಷೆಯಿಂದ ಅನೇಕರು ಬಹು ದ್ರವ್ಯವನ್ನು ದಾನದಲ್ಲಿ ವ್ಯಯ ಮಾಡುತ್ತಾರೆ. ಆದರೆ ನೀವು ಈ ಕೀರ್ತಿಲಾಭವೇ ಮುಖ್ಯಾಂಶವಾಗಿಟ್ಟು ಕೊಂಡು ದಾನಮಾಡಿದವರಲ್ಲ. ನಿಮ್ಮನ್ನು ಇತರರು ಬಂದು ಸಹಾಯ ಮಾಡಿ ಬೇಕೆಂದು ಕೇಳುವವರೆಗೂ ನಿಮ್ಮಿಂದ್ದು ಅನಂತರ ಸಹಾಯ ಮಾಡಿದವರಲ್ಲ. ಜನರಿಗೆ ಸಾಖ್ಯವುಂಟಾಗಬೆಂದು ಕೇಳುವದಕ್ಕೆ ಮುಂಚೆಯೇ ನೀವು ವಿಚಾರಿಸಿ ಸಹಾಯ ಮಾಡಿರುವದ್ದರಿಂದ ದಾನದಿಂದ ಬರುವ ಯಶಸ್ಸಿಗೋಸ್ಕರ ಮಾಡಿದವರಲ್ಲವೆಂದು ಸ್ಪಷ್ಟವಪಡುತ್ತೆ. ಇದಲ್ಲದೆ ನೀವು ನಿಮ್ಮ ಆಸ್ತಿಗಳ ಮೇಲ್ವಿಚಾರಣೆಯನ್ನು ಮಾಡುತ್ತಿರುವಮು ನೋಡಿ ಎಲ್ಲರೂ ಆಶ್ಚರ್ಯಪಡಬೇಕಾಗಿದೆ. ನಿಮ್ಮ ದಿವಾನರಾದ ರಾಜೀನತೋಷನರ ಸಹಾಯದಿಂದ ಎಲ್ಲಾ ಸಂಗತಿಗಳನ್ನೂ ವಿಚಾರಿಸಿ ತಿಳಿದು ಆಯಾ ಕಾಲಕ್ಕೆ ನಡೆಯಬೇಕಾದ ಕೆಲಸಗಳನ್ನು ಕ್ರಮವರಿತು ನಡೆಯಿಸುವದರಿಂದ ನಿಮ್ಮ ರೈತರಿಗೆ ಹಿಂಸೆಯುಂಟಾಗದೆ ನಿಮಗೆ ಬರಬೇಕಾದ ವರಮಾನವು ವಿಚ್ಛಿತ್ತಿಯಿಲ್ಲದೆ ಬರುವದಲ್ಲದೆ ಅವರಿಗೆ ಸಾಖ್ಯವೂ ಲಾಭವೂ ಉಂಟಾಗಿದೆ."

ಈಚಿಗೆ ಸುವರ್ಣಮಾಯಿಯು ದಾನಕೊಕ್ಕೋಸ್ಕರ ಪ್ರತಿ ವರ್ಷವೂ ಒಂದು ಲಕ್ಷರೂಪಾಯಿಯನ್ನು ಪ್ರತ್ಯೇಕ ತೆಗೆದಿಟ್ಟಿದ್ದಾಳೆ. ಈಕೆಯು ವಿಷಯಾಸಕ್ತಳಾಗಿ ಕಾಲವನ್ನು ಕಳೆಯುತ್ತಿದ್ದರೆ ಯಾರೂ ಪ್ರತಿಯಾಗಿ ಹೇಳುತ್ತಿರಲಿಲ್ಲ. ಹಾಗೆ ಮಾಡದೆ, ಇಹಲೋಕದಲ್ಲಿ ಹುಟ್ಟಿ ಲೋಕೋಪಕಾರಿಯನಿಸಿಕೊಂಡು ಪುಣ್ಯವನ್ನು ಸಂಪಾದಿಸುವದರಲ್ಲಿಯೇ ನಿರತಳಾಗಿರುವದರಿಂದ ಈಕೆಯ ಚರಿತ್ರೆಯು ಸುಚರಿತ್ರೆಯೆಂದೂ ಈಕೆಯು ಸ್ತ್ರೀಸಮುದಾಯಕ್ಕೆಲ್ಲಾ ತಿಲಕಪ್ರಾಯಳೆಂದೂ ಹೇಳಬೇಕು. ದೇವತಾಭಕ್ತಿಯಲ್ಲಿಯೂ, ದಾತೃತ್ವದಲ್ಲಿಯೂ, ಇತರ ಸುಗುಣಗಳಲ್ಲಿಯೂ ನಮ್ಮ ಹಿಂದೂ ದೇಶಕ್ಕೆ ಅಲಂಕಾರಭೂತಳಾದ ಈ ಸುವರ್ಣಮಾಯಿಯು ಇನ್ನೂ ಬಹುಕಾಲ ಬದುಕಿರಲೆಂದು ನಾವೆಲ್ಲರೂ ದೇವರನ್ನು ಪ್ರಾರ್ಥಿಸಬೇಕು.

ಪೀಠಿಕೆ.

I. ಕಿತ್ತಳೆಹಣ್ಣು.

1. ಪ್ರಾರಂಭ:—ಅಂಗಿಯ ಜೇಬಿನೊಳಗಿನಿಂದ ಎರಡು ಮೂರ ಏಳಗಳ ಕಿತ್ತಳೆಹಣ್ಣುಗಳನ್ನು ಹೊರಕ್ಕೆ ತೆಗೆದು ವಿದ್ಯಾರ್ಥಿಗಳ ದೃಷ್ಟಿಯನ್ನು ಅವುಗಳ ಕಡೆಗೆ ತಿರುಗಿಸಬೇಕು. ಅನಂತರ ಅವುಗಳ ಹೆಸರನ್ನು ಕೇಳಬೇಕು. (ಬೋರ್ಡಿನಮೇಲೆ ಕಿತ್ತಳೆಹಣ್ಣು ಎಂದು ಬರೆದು ವಿದ್ಯಾರ್ಥಿಗಳಿಂದ ಅದನ್ನು ಓದಿಸಬೇಕು.)

2. ಅವಲೋಕನ—ಆಕಾರ:—ಕಿತ್ತಳೆಹಣ್ಣು ಕಲ್ಲಿಗಿಂತ ನ್ನಾಗಿ ಉರುಳುವುದಕ್ಕೆ ಕಾರಣವೇನೆಂದು ಪ್ರಶ್ನೆ ಮಾಡಬೇಕು. (a) ಗುಂಡಾಗಿರುವುದರಿಂದ ('ಗುಂಡಾಗಿರುವದರಿಂದ'—ಇದನ್ನು ಬೋರ್ಡಿನವ ಬರೆದು ವಿದ್ಯಾರ್ಥಿಗಳಿಂದ ಓದಿಸಬೇಕು.) ಗುಂಡಾಗಿರುವ ಇತರ ಪದಾರ್ಥಗಳ ಹೆಸರುಗಳನ್ನು ಕೇಳಬೇಕು. ಚೆಂಡು, ಗೋಲಿ, ನಿಂಬೇಹಣ್ಣು ಮುಂತಾದವುಗಳು.

(a) ಈ ಪ್ರಶ್ನೆ ಕೇಳುವಾಗ ಒಂದು ಕಿತ್ತಳೆ ಹಣ್ಣನ್ನೂ ನುಣುಪಿಲ್ಲದ ಒಂದು ಕಲ್ಲನ್ನೂ ನೆಲದಮೇಲೆ ಉರುಳಿಸಿ ತೋರಿಸಬೇಕು.

3. ಪರಿಮಾಣ:—ದಪ್ಪವಾದ ಒಂದು ಕಿತ್ತಳೆಹಣ್ಣನ್ನು ತೆ ದಾದ ಮತ್ತೊಂದು ಕಿತ್ತಳೆಹಣ್ಣನ್ನು ತೋರಿಸಿ ಅವುಗಳಿಗೆ ಇರುವ ತಾರತಮ್ಯವನ್ನು ಕೇಳಬೇಕು. ಕಿತ್ತಳೆಹಣ್ಣುಗಳೆಲ್ಲಾ ಒಂದೇ ಪರಿಮಾಣವುಳ್ಳ ವುಗಳಲ್ಲವೆಂದು ತಿಳಿಸಬೇಕು; ಗಿಡದಮೇಲೆ ಬೆಳೆದಷ್ಟು ದಪ್ಪವಾಗುತ್ತವೆಂದು ಹೇಳಬೇಕು.

4. ಬಣ್ಣ:—ಒಂದೇ ಪರಿಮಾಣವುಳ್ಳ, ಆದರೆ ಬಣ್ಣ ವ್ಯತ್ಯಾಸವಾದ ಎರಡು ಕಿತ್ತಳೆಹಣ್ಣುಗಳನ್ನು ತೋರಿಸಿ ಅವುಗಳಿಗೆ ಇರುವ ಭೇದ ಕೇಳಬೇಕು. ಕಿತ್ತಳೆಹಣ್ಣುಗಳೆಲ್ಲ ಒಂದೇ ಬಣ್ಣವುಳ್ಳವುಗಳಾಗಿರುವದಿಲ್ಲವೆಂದು ತಿಳಿಸಬೇಕು; ಕೆಲವು ಹಳದಿಬಣ್ಣ, ಕೆಲವು ಕುಸುಂಬಿ, ಅಂದರೆ ಕೆಂಪು ಮತ್ತು ಹಳದಿ ಮಿಶ್ರಬಣ್ಣ ಉಳ್ಳವೆಂದು ಹೇಳಬೇಕು. ಹುಡುಗನ

ಬಣ್ಣಗಳ ವ್ಯತ್ಯಾಸವನ್ನು ತೋರಿಸುವಷ್ಟಕ್ಕಾಗಿ ಕಣ್ಣಿನೆದುರಿಗೆ ಒಂದ
ಕೆಂಪು ಗಾಜಿನ ಚೂರನ್ನು ಹಿಡಿದು ಬಳೀ ಕಾಗದವನ್ನು ನೋಡಿ ಎಂದ
ಹೇಳಬೇಕು; ಕಾಗದವು ಕೆಂಪು ಬಣ್ಣವಾಗಿ ಕಾಣುತ್ತೆ. ಹಾಗೆಯೇ ಹಳದ
ಗಾಜನ್ನು ಹಿಡಿದರೆ ಕಾಗದವು ಹಳದಿಬಣ್ಣವಾಗಿ ಕಾಣುವದು; ಅವೆ
ಡನ್ನೂ ಒಂದರ ಮುಂದೆ ಒಂದನ್ನು ಹಿಡಿದು ನೋಡಿದರೆ ಕುಸುಂಬಿ ಬಣ್ಣ
ವಾಗಿ ಕಾಣುವದು. ಅನಂತರ ಗಿಡದ ಮೇಲೆ ಬಿಳಿಯುವ ಕಿತ್ತಳೆ ಕಾಯಿಗಳ
ಹಸುರು ವರ್ಣವನ್ನು ಹೊಂದಿರುತ್ತವೆಂದು ತಿಳಿಸಿ ಈ ನಾಲ್ಕು ವರ್ಣಗಳ
ಹೆಸರುಗಳನ್ನೂ ಬೋರ್ಡಿನಮೇಲೆ ಬರೆದು ಮಕ್ಕಳಿಂದ ಓದಿಸಬೇಕು.

5. ಒಂದು ಹಣ್ಣಿನ ಸಿಪ್ಪೆಯನ್ನು ಸ್ವಲ್ಪ ಸುಲಿದು ಅದೇನೆಂದು
ಪ್ರಶ್ನೆಮಾಡಿ ಸಿಪ್ಪೆಯೆಂದು ಉತ್ತರವನ್ನು ಹೊರಡಿಸಬೇಕು. ಅದು ಹಣ್ಣಿಗೆ
ಹೊದಿಕೆಯು ಹೊದಿಕೆಯೂಮದರಿಂದ ಅದಕ್ಕೆ ಸಿಪ್ಪೆಯೆಂದು ಹೆಸರೆಂದು
ಕೀಳು. ಇತರ ಹಣ್ಣುಗಳಿಗೂ ಹೀಗೆ ಹೊದಿಕೆಯುಂಟೆಂಬ ಅಂಶ ಮಕ್ಕಳಿಂ
ಲೇ ಹೇಳಿಸಬೇಕು. ತರುವಾಯ ಸಿಪ್ಪೆಯು ಹೊರಭಾಗ ಹಳದಿಬಣ್ಣವುಳ್ಳ
ದಾಗಿಯೂ, ಮಿರುಗಾಗಿಯೂ, ಒಳಭಾಗ ಬಿಳ್ಳಗೂ ಮಿರುಗಿಲ್ಲದೆಯೂ ಇದೆ
ಯೆಂಬುದು ತಿಳಿಸಬೇಕು. ಕಿತ್ತಳೆಹಣ್ಣಿನ ಸಿಪ್ಪೆಯು ನಿಂಬೆಹಣ್ಣಿನ ಸಿಪ್ಪೆಗಿಂತ
ದಪ್ಪವಾಗಿದೆಯೆಂಬ ಅಂಶವನ್ನು ವಿಶದಪಡಿಸಬೇಕು. ಸಿಪ್ಪೆಯು ಹಣ್ಣಿನ
ಸವು ಬಿಸಿಲಿನಲ್ಲಿ ಒಣಗದಂತೆಯೂ, ಮಳೆಯಲ್ಲಿ ಕೆಡದಂತೆಯೂ ಕಾಯು
ತ್ತೆಂದು ತಿಳಿಸಬೇಕು. ಕಿತ್ತಳೆಹಣ್ಣು ಅತ್ಯುಷ್ಣಪ್ರದೇಶದಲ್ಲಿ ಬೆಳೆಯು
ದರಿಂದ ಸಿಪ್ಪೆಯು ದಪ್ಪವಾಗಿಲ್ಲದಿದ್ದರೆ ರಸವು ಒಣಗುವದೆಂದು ಹೇಳಬೇಕು.
ನಂತರ ಸಿಪ್ಪೆಯನ್ನು ಹಿಂಡಿ ರಸವನ್ನು ಹುಡುಗರಿಗೆ ತೋರಿಸಿ ಅದು
ಂದು ಬಗೆಯ ಎಣ್ಣೆಯಂತಲು ಮತ್ತು ಆ ಎಣ್ಣೆ ಇರುವದರಿಂದ ಸಿಪ್ಪೆಯು
ುತ್ತಗೂ ದ್ರವವಿಶಿಷ್ಟವಾಗಿಯೂ ಇರುತ್ತೆಂದೂ, ಸಿಪ್ಪೆಯು ಒಣಗಿ
ಟ್ಟಯಾಗಿ ಬಿರುಕು ಬಿಡುವುದೆಂದು ವ್ಯಕ್ತಪಡಿಸಬೇಕು.

6. ರಸ:—ಒಂದು ಚಾಕು ಅಥವಾ ಪೆನ್ಸಿಲನ್ನು ತೆಗೆದುಕೊಂಡ
ತ್ತಳೆಹಣ್ಣನ್ನು ಚುಚ್ಚಿದರೆ ಸಣ್ಣ ರಂಧ್ರವಾಗುತ್ತೆ; ಅನಂತರ ಅದನ್ನು
ಕಿದರೆ ಸ್ವಲ್ಪ ರಸವು ಹೊರಡುತ್ತೆ. ಅದೇನೆಂದು ಪ್ರಶ್ನೆಮಾಡಿ ರಸ
ವೆಂದು ತಿಳಿಸಬೇಕು. ಪಕ್ವವಾದ ಹಣ್ಣಿನ ರಸವು ರುಚಿಕರವೆಂದು ಹೇಳಿಸಿ,

ಸಿ ರಸವು ತೊಳೆಗಳಲ್ಲಿರುವ ಕುಸುನುಗಳಲ್ಲಿ ಅಡಗಿದೆಯುಂದು ತಿಳಿಸಬೇ

7. ವಿಭಾಗಗಳು:—ಕಿತ್ತಳೆಹಣ್ಣನ್ನು ರಸವು ಸೋರದ
ನೇಕ ತೊಳೆಗಳಾಗಿ ಬಿಡಿಸಬಹುದೆಂದು ತೋರಿಸಬೇಕು. ಒಂದೊ
ಳೆಗಳ ಮೇಲೆ ಹೊದಿಕೆ ಇದೆಯುಂದು ತೋರಿಸಿ ಅದರೊಳಗೆ ರಸವ
ತಗಿರುವ ಕುಸುನುಗಳಿವೆಂದು ತೋರಿಸಬೇಕು. ಇವುಗಳಲ್ಲಿರುವ ಬಿ
ನನ್ನು ಬಿತ್ತಿದರೆ ಕಿತ್ತಳೆ ಗಿಡವು ಬೆಳೆಯುತ್ತೆಂದು ಹೇಳಬೇಕು.

ಮಕ್ಕಳಿಗೆ ಬುದ್ಧಿವಾದ.

ಮಧ್ಯಮಾವತಿ ರಾಗ—ಆದಿತಾಳ.

ನುಗುವೇ ಮುಂಬೆಳಗೇಳುತೆ । ತೊಳೆ ನಿನ್ನಯ ಮೋಗಮುಂ ॥
ಭಗವಂತನಭಜಿಸುತ್ತಿರು ಸುಗುಣಾಕರನೆನುತಂ ॥ ೧ ॥

ಬಗೆಗೊಳ್ಳುತ ಜನನೀಜನಕರವಂದಿಸು ನಯದಿಂ ॥
ಮಗುವೇ ಹಿಂದಿನಪಾಠಗಳನು ಚಿಂತನೆಮಾಡೈ ॥ ೨ ॥

ಸರಿಯಾದುಡಿಗೆಗಳಂ ತೊಡು । ಪಿಡಿ ಪುಸ್ತಕಗಳನು ॥
ತೆರಳೈ ಬಾಲನೆ ವಿದ್ಯಾ । ಗೃಹಕೆಲ್ಲರಜೊತೆಯೊಳ್ ॥ ೩ ॥

ಗುರುವಿಂಗಭಿನಮಿಸೈ ಬಳಿ । ಕವರಾಣತಿಪಡೆದು ॥
ತರದಿಂ ಮುನ್ನಿನಪಾಠವ । ನರುಹೈ ಸುಸ್ವರದಿಂ ॥ ೪ ॥

ಗುರುಹೇಳುವ ಹೊಸಪಾಠವ ಕಿವಿಗೊಟ್ಟಾಲಿಸುತಂ ॥
ತರಳಾ ಅವಧರಿಸೈ ಸಂ । ಶಯವಿಲ್ಲದೆ ಮನದೊಳ್ ॥ ೫ ॥

ತರಳಾ ನಿನ್ನೊಡನೋದುವರೊಳು ನೇಹವಬೆಳೆಸೈ ॥
ಬರಿಮಾತುಗಳನ್ನಾಡದೆ । ವರವಿದ್ಯೆಯ ಘಳಿಸೈ ॥ ೬ ॥

ರಾಮಶೇಷಶಾಸ್ತ್ರಿ

ಜಲಾಬುರಾಗ—ಆದಿತಾಳ,

ಕಾಡಿಗೆಯಂತಿಹ ।
ಮೋಡಗಳೊಳಗಿಂ ।
ಮೂಡುವದೀ ಕಾಮನಬಿಲ್ಲು ॥೧॥

ಕೂಡುತೆ ಜನಕೊಂ ।
ಡಾಡುತ್ತಿರುವುದು ।
ನೋಡಲುನಾಂ ಪ್ರೋಗುವ ನಿಲ್ಲು ॥ ೨ ॥

ಹಳದಿ ಹಸುರು ಕೆಂ ।
ಪೆಳೆಗೆಂಪಚ್ಚ್ಚದ ।
ಬಳುಪು ನೀಲಿ ವಲಬಿಣ್ಣಾಗಳಾ ॥ ೩ ॥

ಪೊಳೆವಮಣಿಯ ಸಂ ।
ಗಳಿಸಿದಂತೆ ಕಂ ।
ಗೊಳಿಸಿಬಿಳಗುವದು ತಳವಳಸೆ ॥ ೪ ॥

ಗಣಿತಶಾಸ್ತ್ರ.

ಗುಣಾಕಾರವನ್ನು ಸುಲಭವಾಗಿ ಮಾಡುವಡಕ್ಕೆ ವಿಧಾನಗಳ:

ಮೊದಲನೆಯದು :—ಅಪವರ್ತನಗಳ ವಿಧಾನ.

ವಿಧಿ :-ಗುಣಕದ ಅಪವರ್ತನಗಳನ್ನು ಕಂಡು ಹಿಡಿದು ಗುಣಕವನ್ನು ಮೊದಲು ಒಂದು ಅಪವರ್ತನದಿಂದ ಗುಣಿಸಿ ಬಂದ ಲಬ್ಧವನ್ನು ಎರಡನೆಯ ಅಪವರ್ತನದಿಂದ ಗುಣಿಸುವುದು. ಇನ್ನೂ ಅಪವರ್ತನಗಳು ವಿಕ್ಕಿ

ದ್ದರೆ ಎರಡನೆಯ ಲಬ್ಧವನ್ನು ಮೂರನೇ ಅಪವರ್ತನಿಂದ ಗುಣಿಸುತಾ ಈರೀತಿಯಾಗಿಯೇ ಪ್ರೂರ್ಯೆಸುವುದು. ಕೊನೇ ಲಬ್ಧವು ಬೇಕಾದ ಲಬ್ಧವಾಗಿ ಇರುತ್ತಿದೆ.

ಉದಾಹರಣೆ :—(1) 4,532 ನ್ನು 39 ರಿಂದ ಗುಣಿಸು.

ಇಲ್ಲಿ ಗುಣ್ಯವಾದ $39 = 13 \times 3$, ಆದುದರಿಂದ

$$\begin{array}{r} 4,532 \\ 13 \\ \hline 58,916 \\ 3 \\ \hline \end{array} = 4,532 \times 13.$$

ಲಬ್ಧ $176,748 = 4,532 \times 13 \times 3 = 4532 >$

(2) 57,602 ನ್ನು 64 ರಿಂದ ಗುಣಿಸು.

ಇಲ್ಲಿ $64 = 8 \times 8$, ಆದುದರಿಂದ

$$\begin{array}{r} 57,602 \\ 8 \\ \hline 460,816 \\ 8 \\ \hline \end{array} = 57,602 \times 8$$

ಲಬ್ಧ $3,686,528 = 57602 \times 8 \times 8 = 57,602 \times 64.$

ಎಸ್. ರಾಜೋಜಿರಾವ್, ಬಿ. ಎ.

ಗಣಿತ.

I. $\frac{40}{111}$ ರ $4\frac{9}{25}$ ರ $5\frac{2}{7}$ ರಿಂದ $2\frac{5}{11}$ ರ $\frac{5\frac{4}{7}}{8\frac{10}{11}}$ ನ್ನು ಕಂ.

II. ·0045 ಮೈಲಿ, ·052 ಫರ್ಲಾಂಗ್, ·153 ಪೋಲ್; ಇವುಗಳನ್ನು ಕೂಡಿಸಿ, 35 ಗಜಗಳಿಂದ ಕಳೆದು, ಶೇಷವನ್ನು ಅಂಗುಲದಲ್ಲಿಡು.

III. ಒಂದು ಗಾಲಿಯು 2 ಮೈಲಿ, 4 ಫರ್ಲಾಂಗ್, 9 ಪೋಲ್, 5 ಗಜ, 6 ಅಂಗುಲ ಹೋಗುವದರಲ್ಲಿ 1028 ಆವರ್ತಿಸುತ್ತ್ತದೆ. ಅದರ ಸುತ್ತಳತೆ ಏನು?

IV. ಒಬ್ಬ ಮನುಷ್ಯನು ಒಂದು ಕುದುರೆಯನ್ನು ಶೇಕಡ $16\frac{2}{3}$ ಪ್ರಕಾರ ನಷ್ಟವಾಗುವಹಾಗೆ ಮಾರಿದನು; ಆದರೆ ಶೇಕಡ 40 ಪ್ರಕಾರ ಹೆಚ್ಚಾಗಿ ಬಂದಿದ್ದರೆ ಅವನಿಗೆ 50 ರೂಪಾಯಿ ಲಾಭ ಉಂಟಾಗಿರುವದು. ಕುದುರೆಯ ಬೆಲೆ ಏನು?

V. ಒಂದು ಮೊಲವು ಒಂದು ಬೇಟೆ ನಾಯಿಯನ್ನು 132 ಗಜಗಳ ದೂರದಲ್ಲಿ ಕಂಡು ಒಂದು ಘಂಟೆಗೆ 9 ಮೈಲಿಪ್ರಕಾರ ಓಡುವದಕ್ಕೆ ಪ್ರಾರಂಭಿಸುತ್ತ್ತದೆ. 20 ಸೆಕಂಡುಗಳನಂತರ ನಾಯಿಯು ಮೊಲವನ್ನು ಕಂಡುಕೊಂಡು ಒಂದು ಘಂಟೆಗೆ 15 ಪ್ರಕಾರ ಬೆನ್ನಟ್ಟಿಕೊಂಡು ಹೋಗುತ್ತ್ತದೆ. ನಾಯಿಯು ಮೊಲವನ್ನು ಯಾವಾಗ ಎಷ್ಟು ದೂರದಲ್ಲಿ ಹಿಡಿಯುತ್ತ್ತದೆ.

ಎಂ. ಟಿ. ನಾರಣ್ಯಂಗಾರ ಎಂ. ಎ

☞ ೪ನೇ ಪೇಜ್ ೧೭ನೇ ಪಂಗ್ತಿಯಲ್ಲಿ ಪೋಷಿಸುವ ಕ್ರಮ ಎನ್ನುವದಕ್ಕೆ ಬದಲಾಗಿ ವಟ್ಟು ಹಾಕುವ ರೀತಿ ಎಂದು ಓದಬೇಕು.

ಸಮಾಚಾರಗಳು ಮತ್ತು ಸೂಚನೆಗಳು.

ಪೂರ್ವದಲ್ಲಿ ಮೈಸೂರು ಮಹಾರಾಜರ ಕಾಲೇಜಿನ ಪ್ರಿನ್ಸಿಪಲ್‌ರಾಗಿದ್ದು ಈಗ ಬಿಎ ಪರೀಕ್ಷಾಪರ್ಯಂತ್ಯದ ವಿದ್ಯಾಭ್ಯಾಸದ ಇಲಾಖೆಯ ಅಧ್ಯಕ್ಷರಾಗಿರುವ ಹೋವೆಸಾಹೇಬರು ಡಿಸೆಂಬರ್ ತಿಂಗಳಲ್ಲಿ ರಾಂಗೂಪಟ್ಟಣದಲ್ಲಿ ಉಪಾಧ್ಯಾಯರ ಸಂಘ ಬಂದನ್ನು ಏರ್ಪಡಿಸಿದರು. ಈಸಂಘದ ಮುಖ್ಯೋದ್ದೇಶಗಳ್ಯಾವವೆಂದರೆ--(೧) ಉಪಾಧ್ಯಾಯರು ಮತ್ತು ವಿದ್ಯಾಭಿವೃದ್ಧಿಯಲ್ಲಿ ಆಸಕ್ತರಾದ ಇತರಜನರು ಕ್ಲಪ್ತಕಾಲದಲ್ಲಿ ಬಂದು ಸ್ಥಳದಲ್ಲಿ ಸೇರಿ ವಿದ್ಯಾವಿಷಯಕ ಪ್ರಸಂಗವನ್ನು ಮಾಡುವುದು; (೨) ಮಕ್ಕಳಿಗೆ ಪಾಠವನ್ನು ಹೇಳುವುದರಮೂಲಕ ಪಾಠವನ್ನು ಬೋಧಿಸುವುದಕ್ಕೆ ಉತ್ತಮ ಮತ್ತು ಅನುಕೂಲವಾದ ಮಾರ್ಗಗಳನ್ನು ತೋರಿಸುವುದು; (೩) ವಿದ್ಯಾಭಿವೃದ್ಧಿಗೆ ಸಾಧಕ

ವಾದ ಗ್ರಂಥಗಳನ್ನು ಬರೆಯುವುದು ಮತ್ತು ಇರುವ ಗ್ರಂಥಗಳನ್ನು ಪ್ರಚುರಪಡಿಸುವುದು; (೪). ವಿದ್ಯಾವಿಷಯಕ ಗ್ರಂಥಗಳನ್ನು ಶೀಘ್ರ ಮಾಡಿ ಬಂದು ಪುಸ್ತಕಭಂಡಾರವನ್ನು ಮಾಡುವುದು ಮತ್ತು ವಿದ್ಯಾವಿಷಯಕ ಪತ್ರಿಕೆಗಳನ್ನು ತರಿಸುವ್ರದು. ಪಾಠಶಾಲೆಗಳ ಕಾರ್ಯದರ್ಶಿಗಳೂ, ಉಪಾಧ್ಯಾಯರೂ, ವಿದ್ಯಾಪ್ರೋತ್ಸಾಹ ಮಾಡುತ್ತಲಿರುವ ಇತರರೂ ಈ ಸಂಘಕ್ಕೆ ಸೇರಲು ಅರ್ಹರು. ಸರ್ಕಾರದವರು ಈ ಸಂಘಕ್ಕೆ ಪ್ರತಿ ತಿಂಗಳಿಗೆ ೧೦೦ ರೂಪಾಯಿ ಸಹಾಯದ್ರವ್ಯವನ್ನು ಕೊಡುತ್ತಾರೆ; ಇದಲ್ಲದೆ ಚಂದಾ ಹಣವು ಸುಮಾರು ೬೦ ರೂಪಾಯಿನ ವರೆಗೆ ವಸೂಲಾಗುತ್ತೆ.

ಇಂಥಾ ಸಂಘವೊಂದು ನಮ್ಮ ಮೈಸೂರು ಸೀಮೆಯಲ್ಲಿಯೂ ಏರ್ಪಟ್ಟರೆ ಬಹಳ ಅನುಕೂಲವು ಲಭಿಸುವ್ರದು. ಪ್ರಥಮತಃ ಮೈಸೂರಿನಲ್ಲಾಗಲೀ, ಬೆಂಗಳೂರಿನಲ್ಲಿ ಆಗಲಿ, ಪ್ರಾರಂಭಿಸುವುದು ಸೂಕ್ತವೆಂದು ತೋರುತ್ತೆ. ಹೀಗೆ ಬಂದು ಸಂಘವಿಲ್ಲದಿರುವದರಿಂದ ಈ ಸೀಮೆಯ ವಿದ್ಯಾಭ್ಯಾಸವ ಇಲಾಖೆಯ ಸೆಕ್ರಟೆರಿಗಳಾದ ಮೆ॥ ಭಾಟ್ಲಾ ಸಾಹೇಬರು ಮೈಸೂರಲ್ಲಿ ಓರಿಯಂಟಲ್ ಲೈಬ್ರೆರಿಯು ಕಟ್ಟಡದಲ್ಲಿಡಿಸಿರುವ ಅನೇಕ ಚಿತ್ರಪಠಗಳು, ಸಾಮಾನುಗಳು, ಇದಲ್ಲದೆ ತಮ್ಮ ಆಫೀಸಿನಲ್ಲಿಟ್ಟಿರುವ ಅನೇಕ ವಿದ್ಯಾವಿಷಯಕ ಪುಸ್ತಕಗಳು ಕೆಲವು ಜನರ ಗೋಚರಕ್ಕೆ ಮಾತ್ರ ಬಂದಿವೆ; ಅನೇಕರಿಗೆ ಹೀಗಿರುವ ವಿಷಯ ತಿಳಿಯದು ಮೇಲೆ ವಿವರಿಸಿದಂತೆ ಬಂದು ಸಂಘವು ಏರ್ಪಟ್ಟರೆ ಎಲ್ಲರಿಗೂ ಉಪಕಾರವಾಗುವ್ರದು.

—⊙—೦:—⊙—

ಮೈಸೂರಲ್ಲಿ ೧೮೮೭ ನೇ ಇಸವಿಯಲ್ಲಿ ಸ್ಥಾಪಿತವಾದ ಕರ್ನಾಟಕಭಾಷೋಜ್ಜೀವಿನೀ ಪಾಠಶಾಲೆಯನ್ನು ೧೮೮೫ನೇ ಇಸವಿ ಜನವರೀ ತಿಂಗಳಾರಭ್ಯ ಸರ್ಕಾರದವರೇ ವಹಿಸಿಕೊಂಡು ಅದನ್ನು ನಾರ್ಮಲ್‌ಸ್ಕೂಲಾಗಿ ಏರ್ಪಡಿಸಿದಾರೆ. ಇದರಿಂದ ಭಾಷೋಜ್ಜೀವಿನೀ ಪಾಠಶಾಲೆಯ ಪುರೋವೃದ್ಧಿಯು ಸ್ಥಿರಪಟ್ಟಂತಾಯಿತು. ಇದಲ್ಲದೆ ಪಂಡಿತ ಪರೀಕ್ಷೆಯ ತರಗತಿಗಳನ್ನು ಪೂರ್ವದಂತೆಯೇ ಇಟ್ಟು ಪಾಠಗಳು ಕ್ರಮವಾಗಿ ನಡಯುತಕ್ಕ ಏರ್ಪಾಡುಗಳನ್ನು ಮಾಡುವುದರಿಂದ ಕನ್ನಡಭಾಷೆಯಲ್ಲಿ ಒಳ್ಳೇ ಪಾಂಡಿತ್ಯವನ್ನು ಪಡೆದ ಜನರು ದೊರಕುವ್ರದರಲ್ಲಿ ಸಂಶಯವಿಲ್ಲ. ಮುಖ್ಯ ಈಚೆಗೆ ಕನ್ನಡ ಭಾಷೆಯನ್ನು ಅಭಿವೃದ್ಧಿಪಡಿಸಬೇಕೆಂದು ಅನೇಕರು ಕಂಕಣಬದ್ಧರಾಗಿರುವ್ರದು ಬಹಳ ಸಂತೋಷಕರವಾದ ಅಂಶ. ಸರ್ಕಾರದವರು ವಿದ್ಯಾಭ್ಯಾಸದ ಇಲಾಖೆಯ ಮೂಲಕ ಕನ್ನಡಕ್ಕೆ ಅನೇಕವಿಧಗಳಲ್ಲಿ ಪ್ರೋತ್ಸಾಹಪಡಿಸುತ್ತಲಿದಾರೆ. ಈಗ ನಾರ್ಮಲ್ ಸ್ಕೂಲ್‌ನಲ್ಲಿ ಪಂಡಿತಪರೀಕ್ಷೇತರಗತಿಗಳನ್ನಿಟ್ಟಿರುವ್ರದು ಕನ್ನಡ ಭಾಷೆಯನ್ನು ವೃದ್ಧಿಪಡಿಸಬೇಕೆಂಬ ಸರ್ಕಾರದವರಿಗಿರುವ ತಾತ್ಪರ್ಯವನ್ನು ವ್ಯಕ್ತಗೊಳಿಸುತ್ತಿದೆ. ಪಂಡಿತ ಪರೀಕ್ಷೆಯ ತರಗತಿಗಳಲ್ಲದೆ ಉಪಾಧ್ಯಾಯಪರೀಕ್ಷೆಗಾಗಿ ಎರಡು ತರಗತಿಗಳನ್ನು, ಲೋವರ್ ಸೆಕೆಂಡರೀ ಪರೀಕ್ಷೆಗಾಗಿ ಬಂದು ತರಗತಿಯನ್ನು ಏರ್ಪಡಿಸುತ್ತಾರೆ. ಈಗ ಉಪಾ

ಧ್ಯಾಯರಾಗಿರುವವರಿಗೂ, ಇತರರಿಗೂ ವೇತನಗಳನ್ನು ಕಲ್ಪಿಸಿ ಪರೀಕ್ಷೆಗೆ ಓದಿಸು ತ್ತಾರೆ. ಈಗ ಅನೇಕ ಸ್ಥಳಗಳಲ್ಲಿ ಪಾಠಶಾಲೆಯ ಅವಸ್ಥೆಯು ಬಹು ಶೋಚನೀಯ ವಾಗಿದೆ. ಕೆಲವು ಕಡೆಗಳಲ್ಲಿ ತಕ್ಕ ಜ್ಞಾನವನ್ನು ಪಡೆದ ಉಪಾಧ್ಯಾಯರುಗಳಿಲ್ಲ; ಕೆಲವು ಕಡೆ ಉಪಾಧ್ಯಾಯರು ತಮ್ಮ ಗೌರವಕ್ಕನುಗುಣವಾಗಿರದೆ ಹಾಸ್ಯಾಸ್ಪದ ರಾಗಿದ್ದಾರೆ. ಮೆ|| ಭಾಭಾಸಾಹೇಬರು ಈಗ ಮಾಡುವ ಏರ್ಪಾಡಿನಿಂದ ಈ ಕುಂದುಕೊರ ತೆಗಳೆಲ್ಲಾ ಆದಷ್ಟು ಬೇಗ ನಿವಾರಣೆಯಾಗುವದರಲ್ಲಿ ಸಂಶಯವಿಲ್ಲ.

——G.T.A.——

ಡಿಸೆಂಬರ್ ತಿಂಗಳಲ್ಲಿ ನಡೆದ ಲೋವರ್‌ಸಕಿಂಡೆರಿ ಪರೀಕ್ಷೆಗೆ ಹೋಗಿದ್ದವರಲ್ಲಿ ೪೦ ಜನ ವಿದ್ಯಾರ್ಥಿನೀಯರಾಗಿದಾರೆ.

——:o:——

ಕಳೆದ ಡಿಸೆಂಬರ್‌ತಿಂಗಳ ಆದಿಭಾಗದಲ್ಲಿ ಉಪಾಧ್ಯಾಯರ ಪರೀಕ್ಷೆಯು ಮತ್ತು ಲೋವರ್‌ಸಕಿಂಡೆರಿ ಪರೀಕ್ಷೆಯು ನಡೆಯಿತು. ಉಪಾಧ್ಯಾಯರ ಪರೀಕ್ಷೆಗೆ ಬಂದಿದ್ದವರ ಸಂಖ್ಯೆ ೭೭. ಲೋವರ್‌ಸಕಿಂಡೆರಿ ಪರೀಕ್ಷೆಗೆ ಬಂದಿದ್ದವರ ಸಂಖ್ಯೆ ೧೮೮. ಪರೀಕ್ಷೆ ಗಳ ಫಲಿತಾಂಶವು ಈ ತಿಂಗಳಲ್ಲಿ ಪ್ರಕಟಿಸಲ್ಪಡುತ್ತೆ.

——:o:——

ಮೈಸೂರು ಸಂಸ್ಥಾನದ ಪಾಠಶಾಲೆಗಳಲ್ಲಿ ಇಂಗ್ಲೀಷ್ ಭಾಷೆಯನ್ನು ಪ್ರಾರಂಭ ಮಾಡುವುದಕ್ಕೆ ಪೂರ್ವಭಾವಿ ಕನ್ನಡ ಮೂರನೇ ತರಗತಿಯ ಪಾಠಗಳನ್ನು ಓದಿ ಪರೀಕ್ಷೆ ಕೊಟ್ಟುರಬೇಕೆಂದು ಸರ್ಕಾರದವರಿಂದ ವಿಧಿಸಲ್ಪಟ್ಟಿತ್ತಷ್ಟೆ. ಈಚೆಗೆ ಈ ಏರ್ಪಾಡಿನಲ್ಲಿ ಸ್ವಲ್ಪ ವ್ಯತ್ಯಾಸ ಮಾಡಲ್ಪಟ್ಟಿದೆ. ಮತ್ತು ಕೆಲವು ಅಂಶಗಳು ಸ್ಪಷ್ಟ ಪಡಿಸಲ್ಪಟ್ಟವೆ. ಮೂರನೆಯ ತರಗತಿಯ ಪರೀಕ್ಷೆಗೆ ಬದಲಾಗಿ ಎರಡನೇ ತರಗ ತಿಯ ಪಾಠಗಳಲ್ಲಿ ಪರೀಕ್ಷೆ ಕೊಟ್ಟರೆ ವಿದ್ಯಾರ್ಥಿಯು ಇಂಗ್ಲೀಷ್ ಸ್ಕೂಲಿನಲ್ಲಿ ಕೊನೆಯ ತರಗತಿಗೆ ಅರ್ಹನಾಗುವನೆಂದು ವಿಧಾಯಕವಾಗಿದೆ. ಇದಲ್ಲದೆ ವಿದ್ಯಾರ್ಥಿಯು ನೇಮಿಸಿ ವಾದ ಪಾಠಗಳನ್ನು ಮನೆಯಲ್ಲಿಯೇ ಹೇಳಿಸಿಕೊಂಡು ತಕ್ಕ ಯೋಗ್ಯತೆಯನ್ನು ಪಡೆದ ಇಂಗ್ಲೀಷ್ ಸ್ಕೂಲಿಗೆ ಸೇರಬೇಕೆಂದು ಅಪೇಕ್ಷೆ ಪಟ್ಟರೆ ಹಾಗೆ ಸೇರಿಸುವದಿಲ್ಲವೆಂತಲೂ ಸ್ಕೂಲಿನಲ್ಲಿ ಓದಿಯೇ ತೀರಬೇಕೆಂತಲೂ ಕೆಲವರು ಸಂಶಯಪಟ್ಟುಕೊಂಡಿದ್ದರು. ಈ ಸಂಶಯಕ್ಕೆ ಆಧಾರವಿಲ್ಲವೆಂದು ಮೊದಲೇ ಇತರರು ದೃಢಪಟ್ಟುಕೊಂಡಿದ್ದರು. ಆದೆ ಪ್ರಕಾರ ಸಂಶಯಕ್ಕೆ ಅಸ್ಪದವಿಲ್ಲವೆಂಬ ಅಂಶ ಈಗ ವ್ಯಕ್ತಪಡಿಸಲ್ಪಟ್ಟಿದೆ. ವಿದ್ಯಾ ರ್ಥಿಯು ಕನ್ನಡ ಸ್ಕೂಲಿನಲ್ಲಿ ಓದದೆ ಮನೆಯಲ್ಲಿಯೇ ಓದಿ ಇಂಗ್ಲೀಷ್ ಸ್ಕೂಲನ್ನು ಸೇ ರೈಕೆಂದು ಅಪೇಕ್ಷಿಸಿದರೆ, ಇಂಗ್ಲೀಷ್ ಸ್ಕೂಲಿನ ಹೆಡ್‌ಮಾಸ್ಟರು ಭಾಷೆಯಲ್ಲಿಯೂ ಗಣಿತದಲ್ಲಿಯೂ ಭೂಗೋಳದಲ್ಲಿಯೂ ಪರೀಕ್ಷಿಸಿ ತಕ್ಕ ಯೋಗ್ಯತೆ ಇದೆ ಎಂಬುವದನ್ನು ಗೊತ್ತು ಮಾಡಿಕೊಂಡು ಸ್ಕೂಲಿಗೆ ಸೇರಿಸಿಕೊಳ್ಳಬಹುದೆಂದು ವ್ಯಕ್ತಪಡಿಸಲ್ಪಟ್ಟಿದೆ

ವಿವಂಚೆ ದೇಶಭಾಷೆಯಲ್ಲಿ ಕೂಡಿದವುಟ್ಟಿಗೆ ಜ್ಞಾನವನ್ನು ಪಡೆದಹೊರತು ವಿದ್ಯಾರ್ಥಿಗಳು ಇಂಗ್ಲೀಷ್‌ಭಾಷೆಯನ್ನು ಪ್ರಾರಂಭಿಸ ಕೂಡದೆಂದು ಸರ್ಕಾರದವರ ಅಭಿಪ್ರಾಯವು ಪೂರ್ವದಲ್ಲಿದ್ದಂತೆ ಈಗಲೂ ಇಧೆ ಎಂಬವಿಷಯವು ಸ್ಥಿರಪಟ್ಟಿತು. ಇದು ಸೂಕ್ತವೇ ಸರಿ. ಮಕ್ಕಳಿಗೆ ಅವರಿಗೆ ತಿಳಿದಿರುವ ಭಾಷೆಯಲ್ಲಿ ವಿದ್ಯಾಭ್ಯಾಸ ಪ್ರಾರಂಭಿಸುವದು ಉತ್ತಮವೆಂದು ಎಲ್ಲರೂ ಒಪ್ಪಬೇಕು. ಕನ್ನಡವಾತನಾಡುವ ಹುಡಗನಿಗೆ 'ಬಾಲ್' ಎಂದರೆ ಚೆಂಡು ಎಂದು ಪ್ರಾರಂಭಿಸುವದಕ್ಕಿಂತ ಹುಡುಗನು ಆ ಪದಾರ್ಥವನ್ನು ನೋಡಿ ಆ ಪದಾರ್ಥಕ್ಕೆ ಚೆಂಡು ಎಂದು ಕನ್ನಡದಲ್ಲಿ ಹೆಸರೆಂದು ತಿಳಿದುಕೊಂಡನಂತರ ಅದಕ್ಕೆ ಇಂಗ್ಲೀಷಿನಲ್ಲಿ 'ಬಾಲ್' ಎಂದು ಹೆಸರು ಎಂಬದಾಗಿ ಹೇಳಿ ತಿಳಿಸುವದುತ್ತಮವಲ್ಲವೇ? ಈ ವಿಷಯವನ್ನು ಆಲೋಚಿಸಿದರೆ ಗ್ರಾಹ್ಯಕ್ಕೆ ಬರುತ್ತೆ. ಹುಡುಗನ ಮಾತೃಭಾಷೆಯ ಮೂಲಕ ವಿದ್ಯಾಭ್ಯಾಸ ಮಾಡಿಸುವುದೂ, ಅನ್ಯಭಾಷಾಪರಿಚಯವನ್ನುಂಟುಮಾಡುವುದೂ, ರೈಲು ಮಾರ್ಗದಲ್ಲಿ ಪ್ರಯಾಣಮಾಡಿದಂತೆ ಸುಲಭವಾಗಿಯೂ ಇರುತ್ತೆ. ಹಾಗೆ ಬಿಟ್ಟು ಅನ್ಯ ಭಾಷೆಯನ್ನೇ ಮೊದಲು ಪ್ರಾರಂಭಿಸುವುದು ಕಾಡುಮಾರ್ಗದಲ್ಲಿ ದಿಕ್ಕು ತಿಳಿಯದೆ ಪ್ರಯಾಣ ಮಾಡಿದಂತೆ. ಆದುದುಂದ ಸರ್ಕಾರದವರು ಮಾಡಿರುವ ವಿರ್ಪಾಡು ಬಹುಅನುಕೂಲವೆಂದು ನೀವು ತಿಳಿಯಬೇಕು. ಹೀಗೆಯೇ ಮೊದಲಿಂದಲೂ ವಿಧಾಯಕವಾಗಿದ್ದರೆ ಕನ್ನಡಭಾಷೆಯೂ ಬಹುಉತ್ತಮಸ್ಥಿತಿಗೆ ಬರುತ್ತಿತ್ತು. ಹಾಗಿಲ್ಲದಿದ್ದುದರಿಂದ ಇಂಗ್ಲೀಷಿನಲ್ಲಿ ಪಾಂಡಿತ್ಯವನ್ನು ಪಡೆದವರಲ್ಲಿ ಅನೇಕರಿಗೆ ದೇಶಭಾಷೆಯಲ್ಲಿ ಶೇಕಾದಷ್ಟು ಪರಿಚಯ ಸಾಲದೆ ದೇಶಕ್ಕೆ ಪ್ರಯೋಜನವಿಲ್ಲದಂತಾಗಿತ್ತು. ಈಗ ಮಾಡಿರುವ ಕಟ್ಟಳೆಯಿಂದ ದೇಶಭಾಷೆಯ ಪರಿಚಯವೆಂಬ ಅಸ್ತಿಭಾರವನ್ನು ಹಾಕಿ ಅನಂತರ ಇತರ ಭಾಷಾಪರಿಚಯವೆಂಬ ಕಟ್ಟಡವನ್ನು ಕಟ್ಟುವಂತೆ ಉಪಾಧ್ಯಾಯರಿಗೆ ನಿಯಮಿಸದಂತಾಯಿತು. ಉಪಾಧ್ಯಾಯರು ಈವಿಷಯದಲ್ಲಿ ಎಷ್ಟು ಜಾಗರೂಕರಾಗಿದ್ದರೂ ಅಷ್ಟು ಒಳ್ಳೇದು.

ಕಳದ ಡಿಸಂಬರು ತಿಂಗಳು ೧೦ ರಲ್ಲಿ ಮದರಾಸ್ ಪ್ರೆಸಿಡೆನ್ಸಿಕಾಲೇಜ್‌ಪ್ರೊಫೆಸರು ಮ| ರಾ| ರಂಗನಾಥಸೊದಲಿಯಾರ‍್ರು ಕಾಲಾಧೀನರಾದವಿಷಯವನು ತಿಳಿಸುವದಕ್ಕೆ ಬಹಳ ವಿಷಾದಿಸುತ್ತೇವೆ. ಇವರಿಗೆ ಸಾಯುವಾಗ ೪೮ ವರ್ಷವಯಸ್ಸಾಗಿತ್ತು. ಇಂಗ್ಲೀಷ್‌ಭಾಷೆಯನ್ನು ಕಲಿತಹಿಂದೂಜನರಲ್ಲಿ ಇವರು ಬಹಪ್ರಖ್ಯಾತರಾದ ವಿದ್ವಾಂಸರಾಗಿದ್ದರು. ಇವರಿಗಿದ್ದ ಮೇಧಾಶಕ್ತಿಯು ಅತ್ಯದ್ಭುತವಾದದ್ದು. ಇವರ ಜ್ಞಾಪಕವು ಚಿರಕಾಲ ನಿಲ್ಲಬೇಕೆಂದು ಮದರಾಸ್ ಹೈಕೋರ್ಟು ಜಡ್ಜಿಸರ್. ಟಿ. ಮುತ್ತುಸಾವೆಮ್ಮಯ್ಯರ್ ಮುಂತಾದವರು ಅದಕ್ಕನುಸಾರವಾದ ಪ್ರಯತ್ನಗಳನ್ನು ಮಾಡುತಲಿದಾರೆ.

ಮು| ರಾ| ಅಡ್ವೊಕೇಟ್ ಜನರಲ್ ಕೃಷ್ಣರಾಯರಿಂದ ರಚಿಸಲ್ಪಟ್ಟಿರುವ ಗಣಿತಕಲಾನಿಧಿಎಂಬ ಪುಸ್ತಕವನ್ನು ಕನ್ನಡಪಾಠಶಾಲೆಗಳ I, II ಮತ್ತು III ನೇ ತರಗತಿಗಳಲ್ಲಿ ಉಪಯೋಗಿಸತಕ್ಕದ್ದೆಂದು ವಿದ್ಯಾಭ್ಯಾಸದ ಇಲಾಖೆ ಸೆಕ್ರಟರಿಸಾಹೇಬರು ನಿಯಮಿಸಿರುತ್ತಾರೆ. ಈ ಪುಸ್ತಕವು ಬೆಂಗಳೂರಲ್ಲಿರುವ ಸರ್ಕಾರದ ಬುಕ್ಕು ಡಿಪೋವಿನಲ್ಲಿ ಕ್ರಯಕ್ಕೆ ದೊರೆಯುತ್ತೆ.

———:o:-◯-:o:———

೧೮೯೫ನೇ ಇಸವಿಯ ಲೋವರಸೆಕೆಂಡರಿ ಪರಿಕ್ಷೆಗೆ ನಿಯಮಿಸಿರುವ ಕನ್ನಡ ವಿರಾಟಪರ್ವದ ೭೭ ಅಧ್ಯಾಯಗಳು ಪ್ರತ್ಯೇಕಪ್ರಾಪವಾಗಿ ಗೌರನಮೆಂಟ್ ಬುಕ್ಕು ಡಿಪೋವಿನಲ್ಲಿ ಕ್ರಯಕ್ಕೆ ದೊರೆಯುತ್ತೆ.

—:o:—

ಮೈಸೂರು ದಕ್ಷಿಣಸರ್ಕಲ್ ಸ್ಕೂಲುಗಳ ಡಿಪಟಿ ಇನ್ಸ್ಪೆಕ್ಟರ್ ಮು| ರಾ| ಕೇಶವಯ್ಯಂಗಾರವರು ಒಂದು ತಿಂಗಳು ಪ್ರಿವಲಿಜ್ ರಜಾ ಉಪಯೋಗಿಸಿಕೊಂಡ್ದು ಕಳೆದ ಡಿಸಂಬರು ೧೫ನೇವಲ್ಲಿ ಕೆಲಸಕ್ಕೆ ಹಿಂತಿರುಗಿದರು.

——:o0:O:0o:——

ಯುವರಾಜರಿಗೆ ಇಂಗ್ಲೀಷ್‌ವಿದ್ಯಾಭ್ಯಾಸ ಮಾಡಿಸುವದಕ್ಕೋಸ್ಕರ ಮದರಾಸ್ ಪ್ರಾಂತ್ಯದಲ್ಲಿ ಇಂಜಿನೀಯರಿಂಗ್ ಕಾಲೀಜಿನಲ್ಲಿ ಪ್ರೊಫೆಸರಾಗಿದ್ದ ಮಿ|| ಜೆ. ಜೆ. ವೈಟ್ಲ್ ಯೆಂಬುವರು ಶ್ರೀಮನ್ಮಹಾರಾಜರಿಂದ ನಿಯಮಿಸಲ್ಪಟ್ಟಿದ್ದಾರೆ.

———:*:———

ಮದರಾಸ್ ಗೌರ್ನಮೆಂಟಿನವರು ಯೂನಿವರ್ಸಿಟಿ ಅಧಿಕಾರಿಗಳನ್ನು ವ್ಯವಸಾಯಶಾಸ್ತ್ರದಲ್ಲಿ ಬಂದು ಪರಿಕ್ಷೆಯನ್ನು ನಿರ್ಣಯಿಸಜೇಕೆಂದು ಕೇಳಿರುವದಾಗಿ ವರ್ತಮಾನವಿದೆ.

ಪೂರ್ವದಲ್ಲಿ ಮೈಸೂರುಸೀಮೆಯ ಚೀಫ್ ಕಮಿಷನರವರಾಗಿದ್ದ ಬೌರಿಂಗ್ ಸಾಹೇಬರು ಹೈದರಲ್ಲಿ ಮತ್ತು ಟೀಪುಸುಲ್ತಾನರ ಚರಿತ್ರೆಯನ್ನು ಹೊಸದಾಗಿ ರಚಿಸಿದ್ದಾರೆ.

೧೮೯೫ನೇ ಇಸವಿಯ ಡಿಸೆಂಬರ್ ತಿಂಗಳಲ್ಲಿ ನಡೆಯುವ ಮೈಸೂರು ದೇಶೀಯ ಪರೀಕ್ಷೆಗಳಿಗೆ ನಿಯಮಿಸಿರುವ ಗ್ರಂಥಗಳು.

ಲೋವರ್‌ಸೆಕಂಡರಿ ಪರೀಕ್ಷೆ

ಕನ್ನಡ :—೧. ರಾಮಾಭ್ಯುದಯ ಕಥಾ ಕುಸುಮಮಂಜರಿ—ಕಿಷ್ಕಿಂಧಾಕಾಂಡದಲ್ಲಿ ೫ನೇ ಸಂಧಿ ಪೂರ್ತಿಯಾಗಿ.

೨. ಪದ್ಯಸಂಗ್ರಹ——೨ನೇ ಭಾಗ. ಮೊದಲಿಂದ ೯೫ ಶ್ಲೋಕಗಳು.
೩. ವಾಣೀವಿಲಾಸ ಟೀಕು——ವಿರಾಟಪರ್ವ ೨೮ ನೇ ಅಧ್ಯಾಯದಿ
೪೭ ರ ವರೆಗೆ.

ತೆಲಗು :——೧. ನಳಚರಿತ್ರಮು.
೨. ಪಂಚತಂತ್ರಮು ವಿಗ್ರಹಮು——ಮೊದಲಿಂದ ೪೦ಪುಟಗಳು.
(ಪಂಡಿತ ವೀರೇಕಲಿಂಗಂಪಂತುಲುಗಾರು ಭಾಷಿಸಿದ್ದು.)
೩. ಬಾಯಿಪಾಠ ನಳಚರಿತ್ರಮು——೧೬ನೇ ಪುಟದಿಂದ ೩೦ನೇ ಪುಟದವ

ಮರಾಠಿ——೧. ಪಂಚತಂತ್ರಂ——ಪೀಠಿಕೆ ಮತ್ತು ಮೊದಲನೇ ಭಾಗ.
೨. ಕಾವ್ಯಮಾಲೆ——ನಂಬರು ೨.
೩. ಬಾಯಿಪಾಠ——ಕಾವ್ಯಮಾಲೆ ನಂ. ೨ ; ೬೫ ರಿಂದ ೧೨೮ನೇ ಪ
ದ್ಯವರಿಗೆ.

ಹಿಂದುಸ್ಥಾನಿ :—— ೧. ಮುನಿದಾಸಿಹಲಿ——೫ನೇ ಪುಟದಿಂದ ಕೊನೇವರೆಗೆ.
೨. ತಾಬತರ್ಕಾನುಸೂವ——೭ನೇ ಪ್ರಕರಣದಿಂದ ಕೊನೇವ

ಸಂಸ್ಕೃತ——ಮೊದಲನೇ ಭಾಷೆ :——೧ ಚಂಪುರಾಮಾಯಣ——೫ ಮತ್ತು
ಕಾಂಡಗಳು. (ಬೊಂಬಾಯಿಪ್ರ
೨. ಯಾದವಾಭ್ಯುದಯ——೧ ಮತ್ತು
ಸರ್ಗಗಳು.

ಪರ್ಶಿಯನ್——ಎರಡನೇ ಭಾಷೆ :—— ೧. ರಾಮಾಯಣಸಂಗ್ರಹ——ಪೂರ್ತಿಯ

ಉಪಾಧ್ಯಾಯಪರೀಕ್ಷೆ.

ಕನ್ನಡ :——೧. ಕಬ್ಬಿಗರಕಾವ——ಮೊದಲಿಂದ ೧೦ ಅಧ್ಯಾಯಗಳು.
೨. ಕಾದಂಬರಿ——೨೭೭ ರಿಂದ ೪೭೬ ನೇ ಪದ್ಯದ ವರೆಗೆ.
೩. ಪಂಡಿತ ಅಯ್ಯಾಶಾಸ್ತ್ರಿಗಳ ವಿಕ್ರಮೋರ್ವಶೀಯನಾಟಕ.
೪. ಜಯಸಿಂಹರಾಜಚರಿತ್ರೆ.

——:*:——

ವಿದ್ಯಾದಾಯಿನಿ

ಭಾಗ ೨.] ಫೆಬ್ರವರಿ ೧೯೨೪. [ಸಂಚಿಕೆ ೨.

೨. ಗುರುಶಿಷ್ಯಸಂಬಂಧ

ಪಾಠಶಾಲೆಗಳಲ್ಲಿಯೂ ವಿದ್ಯಾಶಾಲೆಗಳಲ್ಲಿಯೂ ಉಪಾಧ್ಯಾಯರು ಪಾಠವನ್ನು ಹೇಳುವಾಗ್ಗೆ, ವಿದ್ಯಾರ್ಥಿಗಳು ತಮಗೆ ಬೇಕುಬೇಕಾದ್ದಕ್ಕೆ ಕಾರಣವನ್ನು ಕೇಳಿ, ದೂರದೃಷ್ಟಿಯಿಂದ ಉಪಾಧ್ಯಾಯರು ತಾವು ಕೇಳಿದ್ದನ್ನು ಹೇಳದೇಹೋದರೆ, ತಮ್ಮ ಗುರುಗಳಿಗೆ ಪಾಂಡಿತ್ಯ ಕಡಮೆಯೆಂದು ಶಿಷ್ಯರು ತಿಳಿದುಕೊಳ್ಳುವ ಅಂಶವು, ಕಳೆದ ಸಂಚಿಗೆಯಲ್ಲಿ ಈ ಪ್ರಬಂಧದ ಕೊನೇ ಭಾಗದಲ್ಲಿ ಸ್ವಲ್ಪ ಸೂಚನೆಯಾಯಿತಷ್ಟೆ. ಈ ಭಾಗದಲ್ಲಿ ಒಂದು ಸಣ್ಣ ಕಥೆ ಉಂಟು, ಅದು ಈ ಸಂಚಿಕೆ ಪ್ರಕಾಶಮಾಡಲ್ಪಡುವುದೆಂದು ಕಾಣಿಸಿತ್ತಷ್ಟೆ. ಆ ಕಥೆಯನ್ನು, ಇಂಗ್ಲೀಷಿನಲ್ಲಿ ದೊಡ್ಡ ಪಂಡಿತರಾಗಿ ಈಗ ಒಳ್ಳೇ ಪದವಿಯಲ್ಲಿರತಕ್ಕ ಒಬ್ಬ ದೊಡ್ಡಮನುಷ್ಯರು ನನಗೆ ಹೇಳಿದರು; ಅವರು ಹೇಳುವಹಾಗೆ ಈಕೆಳಗೆ ಬರೆದಿದೆ. ಅದು ಹ್ಯಾಗೆಂದರೆ:—

"ನಾನು ಮದರಾಸಿನ ಕ್ರಿಸ್ಚಿಯನ್ ಕಾಲೇಜನಲ್ಲಿ ಒದುತ್ತಿರುವಾಗ್ಯೆ ಎಂ. ಎ. ಪರೀಕ್ಷೇಕೋಟ್ಟದ್ದ ಸುಬ್ಬರಾಮೈಯನವರೆಂಬುವರು ಚಲವು ಅಂಶಗಳಲ್ಲಿ ನಮಗೆ ಪಾಠ ಹೇಳುವುದಕ್ಕಾಗಿ ಆಗಾಗ್ಗೆ ಬರುತ್ತಿದ್ದರು. ಅವರು ಹೇಳತಕ್ಕ ಅಂಶಗಳಲ್ಲಿ ಇಂಗ್ಲೆಂಡುದೇಶದ ಚರಿತ್ರೆಯೂ ಸೇರಿತ್ತು. ಅದರಲ್ಲಿ ಕೆಲವು ಸಂಗತಿಗಳನ್ನು ಕುರಿತು,—ಹೀಗಾಗಬಹುದಾಗಿತ್ತಲ್ಲಾ, ಹಾಗಾಗಬಹುದಾಗಿತ್ತಲ್ಲಾ; ಯಾಕೆ ಹಾಗಲ್ಲ? ಆ ರೀತಿಯಲ್ಲಿ ನಾವು ಯಾಕೆ ಅರ್ಥ ಮಾಡಕೂಡದು? ನೀವು ಹೇಳುವಂತೆಯೇ ಯಾಕೆ ಅರ್ಥವಾಗಬೇಕು?—ಎಂಬ ಕೂಹಕವಾಗಿ ಕೆಲವು ಪ್ರಶ್ನೆಗಳನ್ನು ಹಾಕುತ್ತಿದ್ದೆವು. ಆದಕ್ಕೆ ಸುಬ್ಬರಾಮೈಯ್ಯನವರು—ನಾನು ಹೇಳಿದ ಪ್ರಕಾರ ಎಲ್ಲರೂ ಅರ್ಥಮಾಡುವರು.

ಆದರೆ ನೀವು ಹೇಳುವಪ್ರಕಾರವೂ ಒಂದು ಅರ್ಥ ಹೊಳೆಯುವುದು; ಹಾಗಾದರೂ ಆಗಬಹುದು,—ಎಂದು ಎರಡು ಮೂರು ಕಾಲಗಳಲ್ಲಿ ಹೇಳಿದರು. ಆಗ ನಾನು ಮೊದಲಾದ ಇತರ ಹುಡುಗರು ಸೇರಿಕೊಂಡು, ನಮ್ಮೊಳಗೆನಾವು ಹೇಳಿದಕ್ಕೆ ಸರಿಯಾಗಿ ಉತ್ತರವನ್ನು ಹೇಳಲು ತಿಳಿಯದೆ, "ನೀವು ಹೇಳಿದಂತೆಯೂ ಅರ್ಥವಾಗಬಹುದು" ಎಂದು ಹೇಳುತಾರೆ; ಎಂ. ಎ. ಪರೀಕ್ಷೇಕೊಟ್ಟ ಪಾಂಡಿತ್ಯ ಇಂಥಾದ್ದೇನೋ? ಸುಬ್ಬರಾಮ್ಮಯ್ಯನವರ ಬುರುಡೆ ತಿಳಿದೇ ಇದೆ. ಇವರಿಂದ ನಮಗೆ ತಿಳಿಯುವುದು ಅಷ್ಟರಲ್ಲಿಯೇ ಇದೆ. ಏಗೆಂದು ಆತನನ್ನು ಹಾಸ್ಯಮಾಡಿ ಅಲಕ್ಷ್ಯದೊಡನೆ ಕಾಣುತಿದ್ದೆವು.

ಆದರೆ ಈಚೆಗೆ ಆ ಸುಬ್ಬರಾಮ್ಮಯ್ಯನವರು ಹೇಳುತಿದ್ದ ವಿಷಯಕ್ಕೆ ಸಂಬಂಧಿಸಿದ ಉದ್ಗ್ರಂಥಗಳನ್ನು ಓದುವಾಗ್ಗೆ, ಆತನು ನಮ್ಮ ಕುಚೇಷ್ಟಾಪ್ರಶ್ನೆಗಳಿಗೆ ಕೊಡುತಿದ್ದ ಉತ್ತರ ಸರಿಯಾದ್ದೆಂತಲೂ, ಆತ ಹೇಳಿದಹಾಗೆ ನಾವು ಮಾಡಿದ ಅರ್ಥವೂ ಅದಕ್ಕೆ ಹೊಂದುತಿತ್ತೆಂತಲೂ ತಿಳಿದುಕೊಂಡೆ. ತರುವಾಯ ನಾವು ಆತನ ವಿಷಯದಲ್ಲಿ ಬಹು ಅಪಚಾರವಾಯಿತೆಂದು ವ್ಯಸನವಾಯಿತು."

ಈರೀತಿಯಲ್ಲ ಮಾಲ ಕಂಡ ಪಂಡಿತರು ಹೇಳಿದರು. ಈ ಉಪಕಥೆಯಿಂದ ನಾವು ತಿಳಿದುಕೊಳ್ಳಬೇಕಾದ್ದು ಬಹಳವಿದೆ. ಬಾಲಕರು ಇಬರಲ್ಲಿ ಹೇಳಿರುವ ಮೇರೆ ತಮಗೆ ತೋರಿದ ಅರ್ಥವನ್ನು ಮಾಡಿಕೊಂಡದ್ದು ಸರಿಯಲ್ಲ. ಅಥವಾ ಅಂಥಾ ವಿಪರೀತಾರ್ಥವನ್ನು ಬುದ್ಧಿಶಾಲಿಗಳಾದ ವಿದ್ಯಾರ್ಥಿಗಳು ಕಲ್ಪಿಸಿಗೊಂಡಾಗ್ಗೂ, ಉಪಾಧ್ಯಾಯರು ಹೇಳಿದ ಅರ್ಥದಮೇಲೆ ಇದು ಕಾಯುತ್ತದೆಂದು ತಿಳಿದುಕೊಂಡು ಗುರುವಿನಲ್ಲಿ ಮರ್ಯಾದೆ ಇಲ್ಲದೆ ಮನಸ್ಸಿನಂದಹಾಗೆ ವ್ಯಾತನಾಡಿದ್ದು ಸರಿಯಲ್ಲ. ಇಂಥಾ ವಿಪರೀತಾರ್ಥವನ್ನು ಆತ ಸರಿಯದೇ ಇರಲಿಲ್ಲ. ಇದು ಆತನಿಗೆ ತಿಳಿದಿದ್ದ ಕಾರಣದಿಂದಲೇ—ನೀವು ಹೇಳಿದ್ದೂ ಆಗಬಹುದು; ಆದರೆ ಅದು ಸಹಜವಾದ ಅರ್ಥವಲ್ಲ—ಎಂದು ಹೇಳಿದನು. ಇಷ್ಟುಮಾತ್ರಕ್ಕೆ ಉಪಾಧ್ಯಾಯರ ಅರ್ಥಕ್ಕಿಂತಲೂ ಹುಡುಗರ ಅಪಾರ್ಥವೇ ಸರಿಯಾದ್ದೆಂದು ತಿಳಿಯಕೂಡದು. ಹುಡುಗರ ಪ್ರಶ್ನೆಗೆ ಎಲ್ಲಿವರಲ್ಲಿಯೇ ಉತ್ತರ ಹೇಳಿ, ಪ್ರಜ್ಞೆ ಸಾಲದ ಆ ವಿದ್ಯಾರ್ಥಿಗಳು ಪಂಡಿತರಾಗಿ ಉದ್ಗ್ರಂಥಗಳನ್ನು ಓದುವಾಗ್ಗೆ ತಮ್ಮ ತಪ್ಪನ್ನು ತಾವೇ

ತಿಳಿದುಕೊಳ್ಳುವರೆಂದು ಸುಮ್ಮನಾದರು. ಅದೇ ರೀತಿಯಲ್ಲಿ ಮೇಲೆ ಕಂಡ ಕಥೆಯನ್ನು ಹೇಳಿದ ಪಂಡಿತರಿಗೆ ಪ್ರಜ್ಞೆ ಹೆಚ್ಚಾಗಿ ಆತ್ಮದೋಷ ಗೊತ್ತಾಯಿತು; ಗುರುವಿಗೆ ಆಗ ತಾವು ಮಾಡಿದ ಅನಮಾನಕ್ಕೆ ಪಶ್ಚಾತ್ತಾಪ ಹುಟ್ಟಿತು; ಆತನಲ್ಲಿ ಮರ್ಯಾದೆ ಮತ್ತೂ ಹೆಚ್ಚಿತು. ಆದರೆ ಓದತಕ್ಕ ನೂರಾರುಜನ ವಿದ್ಯಾರ್ಥಿಗಳಲ್ಲಿ ನಿಜವಾದ ಪಾಂಡಿತ್ಯವನ್ನು ಪಂಪಾದಿಸಿ ಉದ್ಗ್ರಂಥಗಳನ್ನು ಓದತಕ್ಕವರು ಬಹುಸ್ವಲ್ಪ. ಮೇಲೆ ಕಂಡ ಕಥೆಯನ್ನು ಹೇಳಿದ ಪಂಡಿತರು ತಮ್ಮ ಜೊತೆಯಲ್ಲಿ ಓದಿದ ವಿದ್ಯಾರ್ಥಿಗಳಲ್ಲಿಲ್ಲಾ ಮಹತ್ತರವಾದ ಪಾಂಡಿತ್ಯವನ್ನು ಹೊಂದಿ ಗುರುವಿನ ಸಹಜವಾದ ಯೋಗ್ಯತೆಯನ್ನು ತಿಳಿಮಕೊಂಡರು. ಉಳಿದವರೆಲ್ಲಾ ಪ್ರಜ್ಞಾಲೋಪದಿಂದ ಸುಬ್ಬರಾಮ್ಮಯ್ಯನವರು ಬುರುಡೇ ಸುಬ್ಬರಾಮ್ಮಯ್ಯನವರೆಂದು ಜನರಿಗೂ ಅಜ್ಞಾನದಿಂದ ನಂಬಿರಬಹುದು. ಆದಕಾರಣ ಇಂಥಾ ಅಚಾತುರ್ಯಗಳನ್ನಡೆಯದೇ ಇರಬೇಕೆಂದರೆ ಗುರುವಿಗೆ ತಿರುಮಂತ್ರವನ್ನು ಹೇಳದೆ ಆತನಲ್ಲಿ ಮರ್ಯಾದೆಯನ್ನು ಇಟ್ಟುಗೊಂಡು, ಆತ ಹೇಳಿದ್ದನ್ನು ಕೇಳಿ ತಿಳಿಮಕೊಂಡು ಸುಮ್ಮನಿರುವುದು ಅನೇಕ ಭಾಗದಲ್ಲಿ ಉತ್ತಮ.

ಒಂದುವಕ್ಷ ಗುರುವಿಗೆ ತಿಳುವಳಿಕೆ ಇಲ್ಲದೆ ತಪ್ಪನ್ನು ಹೇಳಿಕೊಟ್ಟನೆಂದು ಯೋಚಿಸೋಣ. ಹಾಗಾದರೆ, ಶಿಷ್ಯರು ತಮ್ಮ ಮನಸ್ಸಿಗೆ ಬಂದ ಪ್ರಶ್ನೆಯನ್ನು ಕೇಳಿದಮಾತ್ರದಿಂದಲೇ, ಗುರುವಿಗೆ ತಿಳಿಯದಭಾಗ ತಿಳಿದಹಾಗಾಯಿತೆ? ವಿದ್ಯಾರ್ಥಿಗಳಿಗೆ ಅದನ್ನು ಹೇಳಿಕೊಟ್ಟಹಾಗಾಯಿತೆ? ವಿದ್ಯಾರ್ಥಿಗಳು ಅಪ್ರಕೃತವಾಗಿ ಆ ಪ್ರಶ್ನೆಯನ್ನು ಕೇಳೋದರಿಂದಲೇ ಅವರಿಗೆ ಆ ಅಂಶ ತಿಳಿದಹಾಗಾಯಿತೆ? ಏನೂ ಇಲ್ಲ. ಶಿಷ್ಯರಿಗೆ ವಿಧೇಯತೆಯೇ ಮುಖ್ಯವಾದ್ದು. ಅದರಿಂದ ಅನೇಕ ಗುಣಗಳು ಹುಟ್ಟುವವು.

ಎಂ. ಎಸ್. ಪುಟ್ಟಣ್ಣ. ಬಿ. ಎ.

ಓದುವಕ್ರಮ.

"ವಿದ್ಯಾವಂತರಲ್ಲಿ ಅನೇಕರಿಗೆ ಓದುವದೇಬರದು" ಎಂಬದು ಬಹುಮಟ್ಟಿಗೆ ನಿಜವಾಗಿ ತೋರುತ್ತೆ. ಕನ್ನಡಭಾಷೆಯ ವಿಷಯದಲ್ಲಿ ಇದು ನಿಜ

ವೆಂಬುವದಕ್ಕೆ ಅನುಮಾನವಿಲ್ಲ. ಉಪಾಧ್ಯಾಯರೂ ಪುರಾಣೀಕರೂ ವಕೀಲರೂ ಇನ್ನೂ ಇತರರೂ ಓದುವ್ವದರಲ್ಲಿ ನಿಪುಣರಾಗಿರಬೇಕು. ಓದುವದಂದರೆ ಬರೆದಿರುವ ಅಕ್ಷರಗಳನ್ನು ಹೇಳಿದಾಮ್ಮೆತ್ತಂದಲ್ಲ. ಇಂಗ್ಲೀಷ್ ಭಾಷೆಯ ವಿಷಯದಲ್ಲಿ ಹೀಗೆ ಮಾಡಿದರೆ ಆ ಓದುಗಾರಿಕೆಯಿಂದ ಸ್ವಲ್ಪವೂ ಪ್ರಯೋಜನವಿಲ್ಲವೆಂಬುವದು ಹೇಳಲನಶ್ಯಕವಿಲ್ಲ. ಕನ್ನಡದಲ್ಲಿಯೂ ಅಕ್ಷರಗಳನ್ನೂ ಮನಸ್ಸಿಗೆ ಬಂದಹಾಗೆ ಉಚ್ಚರಿಸಿದಲ್ಲಿ ಓದಿದ ಕಾವ್ಯವು ಅರ್ಥವಾಗದಿರುವದಲ್ಲದೆ ಕಿವಿಗಿಂಪಾಗಿಯೂ ಇರುವದಿಲ್ಲ. ಸರಿಯಾಗಿ ಓದುವದನ್ನು ಕಲಿಯುವದು ಬಹು ಕಠಿಣವೆನ್ನಲಿಕ್ಕೂ ಆಗದು. ಸ್ವಲ್ಪಮಟ್ಟಿಗೆ ಪ್ರಯತ್ನಪಟ್ಟವನಾ ತ್ರಕ್ಕೆ ಬರುವ ವಿದ್ಯವನ್ನು ಎಷ್ಟುಜನರು ನಿರಾಕರಿಸಿರುವರು! ಸರಕಾರದಿಂದ ಸ್ಥಾಪಿಸಲ್ಪಟ್ಟಿರುವ ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಓದುವದನ್ನು ಕಲಿಸುತ್ತಾರಂದಲ್ಲಿ ಸ್ವಲ್ಪಕಾಲದಲ್ಲಿಯೇ ಅಭಿವೃದ್ಧಿಗೆ ಬರುವರು. ಉಪಾಧ್ಯಾಯರು ಈ ವಿಷಯದಲ್ಲಿ ಸಾಧ್ಯವಾದಮಟ್ಟಿಗೆ ಗಮನವನ್ನು ಇಟ್ಟರೆ ಈಗಿನಷ್ಟು ಕೇಡು ಮುಂದಾದರು ಇರಲಾರದು. ಕನ್ನಡ ಪಾಠವನ್ನು ಹೇಳುವ ಕೆಲವು ಉಪಾಧ್ಯಾಯರು ಪರೀಕ್ಷೆಗಾಗಿ ನೇಮಿಸಲ್ಪಟ್ಟಿರುವ ಪುಸ್ತಕವನ್ನು ತರಗತಿಗೆ ತಂದು ಅದನ್ನು ಆಗತಾನೆ ತೆಗೆದು ಒಂದು ಪದ್ಯವನ್ನು ತಡವುತಾ ಓದಿ ಅದಕ್ಕೆ ಪ್ರತಿಪದಾರ್ಥವನ್ನು ಹೇಳಿದಕೂಡಲೇ ಮುಂದಣಪದ್ಯಕ್ಕೆ ಹೋಗುವರು. ಇಂಥಾ ಬೋಧನೆಯಿಂದ ಉಂಟಾಗುವ ಪ್ರಯೋಜನವು ಬಹುಸ್ವಲ್ಪವೇ ಆಗಿರುತ್ತದೆ. ಇದರಿಂದ ಓದುವ ಅಭ್ಯಾಸವಾಗುವದಿಲ್ಲ. ಈ ಅಸಮಾಧಾನಕರವಾಬ ಸ್ಥಿತಿಯನ್ನು ಗುಣಪಡಿಸಬೇಕೆಂದು ಮದರಾಸ್ ಪ್ರಾಂತ್ಯದಲ್ಲಿ ಕೆಲವರು ಪ್ರಯತ್ನಪಡುತ್ತಲಿದ್ದಾರೆ

ಸರಿಯಾದ ಓದುಗಾರಿಕೆಯನ್ನು ಕಲಿಯಬೇಕೆಂಬುವರಸಹಾಯಕ್ಕಾಗಿ ಕೆಲವು ಸಂಗತಿಗಳು ಇಲ್ಲಿ ವಿವರಿಸಲ್ಪಟ್ಟವೆ. ಇವುಗಳು ಬಹುಮಟ್ಟಿಗೆ ಉಪಯೋಗಕಾರಿಗಳಾದಾಗ್ಯೂ ಓದುಗಾರಿಕೆಯಲ್ಲಿ ನಿಪುಣನಾದವನ ಬೋಧನೆಗೆ ಸಮಾನವಲ್ಲವು. ಆದರೂ ಉಪಾಧ್ಯಾಯರು ಇವುಗಳನ್ನು ವಿದ್ಯಾರ್ಥಿಗಳಿಗೆ ತಿಳಿಸುವದರಿಂದ ಸ್ವಲ್ಪವಾದರೂ ಗುಣವುಂಟಾಗದಿರಲಾರದು. ಓದುಗಾರಿಕೆಗೆ ಅರ್ಥಜ್ಞಾನವು ಮುಖ್ಯಭಾಗವಾಗಿದೆ. ಅರ್ಥತಿಳಿಯದೆ ಓದಿದರೆ "ಮೇಣ ಸೂಜಿ ರಿಗೆ," "ದಶರಾ ಮಶರಾ" ಎಂಬಂತೆ ಕೇಳುವವರಿಗೆ

ಸುಲಭನಾಗಿರುವದು ಕ್ಲಿಷ್ಟನಾಗಿಯೂ ಅಪಾರ್ಥವುಳ್ಳದ್ದಾಗಿಯೂ ತೋ
ರುವುದು. ಬಾಯಿಪಾಠದ ಪುಸ್ತಕಗಳನ್ನು ಅನೇಕ ಕಡೆ ಉಪಯೋಗಿಸು
ತ್ತಾರೆ. ಈ ಪುಸ್ತಕಗಳನ್ನು ಬರೆದವರ ಅಭಿಪ್ರಾಯವೂ ಇವುಗಳನ್ನು ಪಾಠ
ಶಾಲೆಗಳಲ್ಲಿ ಉಪಯೋಗಿಸಬೇಕೆಂದು ಆಜ್ಞೆಮಾಡುವ ಅಧಿಕಾರಿಗಳ ಅಭಿಪ್ರಾ
ಯವೂ ಈ ಪುಸ್ತಕಗಳನ್ನು ಉಪಯೋಗಿಸುತ್ತಿರುವ ಉಪಾಧ್ಯಾಯರ ಅಭಿ
ಪ್ರಾಯವಂತಿಲ್ಲ. ಬಾಯಿಪಾಠದ ಪುಸ್ತಕಗಳು ಎಂದ ಮಾತ್ರಕ್ಕೆ ಅರ್ಥತಿಳಿ
ಯದೆಯೇ ಕಲಿಯಬೇಕಾದ ಪುಸ್ತಕಗಳೆಂದು ತಿಳಿದು ಅರ್ಥವಿಲ್ಲದೆ ಬಾಯಿ
ಪಾಠ ಮಾಡಿಸುವ ಉಪಾಧ್ಯಾಯರ ಮೌಢ್ಯಕ್ಕೆ ಏನು ಹೇಳಬೇಕು?
"ನನ್ನ ಹುಡುಗನು ಜೈಮಿನಿಭಾರತದಲ್ಲಿ ನಾಲ್ಕುಸಂಧಿಗಳನ್ನು ಬಡಬಡ್ಲುವ"
ಎಂದು ಸಂತೋಷಪಡುವವರು ಎಷ್ಟೋಮಂದಿ. ಹುಡುಗನು ಆ ಪದ್ಯ
ಳನ್ನು ಬಾಯಿಪಾಠಮಾಡಿದ್ದರೂ ಇರಬಹುದು; ಆದರೆ "ಪಾವನ ತುಲಾಭಾ
ರಣವುಂಟಾಡಿಕೊಂಡೆನಿ" ಎಂಬುವದರ ಅರ್ಥವನ್ನು ಹೇಳೆನಲು ಬಿಪ್ಪಾಗಿ
ನಿಲ್ಲುವನು. ಇಂಥಾ ಓದುಗಾರಿಕೆಯಿಂದುಂಟಾಗುವ ಪ್ರಯೋಜನವೇನೂ ಇಲ್ಲ
ವದರೆಯ ಸಂಧಿಯ ಮೊದಲನೆಯ ಪದ್ಯವನ್ನು ಓದುತ್ತಾನೆಂಬುವದೇ ಆನಂ
ದವಾನ. ಅರ್ಥಜ್ಞಾನವಿಲ್ಲದಿರುವನು ಸರಿಯಾಗಿ ಓದುತ್ತಾನೆಂಬುವದು ಹಾಗೆ
ಗೊತ್ತು.

ವಿದ್ಯಾರ್ಥಿಗಳ ಜ್ಞಾನಾವಕಶಕ್ತಿಯನ್ನು ವೃದ್ಧಿಪಡಿಸಬೇಕೆಂಬ ಒಳ್ಳೆ
ಅಭಿಪ್ರಾಯದಿಂದ ಸರಿಯಾದ ಕಾಲನಾದ ಬಾಲ್ಯದಲ್ಲಿ ಕೆಲವು ಸಂಗತಿಗಳನ್ನು
ಬಾಯಿಪಾಠ ಮಾಡಿಸುವದುಂಟು. ಹುಡುಗರು ಇವುಗಳನ್ನು ಅರ್ಥತಿಳಿ
ಯದೆಯೇ ಕಲಿಯುವರು. ಮಗ್ಗಿಯೊದಲಾದ ಕೆಲವು ಸಂಗತಿಗಳನ್ನು
ಮಾತ್ರ ಹೀಗೆ ಅರ್ಥವಿಲ್ಲದೆ ಕಲಿಸಬಹುದು. ಆದರೆ ಅನೇಕ ವಿಷಯಗಳನ್ನು
ವ್ಯರ್ಥ ಬಾಯಿಪಾಠ ಮಾಡಿಸಿ ಹುಡುಗನ ಜ್ಞಾನಾವಕಶಕ್ತಿಯನ್ನು ವೃದ್ಧಿಪಡಿ
ಸಬೇಕೆಂದು ಇತರ ಬುದ್ಧಿಶಕ್ತಿಗಳಿಗೆ ಕುಂದಕತರುವದು ಅವಿವೇಕವಾಗಿ
ತೋರುವಿರಲಾರದು. ವ್ಯಾಕರಣ, ಭೂಗೋಳವಿವರಣೆ, ಚರಿತ್ರೆ ಇವುಗ
ಳನ್ನು ಬಾಯಿಪಾಠಮಾಡಿಸುವವರ ಬುದ್ಧಿಗೆ ಏನುತಾನೆ ಹೇಳಬೇಕು? ಈ
ದುರಭ್ಯಾಸದಿಂದ ಹೇರಳವಾದ ಸಮಯವು ಸಂಭವಿಸುವದರಿಂದ ಸಾಧ್ಯವಾದ
ಮಟ್ಟಿಗೆ ಇದನ್ನು ತಪ್ಪಿಸುವದು ಉಪಾಧ್ಯಾಯರ ಕರ್ತವ್ಯವಾಗಿದೆ.

ಗ್ರಂಥಕರ್ತನ ಅಭಿಪ್ರಾಯವು ವಿದ್ಯಾರ್ಥಿಗಳಿಗೆ ತಿಳಿಯದೆ ಹೋಗುವದರಿಂದ ಗ್ರಂಥದಲ್ಲಿರುವ ರಸಾಲಂಕಾರಾವಿ ಅತಿಶಯಗಳೂ ತಿಳಿಯುವದಿಲ್ಲ ಬಾಯಿ ಪಾಠದ ಪುಸ್ತಕಗಳು ಬಾಲ್ಯದಲ್ಲಿ ಉಪಯೋಗಿಸುವುದು ಅವಶ್ಯಕವಾದುದರಿಂದ ಸಣ್ಣಹುಡುಗರಿಗೆ ತಿಳಿಯುವಂತೆ ಸುಲಭವಾದಕನ್ನಡದಲ್ಲಿ ಬರೆದಿರುವ ಪುಸ್ತಕಗಳನ್ನು ಉಪಯೋಗಿಸಬೇಕು. ಇವುಗಳ ಅರ್ಥವು ಬಾಲಕರಿಗೆ ತಿಳಿದನಂತರ ಬಾಯಿಪಾಠವಾಡಲು ಬಿಡುವದು. ಅತಿಯಾಗಿ ಬಾಯಿಪಾಠ ಮಾಡುವದೂ ಆಗದು, ಯಾಕೆಂದರೆ ಹೀಗೆ ಜ್ಞಾಪಕಶಕ್ತಿಯನ್ನೇ ವೃದ್ಧಿಪಡಿಸುವದರಿಂದ ವಯಸ್ಸಾದಮೇಲೆ ಜ್ಞಾಪಕಶಕ್ತಿಯೂ ಇತರ ಬುದ್ಧಿಶಕ್ತಿಗಳಂತೆ ಕಮ್ಮಿಯಾಗುವದು. ಇದಕ್ಕೆ ದೃಷ್ಟಾಂತಗಳು ಬಹಳವಾಗಿರುವವು. ಚಿಕ್ಕವರಾಗಿರುವಾಗ ಮಕ್ಕಳಿಗೆ ಮಗ್ಗಿಗಳು, ಅಮರ, ಶ್ಲೋಕಗಳು, ಇತರವಿಷಯಗಳು ಇವುಗಳನ್ನು ಬಾಯಿಪಾಠವಾಡಿಸುತಲೇ ಇರುವದಾದರೆ ದೊಡ್ಡವರಾದಮೇಲೆ ಅವರು ಬಲಹೀನರಾಗುವದಲ್ಲದೆ ಧಡ್ಡರೂ ಆಗುವದರಲ್ಲಿ ಅನುಮಾನವಿಲ್ಲ. ಚಿಕ್ಕಂದಿನಲ್ಲಿ ಕೆಟ್ಟ ಅಭ್ಯಾಸಗಳಿಗೆ ಅವಕಾಶಕೊಟ್ಟರೆ ದೊಡ್ಡವರಾದರೂ ಆ ದೋಷಗಳು ಕಾಣಬರುವವು. ಪರೀಕ್ಷಿಸಬೇಕಾದರೆ ಈಗಿನ ವಿದ್ಯಾವಂತರೆನಿಸಿಕೊಂಡಿರುವವರಲ್ಲಿ ಅನೇಕರು ಸರಿಯಾಗಿ ಓದುವದನ್ನೇ ತಿಳಿಯರು. ಇವರು ಸ್ವಲ್ಪವಾದರೂ ಅಭ್ಯಾಸ ಮಾಡಿದ್ದರೆ ಇಂಥಾ ಸ್ಥಿತಿಯಲ್ಲಿರುತಿರಲಿಲ್ಲ.

ಓದುಗಾರಿಕೆಯ ಅನೇಕ ದೋಷಗಳನ್ನು ಸರಿಯಾದ ಉಚ್ಚಾರಣೆಯಿಂದ ಕಳೆಯಬಹುದು. ಉಗ್ಗು, ತೊದಲು, ಅಕ್ಷರ ನುಂಗುವದು, ಹೇಳಿದ್ದನ್ನು ಹೇಳುವದು, ತಲೆದೂಗುವದು, ಊಗುಟ್ಟುವದು, ಅವ್ಯಯೋಪಯೋಗವಾತುಗಳನ್ನು ಸೇರಿಸುವದು, ತ್ವರೆಯಾಗಿ ಓದುವದು, ಅತಿ ನಿಧಾನವಾಗಿ ಓದುವದು, ಇವೇಮೊದಲಾದ ಅನೇಕ ದೋಷಗಳು ಕೆಟ್ಟ ಓದುಗಾರಿಕೆಯಲ್ಲಿ ಕಾಣಬರುವವು. ಇವುಗಳನ್ನು ತಿದ್ದಬೇಕಾದರೆ ಸರಿಯಾದ ಉಚ್ಚಾರಣೆಯಿಂದಲ್ಲದೆ ಆಗುವದಿಲ್ಲ. ಆದಕಾರಣ ಬಾಯಿಬಿಟ್ಟು ಶಬ್ದಗಳನ್ನು ಪೂರ್ಣವಾಗಿ ಉಚ್ಚರಿಸುತಾ ಬರಬೇಕು. ಬಾಯಿಬಿಟ್ಟು ಓದಬೇಕೆಂದರೆ ಗಟ್ಟಿಯಾಗಿ ಕೂಗಬೇಕೆಂದಲ್ಲ. ಕೆಲವರು ಬಹು ಗಟ್ಟಿಯಾಗಿ ಓದುವ ಅಭ್ಯಾಸದವರಾಗಿರುವರು. ವಿದ್ಯಾರ್ಥಿಗಳಲ್ಲಿ ಅನೇಕರು ಸಣ್ಣಸಣ್ಣ ಕೊಠಡಿಗಳಲ್ಲಿ

ಕುಳಿತು ಓದುವದುಂಬು. ಓದಿದ ಪಾಠವನ್ನಾ ಕೇಳುವವನು ಓದುವವನೆ ಆಗಿದ್ದರೂ ತನ್ನ ಶಕ್ತಿಯನ್ನೆಲ್ಲಾ ವ್ಯಯಮಾಡಿ ಕೂಗುವದರಿಂದ ಏನೂ ಪ್ರಯೋಜನವಿಲ್ಲ. ಶ್ವಾಸಕೋಶಗಳಿಗೂ ಗುಟರಿಗೂ ವೃಥಾ ತೊಂದರೆಯಾಗುವದು. ಸಂದರ್ಭಾನುಸಾರವಾಗಿ ಕೆಲವುವೇಳೆ ಎಲ್ಲರಿಗೂ ಕೇಳುವಂತೆ ಗಟ್ಟಿಯಾಗಿಯೂ ಕೆಲವು ವೇಳೆ ಮೆಲ್ಲಗೂ ಓದಬೇಕು. ದೊಡ್ಡ ಸಭೆಯಲ್ಲಿ ನಿತ ಮಾತನಾಡುವಕಾಲದಲ್ಲಿ ಆಗಲಿ ಓದುವಕಾಲದಲ್ಲಿ ಆಗಲಿ ಉಸುರಿಲ್ಲದಂತೆ ಶಬ್ದಗಳನ್ನುಚ್ಚರಿಸುವುದು ಕೆಟ್ಟ ಪದ್ಧತಿಯಾಗಿದೆ. ತಾನು ಹೇಳಿದ್ದು ತನಗೆ ತಿಳಿಯುತ್ತೇಹೊರತು ಇತರರಿಗೆ ಸ್ಪಷ್ಟವಾಗಿ ಕೇಳಿಸಲಿಲ್ಲವು. ಇದನ್ನು ತಿದ್ದುವದು ಅವಶ್ಯಕವಾಗಿರುವದು.

ಅನೇಕರು ಆವಸರವವಸರವಾಗಿ ಗಡಗಡನೆ ಓದುವದೂ ಉಂಟು. ಹೀಗೆ ಅವಸರಪಡುವದರಿಂದ ಓದಿದ ಸಂಗತಿಯು ಸರಿಯಾಗಿ ಮನಸ್ಸಿಗೆ ಹಿಡಿಯುವದಿಲ್ಲ. ಹ್ಯಾಗಂದರೆ, ನಾಟಕಶಾಲೆಯಲ್ಲಿ ಉಪಯೋಗಿಸುವ ವಿಚಿತ್ರವಾದ ತೆರೆಗಳನ್ನು ಬೇಗ ಬೇಗನೇ ಬದಲಾಯಿಸುತ ಯಾವ ತೆರೆಯನ್ನಾದರೂ ಸಾವಕಾಶವಾಗಿ ನೋಡಲು ಅವಕಾಶ ಕೊಡವಿದ್ದರೆ, ನೋಡುವವರಿಗೆ ಯಾವತೆರೆಯಲ್ಲಿ ಏನು ಸೊಗಸೀತ್ತು, ಯಾವ ತೆರೆಯಲ್ಲಿ ಏನು ಬರವಿತ್ತು, ತೆರೆಗಳಲೆಲ್ಲಾ ಸುಂದರವಾದುದ್ಯಾವುದು, ಚಿತ್ರಗಾರನು ಎಷ್ಟುನುಟ್ಟಿಗೆ ಶ್ರಮಪಟ್ಟನು ಎಂಬವೇವೊಬಲಾದ ಸಂಗತಿಗಳ್ಯಾವವೂ ಸ್ವಲ್ಪವಾದರೂ ತಿಳಿಯಬರುವದಿಲ್ಲ. ಸ್ವಲ್ಪಕಾಲದಲ್ಲಿಯೇ ಅನೇಕ ವಿಷಯಗಳು ದೃಷ್ಟಿಗೆ ಗೋಚರವಾಗಿ ಕಾಣದಂತಾಗುವವು. ಯಾವದನ್ನೂ ಸ್ವಲ್ಪವಾಗಿನೋಡಲು ಅವಕಾಶವಿಲ್ಲದಿರುವದರಿಂದ ಏನೋಒಂದನ್ನು ನೋಡಿದಹಾಗೆ ಆಗುವದು. ಅದರಂತೆಯೇ ಆತುರವಾಗಿ ಓದುವದರಿಂದಲೂ ಪ್ರಯೋಜನವಿಲ್ಲ. ನಿಧಾನವಾಗಿ ಓದಿದರೆ ಅರ್ಥ ಗೊತ್ತಾಗುವದಲ್ಲದೆ ಸ್ವಾರಸ್ಯವೂ ತಿಳಿಯಬರುವದು; ಆತುರಪಟ್ಟರೆ ಏನೋ ಒಂದನ್ನು ಓದಿದಂತಾಗುವದರಲ್ಲಿ ಸಂದೇಹವಿಲ್ಲ

ಪದ್ಯಕಾವ್ಯವನ್ನು ಅನೇಕರು ರಾಗದೊಡನೆ ಓದುವದುಂಟು. ಇದು ಕೆಟ್ಟದ್ದಲ್ಲ. ಆದರೆ ರಾಗವನ್ನರಿಯದವರು ರಾಗವಾಗಿ ಓದಲುಪಕ್ರಮಿಸಿದರೆ ಕಿವಿಗೆ ಇಂಪಾಗಿರುವದಿಲ್ಲ. ರಾಗದಿಂದ ಓದುವದನ್ನು ಬಾಲಕರಿಗೆ ಅಭ್ಯಾಸಮಾಡಿಸುವದರಲ್ಲಿ ಏನೂ ಕೆಡಕಿಲ್ಲ. ರಾಗವನ್ನು ಹಾಡುವದರಲ್ಲಿ ಪ್ರವೀಣರಾ

ಗದೇ ಇದ್ದರೂ ತಕ್ಕಮಟ್ಟಿಗೆ ಅಭ್ಯಾಸವಾಗಿದ್ದರೆ ಸಾಕು. ಗದ್ಯಕಾವ್ಯವನ್ನು ಓದುವವರಿಗೆ ರಾಗಜ್ಞಾನವು ಅವಶ್ಯಕವಾಗಿಲ್ಲವೆಂದು ಕೆಲವರನ್ನುವರು. ಈ ವಿಷಯವಾಗಿ ಯಾವದನ್ನೂ ಗೊತ್ತಾಗಿ ಹೇಳಲಿಕ್ಕಾಗುವದಿಲ್ಲ. ಯಾಕೆಂದರೆ ಇದನ್ನುಕುರಿತು ಎಲ್ಲರ ಅಭಿಪ್ರಾಯವೂ ಒಂದೇ ಆಗಿಲ್ಲವು. ಆವಾಗ್ಯೂ ಕೆಲವು ವಿಧವಾದ ಗದ್ಯಕಾವ್ಯಗಳನ್ನು ರಾಗವಾಗಿ ಓದುವದರಿಂದ ಭಾಧಕವೇನೂತೋರಬರುವದಿಲ್ಲ. ರಾಗವಾಗಿ ಓದಿದಾಗ್ಯೂ ರಾಗವಿಲ್ಲದೆ ಓದಿದಾಗ್ಯೂ ಓದಿದ ಪಾಠದ ಅರ್ಥವು ಕೇಳುವವರಿಗೆಲ್ಲಾ ವಿಶದವಾಗಿ ತಿಳಿಯಬೇಕಾಗಿರುವದು ಮುಖ್ಯಾಂಶವಾಗಿರುವದರಿಂದ ಶಬ್ದಗಳನ್ನು ಸರಿಯಾಗಿ ಉಚ್ಚರಿಸಿ ಪ್ರತಿಯೊಂದು ಅಕ್ಷರವನ್ನೂ ಸ್ಪಷ್ಟವಾಗಿ ತಿಳಿಯಪಡಿಸುವದು ಓದುವವನ ಕೆಲಸ.

ಕೆಲವರು ಏಕರೀತಿಯಾದ ಧ್ವನಿಯಿಂದ ಓದುವದೂ ಉಂಟು. ಪುಸ್ತಕವನ್ನು ತೆಗೆದುಕೊಂಡು ತಲೆಯನ್ನು ಎತ್ತಿ ಅತ್ತಿತ್ತ ನೋಡದೆ ಒಂದೇಸ್ವರದಿಂದ ಓದುವರು. ಓದುವಾಗ ಎಲ್ಲಿಗೆ ನಿಲ್ಲಿಸಬೇಕು, ಯಾವುದನ್ನು ಯಾವರೀತಿಯಿಗಿ ಉಚ್ಚರಿಸಬೇಕು, ಯಾವಯಾವ ರಸಕ್ಕೆ ಯಾವಯಾವ ರೀತಿಯಾದ ಓದುಗಾರಿಕೆ ಎಂಬಿವೇವೊದಲಾದ ಸಂಗತಿಗಳನ್ನರಿಯದೆ "ಏಕಮೂಲಿಕಾಪ್ರಯೋಗ" ವೆಂಬಂತೆ ಒಂದೇಧ್ವನಿಯಿಂದ ಓದುವರು. ಇಂಥಾ ಸಂದರ್ಭಗಳಲ್ಲಿ ಓದುವವನಿಗೆ ಅರ್ಥಾವಬೂ ಆಗಿರಬಹುದು, ಆದರೆ ಕೇಳುವವರಿಗೆ ಸರಿಯಾದ ಅರ್ಥವು ತೋರುವದು ಅನುಮಾನ. ಇದನ್ನು ಉದಾಹರಣೆಯಮೂಲಕ ತಿಳಿಸಬಹುದು: "ಆಹಾ, ನನ್ನಗತಿ ಹೀಗಾಯಿತೆ! ದೈವವಿಧಿಯಂ ಯಾರುತಾನೇ ವಿಾರುವರು? ಎಲೋ ಸುನಂದ, ನೀನು ಆ ಆಶ್ರಮಕ್ಕೆ ಹೋಗಿ ಒಂದು ವಸ್ತ್ರವನ್ನು ತೆಗೆದುಕೊಂಡು ಬಾ, ಸ್ನಾನವಾಡಿ ದೇವತಾರ್ಚನೆಯನ್ನು ಪೂರೈಸುವೆನು.—ಎಲ್ಮೆ, ತಾಳುತಾಳು, ಅದೇನು ಅಲ್ಲಿ ದೊಡ್ಡ ಶಬ್ದವಾಗುವದು? ಅಲ್ಲಿಗೆ ಹೋಗುವ, ಬಾ." ಇದನ್ನು ಮೊದಲಿಂದ ಕೊನೆಯವರಿಗೆ ಮಾತನಾಡುವವನ ಭಾವವನ್ನು ಸೂಚಿಸುವದಕ್ಕಾಗಿ ಧ್ವನಿಯನ್ನು ಬದಲಾಯಿಸದೆ ಏಕರೀತಿಯಾಗಿ ಓದಿದರೆ ಸ್ವಲ್ಪವಾದರೂ ಆನಂದವುಂಟಾಗಲಾರದು. ಕಾವ್ಯದ ಸ್ವಾರಸ್ಯವೆಲ್ಲಾ ಹೋಗಿ ಸಪ್ಪೆಯಾಗುವದರಲ್ಲಿ ಎನೂ ಸಂದೇಹವಿಲ್ಲ. ಕೇಳುವವರಿಗೆ ಕಾವ್ಯದರ್ಥ

ನೆಯೂ ಅರ್ಥಸ್ವಾರಸ್ಯವೂ ಸರಿಯಾಗಿ ತಿಳಿಯದೆ ಹೋಗುವದರಿಂದ ಕವಿಯುವುದ್ದೇಶವೂ ಅಸಾರ್ಥಕವಾಗುವದು. ಈ ಸಂಗತಿಗಳನ್ನು ಕುರಿತು ಬಾಲಕರಿಗೆ ಬೋಧಿಸುವದರಿಂದ ಬಹಳ ಪ್ರಯೋಜನವುಂಟು.

ಓದುವದರವಿಷಯವಾಗಿ ಮತ್ತೊಂದು ಸಂಗತಿಯನ್ನು ತಿಳಿಸಬೇಕು. ಪುಸ್ತಕಕ್ಕೂ ಓದುವವನ ಕಣ್ಣಿಗೂ ಸ್ವಲ್ಪ ಹೆಚ್ಚುಕಡಿಮೆ ಹತ್ತು ಅಂಗುಲದಷ್ಟು ಪ್ರಮಾಣವಿರಬೇಕು. ಅತಿ ದೂರವಾದರೂ ಅತಿ ಹತ್ತರವಾದರೂ ಅಕ್ಷರಗಳು ಸರಿಯಾಗಿ ಕಾಣಬರುವದಿಲ್ಲ. ಆದುದರಿಂದ ನೆಲದ ಮೇಲೆ ಕುಳಿತು ಓದುತಿರುವಾಗ ಪುಸ್ತಕವನ್ನು ಕಾಲುಮಣೆಯಮೇಲಾದರೂ ಪೆಟ್ಟಿಗೆಯಮೇಲಾದರೂ ಇಡುತ್ತೇವೆ. ಮಣೆಯಾಗಲಿ ಪೆಟ್ಟಿಗೆಯಾಗಲಿ ಮೇಜು ಕುರ್ಚಿಯಾಗಲಿ ಇಲ್ಲದಿದ್ದರೆ ಪುಸ್ತಕವನ್ನು ಕೈಯಲ್ಲಿ ಹಿಡಿದು ಕಣ್ಣಿಗೆ ತಕ್ಕದೂರದಲ್ಲಿಟ್ಟುಕೊಂಡು ಓದುತೇವೆ. ಅನೇಕ ವಿದ್ಯಾರ್ಥಿಗಳು ಕೈ ನೋವಾಗಲು ಪುಸ್ತಕವನ್ನು ನೆಲವಮೇಲಿಟ್ಟು ಓದಲಾರಂಭಿಸುವರು. ಅಕ್ಷರಗಳು ಸರಿಯಾಗಿ ಕಾಣಬೇಕಾಗಿರುವದರಿಂದ ಸೊಂಟವನ್ನು ಬೊಗ್ಗಿಸಿ ನೆಲದಮೇಲೆ ಕೈಯೂರಿ ಓದುವರು. ಹೀಗೆ ಅಂಗವನ್ನು ಡೊಂಕಾಗಿ ಬೊಗ್ಗಿಸುವದರಿಂದ ಕೇಡುಂಟಾಗುವದು : ಶ್ವಾಸಕೋಶಗಳು ಧಾರಾಳವಾಗಿ ಆಡಲಿಕ್ಕೆ ಅಡಚಣೆಯುಂಟಾಗುವದಲ್ಲದೆ ಕಲೀಜಿಗೂ ಅನ್ನಕೋಶಕ್ಕೂ ತೊಂದರೆ ಸಂಭವಿಸುವದು. ಆದಕಾರಣ ಓದುವಾಗ ನೆಟ್ಟಗೆ ಕುಳಿತು ಅಥವಾ ನಿಂತು ಓದಬೇಕು. ಕುಳಿತು ಓದುವಾಗ ಒಂದು ಕಾಲುಮಣೆಯನ್ನು ಉಪಯೋಗಿಸುವದು ಉತ್ತಮ. ಕತ್ತಲೆಯಾದ ಮನೆಯಲ್ಲೂ ಸಾಕಾದಷ್ಟು ಪ್ರಕಾಶವನ್ನು ಕೊಡದ ದೀಪದಮುಂದೆಯೂ ಓದುವದರಿಂದ ದೃಷ್ಟಿಗೆ ಹಾನಿಯುಂಟಾಗುವದು.

ಬಿ. ಎಸ್. ರಾಜೋಜೀರಾವ್. ಬಿ. ಎ.

ಕ್ಲೋರೀನ್.

ಕ್ಲೋರೀನಿನ ಲಕ್ಷಣಗಳೆಲ್ಲಾ (Properties) ಹಿಂದೆ ವಿವರಿಸಲ್ಪಟ್ಟಿವೆಯಷ್ಟೆ. ಕ್ಲೋರೀನನ್ನು ತಯಾರಿಮಾಡುವ ವಿಧ ಹ್ಯಾಗೆ? ಒಂದು

ಗಾಜಿನ ಹೂಜಿಯಲ್ಲಿ ಹೈಡ್ರೊಕ್ಲಾರಿಕ್ ಆಸಿಡ್‌ನ್ನು ಮಾಂಗನೀಸ್ ಡೈಆಕ್ಸೈಡ್ (Manganese dioxide) ಎಂಬ ಕಪ್ಪುಪುಡಿಯನ್ನು ಬೆರಸಿ ಹೂಜಿಯನ್ನು ಕಾಸಿದರೆ, ಹೈಡ್ರೊಕ್ಲಾರಿಕ್ ಆಸಿಡ್‌ನಲ್ಲಿರುವ ಕ್ಲೋರೀನಿನಲ್ಲಿ ಅರ್ಧಭಾಗವು ಅನಿಲರೂಪದಲ್ಲಿ ಹೊರಟುಬರುತ್ತದೆ. ಹಿಂದೆ ಹೇಳಿದಂತೆ ಕ್ಲೋರೀನನ್ನು ಕೊಳವಿಯ ಮೂಲಕ ನೀಸೆಗಳಲ್ಲಿ ಸೇರಿಸಿ ಅದರ ಲಕ್ಷಣಗಳನ್ನು ಪರೀಕ್ಷೆ ಮಾಡಬಹುದು. ಉಳಿದ ಕ್ಲೋರೀನ್, ಮಾಂಗನೀಸ್ ಡೈಆಕ್ಸೈಡ್‌ನಲ್ಲಿರುವ ಮಾಂಗನೀಸ್ (Manganese) ಲೋಹದೊಡನೆ ಸಂಯೋಗವಾಗಿ ಮಾಂಗನೀಸ್ ಕ್ಲೋರೈಡ್ (Manganese Chloride) ಆಗುತ್ತದೆ. ಹೂಜಿಯಲ್ಲಿ ನಿಲ್ಲುವುದು ಈ ಪದಾರ್ಥವೇ?

ಉಪ್ಪನ್ನು, ಮಾಂಗನೀಸ್ ಡೈಆಕ್ಸೈಡನ್ನು, ಗಂಧಕಾಮ್ಲವನ್ನೂ (Sulphuric Acid) ಒಂದು ಗಾಜಿನ ಹೂಜಿಯಲ್ಲಿ ಬೆರಸಿ, ಹೂಜಿಯನ್ನು ಕಾಸಿದಲ್ಲಿ, ಉಪ್ಪಿನಲ್ಲಿರುವ ಕ್ಲೋರೀನೆಲ್ಲಾ ಅನಿಲರೂಪದಲ್ಲಿ ಹೊರಟು ಬರುತ್ತದೆ. ಹೂಜಿಯಲ್ಲಿ ಮಾಂಗನೀಸ್ ಸಲ್ಫೇಟ್ (Manganese Sulphate) ಸೋಡಿಕ್ ಹೈಡ್ರಿಕ್ ಸಲ್ಫೇಟ್ (Sodic hydric Sulphate) ನಿಲ್ಲುತ್ತವೆ.

ಶೈತ್ಯದಿಂದ ನೀರು ವಿರಳವಾಗುವಿಕೆ. *(Expansion of water by cold.)*

ನೀರಿಲ್ಲದೆ ಮಿಕ್ಕ ಎಲ್ಲಾ ದ್ರವಪದಾರ್ಥಗಳು ಶೀತಾವಸ್ಥೆಗೆ ಬರುವವರಿಗೂ ಶೈತ್ಯದಿಂದ ಸಂಕೋಚವಾಗುತ್ತವೆ. ಆದರೆ ನೀರುಮಾತ್ರ ಸೆಂಟಿಗ್ರೇಡ್ 4° ಕೆಳಗೆ ವಿರಳವಾಗುವುದಕ್ಕೆ ಪ್ರಾರಂಭಿಸಿ 0° ಯಲ್ಲಿ ಮಂಜಿನಗಡ್ಡೆಯಾಗುತ್ತದೆ. ಪದಾರ್ಥಗಳು ವಿರಳವಾಗುವಾಗ ಹಗುರವಾಗುತ್ತವೆಯಷ್ಟೆ. ಆದುದರಿಂದಲೇ ಮಂಜಿನ ಗಡ್ಡೆಯು ನೀರಿನ ಮೇಲೆ ತೇಲುತ್ತದೆ. ನೀರು ವಿರಳವಾಗುವದಕ್ಕೆ ಹೆಚ್ಚು ಸ್ಥಳ ಬೇಕಾದುದರಿಂದ ನೀರಿರುವ ಪಾತ್ರೆಯಲ್ಲಿ

ಸ್ಥಳ ಸಾಲದಿದ್ದರೆ ಪಾತ್ರೆಯು ಒಡೆದುಹೋಗುತ್ತದೆ. ಇದನ್ನು ಸುಲಭವಾಗಿ ತೋರಿಸಬಹುದು. ಪೊಳ್ಳಾಗಿರುವ ಒಂದು ಕಬ್ಬಿಣದ ಗುಂಡಿನಲ್ಲಿ ಒಂದು ರಂಧ್ರವನ್ನು ಮಾಡಿ, ಗುಂಡಿನ ತುಂಬ ನೀರನ್ನು ತುಂಬಿ, ರಂಧ್ರವನ್ನು ಒಂದು ಕಬ್ಬಿಣದ ತಿರುಪ್ರಳಿಕೆಯಿಂದ ಮುಚ್ಚಿ, ತರುವಾಯ ಒಂದು ಪಾತ್ರೆಯಲ್ಲಿ ಮುಜೆನ ಗಡ್ಡೆಯ ತುಂಡುಗಳನ್ನು ಉಪ್ಪನ್ನು ಕಲಸಿ ಆ ಪಾತ್ರೆಯಲ್ಲಿ ಮೇಲೆ ಹೇಳಿದ ಗುಂಡನ್ನು ಹೂಳಿಟ್ಟರೆ ಹೊರಗಿನ ಶೈತ್ಯದಿಂದ ಒಳಗಿನ ನೀರು ಶಿಲಾವಸ್ಥೆಗೆ ಬರುವಾಗ ವಿರಳವಾಗುತ್ತದೆ. ರಂಧ್ರವನ್ನು ನಾವು ಭಪ್ರವಾಗಿ ಮುಚ್ಚಿರುವುದರಿಂದ ವಿರಳವಾಗುವುದಕ್ಕೆ ಸ್ಥಳ ಸಾಲದೆ ವಿರಳಶಕ್ತಿಯಿಂದ (Expansive force) ಗುಂಡು ಒಡೆದುಹೋಗುತ್ತದೆ. ಇದೇಪ್ರಕಾರ ಮರಗಳನ್ನೂ ಕಲ್ಲುಗಳನ್ನೂ ಸೀಳಬಹುದು.

ಸ್ಫಟಿಕದ *(Alum)* ಕುಕ್ಕೆಯನ್ನು ಮಾಡುವ ರೀತಿ.

ಬಿಸಿನೀರಿನಲ್ಲಿ ಎಷ್ಟು ಸ್ಫಟಿಕವನ್ನು ಕರಗಿಸುವುದಕ್ಕೆ ಆಗುತ್ತದೋ ಅಷ್ಟನ್ನು ಕರಗಿಸಿ, ನೀರನ್ನು ಪ್ರೊತ್ಸಾಹ ಕಾಗದದ ಮೂಲಕ ಒಂದು ಮಡಿಕೆಗೆ ಶೋಧಿಸಿ, ತರುವಾಯ ಮಡಕೆಯ ನೀರು ಅರ್ಧ ಇಂಗಿಹೋಗುವವರಿಗೂ ಸಾವಧಾನವಾಗಿ ಕುದಿಸಿ, ಮತ್ತೊಂದು ಪಾತ್ರೆಗೆ ಸುರಿದು, ಬಿಸಿರುನಿಂದಾಗಲಿ, ಸೀಳಿದ ಬೆತ್ತದಿಂದಾಗಲಿ ಮಾಡಿದ ಸಣ್ಣ ಕುಕ್ಕೆಯನ್ನು ಮೇಲೆ ಹೇಳಿದ ಪಾತ್ರೆಯಲ್ಲಿಟ್ಟರೆ ನೀರಿನಲ್ಲಿ ಕರಗಿರುವ ಸ್ಫಟಿಕವು ಕುಕ್ಕೆಯ ಕಡ್ಡಿಗಳ ಮೇಲೆಲ್ಲಾ ಹರಳುಗಳಾಗಿ (Crystals) ಕೂತುಕೊಳ್ಳುತ್ತವೆ. ಈ ಹರಳುಗಳು ಮೂಲೆಗಳುಳ್ಳವುಗಳಾಗಿಯೂ ಒಂದೇ ಆಕಾರ ಉಳ್ಳವುಗಳಾಗಿಯೂ ಇರುವವು. ಆದರೆ ಕೆಲವು ಸಣ್ಣನಾಗಿಯೂ ಇನ್ನುಕೆಲವು ದಪ್ಪನಾಗಿಯೂ ಇರುವವು.

ಎಸ್. ವೆಂಕಟೇಶ ಅಯ್ಯಂಗಾರ್. ಬಿ. ಎ.

(ಕಳಿದ ಸಂಚಿಕೆಯಲ್ಲಿ ಕಂಡ ಪ್ರಶ್ನೆಗಳ ವಿವರಣೆ.)

I. $\frac{ಭಾ.}{111}$ ರ $4\frac{9}{25}$ ರ $5\frac{2}{7} = \frac{8}{\frac{40}{111}} \times \frac{109}{\frac{25}{5}} \times \frac{37}{7} = \frac{872}{3\times5\times7}$.
$\quad\quad\quad

ಆದರೆ ಗ ಗ

35—20·2015 = 14·7985 ಗ

= 14·7985 × 3 ಅಡಿಗಳು

3

= 44·3955 ಅಡಿ

= 44·3955 × 12 ಅಂಗುಲ

= 532·7460 ಅಂಗುಲಗಳು.

= 532·746 ಅಂಗುಲಗಳು.

III. ಮೈ. ಫ. ಪ್ರೋ. ಗ. ಅಂ.

ಸುತ್ತಳತೆ = 2 4 9 5 6 ÷ 1028.

ಆದರೆ 2 ಮೈ = 16 ಫರ್ಲಾಂಗ್

\+ 4

20 ಫ = 20×40 ಪ್ರೋಲ್

= 800 ಪ್ರೋಲ್

\+ 9

809 ಪ್ರೋ = 809×5½ ಗ

= 8899/2 = 4449·5 ಗ

\+ 5 ಗ.

4454·5 ಗ.

4454·5 ಗ = 4454·5×3×12 ಅಂಗುಲ

36

= 160362·0 ಅಂಗುಲ

\+ 6 ಅಂಗುಲ

160368 ಅಂಗುಲಗಳು

∴ ಸುತ್ತಳತೆ = 160368 ÷ 1028 ಅಂಗುಲ

= 156 ಅಂ = 13 ಅಡಿ = 4 ಗಜ——1 ಅಡಿ.

IV. ಕುದುರೆಯ ಬೆಲೆಯು 100 ರೂಪಾಯಿಗಳು ಆಗಿದ್ದರೆ, ಅದನ್ನು $(100-16\frac{2}{3})$ ಅಥವಾ $83\frac{1}{3}$ ರೂಪಾಯಿಗೆ ಮಾರಿರಬೇಕು.
ಆದರೆ, ಶೇಕಡ 40 ಪ್ರಕಾರ ಹೆಚ್ಚಾಗಿರಬೇಕಾದರೆ.

$83\frac{1}{3}$ ರೂಪಾಯಿಗೆ $83\frac{1}{3}\times\frac{40}{100}$ ರೂ ಹೆಚ್ಚು ಬರಬೇಕ

ಅಂದರೆ, $\frac{250}{3}\times\frac{\overset{4}{40}}{100}=\frac{100}{3}$ ರೂ.

$=33\frac{1}{3}$ ರೂ. ಹೆಚ್ಚು ಬರಬೇಕು

ಆದ್ದರಿಂದ $(83\frac{1}{3}+33\frac{1}{3})$ ಅಥವಾ $116\frac{2}{3}$ ರೂ ಬರಬೇಕಾಗುವದ
ಆದಕಾರಣ ಕುದುರೆಯ ಬೆಲೆಯು 100 ರೂ. ಆಗಿದ್ದರೆ, ಅವನಿಗೆ
$(116\frac{2}{3}-100)$ ಅಥವಾ $16\frac{2}{3}$ ಲಾಭ ಬರುವದು.
ಈಗ, 50 ರೂ. ಲಾಭ ಬರಬೇಕಾದರೆ ಕುದುರೆಯ ಬೆಲೆಯು ಏನಾ
ಗಿರಬೇಕೆಂಬುವದೇ ಪ್ರಶ್ನೆ.

$16\frac{2}{3}$ ರೂ. ಲಾಭ ಉಂಟಾದರೆ——ಬೆಲೆಯು 100 ರೂ.

$\therefore$ 50 ರೂ.—ಉಂಟಾಗಬೇಕಾದರೆ—ಬೆಲೆಯು

$=\frac{100\times50}{16\frac{2}{3}}$ ರೂ.

$\therefore$ ಕುದುರೆಯ ಬೆಲೆಯು = 300 ರೂಪಾಯಿಗಳು.

ನಾಯಿಯು ಮೊಲವನ್ನು ಕಂಡಾಗ, ಮೊಲವು ಎಷ್ಟು ದೂರದಲ್ಲಿ
ತ್ತಂಬುವದನ್ನು ಮುಂಚೆ ಕಂಡು ಹಿಡಿಯಬೇಕು.
ಮೊಲವು 1 ಘಂಟೆಗೆ 9 ಮೈಲಿ ಪ್ರಕಾರ ಓಡುತ್ತದೆ.
20 ಸೆಕಂಡುಗಳಲ್ಲಿ

ಅಥವಾ $\frac{1}{180}$ ಘಂಟೆಗಳಲ್ಲಿ $\frac{9}{180}$ ಮೈಲ್ ಓಡುತ್ತೆ

=88 ಗಜ.

ಆದರೆ ಮೊಲವು ಓಡುವದಕ್ಕೆ ಹುರು ಮಾಡುವಾಗ ನಾಯಿಗೂ
ಅದಕ್ಕೂ 132 ಗಜಗಳು ಬಿಟ್ಟಿದ್ದವು.
ಆದ್ದರಿಂದ ನಾಯಿಯು ಮೊಲವನ್ನು ಕಂಡಾಗ ಅದು
88+132=220 ಗಜ ದೂರದಲ್ಲಿರಬೇಕು.

ನಾಯಿಯು 1 ಘಂಟೆಯಿಲ್ಲಿ ಮೊಲಕ್ಕಿಂತ 15−9=6 ಮೈಲ್ ಹೆಚ್ಚಾಗಿ ಓಡುತ್ತದೆ.

ಆದರೆ, 6 ಮೈಲ್ ಹೆಚ್ಚಾಗಿ ಹೋಗಬೇಕಾದರೆ 1 ಘಂಟೆ ಬೇಕು.

∴ 220 ಗಜ ಅಥವಾ $\frac{1}{8}$ ಮೈಲ್ $\frac{1}{6\times8}$ ಘಂಟೆ.

$=75$ ಸೆಕಂಡು

ಗಳು ಬೇಕಾಗುತ್ತದೆ.

ಪುನಃ ನಾಯಿಯು 1 ಘಂಟೆಯಿಲ್ಲಿ 15 ಮೈಲ್ ಹೋಗುತ್ತದೆ.

∴ ... ... 75 ಸೆಕಂಡುಗಳಲ್ಲಿ $\frac{15\times75}{50\times60}$

$=\frac{3}{16}$ ಮೈಲ್ $=330$ ಗಜಗಳು ಹೋಗುತ್ತೆ.

ಆದ್ದರಿಂದ, ನಾಯಿಯು 75 ಸೆಕಂಡ್‌ಗಳಲ್ಲಿ ತಾನಿದ್ದ ಸ್ಥಳಕ್ಕೆ 330 ಗಜಗಳ ದೂರದಲ್ಲಿ, ಮೊಲವನ್ನು ಹಿಡಿಯುತ್ತದೆ.

ಎಂ. ಟಿ. ನಾರಾಯಣಯ್ಯಂಗಾರ್, ಎಂ. ಎ

ಗ ಣಿ ತ.

ಎರಡನೆಯದು :—ಗುಣ್ಯದ ಕೊನೆಯಲ್ಲ್ಯಾಗಲಿ, ಗುಣಕದ ಕೊನೆಯಲ್ಲಾಗಲಿ ಸೊನ್ನೆಗಳಿದ್ದರೆ.

ವಿಧಿ :—ಅಂತ್ಯದ ಸೊನ್ನೆಗಳನ್ನು ಬಿಟ್ಟು ಸಂಖ್ಯಾಸೂಚಕ ಅಂಕೆಗಳನ್ನೇ ಗುಣಿಸಿ ಬಂದಲಬ್ಧಕ್ಕೆ ಗುಣ್ಯ ಗುಣಕಗಳಲ್ಲಿರುವಷ್ಟು ಸೊನ್ನೆಗಳನ್ನು ಸೇರಿಸುವದು.

ಉದಾಹರಣೆ (1) 369×400

ಇಲ್ಲಿ ಗುಣಕವಾದ 400 ರ ಕೊನೆಯಲ್ಲಿ 2 ಸೊನ್ನೆಗಳಿವೆ. ಮತ್ತು $400=4\times100$.

369
4

1476 = 369 × 4

ಉತ್ತರ 147600 = 369 × 4 × 100 = 369 × 400.

(2) 650900 × 12000

ಇಲ್ಲಿ ಗುಣ್ಯ = 6509×100
ಗುಣಕ = 12×1000. } ಮತ್ತು 100 × 1000 = 1,00,000.

6509
12

78108 = 6509 × 12

ಉತ್ತರ. 7810800000 = 6509 × 12 × 100000 = 650900 × 12000.

(ಐದು ಸೊನ್ನೆಗಳನ್ನು ಸೇರಿಸಿದೆ.)

ಮೂರನಯಿದು :—ಗುಣಕದ ಬಲಿಯು 100, 1,000 10,000 ಇತ್ಯಾದಿಗಳಿಗ ಸ್ವಲ್ಪವೇ ಹೆಚ್ಚ್ಚುಕಡಿಮೆಯಾಗಿದ್ದರೆ.

೨೪ .—ಗುಣ್ಯಕ್ಕೆ ಗುಣಕದಲ್ಲಿರುವ ಸ್ಥಾನಗಳಷ್ಟು ಸೊನ್ನೆಗ ಳನ್ನುಸೇರಿಸಿ ಲಬ್ಧವನ್ನುಬರೆಯುವದು. ಗುಣಕಕ್ಕೂ 100, 1,000, 10,000, ಇತ್ಯಾದಿಗಳಿಗೂ ಇರುವ ವ್ಯತ್ಯಾಸವನ್ನು ಕಂಡುಹಿಡಿದು, ಈ ವ್ಯತ್ಯಾಸದಿಂದ ಕೊಟ್ಟ ಗುಣ್ಯವನ್ನು ಗುಣಿಸಿ ಬಂದ ಲಬ್ಧವನ್ನು ಸಂದರ್ಭಾನುಸಾರವಾಗಿ ಮೇಲೆ ಹೇಳಿದ ಲಬ್ಧಕ್ಕೆ ಸೇರಿಸುವದು, ಅಥವಾ ಅದರಲ್ಲಿ ಕಳೆಯುವದು.

ಉದಾಹರಣೆ (1) 32682 ನ್ನು 999 ರಿಂದ ಗುಣಿಸು.

32682000 = 32682 × 1000.
32682 = 32682 × 1.

ಉತ್ತರ 32649318 = 32682 × 999.

ಇಲ್ಲಿ ಗುಣಕವಾದ 999 ಕ್ಕೆ 1 ಸೇರಿದರೆ 1000 ಆಗುತ್ತೆ. ಈ 1000 ದಿಂದ ಗುಣ್ಯವಾದ 32682 ನ್ನು ಗುಣಿಸಬೇಕಾದರೆ ಅದಕ್ಕೆ 3 ಅಂದರೆ ಗುಣಕದಲ್ಲಿರುವ ಸ್ಥಾನಗಳಷ್ಟು ಸೊನ್ನೆಗಳನ್ನು ಸೇರಿಸಿದರೆ ಆಯಿತು. ಹೀಗೆ ಮಾಡುವದರಿಂದ 32682000 ಬರುವದು. ಗುಣಕವಾದ 999 ಗೂ 1000 ಕ್ಕೂ ಇರುವ ವ್ಯತ್ಯಾಸವಾದ 1 ರಿಂದ ಗುಣ್ಯವಾದ 32682 ನ್ನು ಗುಣಿಸುವದರಿಂದ 32682 ಬರುತ್ತದೆ, ಈ ಲಬ್ಧವನ್ನು 32682000 ರಲ್ಲಿ ಕಳೆದರೆ ಉಳಿಯುವ 32649318 ಎಂಬದು ಬೇಕಾದ ಉತ್ತರವಾಗಿರುತ್ತದೆ.

(2) 7218×302.

7218
300

2165400 = 7218×300
14436 = 7218×2

ಉತ್ತರ 2179836 = 7218×302.

ಇಲ್ಲಿ 300 ರಿಂದ ಗುಣಿಸಿ ಬಂದ ಲಬ್ಧಕ್ಕೆ 7218 ನ್ನು 2 ರಿಂದ ಗುಣಿಸುವದರಿಂದ ಬರುವ ಲಬ್ಧಕ್ಕೂ ಕೂಡಿದರೆ ಬೇಕಾದ ಉತ್ತರ ದೊರೆಯುವದು.

ಇರ್ಪತ್ತೇಳನೆಯ ಪಾಠ.

ಮೈಸೂರು ದೇಶಿಯ ಲೋವರ್ ಸೆಕಂಡರಿ ಪರೀಕ್ಷೆ.

ವ್ಯವಸಾಯಶಾಸ್ತ್ರ.

ಎಚ್ಚರಿಕೆ. 1. ವ್ಯಾಕರಣಾನುಸಾರವಾಗಿಯೂ ವಿರಳವಾಗಿಯೂ, ಶುಚಿಯಾಗಿಯೂ ಬರೆಯಬೇಕು. ಇಡಕೊಳ್ಳೀಸ್ಕರ 10 ನಂಬರು

ಗಳನ್ನು ಕೊಡುತ್ತೆ.

2. ಉಪಯೋಗವಿಲ್ಲದ ಉತ್ತರಗಳನ್ನು ಬರೆಯುವದಕ್ಕಿಂತಲೂ; ಪ್ರಶ್ನೆಗಳಿಗನುಸಾರವಾದ ಉತ್ತರಗಳನ್ನು ಸರಿಯಾಗಿ ಬರೆಯುವದರಿಂದ ಹೆಚ್ಚಾದ ನುಬರುಗಳನ್ನು ಪಡೆಯಬಹುದು.

I. ಮೈಸೂರು ಶೀಮೆಯಲ್ಲಿರುವ ಮಂಣುಗಳನ್ನು ವಿಂಗಡಿಸಿ ಸಂಕ್ಷೇಪವಾಗಿ ವಿವರಿಸಿ 9

II. (ಅ) ಸಾಮಾನ್ಯ, ವಿಶೇಷ ಗೊಬ್ಬರಗಳಂದರೇನು? ಉದಾಹರಣೆ ಕೊಡಿ. 4

(ಆ) ವಿಷಾನುಗೊಬ್ಬರ, ಪೆಪ್ಟೋಪ್ಪು, ಬೂದಿ, ಅಮೇಧ್ಯ ಇವುಗಳು ಯಾವ ಯಾವ ಪೈರುಗಳಿಗೆ ಅನುಕೂಲವಾಗಿವೆ? ಎಕರೆ 1 ಕ್ಕೆ ಎಷ್ಟು ಹಾಕಬೇಕು? 12

III. (ಅ) ದೇಶೀಯ ನೇಗಿಲಿನ ಭಾಗಗಳ ಹೆಸರುಗಳನ್ನು ಮಾತ್ರ ಬರೆಯಿರಿ? 4

(ಆ) ಧಾನ್ಯಗೋಪನಕ್ಕೂ, ಬೆಲ್ಲ ಮಾಡುವದಕ್ಕೂ ಬೇಕಾದ ಉಪಕರಣಗಳನ್ನು ತಿಳಿಸಿ? 7

(ಇ) ಬಿತ್ತುವ ಕ್ರಮಗಳು ಯಾವವು? 2

IV. (ಅ) ಒಳ್ಳೇ ಜಾತಿ ದನಗಳ ಅಂಗ ಲಕ್ಷಣಗಳನ್ನು ವಿವರಿಸಿ? 10

(ಆ) ಪಶುಗಳಲ್ಲಿ ಯಾವ ಯಾವ ಗುಣಗಳನ್ನು ಹೆಚ್ಚಿಸುವದರಲ್ಲಿ ಪಶುಪಾಲಕನು ದೃಷ್ಟಿ ಇಡಬೇಕು? 8

V. (1) ಧಾನ್ಯಗಳು, 2 ದ್ವಿದಳಗಳು, 3 ಎಣ್ಣೆ ಕಾಳುಗಳು, 4 ರಂಗು ಪೈರುಗಳು, 5 ಶಾಕಗಳು, 6 ಹಣ್ಣುಗಳು 7 ಮೇವುಪೈರುಗಳು, 8 ಸಂಬಾರಪೈರುಗಳು, 9

ಧ್ಯನ ಪೈರುಗಳು, 10 ಬೀನು ಪೈರುಗಳು, 11 ನಾರು ಪೈರುಗಳು, ಇವುಗಳಲ್ಲಿ ಒಂದೊಂದಕ್ಕೆ ಮೂರು ಮೂರು ಉಪಾಹರಣೆಗಳನ್ನು ಕೊಡಿ. 16

VI. (ಅ) ಪರಿವರ್ತನೆ ಅಂದರೇನು ? ಪರಿವರ್ತನೆಯ ಮುಖ್ಯ ಉದ್ದೇಶಗಳೇನು ? ವಿವರಿಸಿ ಬರೆಯಿರಿ. 15

(ಆ) ಬೀಳು ಬಿಡುವದರಿಂದ ಪ್ರಯೋಜನವೇನು ? 3

ಆರೋಗ್ಯಶಾಸ್ತ್ರ.

I. ಶ್ವಾಸ ಕೋಶಗಳೊಳಕ್ಕೆ ಹೋಗುವ ವಾಯುವಿಗೂ ಶ್ವಾಸ ಕೋಶಗಳಿಂದ ಹೊರಗೆ ಬರುವ ವಾಯುವಿಗೂ ಇರುವ ಮುಖ್ಯ ಭೇದಗಳನ್ನೂ ಆ ಭೇದಗಳನ್ನು ಸುಲಭವಾಗಿ ಕಂಡು ಹಿಡಿಯುವ ರೀತಿಗಳನ್ನೂ ತಿಳಿಸಿರಿ. 20

II. (*a*) ಕೆಟ್ಟ ನೀರನ್ನು ಕುಡಿಯುವದರಿಂದ ಉಂಟಾಗ ಬಹುದಾದ ರೋಗಗಳ್ಯಾವವು ? 6

(*b*) ಸುಲಭವಾಗಿಯೂ, ಬಹಳ ಖರ್ಚಿಲ್ಲದೆಯೂ, ನೀರನ್ನು ಎಲ್ಲರ ಮನೆಯಲ್ಲಿಯೂ ಶುದ್ಧಿ ಮಾಡಬಹುದಾದ ಮಾರ್ಗವನ್ನು ವಿಶದವಾಗಿಯೂ, ಸಕಾರಣವಾಗಿಯೂ ಬರೆಯಿರಿ. 24

III. ಹಾಲಿನಲ್ಲಿರುವ ಬಗೆ ಬಗೆ ವಸ್ತುಗಳು ಎಷ್ಟೆಷ್ಟಿರ್ಪವು ? ಹೆತ್ತತಾಯಿ ಇಲ್ಲದ ಎಳೇ ಮಕ್ಕಳಿಗೆ ಹಸುವಿನ ಹಾಲನ್ನು ಕೊಡುವದು ಹ್ಯಾಗೆ ? 12

IV. ದೇಹದಲ್ಲಿ ರಕ್ತವು ಒಂದೇ ಕಡೆ ನಿಲ್ಲದೆ ಸದಾ ವೇಗವಾಗಿ ಚಲಿಸುವದರಿಂದಾಗುವ ಪ್ರಯೋಜನಗಳನ್ನು ತಿಳಿಸಿರಿ. 18

V. ಚಳಿ ಜ್ವರವು ನೆಲೆಗೊಂಡಿರುವ ಸ್ಥಳದಲ್ಲಿ ವಾಸ ಮಾಡ ಬೇಕಾಗಿ ಬಂದು, ಚಳಿ ಜ್ವರವು ಬಾರದ ಹಾಗೆ ಮಾಡಿ ಕೊಳ್ಳಬೇಕಾದ ಉಪಾಯಗಳನ್ನು ಹೇಳಿರಿ. 20

ಸನ್ಮಿತ್ರರು.

ಕ್ಲೆಬರ್ಗ್‌ನಲ್ಲಿರುವ ಒಂದು ಪಾಠಶಾಲೆಗೆ ಅಧ್ಯಕ್ಷರಾಗಿದ್ದ ಡಾಕ್ಟರ್ ನ್ಯಾಥನೆಯಲ್‌ಪ್ರೆಂಟಿಸ್ ಎಂಬುವರು, 'ಬೋಧಿಸುತಕ್ಕ ಕಾಲದಲ್ಲಿ ಪಿಸಿ ಪಿಸಿ ಮಾತನಾಡತಕ್ಕ ವಿದ್ಯಾರ್ಥಿಗಳಿಗೆ ಬಲವಾಗಿ ಏಟುಗಳನ್ನು ಹೊಡೆಯುವೆವು' ಎಂದು ಒಂದು ದಿವಸ ಹೇಳಿದರು. ಹಾಗೆ ಪಿಸಿಗುಟ್ಟುವವರು ತಪ್ಪಿಸಿಕೊಳ್ಳದಂತೆ ಕಂಡು ಹಿಡಿಯುವದಕ್ಕಾಗಿ, ಪ್ರತಿ ತರಗತಿಯಲ್ಲಿಯೂ ಮೂರು ಮಂದಿ ನುರಿತ ಹುಡುಗರನ್ನು ಗೊತ್ತುಮಾಡಿದರು.

ಈ ವಿಧಿಮಾಡಿದ ಸ್ವಲ್ಪ ಹೊತ್ತಿನಲ್ಲಿಯೇ ಒಬ್ಬ ಹುಡುಗನು ಎದ್ದು ನಿಂತು—

'ಜಾಕ್ ಜಿಗ್ಸಲರ್ ಪಿಸುಗುಟ್ಟುತಲಿದ್ದಾನೆ' ಎಂದು ಹೇಳಿದನು. ಜಾಕ್ ಜಿಗ್ಸಲರ್‌ನನ್ನು ಅಧ್ಯಕ್ಷರು ಕರೆದು ಕೇಳಿದ್ದಕ್ಕೆ ಜಾಕ್ ಜಿಗ್ಸಲರನು "ಹೌದು, ನಾನು ಪಿಸುಗುಟ್ಟುತಲಿದ್ದುದುಂಟು. ಆದರೆ ತಮ್ಮ ಆಜ್ಞೆಗೆ ವಿರೋಧವಾಗಿ ಪಿಸುಗುಟ್ಟುತಲಿದೇನೆಂಬುವದನ್ನೇ ಮರೆತು ಬಿಟ್ಟೆನು. ನಾನು ಒಂದು ಲಿಖ್ಖವನ್ನು ಮಾಡುತಲಿದ್ದೆನಾದಕಾರಣ, ಅದರ ಯೋಚನೆಯಲ್ಲಿಯೇ ಮಗ್ನನಾಗಿದ್ದುದರಿಂದ, ಗಣಿತದಲ್ಲಿ ಒಂದು ಸೂತ್ರವನ್ನು ಹುಡುಕಲು ನನ್ನ ಪಕ್ಕದಲ್ಲಿದ್ದ ಹುಡುಗನಿಗೆ ಗಣಿತವನ್ನು ಕೊಡೆಂದು ಕೇಳಿದೆನು."

ಆದರೆ ಜಾಕ್ ಎಂಬುವನಲ್ಲಿ ಡಾಕ್ಟರ್ ಪ್ರೆಂಟಿಸ್‌ಗೂ, ಎಲ್ಲಾ ವಿದ್ಯಾರ್ಥಿಗಳಿಗೂ ತುಂಬಾ ವಿಶ್ವಾಸವಿತ್ತು; ಅಧ್ಯಕ್ಷರು ತಾವು ಚೆನ್ನಾಗಿ ಯೋಚಿಸದೇ ಮಾಡಿದ ಆಜ್ಞೆಗಾಗಿ ತುಂಬಾ ಪಶ್ಚಾತ್ತಾಪ ಪಟ್ಟರು ಜಾಕ್

ಎಂಬುವನು ಅಧ್ಯಕ್ಷರ ವಿಶ್ವಾಸಕ್ಕೆ ವಿಶೇಷ ಪಾತ್ರನಾದಾಗ್ಯೂ, ಅವನು ಪಿಸುಗುಟ್ಟ್ಟದ್ದು ತಪ್ಪೆಂತಲೂ, ಅದಕ್ಕಾಗಿ ಅವನನ್ನು ಶಿಕ್ಷಿಸುವೆವೆಂತಲೂ ಹೇಳಿದರು. ಯಾತಕ್ಕೆಂದರೆ ಉಪಾಧ್ಯಾಯರು, ಇಂಥಾ ತಪ್ಪಿತಕ್ಕೆ ಇಂಥ ಶಿಕ್ಷೆ ಎಂದು ವಿಧಿಸುವದಕ್ಕಿಂತ ಮುಂಚಿತವಾಗಿ ಚೆನ್ನಾಗಿ ಆಲೋಚಿಸಿ ವಿಧಿಸಬೇಕು. ವಿಮರ್ಶೆಯಿಂದ ವಿಧಿಸಿದ ಶಿಕ್ಷೆಯನ್ನು ಸೆರವೇರಿಸಲು ಹಿಂದೆಗೆಯ ಕೂಡದು. ಆದುದರಿಂದ ಪಾಠಶಾಲೆಗೆ ಅಧ್ಯಕ್ಷರಾದ ತಾವೀ ಮಾಡಿದ ವಿಧಿಯನ್ನು ಅನುಸರಿಸದೇ ಹೋಗುವುದು ಬಹಳ ಅನುಚಿತವೆಂದು ಚಿಂತಿಸುತಾ ಬಾಲಕನ ಕಡೆಗೆ ತಿರುಗಿ ' ನನುಗೇನೋ ನಿನ್ನನ್ನು ಮನ್ನಿಸಲು ವಿಶೇಷ ಆಲಾಪೆಯುಂಟು, ಆದರೆ ನಾವು ವಿಧಿಸಿದ ಆಜ್ಞೆಯನ್ನು ಹಿಂದೆ ಯಲಾರೆವು ಈಗ ಈ ತರಗತಿಯಲ್ಲಿ ಯಾರಾದರೂ ನಿನ್ನ ಮನಸ್ಸಿಗೆ ಒಪ್ಪುವ ಮೂರು ಮಂದಿ, ಬಾಲಕರನ್ನು ನೀನೇ ಚುನಾಯಿಸು. ನಾವು ನಿನ್ನನ್ನು ಈಗ ಶಿಕ್ಷಿಸಬೇಕೋ ಇಲ್ಲವೋ ಎಂಬುವದನ್ನು ನಿಷ್ಕರ್ಷಿಸಲು ಅವರ ಅನುಮತಿಗೆ ಬಿಡುವೆವು,' ಎನ್ನಲು ಜಾರ್ಜನು ಇದಕ್ಕೆ ಸಮ್ಮತಿಸಿ ಮೂರುಮಂದಿ ಹುಡುಗರನ್ನು ಕರೆದನು. ಅವರು ಒಟ್ಟಿಗೆ ಸೇರಿ ಸ್ವಲ್ಪ ಹೊತ್ತು ಆಲೋಚಿಸಿ ಅಧ್ಯಕ್ಷರ ಬಳಿಗೆ ಬಂದು ಹೀಗೆಂದರು.

' ಅಧ್ಯಕ್ಷರು ವಿಧಿಸಿದಂತೆಯೇ ನಡೆಯಬೇಕು. ಜಾರ್ಜನು ಆ ಶಿಕ್ಷೆಯನ್ನು ಅನುಭವಿಸಲೇಬೇಕು; ಆದರೆ ಅವನಿಗೆ ಬದುಲಾಗಿ ಇತರರು ಯಾರಾದರು ತಾವಾಗಿಯೇ ಆದಂಡನೆಗೆ ಒಳಗಾಗುವೆವು ಎಂದು ಬಂದರೆ ಜಾರ್ಜನನ್ನು ಮನ್ನಿಸಿ ಅವರನ್ನು ಶಿಕ್ಷಿಸಬೇಕು. ಆಶಿಕ್ಷೆಯನ್ನು ಅನುಭವಿಸಲು ನಾವು ಮುನ್ನ್ವರೂ ಸಿದ್ಧರಾಗಿರುವೆವು ' ಎಂದು ಪ್ರತಿಯೊಬ್ಬನೂ ಕೈಯನ್ನು ನೀಡಲು

ಜಾರ್ಜನು ಥಟ್ಟನೆ ಮುಂದಕ್ಕೆ ಬಂದು ತನ್ನ ಕೈಯನ್ನು ಚಾಚಿ " ಎಂದಿಗೂ ಆಗದು, ಎಂದಿಗೂ ಆಗದು. ಅಯ್ಯಾ ಇವರಿಗೆ ಒಂದು ಪೆಟ್ಟಾದರೂ ಹೊಡೆಯಲಾಗದು. ನಾನೇ ಶಿಕ್ಷೆಯನ್ನು ಅನುಭವಿಸಲಿಕ್ಕೆ ಸಿದ್ಧನಾಗಿರುವೆನು. " ಎನ್ನಲು

ಮುಖವನ್ನು ಒರಿಸಿಕೊಳ್ಳುವ ನೆಪದಿಂದ, ನೀರು ತುಂಬಿದ ತನ್ನ ಎರಡು ಕಣ್ಣುಗಳನ್ನು ಮುಚ್ಚಿ ಕೊಂಡು ಅಧ್ಯಕ್ಷರು ನಾಲ್ಕು ಮಂದಿಗೂ

ತನ್ಮತನ್ಮ ಸ್ಥಳಗಳಿಗೆ ಹೋಗಿರೆಂದು ಹೇಳಿ, ತಾವು ಜೀವಂತರಾಗಿರುವ ನಲಿಗೂ ಇಂದು ನಡೆದುದನ್ನು ಮರೆಯಲಾರವೆಂದು ಹೇಳಿದರು.

ಮಾತೃಭಕ್ತಿ.

೧. ಹಿಂದುಸ್ಥಾನಿಕಾಪಿ. ಆದಿತಾಳ.

ಮಾತೆಯಪ್ರೀತಿಸು । ರಾಜಾನನೆ ॥ಪ್ಲ॥ ಸಾಜದಿಂ। ರಾಜೀವಲೋಚನೆ
ಸುವಚನೆ ॥೨॥

ಪಡುಕಷ್ಟನನ್ನು । ಪಡುತೆ ನನವಾಸವುಂ ॥
ಪ್ರೌಢೆಯುಳ್ಳಾತ್ರ ನಿನ್ನ । ಪಡೆದಾಕೆಯನ್ನು ತಡೆಯದೆ ॥ ೧ ॥

ನಿನ್ನಯ ಸಹ್ಯತೆ । ಯೆನ್ನು ಸೈರಿಸಿಕೊಂಡು ॥
ನಿನ್ನತಪ್ಪೀನುದಿಂ । ಮನ್ನಿಸಿ ಸಾಕಿದ ಜನನಿಯ ॥ ॥೨॥

ಪಾಡುತೆನಿನಗೆ ಪಾ । ಲೂಡಿಕೊಂಡಾಡುತ ॥
ಕಡಿಸುತಪ್ಪಿ ಮು । ದ್ದಾಡುತ್ತ ನಲಿವಿಸಿ ಮಾತೆಯ ॥ ॥೩॥

ಬಗೆಯುಗುವಂತೆ । ಸೊಗಸುಮೆಲ್ನುಡಿಯಾಡಿ ॥
ಬಗೆಯೊಳಗುಗುವಿಗುವ । ಸೊಗದೊಳೋಲಾಡಿದ ಜನನಿಯ ॥ ೪ ॥

ನೆವಿಮ್ಮಗೊಡೆಯನು ನೀ । ಸೊಮ್ಮೆದಟ್ಟಡಿಯಿಡಲು ॥
ಸುಮ್ಮಾನವಿಂನೋಡಿ । ದಮ್ಮಯ್ಯಬಾರೆಂದೊರೆದಳ ॥ ॥೫॥

ಉಡುಗೆಯನುಡಿಸುತ್ತ । ತೊಡುಗೆಯತೊಡಿಸುತ್ತ ॥
ಬಿಡದೆತ್ತಿಕೊಂಡು ನಿನ್ನ । ನಡಿಗಡಿಗಾಡಿಸಿ ಪ್ರೌರೆದಳ ॥ ॥೬॥

ತೊಟ್ಟಲೊಳ್ಮಲಗಿಸಿ । ತಟ್ಟುತಜೋಗುಳವ ॥
ಥಟ್ಟನೆ ಪಾಡಿಪ್ರೊಗಳುತೆ । ನೆಟ್ಟನೆ ತೂಗಿದ ಜನನಿಯ ॥ ॥೭॥

ದಿಟ್ಟತಾಕಿಹುದೆಂದು । ನೆಟ್ಟಗೆಗಳಮುರಿದು ॥
ಥಟ್ಟನಾರತಿವಾಡಿ । ಬಟ್ಟನ್ನು ಹಚ್ಚಿದ ಮಾತೆಯ ॥ ॥೮॥

ಪೊಗಸರಿಗುಂಬಿರೆ । ಧಿಗಿಲಾಂತು ಬೀಗದಿಂ ॥
ಬಗೆಬಗೆಯೌಷಧಿಯ । ಪಗರಿರುಳೀಯುತ ಪೊರೆದಳ ॥ ॥೯॥
ಶೀಲಸುಗುಣರೂಪ । ಶಾಲಿನರನ ಪ್ರಿಯಕಿ ॥
ಬಾಲೆಯೆನಿನ್ನನಿತ್ತು । ಮೇಲಾಗಿ ಮದುವೆಗೈದಳ ॥ ॥೧೦॥
ಪತಿಗನುಕೂಲೆಯಾ । ಗುತೆ ಗುರುಜನಕೆ ಸಂ ॥
ಮತಳಾಗಿ ಬಾಳಿಂದು ಪಿತಬೋಧೆಯನ್ನುಗೈದಳ ॥ ॥೧೧॥
ಜಾಣೆಯು ಮಾಡಿರುವ । ವಿನದೊಂದರುಪಕೃತಿಗೆ ॥
ಅನುಗಾಲವುಂ ಪ್ರತಿಯು । ನನುಗೆಯ್ದೊಡಂ ಸರಿಯಾಗದು ॥ ॥೧೨॥
ಭಯಭಕ್ತಿನೀತಿವಿನಯ । ನಯದಿಂದೆ ನೀನಿರೆ ॥
ದಯೆಮಾಡುನಗು ನಿನ್ನೊಳ್ । ಜಯನಾತಸಿಹ್ಮನು ಮಾತೆಯ ॥೧೩॥

ಜಯರಾಯಾಚಾರ್.

ಸಮಾಚಾರಗಳು ಮತ್ತು ಸೂಚನೆಗಳು.

ಗೌರವಮೆಂಟ ಸಾರ್ವಜನಿಕ ಸ್ಕೂಲು, ಕಳೆದ ಜನವರಿ ೧೦ನೇ ತಾರೀಖಿನಿಂದ ಆರಂಭವಾಯಿತು. ಮ|ಕೆ. ನಾರಣಯ್ಯಂಗಾರ, ಬಿ. ಎ. ಸೆಡ್ಯಾಸ್ಟರಾಗಿಯೂ, ಮ|ಡಿ. ವೆಂಕಟರಾಮಯ್ಯ ಬಿ. ಎ, ಮ| ತಿರುಮಲಾಚಾರ್ಯರು, ಪಂಡಿತ ಶ್ರೀಕಂಠಶಾಸ್ತ್ರಿಗಳು ಮ| ಬಿ. ಮಲ್ಲಪ್ಪನವರು, ಪಂಡಿತ ಶ್ರೀನಿವಾಸರಾಘವಾಚಾರ್ಯರು, ಮ| ಯಲ್. ಸುಬ್ಬರಾಯರು, ಸಹಾಯೋಪಾಧ್ಯಾಯರಾಗಿಯೂ ನಿಯಮಿಸಲ್ಪಟ್ಟಿದ್ದಾರೆ. ಲೊವರ್‌ಸಕೆಂಡರಿ ತರಗತಿಯೊಂದು, ಉಪಾಧ್ಯಾಯರ ತರಗತಿ ಎರಡು, ಪಂಡಿತ ತರಗತಿ ಎರಡು, ಹೀಗೆ ಐದು ತರಗತಿಗಳು ವಿಭಾಗಿಸಲ್ಪಟ್ಟಿವೆ. ಲೊವರ್ ಸಕೆಂಡರಿತರಗತಿಗೆ ಸೇರುವುದಕ್ಕೆ ೪ನೇ ತರಗತಿಯ ಪರಿಕ್ಷೆಯು ಉಪಾಧ್ಯಾಯರ ವೊದಲನೇ ವರುಷದ ತರಗತಿಗೆ ಲೊವರ್ ಸಕೆಂಡರಿಪರಿಕ್ಷೆಯು, ಪಂಡಿತರ ವೊದಲನೇ ವರುಷದ ತರಗತಿಗೆ ಉಪಾಧ್ಯಾಯ ಪರಿಕ್ಷೆಯೂ, ಆಗಿರಬೇಕೆಂದು ವಿಧಿಸಲ್ಪಟ್ಟಿದೆ. ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ೧೦೦ಕ್ಕೆ ಹೆಚ್ಚ ಕೂಡದು. ಇದರಲ್ಲಿ ೭೦ಜನರಿಗೆ ವೇತನಗಳು ದೊರೆಯುತ್ತವೆ. ಲೊವರ್‌ಸಕೆಂಡರಿ ತರಗತಿಯಲ್ಲಿ ಮಾಹೇಯಾನ ೫ ರೂಪಾಯಿಪ್ರಕಾರ ೨೬ ವೇತನಗಳು, ಉಪಾಧ್ಯಾಯರ ತರಗತಿಗಳಲ್ಲಿ ೬ ರೂಪಾಯಿಪ್ರಕಾರ ೩೪ ವೇತನಗಳು, ಪಂಡಿತರ ತರಗತಿಗಳಲ್ಲಿ ೭ ರೂಪಾಯಿಪ್ರಕಾರ ೮ ವೇತನಗಳು ಕೊಡಲ್ಪಡುವವು. ಈ ವೇತನಗಳಲ್ಲಿ ೧೦ ವುಸಲ್ಮಾನರಿಗೆಂದು ಪ್ರತ್ಯೇಕಿಸಲ್ಪಟ್ಟಿವೆ.

ಕಳೆದ ಜನವರಿ ೪ನೇ ತಾ॥ನಲ್ಲಿ ಮದರಾಸು ಆಧಿಪತ್ಯದಲ್ಲಿ ವಿದ್ಯಾಶಾಲೆಗಳಇನ್ಸ್ಪೆಕ್ಟರಾಗಿದ್ದ ಬ್ರಾಡಷಾ ಸಾಹೇಬರು ವಾಂತಿಭೇದಿಯಿಂದ ಮರಣವನ್ನು ಹೊಂದಿದರು.

ಸರಕಾರದ ಊದ್ಯೋಗವನ್ನು ಪಡೆಯುವದಕ್ಕೋಸ್ಕರವೇ ವಿದ್ಯಾಭ್ಯಾಸವೆಂದು ಬಹು ಜನರು ಭಾವಿಸುತ್ತಾರೆ. ಇದು ತಪ್ಪು ಅಭಿಪ್ರಾಯವೆಂಬುವುದಕ್ಕೆ ಸಂಶಯವಿಲ್ಲ. ಲೋಕವ್ಯವಹಾರವನ್ನೂ, ತಾರತಮ್ಯಜ್ಞಾನವನ್ನೂ ಪಡೆಯುವುದಕ್ಕೆ ವಿದ್ಯಾಭ್ಯಾಸವಮಾಡಬೇಕೇಹೊರತು, ಸರಕಾರದಲ್ಲಿ ನೌಕರಿಯನ್ನು ಪಡೆಯುವದೇವು ಉದ್ದೇಶವೆಂದು ತಿಳಿದುಕೊಳ್ಳಕೂಡದು. ಇದಲ್ಲದೆ ಸರಕಾರದವರು ಪರೀಕ್ಷೆಯಾದವರಿಗೆಲ್ಲ ನೌಕರಿಯನ್ನು ಹೊಂದಿಸಿಕೊಡಬೇಕೆಂದರೆ ಎಂದಿಗೂ ಪರೀಕ್ಷೆಯಾದವರ ಸಂಖ್ಯೆಯು ಕೊನೆಗಾಣುವದಿಲ್ಲ.

ನಾರ್ಮಲ್‌ಸ್ಕೂಲು ಹೆಡ್‌ಮಾಸ್ಟರಾಗಿ ನಿಯಮಿಸಲ್ಪಟ್ಟ ಮಾ॥ ನಾರಣಯ್ಯಂಗಾರ್ಯರ ಬದಲಿ ಮಹಾರಾಜರ ಕಾಲೇಜಿನಲ್ಲಿ ಮಾ॥ ಬಿ. ದಾಸಪ್ಪ ಬಿ ಎ. ಅವರು ಮಾಸ್ಟರಾಗಿ ನಿಯಮಿಸಲ್ಪಟ್ಟಿದಾರೆ.

ತುರುವೆಕೆರೆ ಗಾ॥ ಕನ್ನಡಸ್ಕೂಲ್ ಹೆಡ್‌ಮಾಸ್ಟರಾಗಿದ್ದ ವೆಂಕಟ್ರಾಮಯ್ಯನವರು ವಾಂತಿಭೇದಿ ಉಪದ್ರವದಿಂದ ಜನವರಿ ೧೬ ನೇ ತಾರೀಖಿನಲ್ಲಿ ಕಾಲಾಧೀನರಾದರು.

ನಾರ್ಮಲ್‌ಸ್ಕೂಲ್ ವಿದ್ಯಾರ್ಥಿಗಳಿಗೆ ಅನುಕೂಲಪಡಿಸುವದಕ್ಕಾಗಿ, ಮೈಸೂರಲ್ಲಿ ವಿದ್ಯಾರ್ಥಿಗಳ ಭೋಜನಶಾಲೆಯೊಂದು ಸ್ಥಾಪಿಸಲ್ಪಟ್ಟಿದೆ. ಮನೆ ಬಾಡಿಗೆ, ಆಳುಗಳ ಸಂಬಳ ವಾತ್ತು ಪಾತ್ರೆಗಳ ಕ್ರಯ ಇವುಗಳನ್ನು ಸರಕಾರದವರು ಕೊಡುತ್ತಾರೆ. ಮಿಕ್ಕ ಖರ್ಚನ್ನು ವಿದ್ಯಾರ್ಥಿಗಳು ಸಮವಾಗಿ ಹಂಚಿ ಕೊಡಬೇಕಾಗುತ್ತೆ. ಇದರವಿಚಾರಣೆಗಾಗಿ ಮಾ॥ ವೆಂಕಟಕೃಷ್ಣಯ್ಯ, ಮಾ॥ ವೆಂಕಟಶ್ಯಾನುಯ್ಯ, ಮಾ॥ ನಾರಣಯ್ಯಂಗಾರ್ಯರು, ಮಾ॥ ಆರವುಗಂವೊದಲ್ಲಿಯಾರು ನಿಯಮಿಸಲ್ಪಟ್ಟಿದಾರೆ. ಸ್ಥಳವಿದ್ದಪಕ್ಷದಲ್ಲಿ ಮಹಾರಾಜರ ಕಾಲೇಜ್ ವಿದ್ಯಾರ್ಥಿಗಳು ಸೇರಬಹುದು. ಸರಕಾರವವರು ಮಾಡಿದ ಈ ಉಪಕಾರಕ್ಕೆ ಎಲ್ಲರೂ ಕೃತಜ್ಞರಾಗಿರಬೇಕು. ವಿದ್ಯಾಭ್ಯಾಸದ ಇಲಾಖಾಕ್ಯಟರಿ ಮಾ॥ ಭಾಭಾಸಾಹೇಬರು ಈ ವಿಷಯದಲ್ಲಿ ಬಹು ಪ್ರೋತ್ಸಾಹವುಳ್ಳವರಾಗಿದಾರೆ.

ಕಿಟಲ್ ಸಾಹೇಬರ ಕನ್ನಡ ಇಂಗ್ಲೀಷ್ ನಿಘಂಟು ಕ್ರಯಕ್ಕೆ ಸಿದ್ಧವಾಗಿದೆ. ಪ್ರತಿಯ ಕ್ರಯವು ೧೬ ರುಪಾಯಿ. ಮಂಗಳೂರಲ್ಲಿ ಜೇಸಲ್‌ಮಿಷನ್ ಪ್ರೆಸ್ಸಿನಲ್ಲಿ ದೊರೆಯುತ್ತೆ.

ಕಳೆದ ಲೋವರ್‌ಸರ್ಕಂಡರಿ ಪರೀಕ್ಷೆಯಲ್ಲಿ ೪೪೫ ಜನರು ತೇರ್ಗಡೆಯಾದರು. ಅವರಲ್ಲಿ ೯ ಜನರು ವಿದ್ಯಾರ್ಥಿನಿಯರು, ಮಹಾರಾಣಿಯವರ ಬಾಲಿಕಾ ಪಾಠಶಾಲೆಗೆ ಸೇರಿದವರು ೬ ಮಂದಿ—ಲಕ್ಷ್ಮಕ್ಕ, ಜಾನಕಮ್ಮ, ಅಲಮೇಲಮ್ಮ, ಭಾಗೀರಥಮ್ಮ, ಗೌರಮ್ಮ, ನರಸಮ್ಮ; ಬೆಂಗಳೂರ ಗೌಮೆಂಟು ಗರಲ್‌ಸ್ಕೂಲಿಗೆ ಸೇರಿದವರು ಮೂಂದಿ—ಸೀತಮ್ಮ, ಲಕ್ಷ್ಮಮ್ಮ, ಮೇಲಮ್ಮ.

ಉಪಾಧ್ಯಾಯರ ಪರೀಕ್ಷೆಯಲ್ಲಿ ೨೯ ಜನರು ತೇರ್ಗಡೆಯಾದರು,

ವಿದ್ಯಾದಾಯಿನಿ.

ಭಾಗ ೨. ಮಾರ್ಚಿ ೧೮೯೪. [ಸಂಚಿಕೆ ೩.

ಕಿಂಡರ್‌ಗಾರ್ಟನ್ (ಭಾಷಾಂತರವು.)

ಅನ್ನಭಾರವನ್ನು ಸರಿಯಾಗದೇ ಗೋಡೆಯ ದಾರ್ಢ್ಯವನ್ನವೇ ಕ್ಷೀಸಿದ ಶಿಲ್ಪಿಗನನ್ನು ಯಾರುತಾನೆ ಬುದ್ಧಿವಂತನೆನ್ನುವರು? ಬಾಲ್ಯದಲ್ಲಿ ಮಕ್ಕಳ ವಿದ್ಯಾಭ್ಯಾಸದ ಮಾರ್ಗವನ್ನು ಸರಿಪಡಿಸದೆ ಉತ್ತರೋತ್ತರ ಬಲ್ಲಿ ಗುಣಹೀನರಾದರಲ್ಲ! ಮೂರ್ಖರಾದರಲ್ಲ! ಕುಶಲವಿಲ್ಲದವಲ್ಲ! ಎಂದು ಸುಯ್ಯುವ ತಾಯಿತಂದೆಗಳ ಪಡುಪಾಟನ್ನು ವೇರಿನ ಮೂಢಶಿಲ್ಪಿಗನ ಚಾತುರ್ಯಕ್ಕೆ ಸಮನೆಂದು ಹೇಳುವುದು ಅನ್ಯಾಯವೇನೂ ಅಲ್ಲವು ಗಿಡವಾಗಿ ಬಾಗದದು ಮರವಾಗಿ ಬಾಗುವುದೆ ಎಂಬ ನಾಣ್ಣುಡಿಯಂತೆ ಏನಿದ್ದರೂ ಬಾಲಶಿಕ್ಷೆಯೆ ಅಮೋಘವು. ಅಂತಾ ಬಾಲಶಿಕ್ಷೆಗೆ ಅತ್ಯುತ್ತಮವೆನಿಸಿಕೊಂಡಿರುವ ಫ್ರೀಡರ್ ಗಾರ್ಟನ್ ಎಂಬ ಬಾಲಶಿಕ್ಷಾಕ್ರಮವನ್ನು ಸಂಕ್ಷೇಪಿಸಿ ಇಲ್ಲಿ ತೋರಿಸಿದೆ.

ವೈದ್ಯನು ಚೆನ್ನಾಗಿ ರೋಗಿಯ ರೋಗವನ್ನು ತಿಳಿದಮೇಲೆ ತನ್ನಲ್ಲಿರುವ ಔಷಧವ ಗುಣವನ್ನಾಲೋಚಿಸಿ ಅದಕ್ಕಿದು ತಕ್ಕುದೆಂದು ನಿರಾತಂಕವಾಗಿ ಔಷಧವನ್ನು ಪ್ರಯೋಗಿಸುವನು:—ಹಾಗೆಯೆ ಮಕ್ಕಳಸ್ವಭಾವವೆಂತಾದುದೆಂದು ತಿಳಿದಹೊರತು ಸಹಜಶಕ್ತಿಗಳ ದಾರ್ಢ್ಯಕಾರಕವಾದ ಮಾರ್ಗವನ್ನು ಆಲೋಚಿಸಲಾಗುವುದೆ? ಮಕ್ಕಳಸ್ವಭಾವ ತಿಳಿದಮೇಲೆ ಕಿಂಡರ್‌ಗಾರ್ಟನೆಂಬ ಬಾಲಶಿಕ್ಷಾಕ್ರಮವೆಷ್ಟು ಒಳ್ಳೆತೆಂಬುದು ಸರ್ವರ ಚಿತ್ತಕ್ಕೆ ತಟ್ಟುವುದು.

ಮಕ್ಕಳಿಗೆ ಬೇಕಾದುದೇನೆಂದರೆ. ಯಾವಾಗಲೂ ತೊಡಗಿರುವಂತೆ ಮಾಡುವ ಒಂದುದ್ಯೋಗವು ಕೇವಲಸಗತ್ಯನಿರುವುದು. ಆರೋಗ್ಯಶಾಲಿಗಳಾದ ಮಕ್ಕಳು ಎಡೆಬಿಡದೆ ಚಟುವಟಿಕೆಯುಳ್ಳವರೆಂದು ಸರ್ವರೂ ಒಪ್ಪುವ

ವರು. ಅವರ ಆಲೋಚನಾಶಕ್ತಿ ತಲೆಯಾಡುವಂತೆ ವಿಷಯಗಳು, ಅವರ ವಿಜ್ಞಾ
ಯಜ್ಞಾನವು ಹಬ್ಬುವಂತೆ ಸಾಮಗ್ರಿಯುಸಾಧನವು, ಅವರ ವಿನವಿನದ ಎಗೆತನ
ವೆಲ್ಲವು ಇಂತಿರಬೇಕೆಂಬುದನ್ನು ತೋರಿಸುವ ಲಕ್ಷ್ಯಪ್ರದರ್ಶನಗಳಾದ ಕಥೆ
ಗಳು, ಚಿತ್ರಪಠಗಳು, ಸುಲಭಪ್ರಬಂಧಗಳು ಹೆಚ್ಚಾಗಿ ಮಕ್ಕಳಿಗೆ ಬೇಕಿರು
ವವು. ಈ ವಿಷಯದಲ್ಲಿ ಪ್ರಸಿದ್ಧರಾದ ಫ್ರೊಬೆಲ್ಲರೆಂಬುವರು ಹೇಳುವುದು:—
"ಮಕ್ಕಳಲ್ಲಿರುವ ಸಹಜವಾದಕಾಂಕ್ಷೆ ಇಂತಾಸ್ವರೂಪವಾದುದೆಂದು ಹೆಸರಿ
ಡಲಾಗುವುದಿಲ್ಲ. ಅಂತಾಕಾಂಕ್ಷೆ ಪ್ರಕೃತಿಯವಸ್ತುಗಳನ್ನು ಎಂದರೆ, ಪ್ರಕೃತಿ
ಸೊಳಡಗಿರುವ ವಸ್ತುಗಳನ್ನೂ ಹೂಗಳನ್ನೂ ಗಿಡಬಳ್ಳಿಗಳನ್ನೂ ಪ್ರಾಣಿ
ವರ್ಗದ ಯೋಗ್ಯತೆಗಳನ್ನೂ ಇವೆಲ್ಲವುಗಳೊಡನಾಟವನ್ನೂ ಆ ಶಿಶುವಂತೆ
ವನಸ್ಸನ್ನು ಆತುರಗೊಳಿಸುವುದು, ಮಕ್ಕಳು ತಮ್ಮಕಾಂಕ್ಷೆಗೆ ಸರಿಯಾದ
ವಸ್ತುಗಳು ಸುಲಭ್ಯಗಳಲ್ಲವೆಂದು ಸಹಜವಾಗಿ ತಿಳಿದಿರುವವು" ಮಕ್ಕಳಿಗೆ
ಪ್ರಕೃತಿಯಿಂದೊದಗುವ ಸಂತೋಷವನ್ನು ಆಸಕ್ತಿಯನ್ನೂ ಕುರಿತು ಆತನು
ಹೀಗೆಂದು ಹೇಳುವನು :—

"ಪ್ರಾಣಿಮಾತ್ರಕ್ಕೆ ನೆಮ್ಮದಿಯನ್ನೂ ಸಂತೋಷವನ್ನೂ ಸ್ಥಿರ
ಪಡಿಸುವುದೊಂದು ದೊಡ್ಡದಲ್ಲ. ಅದು ನಾವು ಯೋಚಿಸುವದರಿಂದ ಎಷ್ಟೋ
ಸುಲಭವಾಗಿದೆ. ಅದಕ್ಕೆ ಉಪಕರಣಗಳೆಲ್ಲ ಸಾಧಾರಣಗಳಾಗಿ, ಸಮೀಪದಲ್ಲಿ
ದ್ದರೂ ಅವುಗಳನ್ನು ನಾವು ಲಕ್ಷ್ಯಕ್ಕೆ ತರುವುದಿಲ್ಲ. ಅವುಗಳ ಸೌಲಭ್ಯತೆ
ಸಾಮಾನ್ಯತೆಯುಂತಾದವನ್ನು ನೋಡಿ ಇವುಗಳಿಂದೇನಾಗುವುದೆಂಬುದಾಸೀನ
ಮಾಡುವೆವು. ಹೀಗೆ ಸೌಲಭ್ಯವಾಗಿರುವ ಉಪಕರಣಗಳನ್ನುಕೈಬಿಡುವುದ
ರಿಂದ ನಮ್ಮ ಎಲ್ಲಾಭಾಗ್ಯವನ್ನು ವೆಚ್ಚಮಾಡಿದರೂ ನಮ್ಮ ಮಕ್ಕಳಿಗೆ
ವಸ್ತು ಪರಿಶೀಲನಾಶಕ್ತಿ, ದೂರದರ್ಶಿತ್ವವು ತಮ್ಮ ಪುರೋವೃದ್ಧಿಗೆ ಅಸ್ಪದ
ಗಳೆಂದು ಉತ್ತರೋತ್ತರ ತಿಳಿಯಲಸಸಮರ್ಥರಾಗಿರುವರು." ಎಲ್ಲಾ ಎಡೆಗ
ಳಲ್ಲಿ ಫ್ರೊಬೆಲ್ಲರವರು ಶೈಶವಸ್ಥಾಯಿ ಶಕ್ತಿವಿಜ್ಞಾನಗಳಲ್ಲಿ ತಮ್ಮ ಪ್ರಜ್ಞೆಯ
ನ್ನು ತೋರಿಸಿರುವಂತೆ ಪ್ರಕೃತಿಗೂ ಮಕ್ಕಳಿಗೂ ಇರುವ ಸಂಬಂಧದಲ್ಲಿಯೂ
ತೋರಿಸಿರುವರು. ಮಕ್ಕಳಿಗೆ ತೋಟಗಳಲ್ಲಲೆವುದು, ಗಿಡಬಳ್ಳಿಗಳೊತನಾಟವು
ಹಿತವಾಗಿರುವುದು. ಕಯ್ಯಾಟವೊಲಿಗಳು, ಕಾರೆಸ್ಥೆಮುಂತಾದ ಪಕ್ಕಿಗಳ
ಹಾರಾಟ, ಗುಟುಕಿಪುವಿಕೆಯನ್ನು ನೋಡುವುದು ಮುಂತಾದ ವಿಷಯವು ಒಳ

ತನವೆಲ್ಲ ಅವರನ್ನು ಸಂತೋಷಮಗ್ನರನ್ನಾಗಿ ಮಾಡುವುದು. ಇವುಗಳಲ್ಲಿ ಮಕ್ಕಳಿಗಿರುವ ಆಸಕ್ತಿಯನ್ನೂ ಹೇಳಲಾಗುವುದೆ? ಜೇನರಾಸಿಗಳ ಚೇಷ್ಟಾ ಗತಿಗಳನ್ನು ಮಕ್ಕಳು ನಿಶ್ಶಬ್ದರಾಗಿ ಸ್ತಬ್ಧರಾಗಿ ಕಾಯುವುದನ್ನು ಎಲ್ಲರೂ ನೋಡಿದ್ದೀವೆ.

ನಾವು ಮೊದಲೆ ಎಣಿಸಿರುವಂತೆ ಪಟುಶಿಶುಗಳು ಚಟುಳರಾಗಿ ಚಟುವಟಿಕೆಯುಂಟಾಗಿರುವುದು ಸಹಜವಾಗಿದೆ. ಆ ಚಟುವಟಿಕೆ ಆಟವಾಗಿ ಯಾದರೂ ಇರಬಹುದು, ಉದ್ಯೋಗವಾಗಿಯಾದರೂ ಇರಬಹುದು. ಈ ವಿಷಯವನ್ನೂ ಫ್ರೀಬೆಲ್ಲರವರ ದೋಷವನ್ನು ತಪ್ಪಿಸಿಕೊಂಡಿಲ್ಲ. ಆದುದರಿಂದ ದತಿ ಶಿಕ್ಷಕನು ಆಟಕ್ಕೂ ಪಾಠಕ್ಕೂ ಸಮಯವನ್ನು ನಿಷ್ಕರ್ಷಿಸಬೇಕೆಂಬ ಆ ಶಿಶು ವಿಷಯಾಂತೈಷಿಗಳ ಅಭಿಪ್ರಾಯವು ಹೀಗಿದ್ದರೂ ಅವರು ಶಿಶುಗಳಿಗೆ, ಆಟವೆಂಬುವದೆ ಬೇರೆ, ಪಾಠವೆಂಬುವದೆಬೇರೆ ಎಂದಭಿಪ್ರಾಯವಿಡುವುದಿಲ್ಲ. ಆಟವು ಪಾಠವಾಗಿರಬೇಕು, ಪಾಠವಾಟವಾಗಿರಬೇಕೆಂಬುದು ಅವರಿಗೂ ತಾತ್ಪರ್ಯವುಂಟು. ಯಾವಮಗು ಯಥೇಚ್ಛವಾಗಿ ಹೀಗೆ ಚಟುವಟಿಕೆಯಾಗಿರಬೇಕೆಂಬ ನಿರ್ಣಯದಿಂದ ವಿಶ್ರಾಂತಿ ಬೇಕೆಂಬಂತಾಗುವವರೆಗೂ ಆಟದಲ್ಲಿ ಶ್ರಮಿಸುವುದೊ ಅದು ಉತ್ತರೋತ್ತರದಲ್ಲಿ, ಒಳ್ಳೆತಾದ ನಿರ್ಧಾರವುಳ್ಳ, ಪರೋಪಕಾರಬುದ್ಧಿಯುಳ್ಳ ಆತ್ಮಾಭಿವೃದ್ಧಿಯುಳ್ಳ ಶರೀರಿಯಾಗುವದು. ಇದರಿಂದ ಮಕ್ಕಳ ಆಟಕ್ಕೆ ತಾಯಿತಂದೆಗಳು ಪ್ರೋತ್ಸಾಹ ಕೊಡಬೇಕು. ಈ ವಿಷಯವನ್ನು ದೇಶೀಯರೆಲ್ಲರೂ ಜ್ಞಾಪಕವಲ್ಲಿಟ್ಟುಕೊಳ್ಳುದು. ಮನುಷ್ಯಧರ್ಮವನ್ನು ಚೆನ್ನಾಗಿ ತಿಳಿಯಲು ಶಕ್ತಿಯುಳ್ಳವರು ಹುಡುಗರಾಟಪಾಟವನ್ನು ನೋಡಿ ಅವರ ಯೋಗ್ಯತಾಪಕ್ಷವನ್ನು ನಿರ್ಧರಿಸುವರು. ಆ ಆಟದಲ್ಲಿ ಮುಂದಣ ಅಂತಸ್ವಭಾವವು ನಿರ್ಮೀತವಾಗುವುದು:—ಎಳೆತನದ ಸರಿಯಾದ ಆರೈಕೆ, ಮರಗಳ ಫಲಗಳಲ್ಲಿ ಕಾಣುವಂತೆ, ಯುವ್ವನವಾರ್ಧಿಕ್ಯದಲ್ಲಿನ ಮನುಷ್ಯನ ಅಂತಸ್ವಭಾವಗಳು ತನುಗೆ ದೊರಕಿದ ಬಾಲಶಿಕ್ಷೆಯ ಭಾವವನ್ನು ವ್ಯಕ್ತಪಡಿಸುವುವು. ಇದಕ್ಕೆ ಸಂಶಯವೇಕ. ಆದುದರಿಂದ ಎಳೆತನದಲ್ಲಿ ಮಕ್ಕಳನ್ನು ಅನಾದರವೆಮಾಡಿ ಸರಿಯಾದ ಮಾರ್ಗಕ್ಕೆ ಹತ್ತಿಸದೆಹೋದರೆ ಮುಂದಣ ಅಭಿವೃದ್ಧಿಗೆ ಕುಂದುಕವು ಬಂದೇಬರುವುದು.

ಶಿಶುಗಳಿಗೆ ಉದ್ಯೋಗದಲ್ಲಿ ಇಚ್ಛೆಯುಂಟೆಂದು ಹೇಳಿರುವೆವಲ್ಲವೆ?

ಇದರ ವಿಷಯದಲ್ಲಿ ಫ್ರೋಬೆಲ್ಲರ ಅಭಿಪ್ರಾಯವನ್ನು ಬಿಡಿಸಾರರಾಗಿ ಸಾರಾಂಶವನ್ನುಮಾತ್ರ ಇಲ್ಲಿ ಬರೆಯಲ್ಪಟ್ಟಿದೆ. ನಿಜವಾದ ಉದ್ಯೋಗವೆಂಬುದು ಹೊಟ್ಟೆ ಬಟ್ಟೆಗಾಗಿ ಮನುಷ್ಯನು ಕಷ್ಟಪಡುವುದೊಂದೇ ಉದ್ಯೋಗವಲ್ಲ; ಸ್ವಭಾವಪ್ರೇರಿತರಾಗಿ ಉದ್ಯೋಗವನ್ನು ಉದ್ಯೋಗಕ್ಕಾಗಿ ಪ್ರೀತಿಸಿ ಶ್ರದ್ಧೆಯಿಂದ ಉತ್ತರಾಭಿವೃದ್ಧಿಗೆ ತೊಡಗಿರುವಿಕೆಯೇ ಮುಖ್ಯವಾದ ಮತ್ತು ನಿಜವಾದ ಉದ್ಯೋಗವಾಗಿರುವುದು.

ಫ್ರೋಬೆಲ್ಲರವರ ಅಭಿಪ್ರಾಯವನ್ನು ಪರ್ಯಾಲೋಚಿಸಿ ನೋಡಿದರೆ ಶೈಶವಾವಸ್ಥೆಯಲ್ಲಿಯೂ, ಕೆಲಸವಾಡಬೇಕಾದ ಎಂದರೆ ಉದ್ಯೋಗದಲ್ಲಿ ತೊಡಗುವುದಕ್ಕೆ ಅಗತ್ಯವಿರುವುದೆಂದು ಹೇಳಿದಂತಾಗುವುದು:—ಮಕ್ಕಳ ಯುವಜನರು ಬಾಲ್ಯದಲ್ಲಿರುವವರಿಗಗತ್ಯವಿರುವ ಕೆಲಸಕ್ಕೆ ಪ್ರೋತ್ಸಾಹಕರಾಗಿ ವರ್ತಿಸಬೇಕು. ಮಕ್ಕಳ ಉದ್ಯೋಗವೇನೋ ಕೇವಲವಾಗಿ ನಗುಪಾಟವಾಗಿಯೆ ಇರುತ್ತದೆ. ಅಂತಾ ಲಾಭಕಾರಿಯಾಗಿ ಏನೂ ಇರುವುದಿಲ್ಲ. ಆದರೂ ಇವರಿಂದ ಮಕ್ಕಳಿಗೆ ಸುಖವೂ ಪುರೋಭಿವೃದ್ಧಿಗೆ ಸಾನುಕೂಲತೆಯೂ ಉಂಟು. ಬಾಲ್ಯಾಭ್ಯಾಸ ವಿದ್ಯೆ, ಉತ್ತರೋತ್ತರ ಬರುವ ವಿದ್ಯೆಗೆ ಏನೊ ಸಹಕಾರಿಯಲ್ಲವೆ?

ಮೇಲಣ ವಿಚಾರದಿಂದ, ೩ ವರ್ಷದ ಮಕ್ಕಳು ಮೊದಲುಗೊಂಡು ೬ ವರ್ಷದ ಹುಡುಗರವರೆಗೂ ಇವರಿಗೆ ಉದ್ಯೋಗವೂ ಆಟವೂ ಅವಶ್ಯಕವೆಂಬುದು, ಆಲೋಚನಾಶಕ್ತಿಯೇನುಂಟಾದ ಎಲ್ಲತೆರದ ಸಹಜಶಕ್ತಿಗಳ ವಿಕಾಸಕ್ಕೆ ಮಾರ್ಗವನ್ನು ಹುಡುಕಬೇಕೆಂಬುದು ಕರ್ತವ್ಯವಾಗಿ ಕೈಕೊಳ್ಳಬೇಕಾಗಿ ಬಂತು. ಈ ಎಲ್ಲಾ ಅಭಿವೃದ್ಧಿಗೂ ಕಿಂಡರ್‌ಗಾರ್ಟ್ನ ಎಂಬ ಬಾಲಶಿಕ್ಷಾ ಕ್ರಮವು ಅತ್ಯನುಕೂಲವೆಂದು ಹೇಳುವುದಾದರೆ ಅದೆಂತೆಂಬುವರಿಗೆ ವಿವರವು ಬೇಕೇಬೇಕಲ್ಲವೆ? ಅದೇ ಮುಂದಣ ಪ್ರಸ್ತಾವವಾಗಿರುವುದು:—ಈ ಮಧ್ಯೆ ಹೇಳಿದತಕ್ಕ ಒಂದಂಶವುಂಟು. ಇದುವರೆಗೂ ಮಕ್ಕಳಕಾಂಕ್ಷವೃತ್ತಿಗೂ, ಉದ್ಯೋಗಕ್ಕೂ ಫ್ರೋಬೆಲ್ಲರ ಅಭಿಪ್ರಾಯಗಳನ್ನು ಕೈಕೊಂಡೆವಲ್ಲ! ಆತನು ಯಾರು? ಎಂಬ ಸಂಶಯವಿರಬಹುದು. ಈತನೂ ಪೆಸ್ತಲೋಜಿ ಎಂಬುವರು ವಿದ್ಯಾವಿಷಯಶಿಕ್ಷೆಗಳಲ್ಲಿ ಪ್ರಮುಖರು. ಇವರು ಮಿಕ್ಕವರೆಲ್ಲರಿಂದಲೂ ಶೈಶವಸ್ಥಾನಶಿಕ್ಷೆಗಳನ್ನು ಚೆನ್ನಾಗಿ ವಿಚಾರವಾಡಿ ತಿಳಿದಿರುತ್ತಾರೆ.

ಇವರೊಳಗೆ ಫ್ರೂಬೆಲ್ ಎಂಬಾತನೇ ಆ ಪ್ರಸಿದ್ಧನಾದ ಕಿಂಗ್ಡರ್‌ಗಾರ್ಟನ್ ಎಂಬ ಬಾಲಶಿಕ್ಷಾಕ್ರಮಕ್ಕೆ ಜನಕನು.—ಇವರ ವಿಚಾರದ ಮುಖ್ಯಾಂಶಗಳು:—ಇಬ್ಬರೂ ಶೈಶವನಾವಸ್ಥೆಯಿಂದಕ್ಕೆ ಗಳನ್ನು ತಿಳಿಯುವುದು ಮೊದಲಾಂಶವೆಂದು ಸಂಕಲ್ಪಿಸಿರುವರು. ಇವುಗಳನ್ನು ತಿಳಿದು ಆಯಾಶಕ್ತಿಗಳು ನಿರಾತಂಕವಾಗಿ ವೃದ್ಧಿಯನ್ನು ಹೊಂದಲು ಯೋಗ್ಯವಾಗುವಸ್ಥಿತಿಗಳೇನೆಂದು ತತ್ವಭೇದನೆಯನ್ನು ಮಾಡುವರು ಅಂತಾಸ್ಥಿತಿಗಳು ಎಲ್ಲಾ ಮಕ್ಕಳಿಗೂ ಸಾಧಾರಣವಿರುವಂತೆ ಮಾಡಬೇಕಾದರೆ ಏನೇನು ಮಾರ್ಗೋಪಕರಣಗಳುಂಟೆಂಬದನ್ನು ಹುಡುಕುವರು ಬಾಲಶಿಕ್ಷೆಯು ಅವರಿಗೆ ಅತಿಮುಖ್ಯವಾಗಿದೆ. ಮಕ್ಕಳಿಗೆಲ್ಲ ತತ್ಪುರೋವೃದ್ಧಿಗೆ ಅಗತ್ಯವಾದ ನಾನಾಶಕ್ತಿಸ್ಪೂರ್ತಿದಾಯಕ ಸ್ಥಿತಿಗಳನ್ನು ವೃದ್ಧರು ಮೊದಲಿಂದಲೂ ಒದಗಿಸಿಕೊಡಬೇಕು. ಇಬ್ಬರೂ ವಸ್ತುಜ್ಞಾನಪೂರ್ವಕವಾದ ವಿದ್ಯೆಯನ್ನೆ ಉದ್ಘೋಷಿಸುವರು. ಇದಲ್ಲದೆ ಮಕ್ಕಳಿಗೆ ಲಭಿಸಬೇಕಿರುವ ಸ್ಥಿತಿಗತಿಲ್ಲವೂ ಸಮಾಜದಲ್ಲಿ ಹೊಕ್ಕು ಬಳಸುವುದರ ಮೂಲಕವೇ ಒದಗಬೇಕಾಗುವುದು ಎಂದು ನಿಶ್ಚಯಿಸಿರುವರು.

ಇಂತವರ ಕಿಂಡರ್‌ಗಾರ್ಟನ್ ಎಂಬ ಬಾಲಶಿಕ್ಷಾಕ್ರಮವು, ಆ ಕ್ರಮದ ಪರಿಪಾಡಿಕೆಯಿಂದಲೂ, ಆ ಕ್ರಮಕ್ಕೆ ಒಳಪಟ್ಟ ಮಕ್ಕಳ ಕಟ್ಟಳೆ ಏನೆಂದು ತಿಳಿವುದರಿಂದಲೂ, ಚೆನ್ನಾಗಿ ಅವಗಾಹನಕ್ಕೆ ಬರಬೇಕಾಗಿದೆ.

ಕಿಂಡರ್‌ಗಾರ್ಟನ್ ಎಂಬುದು ಮೂರುವರ್ಷದ ಮಕ್ಕಳುಮೊದಲು ಮಾಡಿಕೊಂಡು ಆರು ವರ್ಷದ ವಯೋನಂತರವಾದ ಹುಡುಗರು ಸೇರಾಡುವ ಸ್ಥಳವಾಗಿದೆ. ಅಲ್ಲಿ ಅವರೆಲ್ಲರೂ ತಂತಮ್ಮ ಪುರೋವೃದ್ಧಿಗೆ ಎಂತಾ ಒಗತನ ಬೇಕೋ ಅದನ್ನೇ ಪಡುವರೆಂದು ತಿಳಿಯಬೇಕು. ಆ ಸ್ಥಳದಲ್ಲಿ ಪ್ರತಿವಿವಸ ಸಮ್ಮೂ ಕೆಲಬೊತ್ತು ಮೇಲೆ ಹೇಳಿದ ವಯಸ್ಸಿನ ಮಕ್ಕಳೆಲ್ಲರೂ ಸೇರೆಯುತ್ತಾರೆ. ಇವರಿಂದ ಸಂಗಾತಿಗಳ ಒಡನಾಟದ ಸುಖಗಳೇನೆಂಬುದು ಅವೆಲ್ಲವನ್ನೂ ಅನುಭವಿಸುವರು. ಇಂತಾ ಸುಖವನ್ನುಂಟಾಗಿಪುವರಾದರೂ ಒಂದು ಕಟ್ಟಳೆಗೆ ಪಾತ್ರವಾಗಿರುತ್ತಾರೆ. ಗಿಡ ಬಳ್ಳಿಗಳ ಮತ್ತು ಪ್ರಾಣಿವರ್ಗದೊಂದಿಗೆ ಕೂಡಾಡುವುದೇ ಆವಕ್ಕೆ ಆಟವಾಗಿದೆ. ಪಾಠಕ್ಕೆ ಪಾಠವಾಗಿದೆ. ಈ ಕಾರಣದಿಂದ ಕೈಗೂ ಕಣ್ಣಿಗೂ ಕೆಲಸ ಕೊಟ್ಟಂತಾಗುವುದು. ವಿಜ್ಞಾನ

ಶಕ್ತಿ, ಆಲೋಚನಾಶಕ್ತಿ ಪ್ರಬಲವಾಗುವುದು. ಏಕಾಗ್ರಚಿತ್ತವೃತ್ತಿವಿಷಯವನ್ನು ಗನುನಿಸುವಿಕೆಕ್ರಮುಕೆಕ್ಕ ಕಮ್ಮಟ ಬೀಳುವುದು. ಇವೆಲ್ಲಾ ನೇಪುಣ್ಯವನ್ನು ಪಡುವುದು. ಇಂತಾ ಸದ್ಗುಣಕಾರಕವಾದ ವಿದ್ಯಾನಶಿಕ್ಷಾಪ್ರಪಂಚದಲ್ಲಿ ಮಕ್ಕಳು ಬಾಹ್ಯಪ್ರಪಂಚವೆಲ್ಲಾ ಮರೆತುಬಿಡುವರು. ಈ ಕ್ರಮದ ಮಕ್ಕಳು ಮಾಡುವ ಉದ್ಯೋಗಗಳಿಂದ ಇದರ ಸ್ವಭಾವ ಚೆನ್ನಾಗಿ ತಿಳಿವುದೆಂದು ಯೋಚಿಸಬೇಕಾಗಿದೆ.

ಪ್ರಾತಃಕಾಲದಲ್ಲಿ ಮಕ್ಕಳು ಬರುತಕ್ಷಿ ಎಲ್ಲರೂ ಕಾರ್ಯತತ್ಪರತೆಯುಂಟಾಗಿ ಸಂಭ್ರಮವುಂಟಾಗಿರುವರು. ಒಂದು ಮಗು ಹಕ್ಕಿಯನ್ನು ನೋಡುತಾ ಪಂಜರವನ್ನು ತೊಳೆವುದು, ಅದಾದಮೇಲೆ ಹಕ್ಕಿಗೆ ಮೈತೊಳೆಸುವುದು, ಮೇವಿಡುವುದು, ನೀರು ಕುಡಿಸುವುದು ಮುಂತಾದ ಕೆಲಸ ಮಾಡಿಸುತಿರುವುದು; ಇನ್ನೊಂದು ಮಗು, ಸ್ಲೇಟೆಂಬ ಕಲ್ಲು ಹಲಗೆ ತೊಡೆವುದು ತನಗೆನಾತ್ರನೇ ನೇರಿದ ಕಾರ್ಯವೆಂದು ಸಂತೋಷಿಸಿ ಮಾಡುತಿರುವುದು, ಚೆನ್ನಾಗಿ ಹಲಗೆಯನ್ನು ದಟ್ಟಸಿದಮೇಲೆ ಆ ಹಲಗೆಗಳನ್ನು ಒಂದಿಸಿಡುವುದಲ್ಲಿ ತೊಡಗುವುದು, ಆ ಚಿಕ್ಕ ಹಲಗೆಗಳ ಸಾಲು ಮಗು ಎತ್ತದಂತೆ ದೊಡ್ಡಾಗಿರುವುದಿಲ್ಲ. ಇದೆಲ್ಲ ಮಾಡಿದಮೇಲೆ ಚಿಕ್ಕ ಚಿಕ್ಕ ಮೇಜುಗಳನ್ನು ಕ್ರಮಬದ್ಧಗಳನ್ನು ಸಮವಾಗಿ ನೇರ್ಪಡಿಸುವುದರಲ್ಲಿ ಎಷ್ಟೊಬ್ಬರುಉಲ್ಲಾಸವಪಡುವುದು. ಸ್ವಲ್ಪವು ದೊಡ್ಡದಾದ ಪದಾರ್ಥಗಳಾದರೂ ಬೇಸರವುಂಟೆ? ಸಹಾಯ ಕೊಡಹೋದವರನ್ನಾದರೂ—ಇಲ್ಲ! ಇಲ್ಲ! ನಾನೆ ಮಾಡುವೆನು.—ಎಂದಷ್ಟೆ ಯಾಗಿ ತಾನೆ ಮಾಡುವುದಲ್ಲದೆ ಇತರರ ಸಹಾಯವನ್ನು ಕೋರದು; ಮತ್ತೊಂದು ಸುಮಗು ಸಾಧುವಾದ ಇಲಿಯನ್ನು ಅರಯ್ಯುವುದರಲ್ಲಿರುವುದು. ಕೆಲವರು ಗಿಡಗಳಿಗೆ ನೀರೆರೆವರು, ಎತಿಗಳನ್ನು ಕಳಕಳಗುಟ್ಟುವಂತೆ ತೊಳೆಯುವರು. ಬಿದ್ದ ಹೂಗಳನ್ನಾರಿಸುವರು ಕೆಲವರು. ಅಷ್ಟರಲ್ಲಿ ಚಿಕ್ಕ ಹಿರೆಮಣಿಗಳಾದ ಮಕ್ಕಳು ಮೊದಲು ಪಾಠಕ್ಕೆ ಬೇಕಾದ ಸಾಮಗ್ರಿಗಳನ್ನು ಸಿದ್ಧಪಡಿಸುವ ಜಂಬದಲ್ಲಿರುವರು. ಆ ಪಾಠವು ಆ ಕಾಲಕ್ಕೆ ತಕ್ಕುದಾಗಿ ಮೊದಲೆ ನಿಯುಮಿತವಾದುದಾಗಿರುವುದು. ಮಕ್ಕಳೊಗತನದ ಪರ್ಯಾಸಿಧಿಯಾದ ಕಿಂಡರ್‌ಗಾರ್ಟನಲ್ಲಿ ಈ ಉದ್ದಿಶ್ಯವಾಗಿ ಈ ಪಾಠವೆಂಬ ಕಮ್ಮಟವುಂಟು. ಅಂತಾ ಪಾಠವು ತಿರ್ಯಗ್ಜ್ಞಾನವಿಷಯವಾಗಿರುವುದು. ಇಲ್ಲವೆ ವನೌಷಧಿವರ್ಗದದು

ವಾಗಿರುವುದು. ಮಾನಸಿಕ ಸುಗ್ಗಿಕಾಲವು ಕಿಂಡರ್‌ಗಾರ್ಟನ್ ಕ್ರಮವನ್ನಾಲೋಚಿಸುವ. ಈ ಕಾಲದಲ್ಲಿ ಕೊಯಿಲಗಾಲವೆ ಅತ್ಯಂತ ಮುಖ್ಯವಾಗಿರುವುದು. ಎಲ್ಲೆಲ್ಲಿ ನೋಡಿದರೂ ಅಲಂಕರಿಸಿರುವ ತೆನೆಗಳಮಯವಾಗಿರುವುದು. ಕೆಲವು ತೆನೆಗಳು ನೀರಲ್ಲಿ, ಕೆಲವು ಮರಳಲ್ಲಿ, ಮತ್ತೆಕೆಲವು ಪಾತೆ ಫ್ಲ್ಯಾನೆಲ್ ಎಂಬ ತುಪ್ಪುಳ ದುಪ್ಪಟಿಯಲ್ಲಿ ಮೊಳಕೆ ಮೂಡುತ್ತಿರುವವು. ಮುಂದೆ ಉಪಾಹ್ಯ ತವಾಗುವ ಪಾತಗಳು ನಡೆಯುತ್ತಿರುವುದು. ಕಿಂಡರ್‌ಗಾರ್ಟನ್ ಶಿಕ್ಷಾಕ್ರಮಕ್ಕೊಳಗಾದ ಎಳೆಮಕ್ಕಳು ತಂದಿರುವ ಬೆಳೆಸಿನಿಂದ ಕಾಳು ತೆಗೆಯುತ್ತಿರುವರು. ಅವರಿಂದ ದೊಡ್ಡವರು ಕಾಳು ಬಿಡಿಯುತ್ತಿರುವರು. ವಿದ್ಯಾಭ್ಯಾಸದ ತರಗತಿಗಳು ಪೊದಲಾಗುವದಕ್ಕೂ ಕಿಂಡರ್‌ಗಾರ್ಟನೆಂಬ ವಸ್ತುಪೂರ್ವಕ ವಿಜ್ಞಾನವನ್ನುಪಡೆಯುವ ತರಗತಿಗಳ ಕೊರೆ. ಅವಕ್ಕೆ ನಡುವೆ ಇರುವ ತರಗತಿಗಳವರು ತೆನೆಗಳ ಬೆಳವಳಿಗೆಯ ರೀತಿಯನ್ನು ವಿಚಾರ ಮಾಡುವರು. ವಿದ್ಯಾಭ್ಯಾಸದ ತರಗತಿಗಳವರು ಗೋಧಿತೆನೆಗೂ ಮತ್ತೊಂದರ ತೆನೆಗೂ ಇರುವ ಅಂತರವೇನು? ಸಸ್ಯಶಾಸ್ತ್ರದ (Botony) ಯಾವ ಯಾವ ಭಾಗಗಳಿಗೆ ಯಾವ ಯಾವ ಕಾರಣದಿಂದ ಯಾವ ಯಾವ ಸಸಿಗಳು ನೀರುವವು ಎಂದು ವಿಚಾರಮಾಡುವರು. ಕಿಂಡರ್‌ಗಾರ್ಟನವರು—ಗೋಧಿಯನ್ನು ಕೊಡವಿದ ಮಾರನೇದಿನ ಮಕ್ಕಳಿಗೆ ಬೀಸುವಕಲ್ಲಿನ. ಆಮೇಲೆ ತೆಳ್ಳುವುದು, ಒನೆವುದು,ಕೇರುವ ಕೆಲಸವು. ಅದಾದನಂತರ ಬೆರೆಸಿಕೊಂಡವನೆಯೊಂದಿಗೆ ಈ ಮಕ್ಕಳ ರವೆಯನ್ನು ಬೆರಸಿ ಕೊನೆಗೆಲಸವಾದ ನಾನ್‌ರೊಟ್ಟ ಮಾಡುವ ಪ್ರಯತ್ನವಹುದು. ಅದು ಪ್ರೈಸಲು ಆ ರೊಟ್ಟಿಗಳನ್ನು ಸುಡುವುದಕ್ಕೆ ೨೦-೩೦ ಎಳೆಮಕ್ಕಳು ಒಲೆಯುಬಳಿಯನ್ನು ಸೇರುವರು. ಆ ರೊಟ್ಟಿಗಳು ಲಘುವಾಗಿರಲಿ, ಒರಟಾಗಿರಲಿ, ಅವುಗಳಿಗೆ ಹೆಚ್ಚುಪ್ಪುಬಿದ್ದಿರಲಿ, ಉಪ್ಪು ಸಾಲದಾಗಿರಲಿ ತಾವುತಿಂದ ರೊಟ್ಟಿಗಳಲ್ಲಿ ಎಳೆಮಕ್ಕಳ ರೊಟ್ಟಿಗಳೆ ಮಿಗಿಲು ರುಚಿಯೆಂದು ಮಕ್ಕಳ ಏಂತೈಷಿಯೊಬ್ಬನು ಕೊಂಡಾಡಿರುವನು. ಆಮೇಲೆ ಕಥೆಗಳಮೂಲಕ ಚಿತ್ರವಸ್ತುಗಳಮೂಲಕ ಸುಲಭನಾದ ಪಾತಪ್ರವಚನವು ನಡೆವುದು. ಈ ಪಾತಗಳೂ ಮಕ್ಕಳ ನಡವಳಿಕೆಯ ಲಕ್ಷ್ಯವುಳ್ಳವುಗಳಾಗೇ ಇರುವವು. ಇಂತಾ ನಾನಾರೂಪವಾದ ಒಪವಾಯವ ಒಗತನವು. ಈ ಚಟುವಟಿಕೆ ಮನೋವಿಜ್ಞಾನಕ್ಕೂ ಶಾರೀರಕ ಪಾರ್ಶ್ವಕ್ಕೂ ಅನುಕೂಲಿಸುವುದ

ದೆ ವಿದ್ಯಾಭ್ಯಾಸಕ್ಕೆ ತಕ್ಕ ಅಧಿಕಾರಿಗಳನ್ನು ಮಾಡುವ ಉಪಕರಣಗಳ ನ್ನು ಕೊಡಿಸಿಕೊಡುವುದು. ಮೇಲಿನ ಒಗೆತನವೇ ಇದನ್ನೆಲ್ಲಾ ಸ್ಪಷ್ಟ ಪಡಿಸುವುದು. ತನ್ನ ಕೈಮುಟ್ಟಿ ಮಾಡುವುದರಿಂದ ಬಂದ ಈ ಅನುಭ ವವು ಸ್ಥಿರವಾದುದು. ಬಹುಕಾಲ ಜ್ಞಾಪಕದಲ್ಲಿರುವುದು, ಮಕ್ಕಳು ಗೋ ಲಿಯನ್ನು ಬೀಸುವಾಗ ತಿಂಬ್ಲಿ ಬೀಳುವುದು ನೋಡಲು ಅವರಿಗೆ ಎಷ್ಟೋ ಉತ್ಸವವು. ಹೀಗೆ ಕಿಂಡರ್‌ಗಾರ್ಟನ್‌ನಲ್ಲಿ ಅಭ್ಯಾಸಮಾಡಿದ ಪಾಠದಮೇಲೆ ಶಾಲೆಯ ತರಗತಿಗಳಲ್ಲಿ ವಿಚಾರಮಾಡುವಾಗ ಮೊದಲಿನದೆಲ್ಲ ಮರೆತಿರುವುದಿಲ್ಲ ವೆಂಬುದನ್ನು ಆ ಉಪಾಧ್ಯಾಯರೆಲ್ಲಾ ಬಲ್ಲರು. ಈ ವಿಷಯದಲ್ಲಿ ಕೇರೆಲೈನ್ ಸಿ. ಬಿಷಪ್ ಎಂಬವರು ಇದೇವಿಷಯದ ತಮ್ಮ ಉಪನ್ಯಾಸದಲ್ಲಿ ಒಂದು ಕಥೆಯನ್ನು ಹೀಗೆ ಹೇಳಿರುವರು. ಆ ಕಥೆ ಇದು :—

ಒಂದಾನೊಂದು ಸೀಮೆಯಹಣ್ಣಿನ ಮೇಲೆ ವಿದ್ಯಾಭ್ಯಾಸದತರಗತಿಗಳ ಲ್ಲಿನ ೪ ವರ್ಷದ ಮಕ್ಕಳಿಗೆ ಪಾಠಹೇಳಲಾರಂಭಿಸಲು ಮೊದಲಿನದೆಲ್ಲವೂ ಆ ಸೀಮೆಯಹಣ್ಣಿನ ವಿಷಯವು ತನಗೆಲ್ಲಾ ತಿಳಿದುದೇ ಎಂದೆಂದುಕೊಂಡಿದ್ದರು. ಇತ್ತಲಾಪಾಠಸಾಗಿ ಹಣ್ಣಿನ ಬೆಳವಣಿಗೆ ಮುಂತಾದುದರ ಪಾಠವು ಹುಡುಗರ ಗನುಸಿಕೆಯನ್ನು ಬಿಡದೆಸಂಪಾದಿಸಿತು.

ಕಿಂಡರ್‌ಗಾರ್ಟ್ನನಲ್ಲಿ ಶಿಕ್ಷೆ ಹೊಂದಿ ಸಂಪಾದಿಸಿದ್ದ ಹೂಗಳ, ಹಣ್ಣು ಗಳ ವಿಷಯದಲ್ಲಿ ತನಗಿದ್ದ ಪ್ರಜ್ಞೆಯು ಉಪಾಧ್ಯಾಯನು ಹೇಳಿಕೊಡು ತ್ತಿದ್ದ ವಿವರವನ್ನು ಗ್ರಹಿಸಲು ತುಂಬಾ ಸೌಕರ್ಯವನ್ನುಂಟುಮಾಡಿಕೊಡು ತಿತ್ತು. ಪಾಠ ಮುಗಿಯುತಿರೆ, ಮೊದಲು ನರುಗೆ ಸೀಮೆಹಣ್ಣಿನ ವಿಷಯ ವನ್ನು ಇದೆಲ್ಲಾ ಹೇಳಲೇ ಇಲ್ಲವೆಂದನ್ನಲು, ಉಪಾಧ್ಯಾಯನು ಇಲ್ಲ, ಆಗ ನಿಮಗೆ ಹೇಳಿಲ್ಲ, ಹೇಳಿದ್ದರೆ ತಿಳಿಯುತ್ತಿರಲಿಲ್ಲವೆಂದು ಹೇಳಿದನು. ಹಾಗಾ ದರೆ ಇನ್ನೂ ಮುಂದೆ ನೋಡಿನ ವಿಷಯವಾಗಿ ತಿಳಿಯುತಕ್ಕದ್ದು ಪ್ರಾಯಶಃ ಇನ್ನೂ ಇರಬಹುದು. ಅದು ಸೀಮೆ ಮುಂದಿನ ವರ್ಷ ಹೇಳಿಕೊಡಬಹುದು ಎಂದು ಹುಡುಗನಾಡಿದನು. ಕಿಂಡರ್‌ಗಾರ್ಟನ್ ಬಾಲಶಿಕ್ಷಾಕ್ರಮವು ಬುದ್ಧಿ ಶಕ್ತಿಯನ್ನು ದೃಷ್ಟಪಡಿಸುವುದಕ್ಕೆ ಮಾತ್ರವೆ ಅಲ್ಲ. ಈಶರದೊಡನಾಟ, ಅಲ್ಲಿ ನವುಗಳನ್ನು ಸಾಕುವುದು, ಕಣ್ಣಿಂದ ನೋಡುವುದು, ಮನನುರುಗುವುದು ಸಂತೋಷಿಸುವುದು ಇವೆಲ್ಲವೂ ಅವರನ್ನು ಕುತುಕಿಗಳನ್ನು ಮಾಡುವುದಲ್ಲದೆ

ಕ್ರಿಯೆಗಳನ್ನಾಗಿ ಮಾಡುತ್ತಾ ಮನೋನಿಗ್ರಹ, ಕಾರ್ಯನಿರ್ವಾಹಗಳನ್ನು ಕಲಿತುಕೊಳ್ಳುವರು. ಈ ಒಗೆತನವು ಶರೀರಾರೋಗ್ಯಕ್ಕೆ ಎಷ್ಟೋ ಒಳ್ಳೆಯದು. ತಂತಮ್ಮ ವಿಷಯಗಳನ್ನು ಆಲೋಚನೆ ಮಾಡುವುದನ್ನು ಬಿಡಿಸಿ, ಇತರ ವಿಷಯಸಮಾಲೋಚನೆಯಲ್ಲಿ ಚಿತ್ತವನ್ನು ತೊಡಗಿಸುವುದು. ಹರಿವ ನೀರನ್ನು ನೋಡಲು ಸ್ವಲ್ಪದೂರ ನಡೆಯದು ಕಾರೆಸಿಳ್ಳೆ ಮುಂತಾದವು ಗೂಡಿಸುವುದನ್ನು ನೋಡಲಾಗಿ ಅಲ್ಲಲ್ಲಿಗೆ ಸಂಚರಿಸಬೇಕಾಗುವುದು. ವಸಂತಋತುವಿನ ಹೂವಿನ ಸೊಂಪನ್ನು ನೋಡಲು ಅಲೆದಾಡುವುದು ಮಕ್ಕಳಿಗೆ ಅವಶ್ಯಕವಾಗುವುದು ವರಿಶುದ್ಧವಾದ ಗಾಳಿ. ಅಲ್ಲಿ ಹೀಗೆ ಎಳೆ ಮಕ್ಕಳಿಗೆ ಅಂಗಸಾಧನೆಯಾಗುವುದು. ಇವುಗಳು ಶರೀರ ಬುದ್ಧಿಗಳಿಗೆ ಪಟುಕಾರಿಗಳು. ಶೋಧದಲ್ಲಾಗಲಿ, ಅಥವಾ ಆವಗಳಲ್ಲಿ ಕೆಲವರು ಮುಂದಣ ಪಾಠಕ್ಕೆ ಬೇಕಾದ ಸಾಮಗ್ರಿಗಳನ್ನು ಒದಗಿಸುವ ಸಂಭ್ರಮದಲ್ಲಿರುತ್ತಾರೆ. ಹೀಗೆ ಕ್ರಮತಪ್ಪದೆ ಒಬ್ಬನ ಸೌಲಭ್ಯಕ್ಕೆ ಸರದಿಯಂತೆ ಕೆಲಸವನ್ನು ನೋಡಿಕೊಳ್ಳುವುದೊಂದು ಕಟ್ಟಳೆಯಲ್ಲವೆ? ಕಿಂಡರ್‌ಗಾರ್ಟನ್ ಶಿಕ್ಷೆಯಿಂದ ವಿಷಯಸಂಗ್ರಹ ಮಾಡಿಕೊಂಡು, ಆಸಕ್ತಿ, ಅನುರಾಗವು, ಕಾಂಕ್ಷೆ ಹೆಚ್ಚಿ ವಿಷಯವಿಂತಾದುದು ಎಂದು, ತನ್ಮೂಲಕ ಹೇಳಲನುವಾಗುವರು. ನಾನಾವಿಧ ಯಂತ್ರಗಳು ಗಾಡಿ ಹೊಲ ಮುಂತಾದವುಗಳನ್ನು ಕಾಗದಗಳಿಂದ ಮಾಡುವರು. ನಾನಾವಿಧ ಜೋಲಿಗೆ ಚಿತ್ರನುಂತಾದ ಉದ್ಯೋಗವು ಮೇರಿನವುಗಳಂತೆ ತಿಳಿಯಬೇಕಾದ ವಿಷಯಗಳನ್ನು ದೃಶ್ಯಸ್ಥಿತಿಗೆ ತರುವುವು.

೬—೭ ವರ್ಷದ ಮಕ್ಕಳು ನಡುವಣ ತರಗತಿಗಳಿಗೆ ಹೋಗುವ ವಯಸ್ಸಾದವರೆಲ್ಲರೂ ತ್ರಿಭುಜ ಚತುರ್ಭುಜ ಕ್ಯೂಬೆಂಬ ಆರುಮುಖಗಳ ಘನವನ್ನು ಅವುಗಳ ತತ್ವಗಳನ್ನು ತಿಳಿಯುತಿರುವರು. ತಮ್ಮ ಇಚ್ಛೆಗೆ ಬಂದಂತೆ ಇಟ್ಟಿಗೆಗಳನ್ನು ಕಾಗದಗಳನ್ನು ಕಟ್ಟಿಗೆಗಳ ತುಮುರುಗಳನ್ನು ಉಪಯೋಗಿಸಲು ಅಗತಿ ತಿಳಿವಿರುತ್ತಾರೆ. ಮಕ್ಕಳಾಟವೆಲ್ಲವೂ ಉದ್ಯೋಗವೆಂಬುದು ವಯೋನುಗುಣ್ಯವಾಗಿರುವುದು. ಅವರಿಂದ ಆಟವನ್ನು ತಪ್ಪಿಸುವುದು ಅವರ ಹಕ್ಕಿಗೆ ದ್ರೋಹವನ್ನು ನೆನೆದಂತೆಯೇ ಸರಿ. ಕೋಯಿಲುಗಾಲದ ಮಕ್ಕಳ ಒಗೆತನವನ್ನು ವರ್ಣಿಸಿದಂತೆ ಎಲ್ಲಾ ಕಾಲದಲ್ಲಿ ತಕ್ಕತಕ್ಕ ಪಾಠಗಳು. ವಸ್ತುಗಳು ಏರ್ಪಟ್ಟಿರುವುವು. ಆಕಳು, ನೀರು, ನೇಗಿಲು, ಕಾರೆಸಿಳ್ಳೆ,

ಮಂಜು, ಮಂಜುಗೆಡ್ಡೆ ಇನ್ನೂ ಹಲವು ಹಣ್ಣುಗೆಳೆ ಗಿಡಗಳ ವಿಷಯವು ಪ್ರಾಣಿವರ್ಗದ ಪಾಠಗಳು ಬೋಧಿಸಲ್ಪಡುವುವು. ಇವರಿಂದ ವಸ್ತುನಿರೀಕ್ಷಣೆ ಒಂದಕ್ಕೊಂದಕ್ಕೆ ಇರುವ ವ್ಯತ್ಯಾಸವನ್ನು ತಿಳಿಯುವಿಕೆ, ಹೀಗೆ ಸರಿಯೆಂಬ ನಿಶ್ಚಯಜ್ಞಾನ, ಕಾರಣಕಾರ್ಯಗಳನ್ನು ತಿಳಿವುದು, ವಿಚಾರಕ್ಕೆ ಹೊರಡುವುದು, ಜ್ಞಾಪಕಶಕ್ತಿ ಹೆಚ್ಚುವುದು ಇನ್ನಾಗಲಿಲ್ಲವೆ ಮಕ್ಕಳಿಗೆ ಕೈಗೊದಗುವನಲ್ಲದೆ ಯಾವ ವಿಷಯವು ತಮ್ಮ ಗಮನಿಕೆಯನ್ನು ತಪ್ಪಿಸಿಕೊಳಲಾರದು. ನಿಶ್ಚಯಚಿತ್ತತೆಯು ಲಾಭವು ಮಕ್ಕಳಿಗೆ ಪೂರ್ಣಲಾಭವಲ್ಲವೆ? ಒಬ್ಬರನ್ನು ನೋಡಿ ಒಬ್ಬರು ಕಲಿವುದು ನೆರೆಹೊರೆಯವರೊಡನೆ ನೆಮ್ಮದಿಯಾಗಿ ಬಾಳುವುದನ್ನು ಕಲಿತುಕೊಳ್ಳುವುದು ಸಮಾಜಕ್ಕೆ ಒಳ್ಳೆ ತಲ್ಲವೆ?

ಆರೋಗ್ಯ

ಶಾರೀರಭಾಗ.

ಆರೋಗ್ಯವನ್ನು ಉಡುರುವುದಕ್ಕೂ ಇದ್ದ ಆರೋಗ್ಯವನ್ನು ಸಾಧಾರಿಕೊಳ್ಳುವುದಕ್ಕೂ ಸಾಮಾನ್ಯವಾದ ರೋಗಗಳು ಬಂದಾಗ ತಕ್ಕ ಸಾಧಾರಣ ಚಿಕಿತ್ಸೆಗಳನ್ನು ಮಾಡುವುದಕ್ಕೂ ಸಕಲರೂ ತಿಳಿದಿರುವುದು ಒಳ್ಳೇದೆಂಬ ಉದ್ದೇಶದಿಂದ ಇದನ್ನು ಆರಂಭಿಸಿದೆ. ಆದರೆ ಈ ವಿಷಯಗಳನ್ನೆಲ್ಲ ಚೆನ್ನಾಗಿ ತಿಳಿಯಬೇಕಾದರೆ ನಮ್ಮ ಶರೀರರಚನೆಯೂ ಅಂಗೋಪಾಂಗಗಳು ಕೆಲಸ ಮಾಡುತ್ತಿರುವ ರೀತಿಯೂ ತಿಂದನ್ನವು ಜೀರ್ಣವಾಗುವ ಬಗೆಯೂ ಕೂಡುವುದು, ವಿಳುವುದು, ನಡೆಯುವುದೇ ಮೊದಲಾದ ಗಮನ ವಿಶೇಷಗಳಿಂದ ಶರೀರಾವಯವಗಳಲ್ಲಿ ಉಂಟಾಗುವ ಕಾರ್ಯವಿಶೇಷಗಳು ತಿಳಿಯದಿದ್ದರೆ ಸುಖಾವಹವಾದ ನಿರ್ಮಲವಾಯು, ಹಿತಾನ್ನ, ವ್ಯಾಯಾಮನೈರ್ಮಲ್ಯಗಳ ಅವಶ್ಯಕತೆಯು ಚೆನ್ನಾಗಿ ಗ್ರಾಹ್ಯವಾಗಲಾರದು.

ಹೀಗಿರುವುದರಿಂದ ಜೀವವೆಂದರೇನೆಂಬುವದನ್ನು ಚೆನ್ನಾಗಿ ತಿಳಿಯಲು ಮೊದಲು ಪ್ರಯತ್ನಿಸುವುದು ಒಳ್ಳೇದು. ಕಲ್ಲಿಗೂ, ಮರಕ್ಕೂ

ಮನುಷ್ಯನಿಗೂ ಪರಸ್ಪರವಾಗಿರುವ ಭೇದಗಳು ಮನಸ್ಸಿಗೆ ಗ್ರಾಹ್ಯವಾದರೂ ಆ ಭೇದಗಳು ಇಂತಹವೆಂದು ನಿಷ್ಕರ್ಷೆಯಾಗಿ ಹೇಳುವುದು ಸುಲಭವಾಗಿಲ್ಲವು. ಪಾವ್ರ ಜೀವಿಗಳಾಗಿರುವುದು ನಮಗೆ ಸ್ಪಷ್ಟವಾಗಿದ್ದರೂ ಅನೇಕ ಕಾವಯವಸಂಕುಲದಿಂದ ದುರ್ಗ್ರಹವಾಗಿಯೂ ಅತ್ಯಾಶ್ಚರ್ಯಕರವಾಗಿಯೂ ಇರುವ ಮನುಷ್ಯನಲ್ಲಿ ಜೀವವಿಂತವೆಂಬುದನ್ನು ನಿಷ್ಕರ್ಷೆ ಮಾಡಲಾಗುವುದಿಲ್ಲ. ಆದುದರಿಂದ ಅಲ್ಪವಾದೊಂದು ಜೀವಜಂತುವನ್ನು ಪರೀಕ್ಷಿಸಿ ನೋಡುವುದು ಸುಗಮವಾಗಿರುವುದು. ಈಬಗೆಯ ಜಂತುಗಳಲ್ಲಿ ಜೀವಕಾರ್ಯಗಳು ಸ್ಪಷ್ಟವಾಗಿ ಗೋಚರಿಸುತ್ತಿರುವುವು. ಇವುಗಳಿಗೂ ನಮಗೂ ಆಕಾರವಯವಾದಿಗಳಲ್ಲಿ ವಿಶೇಷ ತಾರತಮ್ಯವಿದ್ದರೂ ಜೀವಸಂಬಂಧಕಾರ್ಯಗಳಲ್ಲಿ ನು ವ್ಯತ್ಯಾಸವೂ ಕಾಣಬರುವುದಿಲ್ಲ. ಇದಲ್ಲದೆ ನಮ್ಮ ಜೀವವು ಈಬಗೆಯ ಅಲ್ಪಜೀವಿಗಳ ಜೀವಸಮಷ್ಟಿಯಾಗಿದೆ. ಈಬಗೆಯ ಜಂತುವನ್ನು ಪರೀಕ್ಷಿಸಿದ್ದೀ ಆದರೆ ಇದು ಒಂದು ಅತಿಸೂಕ್ಷ್ಮವಾದ ಬಿಂದುವಂತೆ ಕಾಣುವುದು. ಇದಕ್ಕೊಂದು ನಿಯತವಾದ ಆಕಾರವೂ ಇಲ್ಲ. ತಲೆ, ಕೈಕಾಲು ಗಳೆಂಬ ಅಂಗವಿಶೇಷಗಳೂ ಕಾಣಬರುವುದಿಲ್ಲ. ಇದು ಅಂಟಿನಂತಿರುವ 'ಪ್ರೋಟೊಪ್ಲಾಸಂ' ಎಂಬೊಂದು ವಸ್ತುವಿನ ಪರಿಣಾಮವಾಗಿದೆ. ಸಕಲ ಜೀವಿಗಳಲ್ಲಿಯೂ ಈ ವಸ್ತುವಿಲ್ಲದಿಲ್ಲ. ಪಶು, ಮೃಗ, ಪಕ್ಷಿ ವೃಕ್ಷಾದಿ ಸಮಸ್ತ ಜೀವರಾಶಿಯಲ್ಲಿ ಈ ವಸ್ತುವಿದ್ದೇ ಇರುವುದು. ಇದು ಇಲ್ಲದೆಡೆ ಜೀವವೂ ಇರುವದಿಲ್ಲ. ಈ ವಸ್ತುವಿನಲ್ಲಿನ ಬಗೆಬಗೆ ಘನವಸ್ತುಗಳನ್ನು ವಾಯುಗಳನ್ನೂ ವಿಂಗಡಿಸಿ ತೋರಬಹುದಾದರೂ ಇವುಗಳನ್ನೆಲ್ಲ ಮತ್ತೆ ಸೇರಿಸಿ ಆ ವಸ್ತುವಾಗಿ ಮಾಡಲಾಗುವದಿಲ್ಲ.

ಮೇಲೆ ಹೇಳಿದ ಅಲ್ಪಜೀವಿಗಳಲ್ಲಿ ಒಂದಾದ 'ಪ್ರೋಟಿಸ್ಟ್' ಎಂಬ ಜಂತುವಿಶೇಷವನ್ನು ಪರೀಕ್ಷಿಸಿದಲ್ಲಿ ನಿಯತಾಕಾರವಿಲ್ಲದ ಅವ್ಯವಸ್ಥಿತವಾದ ಕಂದುಬಣ್ಣದ ಕಣವಾಗಿ ಕಾಣುವದಲ್ಲದೆ ಅಲ್ಲೊಮ್ಮಿಲ್ಲೊಮ್ಮೆಂದು ಕಪ್ಪುಬಿಂದು ವಿರುವುದು. ಇದರ ಆಕಾರವು ಭೇದಿಸುತ್ತಲೇ ಇರುವುದು. ಇದು ತನ್ನಲ್ಲೊಮ್ಮೆಂದು ಭಾಗವನ್ನು ಮುಂದಕ್ಕೆ ಉದ್ದವಾಗಿ ಚಾಚಿ ಮತ್ತೆ ಒಳಕ್ಕೆ ಎಳೆದುಕೊಳ್ಳುತ್ತಿರುವುದರಿಂದ ಅಲ್ಲಿಂದಲ್ಲಿಗೆ ಸಂಚರಿಸುತ್ತಿರುವುದು. ಹೀಗೆ ಮುಂದೆ ಚಾಚಿದ ಭಾಗವು ಚಿತ್ರದಲ್ಲಿರುವ ಆಹಾರವಸ್ತುವನ್ನು ಹಿಡಿದು

ಕೊಳ್ಳುವುದು. ಮತ್ತೆ ಒಳಕ್ಕೆ ಎಳೆದುಕೊಳ್ಳುವಾಗ ಆಹಾರವೂ ಒಳಕ್ಕೆ ಹೋಗುವುದು. ಅಲ್ಲಿ ಅದು ಜೀರ್ಣವಾಗುವುದು. ಇದರ ಮೈ ಎಲ್ಲಾದರೊಂದೆಡೆ ಒಡೆದು ಮಲವನ್ನು ಈಚೆಗೆ ಬಿಸುಟ್ಟಬಿಡುವುದು. ಇವುಗಳ ಈ ಅಲ್ಪ ಜೀವಿಯು ಸಂಚರಿಸುವುದು, ಆಹಾರವನ್ನು ಹಿಡಿಯುವುದು, ಅವನ್ನು ಜೀರ್ಣಿಸಿಕೊಳ್ಳುವುದು, ಮಲವನ್ನು ವಿಸರ್ಜಿಸುವುದು ಎಂಬ ಅಂಶಗಳು ಸ್ಪಷ್ಟವಾಗಿ ಗೊತ್ತಾಗುವುದು. ಇಷ್ಟಲ್ಲದೆ ಅದನ್ನು ಮುಟ್ಟಿದರಾಗಲಿ ಚುಚ್ಚಿದರಾಗಲಿ ಅದು ಅಪಾಯಕ್ಕೆ ಗುರಿಯಾಗದಂತೆ ತನ್ನ ಶರೀರವನ್ನು ಒಟ್ಟಾಗಿ ಕೊಳ್ಳುವುದರಿಂದ ಅದಕ್ಕೆ ಇಂದ್ರಿಯಜ್ಞಾನವಿರುವುದು ಸ್ಪಷ್ಟವು. ಹೀಗೆಯೆ ಅದನ್ನು ನೋಡುತ್ತಾ ಬಂದಲ್ಲಿ ಕೊನೆಗೆ ಅದು ಎರಡು ಭಾಗವಾಗುವುದು. ಈ ಭಾಗಗಳೆರಡೂ ಬೇರೆಬೇರೆ ಪ್ರೋಟಸ್ಟ್ಗಳಾಗಿ ಜೀವಿಸುತ್ತಾ ಕೊನೆಗೆ ಮೊದಲಣ ಪ್ರೋಟಸ್ಟ್ನಂತೆ ಎರಡೆರಡಾಗಿ ಭಾಗವಾಗುವವು. ಹೀಗೆ ಇದು ವೃದ್ಧಿಯಾಗುತ್ತಿರುವುದು.

ಪ್ರೋಟಸ್ಟ್ ಎಂಬೀ ಅಲ್ಪಜೀವಿಯು ಸಂಕ್ಷೇಪವಾದಾ ಜೀವಚರಿತ್ರವನ್ನು ಚೆನ್ನಾಗಿ ಗ್ರಹಿಸುವುದವಶ್ಯ. ಏಕೆಂದರೆ, ಇದರಿಂದ ನಮ್ಮ ಬೃಹತ್ತಾದ ಶರೀರವು ಚಲಿಸುವ ರೀತಿಯೂ ಅನ್ನ ತಿಂದು ಜೀರ್ಣಿಸಿಕೊಳ್ಳುವ ಬಗೆಯೂ ಸುಖದುಃಖಾನುಭವ ವಿಜ್ಞಾನವೂ ಸಂತಾನೋತ್ಪತ್ತಿ ಕ್ರಮವೂ ಸಂಕ್ಷೇಪವಾಗಿ ಗೊತ್ತಾಗುವುದು. ನಾವೆಲ್ಲರು ಈ ಪ್ರೋಟಸ್ಟ್ನಂದದ ಅಲ್ಪಜೀವಿಗಳ ರಾಶಿಯಾಗಿದ್ದೇವೆ. ಅವಕ್ಕೂ ನಮಗೂ ಇರುವ ವ್ಯತ್ಯಾಸವೇನೆಂದರೆ:—ಈ ರಾಶಿಯಲ್ಲಿ ಜೀವಿಗಳು ಬೇರೆಬೇರೆ ಜೀವಿಸುತ್ತಾ ಮೇಲೆ ಹೇಳಿದ ಜೀವಲಕ್ಷಣಕಾರ್ಯಗಳನ್ನೆಲ್ಲ ಮಾಡುವುದಿಲ್ಲ. ಅವುಗಳಲ್ಲಿ ಕೆಲವು ಒಂದುಬಗೆ ಕಾರ್ಯವನ್ನೂ, ಕೆಲವು ಇನ್ನೊಂದುಬಗೆ ಕಾರ್ಯವನ್ನೂ ಮತ್ತೆ ಕೆಲವು ಮತೊಂದುಬಗೆ ಕಾರ್ಯವನ್ನೂ ಮಾಡುತ್ತಿವೆ. ಮಾಂಸಖಂಡಗಳನ್ನು ಚಲನೆಗೆ ಅನುಕೂಲಿಸುತ್ತಿವೆ. ಅನ್ನಾಶಯದವನ್ನು ಜೀರ್ಣಕಾರ್ಯ ಮಾಡುತ್ತಿರುವವು ಚೈತನ್ಯತಂತುಕಣಗಳು ಸುಖದುಃಖಾನುಭವಕ್ಕಾಗಿರುವವು. ಇಷ್ಟಲ್ಲದೆ ಇವುಗಳು ಒಂದನ್ನು ಮತೊಂದನುನರ್ತಿಸದೆ ಬೇರೆ ಬೇರೆಯಾಗಿ ತಮತಮ್ಮ ಕೆಲಸಗಳನ್ನು ಮಾಡುತ್ತಿರದೆ ಆದ್ಯಂತಶರೀರ ಪೋಷಣೆಯೇ ಗುರಿಯಾಗಿಟ್ಟುಕೊಂಡು ಕೆಲಸ ಮಾಡುತ್ತಿರುವುವು. ಹೀಗಿ

ರುವುದರಿಂದ ನಮ್ಮ ಶರೀರವು ಬೈಹತ್ತಾದ ಮಾಂಸಾಸ್ಥಿಗಳ ಜೋಷಣೆಯೆಂಬಭಿಪ್ರಾಯವನ್ನು ದೂರವಲ್ಲಿ ಬಿಟ್ಟು ಶರೀರದಲ್ಲಿ ಒಂದೊಂದು ಭಾಗವೂ ಮೇಲೆ ವರ್ಣಿಸಿದ ಬಂದುವಿನಂಥವಾದ ಕೋಟ್ಯನುಕೋಟಿ ಅಲ್ಪಜೀವಿಗಳ ಸಮುದಾಯವಾಗಿರುವುದೆಂಬ ನಿಶ್ಚಯವನ್ನು ಜಿತವಾಡಿಕೊಳ್ಳಬೇಕು. ಆದರೆ ಬೇರೆಬೇರೆ ಭಾಗಗಳು ಬೇರೆಬೇರೆ ಕೆಲಸಗಳನ್ನು ಮಾಡುತ್ತಿರುವುದರಿಂದ ಇವುಗಳೆಲ್ಲವೂ ಒಂದೇ ಬಗೆಯ ಆಕಾರವಿಲ್ಲವು. ಕೆಲಸಕ್ಕೆ ಅನುಗುಣವಾದ ಆಕಾರವುಂಟಾಗಿರುವುದು. ಮೈಯನ್ನು ಕಾಪಾಡುತ್ತಿರುವ ಚರ್ಮದ ಬಿಂದುಗಳು ತಿಪ್ಪೆಯಾಗಿಯೂ ದೃಷ್ಠವಾಗಿಯೂ, ಸ್ಥಿತಿಸ್ಥಾಪಕವಾಗಿಯೂ ಇರುವುವು. ಮಾಂಸಖಂಡಕಣಗಳು ಕೆಂಪಾಗಿಯೂ ಆಕುಂಚನಶೀಲಗಳಾದುದರಿಂದ ಚಲನೆಯನ್ನುಂಟುಮಾಡುವವಾಗಿಯೂ ಇರುವುವು. ಜೀವಯಾತ್ರೆಯಲ್ಲಿ ಈ ಬಿಂದುಗಳು ಕೃಶವಾಗುತ್ತಾ ಕೊನೆಗೆ ನಾಶವಾಗುವುವು ಹೊಸಬಿಂದುಗಳು ಉತ್ಪನ್ನವಾಗುತ್ತಿರುವುವು. ಹೀಗೆ ಕೃಶವಾದ ಬಿಂದುಗಳು ಹಳೇಬಿಂದುಗಳ ಸ್ಥಾನಕ್ಕಾಗಿ ಹೊಸ ಬಿಂದುಗಳನ್ನು ಉತ್ಪಾದಿಸುತ್ತಿರುವುವು. ಅನ್ನಾಶಯದ ಕಣವು ಅನ್ನಾಶಯದ ಹೊಸ ಕಣವನ್ನೂ ಮಾಂಸಖಂಡದ ಕಣವು ಮಾಂಸಕಣವನ್ನೂ ಆಯಾಜಾತಿಯುವ ತನುತನ್ನ ಜಾತಿಯ ಕಣಗಳನ್ನೂ ಉತ್ಪಾದಿಸುತ್ತಿರುವುವು.

ನಮ್ಮ ಶರೀರದಲ್ಲಿ ನಡೆಯುತ್ತಿರುವ ಕಾರ್ಯವಿಶೇಷಗಳನ್ನು ತಿಳಿಯುವದು ಈಗ ಸುಲಭವಾಗಿರುವುದು. ನಮ್ಮ ಶರೀರಕಾರ್ಯಗಳು ನೋಡುವುದಕ್ಕೆ ಬಹು ದುರ್ಗ್ರಹವಾಗಿದ್ದರೂ ಮೇಲೆ ಹೇಳಿದ ಅಲ್ಪಜೀವಜಂತುವಾದ ಪ್ರೋಟಿನ್ಯ್ಟನ ಜೀವಚರಿತ್ರದ ಮೂಲಕವಾಗಿ ಇವೆಲ್ಲ ಸ್ಪಷ್ಟವಾಗುವುವು. ಹಸಿವೆಯೆಂಬುದು ನಮ್ಮೆಲ್ಲರಿಗೂ ಗೊತ್ತೇ ಇದೆ. ಇದನ್ನು ತೃಪ್ತಿಪಡಿಸುವದು ನಮಗೆ ಮೊದಲು ಕಾರ್ಯವಾಗಿರುವದರಿಂದ ಹೊರಗಿನ ಬಗೆಬಗೆಯ ಆಹಾರವನ್ನು ಒಳಕ್ಕೆ ತೆಗೆದುಕೊಂಡು ಜೀರ್ಣವಾಗಿ ರಸವನ್ನು ತೆಗೆದುಕೊಂಡು ಹೋಗಿ ಅತ್ಯಲ್ಪಗಳಾದ ಆ ಕಣಗಳಿಗೆಲ್ಲ ಕೊಟ್ಟು ಅವುಗಳ ಪೋಷಣೆಗೆ ಅನುಕೂಲವಾಗುವಹಾಗೆ ಮಾಡುವ ಶರೀರಾವಯವಗಳ ವಿಷಯವಾಗಿ ಮೊದಲು ಕಲಿಯಲು ಪ್ರಯತ್ನಿಸುವುದು ತಕ್ಕದ್ದಾಗಿದೆ. ಆಹಾರವು ಜೀವನಿಲದ ವಸ್ತುವಾಗಿದೆ. ಶರೀರದೊಳಗೆ ಪರಿಣಮಿಸಿ ಜೀವಸಹಿತವಾಗಿ

ರುವ ಶರೀರದೊಂದು ಭಾಗವಾಗಬೇಕಾಗಿದೆ. ಸಕಲವಿಧಾಹಾರವನ್ನೂ ಶರೀರದಲ್ಲಿನ ಆಯಾ ಜಾತಿಯ ಕಣಗಳಿಗೆ ಸಜಾತ್ರೀಯವಾದ ಸಜೀವನಾದ ಕಣಗಳನ್ನಾಗಿ ಮಾಡುವುದೇ ಜೀರ್ಣಕಾರ್ಯವಾಗಿದೆ.

ಗಣಿತಶಾಸ್ತ್ರ.

ನಾಲ್ಕನೆಯದು.—ಗುಣಕವಲ್ಲಿ ಒಂದು ಭಾಗದ ಅಂಕೆಗಳು ಮತ್ತೊಂದು ಭಾಗದಲ್ಲಿರುವ ಅಂಕೆಗಳನ್ನು ನಿಶ್ಶೇಷವಾಗಿ ಭಾಗಿಸುವವಾಗಿದ್ದರೆ.

ವಿಧಿ.—ಈ ಎರಡು ಭಾಗಗಳಲ್ಲಿ ಚಿಕ್ಕದರಿಂದ ಗುಣಕವನ್ನು ಗುಣಿಸಿ ಬಂದ ಲಬ್ಧವನ್ನು ಗುಣಕದ ಚಿಕ್ಕ ಭಾಗವು ದೊಡ್ಡ ಭಾಗದಲ್ಲಿ ಎಷ್ಟಾವರ್ತಿ ಹೋಗುವದೋ ಅದರಿಂದ ಗುಣಿಸಿ ಬಂದ ಲಬ್ಧವನ್ನು ಸರಿಯಾದ ಸ್ಥಾನದಲ್ಲಿ ಬರೆದು ಮುಂದೆ ಹೇಳುವಂತೆ ಸಂಕಲನ ಮಾಡುವದರಿಂದ ಬೇಕಾದ ಉತ್ತರವು ಬರುವುದು.

ಉದಾಹರಣೆ (1) 8427×364.

ಇಲ್ಲಿ ಗುಣಕವು 364. 4 ಎಂಬ ಚಿಕ್ಕ ಭಾಗವು ಮತ್ತೊಂದು ಭಾಗವಾದ 36 ರಲ್ಲಿ ನಿಶ್ಶೇಷವಾಗಿ ಹೋಗುವದು. ಗುಣ್ಯವನ್ನು 4 ರಿಂದ ಗುಣಿಸಿ ಬಂದ ಲಬ್ಧವನ್ನು 90 ($=9\times10$) ರಿಂದ ಗುಣಿಸಿದರೆ ಗುಣ್ಯವನ್ನು 360 ($=4\times90$) ರಿಂದ ಗುಣಿಸಿದಂತಾಯಿತು. ಈ ಕೊನೇಲಬ್ಧಕ್ಕೆ ಗುಣ್ಯವನ್ನು 4 ರಿಂದ ಗುಣಿಸಿ ಬಂದ ಲಬ್ಧವನ್ನು ಸೇರಿಸಿದರೆ ಬೇಕಾದ ಉತ್ತರ ಬರುವದು. ಹ್ಯಾಗೆಂದರೆ.

8427
364

33708 = 8427×4
303372 = 8427×4×90=8427×360

ಉತ್ತರ 3067128 = 8127×364.

(2) 1507032 × 28824.

ಇಲ್ಲಿ ಗುಣಕವನ್ನು 288, 24 ಎಂದು ಎರಡು ಭಾಗಗಳಾಗಿ ಮಾಡಬಹುದು; 24, 288 ರಲ್ಲಿ 12 ಸಾರಿ ನಿಶ್ಶೇಷವಾಗಿ ಹೋಗುವದು. ಮೇಲೆ ಹೇಳಿದಂತೆಯೇ ಇದನ್ನೂ ಮಾಡುವದು. ಹ್ಯಾಗೆಂದರೆ.

1507032
24

6028128 = 1507032 × 4
3014064 = 1507032 × 20

36168768 = 1507032 × 24 .....(A)
1200

43402521600 = 1507032 × 24×1200
= 1507032 × 28800. . .....(B)

ಉತ್ತರ 43438690368 = (A+B) = 1507032×28824.

(3) 15673696087 × 2925325.

ಇಲ್ಲಿ ಗುಣಕವನ್ನು 2925, 325. ಎಂದು ಎರಡು ಭಾಗ ಮಾಡಬಹುದು ಮೊದಲನೆಯದು ಎರಡನೆಯ ದರ 9 ರಷ್ಟು ಇರುತ್ತಿದೆ ಆದುದರಿಂದ 325 ರಿಂದ ಗುಣಿಸಿ ಬಂದ ಲಬ್ಧವನ್ನು 9000 ದಿಂದ ಗುಣಿಸಿದರೆ ಗುಣ್ಯವನ್ನು 2925000 ದಿಂದ ಗುಣಿಸಿದಷ್ಟು ಲಬ್ಧ ಬರುವ

ದು. ಇದನ್ನೂ ಗುಣ್ಯವನ್ನು 325 ರಿಂದ ಗುಣಿಸಿ ಬಂದ ಲಬ್ಧವನ್ನೂ ಕೂಡುವದರಿಂದ ಗುಣ್ಯವನ್ನು 2925325 ರಿಂದ ಗುಣಿಸಿದರೆ ಬರುವ ಲಬ್ಧವು ಬರುವುದು.

(4) 51240×742.

ಇಲ್ಲಿ ಗುಣಕವನ್ನು 7, 42 ಎಂದು ಎರಡುಭಾಗ ಮಾಡ ಬಹುದು. 7 ಎಂಬದು 42 ರಲ್ಲಿ 6 ಸಾರಿ ಹೋಗು ತದೆ. ಗುಣ್ಯವನ್ನು 7 ರಿಂದ ಗುಣಿಸಿಬಂದ ಲಬ್ಧವನ್ನು 6 ರಿಂದ ಗುಣಿಸಿ ಬರುವ ಲಬ್ಧವನ್ನೂ ಮೇಲೆ ಹೇಳಿದ ಲಬ್ಧವನ್ನು ಸರಿಯಾದ ಸ್ಥಾನಗಳಲ್ಲಿ ಬರೆದು ಕೂಡು ವುದು. ಹ್ಯಾಗೆಂದರೆ,

$$\begin{array}{r} 51240 \\ 742 \\ \hline \end{array}$$

$35868000 = 51240 \times 700$

$2152080 = 51240 \times 7 \times 6 = 51240 \times 42$

ಉತ್ತರ $38020080 = 51240 \times (700+42) = 51240 \times 742.$

(5) 4567890123×13617.

ಇಲ್ಲಿ ಗುಣಕವನ್ನು 136, 17 ಎಂದು ಎರಡು ಭಾಗ ಮಾಡಬೇಕು. ಇದು ಅಭ್ಯಾಸದಿಂದ ಸುಲಭವಾಗು ವದು.

ಗಣಿತ.

I. $\dfrac{3\frac{1}{7}}{10\frac{1}{12}}$ ನ್ನು $\frac{1}{2}$ ರ $1\frac{5}{11}$ ರಿಂದ ಭಾಗಿಸು.

II. ·0435, 15·723, 127, ·00003 ಇವುಗಳನ್ನು ಕೂಡಿಸಿ 142·347 ರಿಂದ ಕಳೆ.

III. ಪ್ರತಿ ಸರ್ವಮಿಯೂ ನಾರ್ಚ್ ಮತ್ತು ನವಂಬರ್ ಸನು ತಾನೇ ಏ ದಿನಗಳು ಏನೇ ನಾವಾಗಿರುವದಕ್ಕೆ ಕಾರಣವೇನು ?

IV. ಒಂದು ಮನೆಯನ್ನು ರೂ. 3237 ಕ್ಕೆ 8 ಗೆ ಮಾರಿದ್ದರಿಂದ ಕೇಕಡಾ 7½ ನಷ್ಟವಾಯಿತು. ರೂ. 3675 ಗೆ ಮಾರಿದ್ದ ಪಕ್ಷದಲ್ಲಿ ಲಾಭ ಶೇ ನಷ್ಟವೇನು ? ಕೇಕಡಾ ಎಷ್ಟು ?

V. ಒಬ್ಬ ಮನುಷ್ಯನು 4 ಘಂಟೆ ಪೊತ್ತಿನಲ್ಲಿ 15 ಮೈಲಿ ದೂರ ನಡೆಯುವೇಕು. ಆದರೆ ಅವನು ಮೊದಲು 5 ಮೈಲಿಗಳನ್ನು ಘಂಟೆಗೆ 4 ಮೈಲಿ ಪ್ರಕಾರವೂ ಅನಂತರ 5½ ಮೈಲಿಗಳನ್ನು ಘಂಟೆಗೆ 3½ ಮೈಲಿಗಳ ಪ್ರಕಾರವೂ, ಪುನಃ 2½ ಮೈಲ್ ಗಳನ್ನು 3½ ಪ್ರಕಾರವೂ ನಡೆಯುತ್ತಾನೆ. ಮಿಕ್ಕ ದಾರಿಯನ್ನು ಘಂಟೆಗೆ ಎಷ್ಟು ಮೈಲಿಗಳ ಪ್ರಕಾರ ನಡೆಯಬೇಕು.

ವಸ್ತುಪಾತ.

ನಿಘಂಟು.

ಉಪಾಧ್ಯಾಯನು ಸ್ವಚ್ಛವಾದ ಒಳ್ಳೇ ಬಿಳಿಪಿನ ಗಚ್ಚೆಯನ್ನು ತರಗತಿಯ ಬಾಲಕರೆಲ್ಲರಿಗೂ ಕಾಣುವಂತೆ ಮೇಜಿನಮೇಲಿಡಬೇಕು. ನಂತರ ಬಾಲಕರನ್ನು ಪ್ರಶ್ನೆವಾಡಬೇಕು.

ಈ ಗಚ್ಚೆಯನ್ನು ನೋಡುವದರಿಂದ ನೀವೇನು ಕಲಿಯಬಹುದು?—ಅದರ ಬಣ್ಣವು ಬೆಳ್ಳಗಿದೆ.

ಇದನ್ನು ರುಚಿ ನೋಡಿದರೆ? ರುಚಿಯು ಉಪ್ಪಾಗಿದೆ.

ಇದನ್ನು ಮುಟ್ಟಿ ನೋಡಿದರೆ? ಗಚ್ಚೆಯಾಗಿಯೂ ಬರವಾಗಿಯೂ ಇದೆ

ಖಾತಕೊಕ್ಕೇಸಕ್ಕರ ಗಚ್ಚೆಯಾಗಿದೆ ನಿಮಗೆ ತಿಳಿಯುವದೆ? ಈ

ದು. ಇದನ್ನೊಗುಣ್ಯವನ್ನು 325 ರಿಂದ ಗುಣಿಸಿ ಬಂದ ಲಬ್ಧವನ್ನೂ ಕೂಡುವದರಿಂದ ಗುಣ್ಯವನ್ನು 2025325 ರಿಂದ ಗುಣಿಸಿದರೆ ಬರುವ ಲಬ್ಧವು ಬರುವುದು.

(4) 51240×742.

ಇಲ್ಲಿ ಗುಣಕವನ್ನು 7, 42 ಎಂದು ಎರಡುಭಾಗ ಮಾಡ ಬಹುದು. 7 ಎಂಬದು 42 ರಲ್ಲಿ 6 ಸಾರಿ ಹೋಗು ತದೆ. ಗುಣ್ಯವನ್ನು 7 ರಿಂದ ಗುಣಿಸಿಬಂದ ಲಬ್ಧವನ್ನು 6 ರಿಂದ ಗುಣಿಸಿ ಬರುವ ಲಬ್ಧವನ್ನೂ ಮೇಲೆ ಹೇಳಿದ ಲಬ್ಧವನ್ನೂ ಸರಿಯಾದ ಸ್ಥಾನಗಳಲ್ಲಿ ಬರೆದು ಕೂಡು ವುದು. ಹ್ಯಾಗೆಂದರೆ,

$$\begin{array}{r} 51240 \\ 742 \\ \hline \end{array}$$

$35868000 = 51240 \times 700$

$2152080 = 51240 \times 7 \times 6 = 51240 \times 42$

ಉತ್ತರ $38020080 = 51240 \times (700+42) = 51240 \times 742.$

(5) 4567890123×13617.

ಇಲ್ಲಿ ಗುಣಕವನ್ನು 136, 17 ಎಂದು ಎರಡು ಭಾಗ ಮಾಡಬೇಕು. ಇದು ಅಭ್ಯಾಸದಿಂದ ಸುಲಭವಾಗು ವದು.

ಗಣಿತ.

1. $\dfrac{3\frac{1}{7}}{10\frac{1}{12}}$ ನ್ನು $\frac{1}{8}$ ರ $1\frac{5}{11}$ ರಿಂದ ಭಾಗಿಸು.

II. ·0035, 15·723, 127, ·00008 ಇವುಗಳನ್ನು ಕೂಡಿಸಿ 1492·347 ರಿಂದ ಕಳಿ.

III. ಪ್ರತಿ ವರ್ಷವಲ್ಲಿಯೂ ಮಾರ್ಚ್ ಮತ್ತು ನವಂಬರ್ ಸಮ ತಾರೀಖು ವಿವಸಗಳು ಒಂದೇ ವಾರವಾಗಿರುವದಕ್ಕೆ ಕಾರಣವೇನು ?

IV. ಒಂದು ಮನೆಯನ್ನು ರೂ. 3237 ಕ್ಕೆ 8 ಗೆ ಮಾರಿದ್ದರಿಂದ ಶೇಕಡಾ $7\frac{1}{2}$ ನಷ್ಟವಾಯಿತು. ರೂ. 3675 ಗೆ ಮಾರಿದ್ದ ಪಕ್ಷದಲ್ಲಿ ಲಾಭವೊ ನಷ್ಟವೋ ? ಶೇಕಡಾ ಎಷ್ಟು ?

V. ಒಬ್ಬ ಮನುಷ್ಯನು 4 ಘಂಟೆ ಪೊತ್ತಿನಲ್ಲಿ 15 ಮೈಲಿ ದೂರ ನಡೆಯಬೇಕು. ಆದರೆ ಅವನು ಮೊದಲು 5 ಮೈಲಿಗಳನ್ನು ಘಂಟೆಗೆ 4 ಮೈಲಿ ಪ್ರಕಾರವೂ ಅನಂತರ $5\frac{1}{2}$ ಮೈಲಿಗಳನ್ನು ಘಂಟೆಗೆ $3\frac{3}{4}$ ಮೈಲಿಗಳ ಪ್ರಕಾರವೂ, ಪುನಃ 2 $\frac{1}{2}$ ಮೈಲ್ ಗಳನ್ನು $3\frac{1}{3}$ ಪ್ರಕಾರವೂ ನಡೆಯುತ್ತಾನೆ. ಮಿಕ್ಕ ದಾರಿಯನ್ನು ಘಂಟೆಗೆ ಎಷ್ಟು ಮೈಲಿಗಳ ಪ್ರಕಾರ ನಡೆಯಬೇಕು

ವಸ್ತುಪಾಠ.

೧೫ ಪ್ರಶ್ನೆ.

ಉಪಾಧ್ಯಾಯನು ಸ್ವಷ್ಟವಾದ ಒಳ್ಳೇ ಉಪ್ಪಿನ ಗಡ್ಡೆಯನ್ನು ತರಗತಿಯ ಬಾಲಕರೆಲ್ಲರಿಗೂ ಕಾಣುವಂತೆ ಮೇಜಿನಮೇಲಿಡಬೇಕು. ನಂತರ ಬಾಲಕನನ್ನು ಪ್ರಶ್ನೆಮಾಡಬೇಕು.

ಈ ಗಡ್ಡೆಯನ್ನು ನೋಡುವದರಿಂದ ನೀವೇನು ಕಲಿಯಬಹುದು?—ಅದರ ಬಣ್ಣವು ಬಿಳಿಯಗಿದೆ.

ಇದನ್ನು ರುಚಿ ನೋಡಿದರೆ? ರುಚಿಯುಳ್ಳದಾಗಿದೆ.

ಇದನ್ನು ಮುಟ್ಟಿ ನೋಡಿದರೆ? ಗಟ್ಟಿಯಾಗಿಯೂ ಒರಟಾಗಿಯೂ ಇದೆ.

ಯಾತಕ್ಕೊಕ್ಕೇನಕ್ಕರ ಗಟ್ಟಿಯಾಗಿದೆ ನಿನಗೆ ತಿಳಿಯುವದೆ? ಈ

ಉಪ್ಪಿನ ಚೂರುಗಳನ್ನು ಕೈಗೆ ತೆಗೆದುಕೊಂಡು ಪರೀಕ್ಷಿಸಿ, ನೀವೇ ಸುಣ್ಣಕ್ಕೂ ಉಪ್ಪಿಗೂ ಇರುವ ವ್ಯತ್ಯಾಸವನ್ನು ಹೇಳಿ? ಸಣ್ಣಸಣ್ಣ ಚೂರುಗಳು ಕೂಡಿ ಉಪ್ಪಿನ ಗಡ್ಡೆಯಾಗಿದೆ.

ಹೌದು. ಈ ಚೂರುಗಳನ್ನು ಹಳುಕುಗಳೆಂದು ಕರೆಯುವರು. ಇವು ರಂತೆಯೇ ಹಳುಕುಗಳಿಂದ ಕೂಡಿರುವ ಮತ್ತೊಂದು ಪದಾರ್ಥವನ್ನು ಹೇಳಿ?—'ಕೊಡಿಯಾಲದ ಕಲ್ಲುಸಕ್ಕರೆ.'

ಗಟ್ಟಿಯಾಗಿರುವದಲ್ಲದೆ ಉಪ್ಪಿನ ಗಡ್ಡೆಯೂ, ಕಲ್ಲುಸಕ್ಕರೆಯೂ, ಶುಭ್ರವಾಗಿ ಹೊಳೆಯುತ್ತಿರುವವು.

ಈ ಉಪ್ಪಿನ ಗಡ್ಡೆಯನ್ನು ನನ್ನ ಕೈಯಲ್ಲಿರುವ ಸುತ್ತಿಗೆಯಿಂದ ಹೊಡೆದರೇನಾಗುತ್ತೆ?—ಉಪ್ಪು ಚೂರುಚೂರಾಗುತ್ತೆ.

ಬಹಳ ಹೊತ್ತಿನವರೆಗೂ ಸುತ್ತಿಗೆಯಿಂದ ಹೊಡೆಯುತ್ತಿದ್ದರೇನಾಗುತ್ತೆ? ಸಣ್ಣಸಣ್ಣ ಚೂರುಗಳು ಅತ್ಯಂತ ಸೂಕ್ಷ್ಮಗಳಾಗಿ ಪುಡಿಯಾಗುತ್ತೆ?

ಒಳ್ಳೇದು—ಈ ಉಪ್ಪಿನ ಚೂರನ್ನು ನೀರಿನೊಳಗೆ ಹಾಕಿದರೇನಾಗುತ್ತೆ? ಉಪ್ಪು ಕರಗಿ ಹೋಗುವದು.

ಕರಗಿಹೋಗುವುದೆಂದರೇನು? ನಾವು ನೋಡುವದಕ್ಕೆ ಸಾಧ್ಯವಲ್ಲದ ಅಣುಗಳಾಗುವವು.

ಆದರೆ ಉಪ್ಪು ನೀರಿನಲ್ಲಿಯೇ ಇದೆ ಎಂಬುವದನ್ನು ಹ್ಯಾಗೆ ಗೊತ್ತು ಮಾಡಬಹುದು? ನೀರನ್ನು ರುಚಿ ನೋಡುವದರಿಂದ.

ಈ ನೀರಿನಲ್ಲಿರುವ ಉಪ್ಪನ್ನು ಪುನಃ ಹಳಕುಗಳಂತೆ ತೆಗಿಯುವ ವಿಧಾನವು ಗೊತ್ತುಂಟೊ? ತಿಳಿಯುವುದು, ನೀರನ್ನು ಮಾತ್ರ ಹೊರಡಿಸಿ ಬಿಡುವದರಿಂದ—ನೀರನ್ನು ಹೊರಡಿಸುವುದು ಹ್ಯಾಗೆ?—ಕುದಿಸುವದರಿಂದ.

ಉಪ್ಪು ಎಲ್ಲಿ ಶೇಖರವಾದದು ತಿಳಿಯುವದೆ? ಹೇಳುತ್ತೇನೆ ಕೇಳಿ. ಭೂಮಿಯ ಕೆಳಭಾಗದಲ್ಲಿ ಶೇಖರವಾಗಿರುತ್ತದೆ. ಕೆಲವು ಪ್ರದೇಶಗಳಲ್ಲಿ ಉಪ್ಪು ವಿಸ್ತಾರವಾಗಿ ಹರಡಿಕೊಂಡು ಮನೆಯ ಎತ್ತರವಿರುತ್ತದೆ. ಈ ಉಪ್ಪನ್ನು ಕಲ್ಲುಪ್ಪೆಂದು ಕರೆಯುವರು. ಇದು ಸ್ವಚ್ಛವಾಗಿಯೂ ಇಲ್ಲ ಶುಭ್ರವಾಗಿಯೂ ಇಲ್ಲ ಆದರೆ ರುಚಿನೋಡಲು ಉಪ್ಪೆಂದು ಗೊತ್ತಾಗುವುದು.

ಕಲ್ಲುಪ್ಪು ಮಿಶ್ರನಾದ ಭೂಮಿಯಮೇಲೆ ಮಳೇನೀರು ಬಿದ್ದು, ಉಪ್ಪನ್ನು ಕರಗಿಸಿ ದೊಡ್ಡದೊಡ್ಡ ಪದರಗಳಾಗಿ ವಿಭಜಿಸುವದು. ಇವಕ್ಕೆ ಉಪ್ಪಿನ ಮೊಳೆಗಳೆಂದು ಹೆಸರು. ಈ ಉಪ್ಪನ್ನು ಹೊಂದಬೇಕಾದರೆ ಭೂಮಿಯನ್ನು ಅಗಿಯಬೇಕು.

ಉಪ್ಪನ್ನು ಹೊಂದುವ ಇನ್ನೊಂದು ವಿಧಾನವ್ಯಾವುದು? ಸಮುದ್ರದ ನೀರನ್ನು ಕಾಯಿಸುವದರಿಂದ.

ನೀರಿನಿಂದ ಉಪ್ಪನ್ನು ತೆಗೆಯುವರೀತಿಯು ಗೊತ್ತಿದೆಯೊ? ಈ ನೀರನ್ನು ಆವಿಯರೂಪದಲ್ಲಿ ಹೊರಡಿಸಿಬಿಡುವದರಿಂದ.

ಸಮುದ್ರವನ್ನು ನಿಮ್ಮಲ್ಲಿ ಕೆಲವರು ನೋಡಿರಬಹುದು. ಸಮುದ್ರದ ನೀರನ್ನು ಕುಡಿಯಲು ನೀವೊಬ್ಬರೂ ಅಪೇಕ್ಷಿಸುವದಿಲ್ಲ. ಅದು ಉಪ್ಪಾಗಿರುವದಲ್ಲದೆ ರುಚಿನೋಡಲೂ ಸಹ ಅಸಹ್ಯವಾಗಿರುವದು.

ಉಪ್ಪಿನ ಉಪಯೋಗವೇನು ಹೇಳಿ? ನಮ್ಮ ಆಹಾರದ ಜೊತೆಯಲ್ಲಿ ಉಪ್ಪನ್ನು ತಿನ್ನುತ್ತೇವೆ.

ನಾವು ಅನ್ನವನ್ನು ತಿನ್ನುವಷ್ಟು ಉಪ್ಪನ್ನು ತಿನ್ನಬಹುದೆ? ಇಲ್ಲ. ಅಲ್ಲದೆ ಉಪ್ಪನ್ನು ಹೆಚ್ಚಾಗಿ ತಿಂದರೆ ಬಾಯಾರಿಕೆ ಆಗುವದು.

ಉಪ್ಪನ್ನು ತಿನ್ನುವದಕ್ಕೆ ಎರಡುಕಾರಣಗಳಿವೆ. ನಮ್ಮ ಆಹಾರವನ್ನು ರುಚಿಯಾಗಿ ಮಾಡುವದಕ್ಕೂ, ಮತ್ತು ನಮ್ಮ ಆರೋಗ್ಯಕ್ಕೂ ಉಪ್ಪು ಅವಶ್ಯಕವಾದದ್ದು.

ಉಪ್ಪಿನ ಮತ್ತೊಂದು ಪ್ರಯೋಜನವೇನು? ಬಹಳ ದಿನಗಳವರೆಗೂ ಇಟ್ಟು ತಿನ್ನತಕ್ಕ ಪದಾರ್ಥಗಳು ಕೆಡದಂತೆ ಇರುವದಕ್ಕೆ ಉಪ್ಪು ಅವಶ್ಯಕವಾದದ್ದು.

ಇದೂಅಲ್ಲದೆ ಕುರಿ, ದನ, ಕುದುರೆ ಮುಂತಾದವುಗಳು ಮನುಷ್ಯರಂತೆ ಉಪ್ಪನ್ನು ಬಯಸುತ್ತವೆ. ಅವುಗಳ ಆಹಾರದಲ್ಲಿ ಸ್ವಲ್ಪ ಉಪ್ಪನ್ನು ಮಿಶ್ರ ಮಾಡಿಕೊಡುವದು ಒಳ್ಳೇದು.

—:-0-:—

ಇರುವೆ.

॥ ಶರಷಟ್ಪದಿ ॥

ಕಿರಿದಾಗಿಹುದಂ । ದುರುವೆಯಿತರಳನೆ । ಚರಣಾಳಿ ತುಳಯುಲುಬೇಸ ॥
ಕರುಣಾಳು ನಿನ್ನೊಳ್ । ಪರಮಾತ್ಮನಿಗೆಂ । ತಿರು ಗ್ರದಂತೆಯಿದರೊಳಗಿಹುದು ॥
ತನುಜರೊಳಾಸೆಯು । ತನುವಿನೊಳಾಸೆಯು । ಮನೆಯಾಸೆಯು ತಿಂಡಿಗಳಾಸೆ ॥
ನಿನಗಿರುವಂಬದೆ । ಮನನಿಲದಕಿರುವದು । ಹನನವಾಡುವ್ರದು ಸರಿಯಲ್ಲಾ ॥೩॥
ಬಿದುರನಿಗಳುನಿನ । ಗೊದಗಿಬೆಳಕುತೆ ೋ । ರಿಪಹಾಗೆನೆ ತೋರುವರಿವಕೂ ॥
ಅಪರಿಂಜೀನಿಯು । ಪವನಿಂ ತುಳಿವ್ರದು । ಹದನಲ್ಲವ್ರ ತಿಳಿತಿಳ ಮಗುವೇ ॥ ೩ ॥

(ಜಮರಾಯಾಚಾರ್ಯರು)

೩೦ನೇ ಪುಟ-೫ನೇ ಸಂಜಿ:—೧೦ ಅನ್ಯಾಯಗಳು = ಎಂಬುದರ ಬದಲಿ ೧೦೦ ಪವ್ಯಗಳು ಎಂದಿರಬೇಕು

೩೩ನೇ ಪುಟ-೩ ನೇ ಸಂಜಿ:—ಈ ಸಂಚಿಕೆ ಪ್ರಕಾಶ ಮಾಡಲ್ಪಡುವ್ರದು = ಈ ಸಂಚಿಕೆಯಲ್ಲಿ ಪ್ರಕಾಶ ಮಾಡಲ್ಪಡುವ್ರದೆಂದು.

ವಿದ್ಯಾಭ್ಯಾಸದ ಇಲಾಖೆ.

ಇನ್ಸ್ಪೆಕ್ಟರ್‌ನಾಮೆ.

೧೮೮೮ನೇ ಇಸವಿ ಫೆಬ್ರುವರಿ । ನೇ ತಾರೀಖು ಲಾಗಾಯಿತು ದೇಶಭಾಷೆಯ ಸರ್ಕಾರಿ ಸ್ಕೂಲ್‌ಗಳಲ್ಲಿಯೂ, ಮ್ಯುನಿಸಿಪಲ್ ಸ್ಕೂಲ್‌ಗಳಲ್ಲಿಯೂ ದ್ರವ್ಯಸಹಾಯ ಪಡೆಯುತ್ತಲಿರುವ ಸ್ಕೂಲ್‌ಗಳಲ್ಲಿಯೂ ಇರಬೇಕಾದ ಫೀ ದರಗಳನ್ನೂ, ಮಾಫಿ ಮತ್ತು ಅರ್ಧ ಮಾಫಿ ವಿದ್ಯಾರ್ಥಿಗಳ ಸಂಖ್ಯೆಯನ್ನೂ ಕುರಿತು ಇದರಡಿ ಕಂಡ ನಿಬಂಧನೆಗಳು ಜಾರಿಯಲ್ಲಿ ಬರತಕ್ಕದ್ದು.

1. ಹೋಬಳೀ ಸ್ಕೂಲ್‌ಗಳಲ್ಲಿ ಗರ್ಲ್‌ಸ್ಕೂಲ್‌ಗಳಲ್ಲಿಯೂ ಫೀ ಯನ್ನು ಕೊಡತಕ್ಕವಿಲ್ಲ. ಇವುಗಳಹೊರತು ಮಿಕ್ಕ ಸರ್ಕಾರಿ ಸ್ಕೂಲ್, ಮ್ಯುನಿಸಿಪಲ್ ಸ್ಕೂಲ್, ದ್ರವ್ಯ ಸಹಾಯವನ್ನು ಪಡೆಯುತ್ತಲಿರುವ ಸ್ಕೂಲ್ ಇವುಗಳಲ್ಲಿ ತಿಂಗಳಕಟ್ಟಳೆ ಫೀ ವಸೂಲ್ ಮಾಡತಕ್ಕದ್ದು.

2. ಪ್ರತಿ ತಿಂಗಳಲ್ಲೂ ಫೀ ಯನ್ನು ಕೊಡುವದಕ್ಕೆ 15 ನೇ ತಾರೀಖೇ ಕಡೆಯು ದಿನವಾಗಿರತಕ್ಕದ್ದು. 15 ನೇ ತಾರೀಖು ರಜಾ ದಿವಸವಾಗಿರುವ ಪಕ್ಷಕ್ಕೆ ಆ ತಾರೀಖಿನ ತರುವಾಯ ಸ್ಕೂಲನ್ನು ತೆಗೆದ ದಿವಸವೇ ಆ ಬಗ್ಗೆ ಕಡೆಯ ದಿನವಾಗಿರತಕ್ಕದ್ದು. ಬುಬ್ಬಿ ವಿದ್ಯಾರ್ಥಿಯು ಸದರಿ ಕಡೆಯದಿನ ಫೀ ಯನ್ನು ಕೊಡಲು ತಪ್ಪಿದರೆ ಹೆಡ್ಮಾಸ್ಟರಿಗೆ ಯುಕ್ತವಾಗಿ ತೋರುವ ಪಕ್ಷಕ್ಕೆ ಅರ್ಧಣೆಗೆ ವಿನಾವದಂತೆ ಜುರ್ಮಾನೆ ಹಾಕಬಹುದು. ಆ ವಿದ್ಯಾರ್ಥಿಯು ಫೀ ಯನ್ನೂ, ಜುರ್ಮಾನೆ ಹಾಕಿದ್ದಪಕ್ಷದಲ್ಲಿ ಅದನ್ನೂ ಸದರಿ ಕಡೆಯುದಿನದಿಂದ ಹತ್ತು ದಿನಗಳ ಒಳಗಾಗಿ ಕೊಡದೆ ಹೋದರೆ ಆ ವಿದ್ಯಾರ್ಥಿಯ ಹೆಸರನ್ನು ರಿಜಸ್ಟರಿನಿಂದ ತೆಗೆದು ಹಾಕತಕ್ಕದ್ದು. ಅವನು ಪುನಃ ಸೇರಿಸಲ್ಪಟ್ಟರೆ ಸ್ಕೂಲ್ ಫೀ ಯನ್ನು ಕೊಡಬೇಕಾದ ಕಡೆಯುದಿನ ಅವನಿಂದ ಸಲ್ಲತಕ್ಕಾಗಿದ್ದ ಫೀಯನ್ನು ಇನ್ನೊಂದುಸಾರಿ ಅಡ್ಮಿಷನ್ ಫೀ ಎಂದರೆ ಹೊಸದಾಗಿ ಸ್ಕೂಲಿಗೆ ಸೇರುವಾಗ ಕೊಡತಕ್ಕ ಫೀ ಯನ್ನೂ ಸಹ ಕೊಡತಕ್ಕದ್ದು.

3. ಬಡವರಾಗಿಯೂ ಯೋಗ್ಯರಾಗಿಯೂ ಇರುವ ವಿದ್ಯಾರ್ಥಿಗಳಿಗೆ ಮಾತ್ರ ಫೀ ಎಲ್ಲವನ್ನಾದರೂ ಅರ್ಧ ಫೀ ಯನ್ನಾದರೂ ಮಾಫ್ ಮಾಡಬಹುದು.

4. ಬಾಲಕರು ಓದುವ ತಾಲ್ಲೂಕು ದೇಶಭಾಷೆಯ ಸ್ಕೂಲ್‌ಗಳಲ್ಲಿ ಈ ಕೆಳಗೆ ಕೊಟ್ಟಿರುವ ದರಗಳಿಗೆ ಕಡಮೆಯಾಗಿ ಫೀ ಯನ್ನು ವಸೂಲ್ಮಾಡಕೂಡದು.

5 ನೇ, 4 ನೇ, 3 ನೇ, 2 ನೇ, ತರಗತಿಗಳಲ್ಲಿ	2 ಆಣೆ
1 ನೇ ತರಗತಿಯಲ್ಲಿಯೂ, ಮಕ್ಕಳ ತರಗತಿಯಲ್ಲಿಯೂ	1 ಆಣೆ.

5. ತಾಲ್ಲೂಕಿನ ಸರ್ಕಾರಿ ಸ್ಕೂಲ್, ಮ್ಯುನಿಸಿಪಲ್ ಸ್ಕೂಲ್, ದ್ರವ್ಯಸಹಾಯವನ್ನು ಪಡೆಯುತ್ತಲಿರುವ ಸ್ಕೂಲ್, ಇವುಗಳ 4 ನೇ ತರಗತಿಯ ಕೆಳಗಿರುವ ತರಗತಿಗಳಿಗೆ ಪೂರ್ಣಫೀ ವಿದ್ಯಾರ್ಥಿಗಳನ್ನಾಗಲಿ, ಅರ್ಧ ಪೂರ್ಣಫೀ ವಿದ್ಯಾರ್ಥಿಗಳನ್ನಾಗಲಿ ಸೇರಿಸಕೂಡದು. ಪೂರ್ಣ ಮತ್ತು ಅರ್ಧಪೂರ್ಣ ವಿದ್ಯಾರ್ಥಿಗಳು ಸೇರಿ, 4 ನೇ 5 ನೇ ತರಗತಿಗಳಲ್ಲಿ ಸರಾಸರಿ ಪೂರ್ಣಹಾಜರಾಗುವವರಲ್ಲಿ ಕೇಕಡಾ 20 ಮಂದಿಗೆ ಹೆಚ್ಚಾಗಿರಕೂಡದು.

6. ಲೋಕಲ್ ಫಂಡಿನಿಂದ ಇಡಲ್ಪಟ್ಟಿರುವ ತಾಲ್ಲೂಕ್ ಬ್ರಾಂಚ್ ಸ್ಕೂಲ್‌ಗಳಲ್ಲಿ ಇನ್ನೊಂದು ಹುಕುಂ ಕೊಡುವವರೆಗೂ ಈಗಿನಂತೆಯೇ ಪ್ರತಿ ತರಗತಿಯಲ್ಲಿಯೂ 1 ಆಣೆಯ ಮೇರೆಗೆ ಫೀ ಯನ್ನು ವಸೂಲ್ಮಾಡತಕ್ಕದ್ದು.

7. ಬೆಂಗಳೂರು ಮತ್ತು ಮೈಸೂರು ಷಹರ್‌ಗಳಲ್ಲಿ ದ್ರವ್ಯಸಹಾಯವನ್ನು ಪಡೆಯುತ್ತಲಿರುವ ಸ್ಕೂಲ್‌ಗಳ ಹೆಡ್ಮಾಸ್ಟರುಗಳೂ ಮತ್ತು ಮ್ಯುನಿಸಿಪಲ್ ಸ್ಕೂಲ್‌ಗಳ ಹೆಡ್ಮಾಸ್ಟರುಗಳೂ ದೇಶಭಾಷೆಯ ವಿದ್ಯಾಭ್ಯಾಸಕ್ಕಾಗಿ 4 ನೇ ನಿಬಂಧನೆಯಲ್ಲಿ ಕೊಟ್ಟಿರುವ ದರಗಳಿಗಿಂತ ಹೆಚ್ಚಾಗಿ ಸ್ಕೂಲ್ ಫೀಯನ್ನು ವಸೂಲ್ಮಾಡಬೇಕೆಂದು ಪರಸ್ಪರ ಒಪ್ಪುವ ಪಕ್ಷಕ್ಕೆ ವಸೂಲ್ಮಾಡಬಹುದು. ಹಾಗೆ ಉಭಯತ್ರರು ಒಪ್ಪಿಕೊಳ್ಳುವದಾ

ದರೆ ಸರ್ಕಾರದ ಸ್ಕೂಲ್‌ಗಳಲ್ಲಿಯೂ ಆ ದರಗಳವೇರಗೆಯೇ ಫೀ ವಸೂಲ್ಮಾಡಲ್ಪ ಡುವದು.

೪. ಸರ್ಕಾರದ ಪಾಠಶಾಲೆಗಳಲ್ಲೆಲ್ಲಾ ಮುಸಲ್ಮಾ ವಿದ್ಯಾರ್ಥಿಗಳು ಕೊತ್ತಾಗಿ ರುವ ಫೀ ದರಗಳಲ್ಲಿ ಅರ್ಧವನ್ನು ಕೊಡತಕ್ಕದ್ದು.

ಹೆಚ್. ಜೆ. ಭಾಭಾ,
ಸೆಕ್ರಟರಿ.

ಸಮಾಚಾರಗಳು ಮತ್ತು ಸೂಚನೆಗಳು.

೧. ಕಳೆದ ಫೆಬ್ರವರಿ ತಿಂಗಳಿಂದ ಮೈಸೂರು ಮಹಾರಾಜರ ಕಾಲೀಜಿನಲ್ಲಿ ಬಿ. ಎ. ತರಗತಿಗಳು ಏರ್ಪಡಿಸಲ್ಪಟ್ಟವು. ಐಚ್ಛಿಕ ವಿಷಯಗಳಾದ ಚರಿತ್ರೆ ಮತ್ತು ಗಣಿತಗಳನ್ನು ಪ್ರಕೃತಕ್ಕೆ ಬೋಧಿಸುವಂತೆ ನಿರ್ಣಯವಾಗುತ್ತದೆ. ಮೆ ॥ ಟಿ. ಜೆನಹ್ಯಾಸ್ ಎಂ. ಎ. ಮತ್ತು ಮೆ ॥ ಅಡಾಲ್ಫಸ್ ಬಿ. ಎ. ಇವರು ಉಪಾಧ್ಯಾಯರಾಗಿ ನಿಯಮಿಸಲ್ಪಟ್ಟಿದಾರೆ. ಸರ್ಕಾರದವರು ಮಾಡಿದ ಈ ಏರ್ಪಾಡಿನಿಂದ ವಿದ್ಯಾರ್ಥಿಗಳಿಗೆ ಬಹು ಪ್ರಯೋಜನವಾಯಿತು. ಪೂರ್ವದಲ್ಲಿ ಮೈಸೂರು ಕಾಲೀಜಿನಿಂದ ಎಫ್. ಎ. ಪರಿಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಬಿ. ಎ. ಪರಿಕ್ಷೆಗೆ ಓದುವುದಕ್ಕಾಗಿ ಬೆಂಗಳೂರು ಅಥವ ಮದರಾಸಿಗೆ ಹೋಗಬೇಕಾಗಿತ್ತು. ಕೆಲವರು ಉಪಪತ್ತಿ ಸಾಲದೆ ಬಿಟ್ಟುಬಿಡುತ್ತಿದ್ದರು. ಈಗ ಈ ಅನಾನುಕೂಲಗಳೆಲ್ಲ ನಿವಾರಣೆಯಾಯಿತು.

(3) ಶಿಕ್ಷಕನಿಗೂ ಶಿಷ್ಯರಿಗೂ ಪರಸ್ಪರಾನುರಾಗವು ಹೆಚ್ಚುವದು.

ಈ ಪದ್ಧತಿಯನ್ನು ಅನುಸರಿಸಲು ಒಂದೊಂದು ತರಗತಿಗೆ ಒಬ್ಬೊಬ್ಬ ಉಪಾಧ್ಯಾಯನು ಅವಶ್ಯಕವಾದುದರಿಂದ, ದ್ರವ್ಯಸಹಾಯವು ವಿಶೇಷವಾ ಅವಶ್ಯಕವೆಂದು ಕೆಲವರು ಆಕ್ಷೇಪಿಸುವರು. ಮೇಲೆ ಹೇಳಿದ ಎಲ್ಲಾ ಪದ್ಧತಿಗಳಿಗಿಂತಲೂ, ಇದು ಉತ್ಕೃಷ್ಟವಾದುದರಿಂದ, ನಮ್ಮ ದೇಶದ ಆಂಗ್ಲೇಯಪಾಠಶಾಲೆಗಳಲ್ಲಿಯು ಮತ್ತು ಕನ್ನಡಪಾಠಶಾಲೆಗಲ್ಲಿಯು ಈ ಪದ್ಧತಿಯು ಆಚರಣೆಯಲ್ಲಿ ಇರುವುದಲ್ಲದೆ ಯೂರೋಪ್ ಅಮೆರಿಕಾ ಖಂಡಗಳಲ್ಲಿ ವಿಶೇಷವಾದ ಪ್ರಾಮುಖ್ಯತೆಯನ್ನು ಹೊಂದುತಾ ಬರುತ್ತಿದೆ.

ಡಿ. ವೆಂಕಟರಾವ್ಯ್ಯ, ಬಿ. ಎ.

ವಸ್ತುಪಾಠ.

(ತೇ ಎಲೆ. TEA.)

ಉಪಾಧ್ಯಾಯರು, ಮೇಜಿನಮೇಲೆ ತೇ ಎಲೆಯ ಎರಡುಮೂರು ಪೊಟ್ಟಣಗಳನ್ನು ಇಟ್ಟು ಒಬ್ಬ ಬಾಲಕನನ್ನು ಕರೆದು, ರಾಮ! ಇದು ಏನು?

ರಾಮು—ಇದು ತೇ ಎಲೆಯ ಪೊಟ್ಟಣಗಳು.

ಉಪಾಧ್ಯಾಯರು—ಇದು ನಿನಗೆ ಹ್ಯಾಗೆ ಗೊತ್ತು?

ರಾಮು—ನಮ್ಮ ಅಣ್ಣನು ನಿತ್ಯವೂ ಸಾಯಂಕಾಲದಲ್ಲಿ ಇದರ ಕಷಾಯವನ್ನು ತೆಗೆದುಕೊಳ್ಳುವನು. ಆಗಾಗ್ಯೆ ಅವನ ಸ್ನೇಹಿತರಿಗೆ ಕೊಡುವನು.

ಉಪಾ—ಈ ಕಷಾಯವನ್ನು ನೀನು ಯಾವಾಗಲಾದರೂ ತೆಗೆದುಕೊಂಡು ಇರುವೆಯೋ?

ರಾಮು—ನಾನು ಬಂದುದಿವಸ ಸಾಯಂಕಾಲ, ಯಾವ ಕಾರಣದಿಂದಲೋ, ಸೋಮಾರಿಯಾಗಿ ಇದ್ದೆನು; ಯಾವ ಕೆಲಸ ಮಾಡಲಿಕ್ಕೂ ಮನಸ್ಸು ಇರಲಿಲ್ಲ; ಬಹು ಅಲಸಿಕೆಯಾಗಿತ್ತು. ಆ ಸಾಯಂಕಾಲ ನಮ್ಮ ಅಣ್ಣನು, ನನ್ನನ್ನು ನೋಡಿ ಸ್ವಲ್ಪ 'ಟಿ' ತೆಗೆದುಕೊ ಎಂದನು. ನಾನು ಹಾಗೇ ಮಾಡಿದೆನು.

ಉಪಾ—ಆಮೇಲೆ ನಿನಗೆ ಏನಾಯಿತು?

ರಾಮು—ನಾನು 'ಟಿ' ತೆಗೆದುಕೊಂಡೊಡನೆಯೇ ನನಗೆ ಬಹಳ ಲವಲವಿಕೆಯುಂಟಾಯಿತು. ರಾತ್ರೆ ಬಹಳಹೊತ್ತು ಎಚ್ಚರವಾಗಿತ್ತು. ನನ್ನ ಪಾಠವನ್ನೆಲ್ಲಾ ಚೆನ್ನಾಗಿ ಓದಿಕೊಂಡೆನು.

ಉಪಾ—(ಇತರ ಬಾಲಕರಿಗೆ) ಟಿಯನ್ನು ತೆಗೆದುಕೊಳ್ಳುವದರಿಂದ ಮನಸ್ಸಿಗೆ ಬಂದುವಿಧವಾದ ಲವಲವಿಕೆಯುಂಟಾಗುವುದು. ವಿಶೇಷ ನಿದ್ರೆಯು ತಪ್ಪುವುದು. ರಾತ್ರೆಯುವೇಳೆಯಲ್ಲಿ ವಿಶೇಷವಾಗಿ ಕೆಲಸವನ್ನು ಮಾಡುವವರು ಟಿಯನ್ನು ಬಹಳವಾಗಿ ಸೇವಿಸುವರು.

ರಾಮುನನ್ನು ಕಳುಹಿಸಿ ಇನ್ನೊಬ್ಬ ಬಾಲಕನನ್ನು ಕರೆದು ಈ ಪೆಟ್ಟಿಗೆಯಮೇಲೆ ಹಚ್ಚಿರುವ ಚೀಟಿಯನ್ನು ಓದು?

ಗೋವಿಂದ—ಆರೆಂಜ್, ಚೈನಾ,

ಉಪಾ—ಇನ್ನೊಂದು ಪೆಟ್ಟಿಗೆಯಮೇಲೆ ಬರೆದಿರುವುದನ್ನು ಓದು?

ಗೋವಿಂದ—ಕಾಂಗೊ, ನೀಲಗಿರಿ.

ಉಪಾ—ಇದರಮೇಲೆ ಏನು ಬರೆದಿದೆ?

ಗೋವಿಂದ—ಗ್ರೀನ್ ಲೀಡರ್, ಆಸ್ಸಾಂ.

ಉಪಾ—ಈ ನೀಲಗಿರಿ, ಆಸ್ಸಾಂ, ಇವುಗಳನ್ನು ಭೂಪಟದಲ್ಲಿ ತೋರಿಸು?

ಬಾಲಕನು ತೋರಿಸುವನು.

ಉಪಾ—ಈ ಸ್ಥಳಗಳಿಂದ ವಿಶೇಷವಾಗಿ ರಫ್ತಾಗುವ ಪದಾರ್ಥವು ಯಾವದು.

ಬಾಲಕ—ತೇ ಎಲೆ.

ಉಪಾ—ಯಾತಕ್ಕೋಸ್ಕರ ಇದನ್ನು ವಿಶೇಷವಾಗಿ ರಫ್ತು ಮಾಡುವರು?

ಬಾಲಕ—ಇದನ್ನು ವಿಶೇಷವಾಗಿ ಆ ಸ್ಥಳಗಳಲ್ಲಿ ಬೆಳೆಯುವದರಿಂದ.

ಉಪಾ—ಇದನ್ನು ಬೆಳೆಯುವ ಕ್ರಮವು ಹ್ಯಾಗೆ? ಹೇಳುವೆನು ಕೇಳು.

ಭೂಮಿಯನ್ನು ಹದಮಾಡಿಕೊಂಡು ತೇಎಲೆಯ ಬೀಜವನ್ನು ಸಾಲಾಗಿ ಬಿತ್ತುವರು. ಒಂದು ಸಾಲಿನಿಂದ ಇನ್ನೊಂದು ಸಾಲಿಗೆ ಸುಮಾರು ೫—೬ ಅಡಿಗಳಷ್ಟು ಅಗಲ ಸ್ಥಳ ಬಿಡುವರು. ಬೀಜ ಚಲ್ಲಿದ ಸ್ಥಳಗಳಲ್ಲಿ ಸೊಪ್ಪು ಸೊದೆ ಬೆಳೆಯುವಂತೆ ಬಹಳ ಜಾಗರೂಕತೆಯಿಂದ ಕಸಕಡ್ಡಿಯನ್ನು ತೆಗೆದು ಪಾಕು ಮಾಡುವರು. ಗೋವಿಂದ! ಯಾತಕ್ಕೋಸ್ಕರ ಕಸಕಡ್ಡಿಯನ್ನೆಲ್ಲಾ ಆಯಿದು ಭೂಮಿಯನ್ನು ಪಾಕುಮಾಡುವರು?

ಗೋವಿಂದ—ಕಸಕಡ್ಡಿಗಳು ಹೆಚ್ಚಿ ಸಸಿಗಳ ಏಳಿಗೆಗೆ ತೊಂದರೆ ಬಾರದಂತೆ

ಉಪಾ—ಕೆಲವು ವಾರಗಳ ನಂತರ ಮೊಳಕೆಯು ಹೊರಡಲಿಕ್ಕೆ ಆರಂಭಿಸಲು, ಜನಗಳು ಭೂಮಿಯು ತಂಪಾಗಲಿಕ್ಕಾಗಿ ಮೇಲ್ಮೇಲೆ ನೀರು ಹೊಯ್ಯುವರು. ಸಾಧಾರಣವಾಗಿ ನೀರು ಹೊಯ್ಯುತಕ್ಕ ಜನಗಳನ್ನು ಎರಡು ಪಂಗಡಗಳನ್ನಾಗಿ ಮಾಡಿ ಒಂದು ಪಂಗಡದವರನ್ನು ನೀರು ಹೊತ್ತುಕೊಂಡು ಬರುವದಕ್ಕೂ, ಇನ್ನೊಂದು ಪಂಗಡದವರನ್ನು ನೀರು ಹೊಯ್ಯುವದಕ್ಕೂ ನಿಯಮಿಸುವರು.

ಉಪಾ—ಹೀಗೆ ನೀರಿನವರನ್ನು ಎರಡು ಪಂಗಡವಾಗಿ ಮಾಡುವದರಿಂದ ಪ್ರಯೋಜನವೇನು?

ಗೋವಿಂದ—ಕೆಲಸವು ಜಾಗ್ರತೆಯಾಗಿಯೂ ಸುಲಭವಾಗಿಯೂ ನೆರವೇರುವುದು.

ಉಪಾ—ಹೀಗೆಯೆ ದೊಡ್ಡದಾದ ಒಂದು ಕೆಲಸವನ್ನು ನೆರವೇರಿಸಬೇಕಾದರೆ ಅನೇಕಮಂದಿ ಸೇರಿ ಪ್ರತಿಯೊಬ್ಬನೂ ಒಂದೊಂದು ಕೆಲಸ ಮಾಡಬೇಕು ಹೀಗೆ ಮಾಡೋಣದರಲ್ಲಿ ಬಹಳ ಅನುಕೂಲವಿರುತ್ತೆ. ಇದು ಹಾಗಿರಲಿ ಕೆಲವು ಕಾಲಗಳು ಕಳೆದಮೇಲೆ ಸಸಿಯು ಚೆನ್ನಾಗಿ ಬೆಳೆಯುವದು. ಆಗ ಬೆಳೆದ ಗಿಡದ ಎತ್ತರವು ನಾಲ್ಕು ಅಡಿಯಿಂದ ಆರು ಅಡಿಯ ವರೆಗೂ ಇ

ಇಹುದು. ಗಿಡವು ಸುಮಾರು ಮೂರು ನಾಲ್ಕು ಅಡಿಗಳ ಉದ್ದ ಬೆಳೆದಾ ಗಿಭ್ಯ ಗಿಡಗಳಿಂದ ಎಲೆಯನ್ನು ಬಿಡಿಸುವುದಕ್ಕೆ ಆರಂಭಿಸುವರು. ಇದರ ಎಲೆಯು ಗುಲಾಬಿ ಹುವ್ವಿನ ಎಲೆಯಂತೆ ಸುಮಾರು ಒಂದು ಅಂಗುಲದಿಂದ ಎರಡು ಅಂಗುಲ ಉದ್ದ ಇರುವುದು. ಇದರ ಬಣ್ಣವು ಯಾವಾಗಲು ಹಸರು. ಇದರ ಹುವ್ವು ಜಾಜಿಹುವ್ವಿನಂತೆ ಬೆಳ್ಳಗೆ ಇರುವದು. ಈ ಗಿಡದ ಎಲೆಯೇ ಮುಖ್ಯವಾದ್ದರಿಂದ ಅದನ್ನು ಬಿಡಿಸುವದು, ಒಟ್ಟುಸೇರಿಸುವದು; ರೇಖೆ ಮಾಡು ವದು ಹ್ಯಾಗೆ ಎಂಬುದನ್ನು ಮೊದಲು ತಿಳಿಯಬೇಕಾದದ್ದು ಅವಶ್ಯಕವು.

ಎಲೆಯನ್ನು ಬಿಡಿಸಿ ಕೂಡಿಹಾಕುವ ವಿಧಾನ.

ಸಾಧಾರಣವಾಗಿ ಮೆ ಅಥವಾ ಜೂ ತಿಂಗಳಲ್ಲಿ ಎಲೆಯನ್ನು ಬಿಡಿಸುವ ದಕ್ಕೆ ಆರಂಭಿಸುವರು. ಒಂದು ಸಂವತ್ಸರಕ್ಕೆ ಮೂರು ನಾಲ್ಕು ಆವರ್ತಿ ಎಲೆಯನ್ನು ಬಿಡಿಸಿಕೊಳ್ಳುವರು. ಮೊದಲಾವರ್ತಿ ತೆಗೆದುಕೊಂಡ ಫಸಲೇ ಉತ್ತಮವಾವದ್ದು. ಎಲೆಗಳನ್ನು ಒಹು ಜಾಗರೂಕತೆಇಂದ ಸ್ವಲ್ಪವೂ ನಲಗದಂತೆ ಬಿಡಿಸುವರು. ನಿಮ್ಮಲ್ಲಿ ಅನೇಕರು ವಿಳ್ಯೆದೆಲೆಯನ್ನು ಬಿಡಿಸು ವುದು ನೋಡಿರಬಹುದು. ಗೋಪಾಲ! ವಿಳ್ಳೆದೆಲೆಯನ್ನು ಹೇಗೆ ಬಿಡಿಸು ತ್ತಾರೆ ಹೇಳು?

ಗೋಪಾಲ—ಉಗುರುಳಿಯನ್ನು ಹೆಬ್ಬೆಟ್ಟಿಗೆ ಹಾಕಿಕೊಂಡು ಕೊಯ್ಯುವರು.

ಉಪಾ—ಯಾತಕ್ಕೆ ಉಗುರುಳಿಯನ್ನು ಉಪಯೋಗಿಸುವರು?

ಬಾಲಕ—ಉಗುರು ನಂಜಿನಿಂದ ಗಿಡವು ಬಾಡುವದೆಂತಲೂ, ಎಲೆಯು ನಲ ಗುವದೆಂತಲೂ ಎನ್ನುವರು.

ಉಪಾ—ಹಾಗೆಯೆ ತೇ ಎಲೆಯು ನಲಗದಂತೆ ಎಲೆಯನ್ನು ಬಿಡಿಸುವದು ಮಾತ್ರವಲ್ಲದೆ ಎಲೆಯು ವಾಸನೆಯು ಕಮ್ಮಿಯಾಗದಂತೆ ಕೈಗೆ ಕೈಬೀಲ ಗಳನ್ನು ಹಾಕಿಕೊಂಡು ಜಾಗರೂಕತೆಯಿಂದ ಎಲೆಯನ್ನು ಕೂಡಿಹಾಕುವರು. ಪ್ರತಿಬಿಂದು ಎಲೆಯನ್ನು ಬೇರೆಬೇರೆಯಾಗಿ ಬಿಡಿಸುವರಲ್ಲದೆ ಹತ್ತರ ಅದ ಕ್ಕಾಗಿ ಇಟ್ಟುಕೊಂಡಿರುವ ಬುಟ್ಟಿಗೆ ಬೇರೆಬೇರೆಯಾಗಿ ಹಾಕುವರು.

ರೇಖೆಮಾಡತಕ್ಕ ವಿಧಾನ

ಹೀಗೆ ಎಲೆಯನ್ನೆಲ್ಲಾ ಬಿಡಿಸಿದನಂತರ, ಬಿಡಿಸಿದ ಎಲೆಗಳನ್ನೆಲ್ಲಾ ಕೆಲವು ಘಂಟೆಯಕಾಲ ಆರಲಿಕ್ಕೆ ಘಾಳಿಗೆಬಿಟ್ಟದು. ತರುವಾಯ ಚೆನ್ನಾಗಿ

ಕಾದ ಹೆಂಚಿನ ಬಲೆಯಮೇಲೆ ಎಲೆಗಳನ್ನು ಹರವಿ ಒಣಗಿಸುವದು. ಒಣಗಲಿಕ್ಕೆ ಹೆಂಚಿನಮೇಲೆ ಹಾಕಿ ಆಗಾಗ್ಗೆ ಚೆನ್ನಾಗಿ ಕೈ ಆಡಿಸಿ ಮೇಲ್ಕೆಳಗೆ ಮಾಡುವದು. ಗೋಪಾಲ! ಯಾತಕ್ಕೊಸ್ಕರ ಹಾಗೆ ಕೈ ಆಡುವರು?

ಗೋಪಾಲ—ಚೆನ್ನಾಗಿ ಹುರಿಯಬೇಕೆಂದು.

ಉಪಾ—ರಾಮು! ನೀನು ಹೇಳು.

ರಾಮು—ಎಲೆಗಳಿಗೆ ಬಿಂದೇಕಡೆ ಹೆಚ್ಚಾಗಿ ಶಕ್ತಿ ತಾಕಿ ಸುಟ್ಟುಹೋಗದಂತೆ.

ಉಪಾ—ಅದೇ ಮುಖ್ಯ ಅಭಿಪ್ರಾಯ. ಹೀಗೆ ಚೆನ್ನಾಗಿ ಒಣಗಿಸದ ಮೇಲೆ ಎಲೆಗಳನ್ನೆಲ್ಲಾ ಬಿಂದು ಬುಟ್ಟಿಗೆ ಹಾಕಿಕೊಂಡು, ಸ್ವಲ್ಪ ಸ್ವಲ್ಪವಾಗಿ ಕೈಗೆ ತೆಗೆದುಕೊಂಡು ರಾಗಿಯ ತೆನೆಯನ್ನು ಉಜ್ಜುವಂತೆ ಕೈಯಲ್ಲಿ ಉಜ್ಜುವರು ಹಾಗೆ ಉಜ್ಜಿದ್ದನ್ನು ಪುನಃ ಹೆಂಚಿನಮೇಲೆ ಹಾಕಿ ಸ್ವಲ್ಪ ಬೆಚ್ಚಗೆಮಾಡಿ ತೆಗೆದು ಬಿಂದು ಮೇಜಿನಮೇಲೆ ಹರಡುವರು. ಹೀಗೆ ಹರಡಿದ ಮೇಲೆ ಹಸಕಾಪ ಎಲೆಗಳನ್ನೆಲ್ಲಾ ಆರಿಸಿ ತೆಗೆದುಹಾಕುವರು. ಉತ್ತಮವಾದ ಎಲೆಗಳನ್ನು ತೆಗೆದು ಬಿಂದೊಂದು ಎಲೆಯಾಗಿ ಸುರಳಿಮಾಡುವರು. ಮೋಸಪಡಿಸುವದಕ್ಕೆ ಇದೇ ಅನುಕೂಲವಾದಕೂಲ. ನಿಕೃಷ್ಟವೆಂದು ಎಣಿಸಿ ತೆಗೆದುಹಾಕಿದ ಎಲೆಗಳಿಗೆ ಚೀನಾದೇಶದಲ್ಲಿ ಇದನ್ನು ಬೆಳೆಯುತಕ್ಕವರು, ಗೊತ್ತುಮಾಡಲಿಕ್ಕೆ ಸುಲಭವಲ್ಲದಂತೆ ಬಣ್ಣವನ್ನು ಕಟ್ಟುವರು. ರಾಮುಶಿಂಗ್! ಇದು ಬಣ್ಣಹಾಕಲ್ಪಟ್ಟದ್ದು, ಇದು ಶುದ್ಧವಾದದ್ದು ಎಂದು ತಿಳಿಯುವಬಗ ಹ್ಯಾಗೆ?

ರಾಮುಶಿಂಗ್—ಅದನ್ನು (Chemistry) ಎಂಬ ವಸ್ತುಜ್ಞಾನಶಾಸ್ತ್ರದಲ್ಲಿ ಕೇಳಿರುವಂತೆ ಪರಿಕ್ಷಿಸಿ ನೋಡೋಣದರಿಂದ.

ಉಪಾ—ಈ ಶಾಸ್ತ್ರವನ್ನು ತಿಳಿಯದವರು ಹ್ಯಾಗೆ ಗೊತ್ತುಮಾಡುವರು?

(ರಾಮುಶಿಂಗ್‌ನು ಸುಮ್ಮನೆ ಇರುವನು.) ಪುನಃ

ಉಪಾ—ನಿಮ್ಮಲ್ಲಿ ಯಾರಾದರೂ ಒಬ್ಬರು ಹೇಳಿ. (ಎಲ್ಲರೂ ಸುಮ್ಮನೆ ಇರುವರು.) ತರುವಾಯ ಉಪಾಧ್ಯಾಯರೇ ಹೇಳುವರು.

ತೇ ಎಲೆಯ ವ್ಯಾಪಾರದಲ್ಲಿ ವಿಶೇಷ ಅನುಭವ ಉಳ್ಳವರು, ಬಿಂದು ಎಲೆಯನ್ನು ತೆಗೆದುಕೊಂಡು ತಮ್ಮ ನಾಲಿಗೆಯಮೇಲೆ ಇಟ್ಟು ಜೊಲ್ಲಿನಿಂದ ಅದನ್ನು ನೆನಸುವರು. ಬಣ್ಣಹಾಕಲ್ಪಟ್ಟದ್ದ ತೇ ಎಲೆಯಾಗಿದ್ದರೆ ತತ್‌ಕ್ಷಣವೇ ಗೊತ್ತು

ಮಾಡುವರು. ಕೃಷ್ಣಾ! ಎಲ್ಲಾ ತೇ ಎಲೆಯು ಬಂದೇತರಹವಿರುವುದೆ?

ಕೃಷ್ಣ—ಇಲ್ಲ. ಪೊತದ ಆದಿಯಲ್ಲಿ ಸೂಚಿಸಿದಂತೆ ನಾನಾಬಗೆಯುಂಟು.

ಉಪಾ—ಅವುಗಳ ವ್ಯತ್ಯಾಸಕ್ಕೆ ಕಾರಣವೇನೆಂದರೆ :—ಎರಡು ವಿಧವಾದ ಎಲೆಯನ್ನು ತಯಾರ್ ಮಾಡುವರು. ಒಂದು 'ಗ್ರೀಟಿ' (ಎಲೆಹಸರು ಉಳ್ಳ ತೇ ಎಲೆ), ಇನ್ನೊಂದು 'ಬ್ಲ್ಯಾಕ್ ಟಿ' (ಕಪ್ಪುವರ್ಣ ಉಳ್ಳ ತೇ ಎಲೆ)

'ಗ್ರೀನ್ ಟಿ' ತಯಾರ್ಮಾಡತಕ್ಕ ವಿಧಾನ.

೧. ಎಲೆಗಳನ್ನು ಗಿಡದಿಂದ ಬಿಡಿಸಿದೊಡನೆಯೆ ಬಿಸಿ ಮಾಡತಕ್ಕದ್ದು.

೨. ಎಲೆಗಳನ್ನೆಲ್ಲಾ ಸುರಳಿ ಮಾಡಿದೊಡನೆಯೇ ಒಣಗಿಸುವನು. 'ಗ್ರೀನ್ ರೋಡರ್ ಟಿ' ಎಂದು ವಾಡಿಕೆಯಾಗಿ ಉಪಯೋಗಿಸುವುದು 'ಗ್ರೀನ್ ಟೀ' ಗೆ ಸೇರಿದ್ದು. ಈ ತರಹದಲ್ಲಿ 'ಹೈಸನ್ ಟಿ' ಎಂತಲೂ ಉಂಟು.

ಬ್ಲ್ಯಾಕ್‌ಟೀ ತಯಾರ್ಮಾಡತಕ್ಕ ವಿಧಾನ.

೧ ಗಿಡದಿಂದ ಎಲೆಗಳನ್ನು ಬಿಡಿಸಿದೊಡನೆಯೆ ಕೆಲವುಕಾಲ ಘಾಳಿಯಲ್ಲಿ ಹರಡಬೇಕು.

೨ ಮೃದುವಾಗುವವರಿಗೆ ಚೆನ್ನಾಗಿ ಕೈಯಾಡಬೇಕು.

೩ ತರುವಾಯ ಕಾವ ಹೊಂಚಿನಮೇಲೆ ಅದನ್ನು ಬೆಚ್ಚಗೆಮಾಡಬೇಕು. ಕೆಲವು ನಿಮಿಷಗಳು ಹಾಗೆ ಬೆಚ್ಚಗೆಮಾಡಿದನಂತರ, ಒಂದೊಂದು ಎಲೆಯನ್ನಾಗಿ ತೆಗೆದುಕೊಂಡು ಸುರಳಿಸುತ್ತಬೇಕು. ಹೀಗೆ ಸುತ್ತಿದಮೇಲೆ ಸ್ವಲ್ಪ ವಿಸ್ತಾರವಾದ ಸ್ಥಳದಲ್ಲಿ ಕೆಲವುಘಂಟೆ ಹರಡಬೇಕು.

೪ ನಂತರ ನಿಧಾನವಾಗಿ ಕೆಂಡದ ಶಖೆಯಲ್ಲಿ ಒಣಗಿಸಬೇಕು.

ಬೋಹಿಯಾ, ಕಾಂಗೊ, ಪೀಕೋ, ಸೂಪಾ ಎಂಬಿವುಗಳು ಬ್ಲ್ಯಾಕ್‌ಟೀಯಲ್ಲಿ ಭೇದಗಳು.

ತೇ ಎಲೆಯು ಚೈನಾದೇಶದಲ್ಲಿ ವಿಶೇಷವಾಗಿ ಬೆಳೆಯುವದಕ್ಕೆ ಕಾರಣ ಉಂಟೆಂದು ಚೈನಾದೇಶಸ್ಥರು ಈಗ್ಗೂ ಒಂದು ಕಥೆಯನ್ನು ಹೇಳುವರು.

ಒಂದಾನೊಂದು ಕಾಲದಲ್ಲಿ ದೇವರ ಧ್ಯಾನದಲ್ಲಿಯೇ ಪರಮ ಆಸಕ್ತಿಯುಳ್ಳ ಪವಾಸಿಗಳಿಬ್ಬರು ಚೈನಾದೇಶದ ಒಂದು ಬಾಡವಲ್ಲಿ ಜೀವಿಸುತ್ತ

ಮಾಡಿಕೊಂಡು ಕಾಲವನ್ನು ಕಳೆಯುತ್ತಿದ್ದನು. ಆದರೆ ಇವನು ದೇವರನ್ನು ಧ್ಯಾನಿಸಲಿಕ್ಕೆಯಾಗಲಿ, ಸ್ತುತಿಸುವುದಕ್ಕೆಯಾಗಲಿ ಆರಂಭಿಸಿದೊಡನೆಯೆ ನಿದ್ರಾದೇವಿಯು ವಶನಾಗುತ್ತಿದ್ದನು. ಮಾಂಸಭರಿತವಾದ ಶರೀರದಲ್ಲಿರುವ ಕಣ್ಣುರೆಪ್ಪೆಯೇ ಈ ನಿದ್ರೆಗೆ ಕಾರಣವೆಂದೆಣಿಸಿ, ದೇವತಾರಾಧನೆಗೆ ಭಂಗಉಂಟಾಗುತ್ತೆಂಬ ಕೋಪದಿಂದ ಎರಡು ಕಣ್ಣುಗಳ ರೆಪ್ಪೆಗಳನ್ನೂ ತೆಗೆದುಬಿಸಾಟನು. ತತ್‌ಕ್ಷಣವೇ ದೇವರ ಮಾಯೆಯಿಂದ, ಕಣ್ಣಿನರೆಪ್ಪೆಯ ಆಕಾರವುಳ್ಳ ಎಲೆಗಳನ್ನುಹೊಂದಿದ ಟೀ ಗಿಡವು ಬೆಳೆದು 'ನಿದ್ರೆಗೆ ವಿಘ್ನವಾಗಿರು' ಎಂಬ ದೇವತಾಪ್ರಸಾದದಿಂದ ಲೋಕದಲ್ಲಿ ಪ್ರಖ್ಯಾತಿಗೊಂಡಿದೆ :— ಎಂದ.

ಕಿನ್ಡರ್‌ಗಾರ್ಟ್ನ್.

ಬಾಲಕರ ಪಂಚೇಂದ್ರಿಯಶಕ್ತಿಗಳನ್ನು ತಿದ್ದುಪಾಟುಮಾಡತಕ್ಕದ್ದು ಅತ್ಯವಶ್ಯಕವೆಂದು ಅನೇಕ ಶಿಕ್ಷಕರು ಹೇಳುತಿದ್ದರೂ ತಕ್ಕ ಉಪಾಯವನ್ನು ಬಹಳದಿವಸದವರೆವಿಗೂ ಯಾರೂ ಕಂಡುಹಿಡಿಯಲಿಲ್ಲ. ಫ್ರೋಬೆಲ್ (Frœbel 1782—1852) ಎಂಬ ಶಿಕ್ಷಕನು ಈ ತಿದ್ದುಪಾಟಿಕ್ಕೆ ಅನುಕೂಲವಾದ ಉಪಾಯಗಳನ್ನು ಕಂಡುಹಿಡಿದು, ಪೂರ್ವಶಿಕ್ಷಕರ ಅಭಿಲಾಷೆಯು ಸಫಲವಾಗುವಂತೆ ಆಚರಣೆಗೆ ತಂದನು.

ಈತನು ಬಹುಕಾಲದವರಿಗೂ ಶಿಶುಗಳ ನಡೆನುಡಿಗಳನ್ನು ಪರೀಕ್ಷಿಸಿ, ಸ್ವೇಚ್ಛೆಯಾಗಿ ಯಾರಸಹಾಯವೂ ಇಲ್ಲದೆ ಅವರೇ ಕಲಿಯುವರೀತಿಯನ್ನು ಅನುಸರಿಸಿ, ಕಿನ್ಡರ್‌ಗಾರ್ಟ್ನ್ ಎಂಬ ಶಿಕ್ಷಾಕ್ರಮವನ್ನು ನಿರ್ಧರಿಸಿದನು.

ಶಿಶುವಿನಲಕ್ಷಣಗಳು :—ಶಿಶುವು ಚಲಿಸುವುದಕ್ಕೆ ಪ್ರಾರಂಭಿಸುವವರೆಗೂ ಅದರ ವ್ಯಾಪಾರಗಳೆಲ್ಲವು ಉದ್ದೇಶರಹಿತವು. ಚಲಿಸುವುದಕ್ಕೆ ಆರಂಭಿಸಿದನಂತರ ಶಿಶುವು ಆಶ್ಚರ್ಯಕರವಾದ ನೋಟುಗಳಿಗೂ ಶಬ್ದಗಳಿಗೂ ಗಮನಕೊಡುವುದಲ್ಲದೆ ಪದಾರ್ಥಗಳನ್ನು ಉದ್ದೇಶದಿಂದ ಗ್ರಹಿಸುವುದು. ಹೋಲಿಕೆ, ವ್ಯತ್ಯಾಸಗಳನ್ನು ತಿಳಿದುಕೊಳ್ಳುವುದು. ಹ್ಯಾಗೆಂದರೆ ಮೃದು,

ಕಠಿಣ, ಒರಟು, ನಯ, ತಣ್ಣಗೆ, ಬೆಚ್ಚಗೆ, ಕಹಿ, ಇವೇಮೊದಲಾದ ಪದಾರ್ಥವೈಲಕ್ಷಣ್ಯಗಳನ್ನು ಗೊತ್ತುಮಾಡುವದು. ಇದೂ ಅಲ್ಲದೆ ತನ್ನ ಅಭಿಪ್ರಾಯಗಳನ್ನು ನೋಟ, ನಗೆ, ಸನ್ನೆ, ಅಳು ಮುಂತಾದವುಗಳಿಂದ ಹೊರಪಡಿಸುವುದು. ಇತರರ ಅಭಿಪ್ರಾಯಗಳನ್ನು ಇದೇರೀತಿಯಿಂದ ತಿಳಿದುಕೊಳ್ಳುವುದು.

ಶೈಶವಾವಸ್ಥೆಯಲ್ಲಿ ತಂದೆತಾಯಿಗಳೇ ಬೋಧಕರಾಗಿರಬೇಕು. ತೊಟ್ಟಿಲನಲ್ಲಿ ಆಡುತಿರುವ ಮಕ್ಕಳಿಗೂಕೂಡ ಇಂದ್ರಿಯಜ್ಞಾನವುಂಟು. ಸ್ವಲ್ಪಮಟ್ಟಿಗೆ ಗಮನಶಕ್ತಿಯೂ ಜ್ಞಾಪಕಶಕ್ತಿಯೂ ಇರುವುದು. ವಯಸ್ಸುಹೆಚ್ಚಿದಹಾಗೆಲ್ಲಾ ಬಾಲಕರ ಚಟುವಟಿಕೆಯು ಹೆಚ್ಚಾಗುವುದು. ತಕ್ಕ ಉದ್ಯೋಗವಿಲ್ಲದಿದ್ದಲ್ಲಿ ಈ ಚಟುವಟಿಕೆಯು ಚೇಷ್ಟೆಯಲ್ಲಿ ಪರಿಣಮಿಸುವುದು. ಇದರಿಂದ ಮಕ್ಕಳಿಗೆ ಆಟಪಾಟದಲ್ಲಿ ತುಂಬಾಆಸಕ್ತಿ ಇರುವುದು ವ್ಯಕ್ತವಾಗುವುದು. ಮಕ್ಕಳು ಆಡುವಕಾಲಗಲ್ಲಿ ಆಚೆತಕ್ಕ ಮಾತುಗಳಿಂದಲೂ, ಮಾಡತಕ್ಕ ಕೆಲಸಗಳಿಂದಲೂ ಇವರಲ್ಲಿ ವಿಶೇಷ ಅನುಕರಣಶಕ್ತಿಯು ಇರುವದೆಂದು ಗೊತ್ತಾಗುವುದು. ಮಕ್ಕಳು ಸ್ವಭಾವವಾಗಿ ಆಡತಕ್ಕ ಆಟಗಳಿಗೆ ಜ್ಞಾನಾರ್ಜನೆಗೆ ಸಾಧಕಗಳಾದ ಉಪಕರಣಗಳನ್ನು ಒದಗಿಸಿಕೊಡಬೇಕೆಂಬುವುದೇ ಪ್ರೋಬೆಲ್ಲಿನ ಮುಖ್ಯ ಅಭಿಪ್ರಾಯವು.

ಡಿ. ವೆಂಕಟರಾಮ್ಮಯ್ಯ, ಬಿ. ಎ.

ಗಣಿತ.

I. $\dfrac{1}{3-\dfrac{2}{2-\dfrac{1}{3-2\frac{1}{7}}}} \div \dfrac{\frac{1}{3}+\frac{4}{25}\left\{1\frac{1}{11}-\frac{1}{3}\right\}}{\frac{40}{121}-\frac{7}{88}\div 1\frac{3}{8}}$ ನ್ನು ಸಂಕ್ಷೇಪಿಸು.

II. 1£. 1s. 1d. ನ್ನು 12£. 3s. 8d. ರ ದಶಮಾಂಶದಲ್ಲಿಡು.

III. 209 ಮನುಷ್ಯರು 18 ದಿವಸಗಳಲ್ಲಿ ಮಾಡಬಹುದಾದ ಕೆಲಸವನ್ನು 57 ದಿವಸಗಳಲ್ಲಿ ಎಷ್ಟುಮಂದಿ ಮಾಡಬಲ್ಲರು?

IV. ಒಬ್ಬ ಮನುಷ್ಯನು ತನ್ನಲ್ಲಿದ್ದ ಹಣದ ·125 ನ್ನು ಒಬ್ಬ ಹುಡುಗನಿಗೂ ಮಿಕ್ಕದರ $\frac{3}{7}$ ನ್ನು ಇನ್ನೊಬ್ಬ ಹುಡುಗನಿಗೂ, ತಿರಿಗಿ ಮಿಕ್ಕದರ ·8 ನ್ನು ಮತ್ತೊಬ್ಬ ಹುಡುಗನಿಗೂ ಕೊಡುತ್ತಾನೆ. ನಂತರ ಅವನ ಹತ್ತರ 2£. 2s ಇರಬೇಕಾದರೆ ಅವನಲ್ಲಿ ಮೊದಲಿದ್ದ ಹಣವೆಷ್ಟು?

V. 150 ಕಿತ್ತಲೆ ಹಣ್ಣುಗಳನ್ನು 9 ಜನ ಗಂಡಸರು, 12 ಜನ ಹೆಂಗಸರು, 13 ಜನ ಹುಡುಗರಿಗೆ ಹಂಚಬೇಕು. ಪ್ರತಿ ಗಂಡಿಸಿಗೂ ಒಬ್ಬ ಹೆಂಗಸಿಗೆ ಬರುವದಕ್ಕೆ ರಡರಷ್ಟೂ, ಮತ್ತು ಒಬ್ಬ ಹುಡುಗನಿಗೆ ಬರುವದಕ್ಕೆ $2\frac{2}{3}$ ರಷ್ಟು ಬರಬೇಕಾದ ಪಕ್ಷದಲ್ಲಿ, ಬಜೊಬ್ಬರಿಗೆ ಎಷ್ಟೆಷ್ಟು ಹಣ್ಣುಗಳು ಬರುವವು.

ಎಂ. ಟಿ. ನಾರಾಯಣಯ್ಯಂಗಾರ್ ಎಂ. ಎ.

N. B. ಈ ಲೆಕ್ಕಗಳಿಗೆ ವಿದ್ಯಾರ್ಥಿಗಳು ಮೇ ತಿಂಗಳು ೫ನೇ ಬುಧವಾರ ಉತ್ತರಗಳನ್ನು ಕಳುಹಿಸಿದಲ್ಲಿ, ಸುಲಭವಾದ ಮಾರ್ಗದಿಂದ ಪಡೆದ ಉತ್ತರಗಳನ್ನು ಪರೀಕ್ಷಿಸಿ, ಅವರ ಹೆಸರು ಸಮೇತವಾಗಿ ಮುಂದಣ ಸಂಚಿಕೆಯಲ್ಲಿ ಪ್ರಕಟಿಸುವೆವು.

ಕರ್ಣಾಟಕ ಪಂಡಿತ ಪರೀಕ್ಷೆ,

1894.

೧ ನೆಯಭಾಗ ಪಂಪರಾಮಾಯಣ. (60)

ಪರೀಕ್ಷಕರು—ಮ ॥ ರಾ ॥ ಲಕ್ಷ್ಮೀನರಸಿಂಹಶಾಸ್ತ್ರಿಗಳು. ಕನ್ನಡ ಮುನಿಷಿ ವೆಸ್ಲ್ಯರ್ಮಿಷ್ಯ ಸ್ಕೂಲ್.

I. (*a*) ಈ ಪಂಪಕವಿಯು ಯಾರಶಿಷ್ಯನು? ಇವನಿಗೂ, ಬಾಲಚಂದ್ರಮುನಿಗೂ, ಶ್ರೀರಾಮಚಂದ್ರನಿಗೂ ಬೇರೆಬೇರೆ ಹೆಸರೇನು? ಮತ್ತೂ ಅಜಾ ಕೃಪಾಣೀಯ, ಮತ್ಸ್ಯನ್ಯಾಯವೆಂದರೇನು? (3)

(*b*) ಸೀತೆಯು ಸವತಿಯರೂ, ಚಿತ್ರೋತ್ಸವೆ, ವಜ್ರಬಾಹು, ಇವರ ತಂದೆತಾಯಿಗಳೂ ಯಾರು? (2)

(ಗ) ಜಿನಸ್ತುತಿಯು ಯಾವಯಾವ ಆಶ್ವಾಸಗಳಲ್ಲಿ ಬಂದಿದೆ? ಸಿಲಪ್ಪದಿಕಾರರು ಯಾವಾಗ ಹುಟ್ಟಿದರು? (2)

(ಘ) ಪಂಚಾಶ್ಚರ್ಯ, ಚತುರ್ವಿಧದಾನ, ಅಷ್ಟಾರ್ಚನೆ, ತ್ರಿಜ್ಞಾನ;—ಇವುಗಳನ್ನು ವಿವರಿಸಿ ಬರೆಯಿರಿ. (3)

II. (1) ಈ ಕೆಳಗಿನ ಪದ್ಯಕ್ಕೆ ವ್ಯಾಖ್ಯಾನಾಭಿಪ್ರಾಯ ಸಹಿತವಾಗಿ ವ್ಯಾಖ್ಯಾನವನ್ನು ಬರೆಯಿರಿ.—

ಎರಗದೆಬಾತ್ತೆರ್ಗೆಟ್ಟೆಡೆಗೆಪೊಮ್ಮಳಿಯಂ ಧರೆಗಾವಕಾಲಮುಂ । ಕರೆ
ದುಪದಾರ್ಥವೃತ್ತಿಯೊಳೆ ಪಾವನಮಾಗಿರೆ ತನ್ನ ಜೀವನಂ ॥ ತೊರೆದು
ಕಳಂಕಪಂಕಿಲತೆಯಂ ಮಳೆಗಾಲದ ಸೊಂಪನೇಳಿಸಲ್ । ನೆರೆದನುಬಂ
ಧಮುಮಂಬರೆದನಚ್ಚರಿ ಲಾಂಗಲಪಾಣಿನೀತಿಯೋಳ್ ॥ (12)

(2) ಅಕಳಂಕಚಂದ್ರವಾಕ್ಯನ್ದ್ರಿಕೆಯಿಂ, ಮೃಗಲೋಚನಂಗೆ ಕರ್ದುವು ಮೃಗವೆಲ್ಲಿರ್ದುಪುದು ವಟಫಲಂ ವಟವೆಲ್ಲಿ ಪಗಲಿಂದು ವೆತ್ತಣಿಂದು ನೋಡಿದಂ ನಗೆವೊಗವುಂ—ಈ ವಾಕ್ಯಗಳಲ್ಲಿ ಯಾವಯಾವ ಅಲಂಕಾರಗಳಿವೆ? (2)

III. (ಗ) ಅಂಕವಣಿ, ಅವಲೆ, ಕೈಪಳಿಟ್ಟ, ಅರ್ಧಪ್ರಹಾರ, ನೇಗಿರಿಯು ಸೋ, ಮೀಫಡಂಬರಂ, ಒಟ್ಟಾಡು, ಪಾರಿಹಾರ್ಯ, ಮುಡಿಳ, ಬೆಟ್ಟವೆಟ್ಟನೆ, ಉಳಿಕ್ಕಳಂ;—ಈ ಪದಗಳ ಅರ್ಥವೇನು? (6)

(ಬ) ಮೊಗ್ಗೆ, ತಳಿ, ಕಡುವು, ಉಪಸರ್ಗ, ತೋಡುಂ, ಬೀಡುಂ, ಮುಸೂರಿಕಾ, ಪುಗಲ್, ಈ ಪದಗಳಿಗೆ ನಾನಾರ್ಥವೇನು? (2)

(ಗ) ಧರ್ಮ, ಶಾಷ್ವಲ, ಸಂಕೇತಸ್ಥಾನ, ಸಾಕೇತಮೃಗ, ಸಾಲ, ಸಾರೆ, ಸೈನ್ಯ. ಪೇಡಿ;—ಈ ಅರ್ಥವುಳ್ಳ ಅಪೂರ್ವವಾದ ಹಳೆಗನ್ನಡದ ಪದಗಳನ್ನು ಬರೆಯಿರಿ. ($4\frac{1}{2}$)

IV. (1) ಕೀರ್ತಿಮುಖ, ಕಾಯಸ್ಥಿತಿ, ಪೋಡುಗಾರ, ಆಸನಕಂಪ, ಕಿಸೆಬಿದ್ದಂ, ಗೊರ್ಜಂ, ಮಣಿಯೇರು, ಹಾವಂಡಂ;—ಈ ಪದಗಳಿಗೆ ಸಂದರ್ಭಾನುಸಾರ ಏನೇನರ್ಥವನ್ನು ಹೇಳಬಹುದು? ($4\frac{1}{2}$)

(ಬ) ಕೈಕೇಯಿಯು ಭಗವಾನನನ್ನು, ಆದಿಶೇಷನ ಸಹಸ್ರಫಣಾ ವೈಶ್ವಾನನನ್ನು, ಕವಿಯು ಹ್ಯಾಗೆ ಉತ್ಪ್ರೇಕ್ಷಿಸಿ ಇದಾನೆ? (2)

(3) ಭ್ರಾಮಕೆದತ್ತೆಳಸುವ ಪಚ್ಚೆಗರ್ಬುನಕ್ಕೆಣೆಯಾದಂ, ಅಮೃತಂ ವಿಷಮಕ್ಕುಂ ವಿಷಮಮೃತಮಕ್ಕುಂ, ಒರೆಪದಕನ್ನೆ ಭವಾಂತರ ಪರಿಚಯದಿಂ ಮೋಹಮೂಚ್ಕೈರ್ಯಂ ಪುಟ್ಟಿಸಿದಳ್;—ಈ ವಾಕ್ಯಗಳ ಹಿಂದುಮುಂದಣ ಸಂದರ್ಭಗಳನ್ನು ತಿಳಿಸಿ ಗುರ್ತುಮಾಡಿರುವವರಲ್ಲಿರುವ ಪೂರ್ವಜನ್ಮವೃತ್ತಾಂತವನ್ನು ಸಂಕ್ಷೇಪವಾಗಿ ಬರೆಯಿರಿ. (5)

V. (a) ಋಷಿವರಂ, ಬಹಿಮುವನ್ಮಹಿಮಂ, ಅನೀಕಿನಿ, ಮಹಿಮಾಪ್ರಭಾವ, ಹನುಮಂತಪ್ರಮುಖ;—ಈ ಪದಗಳ ರೂಪನಿಷ್ಪತ್ತಿಯನ್ನು ತಿಳಿಸಿ; ಕೆಲವು ಪದಗಳಲ್ಲಿ ತೋರುವ ದೋಷಗಳನ್ನು ಪರಿಹರಿಸುವ ಯುಕ್ತಿಯನ್ನು ತಿಳಿಸಿರಿ. (2)

(b) ನೀರು, ಅರ್ಜುನ, ಭಕ್ತ, ದ್ವಾರಪಾಲ, ಅಶೋಕವೃಕ್ಷ;—ಈಪದಗಳಿಗೆ ಹಳಗನ್ನಡದ ಪರ್ಯಾಯನಾಮಗಳನ್ನು ಊಹಿಸಿ ಬರೆಯಿರಿ. (2)

(c) ಗರಿಯಂಸೋರ್ಚಿದರೆನೆ ಕೇಗರಿಯಿಂದೇರ್ವಟ್ಟರಾಜಸುತ ಸರದೋಹಂ ॥ ಗರಿಸೋಂಕಿವ ಬೆಳ್ಳರಳಿಗರಿಮೂಡಿವ ತೆರದಿನೋಡಿಪ್ಪೋಡಕ್ಕಾ ತ್ತಗಳ್ ॥ ಈ ಪದ್ಯವನ್ನು ಹೀಗೆ ತಿದ್ದಿದ್ದೇನೆ ಇದಕ್ಕೆ ತಾತ್ಪರ್ಯವನ್ನು ತಿಳಿಸಿರಿ. (5)

(d) ಬಳಹರಿ ಯೆಂಬುವಪದಕ್ಕೆ ಅರ್ಥವೇನು? ತಾವು ಧಾತುವಿನ ವರ್ತಮಾನರೂಪ ಹ್ಯಾಗೆ? (2)

ಜೈಮಿನಿಭಾರತ—ಗಿರಿಜಾಕಲ್ಯಾಣ. (60)

ಪರೀಕ್ಷಕರು—ವು ॥ ರಾ ॥ ಪುಟ್ಟಪರ್ತಿಶೆ ಪಾಠಶಾಲೆಯ ಉಪಾಧ್ಯಾಯರು. ಕನ್ನಡಮು ನಷ—ಮರಿಮಲ್ಲಪ್ಪ ಸ್ಕೂಲ್ ಮೈಸೂರು.

I. (1) ಈ ಪದ್ಯದ ತಾತ್ಪರ್ಯವನ್ನು ಬರೆಯಿರಿ.

ಮಾತಿನವೇಧೆಯಭೋಧೆಯ। ಭೂತಾದಿಯಪಂಚವಿಂಶತಿಗಳಂಮಿರಿ।ಜ್ಞಾತೃ ಜ್ಞಾನಜ್ಞೇಯವ್ರಾತಮನಳಿದುತಾನೆತಾನಾಗಿರ್ದಂ ॥ (2)

(2) ಇಲ್ಲಿ ಯಾವ ಅಲಂಕಾರಗಳು ತೋರುವವು?

ಮುನ್ನಂಪಯೊಧಿಪದೆಪೊಡೆ। ತನ್ನಂಶಶಿಪಡೆವನಾಪಯೋಧಿಯನೆಂಬಂತುನ್ನತಿ ಪೆತ್ತುದಂ ರಾಜೋತ್ಪನ್ನಮಖಿನ್ನಂ ಪ್ರಸನ್ನಕೊಪ್ಪುವಬೊನ್ನಂ ॥ (12)

(3) ಇಲ್ಲಿ ಯಾವ ರಸವು ತೋರುವುದು? ಮತ್ತು ಇದಕ್ಕೆ ಸ್ಥಾಯಿಭಾವವೂ ಉದ್ದೀಪಿತವೂ ಯಾವದು ಸೂಚಿತವಾಗಿದೆ? —— ಇದುಳಂ ಪಗಲುಂಕಾಮುಂ। ತರದಿಂತೆಗದೆಚ್ಚ್ಯಕುಸುಮಬಾಣವಿದೆಂದಾ। ಗಿರಿಶಂಗೆತೋರ್ಪ ತೆರದಿಂ ನೆರವಿವಳಭನಾಂಘ್ರಿಗಳ್ಗೆ ಪುಷ್ಪಾಂಜರಿಯಂ ॥

II. (1) ಕೃಷ್ಣನಸಹಾಯದಿಂದ ಪಾಂಡವರಲ್ಲಿ ಯಾರಿಗೆ ಅಶಕ್ಯವಾದ ವಿಪತ್ತು ಪರಿಹರಿಸಲ್ಪಟ್ಟಿತು. ಇದಕ್ಕೆ ಎರಡು ಉದಾಹರಣೆಗಳನ್ನು ತೋರ್ಪಡಿಸಿರಿ. (5)

(2) ತ್ರಿನೇತ್ರನಮೇಲೆ ಮನ್ಮಥನು ಬಾಣಪ್ರಯೋಗಮಾಡದಿದ್ದರೆ ಏನಾಗುತಿತ್ತು?

III. ಈ ಪದಗಳಿಗೆ ಅರ್ಥವೇನು? ಮತ್ತು ಈ ಹೆಸರುಳ್ಳ ಸ್ನರು ಯಾರಮಕ್ಕಳು, ಅಥವಾ ಇವರ ತಂದೆಗಳು ಯಾರು?—ಭೀಷ್ಮ, ನೀಷಣ, ಲಿಖಿತ, ಲವ, ಧನಂಜಯ, ಗುರು, ಸುರಥ. (7)

IV. ಈ ಪದಗಳಿಗೆ ಮೂರಕ್ಕೆ ಕಡಮೆಯಾಗದಂತೆ ಅನೇಕಾರ್ಥಗಳನ್ನು ಬರೆಯಿರಿ :— (7)

ಚಕ್ರ, ಕೌಶಿಕ, ಜಾಲ, ಆಗಿ, ಬಿಗಿ, ಕಟ್ಟಿ, ಬಾಣ

V. (1) ಇಲ್ಲಿರುವ ಪದಗಳನ್ನು ಒಂದಕ್ಕೊಂದು ಸೇರಿಸಿದರೆ ಯಾವ ಯಾವ ಸಂಧಿಗಳು ಆಗುವವು?

ಸತ್+ಲಿಖಿತ, ಜಗತ್+ನಾಥ, ಈ+ಉತ್ತರ.

(2) ಇಲ್ಲಿ ಸಂಧಿ ಏಕೆ ಬರಲಿಲ್ಲ?—— ಸಪ್ತ + ಋಷಿಗಳು, ಓಹೋ + ಇದೇನು?

VI. ಇಲ್ಲಿರುವ ಸಮಸ್ತಪದಗಳಿಗೆ ವಿಗ್ರಹಗಳನ್ನು ಬರೆಯಿರಿ; ಇಲ್ಲಿರುವಸ್ಥಾನ್ಯಾದೇಶಭಾವಗಳನ್ನು ವಿಂಗಡಿಸಿರಿ: ——ದಂಪತಿ, ಸುದತಿ, ಸಂಜ್ಞಾ, ಭೂಜಾನಿ, ಕಿತ್ತಡಿ, ನಿಟ್ಟುಸುರ್, ಕೆನ್ನಕ್ಕಿ, ಚೌತಿಯ.

VII. ಇಲ್ಲಿರುವ ತತ್ಸಮಗಳಿಗೆ ತದ್ಭವಗಳನ್ನು ತದ್ಭವಗಳಿಗೆ ತತ್ಸಮಗಳನ್ನು ಬರೆಯಿರಿ—

(1) ತುರಿಹ, ಸೊರಟು, ಪಯು, ಅವರೆ, ಶಲಾಕೆ, ಮುದನ, ಜಲೂಕೆ, ವೀರ.

VIII. ಈ ಜೈಮಿನಿಕಥೆಯು ಸಂಸ್ಕೃತದಲ್ಲಿ ಯಾವ ಪುರಾಣಕ್ಕೆ ಸೇರಿದೆ? ಮತ್ತು ಆ ಗ್ರಂಥಕರ್ತನು ಯಾವಕವಿ.

Ix. ಈ ಧಾತುಗಳ ಕರ್ತಾರ್ಬಾತ, ಕರ್ಮಕ್ರಿಯದಂತ ರೂಪಗಳನ್ನು ಉದಾಹರಿಸಿರಿ;—

ಈ, ಕಾ, ಖಾ, ಬರೆ.

ಸಮಾಚಾರಗಳು ಮತ್ತು ಸೂಚನೆಗಳು:

—o—

ನಾರ್ಮಲ್ ಸ್ಕೂಲಿಗೆ ಪೀಸಿಗೆಯ ರಜವು ಕೊಟ್ಟಿರುವಕಾರಂದ ಏಪ್ರಿಲ್ ೨೦ನೇ ತಾರೀಖಿನ ಲಾಗಾಯಿತು ಜೂನ್ ಮೊದಲನೆಯ ತಾರೀಖಿನ ವರಿಗೆ ಸ್ಕೂಲ್ ಮುಚ್ಚಲ್ಪಟ್ಟಿರುತ್ತೆ.

ನಾರ್ಮಲ್ ಸ್ಕೂಲಿಗೆ ವಿದ್ಯಾರ್ಥಿಗಳು ಮಹಿಸೂರು ಸಂಸ್ಥಾನದ ಎಲ್ಲಾ ಡಿಸ್ಟ್ರಿಕ್ಟ್‌ಗಳಿಂದಲೂ ಬಂದಿರುವದರಿಂದ ಇವರುಗಳಿಗೆ ಭೋಜನಾದಿಗಳಿಗೆ ಅನುಕೂಲವಾಗುವಂತೆ, ಮೆ| ಭಾಭಾ ಸಾಹೇಬರು, ಪರಸ್ಥಳದವರ ಶ್ರಮವನ್ನರಿತು ಬಂದು (ಸ್ಟೂಡೆಂಟ್ಸ್‌ಹೋಂ,) ವಿದ್ಯಾರ್ಥಿಗಳ ಭೋಜನಶಾಲೆಯನ್ನು ಏರ್ಪಡಿಸಿರುತ್ತಾರೆ. ಈ ಭೋಜನಶಾಲೆಗೆ ಮಹಾರಾಜರವರ ಕಾಲೀಜಿನ ವಿದ್ಯಾರ್ಥಿಗಳನ್ನೂ ಸೇರಿಸ ಬಹುದೆಂದು ಅಪ್ಪಣೆ ಮಾಡಿದಾರೆ. ಈ ಭೋಜನಶಾಲೆಯು ಕ್ರಮವಾಗಿ ನಡೆಯುವದಕ್ಕಾಗಿ ಒಂದು ಕಮ್ಮಿಟಿಯನ್ನು ಏರ್ಪಡಿಸಿರುತ್ತಾರೆ. ವಿದ್ಯಾರ್ಥಿಗಳ ಆರೋಗ್ಯವನ್ನು ನೋಡಿಕೊಳ್ಳುವುದಕ್ಕಾಗಿ ಈ ಕಮ್ಮಿಟಿಯಲ್ಲಿ ಒಬ್ಬರು ಡಾಕ್ಟರ್ ಆಗಿರಬೇಕೆಂದು ನಿಷ್ಕರ್ಷಿಸಿರುತ್ತಾರೆ. ಈ ಕಮ್ಮಿಟಿಯ ಕಾರ್ಯದರ್ಶಿಗಳು ನಾರ್ಮಲ್ ಸ್ಕೂಲ್ ಹೆಡ್ ಅಸ್ಸ್ಟಂಟ್‌ರಾದ ಮೆ| ಕೆ. ನಾರಾಯಣಯ್ಯಂಗಾರ್, ಬಿ. ಎ. ಯವರು, ಡಾಕ್ಟರ್ ಟಿ. ವಿ.ಆರೋಗಂ ಮೊದಲಿಯಾರ್ರವರು, ಮೆ| ಕೆ. ವೆಂಕಟಕೃಷ್ಣಪ್ಪನವರು, ಮೆ| ಕೊ. ಕಂ. ವೆಂಕಟಶಾಮ್ಮಯ್ಯ, ಬಿ.ಎ. ಮೆ| ಡಿ. ವೆಂಕಟರಾಮ್ಮಯ್ಯ, ಬಿ. ಎ, ಮೆ| ಕೆ. ರಾಮಣ್ಣನವರು, ಇವರೇ ಈ ಕಮ್ಮಿಟಿಯ ಮೆಂಬರುಗಳು. ಮದ್ರಾಸ್ ಸ್ಟೂಡೆಂಟ್ಸ್ ಹೋಂನಲ್ಲಿದ್ದು, ತುಂಬಾ ಅನುಭವವನ್ನು ಪಡೆದಿದ್ದ ಮೆ| ಕೆ. ರಾಮಣ್ಣನವರನ್ನು ಆನರೆರಿ ಸೂಪರ್‌ಟಿಂಡೆಂಟರನ್ನಾಗಿ ನಿಯಮಿಸಿರುತ್ತಾರೆ. ಪರಸ್ಥಳದ ವಿದ್ಯಾರ್ಥಿಗಳಿಗೆ ಇಷ್ಟರ ಮಟ್ಟಿಗೆ ಅನುಕೂಲಪಡಿಸಿ ಕೊಟ್ಟದ್ದಕ್ಕಾಗಿ ಈ ವಿದ್ಯಾರ್ಥಿಗಳೆಲ್ಲರೂ ಮೆ| ಭಾಭಾ ಸಾಹೇಬರವರಿಗೆ ಬಹಳ ಕೃತಜ್ಞರಾಗಿರಬೇಕು.

'ಕರ್ನಾಟಕ ಭಾಷಾ ಸೇವಕ' ಎಂಬ ಒಂದು ಮಾಸ ಪತ್ರಿಕೆಯನ್ನು ಬಿಜಾಪುರದಲ್ಲಿ ಪ್ರಕಟಿಸಲು ಆರಂಭಿಸಿರುವರು. ಇದರ ಮೊದಲನೆಯ ಸಂಚಿಕೆಯಲ್ಲಿ

ವಾಲತಿ ಮಾಧವ, ಅಜಿಜ್ಞಾನಶಾಕುಂತಲ, ಅಂತಃಪರವ ರಹಸ್ಯಗಳು, ಇವುಗಳ ಕೆಲ ಕೆಲವು ಭಾಗಗಳನ್ನು ಪ್ರಕಟಿಸಿರುವರು. ಕರ್ಣಾಟಕ ಭಾಷಾಭಿವೃದ್ಧಿಯಲ್ಲಿ ಆಸಕ್ತಿಯುಳ್ಳವರೆಲ್ಲರೂ ಈ ಪತ್ರಿಕೆಯು ಬಹು ಕಾಲ ನಿರ್ವಿಘ್ನವಾಗಿ ನಡೆಯಬೇಕೆಂದು ಕೋರುವರು.

ಮೈಸೂರು ಶಿವರಾಂಪೇಟೆ ವೆಸ್ಲಿಯನ್ ಮಿಷನ್ ಬಾಲಕರ ಪಾಠಶಾಲೆಯ ಹೆಡ್ಮಾಸ್ಟರಾದ ಮಾ|ಟಿ. ಎಂ. ರಾಮಸ್ವಾಮಯ್ಯನವರಿಂದ ರಚಿಸಲ್ಪಟ್ಟ 'ಭೂಗೋಳ ಸಂಗ್ರಹ' ಎರಡನೆಯ ಮುದ್ರಣದ ಪ್ರತಿಯೊಂದನ್ನು ನಮಗೆ ಗ್ರಂಥಕರ್ತರು ದಯವಿಟ್ಟು ಕಳುಹಿಸಿರುವರು. ಈ ಗ್ರಂಥದ ವಿಷಯವಾಗಿ ನಮ್ಮ ಅಭಿಪ್ರಾಯವನ್ನು ಬರೆಯುವೆವು

ವಿವಾಹಪರ್ವ ಟಿಪ್ಪಣಿ.

---

(೧) ಬೇಹಿನವರು= ಗೂಢಚಾರರು

(೨) ಪ್ರಚ್ಛನ್ನವೇಷಧಾರಿಗಳಾವ= ತಮ್ಮ ರೂಪವನ್ನು ವಶ್ಯಾಸಪಡಿಸಿಕೊಂಡವರು

(೩) ಘ್ರಾಣೇಂದ್ರಿಯಗಳಿಂದ ಪಶುಗಳೂ =ಮೂಗಿನಿಂದ ವಾಸನೆಯನ್ನು ನೋಡಿ ಹಸುಗಳು ತಿಳಿಯುವವು

(೪) ದುರ್ಗವು =ಹೋಗುವುದಕ್ಕೆ ಅಸಾಧ್ಯವಾದ

(೫) ಅಗಾಧಬುದ್ಧಿಶಾಲಿ =ನೆಲೆಯಿಲ್ಲದ ಬುದ್ಧಿಶಾಲಿಯಾದ

(೬) ನೀತಿಕೋವಿದ =ನೀತಿಯಲ್ಲಿ ಪಂಡಿತರಾದ

(೭) ವಿಚಾರದ =ಕುಶಲ

(೮) ಅವಾರ್ಯ್ಯಶೌರ್ಯ್ಯಧುರಂಧರರಾಗಿಯೂ =ನಿವಾರಿಸುವುದಕ್ಕೆ ಅಸಾಧ್ಯವಾದ ಪರಾಕ್ರಮದಲ್ಲಿ ನಿಸ್ಸೀಮರಾಗಿಯೂ,

(೯) ಸಾಹಾರ್ದ =ಸ್ನೇಹ (ಪ್ರೀತಿ)

(೧೦) ಅನುಕೂಲವಮಾರುತ =ಶರೀರಕ್ಕೆ ಹಿತಕರವಾದ ಗಾಳಿಯು

(೧೧) ಈತಿಬಾಧೆ =ಅತಿವೃಷ್ಟಿ, ಅನಾವೃಷ್ಟಿ, ಮೂಷಕ, ಶಲಭ, ಶುಕ, ರಾಜರ ಅತ್ಯಾಕ್ರಮ ಇವುಗಳ ತೊಂದರೆ

(೧) ಆದಾಯವ್ಯಯ =ಲಾಭನಷ್ಟಗಳು

(೨) ದಂಡಯಾತ್ರೆ =ಯುದ್ಧಕಾಗಿ ಹೋಗುವುದು

(೩) ಹೀನಬಲಪರುಷ =ನಷ್ಟವಾದ ಬಲಪರಾಕ್ರಮಗಳುಳ್ಳ

(೪) ಪ್ರಾಭವ =ಸಾಮರ್ಥ್ಯ

ವಿದ್ಯಾಪಾಯಿನಿ.

ಭಾಗ ೨ | ಜೂನ್ ೧೮೯೪. | ಸಂಚಿಕೆ ೬.

ಮಾ॥ ರಾ॥ ಟೆಕ್ಸ್ಟ್‌ಬುಕ್ ಕಮಿಟಿ ಪ್ರೆಸಿಡೆಂಟರವರಿಗೆ.

ಸ್ವಾಮಿ,

ವಿದ್ಯಾಭ್ಯಾಸೋದ್ದಿಷ್ಟವಾದ ಪುಸ್ತಕಗಳಲ್ಲಿ ಕನ್ನಡ ಪದಗಳ ಅಕ್ಷರ ಸಂಯೋಜನವು ಏಕಪ್ರಕಾರವಾಗಿರುವಂತೆ ಕೆಲವು ನಿಯಮಗಳನ್ನು ಮಾಡುವುದಕ್ಕೆ 1892ನೇ ನವೆಂಬರ್ 12ನೇ ತಾರೀಖಿನಲ್ಲಿ ನಿಯಮಿಸಲ್ಪಟ್ಟ ಸ್ಪೆಷಲ್ ಸಬ್‌ಕಮಿಟಿ ಮೆಂಬರುಗಳಾದ ನಾವುಗಳು ಆ ವಿಷಯವಾಗಿ ನಮ್ಮ ಈ ರಿಪೋರ್ಟಿನ ಮೂಲಕವಾಗಿ ಶ್ರುತಪಡಿಸುವದೇನಂದರೆ—ಹೀಗೆ ಅಕ್ಷರಸಂಯೋಜನವು ಅವ್ಯವಸ್ಥಿತವಾಗಿರುವ ಪದಗಳ ಒಂದು ಪಟ್ಟಿಯನ್ನು ಅಚ್ಚು ಹಾಕಿಸಿ ಅದನ್ನು ಕನ್ನಡಭಾಷಾಭಿವೃದ್ಧಿಯಲ್ಲಿ ಕುತೂಹಲಿಗಳಾದ ಅನೇಕ ಪಂಡಿತರಿಗೂ ಇತರ ದೊಡ್ಡ ಮನುಷ್ಯರಿಗೂ ಅವರ ಅಭಿಪ್ರಾಯವನ್ನು ನಮಗೆ ತಿಳಿಸುವ್ದಕ್ಕಾಗಿ ಕಳುಹಿಸಿಕೊಟ್ಟೆವು. ಒಳ್ಳಾರಿಯಲ್ಲಿ ಸೇರಿದ್ದ ಮಿಷನೇರಿಗಳ 'ಟ್ರಾನ್ಸ್‌ಲೇಷನ್ ಕಮಿಟಿ' ಎಂಬ ಸಂಘಕ್ಕೆ ಮೆಂಬರುಗಳಾದ ರೆ॥ ಹಾರ್ಕ್, ಶ್ರೀ॥ ಜೇಗ್ಲರ್, ರೆ॥ ರೈಸ್ ಸಾಹೇಬರವರೂ ಮಾ॥ ಗರಸೋಕ್ಕಪ್ಪಣ್ಣ ಚಾರ್ಯರೂ ಇತರ ಪಂಡಿತರೂ ತಮ್ಮತಮ್ಮ ಅಭಿಪ್ರಾಯಗಳನ್ನು ನಮಗೆ ತಿಳಿಸಿದ್ದಕ್ಕಾಗಿ ನಾವು ಕೃತಜ್ಞರಾಗಿದ್ದೇವೆ. ಮೆ॥ ಶಾಮರಾಯರವರು ಧಾರ್ವಾಡದಲ್ಲಿರುವ ಕನ್ನಡ ಪಂಡಿತರ ಅಭಿಪ್ರಾಯಗಳನ್ನು ತಿಳಿಯುವ್ದಕ್ಕಾಗಿ ಎಡ್ಯುಕೇಷನ್ ಸೆಕ್ರೆಟರಿಯವರಿಂದ ಕಳುಹಿಸಲ್ಪಟ್ಟಿದ್ದರು. ಮೆ॥ ವೆಂಕಟರಂಗಯ್ಯನವರು, ಮೆ॥ ದೇವಪಾಂಡೆಯವರು, ಪಂಡಿತ ಧೋಂಡೋಪಂತರು ಇತ್ತ ಕೆಲವರು ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಅವರುಗಳಿಗೂ ಕಮಿಟಿಯವರು ಕೃತಜ್ಞರಾಗಿದಾರೆ.

ಗಳಿಂದ ಹೊಸವಾಗಿ ವ್ಯುತ್ಪನ್ನಗಳಾದ ಕ್ರಿಯಾಪದಗಳೂ ನಾಮಪದಗಳೂ ಪ್ರಯೋಗದಲ್ಲಿ ಬಂದಿವೆ; ಹಿಂದೂಸ್ಥಾನೀ ಮತ್ತು ಮಹಾರಾಷ್ಟ್ರಭಾಷೆಗಳ ಮಾತುಗಳು ಬಹಳವಾಗಿ ಬಂದಿವೆ. ಭಾಷೆಯು ನಾಜೂಕು ಕಡಮೆಯಾಗಿವೆ, ಇಷ್ಟಾದರೂ ಹೊಸಗನ್ನಡವು ಮುಖ್ಯವಾದ ಅಂಶಗಳಲ್ಲಿ ಹಳಿಗನ್ನಡದಂತೆಯೇ ಇದೆ."

3. ನಮಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದವರ ಆಶಯಗಳನ್ನು ನು ಸರಿಸಿ ನಾವು ಮುಂದೆ ಹೇಳಲ್ಪಟ್ಟ ನಿರ್ಣಯಗಳನ್ನು ಮಾಡಿದ್ದಾಗ್ಯೂ ದೇಶ ಭೇದದಿಂದ ರೂಪಭೇದಗಳಾಗಿರುವುದರಿಂದ ಶಬ್ದಗಳ ರೂಪಗಳಲ್ಲಿ ಸಾಧುವಾ ಗಿಯೂ ಸರ್ವಸಮ್ಮತವಾಗಿಯೂ ಇರುವವುಗಳನ್ನು ನಿಶ್ಚಯಿಸುವುದು ನಮಗೆ ಬಹಳ ಕಷ್ಟವಾಯಿತು. ಬಾಲಕರ ವಿದ್ಯಾಭ್ಯಾಸವು ಜನಗಳ ಸ್ವೇಚ್ಛೆಗೆ ಬಳಪಟ್ಟಿದ್ದು ಅಚ್ಚು ಹಾಕಿದ ಪುಸ್ತಕಗಳಿಲ್ಲದ ಕಾಲದಲ್ಲಿ ಅಕ್ಷರಸಂಯೋಜ ನದ ಅವ್ಯವಸ್ಥೆಯೂ ಶಬ್ದಗಳಲ್ಲಿಯೂ ಪ್ರತ್ಯಯಗಳಲ್ಲಿಯೂ ಉಂಟಾದ ರೂಪಾಂತರಗಳೂ ಜನಗಳ ದೃಷ್ಟಿಗೆ ಗೋಚರವಾಗಲಿಲ್ಲ. ಆಗಿನ ಕನ್ನಡ ಬರವಣಿಗೆಯನ್ನೆಲ್ಲಾ ಪ್ರಾಯಶಃ ಅವರವರುಗಳ ಕಾರ್ಯಗಳನ್ನು ನಡೆಸುವು ದಕ್ಕಾಗಲಿ ಕ್ಷೇಮಸಮಾಚಾರವನ್ನು ತಿಳಿಸುವದಕ್ಕಾಗಲಿ ಮಾತ್ರ ಉಪಯೋ ಗಿಸುತ್ತಿದ್ದು ಅವರವರುಗಳ ದೇಶದಲ್ಲಿ ವಾಡಿಕೆಯಾಗಿದ್ದ ರೂಪಗಳನ್ನೇ ಪ್ರಯೋಗಿಸುತ್ತಿದ್ದದ್ದೇ ಹೀಗಾಗುವದಕ್ಕೆ ಮುಖ್ಯಕಾರಣ. ಈಗಲಾದರೋ ಬಾಲಗವಿದ್ಯಾಭ್ಯಾಸವು ಬಂದೇ ಕ್ರಮವನ್ನನುಸರಿಸಿ ಪ್ರಚಾರಗೊಂಡಿರುವು ದರಿಂದಲೂ ಗ್ರಂಥಗಳನ್ನು ಅಚ್ಚು ಹಾಕುವ ವಾಡಿಕೆಯು ಈಚೆಗೆ ಬಂದಿರು ವುದರಿಂದಲೂ, ಜನ ಸಂಚಾರಕ್ಕೆ ವಿಧ ವಿಧ ಅನುಕೂಲವಿರುವುದರಿಂದಲೂ ಎಲ್ಲಾ ಪ್ರದೇಶಗಳಲ್ಲಿಯೂ ಬಂದೇ ಪುಸ್ತಕವನ್ನು ಪಯೋಗಿಸುವುದಾಗಿದೆ. ಆದ್ದರಿಂದಲೇ ಉಪಯೋಗದಲ್ಲಿರುವ ಶಬ್ದಗಳ ಬಹುರೂಪಗಳನ್ನು ಬಿಟ್ಟು ಬಂದೇ ರೂಪವನ್ನು ಪಯೋಗಿಸುವ ಆವಶ್ಯಕತೆಯು ಉಂಟಾಗಿದೆ. ಪಾಠ ಶಾಲೆಗಳ ಉಪಯೋಗಾರ್ಥವಾಗಿ ಪುಸ್ತಕಗಳನ್ನು ಬರೆಯುವವರಿಗೆ ನಾನಾ ವಿಧ ರೂಪಗಳುಳ್ಳ ಪದಗಳಲ್ಲೇ ಆಗಲಿ ಪ್ರತ್ಯಯಗಳಲ್ಲೇ ಆಗಲಿ ಯಾವ ದನ್ನು ಪ್ರಯೋಗಿಸಬೇಕೋ ಅವನ್ನು ನಿಶ್ಚಯಿಸುವುದಕ್ಕೆ ಅನುಕೂಲ ವಾಗುವಹಾಗೆ ಕೆಲವು ನಿಬಂಧನೆಗಳನ್ನೂ ಸೂಚನೆಗಳನ್ನೂ ಮಾಡಲು

2. **ಮೇಲೆ ಹೇಳಿದವರ** ಅಭಿಪ್ರಾಯಗಳು ಭಿನ್ನ ಭಿನ್ನವಾಗಿರುವುದು ಸಹಜವೇ. ಈಚೆಗೆ ಬದಲಾವಣೆಯನ್ನು ಹೊಂದಿರತಕ್ಕ ಪದಗಳ ಮತ್ತು ಪ್ರತ್ಯಯಗಳ ಪ್ರಾಚೀನರೂಪಗಳನ್ನೇ ಪ್ರಯೋಗಿಸುವುದು ಸಾಧುವೆಂದು ಪಂಡಿತ ಕೃಷ್ಣಾಚಾರ್ಯರು ಅಭಿಪ್ರಾಯಪಡುತ್ತಾರೆ. ರೆವರೆಂಡ್ ಇ. ಪಿ. ರೈಸ್ ಸಾಹೇಬರಾವರೊ "ಇತರ ಯಾವವಿಧವಾದ ಪರ್ಯಾಲೋಚಿಸತಕ್ಕ ಭಾಗಗಳೂ ಇಲ್ಲದ ಸಂದರ್ಭದಲ್ಲಿ ಪದಗಳ ವ್ಯುತ್ಪತ್ತಿಯನ್ನೇ ಅನುಸರಿಸುವದು ಸರಿ. ಆದರೆ ಕನ್ನಡಭಾಷೆಯು ಜನಗಳು ಮಾತಾಡುತಿರುವ ಭಾಷೆಯಾವ್ದರಿಂದಲೂ, ವೃದ್ಧಿಯಾಗುತಿರುವುದರಿಂದಲೂ, ಆಂಗ್ಲೊ ಸ್ಯಾಕ್ಸನ್ ಭಾಷೆಯಿಂದ ಇಂಗ್ಲೀಷ್ ಭಾಷೆಯು ಭಿನ್ನವಾಗಿರುವಂತೆ ಹೊಸಗನ್ನಡವು ಹಳೆಗನ್ನಡದಿಂದ ಭಿನ್ನವಾಗಿರುವುದರಿಂದಲೂ ಪದಗಳ ವ್ಯುತ್ಪತ್ತಿಯೇ ಮುಖ್ಯವಾಗಿ ಪರ್ಯಾಲೋಚಿಸತಕ್ಕ ಭಾಗವಾಗಿರಕೂಡದು. ವಿದ್ವಾಂಸರಲ್ಲಿ ವಾಡಿಕೆಯಾಗಿರುವ ರೂಪಗಳನ್ನು ಅನುಸರಿಸುವುದಕ್ಕೂ ಉಚ್ಚಾರಣೆಯಲ್ಲಿ ಸೌಲಭ್ಯವನ್ನುಂಟುಮಾಡುವುದಕ್ಕೂ ಅರ್ಥದಲ್ಲಾಗಲಿ ಅಚ್ಚುಹಾಕುವುದರಲ್ಲಾಗಲಿ ಸ್ಪಷ್ಟತೆಯನ್ನುಂಟುಮಾಡುವುದಕ್ಕೂ ಅನುಕೂಲವಾಗುವಹಾಗೆ ಮಾಡುವುದು ಮುಖ್ಯೋದ್ದೇಶವಾಗಿರಬೇಕು" ಎಂದು ಹೇಳುತ್ತಾರೆ. ತಥಾಪಿ ನಮಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದವರಲ್ಲಿ ಪ್ರಾಯಶಃ ಎಲ್ಲರೂ ಭಾಷೆಯಲ್ಲಿ ಸ್ವಾಭಾವಿಕವಾಗಿಯೇ ಉಂಟಾಗಿರುವ ಬದಲಾವಣೆಗಳನ್ನು ಗ್ರಂಥಗಳಲ್ಲಿ ಪ್ರಯೋಗಿಸುವುದು ಒಳ್ಳೇದೆಂದು ಹೇಳಿದಾರೆ. ಕನ್ನಡಭಾಷಾ ವ್ಯಾಸಂಗಕ್ಕೆ ಅತ್ಯಂತೋಪಯುಕ್ತವಾದ ಈಗ ಸ್ವಲ್ಪದಿವಸಗಳಿಗೆ ಮುಂಚೆ ಮುದ್ರಿತವಾದ **ಮೆಸ್ಸಿ ಕಿಟಲ್** ಸಾಹೇಬರವರ ಕನ್ನಡ ಮತ್ತು ಇಂಗ್ಲೀಷ್ ಡಿಕ್ಷ್ನರಿಯ ಉಪೋದ್ಘಾತದಲ್ಲಿ ಹೇಳಿರುವ ಈ ಕೆಳಗೆ ಬರೆದಿರುವ ವಾಕ್ಯಗಳಿಂದ ಹೊಸಗನ್ನಡದ ಲಕ್ಷಣಗಳು ಸ್ಪಷ್ಟವಾಗುವುವು. "ವರ್ತಮಾನಕಾಲಸೂಚಕವಾದ ಪ್ರತ್ಯಯವು ಈಚೆಗೆ ಬದಲಾಯಿಸಲ್ಪಟ್ಟಿದೆ. ಕ್ರಿಯಾಪದಪ್ರತ್ಯಯಗಳಲ್ಲಿಯೂ ಅನೇಕ ಪ್ರತ್ಯಯಗಳು ಕೊಂಚಮಟ್ಟಿಗೆ ಬದಲಾವಣೆಯನ್ನು ಹೊಂದಿವೆ. ನಾಮಪದ ಮತ್ತು ಸರ್ವನಾಮ ಇವುಗಳಿಗೆ ಬರತಕ್ಕ ಪ್ರತ್ಯಯಗಳಲ್ಲಿ ಕೇವನ್ನು ಉಪಯೋಗಿಸುವುದಿಲ್ಲ. ಅನೇಕ ಕ್ರಿಯಾಪದಗಳೂ, ನಾಮಪದಗಳೂ ಅವ್ಯಯಗಳೂ ಈಗ ಪ್ರಯೋಗದಲ್ಲೇ ಇಲ್ಲ. ಈಗಿರುವ ಧಾತ

ಗಳಿಂದ ಹೊಸದಾಗಿ ವ್ಯುತ್ಪನ್ನಗಳಾದ ಕ್ರಿಯಾಪದಗಳೂ ನಾಮಪದಗಳೂ ಪ್ರಯೋಗದಲ್ಲಿ ಬಂದಿವೆ; ಹಿಂದೂಸ್ಥಾನೀ ಮತ್ತು ಮಹಾರಾಷ್ಟ್ರಭಾಷೆಗಳ ಮಾತುಗಳು ಬಹಳವಾಗಿ ಬಂದಿವೆ. ಭಾಷೆಯು ನಾಜೂಕು ಕಡಮೆಯಾಗಿದೆ, ಇಷ್ಟಾದರೂ ಹೊಸಗನ್ನಡವು ಮುಖ್ಯವಾದ ಅಂಶಗಳಲ್ಲಿ ಹಳೆಗನ್ನಡದಂತೆಯೇ ಇದೆ."

3. ನಮಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದವರ ಆಶಯಗಳನ್ನು ನು ಸರಿಸಿ ನಾವು ಮುಂದೆ ಹೇಳಲ್ಪಟ್ಟ ನಿರ್ಣಯಗಳನ್ನು ಮಾಡಿದ್ದಾಗ್ಯೂ ದೇಶ ಭೇದದಿಂದ ರೂಪಭೇದಗಳಾಗಿರುವುದರಿಂದ ಶಬ್ದಗಳ ರೂಪಗಳಲ್ಲಿ ಸಾಧುವಾಗಿಯೂ ಸರ್ವಸಮ್ಮತವಾಗಿಯೂ ಇರುವವುಗಳನ್ನು ನಿಶ್ಚಯಿಸುವುದು ನಮಗೆ ಬಹಳ ಕಷ್ಟವಾಯಿತು. ಬಾಲಕರ ವಿದ್ಯಾಭ್ಯಾಸವು ಜನಗಳ ಸ್ವೇಚ್ಛೆಗೆ ಬಿಳಪಟ್ಟಿದ್ದು ಅಚ್ಚು ಹಾಕಿದ ಪುಸ್ತಕಗಳಿಲ್ಲದ ಕಾಲದಲ್ಲಿ ಅಕ್ಷರಸಂಯೋಜನದ ಅವ್ಯವಸ್ಥೆಯೂ ಶಬ್ದಗಳಲ್ಲಿಯೂ ಪ್ರತ್ಯಯಗಳಲ್ಲಿಯೂ ಉಂಟಾದ ರೂಪಾಂತರಗಳೂ ಜನಗಳ ದೃಷ್ಟಿಗೆ ಗೋಚರವಾಗಲಿಲ್ಲ. ಆಗಿನ ಕನ್ನಡ ಬರವಣಿಗೆಯನ್ನೆಲ್ಲಾ ಪ್ರಾಯಶಃ ಅವರವರುಗಳ ಕಾರ್ಯಗಳನ್ನು ನಡೆಸುವುದಕ್ಕಾಗಲಿ ಕ್ಷೇಮಸಮಾಚಾರವನ್ನು ತಿಳಿಸುವದಕ್ಕಾಗಲಿ ಮಾತ್ರ ಉಪಯೋಗಿಸುತ್ತಿದ್ದು ಅವರವರುಗಳ ದೇಶದಲ್ಲಿ ವಾಡಿಕೆಯಾಗಿದ್ದ ರೂಪಗಳನ್ನೇ ಪ್ರಯೋಗಿಸುತ್ತಿದ್ದದ್ದೇ ಹೀಗಾಗುವದಕ್ಕೆ ಮುಖ್ಯಕಾರಣ. ಈಗಲಾದರೋ ಬಾಲಗವಿದ್ಯಾಭ್ಯಾಸವು ಬಂದೇ ಕ್ರಮವನ್ನನುಸರಿಸಿ ಪ್ರಚಾರಗೊಂಡಿರುವುದರಿಂದಲೂ ಗ್ರಂಥಗಳನ್ನು ಅಚ್ಚು ಹಾಕುವ ವಾಡಿಕೆಯು ಈಚೆಗೆ ಬಂದಿರುವುದರಿಂದಲೂ, ಜನ ಸಂಚಾರಕ್ಕೆ ವಿಧ ವಿಧ ಅನುಕೂಲವಿರುವುದರಿಂದಲೂ ಎಲ್ಲಾ ಪ್ರದೇಶಗಳಲ್ಲಿಯೂ ಬಂದೇ ಪುಸ್ತಕವನ್ನು ಪಯೋಗಿಸುವುದಾಗಿದೆ. ಆದ್ದರಿಂದಲೇ ಉಪಯೋಗದಲ್ಲಿರುವ ಶಬ್ದಗಳ ಬಹುರೂಪಗಳನ್ನು ಬಿಟ್ಟು ಬಂದೇ ರೂಪವನ್ನು ಪಯೋಗಿಸುವ ಆವಶ್ಯಕತೆಯು ಉಂಟಾಗಿದೆ. ಪಾಠ ಶಾಲೆಗಳ ಉಪಯೋಗಾರ್ಥವಾಗಿ ಪುಸ್ತಕಗಳನ್ನು ಬರೆಯುವವರಿಗೆ ನಾನಾ ವಿಧ ರೂಪಗಳುಳ್ಳ ಪದಗಳಲ್ಲೇ ಆಗಲಿ ಪ್ರತ್ಯಯಗಳಲ್ಲೇ ಆಗಲಿ ಯಾವದನ್ನು ಪ್ರಯೋಗಿಸಬೇಕೋ ಅವನ್ನು ನಿಶ್ಚಯಿಸುವುದಕ್ಕೆ ಅನುಕೂಲವಾಗುವಹಾಗೆ ಕೆಲವು ನಿಬಂಧನೆಗಳನ್ನೂ ಸೂಚನೆಗಳನ್ನೂ ಮಾಡಲು

ನಾವು ಮುಖ್ಯವಾಗಿ ಯತ್ನಿಸಿದೇವೆ. ನಾವು ಕೊಟ್ಟಿರತಕ್ಕ ಪದಗಳ * ಪಟ್ಟಿಯೇ ಆಗಲಿ ನಿಬಂಧನೆಗಳೇ ಆಗಲಿ ಸರ್ವಸಂಗ್ರಹವಾಗಿಲ್ಲವೆಂಬುದಾಗಿಯೂ ಪುಸ್ತಕಗಳನ್ನು ಬರೆಯುವವರು ಅನೇಕ ಸಂದರ್ಭಗಳಲ್ಲಿ ತಾವೇ ವಿವೇಚಿಸಿ ಪದಗಳನ್ನು ಪ್ರಯೋಗಿಸಬೇಕೆಂಬುದಾಗಿಯೂ ಹೇಳಲು ಅನವಶ್ಯಕ. ಆದಾಗ್ಯೂ ನಾವು ಮಾಡಿರುವ ನಿರ್ಣಯಗಳು ಅಂಥವರಿಗೆ ಸಾಕ್ಷ್ಯಾಶ್ರಯಕ್ಕಾಗಿ ಯಾಗಲಿ ಊಹೆಯ ಮೂಲಕವಾಗಿಯಾಗಲಿ ಬಹಳ ಮಟ್ಟಿಗೆ ಉಪಯೋಗಿಸುವುವೆಂದು ನಂಬುತ್ತೇವೆ.

4. ರೆವಿ ಇ. ಪಿ. ಬ್ಲೈಸ್‌ಸಾಹೇಬರವರು ಮುದ್ರಣ ಸಮಾಕರಣ ವಿಷಯವಾಗಿ ಸೂಚಿಸಿರುವ ಈ ಕೆಳಗೆ ಹೇಳಿರುವ ಅಂಶಗಳು ಶ್ಲಾಘ್ಯವಾಗಿವೆ. "ಮೈಸೂರು ಸರ್ಕಾರದವರು ಇಂಥಾ ಸಮಯವನ್ನು ಮುದ್ರಣ ಸಮಾಕರಣಕ್ಕಾಗಿ ಉಪಯೋಗಿಸಿಕೊಳ್ಳಬಹುದೆಂದು ಸೂಚಿಸಲು ಇಷ್ಟಪಡುತ್ತೇನೆ. (1) ಇಂಗ್ಲೀಷಿನ ಇಟಾಲಿಕ್ಸ್ (Italics) ಮತ್ತು ಬ್ಲಾಕ್ (Block) ಅಕ್ಷರಗಳಿಗೆ ಸಮನಾದ ಅಕ್ಷರಗಳ ಮೊಳೆಗಳನ್ನು ತಯಾರು ಮಾಡಬಹುದು. ಹೀಗೆ ಮಾಡುವುದು ಸಾಧ್ಯವಾದಲ್ಲಿ ಹಿಂದಕ್ಕೆ ವಾಲುವ ಅಕ್ಷರಗಳನ್ನು ಆವೇಳೆ ತಯಾರು ಮಾಡಿಸಬಹುದು. (2) ಇಂಗ್ಲೀಷ್ ಭಾಷೆಯ 'z' 'f' ಎಂಬ ಅಕ್ಷರಗಳ ಉಚ್ಚಾರಣೆಯನ್ನು ಸೂಚಿಸುವ ಎರಡು ಹೊಸ ಅಕ್ಷರಗಳನ್ನು ಏರ್ಪಡಿಸಬೇಕು. ಹೊಸಬರಿಗೆ ಸಂದೇಹವಿಲ್ಲದಹಾಗೆ ಮಾಡುವುದಕ್ಕಾಗಿ ಆ ಅಕ್ಷರಗಳು 'ಜ' 'ಫ' ಎಂಬುವಗಳಂತಿದ್ದರೆ ಬಲ್ಲೆವು. ಆದರೆ ಅವುಗಳನ್ನು ಶೀಘ್ರವಾಗಿ ಗ್ರಹಿಸುವುದಕ್ಕೆ ಅನುಕೂಲಿಸುವಂಥಾ ಗೊತ್ತಾದ ಸಿರುತು ಇರಬೇಕು. 'ಜ' ಗೆ ಹೊಕ್ಕಳು ಶೀಳಿ ಬರೆಯಬಹುದು. 'ಫ' ವನ್ನು ಚಡ್ಡಿಗೀಟಿನೊಡನೆ ಬರೆಯಬಹುದು.

5. ವಿದ್ಯಾಭ್ಯಾಸಕ್ಕೆ ಉದ್ದಿಷ್ಟವಾದ ಪುಸ್ತಕಗಳಲ್ಲಿ ಅಕ್ಷರಸಂಯೋಜನವು ಒಂದೇ ವಿಧವಾಗಿರುವ ಬಗ್ಗೆ ಒಂದು ಕ್ರಮವನ್ನು ನಿಶ್ಚಯಿಸುವುದಕ್ಕಾಗಿ ನಮ್ಮಿಂದ ಅನುಸರಿಸಲ್ಪಟ್ಟ ವಿಧಾನಗಳು ಯಾವವೆಂದರೆ:—

(1) ಉಚ್ಚಾರಣ ಸೌಕರ್ಯಾರ್ಥವಾಗಿ ಸ್ವಾಭಾವಿಕವಾಗಿ ಉಂಟಾಗತಕ್ಕ

---

* ಪಟ್ಟಿಯು ಮುಂದಣ ಸಂಚಿಕೆಯಲ್ಲಿ ಮುದ್ರಿಸಲ್ಪಡುವುದು.

ಬದಲಾವಣೆಗಳಪ್ರಕಾರ ಹಳೆಗನ್ನಡ ಶಬ್ದಗಳಿಂದ ವ್ಯುತ್ಪನ್ನವಾದ ಹೊಸ ಗನ್ನಡ ಶಬ್ದಗಳನ್ನು ಪ್ರಯೋಗಿಸಬಹುದು.

(2) ಮೇಲೆ ಹೇಳಿದ ಮೇರೆಗೆ ವ್ಯುತ್ಪನ್ನಗಳಲ್ಲದ ಶಬ್ದಗಳ ವಿಷಯದಲ್ಲಿ, ಜೈಮಿನಿ ಭಾರತ, ತೊರವೇ ರಾಮಾಯಣ, ಆನಂದರಾಮಾಯಣ, ಮುಂತಾದ ಪ್ರಸಿದ್ಧ ಕನ್ನಡ ಗ್ರಂಥಗಳಲ್ಲಿ ಪ್ರಯೋಗವಿರುವ ರೂಪಗಳನ್ನು ಪ್ರಯೋಗಿಸಬಹುದು.

(3) ಇಂಗ್ಲೀಷ್, ಹಿಂದುಸ್ಥಾನಿ ಮುಂತಾದ ಅನ್ಯಭಾಷೆಗಳ ವ್ಯಂಜನಾಂತ ಶಬ್ದಗಳಿಗೆ ವಿಭಕ್ತಿಪ್ರತ್ಯಯಗಳನ್ನು ಸೇರಿಸುವಾಗ, ಅಂಥಾ ವ್ಯಂಜನಾಂತ ಸಂಸ್ಕೃತ ಶಬ್ದಗಳಿಗೆ ಸೇರಿಸುವಹಾಗೆಯೆ ಸೇರಿಸತಕ್ಕದ್ದು.

(4) ಕನ್ನಡದಲ್ಲಿ ಮಹಾಪ್ರಾಣೋಚ್ಚಾರಣೆಯು ಅಪೂರ್ವವಾದ್ದರಿಂದ ಅಚ್ಚ ಕನ್ನಡ ಮಾತುಗಳಲ್ಲಿ ಮಹಾಪ್ರಾಣಕ್ಕೆ ಬದಲಾಗಿ ಅಲ್ಪಪ್ರಾಣವನ್ನು ಉಪಯೋಗಿಸಬಹುದು. 'ಅಂಥ' 'ಇಂಥ' 'ಎಂಥ' ಮತ್ತು ಅವುಗಳಿಂದುಂಟಾದ ಶಬ್ದಗಳಲ್ಲಿ ಅವುಗಳ ಪ್ರಾಚೀನರೂಪಗಳಾದ 'ಅಂತಹ' 'ಇಂತಹ' 'ಎಂತಹ' ಎಂಬುವಗಳಲ್ಲಿ ಹಕಾರವಿತ್ತೆಂದು ಸೂಚಿಸುವುದಕ್ಕಾಗಿ ಮಹಾಪ್ರಾಣವನ್ನು ಪಯೋಗಿಸಬಹುದು. ಅನುಕರಣ ಶಬ್ದಗಳಲ್ಲಿಯೂ ಸಂಖ್ಯಾವಾಚಕಗಳಲ್ಲಿಯೂ ಹೀಗೆಯೆ ಮಾಡತಕ್ಕದ್ದು.

(5) ಅಕಾರದ ಮುಂದೆ ಯಕಾರವಿದ್ದಲ್ಲಿ ಆ ಯೆರಡು ಅಕ್ಷರಗಳಿಗೆ ಬದಲಾಗಿ ಐಕಾರವನ್ನು ಪಯೋಗಿಸಬಹುದು. ಉದಾ; ಕಯ್ಯು, ಕೈ; ನಿರ್ಯಿಯಿಸು, ನಿರ್ಯೈಸು; ಇತ್ಯಾದಿ. ಅಕಾರದ ಮುಂದೆ ಯಕಾರ ದ್ವಿತ್ವವಿದ್ದಲ್ಲಿ ಐಕಾರವನ್ನು ಪಯೋಗಿಸಿದಲ್ಲಿ ಬಿಟ್ಟೇ ಯಕಾರವನ್ನು ಬರೆಯತಕ್ಕದ್ದು 'ಕೈಯನ್ನು' ಎಂಬುವದಾಗಿಯೆ ಈ ಹೊರತು 'ಕ್ಕೈಯ್ಯನ್ನು' ಎಂದು ಅಲ್ಲ.

(6) ಎಕಾರಾಂತ ಶಬ್ದಗಳಿಗೆ 'ಇಸು' ಪ್ರತ್ಯಯವನ್ನು ಸೇರಿಸುವಾಗ ಯಕಾರಾಗಮ ಬರತಕ್ಕದ್ದು. ಉದಾ. ಕರೆ + ಇಸು = ಕರೆಯಿಸು.

(7) ಹುಕಾರಾಂತಗಳಾದ ಕೆಲವು ಸಕರ್ಮಕ ಕ್ರಿಯಾಪದಗಳಿಗೆ 'ಇಸು' ಪ್ರತ್ಯಯವನ್ನು ಸೇರಿಸಿ ಅರ್ಥ ಭೇದವಿಲ್ಲದೆ ಉಪಯೋಗಿಸಬಹುದು. ಉದಾ: ಕಳುಹು, ಕಳುಹಿಸು.

(8) ಈಗ ವಾಡಿಕೆಯಾಗಿ ಉಪಯೋಗದಲ್ಲಿರುವ 'ಅದು' 'ಅವು'

ನಾವು ಮುಖ್ಯವಾಗಿ ಯತ್ನಿಸಿದೇವೆ. ನಾವು ಕೊಟ್ಟಿರತಕ್ಕ ಪದಗಳ * ವಚ್ಚಯೇ ಆಗಲಿ ನಿಬಂಧನೆಗಳೇ ಆಗಲಿ ಸರ್ವಸಂಗ್ರಹವಾಗಿಲ್ಲವೆಂಬುದಾಗಿಯೂ ಪುಸ್ತಕಗಳನ್ನು ಬರೆಯುವವರು ಅನೇಕ ಸಂದರ್ಭಗಳಲ್ಲಿ ತಾವೇ ವಿವೇಚಿಸಿ ಪದಗಳನ್ನು ಪ್ರಯೋಗಿಸಬೇಕೆಂಬುದಾಗಿಯೂ ಹೇಳಲು ಅನವಶ್ಯಕ ಆದಾಗ್ಯೂ ನಾವು ಮಾಡಿರುವ ಸೂರ್ಯಯೋಗಳು ಅಂಧವರಿಗೆ ಸಾಕ್ಷಾತ್ತಾಗಿ ಯಾಗಲಿ ಊಹೆಯ ಮೂಲಕವಾಗಿಯಾಗಲಿ ಬಹಳ ಮಟ್ಟಿಗೆ ಉಪಯೋಗಿಸುವುವೆಂದು ನಂಬುತ್ತೇವೆ.

4. Rev. ಇ. ಪಿ. ರೈಸ್‌ಸಾಹೇಬರವರು ಮುದ್ರಣ ಸಮಾಕರಣ ವಿಷಯವಾಗಿ ಸೂಚಿಸಿರುವ ಈ ಕೆಳಗೆ ಹೇಳಿರುವ ಅಂಶಗಳು ಶ್ಲಾಘ್ಯವಾಗಿವೆ. "ಮೈಸೂರು ಸರ್ಕಾರದವರು ಇಂಥಾ ಸಮಯವನ್ನು ಮುದ್ರಣ ಸಮಾಕರಣಕ್ಕಾಗಿ ಉಪಯೋಗಿಸಿಕೊಳ್ಳಬಹುದೆಂದು ಸೂಚಿಸಲು ಇಷ್ಟಪಡುತ್ತೇನೆ. (1) ಇಂಗ್ಲೀಷಿನ ಇಟಾಲಿಕ್ಸ್ (Italics) ಮತ್ತು ಬ್ಲಾಕ್ (Block) ಅಕ್ಷರಗಳಿಗೆ ಸಮನಾದ ಅಕ್ಷರಗಳ ಮೊಳೆಗಳನ್ನು ತಯಾರು ಮಾಡಬಹುದು. ಹೀಗೆ ಮಾಡುವುದು ಸಾಧ್ಯವಾದಲ್ಲಿ ಹಿಂದಕ್ಕೆ ವಾಲುವ ಅಕ್ಷರಗಳನ್ನು ಅವೇ ತಯಾರು ಮಾಡಿಸಬಹುದು. (2) ಇಂಗ್ಲೀಷ್ ಭಾಷೆಯ 'z' 'f' ಎಂಬ ಅಕ್ಷರಗಳ ಉಚ್ಚಾರಣೆಯನ್ನು ಸೂಚಿಸುವ ಎರಡು ಹೊಸ ಅಕ್ಷರಗಳನ್ನು ನಿರ್ಮಿಸಬೇಕು. ಹೊಸಬರಿಗೆ ಸಂದೇಹವಿಲ್ಲದಹಾಗೆ ಮಾಡುವುದಕ್ಕಾಗಿ ಆ ಅಕ್ಷರಗಳು 'ಜ' 'ಫ' ಎಂಬುವಂಗಳಂತಿದ್ದರೆ ಬಿಳ್ಳೀಮು. ಅವರೆ ಅವುಗಳನ್ನು ಶೀಘ್ರವಾಗಿ ಗ್ರಹಿಸುವುದಕ್ಕೆ ಅನುಕೂಲಿಸುವಂಥಾ ಗೊತ್ತಾದ ಗುರುತು ಇರಬೇಕು. 'ಜ' ಗೆ ಹೊಕ್ಕಳು ಕೀಳಿ ಬರೆಯಬಹುದು. 'ಫ' ವನ್ನು ಅಷ್ಟಗೀಟಿನೊಡನೆ ಬರೆಯಬಹುದು.

5. ವಿದ್ಯಾಭ್ಯಾಸಕ್ಕೆ ಉದ್ದಿಷ್ಟವಾದ ಪುಸ್ತಕಗಳಲ್ಲಿ ಅಕ್ಷರಸಂಯೋಜನವು ಯಾವಾಗಲೂ ಒಂದೇ ವಿಧವಾಗಿರುವ ಬಗ್ಗೆ ಒಂದು ಕ್ರಮವನ್ನು ನಿಶ್ಚಯಿಸುವುದಕ್ಕಾಗಿ ನಮ್ಮಿಂದ ಅನುಸರಿಸಲ್ಪಟ್ಟ ವಿಧಾನಗಳು ಯಾವವೆಂದರೆ:—

(1) ಉಚ್ಚಾರಣೆ ಸ್ಪಷ್ಟವಾಗಿ ಸ್ವಾಭಾವಿಕವಾಗಿ ಉಂಟಾಗತಕ್ಕ

---

* ಮುಂದಿನ ಸಂಚಿಕೆಯಲ್ಲಿ ಮುಕ್ತಾಯವಾಗುವುದು.

ಬದಲಾವಣೆಗಳ ಪ್ರಕಾರ ಹಳಿಗನ್ನಡ ಶಬ್ದಗಳಿಂದ ವ್ಯುತ್ಪನ್ನವಾದ ಹೊಸಗನ್ನಡ ಶಬ್ದಗಳನ್ನು ಪ್ರಯೋಗಿಸಬಹುದು.

(2) ಮೇಲೆ ಹೇಳಿದ ಮೇರೆಗೆ ವ್ಯುತ್ಪನ್ನಗಳಲ್ಲದ ಶಬ್ದಗಳ ವಿಷಯದಲ್ಲಿ, ಜೈಮಿನಿ ಭಾರತ, ತೊರವೇ ರಾಮಾಯಣ, ಅನಂತರಾಮಾಯಣ, ಮುಂತಾದ ಪ್ರಸಿದ್ಧ ಕನ್ನಡ ಗ್ರಂಥಗಳಲ್ಲಿ ಪ್ರಯೋಗವಿರುವ ರೂಪಗಳನ್ನು ಪ್ರಯೋಗಿಸಬಹುದು.

(3) ಇಂಗ್ಲೀಷ್, ಹಿಂದುಸ್ಥಾನಿ ಮುಂತಾದ ಅನ್ಯಭಾಷೆಗಳ ವ್ಯಂಜನಾಂತ ಶಬ್ದಗಳಿಗೆ ವಿಭಕ್ತಿಪ್ರತ್ಯಯಗಳನ್ನು ಸೇರಿಸುವಾಗ, ಅಂಥಾ ವ್ಯಂಜನಾಂತ ಸಂಸ್ಕೃತ ಶಬ್ದಗಳಿಗೆ ಸೇರಿಸುವಹಾಗೆಯೆ ಸೇರಿಸತಕ್ಕದ್ದು.

(4) ಕನ್ನಡದಲ್ಲಿ ಮಹಾಪ್ರಾಣೋಚ್ಚಾರಣೆಯು ಅಪೂರ್ವವಾದ್ದರಿಂದ ಅಚ್ಚ ಕನ್ನಡ ಮಾತುಗಳಲ್ಲಿ ಮಹಾಪ್ರಾಣಕ್ಕೆ ಬದಲಾಗಿ ಅಲ್ಪಪ್ರಾಣವನ್ನು ಉಪಯೋಗಿಸಬಹುದು. 'ಅಂಥ' 'ಇಂಥ' 'ಎಂಥ' ಮತ್ತು ಅವುಗಳಿಂದುಂಟಾದ ಶಬ್ದಗಳಲ್ಲಿ ಅವುಗಳ ಪ್ರಾಚೀನರೂಪಗಳಾದ 'ಅಂತಹ' 'ಇಂತಹ' 'ಎಂತಹ' ಎಂಬುವಗಳಲ್ಲಿ ಹಕಾರವಿತ್ತೆಂದು ಸೂಚಿಸುವುದಕ್ಕಾಗಿ ಮಹಾಪ್ರಾಣವನ್ನು ಪ್ರಯೋಗಿಸಬಹುದು. ಅನುಕರಣ ಶಬ್ದಗಳಲ್ಲಿಯೂ ಸಂಖ್ಯಾವಾಚಕಗಳಲ್ಲಿಯೂ ಹೀಗೆಯೆ ಮಾಡತಕ್ಕದ್ದು.

(5) ಅಕಾರದ ಮುಂದೆ ಯಕಾರವಿದ್ದಲ್ಲಿ ಆ ಯೆರಡು ಅಕ್ಷರಗಳಿಗೂ ಬದಲಾಗಿ ಐಕಾರವನ್ನು ಪ್ರಯೋಗಿಸಬಹುದು. ಉದಾ; ಕಯ್ಯು, ಕೈ; ನಿರ್ಯಿಸು, ನಿರ್ಯ್ಸು; ಇತ್ಯಾದಿ. ಅಕಾರದ ಮುಂದೆ ಯಕಾರ ದ್ವಿತ್ವವಿದ್ದು ಐಕಾರವನ್ನು ಪ್ರಯೋಗಿಸಿವದಲ್ಲಿ ಒಂದೇ ಯಕಾರವನ್ನು ಬರೆಯತಕ್ಕದ್ದು. 'ಕೈಯನ್ನು' ಎಂಬುವದಾಗಿಯೆ ಈ ಹೊರತು 'ಕೈಯ್ಯನ್ನು' ಎಂದು ಅಲ್ಲ.

(6) ಎಕಾರಾಂತ ಶಬ್ದಗಳಿಗೆ 'ಇಸು' ಪ್ರತ್ಯಯವನ್ನು ಸೇರಿಸುವಾಗ ಯಕಾರಾಗಮ ಬರತಕ್ಕದ್ದು. ಉದಾ. ಕರೆ + ಇಸು = ಕರೆಯಿಸು.

(7) ಹುಕಾರಾಂತಗಳಾದ ಕೆಲವು ಸಕರ್ಮಕ ಕ್ರಿಯಾಪದಗಳಿಗೆ 'ಇಸು' ಪ್ರತ್ಯಯವನ್ನು ಸೇರಿಸಿ ಅರ್ಥ ಭೇದವಿಲ್ಲದೆ ಉಪಯೋಗಿಸಬಹುದು. ಉದಾ: ಕಳುಹು, ಕಳುಹಿಸು.

(8) ಈಗ ವಾಡಿಕೆಯಾಗಿ ಉಪಯೋಗದಲ್ಲಿರುವ 'ಅದು' 'ಇವು'

ಎಂಬುವಕ್ಕೆಗಳಿಗೆ ಬದಲಾಗಿ 'ಉದು' 'ಉವ್ರು' ಎಂಬ ಕ್ರಿಯಾಪದ ಪ್ರತ್ಯಯಗಳನ್ನೇ ಉಪಯೋಗಿಸತಕ್ಕದ್ದು. ಉದಾ : 'ಮಾಡುವದು' ಎನ್ನುವುದಕ್ಕೆ ಬದಲಾಗಿ 'ಮಾಡುವ್ರದು'; 'ಮಾಡುವವ್ರು' ಎನ್ನುವುದಕ್ಕೆ ಬದಲಾಗಿ 'ಮಾಡುವ್ರವ್ರು'.

(9) ಭೂತ ನಪುಂಸಕ ಕ್ರಿಯಾಪದಗಳಲ್ಲಿ 'ಕೊಳ್ಳು' ಎಂಬ ಪ್ರತ್ಯಯವನ್ನು ಸೇರಿಸುವಾಗ 'ಕೊ' ಎಂಬುದುಮಾತ್ರ ಉಳಿಯಬಹುದು. ಉದಾ : ಕುಳಿತುಕೊ, ಕೂತುಕೊ ಇತ್ಯಾದಿ.

(10) 'ಯಾವ' 'ಯಾರು' ಮತ್ತು ಅವುಗಳಿಂದ ಹುಟ್ಟಿರುವ ಮಾತುಗಳ ನಾಜೀನೆರೂಪಗಳಲ್ಲಿ ಆದಿವರ್ಣವಾದ ಆಕಾರಕ್ಕೆ ಯಾ ಕಾರವನ್ನು ಪಯೋಗಿಸಬಹುದು. ಉದಾ . 'ಅವ' ಎನ್ನುವುದಕ್ಕೆ ಬದಲಾಗಿ 'ಯಾವ' : 'ಆರು' ಎನ್ನುವುದಕ್ಕೆ ಬದಲಾಗಿ 'ಯಾರು'.

(11) ಅಕಾರದಮುಂದೆ ವಕಾರವಿದ್ದಲ್ಲಿ ಈ ಯೆರಡು ಅಕ್ಷರಗಳಿಗೆ ಬದಲಾಗಿ ಔಕಾರವನ್ನು ಪಯೋಗಿಸಬಹುದು. ಉದಾ : ತವರು, ತೌರು; ಅವುಕು, ಔಕು. ಅಕಾರದಮುಂದೆ ವಕಾರ ದ್ವಿತ್ವವಿದ್ದು ಔಕಾರವನ್ನು ಪಯೋಗಿಸಿದಲ್ಲಿ ಒಂದೇ ವಕಾರವನ್ನು ಬರೆಯತಕ್ಕದ್ದು. ಉದಾ : ಅವ್ವ, ಔವ; 'ಔವ್ವ' ಎಂಬುದಾಗಲ್ಲ.

(12) ಅಚ್ಚಕನ್ನಡ ಮಾತುಗಳಲ್ಲಿ ಶಕಾರವಿಲ್ಲದ್ದರಿಂದ ಈಗ ವಾಡಿಕೆಯಾಗಿ ಶಕಾರವನ್ನು ಉಚ್ಚರಿಸತಕ್ಕ ಸ್ಥಳಗಳಲ್ಲಿ ಶಕಾರವೇ ಹೆಚ್ಚಾಗಿ ರೂಢಿಯಾಗಿದ್ದಹೊರತು (ಉದಾ : 'ಶನುಭಾಗ') ಸಕಾರವನ್ನು ಪಯೋಗಿಸಬಹುದು.

(13) ಕನ್ನಡದಲ್ಲಿ ದ್ವಿತ್ವಹೊರತು ಇತರ ಸಂಯುಕ್ತಾಕ್ಷರಗಳು ಅಪೂರ್ವವಾದ್ದರಿಂದ ಅವುಗಳನ್ನು ಬಿಡಿಸಿ ಬರೆಯತಕ್ಕದ್ದು. ಉದಾ: 'ಕಣ್ಲೆ' ಎಂಬುವದಕ್ಕೆ ಬದಲಾಗಿ 'ಕಡಲೆ' ಎಂದು ಇತ್ಯಾದಿ.

(14) ಪೂರ್ವದಲ್ಲಿ ವ್ಯಂಜನಾಂತವಾಗಿದ್ದು ಈಗ ಉಕಾರಾಂತವಾಗಿರುವ ಶಬ್ದಗಳಿಗೆ ತೃತೀಯೆ ಪಷ್ಠೀ ಮತ್ತು ಸಪ್ತಮೀ ವಿಭಕ್ತಿ ಪ್ರತ್ಯಯಗಳನ್ನು ಸೇರಿಸುವಾಗ ಮಧ್ಯದಲ್ಲಿ 'ಇ' ಆಗಮ ಬರಬಹುದು. ಉದಾ : ಕಲ್ಲಿಂದ' ಅಥವಾ 'ಕಲ್ಲಿನಿಂದ'; ಕಲ್ಲ 'ಕಲ್ಲಿನ'; 'ಕಲ್ಲಲ್ಲಿ' ಅಥವಾ 'ಕಲ್ಲಿನಲ್ಲಿ'; ಇತ್ಯಾದಿ.

(15) ಹ್ರಸ್ವಸ್ವರವುಳ್ಳ ವ್ಯಂಜನಾಂತ ಪದಗಳಿಗೆ 'ಇಸು' ಪ್ರತ್ಯಯವನ್ನು ಸೇರಿಸುವಾಗ ಅಂತ್ಯ ವ್ಯಂಜನವನ್ನು ದ್ವಿತ್ವವಾಗಿಯೇ ಆಗಲಿ ಅಥವಾ ದ್ವಿತ್ವವಿಲ್ಲದೆಯೇ ಆಗಲಿ ಬರೆಯಬಹುದು. ಉದಾ: ನಿಲ್ಲಿಸು, ನಿಲಿಸು; ಉಣ್ಣಿಸು, ಉಣಿಸು.

(16) ನಾಮವಾಚಕಗಳ ಅಂತ್ಯಸ್ವರವನ್ನು ಒತ್ತಿ ಹೇಳುವುದರಲ್ಲಿ ಅಥವಾ ಸಂಬೋಧನೆಯಲ್ಲಿ ವಿನಾ ದೀರ್ಘವಾಗಿ ಹೇಳತಕ್ಕವಶ್ಯಕವಿಲ್ಲ.

(17) ಒಂದೇಮಾತಿಗೆ ಸಂಕ್ಷಿಪ್ತ ಸಂಕ್ಷಿಪ್ತ ರೂಪಗಳೆರಡೂ ಇದ್ದಲ್ಲಿ ಸಂಕ್ಷಿಪ್ತ ರೂಪವನ್ನು ಉಪಯೋಗಿಸಬಹುದು. ಉದಾ: ಆದುದರಿಂದ ಆದ್ದರಿಂದ, ಹೋದುದರಿಂದ, ಹೋದ್ದರಿಂದ; ಇತ್ಯಾದಿ.

(18) ಅನುನಾಸಿಕಗಳನ್ನು ಬಿಟ್ಟು ಮಿಕ್ಕವರ್ಗ್ಯ ಮತ್ತು ಅವರ್ಗ್ಯಾಕ್ಷರಗಳ ಹಿಂದೆ ಸೊನ್ನೆಯನ್ನು ಪ್ರಯೋಗಿಸಬಹುದು. ಅನುನಾಸಿಕಗಳ ವಿಷಯದಲ್ಲಿ ಅವುಗಳನ್ನೇ ದ್ವಿತ್ವವಾಗಿ ಬರೆಯತಕ್ಕದ್ದು. ಉದಾ: ಎಂಟು ತುಂಡು; ಎನ್ನು, ಮಣ್ಣು.

(19) 'ಮೊದಲನೆಯ ಭಾಗ' 'ನಿಂಬೆಯಹಣ್ಣು' ಮುಂತಾದವುಗಳಿಗೆ ಬದಲಾಗಿ ಉಚ್ಚಾರಣೆಯಲ್ಲಿ ಸಂಕರ್ಷ ವುಂಟಾಗುವುದರಿಂದ 'ಮೊದಲನೇ ಭಾಗ' 'ನಿಂಬೇಹಣ್ಣು' ಎಂದು ಬರೆಯಬಹುದು.

(20) ತತ್ಸಮ ಪದಗಳಲ್ಲಿ ಮಹಾಪ್ರಾಣವಿದ್ದಲ್ಲಿ ತದ್ಭವ ಪದಗಳಲ್ಲಿ ಮಹಾಪ್ರಾಣವನ್ನು ಐಚ್ಛಿಕವಾಗಿ ಉಪಯೋಗಿಸಬಹುದು. ಉದಾ; ಘಂಟೆ, ಕಂಭ.

(21) ಪದಾದಿಯಾದ ಎಕಾರ ಒಕಾರಗಳನ್ನು 'ಯೆ' 'ವೊ' ಎಂದು ಬರೆಯಕೂಡದು.

(22) ಕಿವಿಗಿಂಪಾಗಿರುವುದರಿಂದ ಪದ ಮಧ್ಯದಲ್ಲಿರುವ ಹ್ರಸ್ವಸ್ವರಗಳಲ್ಲಿ ಎರಡನೇ ಸ್ವರವು ಮೊದಲಿನಂತಿರಬಹುದು. ಉದಾ; ಹುಡುಗ, ಹಡಗು ಮಿಗಿಲು, ದುಮುಕು, ಮುಸುಕು, ಇತ್ಯಾದಿ.

ಪ್ರತಿಷೇಧ:—ಎರಡನೇ ಸ್ವರವು ಧಾತುವಿನಲ್ಲಿಯೇ ಇದ್ದರೆ ಮೇಲೆ ಹೇಳಿದ ವಿಧಿಯನ್ನು ಅನುಸರಿಸಕೂಡದು. 'ಎ' ಎಂಬುದು ಧಾತುವಿನದಾದ್ದರಿಂದ 'ಕರೆದು' ಎಂಬುದಾಗಿಯೇ ಬರೆಯಬೇಕೇಹೊರತು 'ಕರದು' ಎಂದು

ಬರೆಯಕೂಡದು. ಇಕಾರವು ಪ್ರೇರಣಾರ್ಥ ಸೂಚಕವಾದ ಪ್ರತ್ಯಯದಲ್ಲಿರುವದಾದ್ದರಿಂದ 'ನಗಿಸು' ಎಂಬದಾಗಿಯೇ ಹೊರತು 'ನಗಸು' ಎಂದಲ್ಲ.

(23) ಪದಾಂತದಲ್ಲಿ ಅರ್ಧಾಕ್ಷರ ವಿರತಕ್ಕದ್ದು ಹೊಸಗನ್ನಡದ ರೀತಿಗೆ ಅನುಗುಣವಾಗಿಲ್ಲ. 'ಮೈ' ಎಂದು 'ಮೆಯ್' ಎಂದಲ್ಲ.

(24) ಕೆಲವು ಮಾತುಗಳಲ್ಲಿ ಳ ಕಾರಕ್ಕೆ ಬದಲಾಗಿ ಣ ಕಾರವೂ ಲ ಕಾರಕ್ಕೆ ಬದಲಾಗಿ ನ ಕಾರವು ಬಂದಿವೆ. ಇದು ಪ್ರಯೋಗದಲ್ಲಿ ಬಂದಿವೆ. ಉದಾ;ಅಗುಳಿ, ಅಗುಣಿ; ಆಲಿಗಲ್ಲು, ಆನಿಗಲ್ಲು; ಗಿಳಿ, ಗಿಣಿ; ನೊಳ, ಕೊಣ, ಮುಳುಗು, ಮುಣುಗು; ಹುಳಸೆ, ಹುಣಸೆ.

(25) ಗದ್ಯವನ್ನು ಬರೆಯುವೊವರಲ್ಲಿ ಸಂಧಿಯನ್ನು ಪಯೋಗಿಸುವುದು ಇಚ್ಛಿಕ.

(26) 'ಅದೆ' 'ಇದೆ' ಎಂಬೆರಡು ರೂಪಗಳಲ್ಲಿ 'ಇದೆ' ಎಂಬುದನ್ನು ಪ್ರಯೋಗಿಸುವುದು ಉತ್ತಮಪಕ್ಷ; 'ಉತ' 'ಉತ್ತ', ಎಂಬೆರಡು ರೂಪಗಳಲ್ಲಿ 'ಉತ್ತ' ಎಂಬುದನ್ನು ಪ್ರಯೋಗಿಸುವುದು ಉತ್ತಮಪಕ್ಷ.

(27) 'ಊಟಮಾಡು' 'ಊಟಮಾಡು' ಎಂಬೆರಡು ರೂಪಗಳಲ್ಲಿ ಎರಡನೆಯದೇ ಪ್ರಯೋಗಕ್ಕನುಗುಣವಾದ ರೂಪ.

ತಮಗೆ ಅತ್ಯಂತ ವಿಧೆಯರಾದ,—

ಎಂ. ಕಾಮರಾವ್, ಎಂ. ಎ.

ಆರ್. ರಘುನಾಥರಾವ್, ಬಿ. ಎ.

ಎಸ್. ಶ್ರೀನಿವಾಸರಾವ್, ಬಿ. ಎ.

ಎಮ್. ಬಿ. ಶ್ರೀನಿವಾಸಯ್ಯಂಗಾರ್, ಬಿ. ಎ.

ಎಮ್. ಎಸ್. ಪುಟ್ಟಣ್ಣ, ಬಿ ಎ.

ಬಿ. ಮಲ್ಲಪ್ಪ.

ವಿದ್ಯಾಭ್ಯಾಸ.

ನಮ್ಮ ಜೀವಮಾನವೆಲ್ಲವೂ ವಿದ್ಯಾಭ್ಯಾಸವೇ. ನಾವು ಯಾವಾಗಲೂ ಎಲ್ಲೆಲ್ಲಿಯೂ ಕಲಿಯುತಲೇ ಇರುವೆವು. ವಿದ್ಯಾ ವ್ಯಾಸಂಗದಲ್ಲಿ ಮುಖ್ಯವಾಗಿ (೧) ಪ್ರತ್ಯಕ್ಷ (೨) ಪರೋಕ್ಷ ಎಂಬ ಎರಡುಭಾಗಗಳುಂಟು. ಮನೆಯಲ್ಲಿಯೂ, ಸ್ನೇಹಿತಮಂಡಲಿಯಲ್ಲಿಯೂ, ವಿಧವಿಧವಾದ ಪುಸ್ತಕಗಳಿಂದಲೂ, ಕಲಿಯುವದಕ್ಕೆ ಪರೋಕ್ಷವಿದ್ಯವೆನ್ನುವರು. ಇದು ಉದ್ದೇಶರಹಿತವಾದದ್ದು. ಆದ್ದರಿಂದಲೇ ಕೆಲವುವೇಳೆ ಇದು ಕೆಡಕುಸಹ ಮಾಡುವುದು. ಉಪಾಧ್ಯಾಯನು ಇದನ್ನು ಕ್ರಮಗೊಳಿಸಬೇಕು.

ಗೊತ್ತಾದ ಉದ್ದೇಶದಿಂದಲೂ, ಕ್ರಮವಾದ ಮಾರ್ಗದಿಂದಲೂ ಬಾಲ್ಯಾರಭ್ಯ ಕಲಿಸುವದೇ ಪ್ರತ್ಯಕ್ಷ ವಿದ್ಯೆಯನ್ನಿಸುವುದು. ಬಾಲ್ಯದಲ್ಲಿ ತಂದೆತಾಯಿಗಳಿಂದಲೂ, ಉಪಾಧ್ಯಾಯರಿಂದಲೂ, ದೊಡ್ಡವನಾದಮೇಲೆ ಸ್ವಂತಸಹಾಯದಿಂದಲೇ ಈ ಶಿಕ್ಷಣವನ್ನು ಮನುಷ್ಯನು ಹೊಂದುವನು. ಪ್ರತ್ಯಕ್ಷ ವಿದ್ಯವನ್ನೇ ನಾವು ವಿಚಾರಿಸತಕ್ಕದ್ದು.

ಇದರಲ್ಲಿ ಮೂರುವಿಧವು.

(೧) ಮಾನಸಿಕ (೨) ಶಾರೀರಕ (೩) ನೀತಿವಿಷಯ.

ಬಾಲಕರಿಗೆ ಮೇಲೆ ಹೇಳಿದ ಮೂರುಭಾಗಗಳಲ್ಲಿಯೂತಕ್ಕಂತೆ ವ್ಯಾಸಂಗ ಮಾಡಿಸಬೇಕು.

ಪಾಠಶಾಲೆಯಲ್ಲಿನ ವಿದ್ಯಾವ್ಯಾಸಂಗವು ಪೂರೈಸಿದನಂತರ ಹುಡುಗರು ಸುಪ್ರಕಾಯರು, ನೀತಿವಂತರು ಮತ್ತು ಬುದ್ಧಿವಂತರಾಗಿಯೂ ಇರಬೇಕು. ಹೀಗಿದ್ದಲ್ಲಿ ಆ ಪಾಠಶಾಲೆಯಲ್ಲಿನ ವಿದ್ಯಾವ್ಯಾಸಂಗವು ಉತ್ತಮವಾದುದೆಂದು ತಿಳಿಯಬಹುದು.

ಶಾರೀರಕ ಶಿಕ್ಷಕ.

ಮನಸ್ಸಿಗೂ ಶರೀರಕ್ಕೂ ವಿಶೇಷವಾದ ಸಂಬಂಧ ಉಂಟು. ಯಾವ ಮನೋವ್ಯಾಪಾರವು ಶರೀರಸಂಬಂಧವಿಲ್ಲದೇ ನಡೆಯುವದಿಲ್ಲ! ತಿಳುವಿನ

ಬರೆಯಕೂಡದು. ಇಕಾರವು ಪ್ರೇರಣಾರ್ಥ ಸೂಚಕವಾದ ಪ್ರತ್ಯಯದ ಲ್ಲಿರುವದಾವ್ದರಿಂದ 'ನಗಿಸು' ಎಂಬದಾಗಿಯೇ ಹೊರತು 'ನಗಸು' ಎಂದಲ್ಲ.

(23) ಪದಾಂತದಲ್ಲಿ ಅರ್ಧಾಕ್ಷರ ವಿರತಕ್ಕದ್ದು ಹೊಸಗನ್ನಡದ ರೀತಿಗೆ ಅನುಗುಣವಾಗಿಲ್ಲ. 'ಮೈ' ಎಂದು 'ಮೆಯ್' ಎಂದಲ್ಲ.

(24) ಕೆಲವು ಮಾತುಗಳಲ್ಲಿ ಳ ಕಾರಕ್ಕೆ ಬದಲಾಗಿ ಣ ಕಾರವೂ ಲ ಕಾರಕ್ಕೆ ಬದಲಾಗಿ ನ ಕಾರವು ಬಂದಿವೆ. ಇದು ಪ್ರಯೋಗದಲ್ಲಿ ಬಂದಿವೆ. ಉದಾ;ಅಗುಳಿ, ಅಗುಣಿ; ಆಲಿಗಲ್ಲು, ಆನಿಗಲ್ಲು; ಗಿಳಿ, ಗಿಣಿ; ನೊಳ, ನೊಣ, ಮುಳುಗು, ಮುಣುಗು; ಹುಳಸೆ, ಹುಣಸೆ.

(25) ಗದ್ಯವನ್ನು ಬರೆಯುವೂವರಲ್ಲಿ ಸಂಧಿಯನ್ನು ಪಯೋಗಿಸುವುದು ಐಚ್ಛಿಕ.

(26) 'ಅದೆ' 'ಇದೆ' ಎಂಬೆರಡು ರೂಪಗಳಲ್ಲಿ 'ಇದೆ' ಎಂಬುದನ್ನು ಪ್ರದೋಗಿಸುವುದು ಉತ್ತಮಪಕ್ಷ; 'ಉತ' 'ಉತ್ತ', ಎಂಬೆರಡು ರೂಪಗಳಲ್ಲಿ 'ಉತ್ತ' ಎಂಬುದನ್ನು ಪ್ರಯೋಗಿಸುವುದು ಉತ್ತಮಪಕ್ಷ.

(27) 'ಊಟವಮಾಡು' 'ಊಟಮಾಡು' ಎಂಬೆರಡು ರೂಪಗಳಲ್ಲಿ ಎರಡನೆಯದೇ ಪ್ರಯೋಗಕ್ಕನುಗುಣವಾದ ರೂಪ.

ತಮಗೆ ಅತ್ಯಂತ ವಿಧೆಯರಾದ,—

ಎಂ. ಶಾಮರಾವ್, ಎಂ. ಎ.

ಆರ್. ರಘುನಾಥರಾವ್, ಬಿ. ಎ.

ಎಸ್. ಶ್ರೀನಿವಾಸರಾವ್, ಬಿ. ಎ.

ಎಮ್. ಬಿ. ಶ್ರೀನಿವಾಸಯ್ಯಂಗಾರ್, ಬಿ. ಎ.

ಎಮ್. ಎಸ್. ಪುಟ್ಟಣ್ಣ, ಬಿ. ಎ.

ಬಿ. ಮಲ್ಲಪ್ಪ.

ವಿದ್ಯಾಭ್ಯಾಸ.

ನಮ್ಮ ಜೀವಮಾನವೆಲ್ಲವೂ ವಿದ್ಯಾಭ್ಯಾಸವೇ. ನಾವು ಯಾವಾಗಲೂ ಎಲ್ಲೆಲ್ಲಿಯೂ ಕಲಿಯುತಲೇ ಇರುವೆವು. ವಿದ್ಯಾ ವ್ಯಾಸಂಗದಲ್ಲಿ ಮುಖ್ಯವಾಗಿ (೧) ಪ್ರತ್ಯಕ್ಷ (೨) ಪರೋಕ್ಷ ಎಂಬ ಎರಡುಭಾಗಗಳುಂಟು. ಮನೆಯಲ್ಲಿಯೂ, ಸ್ನೇಹಿತಮಂಡಲಿಯಲ್ಲಿಯೂ, ವಿಧವಿಧವಾದ ಪುಸ್ತಕಗಳಿಂದಲೂ, ಕಲಿಯುವುದಕ್ಕೆ ಪರೋಕ್ಷವಿದ್ಯವೆನ್ನುವರು. ಇದು ಉದ್ದೇಶದಿಂತವಾದದ್ದು. ಆದ್ದರಿಂದಲೇ ಕೆಲವುವೇಳೆ ಇದು ಕೆಡಕುಂಟುಮಾಡುವುದು. ಉಪಾಧ್ಯಾಯನು ಇವನ್ನು ಕ್ರಮಗೊಳಿಸಬೇಕು.

ಗೊತ್ತಾದ ಉದ್ದೇಶದಿಂದಲೂ, ಕ್ರಮವಾದ ಮಾರ್ಗದಿಂದಲೂ ಬಾಲ್ಯಾರಭ್ಯ ಕಲಿಸುವದೇ ಪ್ರತ್ಯಕ್ಷ ವಿದ್ಯೆಯನ್ನಿಸುವುದು. ಬಾಲ್ಯದಲ್ಲಿ ತಂದೆತಾಯಿಗಳಿಂದಲೂ, ಉಪಾಧ್ಯಾಯರಿಂದಲೂ, ದೊಡ್ಡವನಾದಮೇಲೆ ಸ್ವಂತಸಹಾಯದಿಂದಲೇ ಈ ಶಿಕ್ಷಣವನ್ನು ಮನುಷ್ಯನು ಹೊಂದುವನು. ಪ್ರತ್ಯಕ್ಷ ವಿದ್ಯವನ್ನೇ ನಾವು ವಿಚಾರಿಸತಕ್ಕದ್ದು.

ಇದರಲ್ಲಿ ಮೂರುವಿಧವು.

(೧) ಮಾನಸಿಕ (೨) ಶಾರೀರಕ (೩) ನೀತಿಮಾರ್ಗ.

ಬಾಲಕರಿಗೆ ಮೇಲೆ ಹೇಳಿದ ಮೂರುಭಾಗಗಳಲ್ಲಿಯೂತಕ್ಕಂತೆ ವ್ಯಾಸಂಗ ಮಾಡಿಸಬೇಕು.

ಪಾಠಶಾಲೆಯಲ್ಲಿನ ವಿದ್ಯಾವ್ಯಾಸಂಗವು ಪೂರೈಸಿದನಂತರ ಹುಡುಗರು ಪುಷ್ಟಕಾಯರು, ನೀತಿವಂತರು ಮತ್ತು ಬುದ್ಧಿವಂತರಾಗಿಯೂ ಇರಬೇಕು. ಹೀಗಿದ್ದಲ್ಲಿ ಆ ಪಾಠಶಾಲೆಯಲ್ಲಿನ ವಿದ್ಯಾವ್ಯಾಸಂಗವು ಉತ್ತಮವಾದುದೆಂದು ತಿಳಿಯಬಹುದು.

ಶಾರೀರಕ ಶಿಕ್ಷಕ.

ಮನಸ್ಸಿಗೂ ಶರೀರಕ್ಕೂ ವಿಶೇಷವಾದ ಸಂಬಂಧ ಉಂಟು. ಮನೋವ್ಯಾಪಾರವು ಶರೀರಸಂಬಂಧವಿಲ್ಲದೇ ನಡೆಯುವದಿಲ್ಲ. ಶರೀರ

ದೇಹಸ್ಥಿತಿಯು ಅದರ ಬುದ್ಧಿಕೌಶಲ್ಯವನ್ನು, ನೀತಿಮಾರ್ಗವನ್ನು ನಿರ್ಧರಿಸುವುದು. ಬುದ್ಧಿಕುಶಲತೆಗೂ, ನೀತಿಮಾರ್ಗಕ್ಕೂ ದೇಹದಾರ್ಢ್ಯವು ಅತ್ಯವಶ್ಯವಾದದ್ದು. ಆದಕಾರಣ ಉಪಾಧ್ಯಾಯನು ಬಾಲಕರಿಗೆ ಅವಶ್ಯವಾದ ಅಂಗಸಾಧನೆಗಳನ್ನು ಮಾಡಿಸುವುದಲ್ಲದೆ ಶಾಲಾಗೃಹದಲ್ಲಿ ಅನುಕೂಲವಾದ ಬೆಳಕು, ಗಾಳಿ, ಶೀತೋಷ್ಣ ಮುಂತಾದವುಗಳು ತಕ್ಕಷ್ಟು ಇರುವಂತೆ ಏರ್ಪಡಿಸುವುದು. ಇದೂ ಅಲ್ಲದೆ ನಮ್ಮ ಮಾನಸಿಕ ವ್ಯವಸಾಯದಲ್ಲಿ ಮೆದುಳೇ ಮುಖ್ಯವಾದ ಅವಯವವಾಗಿರುವದರಿಂದ, ಅದರ ಪೋಷಣೆಯು ಅತ್ಯವಶ್ಯವಾದದ್ದು. ಮೆದುಳಿನ ದುರ್ವ್ಯವಸಾಯದಿಂದಲೂ, ದುರ್ಮಾರ್ಗ ಪ್ರವರ್ತನೆಯಿಂದಲೂ, ಆ ಅವಯವದ ಅಭಿವೃದ್ಧಿಯು ಕಮ್ಮಿಯಾಗುವುದು. ಇವನ್ನು ವಿಚಾರಮಾಡುವಲ್ಲಿ ಉಪಾಧ್ಯಾಯನು ಅಂಗಸಾಧನೆಗಳಿಗೆ ತಕ್ಕ ಅನುಕೂಲಗಳನ್ನು ಮಾಡಿಕೊಡುವುದು ಅವಶ್ಯವೆಂದು ವ್ಯಕ್ತವಾಗುವುದು. ಇಂಥಾ ಅಂಗಸಾಧನೆಗಳನ್ನು ಕೊಡಲು ಉಪಾಧ್ಯಾಯನಿಗೆ ವಿಶೇಷವಾಗಿ ಅವಕಾಶ ಉಂಟು. ಹುಡುಗರು ಕವಾಯತ್ತು ಮಾಡೋಣದರಿಂದಲೂ, ಅನೇಕವಿಧವಾದ ಆಟಗಳನ್ನಾಡೋಣದರಿಂದಲೂ ಅಂಗಸಾಧನೆಯನ್ನು ಪೊಂದುವರು. ಇವೂಅಲ್ಲದೆ ಪಾಠಶಾಲೆಯ ಕಾಲದಲ್ಲಿಯೂ ಬೇರೆ ಬೇರೆ ಪಾಠಗಳಿಂದ ಬೇರೆ ಬೇರೆ ಅಂಗಗಳಿಗೆ ಸಾಧನೆಯಾಗುವುದು. ಉದಾ;—ಓದುವುದು, ಹಾಡುವುದು, ವಸ್ತುಪಾಠ, ಕಿಂಡರ್‌ಗಾರ್ಟನ್. ಆದರೆ ಮೈದಾನದಲ್ಲಿ ಬಾಲಕರು ಮಾಡುವ ಸಾಧನೆಯೇ ಮುಖ್ಯವಾಗಿ ಅವರ ಶಕ್ತಿಯನ್ನು ಚಟುವಟಿಕೆಯನ್ನು ಹೆಚ್ಚಿಸುವುದು.

ಶರೀರಸಾಧನೆಯ ಉಪಯೋಗಗಳು.

(೧) ವ್ಯಾಂಸಪೋಷಿಗಳಿಗೆ ಮಿತವು ಉಂಟಾಗುವುದು.

(೨) ಸುಸೂತ್ರವಾಗಿ ರಕ್ತಚಲನೆಯಾಗುವುದು.

(೩) ಕೂಗಾಟದಲ್ಲಿಯೂ, ಚೇಷ್ಟೆಯಲ್ಲಿಯೂ ಪರಿಣಮಿಸುವ ಬಾಲಕರ ಸ್ವಾಭಾವಿಕ ಚಟುವಟಿಕೆಗೆ ತಕ್ಕ ಉದ್ಯೋಗವಾಗುವುದು.

(೪) ಉಪಾಧ್ಯಾಯಬಾಲಕರಿಗೂ, ಬಾಲಕಬಾಲಕರಿಗೂ ಪರಸ್ಪರ ಅನುರಾಗವು ಹೆಚ್ಚುವುದು.

(೫) ಆಜ್ಞೆಗೆ ಅನುಸಾರವಾಗಿ ನಡೆಯುವ ವಿಧೇಯತ್ವವು ಹುಟ್ಟುವುದು.

ಮೇಲೆ ಹೇಳಿದ ಉಪಯೋಗಗಳು ದೊರೆಯಬೇಕಾದರೆ ಅಂಗಸಾಧನೆಗಳು——(೧) ಉಚ್ಛ್ವಾಸ, ನಿಶ್ವಾಸಗಳನ್ನು ಹೆಚ್ಚಿಸುವವುಗಳಾಗಿರಬೇಕು. (ಶ್ವಾಸಕೋಶಕ್ಕೆ ಸಾಧನೆಯಾಗಬೇಕು.)

(೨) ಬಾಲಕರ ಶಕ್ತ್ಯಾನುಸಾರವಾಗಿರಬೇಕು.

(೩) ನಿರ್ಬಂಧವಾಗಿರಕೂಡದು.

(೪) ಸಾಧನೆಗಳು ವಿಧವಿಧಗಳಾಗಿರಬೇಕಲ್ಲದೆ ಏಕಾಕಿಯಾಗಿರಕೂಡದು. ಇಲ್ಲದಿದ್ದರೆ, ಬೇರೆ ಬೇರೆ ಮಾಂಸಖಂಡಗಳಿಗೆ ಸಾಧನೆಯು ಆಗುವುದಿಲ್ಲ. ಜಿಗುಪ್ಸೆಯೂ ಹುಟ್ಟುವುದು.

ಡಿ. ವೆಂಕಟರಾಮಯ್ಯ, ಬಿ. ಎ.

ಕಪಟ (ಬಾವಲಿ).

ನಿವಾಸಸ್ಥಾನ.

ಕಪಟಗಳು ಉಷ್ಣಪ್ರದೇಶಗಳಲ್ಲಿ ಬಹಳವಾಗಿ ಸಿಕ್ಕುವವು. ಸಮಶೀತೋಷ್ಣವಲಯಗಳಲ್ಲಿಯೂ ಇರುವವುಂಟು. ಬ್ರಿಟಿಷ್ ದ್ವೀಪಗಳಲ್ಲಿಯೇ ಸುಮಾರು ಇಪ್ಪತ್ತು ವಿಧ ಕಪಟಗಳಿವೆ. "ವಾಂಪೈರ್" ಎಂಬ ಕಪಟವು ದಕ್ಷಿಣ ಅಮೆರಿಕಾ ಖಂಡದಲ್ಲಿಯೂ, ಪಶ್ಚಿಮದ್ವೀಪಸ್ತೋಮದಲ್ಲಿಯೂ, ಜಾವಾದ್ವೀಪದಲ್ಲಿಯೂ, ಸಿಕ್ಕುತ್ತದೆ. ಪೂರ್ವದ್ವೀಪಸ್ತೋಮದಲ್ಲಿ ಹಣ್ಣು ಮುಂತಾದವುಗಳನ್ನು ತಿನ್ನುವ "ಕೆಲಾಂಗ್" ಅಥವ "ಫ್ಲೈಯಿಂಗ್‌ಫಾಕ್ಸ್" ಎಂಬ ಕಪಟವು ಇದೆ.

ವರ್ಣನೆ.

ಕಪಟವು ಅನೇಕ ವಿಷಯಗಳಲ್ಲಿ ಸಸ್ತನ ಪ್ರಾಣಿಯಂತಿದ್ದಾಗ್ಯೂ ರೆಕ್ಕೆಗಳನ್ನು ಹೊಂದಿರುವದರಿಂದಲೂ, ಹಾರತಕ್ಕ ಶಕ್ತಿಯಿರುವದರಿಂದಲೂ



ಪಕ್ಷಿಯಂತೆ ಕಾಣುವದು. ಮೈ ಮೇಲೆಲ್ಲ ಬೂದು ಅಥವ ಕಂದುಬಣ್ಣದ ತುಪ್ಪಳವಿರುವದು. ಮುಂಗಾಲುಗಳ ಮೂಳೆಗಳು ಬಹಳ ಉದ್ದ. ಇದಕ್ಕೆ ರೆಕ್ಕೆಗೆ ಬದಲಾಗಿರುವ ಪರೆಗೆ ಆಶ್ರಯವಾಗುವಂತೆ ಬೆರಳಿನ ಮೂಳೆಗಳು ಅತಿ ಉದ್ದವಾಗಿರವವು. ಹೆಬ್ಬೆರಳಿನ ಮೂಳೆಯು ಪರೆಗೆ ಸೇರಿಲ್ಲ. ಆ ಬೆರಳಿನ ಉಗುರು ಮೊನೆಯಾಗಿಯೂ ಕೊಕ್ಕೆಯಂತೆಯೂ ಇರುವದು. ಮಧ್ಯದ ಬೆರಳಿನ ಮೂಳೆಯು, ತಲೆ, ಮೈಗಿಂತ ಬಹಳ ಉದ್ದವಾಗಿದೆ. ಹಿಂಗಾಲುಗಳು ಸಣ್ಣ ಮತ್ತು ಅವುಗಳಲ್ಲಿ ಮೊನೆಯಾದ ಉಗುರುಗಳಿವೆ.

ಮುಂಗೈ ಮೂಳೆಗಳ ರಚನೆಯು ಮನುಷ್ಯಜಾತಿಗಿರುವಂತಿರುವದು. ಪ್ರತಿಯೊಂದು ಕಾಲಿನ ಹಿಮ್ಮಡಿಯಲ್ಲಿಯೂ ಕೃಶವಾದ ಮಣ್ಣೀಜಿನಂತಿರುವ ಮೂಳೆಯು ಹೊರಟಿರುವದು. "ವಾಂಪೈರ್" ಕಪಟಕ್ಕೂ ಮಹೊತ್ತಿಂ ಸುಜಾತಿಯ ಕಪಟಕ್ಕೂ ಮೂಗಿನಮೇಲೆ ಎಲೆಯಂತಿರುವ ಮತೊಂದು ದರೆ ಇರುವದು. ಈ ಎರಡನೆಯ ಕಪಟಕ್ಕೆ ಹಣೆಯಮೇಲೆ ಎಲೆಯಂತಿರುವ ಮೂರನೆಯ ಪರೆಯು ಇರುತ್ತದೆ. ಇದರ ಕಿವಿಗಳು ದೊಡ್ಡವಾಗಿಯೂ, ಮೊನೆಯಾಗಿಯೂ ಇವೆ. ಕಿವಿಗಳ ಮೇಲೆ ಅಡ್ಡಡ್ಡವಾದ ಉಬ್ಬುಗಳಿವೆ. ಇದರ ಉದ್ದ ಸುಮಾರು ಎರಡೂವರೆ ಅಂಗುಲವಿರುತ್ತೆ. ಕಪಟಕ್ಕೆ ಕರ್ಣೇಂದ್ರಿಯವೂ, ರೆಕ್ಕೆಗಳಲ್ಲಿ ಸ್ಪರ್ಶೇಂದ್ರಿಯವೂ ಬಹಳ ಸೂಕ್ಷ್ಮವಾಗಿವೆ. ಕಣ್ಣುಗಳು ಬಹಳ ಚಿಕ್ಕವು. ಹಲ್ಲುಗಳು ಮೊನೆಯಾ

ಗಿವೆ. "ವಾಂಪೈರ್" ಕಪಟದ ಕೋರೆ ಹಲ್ಲುಗಳು ದೊಡ್ಡವು. ಬೆರಳುಗಳ ಮಧ್ಯದಲ್ಲೂ ಮತ್ತು ಬೆರಳುಗಳಿಂದ ಹಿಂಗಾಲಿನವರೆಗೂ ಇದಕ್ಕೆ ರೆಕ್ಕೆಯಾಗಿರುವ ತೆಳುವಾದ ಪರೆಯು ಇರುವದು.

ಗುಣ, ಸ್ವಭಾವ, ಆಹಾರ.

ಕಪಟವು ರಾತ್ರಿವೇಳೆಯಲ್ಲಿ ಸಂಚರಿಸುವಪ್ರಾಣಿ. ಹಗಲಿನಲ್ಲಿ ಹೊರಕ್ಕೆ ಹೊರಡುವದಿಲ್ಲ. ಶೀತಪ್ರದೇಶಗಳಲ್ಲಿರುವದು ಛಳಿಗಾಲವನ್ನೆಲ್ಲ ನಿದ್ರೆಯಲ್ಲಿ ಕಳೆಯುತ್ತದೆ. ರೆಕ್ಕೆಗಳಿಂದ ಮೈಯನ್ನು ಮುಚ್ಚಿಕೊಂಡು ತಲೆಕೆಳಗಾಗಿ ನಿದ್ರೆ ಮಾಡುತ್ತದೆ. ಮನೆಗಳ ಸೂರುಗಳಲ್ಲಿಯೂ, ಪ್ರೊಟೆಸ್ಟೆಂಟ್ರಗಳಲ್ಲಿಯೂ, ಗವಿಗಳಲ್ಲಿಯೂ ವಾಸಮಾಡುವದು. 'ವಾಂಪೈರ್' ಕಪಟವು ಮಲಗಿರುವ ಮನುಷ್ಯನಿಗೆ ಎಚ್ಚರಿಕೆಯಾಗದಂತೆ ಕಾಲಿನ ಹೆಬ್ಬೆಟ್ಟನ್ನು ಕಚ್ಚಿ, ಬಹಳವಾಗಿ ರಕ್ತವನ್ನು ಹೀರುತ್ತದೆ. ಇತರ ಕಪಟಗಳು ಹೀಗೆ ಮಾಡುವದಿಲ್ಲ. ಸುಲಭವಾಗಿ ಸಾಕಬಹುದು. ಸಾಧುವಾದಮೇಲೆ ಸಾಕಿದವನ ಕೈಯಿಂದ ಆಹಾರವನ್ನು ತೆಗೆದುಕೊಳ್ಳುತ್ತದೆ. ಕೋಪಬಂದಾಗ ಹಲ್ಲುಗಳಿಂದ ಕಡಿಯುತ್ತದೆ. ವಿಶೇಷವಾಗಿ ಕ್ರಿಮಿಕೀಟಗಳನ್ನು ತಿನ್ನುವದಾದಾಗ್ಯೂ, ಕೆಲವು ಹಣ್ಣುಗಳನ್ನೂ ಹಸಿಬಿಸಿ ಮಾಂಸವನ್ನೂ ತಿನ್ನುತ್ತವೆ. ಚೆನ್ನಾಗಿ ನಡೆಯಲಾರದು.

ಸ್ವಭಾವಕ್ಕೆ ತಕ್ಕ ಶಾರೀರರಚನೆ.

ಕಪಟಕ್ಕೆ ಶ್ರೋತ್ರೇಂದ್ರಿಯ ಮತ್ತು ಸ್ಪರ್ಶೇಂದ್ರಿಯ ಶಕ್ತಿಗಳು ಬಹಳ ಸೂಕ್ಷ್ಮವಾಗಿರುವದರಿಂದ ಅಪಾಯವನ್ನು ಸುಲಭವಾಗಿ ತಪ್ಪಿಸಿಕೊಳ್ಳುವದು. ಛಳಿಗಾಲದಲ್ಲಿ ಹುಳುಗಳು ಬಹಳವಾಗಿ ಸಿಕ್ಕದಿರುವದರಿಂದ ಆ ಕಾಲದಲ್ಲಿ ನಿದ್ರೆಹೋಗುವದು ಇದಕ್ಕೆ ಕೇವಲ ಅನುಕೂಲವಾಗಿದೆ. ಕೊಂಡಿಯಂತಿರುವ ಹೆಬ್ಬೆರಳಿನ ಉಗುರು ನೇತುಹಾಕಿಕೊಳ್ಳುವದಕ್ಕೆ ಬಹಳ ಸಹಕಾರಿಯಾಗಿದೆ. ಉಗುರುಗಳು ಮೊನೆಯಾಗಿರುವದರಿಂದ ನೆಟ್ಟಗಿರುವ ಸ್ಥಳಗಳನ್ನು ಸುಲಭವಾಗಿ ಹತ್ತಬಲ್ಲದು. ತಲೆಕೆಳಗಾಗಿ ಹಿಂಗಾಲಿನ ಉಗುರುಗಳಿಂದ ನೇತುಹಾಕಿಕೊಳ್ಳುವದು ರೆಕ್ಕೆಗಳನ್ನು ತಟ್ಟನೆ ಹರಡಿಕೊಂಡು ಹಾರುವದಕ್ಕೆ ಅನುಕೂಲವಾಗಿದೆ.

ಹಿಡಿಯುವಕ್ರಮ.

ಹಗಲುಹೊತ್ತಿನಲ್ಲಿ ಇದಕ್ಕೆ ಕಣ್ಣು ಕಾಣಿಸದಿರುವದರಿಂದ, ಇದಿರುವ ಸ್ಥಳವನ್ನು ಗೊತ್ತುಮಾಡಿಕೊಂಡು ಹೋಗಿ ಹಿಡಿಯುತ್ತಾರೆ. ಇದನ್ನು ಜನರು ಸಾಕುವದಕ್ಕೆ ವಿಶೇಷವಾಗಿ ಅಪೇಕ್ಷಿಸದಿರುವದರಿಂದ ಹಿಡಿಯುವದು ಬಹಳ ವಾಡಿಕೆಯಾಗಿಲ್ಲ.

ಉಪಯೋಗ.

ಈ ಪ್ರಾಣಿಯು ಇಲ್ಲದಿದ್ದರೆ, ಕ್ರಿಮಿಕೀಟಗಳು ಬಹಳ ಹೆಚ್ಚಾಗಿ ಇತರಪ್ರಾಣಿಗಳಿಗೂ, ಸಸ್ಯಾದಿಗಳಿಗೂ ಬಹಳ ಕಷ್ಟವಾಗುತಿತ್ತು. ದಕ್ಷಿಣ ಅಮೆರಿಕಾಜನರು ಕೊಬ್ಬಿದ "ವಾಂಪ್ಯೈರ್" ಕಪಟವನ್ನು ತಿನ್ನುವರು. ಹಣ್ಣು ತಿನ್ನುವ ಕಪಟಗಳನ್ನು, ಅವಿರುವ ದ್ವೀಪದ ಜನರು ಆಹಾರವಾಗಿ ಉಪಯೋಗಿಸುತ್ತಾರೆ. ಇದರ ಮಾಂಸವು ಗಿಜಲಕ್ಕಿಯದರಂತೆ ಇರುತ್ತದೆ. ಕಾಡು ಜನರು ತಮ್ಮ ದೊಣ್ಣೆಗಳನ್ನು ಶೃಂಗರಿಸುವದಕ್ಕೆ ಇದರ ತುಪ್ಪಳಗಳನ್ನು ಉಪಯೋಗಿಸುತ್ತಾರೆ.

ಏ. ರಾಘವೇಂದ್ರರಾವ್, ಬಿ. ಎ., ಬಿ. ಎಲ್.

ಗಣಿತವಿವರಣೆ.

$$3-2\frac{1}{7} = 3-\frac{15}{7} = \frac{21-15}{7} = \frac{6}{7}$$

$$1 \div \frac{6}{7} = \frac{7}{6}$$

$$2-\frac{7}{6} = \frac{12-7}{6} = \frac{5}{6}$$

$$2 \div \frac{5}{6} = \frac{2\times 6}{5} = \frac{12}{5}$$

$$3-\frac{12}{5} = \frac{15-12}{5} = \frac{3}{5}$$

$$1+\frac{3}{5} = \frac{5}{5};$$

$1\frac{1}{11} - \frac{1}{3} = \frac{12}{11} - \frac{1}{3} = \frac{36-11}{33} = \frac{25}{33}$

$\frac{4}{25} \times \frac{25}{33} = \frac{4}{33}$

$\frac{1}{3} + \frac{4}{33} = \frac{11+4}{33} = \frac{15}{33} = \frac{5}{11}$,

$\frac{7}{88} \div 1\frac{3}{8} = \frac{7}{88} \times \frac{8}{11} = \frac{7}{121}$

$\frac{40}{121} - \frac{7}{121} = \frac{40-7}{121} = \frac{33}{121}$,

$\frac{5}{11} \div \frac{33}{121} = \frac{5 \times 121}{11 \times 33} = \frac{5}{3}$;

$\frac{5}{3} \div \frac{5}{3} = \frac{5 \times 3}{3 \times 5} =$ **1. ಉತ್ತರ.**

ಎಸ್. ಶ್ರೀನಿವಾಸಮೂರ್ತಿರಾವ್,
ಗೌರ್ನ್‌ಮೆಂಟ್ ಕನ್ನಡಸ್ಕೂಲ್ ಚನ್ನರಾಯಪಟ್ಟಣ

II. 1 ಪೌಂಡ್, 1 ಷಿ, 1 ಪೆ.

= 240 ಪೆ + 12 ಪೆ + 1 ಪೆ = 253 ಪೆನ್ನಿಗಳು

12 ಪೌಂಡ್, 3 ಷಿ, 8 ಪೆ.

= 2880 ಪೆ + 36 ಪೆ + 8 ಪೆ = 2924 ಪೆನ್ನಿಗಳು.

∴ 253 ಪೆನ್ನಿಗಳನ್ನು 2924 ಪೆನ್ನಿಗಳ ದಶಮಾಂಶದಲ್ಲಿ
ಬರಿಯಬೇಕು.

$\frac{253}{2924} =$ ·0865253 ... ... ಉತ್ತರ.

III. 18 ದಿನದಲ್ಲಿ ಒಂದು ಕೆಲಸವನ್ನು 209 ಮಂದಿ ಮಾಡುತ್ತಾರೆ.

∴ 1 ದಿನದಲ್ಲಿ ... ... 209 × 18

57 ದಿನ $\frac{209 \times 18}{57} = 66$ ಜನ ಉತ್ತರ.

IV. ಮೊದಲನೆಯವನಿಗೆ ·125 ಭಾಗ ಅಥವಾ ಒಟ್ಟು ಹಣದ $\frac{1}{8}$
ಮಿಕ್ಕದ್ದು $\frac{7}{8}$ ಭಾಗ.

ಎರಡನೆಯವನಿಗೆ $\frac{7}{8} \times \frac{3}{7} = \frac{3}{8}$ ಭಾಗ.

ಮಿಕ್ಕದ್ದು $\frac{7}{8} - \frac{3}{8} = \frac{1}{2}$

ಮೂರನೆಯವನಿಗೆ $\frac{1}{2} \times \frac{8}{10} = \frac{2}{5}$ ಭಾಗ.

ಮಿಕ್ಕದ್ದು $\frac{1}{2} - \frac{2}{5} = \frac{1}{10}$ ಭಾಗ.

ಬಟ್ಟು ಹಣವ $\frac{1}{10}$ ಭಾಗಕ್ಕೆ 2 ಪೌಂಡ್, 2 ಷಿ. ಸವುವಾಗಿದೆ.

∴ ಅವನಲ್ಲಿ ಮೊದಲಿದ್ದ ಹಣ 2 ಪೌಂಡ್ 2 ಷಿ, 0 ಪೆ × 10

= 21 ಪೌಂಡ್ ಉತ್ತರ.

V. ಗಂಡಸರು = 2 ಹೆಂಗಸರು = $2\frac{2}{3}$ ಹುಡುಗರು (ಇದು ಪ್ರಶ್ನೆಯಲ್ಲಿ ಕೊಟ್ಟಿರುವುದು.

∴ ಗಂ = $2\frac{2}{3}$ ಹು.

ಹೆಂ = $\frac{4}{3}$ ಹು.

ಹು = ಹು.

∴ 9 ಗಂ = 24 ಹು.

12 ಹೆಂ = 16 ಹು.

13 ಹು = 13 ಹು.

∴ 9 ಗಂ + 12 ಹೆಂ + 13 ಹು = 53 ಹುಡುಗರು.

53 ಹುಡುಗರಿಗೆ 159 ಹಣ್ಣು.

∴ 1 ಹುಡುಗನಿಗೆ 3 ಹಣ್ಣುಗಳು.
∴ 1 ಹೆಂಗಸಿಗೆ 4 ಹಣ್ಣುಗಳು.
∴ 1 ಗಂಡಸಿಗೆ 8 ಹಣ್ಣುಗಳು.

} ಉತ್ತರ.

ಬಿ. ಶ್ರೀನಿವಾಸಾಚಾರ್ಯರ್,
ಸಂಸ್ಕೃತ ಪಾಠಶಾಲಾ ಬಾಗೇಪಲ್ಲಿ.

ವಸ್ತುಪಾಠ.

ಕಾಗದ.

ದೂರದೇಶದಲ್ಲಿರುವ ಸ್ನೇಹಿತರ ಸಮಾಚಾರವನ್ನು ಈಗ ಹ್ಯಾಗೆ ತಿಳಿದುಕೊಳ್ಳುವೆವು?——ಸಾಧಾರಣವಾಗಿ ಕಾಗದವನ್ನು ಬರೆದು ಅಂಚೆಯ ಮೇಲೆ ಪ್ರತ್ಯುತ್ತರವನ್ನು ತರಿಸಿಕೊಳ್ಳೋಣವರಿಂದ. ಅಂಚೆಯು ಇಲಾಖೆಯು ಇಲ್ಲದೆ ಇದ್ದಾಗ ವರ್ತಮಾನವನ್ನು ಹ್ಯಾಗೆ ತರಿಸಿಕೊಳ್ಳುತಿದ್ದರು?——ಅತ್ಯವಶ್ಯಕವಾದ ಕಾಲದಲ್ಲಿ ಕಾಗದವನ್ನು ಬರೆದು ತಮ್ಮ ಕಡೆಯವರನ್ನು ಕಳುಹಿಸೋಣವರಿಂದ. ಕಾಗದವೇ ಇಲ್ಲದಿದ್ದಾಗ ಏನು ಮಾಡುತಿದ್ದರು? ಬಾಯಿ ವರ್ತಮಾನವನ್ನು ಕಳುಹಿಸುತಿದ್ದರು. ಗುಟ್ಟಾದ ವರ್ತಮಾನವನ್ನು ಒಬ್ಬ ಬಗಹ ತಿಳಿಯದವನೊಡನೆ ೧೧ ಮರದ ತೊಕ್ಕಗಳನ್ನು ತೆಗೆದುಕೊಂಡು ಅದರ ಬರಟಾದ ಗಂಟುಗಂಟುಗಳನ್ನೆಲ್ಲಾ ಕೊಚ್ಚಿ ಹಾಕಿ ನಯವಾಗಿ ಮಾಡಿಕೊಂಡು ಬರೆಯುವುದಕ್ಕೆ ಉಪಯೋಗಿಸುತಿದ್ದರು

(೨) ಓಲೆಮರದ ಗರಿಗಳನ್ನು ತೆಗೆದು ಒಣಗಿಸಿ ಕೆಲವು ದೇಶಗಳಲ್ಲಿ ಉಪಯೋಗಿಸುತಿದ್ದರು. ಈಗಲೂ ಕೆಲವು ಕಡೆ ಉಪಯೋಗಿಸುವರು. ತಾತ್ಕಾಲಿಕ ಉಪಯೋಗಕ್ಕಾಗಿ ಕೆಲವು ಗಿಡದ ಹಸಿ ಎಲೆಗಳನ್ನೇ ಉಪಯೋಗಿಸುತಿದ್ದರು.

(೩) ಈಜಿಪ್ಟ್ (Egypt) ದೇಶದಲ್ಲಿರುವ ನೈಲ್ (Nile) ನದಿಯಾದಡದ ಮೇಲೆ ಬೆಳೆಯುತಿದ್ದ (Papyrus) ಪೇಪರಸ್ ಎಂಬ ಜೊಂಡಿನ ಎಲೆಯನ್ನು ತೆಗೆದುಕೊಂಡು, ಚಾಪೆಯನ್ನು ಹೆಣೆಯುವುದಕ್ಕೆ ಹುಲ್ಲನ್ನೇ ಆಗಲಿ, ಈಚಲ ಗರಿಯನ್ನೇ ಆಗಲಿ ಹರಡಿಕೊಳ್ಳುವಂತೆ, ಕ್ರಮವಾಗಿ ಇಟ್ಟುಕೊಂಡು ಆ ನದಿಯ ನೀರನ್ನು ಚಿಮುಕಿಸಲು ಅವು ಬಂದಕ್ಕೊಂದು ಅಂಟಿಕೊಳ್ಳುತಿದ್ದವು. ತರುವಾಯ ನುಣುಪಾದ ಕಲ್ಲನ್ನು ತೆಗೆದುಕೊಂಡು ಅದನ್ನು ಮೃದುವಾಗುವಂತೆ ಉಜ್ಜಿ ತಯಾರು ಮಾಡುತಿದ್ದರು. ಈ ಜೊಂಡಿನ ಎಲೆಯನ್ನು ಉಪಯೋಗಿಸುತಿದ್ದುದರಿಂದಲೇ ಇಂಗ್ಲಿಷ್ ಭಾಷೆಯಲ್ಲಿ ಕಾಗದಕ್ಕೆ ಈಗಲೂ (Paper) ಪೇಪರ್ ಎಂಬ ಮಾತನ್ನು ಉಪಯೋಗಿಸುವರು.

(೪) ಮೃಗಗಳ ಚರ್ಮಗಳನ್ನೂ ಹದಮಾಡಿ ಬರೆಯುವುವಕ್ಕೆ ಉಪಯೋಗಿಸುತಿದ್ದರು. ಈಗಲೂ ಅದನ್ನು ಕಾಗದದಷ್ಟು ನಯವಾಗಿ ಮಾಡಿ ಉಪಯೋಗಿಸುವರು. ಸಾಧಾರಣವಾಗಿ ಆಡು, ಕುರಿ, ಮೇಕೆ ಇವುಗಳ ಚರ್ಮವನ್ನು ಸುಣ್ಣದ ತಿಳಿಯಲ್ಲಿ ನೆನೆಹಾಕಿ ಕೂದಲನ್ನೆಲ್ಲಾ ತೊಳೆದು ಬಂದು ಮರದ ಮೇಜಿನಮೇಲೆ ಹಾಕಿ ಚೆನ್ನಾಗಿ ನಯಮಾಡುವರು. ಹೀಗೆ ತಯಾರ್‌ಮಾಡಿ ಬರೆಯಲುಪಯೋಗಿಸುವ ಚರ್ಮಗಳಿಗೆ ಇಂಗ್ಲೀಷ್‌ನಲ್ಲಿ ಪಾರ್ಚ್‌ಮೆಂಟ್ (Parchment) ಎನ್ನುವರು. ಎಳೆಗರುವಿನ ಚರ್ಮದಿಂದ ತಯಾರು ಆದ ಉತ್ತಮವಾದ ಪಾರ್ಚ್‌ಮೆಂಟಿಗೆ ವೆಲಂ (Vellum) ಪಾರ್ಚ್‌ಮೆಂಟ್ ಎಂದು ಹೆಸರು.

(೫) ಮತ್ತೆ ಕೆಲವು ದೇಶಗಳಲ್ಲಿ ಮೇಜಿನಮೇಲೆ ಮೇಣವನ್ನು ಮೆಂದವಾಗಿ ಹೊಯಿಸಿದ್ದು ಒಲೆಯಮೇಲೆ ಬರೆಯಲಿಕ್ಕೆ ಉಪಯೋಗಿಸುವ ಕಂತೆಯಂತೆ ಬಂದು ಕಬ್ಬಿಣದ ಸಲಾಕೆಯಿಂದ ಅಕ್ಷರವನ್ನು ಕೆತ್ತುತಿದ್ದರು.

ತುರ್ಕೀದೇಶದ ನವಾಬರುಗಳು, ಗುಟ್ಟಾಗಿ ರಾಜಕೀಯ ವರ್ತಮಾನಗಳನ್ನು ಇತರ ರಾಜರಿಗೆ ಕಳುಹಿಸಬೇಕಾದಾಗ ತಮ್ಮ ಗುಲಾಮರಲ್ಲಿ ಅತ್ಯಂತ ನಂಬಿಕೆಯುಳ್ಳ ಒಬ್ಬನನ್ನು ಕರೆದು, ಅವನ ತಲೆಯಮೇಲೆ ಅಕ್ಷರಗಳನ್ನು ಚನ್ನಾಗಿ ಕಾದ ಗುಳದಿಂದ ಬರೆಯಿಸಿ, ತಲೆತುಂಬಾ ಕೂದಲನ್ನು ಬೆಳೆಯಿಸಿ ಕಳುಹಿಸಿಕೊಡುತಿದ್ದರು. ಇನೆನು ಆ ದೇಶವನ್ನು ತಲಪಿದೊಡನೆಯೆ ರಾಜನು ಅವನ ಕೂದಲನ್ನು ತೆಗೆಯಿಸಿ ಓದಿಕೊಂಡು ಬಡನೆಯೆ ಅವನನ್ನು ಕತ್ತರಿಸಿ ಹಾಕಿಬಿಡುತಿದ್ದನು. ಈಗ ಇಂಥಾ ಘೋರಕೃತ್ಯಗಳು ಎಂದಿಗೂ ನಡೆಯಲಾರವು. ಸಮಾಚಾರವನ್ನು ಇತರರಿಗೆ ತಿಳಿಯುವಂತೆ ಅನುಕೂಲವಾಗಿ ಈಗಿನ ಕಾಲದಲ್ಲಿ ಕಳುಹಿಸಬಹುದು.

ಬರೆಯುವ ಸಾಮಗ್ರಿಗೆ ಇಷ್ಟು ಅನಾನುಕೂಲವಾಗಿದ್ದುದರಿಂದಲೇ ಪೂರ್ವದಲ್ಲಿ ಪುಸ್ತಕಗಳು ಹೇರಳವಾಗಿರುತಿರಲಿಲ್ಲ. ಈಗ ಪುಸ್ತಕಗಳು ಅಸಂಖ್ಯಾತವಾಗಿರುವುವು. ಇವುಗಳಿಗೆ ಉಪಯೋಗಿಸುವ ಕಾಗದವನ್ನು ಯಾತರಿಂದ ತಯಾರ್ ಮಾಡುವರು?—ಚಿಂದಿಬಟ್ಟೆ, ಅನೇಕವಿಧ ಹುಲ್ಲುಗಳು ಇವುಗಳಿಂದ.

ಇವುಗಳನ್ನು ಏನುಮಾಡುವರು?——ಮೊದಲು ಚೆಂದಿಬಟ್ಟೆಗಳನ್ನು ಸಣ್ಣಸಣ್ಣ ಚೂರುಚೂರಾಗಿ ಮಾಡಿ ನೀರಿನಲ್ಲಿ ಚೆನ್ನಾಗಿ ಸೇರಿಕೊಂಡು ದಪ್ಪನಾಗಿ ಗಂಜಿಯುಹಾಗೆ ಆಗುವವರೆಗೂ ಕಾಯಿಸುವರು.

ಹೀಗೆ ಗಂಜಿಯುಹಾಗೆ ಇರುವ ಪಾಕವನ್ನು ಏನು ಮಾಡುತ್ತಾರೆ? ಕಾಗದವನ್ನು ತಯಾರ್ ಮಾಡುವುದಕ್ಕಾಗಿ ಉಪಯೋಗಿಸುವ ಯಂತ್ರದಲ್ಲಿರುವ ಬಂದು ಪಾತ್ರೆಗೆ ಹೊಯ್ಯಲು ಆ ಯಂತ್ರವು ತೆಳ್ಳಗೆ ಹರಡಿ, ಒಣಗಿಸಿ, ಬಂದೇ ಮಟ್ಟಕ್ಕೆ ತಂದು ಜಾಳಾಗಿರುವ ಕಾಗದವನ್ನು ಮಾಡುವುದು.

ಉತ್ತಮವಾದ ಕಾಗದವನ್ನು ತಯಾರು ಮಾಡುವುದಕ್ಕೆ ವಿಶೇಷವಾಗಿ ಯಾವ ಪದಾರ್ಥವನ್ನು ಉಪಯೋಗಿಸುವರು? ಸ್ಪೈನ್‌ದೇಶದಲ್ಲಿ ಬೆಳೆಯುವ ಬಂದುವಿಧವಾದ ಹುಲ್ಲನ್ನು.

ಚೀನಾದೇಶದಲ್ಲಿ ಉಪಯೋಗಿಸುವ ಕಾಗದವನ್ನು ಯಾತರಿಂದ ತಯಾರು ಮಾಡುವರು? ಅದನ್ನು ಭತ್ತದ ಹುಲ್ಲಿನಲ್ಲಿರತಕ್ಕ ದಿಂಡಿನಿಂದ.

ಕತ್ತ ಕಾಗದವನ್ನು ಯಾತರಿಂದ ಮಾಡುವರು? ಗೋಣಿಯು ಪಟ್ಟಿಯೇ ಮೊದಲಾದ ಬರಟಾದ ನಾರುಗಳಿಂದ.

ಕಾಗದದ ರಟ್ಟುಗಳನ್ನು ಹ್ಯಾಗೆ ಮಾಡುತ್ತಾರೆ? ತೆಳ್ಳಗಿರುವ ಕಾಗದಗಳನ್ನು ಬಂದೊಂದಕ್ಕೆ ಅಂಟಿಸಿ, * ಯಂತ್ರದಲ್ಲಿಟ್ಟು ಚೆನ್ನಾಗಿ ಬಾಕ್ಕುವುದರಿಂದ.

ಕಣ್ಣಾಮುಚ್ಚಿ.

ರಾಗ—ಶಹನೆ. ರೂಪಕತಾಳ.

ಬನ್ನಿರೆ ಬನ್ನಿರೆ । ಕನ್ನೆಯರೆಲ್ಲರು ।
ಕಣ್ಣಾಮುಚ್ಚಿಯನಾಡ । ಲಿನ್ನೆಲ್ಲ ಹೋಗೊಣ ॥ ೧ ॥
ಮೋಟಿಯೊಳೇನಮ್ಮ । ಪಾಠವಕಲಿತೆವು ॥
ಆಟವನಾಡಲು । ಸಾಟಿಗಾತಿಯರೀಗ ॥ ೨ ॥
ರಂಗಮ್ಮನಾನಜ್ಜಿ । ಬಂಗಾರನೀನಾಗು ॥
ಶಿಂಗಮ್ಮ ಮಾಣಿಕ । ತುಂಗಮ್ಮ ಹವಳವು ॥ ೩ ॥

ಚಲ್ಲಮ್ಮ ಬೆಳ್ಳಿಯು । ಮುಲ್ಲಕ್ಕನೇಮುತ್ತು ॥
ಕಲ್ಲುಶಾರದೆಬಾಯಿ । ಹುಲ್ಲಿ ನೀನಾಗಮ್ಮ ॥ ೪ ॥
ಅಜ್ಜಮ್ಮ ನಿನಗೀಗ । ಬಜ್ಜರವುಬೇಕೋ ॥
ಬೆಜ್ಜಹವಳಬೇಕೋ । ಗುಜ್ಜುಮುತುಬೇಕೋ ॥ ೫ ॥
ಮಕ್ಕಳೆನನಗೀಗ । ಚಿಕ್ಕವಜ್ರವುಬೇಕು ॥
ದಿಕ್ಕುದಿಕ್ಕುಗಳೊಳು । ಹೊಕ್ಕೊಳ್ಳಿರೆಬೇಗ ॥ ೬ ॥
ಹುಡುಕುವೆನಿಮೊ ನಾನು । ಹುಡಿಗಿಯರೆಲ್ಲರು ॥
ತಡವುಮಾಡದಿಬೇಗ । ಅಡಗಿಕೊಳ್ಳಿರೆ ನೀವು ॥ ೭ ॥
ಸಿಕ್ಕಿತುವಜ್ರವು । ಗಕ್ಕದಿನಗೀಗ ॥
ಸಿಕ್ಕಿದಂತೇತಕೆ । ಅಕ್ಕಮ್ಮಪಾರುವೆ ॥ ೮ ॥
ನನ್ನಾಟಗೆದ್ದಿತು । ಚನ್ನಮ್ಮನೀನಿನ್ನು ॥
ಕಣ್ಣಮುಚ್ಚಬೇಕು । ನಿನ್ನಾಣವುಸಾಕು ॥ ೯ ॥

ಪೋಟಗಾನಹಳ್ಳಿ ರಾಮುಶೇಷಶಾಸ್ತ್ರಿಗಳು.

ಇವರಲ್ಲಿರುವ ಮುತ್ತು ವಜ್ರ ಮೊದಲಾದ ಹೆಸರುಗಳನ್ನು ಕೂಯಮಾಟದಲ್ಲಿ ಹೆಣ್ಣು ಹುಡಿಗಿಯರು ಇಟ್ಟುಕೊಳ್ಳುವ ಹೆಸರುಗಳೆಂದು ತಿಳಿಯಬೇಕು. ಕಣ್ಣನ್ನು ಮುಚ್ಚುವ ಹುಡಿಗಿಗೆ ಅಜ್ಜಿಯೆಂದು ಹೆಸರು.

ಸಮಾಚಾರಗಳು ಮತ್ತು ಸೂಚನೆಗಳು.

ಮು ॥ ರಾ ॥ ವಿದ್ಯಾದಾಯಿನಿ ಎಡಿಟರವರ ಸನ್ನಿಧಾನಕ್ಕೆ.

ಅಯ್ಯಾ,

ನಾನು ಈ ಕೆಳಗೆ ಬರಿಕೆ ಮಾಡುವ ಅಂಶವನ್ನು ವಿದ್ಯಾವಕ್ಷಪಾತಿಗಳಾದ ತಾವು ತಮ್ಮ ಅಮೂಲ್ಯವಾದ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂತ ಕೋರುತ್ತೇನೆ.

ಕೋಲಾರ್ ಡಿಸ್ಟ್ರಿಕ್ಟ್ ಸ್ಕೂಲ್‌ಗಳ ಡೆಪ್ಯೂಟಿ ಇನ್‌ಸ್ಪೆಕ್ಟರವರಾದ ಮಹಾರಾಜಶ್ರೀ ಡಿ. ಸುಬ್ಬಯ್ಯ. ಬಿ. ಎ. ಯವರು ಮಾಹೆ ಮುಜಕೂರು

ತಾರೀಖು ೯ ರಲ್ಲಿ ಚಿಂತಾಮಣಿಗೆ ದಯಮಾಡಿ ಇಲ್ಲಿರತಕ್ಕ ಇಂಗ್ಲೀಷ್, ಕನ್ನಡ, ಸಂಸ್ಕೃತ, ಹಿಂದುಸ್ಥಾನಿ, ಗರ್ಲ್‌ಸ್ಕೂಲ್‌ಗಳ ವಿದ್ಯಾರ್ಥಿಗಳನ್ನು ಬಂದು ವಾರದ ವರಿವಿಗೂ ಪರೀಕ್ಷಿಸಿದರು. ಈ ಮಾಹೆ ತಾರೀಖು ೧೦ರಲ್ಲಿ ಗೌರ್ನ್‌ಮೆಂಟ್ ಕನ್ನಡಸ್ಕೂಲ್ ಕಟ್ಟಡದಲ್ಲಿ ವಿದ್ಯಾರ್ಥಿಗಳಿಗೆ ಪುಸ್ತಕಗಳಿನ್ನು ಬಹುಮಾನ ಕೊಡುವ ಉದ್ದಿಶ್ಯ ಗ್ರಾಮದಲ್ಲಿರತಕ್ಕ ದೊಡ್ಡಮನುಷ್ಯರೂ, ಅಧಿಕಾರಿಗಳೂ ಸಭೆ ಶೇರಿದ್ದರು. ಸಭಿಕರ ಕೋರಿಕೆಪ್ರಕಾರ ಮಹಾರಾಜಶ್ರೀ ಡೆ||ಇ||ಡಿ. ಸುಬ್ಬಯ್ಯ, ಬಿ. ಎ. ಯವರು ಅಗ್ರಾಸನವನ್ನು ಅಲಂಕರಿಸಿದರು.

ತರುವಾಯ ಇಂಗ್ಲೀಷ್ ಮತ್ತು ಕನ್ನಡಸ್ಕೂಲ್‌ಗಳ ಹೆಡ್‌ಮಾಸ್ಟರುಗಳು ತಮ್ಮತಮ್ಮ ಸ್ಕೂಲ್ ರಿಪೋರ್ಟುಗಳನ್ನು ಓದಿದ ನಂತರ ವಿದ್ಯಾರ್ಥಿಗಳಿಗೆ ಇನಾಂ ಪುಸ್ತಕಗಳು ಕೊಡಲ್ಪಟ್ಟವು.

ಇಲ್ಲಿನ ಸ್ಕೂಲ್‌ಮಾಸ್ಟರುಗಳು ತಮ್ಮತಮ್ಮ ಕೆಲಸದಲ್ಲಿ ಮಾಡುತ್ತಿರುವ ಮಿಹನತ್ತನ್ನೂ, ಗ್ರಾಮಸ್ಥರು ವಿದ್ಯಾವಿಷಯದಲ್ಲಿ ತೋರಿಸುತ್ತಿರುವ ಆಸಕ್ತಿಯನ್ನೂ ಕುರಿತು ಮು||ರಾ||ಪ್ಲೀಡರ್ ಸೀತಾರಾಮಯ್ಯನವರು ಬಂದು ಉಪನ್ಯಾಸವನ್ನು ಮಾಡಿದರು. ಈ ಗ್ರಾಮದ ಮುಖ್ಯನಿವಾಸಿಗಳಾದ ವೈಶ್ಯಶಿಖಾಮಣಿಗಳ ಔದಾರ್ಯವೇಮೊದಲಾದ ಉತ್ತಮ ಗುಣಗಳ ವಿಚಾರದಲ್ಲಿ ವೇ|| ವಿದ್ವಾನ್ ನರಹರಿಶಾಸ್ತ್ರಿಗಳವರು ಸಂಸ್ಕೃತದಲ್ಲಿ ಬಂದು ಉಪನ್ಯಾಸವನ್ನು ಮಾಡಿದರು.

ಕನ್ನಡಸ್ಕೂಲ್ ಅಸಿಸ್ಟೆಂಟ್ ಮಾಸ್ಟರಾದ ಮು || ರಾ || ಶ್ರೀನಿವಾಸ ಶಾಸ್ತ್ರಿಗಳವರು ಸಂಸ್ಕೃತದಲ್ಲಿ ಬಂದು ಉಪನ್ಯಾಸ ಹೇಳಿದರು. ಬಳಿಕ ಸಭಿಕರಿಗೆಲ್ಲಾ ಪುಷ್ಪಹಾರ ಮೊದಲಾದವುಗಳು ಗೌರವಪುರಸ್ಸರವಾಗಿ ಕೊಟ್ಟ ತರುವಾಯ ಸಭೆಯು ಬರಖಾಸ್ತಾಯಿತು.

ಸ್ಕೂಲ್‌ಗಳನ್ನು ಅಭಿವೃದ್ಧಿಸ್ಥಿತಿಗೆ ತರುವದಕ್ಕಾಗಿ ತುಂಬಾ ಪ್ರೋತ್ಸಾಹವನ್ನುಂಟುಮಾಡುತ್ತಿರುವ ಮು || ರಾ || ಡಿ. ಸುಬ್ಬಯ್ಯ, ಬಿ ಎ. ಯವರಿಗೆ ವಿದ್ಯಾಸಕ್ತಿಪಾತಿಗಳೆಲ್ಲರೂ ಕೃತಜ್ಞರಾಗಿರಬೇಕಾಗಿದೆ.

ಚಿಂತಾಮಣಿ.
ತಾ|| ೨೪-೪-೯೪.

ಕಾರುಪಾಕಲ್ ರಾಮಕೃಷ್ಣಯ್ಯ.

ನೋಟೀಸು.

ಈ ಕೆಳಗೆ ನಮೂದಿಸುವ ಪುಸ್ತಕಗಳು ಅಬ್ಬಾಗಿ ಬೆಂಗಳೂರು ಗೌ| ಸೆಂಟ್ರಲ್ ಬುಕ್ಕು ಡಿಪೋವಿನಲ್ಲಿ ಬಿಕರಿಗೆ ಸಿದ್ಧವಾಗಿವೆ.

ಮೈಸೂರು ಚರಿತ್ರೆ ೧ ಮತ್ತು ೨ ನೇಭಾಗ		ಕ್ರಯ ೦—೨—೦
ಡಿಟೋ ಮತ್ತು ೩ ೪ ನೇಭಾಗ	.. .. ..	೦—೩—೦
ಲೋವರ್‌ಸೆಕೆಂಡರಿ ಟಿಕ್ಸ್‌ಟ್.	ಈ ಮೂರೂ ಸೇರಿ ಬಂದೇ ಪುಸ್ತಕವಾಗಿ ಬೈಂಡ್ ಮಾಡಲ್ಪಟ್ಟಿರುತ್ತೆ.	೦—೮—೦
ಪದ್ಯಸಂಗ್ರಹ ೨ ನೇ ಭಾಗ ವಿರಾಟಪರ್ವ.		
ರಾಮಾಭ್ಯುದಯ ಕಥಾ ಕುಸುಮಮಂಜರೀದು ಶಿಷ್ಟಂಥಾಕಾಂಡ.		

ಹಿಂದಿನ ಸಂಚಿಕೆಯಲ್ಲಿ ಪ್ರಕಟಿಸಿದ್ದ ಲೆಖ್ಖಗಳನ್ನು ಸುಲಭರೀತಿಯಲ್ಲಿ ಮಾಡಿದ ವಿದ್ಯಾರ್ಥಿಗಳ ಹೆಸರುಗಳು.

೧. ಜಿ. ವೆಂಕಟರಾಮ್ಮಯ್ಯ .. ಗೌ| ಕನ್ನಡಸ್ಕೂಲ್, ಚನ್ನಪಟ್ಟಣ.
೨. ಜಿ. ಆದಪ್ಪ .. .. .. ,, ,, ದೊಡ್ಡ ಗಂಬೂರು.
೩. ಎಸ್. ಶ್ರೀನಿವಾಸಮೂರ್ತಿರಾವ್ ,, ,, ಚನ್ನರಾಯಪಟ್ಟಣ.
೪. ಬಿ. ಮುಡಿವಾಳ್ಳಿಯ .. ,, ,, ,,
೫. ಜಿ. ವೆಂಕಟರಾಮ್ಮಯ್ಯ .. ,, ,, ಕಾರ್ಕಾರ್‌ಹಳ್ಳಿ.
೬. ಎಂ. ಎ. ರಂಗ್ಯೈಂಗಾರ್ .. ,, ,, ಮೇಲುಕೋಟೆ.
೭. ವೆಂಕಟನರಸಿಂಹಾಚಾರ್ .. ,, ,, ,,
೮. ಧರ್ಮರಾಯಾಚಾರ್ .. .. ,, ,, ಹೊಳೇಹೊನ್ನೂರು.
೯. ಶಿಂಗಳಾಚಾರ್ .. .. ,, ,, ,,
೧೦. ಜಿ. ಸಿದ್ದಲಿಂಗಪ್ಪ . .. ,, ,, ಸಿಕಾರೀಪುರ.
೧೧. ಶ್ರೀನಿವಾಸಾಚಾರ್ .. ಸಂಸ್ಕೃತಪಾಠಶಾಲಾ, ಬಾಗೇಪಲ್ಲಿ.
೧೨. ಆರ್. ಕೆ. ಎಸ್. ಲಕ್ಷ್ಮಣಾಚಾರ್, ಮರಿಮಲ್ಲಪ್ಪನವರ ಸ್ಕೂಲ್ ಮೈಸೂರು.

ವಿರಾಟಪರ್ವದ ಟಿಪ್ಪಣಿ.

೬೦ (೧) ಧನುರ್ಜ್ಯಾಘೋಷ= ಬಿಲ್ಲಿನ ನಾರಿಯದನಿ

(೨) ಧೂಳಿಧೂಸರಿತಗಾತ್ರರು =ಧೂಳುಗಳಿಂದ ಮಲಿನವಾದ ಕರೀರವುಳ್ಳವ

(೩) ಹಲ್ಲಣ =ಕೋಗೀರು

(೪) ತಪ್ತಕಾಂಚನಸನಾಮಂಚಿತ =ಪುಟವಿಕ್ಕದ ಬಂಗಾರದಿಂದ ಮಾಡಲ್ಪಟ್ಟ

(೫) ಕಾಲಾಯಸಕಲ್ಪಿತ =ಕರೀ ಉಕ್ಕಿನಿಂದ ನಿರ್ಮಿತವಾದ

(೬) ಸಮರಸಂರಂಭ ವಿಜೃಂಭಿತನಾಗಿ= ಯುದ್ಧೋತ್ಸಾಹದಿಂದ ಹೆಚ್ಚಿದವನಾ

(೭) ಬಾಣಬಾಣಾಸನಪ್ರಮುಖಗಳಾದ= ಅಂಬು ಮತ್ತು ಬಿಲ್ಲು. ಇವುಗಳ ಮುಖ್ಯವಾಗಿಯುಳ್ಳ

(೮) ಕಾಂಭೋಜಾಶ್ವ =ಕಾಂಭೋಜವೆಂಬ ದೇಶದ ಕುದುರೆ

(೯) ಗುಣಧ್ವನಿ =ಬಿಲ್ಲಿನ ಹಗ್ಗದ ಶಬ್ದ

(೧೦) ರಾವುತ =ಸವಾರರು

(೧೧) ಪಲ್ಲವಪ್ರಸೂನಾಭಿರಾಮ =ಚಿಗುರು ಹೂಗಳಿಂದ ಮನೋಹರವಾಗಿರುವ

೬೧. (೧) ಅಪರಾಣ್ಹ ಸಮಯ =ಮಧ್ಯಾಹ್ನಕಾಲ

(೨) ಧರಣೀಪರಾಗವು =ಭೂಮಿಯ ಧೂಳುಗಳು

(೩) ವಿಶೀರ್ಣ =ನಷ್ಟವಾದ

(೪) ವಿದಾರಿತ =ಸೀಳಲ್ಪಟ್ಟ

(೫) ವಿಕಲ =ನಷ್ಟವಾದ (ಬಿಡುಗಡೆಯಾದ)

(೬) ವರುಣಾಥರ್ವೋಪ್ತ ಭಾಸುರಗಳಾಗಿಯೂ =ಕೆಂಪಾಗಿರುವ ತುಟಿಯಿಂ ಮನೋಹರವಾಗಿಯೂ

(೭) ಉನ್ನತನಾಸಿಕಾ =ದೊಡ್ಡ ಮೂಗು

(೮) ಕಂಕಣಾಂಗುಳೀಯಕ =ಕಡಗ ಮತ್ತು ಉಂಗುರಗಳು

(೯) ಶ್ಯೇನ =ಗಿಡಗಪಕ್ಷಿ

೬೪. (೧) ಭೂನಭೋಂತರದಲ್ಲಿ =ಭೂಮಿ ಮತ್ತು ಆಕಾಶಗಳ ನಡುವೆ

(೨) ವೃತ್ತವಾಸವರ =ವೃತ್ರಾಸುರ ಮತ್ತು ಇಂದ್ರನು, ಇವರುಗಳು

(೩) ಪಾಳ್ಯದ ಸಂರಕ್ಷಣೆ =ಸೈನ್ಯದ ಕಾವಲು

(೪) ಶರಪರಂಪರೆ = ಬಾಣಗಳ ಧಾರೆಗಳು

೬೫. (೧) ಸುಧಾರಸ = ಅಮೃತರಸ

(೨) ಕುಮಾರವರ್ಗ =ಮಕ್ಕಳ ಗುಂಪು

(೧) ಭೂಮಿಂಜಯ = ಉತ್ತರಕುಮಾರ

(೨) ಯೋಧಾಗ್ರೇಸರನು = ಯುದ್ಧನಾಡುವ ಭಟರಲ್ಲಿ ಶ್ರೇಷ್ಠನು

(೩) ಸುವರ್ಣಪುಂಖ = ಬಂಗಾರದ ಹಿಡಿಗಳುಳ್ಳ

(೪) ಹೇವು = ಬಂಗಾರ

(೧) ಘನಗಂಭೀರಧ್ವನಿ = ಮೇಘಧ್ವನಿಯಂತೆ ಗಂಭೀರಶಬ್ದ

(೨) ವೈಡೂರ್ಯಪ್ರಭಾಭಾಸವಮಾನವಾಗಿ = ವೈಡೂರ್ಯವೆಂಬ ರತ್ನದ ಕಾಂತಿಯಿಂದ ಪ್ರಕಾಶಿತವಾಗಿ

(೧) ಶಸ್ತ್ರಾಸ್ತ್ರಪಾಣಿಗಳು = ಶಸ್ತ್ರ ಮತ್ತು ಅಸ್ತ್ರಗಳೇ ಕಯ್ಯಲ್ಲಿ ಪಿಡಿದವರು

(೨) ದುರವಗಾಹ = ಪ್ರವೇಶಿಸುವದಕ್ಕೆ ಆಗದ

(೩) ವೀರಾಲೀಢಗಳನ್ನು = ಶೂರರ ಪಾತುಗಳನ್ನು

(೪) ಪರಿಘೋಪಮಾನವಾಹ = ಲಾಲಮುಂಡಿಗೆಗೆ ಸಮಾನವಾದ

(೫) ಬಮ್ಮಡಿ = ಬಟ್ಟೆಗೆ

(೬) ಶೋಕಾಕ್ರಾಂತಳಾದ = ದುಃಖದಿಂದ ಆಕ್ರಮಿಸಲ್ಪಟ್ಟ

(೧) ನದೀಪುತ್ರನು = ಭಾಗೀರಥಿಯ ಮಗನಾದ ಭೀಷ್ಮ

(೨) ಪರ್ವತವೈರಿ = ಇಂದ್ರನು

(೩) ವೃಕ್ಷದ ಪೆಸರು = ಲಕ್ಕಿಗಿಡಕ್ಕೆ ಅರ್ಜುನವೃಕ್ಷವೆಂದು ಹೆಸರು

(೪) ಲಂಕೇಶ್ವರನ = ಕುಬೇರನ (ರಾವಣನ)

(೫) ಉದ್ಯಾನವನಕ್ಕೆ = ಅಶೋಕವನಕ್ಕೆ

(೬) ಶತ್ರು = ವೈರಿ (ಹಾಳುಮಾಡಿದ) ಹನುಮಂತನು. ಹನುಮಧ್ವಜವೃಕ್ಷವನೆಂದಭಿಪ್ರಾಯವು

) ಸವ್ಯಸಾಚಿ = ಅರ್ಜುನನು. ಎಡದ ಕೈಯಿಂದ ಬಾಣಗಳನ್ನು ಹೂಡುವವನು)

(೮) ಮಹಾಜ್ವಾಲಾಸಮೂಹ = ದೊಡ್ಡ ಉರಿಯ ಸಮುದಾಯವು

(೧) ಕಂಕಪತ್ರವಿರಾಜಮಾನ = ರಣಹದ್ದಿನ ಗರಿಗಳಿಂದ ಶೋಭಿಸುತ್ತಿರುವ

(೨) ವಜ್ರಾಶನಿಸಮಸ್ಪರ್ಶಗಳು = ವಜ್ರಾಯುಧ ಮತ್ತು ಸಿಡಿಲು, ಇವುಗಳಿಗೆ ಸಮಾನವಾದ ಕಾಠಿಣ್ಯವುಳ್ಳವುಗಳಾದ

(೩) ರುಕ್ಮಪುಂಖ = ಚಿನ್ನದ ಬುಡಗಳುಳ್ಳ

(೪) ಶಾರ್ದೂಲಪಂಚಕ = ಐದು ಹುಲಿಗಳ ಪ್ರತಿಮೆಗಳು

(೧) ಕಾಲದಂಡೋಪಮಾನ = ಯಮದಂಡಕ್ಕೆ ಸದೃಶನಾದ

(೧) ಧನಂಜಯ = ಹಣವನ್ನು ಗೆದ್ದು ತಂದವನು (ಅಗ್ನಿ)

ವಿದ್ಯಾದಾಯಿನಿ.

ನಾಗ ೬.] ಜುಲೈ ೧೮೯೪. [ಸಂಚಿಕೆ

ಟೆಕ್ಸ್ಟ್‌ಬುಕ್ ಕಮಿಟಿಯ.

1892 ನೇ ಇಸವಿ ಅಕ್ಟೋಬರು 22 ನೇ ತಾರೀಖಿನಲ್ಲಿ ನಡೆದ ಕನ್ನಡ ಭಾಷಾ ಸಬ್‌ಕಮಿಟಿಯು ಮಾಟಿಂಗಿನ 2 ನೇ ನಿರ್ಣಯದ ಪ್ರಕಾರ ಅಕ್ಷರ ಸಂಯೋಜನವು ಅವ್ಯವಸ್ಥಿತವಾಗಿರುವ ಪದಗಳ ವಿಷಯವಾಗಿ ಬಂದು ಕ್ರಮವನ್ನ ನಿಶ್ಚಯಿಸಲು ನಿಯಮಿಸಲ್ಪಟ್ಟ ಸಬ್‌ಕಮಿಟಿಯು 1893 ನೇ ಮೇ ತಿಂಗಳು 20, 21, 22 ನೇ ತಾರೀಖುಗಳಲ್ಲಿ ನಡೆದ ಮಾಟಿಂಗಗಳ ಪ್ರೊಸೀಡಿಂಗ್ಸ್.

ಮಾಟಿಂಗಿಗೆ ಬಂದಿದ್ದವರು.

(1) ಮೆ॥ ಎಂ. ಶಾಮರಾಯರು, (ಛೇಯರ್‌ಮೆನ್.)
(2) ಮೆ॥ ಎಂ. ಎಸ್. ಪುಟ್ಟಣ್ಣನವರು.
(3) ಮೆ॥ ಎಂ. ಬಿ. ಶ್ರೀನಿವಾಸಯ್ಯಂಗಾರ್ಯರು.
(4) ಮೆ॥ ಆರ್. ರಘುನಾಥರಾಯರು.
(5) ಮೆ॥ ಎಸ್. ಜಿ. ನರಸಿಂಹಾಚಾರ್ಯರು.
(6) ಮೆ॥ ಬಿ. ಮುಲ್ಲಪ್ಪನವರು (20 ನೇ ತಾರೀಖಿನಲ್ಲಿ ಮಾತ್ರ ಬಂದಿದ್ದರು.)

ಮದರಾಸ್ ಕ್ರಿಶ್ಚಿಯನ್ ಕಾಲೇಜ್ ಪಂಡಿತರಾದ ಮೆ॥ ಕೃಷ್ಣಾಚಾರ್ಯರು ಕನ್ನಡಪದಗಳ ಅಕ್ಷರಸಂಯೋಜನಾ ವ್ಯವಸ್ಥೆಯ ವಿಷಯವಾಗಿ ಬರೆದಿದ್ದ ಕಾಗದವನ್ನು ಓದಿ ಅವರಿಗೆ ಕನ್ನಡಭಾಷಾಭಿವೃದ್ಧಿಯಲ್ಲಿ ರತಕ್ಕ ಪ್ರೋತ್ಸಾಹಕ್ಕಾಗಿ ಅವರಿಗೆ ತಮ್ಮ ಕೃತಜ್ಞತಾಭಾವನವನ್ನು ತಿಳಿಯಪಡಿಸಬೇ

ಕೆಂದು ನಿಶ್ಚಯಿಸಲ್ಪಟ್ಟಿತು. ಮುಂದೆ ಹೇಳುವ ನಿರ್ಣಯಗಳು ಮಾಡಲ್ಪಟ್ಟವು.

I. ಉಚ್ಚಾರಣಾ ಸೌಕರ್ಯಾರ್ಥವಾಗಿ ಸ್ವಾಭಾವಿಕವಾಗಿ ಉಂಟಾಗುತ್ತಿರುವ ಬದಲಾವಣೆಗಳ ಪ್ರಕಾರ ಹಳೆಗನ್ನಡದ ಶಬ್ದಗಳಿಂದ ವ್ಯುತ್ಪನ್ನವಾಗಿರುವ ಹೊಸಗನ್ನಡ ಶಬ್ದಗಳನ್ನು ಪ್ರಯೋಗಿಸಬಹುದು.

II. ಮೇಲೆ ಹೇಳಿದಮೇರೆಗೆ ವ್ಯುತ್ಪನ್ನವಾಗದಿರುವ ಶಬ್ದಗಳ ವಿಷಯದಲ್ಲಿ ಆನಂದರಾಮಾಯಣ ಮುಂತಾದ ಪ್ರಸಿದ್ಧವಾದ ನವೀನ ಕನ್ನಡ ಗ್ರಂಥಗಳಲ್ಲಿ ಪ್ರಯೋಗವಿರುವ ರೂಪಗಳನ್ನು ಕೂಡಿದ ಮಟ್ಟಿಗೂ ಉಪಯೋಗಿಸತಕ್ಕದ್ದು.

ಗ್ರಂಥಗಳಲ್ಲಿ ಉಪಯೋಗಿಸಬಹುದಾದ ಹೊಸಗನ್ನಡವನ್ನು ಪಾಠಶಾಲೆಗಳಲ್ಲಿ ಹೇಳಿಕೊಡಬೇಕೆಂಬುವದೇ ಮುಖ್ಯಾಶಯವಾದ್ದರಿಂದ ಮಾತಾಡುವಾಗಮಾತ್ರ ಪ್ರಯೋಗಿಸುವ ಶಬ್ದರೂಪಗಳನ್ನೂ ಗ್ರಾಮ್ಯ ಅಥವಾ ಸ್ಥಳವಿಶೇಷಗಳಲ್ಲಿ ಪ್ರಯೋಗಿಸುವ ಮಾತುಗಳನ್ನೂ ಸಾಧ್ಯವಾದ ಮಟ್ಟಿಗೂ ಬಿಟ್ಟುಬಿಡುವುದು ಉತ್ತಮವೆಂದು ಮೆ|| ರಘುನಾಥರಾಯರು ಹೇಳಿದ್ದನ್ನು ಒಬ್ಬರುಮಾತ್ರ ಒಪ್ಪಿಕೊಂಡು ಮೂರುಜನ ಒಪ್ಪಲಿಲ್ಲವಾದ್ದರಿಂದ ಅದನ್ನು ಅಂಗೀಕರಿಸಲಿಲ್ಲ.

ಗ್ರಾಮ್ಯ ಅಥವಾ ಸ್ಥಳವಿಶೇಷಗಳಲ್ಲಿ ಪ್ರಯೋಗಿಸುವ ಮಾತುಗಳನ್ನು ಕೂಡಿಪಮಟ್ಟಿಗೂ ಪ್ರಯೋಗಿಸದಿರುವುದು ಉತ್ತಮವೆಂದು ಮೆ|| ಪುಟ್ಟಣ್ಣನವರು ಹೇಳಿದ್ದನ್ನು ಒಬ್ಬರು ಒಪ್ಪಿಕೊಂಡರು. ಆದರೆ ಮೂರುಜನ ಒಪ್ಪಲಿಲ್ಲವಾದ್ದರಿಂದ ಅದನ್ನು ಅಂಗೀಕರಿಸಲಿಲ್ಲ. ಪ್ರಕೃತ ಭಾಷೆಯ ಸ್ಥಿತಿಯನ್ನು ನೋಡಲಾಗಿ, ಅನೇಕ ಸಂದರ್ಭಗಳಲ್ಲಿ ಯಾವ ಮಾತುಗಳು ಗ್ರಂಥಯೋಗ್ಯವಾದುವುಗಳು, ಯಾವವು ಕೇವಲ ಸಂಭಾಷಣೆಯಲ್ಲಿ ಬರತಕ್ಕವು, ಯಾವವು ಸ್ಥಳವಿಶೇಷಗಳಲ್ಲಿಮಾತ್ರ ಪ್ರಯೋಗದಲ್ಲಿರುವುವು ಎಂಬುದನ್ನು ಪಂಡಿತರೆಲ್ಲರೂ ಒಪ್ಪುವಂತೆ ನಿರ್ಧರಿಸುವುದು ಸಾಧ್ಯವೆಂಬುದೇ ಮೇಲೆ ಹೇಳಿದ ಎರಡು ಅಭಿಪ್ರಾಯಗಳನ್ನೂ ಒಪ್ಪದಿದ್ದವರು ಹೇಳಿದ ಮುಖ್ಯ ಕಾರಣ.

ಅಚ್ಚು ಹಾಕಿಸಿದ್ದ ಪದಗಳ ಪಟ್ಟಿಯನ್ನು ಸದಶಃ ಚರ್ಚಿಸಿ ಪಾಠಶಾಲೆಗಳಲ್ಲಿ ಉಪಯೋಗಿಸತಕ್ಕ ಪುಸ್ತಕಗಳಲ್ಲಿ ಯಾವ ರೂಪಗಳನ್ನು ಉಪಯೋಗಿಸ ಬೇಕೆಂಬುದು ನಿಶ್ಚಯಿಸಲ್ಪಟ್ಟಿತು. 'ಹಳೆಯ' ಎಂಬುವದಕ್ಕೆ ಬದಲಾಗಿ 'ಹಳೇ' 'ಆಯುದರಿಂದ' ಎಂಬುದಕ್ಕೆ 'ಆದ್ದರಿಂದ' 'ಹೋದುದರಿಂದ' ಎಂಬುದಕ್ಕೆ 'ಹೋದ್ದರಿಂದ' ಇವೇ ಮುಂತಾದ ಸಂಕ್ಷಿಪ್ತ ರೂಪಗಳನ್ನು ಪ್ರಯೋಗದಲ್ಲಿ ತರುವದನ್ನು ಮೆ|| ರಘುನಾಥರಾಯರು ಒಪ್ಪಲಿಲ್ಲ. ಅವುಗಳು ಸಾಧಾರಣವಾಗಿ ಮಾತನಾಡುವಾಗಲಾಗಲಿ ಉಪಯೋಗಿಸುವ ರೂಪಗಳೆಂದು ಹೇಳುವರು.

M. SHAMA RAO, M. A.
Chairman.

ಕೆಂದು ನಿಶ್ಚಯಿಸಲ್ಪಟ್ಟಿತು. ಮುಂದೆ ಹೇಳುವ ನಿರ್ಣಯಗಳು ಮಾಡಲ್ಪಟ್ಟವು.

I. ಉಚ್ಚಾರಣಾ ಸೌಕರ್ಯಾರ್ಥವಾಗಿ ಸ್ವಾಭಾವಿಕವಾಗಿ ಉಂಟಾಗುವ ತಕ್ಕ ಬದಲಾವಣೆಗಳ ಪ್ರಕಾರ ಹಳೆಗನ್ನಡದ ಶಬ್ದಗಳಿಂದ ವ್ಯುತ್ಪನ್ನವಾದ ಹೊಸಗನ್ನಡ ಶಬ್ದಗಳನ್ನು ಪ್ರಯೋಗಿಸಬಹುದು.

II. ಮೇಲೆ ಹೇಳಿದಮೇರೆಗೆ ವ್ಯುತ್ಪನ್ನವಾಗದಿರುವ ಶಬ್ದಗಳ ವಿಷಯದಲ್ಲಿ ಆನಂದರಾವುಮಾಯಣ ಮುಂತಾದ ಪ್ರಸಿದ್ಧವಾದ ನವೀನ ಕನ್ನಡ ಗ್ರಂಥಗಳಲ್ಲಿ ಪ್ರಯೋಗವಿರುವ ರೂಪಗಳನ್ನು ಕೂಡಿದ ಮಟ್ಟಿಗೂ ಉಪಯೋಗಿಸತಕ್ಕದ್ದು.

ಗ್ರಂಥಗಳಲ್ಲಿ ಉಪಯೋಗಿಸಬಹುದಾದ ಹೊಸಗನ್ನಡವನ್ನು ಪಾಠಶಾಲೆಗಳಲ್ಲಿ ಹೇಳಿಕೊಡಬೇಕೆಂಬುವದೇ ಮುಖ್ಯಾಶಯವಾದ್ದರಿಂದ ಮಾತಾಡುವಾಗಮಾತ್ರ ಪ್ರಯೋಗಿಸುವ ಶಬ್ದರೂಪಗಳನ್ನೂ ಗ್ರಾಮ್ಯ ಅಥವಾ ಸ್ಥಳವಿಶೇಷಗಳಲ್ಲಿ ಪ್ರಯೋಗಿಸುವ ಮಾತುಗಳನ್ನೂ ಸಾಧ್ಯವಾದ ಮಟ್ಟಿಗೂ ಬಿಟ್ಟುಬಿಡುವುದು ಉತ್ತಮವೆಂದು ಮೆ|| ರಘುನಾಥರಾಯರು ಹೇಳಿದ್ದನ್ನು ಬಬ್ಬರುಮಾತ್ರ ಒಪ್ಪಿಕೊಂಡು ಮೂರುಜನ ಒಪ್ಪಲಿಲ್ಲವಾದ್ದರಿಂದ ಅದನ್ನು ಅಂಗೀಕರಿಸಲಿಲ್ಲ.

ಗ್ರಾಮ್ಯ ಅಥವಾ ಸ್ಥಳವಿಶೇಷಗಳಲ್ಲಿ ಪ್ರಯೋಗಿಸುವ ಮಾತುಗಳನ್ನು ಕೂಡಿದಮಟ್ಟಿಗೂ ಪ್ರಯೋಗಿಸದಿರುವುದು ಉತ್ತಮವೆಂದು ಮೆ|| ಫುಟ್ಟಣ್ಣನವರು ಹೇಳಿದ್ದನ್ನು ಬಬ್ಬರು ಒಪ್ಪಿಕೊಂಡರು. ಆದರೆ ಮೂರುಜನ ಒಪ್ಪಲಿಲ್ಲವಾದ್ದರಿಂದ ಅದನ್ನು ಅಂಗೀಕರಿಸಲಿಲ್ಲ. ಪ್ರಕೃತ ಭಾಷೆಯ ಸ್ಥಿತಿಯನ್ನು ನೋಡಲಾಗಿ, ಅನೇಕ ಸಂದರ್ಭಗಳಲ್ಲಿ ಯಾವ ಮಾತುಗಳು ಗ್ರಂಥಯೋಗ್ಯವಾದುವುಗಳು, ಯಾವವು ಕೇವಲ ಸಂಭಾಷಣೆಯಲ್ಲಿ ಬರತಕ್ಕವು, ಯಾವವು ಸ್ಥಳವಿಶೇಷಗಳಲ್ಲಿಮಾತ್ರ ಪ್ರಯೋಗದಲ್ಲಿರುವುವು ಎಂಬುದನ್ನು ಪಂಡಿತರೆಲ್ಲರೂ ಒಪ್ಪುವಂತೆ ನಿರ್ಧರಿಸುವುದು ಸಾಧ್ಯವೆಂಬುದೇ ಮೇಲೆ ಹೇಳಿದ ಎರಡು ಅಭಿಪ್ರಾಯಗಳನ್ನೂ ಒಪ್ಪದಿದ್ದವರು ಹೇಳಿದ ಮುಖ್ಯ ಕಾರಣ.

ಅಚ್ಚು ಹಾಕಿಸಿದ್ದ ಪದಗಳ ಪಟ್ಟಿಯನ್ನು ಸದಶಃ ಚರ್ಚಿಸಿ ಪಾಠಶಾಲೆಗಳಲ್ಲಿ ಉಪಯೋಗಿಸತಕ್ಕ ಪುಸ್ತಕಗಳಲ್ಲಿ ಯಾವ ರೂಪಗಳನ್ನು ಉಪಯೋಗಿಸ ಬೇಕೆಂಬುದು ನಿಶ್ಚಯಿಸಲ್ಪಟ್ಟಿತು. 'ಹಳೆಯು' ಎಂಬುವದಕ್ಕೆ ಬದಲಾಗಿ 'ಹಳ್ಳೀ' 'ಆವುದರಿಂದ' ಎಂಬುದಕ್ಕೆ 'ಆದ್ದರಿಂದ' 'ಹೋದುದರಿಂದ' ಎಂಬುದಕ್ಕೆ 'ಹೋದ್ದರಿಂದ' ಇವೇ ಮುಂತಾದ ಸಂಕ್ಷಿಪ್ತ ರೂಪಗಳನ್ನು ಪ್ರಯೋಗದಲ್ಲಿ ತರುವದನ್ನು ವೆ|| ರಘುನಾಥರಾಯರು ಒಪ್ಪಲಿಲ್ಲ. ಅವುಗಳು ಸಾಧಾರಣವಾಗಿ ಮಾತನಾಡುವಾಗಮಾತ್ರ ಉಪಯೋಗಿಸುವ ರೂಪಗಳೆಂದು ಹೇಳುವರು.

M. SHAMA RAO, M. A.
Chairman.

A List of Kannada words, the approved form of which was accepted by the Sub-Committee.

Different forms of words.		Approved form.	Remarksifany.
ಅಂತಾಪೆನು, ಅಂಥಾವನು	...	ಅಂಥಾವನು, ಅಂಥವನು	
ಅಯ್ಯಾ, ಏಯ್ಯಾ	...	ಅಯ್ಯಾ	
ಅಂತ, ಅಂಥ, ಅಂತಾ, ಅಂಥಾ	...	ಅಂಥಾ, ಅಂಥ	
ಅಡಕ, ಅಡಿಕ, ಅಡುಕ	...	ಅಡಕ	
ಅಗುಳು, ಅಗಳು	...	ಅಗುಳು (ಅನ್ನದಗುಳು)	ಅಗಳು (ಕಂದಕ)
ಅಡಿಕೆ, ಅಡಕೆ	...	ಅಡಕೆ	
ಅಗುಳಿ, ಅಗಣಿ	...	ಅಗುಳಿ, ಅಗುಣಿ	
ಅವುಕು, ಔಕು	...	ಔಕು, ಅವುಕು	
ಅಂಗತಾಗನಾಗಿ	...	ಅಂಗತಳಗನಾಗಿ, ಅಂಗತ್ತನಾಗಿ (?)	
ಅಪರೂಪ	...	ಅಪರೂಪ	ಅಪಭ್ರಂಶದಿಂದ ಅಪರೂಪವಾಗಿದೆ.
ಅನಾಕುತ	...		ಹವನಮಾಡದಿರುವುದು-ಆದ್ದರಿಂದ ಕೆಡಕುಂಟುಮಾಡುವುದು.
ಅರವತ್ತು, ಅರುವತ್ತು	...	ಅರುವತ್ತು	
ಆದುದರಿಂದ, ಆದ್ದರಿಂದ	...	ಆದ್ದರಿಂದ, ಆದುದರಿಂದ	
ಆಯ್ತು, ಆಯಿತು	...	ಆಯ್ತು ಆಯಿತು	
ಆಲಿಗಲ್ಲು, ಆನಿಕಲ್ಲು, ಆನಕಲ್ಲು	...	ಆಲಿಕಲ್ಲು, ಆಲಿಗಲ್ಲು, ಆನಿಗಲ್ಲು, ಆನಿಕಲ್ಲು	
ದೆಇ, ಇಧೆ, ಯಿದೆ, ಯಿಧೆ	...	ಇದೆ	

ಇದ್ದೇನೆ, ಇದ್ದೇನೆ ...	(ನಿಪಾತ) ಇದೇನೆ, ಇರುತ್ತೇನೆ, ಇದ್ದೇನೆ (?)
ಇರಿಸು, ಇರಸು ...	ಇರಿಸು
ಈವತ್ತು, ಇವ್ವೊತ್ತು, ಈವತ್ತು, ಈವ್ವೊತ್ತು ...	ಈ ಹೊತ್ತು
ಇಂತಾವನು, ಇಂಥಾವನು ...	ಇಂಥಾವನು, ಇಂಥನು
ಇದ್ದುದರಿಂದ, ಇದ್ದುದ್ದರಿಂದ ...	ಇದ್ದುದರಿಂದ
ಇಳಕೊಂಡು, ಇಳಿಕೊಂಡು, ಇಳಿದುಕೊಂಡು, ಇಳದು ಕೊಂಡು	ಇಳಿದುಕೊಂಡು
ಇದೆ, ಅದೆ ...	ಇವೆ ಅದೆ
ಈದಿತು, ಈತು ...	ಈದಿತು, ಈಗ
ಉಣಿಸು, ಉಣಸು ...	ಉಣಿಸು ಉಣ್ಣಿಸು
ಎತ್ತು, ಯತ್ತು, ಯೆತ್ತು ...	ಎತ್ತು
ಏಕೆ, ಏತಕ್ಕೆ, ಯಾಕೆ, ಯಾತಕ್ಕೆ ...	ಏಕೆ, ಏತಕ್ಕೆ, ಯಾಕೆ, ಯಾತಕ್ಕೆ
(ಏತಕ್ಕೆ-ಏನು ಎಂದ ಪ್ರಕೃತಿಯ ಚತುರ್ಥ್ಯೇಕವಚನ)	
ಎಂತಾವನು, ಎಂಥಾವನು, ಎಂಥವನು ...	ಎಂಥಾವನು, ಎಂಥವನು
ಎಂಬತ್ತು, ಎಂಭತ್ತು, ಯೆಂಭತ್ತು, (ಭಾಷಾಭೂಷಣ, 166, 167, 172 ಶ. ಶಾ 361)	ಎಂಬತ್ತು
ಎಂಬುವ, ಎಂಬವ, ಯೆಂಬುವ, ಯೆಂಬವ	ಎಂಬ. ಎನ್ನುವ
ಎಣಿಸು, ಎಣಸು	ಣಸು
ಎಸೆದನು. ಎಸದನು	ಸೆದನು

ಎದುರು, ಎದರು, ಇದಿರು		ಇದಿರು ಎದುರು
ಎದಿರಿಸು, ಎದರಿಸು, ಎದುರಿಸು, ಇದಿರಿಸು	...	ಎದುರಿಸು, ಇದಿರಿಸು
ಒಂಟಿಗ, ಪೊಂಟಿಗ, ವಂಟಿಗ	...	ಒಂಟಿಗ
ಒಂಬತ್ತು, ಪೊಂಭತ್ತು, ವಂಭತ್ತು	...	ಒಂಬತ್ತು
ಓರೆ, ವಾರೆ	...	ಓರೆ
ಒರಳು, ವರಳು, ಪೊರಳು	...	ಒರಳು
ಒಂಟು, ಪೊಂಟು, ವಂಟು, ಅಂಟು	...	ಒಂಟು, ಅಂಟು
ಒನಿಕೆ, ವನಿಕೆ, ಒನಕೆ, ವನಕೆ	...	ಒನಕೆ, ಒನಿಕೆ
ಒಡೆದು, ವಡೆದು, ಒಡದು ವಡದು	...	ಒಡೆದು
ಹೊಡೆದನು, ಹೊಡದನು	...	ಹೊಡೆದನು
ಕಳುಹು, ಕಳುಹಿಸು, ಕಳಿಸು, ಕಳಿಹಿಸು	...	ಕಳುಹಿಸು ಕಳುಹು
ಕೈ, ಕಯ್	...	ಕೈ, ಕಯ್
ಕಯ್ಯಲ್ಲಿ, ಕೈಯಲ್ಲಿ, ಕೈಯ್ಯಲ್ಲಿ, ಕಯ್ಯಿನೆಲ್ಲಿ	...	ಕಯ್ಯಲ್ಲಿ, ಕೈಯಲ್ಲಿ
ಕಂಬ, ಕಂಭ,	...	ಕಂಬ
ಕುಳಿತಿರು, ಕೂತಿರು	...	ಕುಳಿತಿರು
ಕೂಡಲೆ, ಕೂಡ್ಲೆ	...	ಕೂಡಲೆ
ಕೆಡಹು, ಕೆಡವು	...	ಕೆಡಹು, ಕೆಡವು
ಕಡಮೆ, ಕಡಿಮೆ, ಕಡ್ಮೆ	...	ಕಡಮೆ
ಕಲಸು, ಕಲೆಸು	...	ಕಲಿಸು (teach) ಕಲೆಯಿಸು (mix)

ಕಟ್ಟಳೆ		ಕಟ್ಟಳೆ, ಕಟ್ಲೆ, ಕಟ್ಳೆ
ಕುಯ್ಲು, ಕೊಯ್ಲು	...	ಕೊಯ್ಲು, ಕುಯ್ಲು
ಕಿತ್ತಿಲೆ, ಕಿತ್ತಲೆ	...	ಕಿತ್ತಳೆ
ಕನಡಿ, ಕನ್ನಡಿ	...	ಕನ್ನಡಿ
ಕೊತ್ತಲು, ಕೊತ್ತಲ	...	ಕೊತ್ತಲ
ಕಣಕ, ಕಣಿಕ (ಗೋಧಿ)	...	ಕಣಕ
ಕಹಿ, ಕಯ್ಪು	...	ಕಹಿ
ಕಲಾಯ, ಕಲಾಯು	...	ಕಲಾಯಿ
ಕಿಲಬು, ಕಿಲುಬು	...	ಕಿಲುಬು
ಕಟ್ಟರೆ, ಕಟರೆ	...	ಕಟರೆ
ಕುಂಬಾರ, ಕುಂಬರ	...	ಕುಂಬಾರ
ಕೊಟ್ಟಡಿ, ಕೊಠಡಿ, ಕೊಟ್ಟಗೆ	...	ಕೊಟ್ಟಡಿ
ಕೊಬ್ಬರಿ, ಕೊಪ್ಪರಿ, ಕೊಪರಿ, ಕೊಬರಿ	...	ಕೊಪ್ಪರಿ
ಕಸುಗಬ್ಬೆಕಾಯಿ (?)	...	ಕುಸುರಿಕಾಯಿ
ಕುತೂಹಲ, ಕುತೋಹಲ, ಕೌತೂಹಲ	...	ಕುತೂಹಲ, ಕೌತೂಹಲ
ಕುಣಿಯುತ್ತದೆ, ಕುಣೀತ್ತೆ	...	ಕುಣಿಯುತ್ತದೆ, ಕುಣಿಯುತ್ತಿದೆ
ಕುಪ್ಪುಸ, ಕುಪ್ಪಸ, ಕುಪ್ಸ	...	ಕುಪ್ಪಸ
ಗಿಣಿ, ಗಿಳಿ, (ಶ. ಶಾ: (292-314)	...	ಗಿಣಿ, ಗಿಳಿ
ಗಾಳಿ, ಘಾಳಿ	...	ಗಾಳಿ

ಗುಟ್ಟು ಯಾರಿ, ಪುಟ್ಟಿಯಾಗಿ ...
ಗಾಬರಿ, ಫಾಬರಿ ...
ಗೂಬೆ, ಗೂಗೆ, (ಘೂಕಃ) ...
ಗೆಲ್ಲಿಸು, ಗೆದಿಸು ...
ಘಳಿಗೆ, ಗಳಿಗೆ ...
ಗುಡಿಸಲು, ಗುಡಸಲು ...
ಗಡ್ಡಿಗೆ, ಗಡ್ಡಿಗೆ ...
ಚಟ್ಟಿ, ಛಟ್ಟಿ ...
ಚನ್ನಾಗಿ, ಚೆನ್ನಾಗಿ, ಚಂಡಾಗಿ ...
ಚಾಂಪಟ್ಟೆ, ಚಾಪಟ್ಟೆ ...
ಚಟ್ಟೆ, ಚೆನ್ನೆ ...
ಚೆಲ್ಲು, ಚೆಳ್ಳು ...
ಜಿಂಬಿಸು, ಜಿಮ್ಮಿಸು ...
ಜಾಲಡ, ಜಾಲಡ (ಜಾಲಡ=ಯೂಡಸು) ...
ಜಗತಿ, ಜಗಲಿ ...
ಜಾಗ, ಜಿಲ್ಲಗ ...
ಜಿಗಣಿ, ಜಿಗಲಿ ...
ಜಿಲಿತಿ, ಜತೆ ...
ತಾಪ್ಪು, ತಾಪ್ಪು ...

ಗುಟ್ಟು ಯಾರಿ
ಗಾಬರಿ
ಗೂಗೆ
ಗೆಲ್ಲಿಸು, ಗೆದಿಸು
ಗಳಿಗೆ
ಗುಡಿಸಲು
ಗಡ್ಡಿಗೆ
ಚಟ್ಟಿ
ಚೆನ್ನಾಗಿ
ಚಾಂಪಟ್ಟೆ
ಚೆನ್ನೆ
ಚೆಲ್ಲು
ಜಿಂಬಿಸು, ಜಿಮ್ಮಿಸು
ಜಾಲಡ
ಜಗತಿ, ಜಗಲಿ
ಜಿಲ್ಲಗ
ಜಿಗಣಿ, ಜಿಗಲಿ
ಜಿಲಿತಿ, ಜತೆ
ತಾಪ್ಪು, ತಾಪ್ಪು

೩. ಶಿಕ್ಷಾಪದ್ಧತಿ.

INTELLECTUAL SYSTEM.

ಮಾನಸಿಕ ಶಿಕ್ಷಣ.

ಮನಶ್ಶಕ್ತಿಗಳೆಲ್ಲವೂ ಅಭಿವೃದ್ಧಿಯನ್ನು ಹೊಂದುವಂತೆ ಬೋಧಿಸಬೇಕು. ಹಾಗಲ್ಲದೆ ಇಂದ್ರಿಯಗಳಿಗೇ ಗಮನ ಕೊಟ್ಟಲ್ಲಿ ಬುದ್ಧಿಗೆ ಕೊರತೆಯಾಗುವುದು. ಊಹಾಶಕ್ತಿಯನ್ನು ಪ್ರಬಲಗೊಳಿಸಿದಲ್ಲಿ ಪರೀಕ್ಷಣಶಕ್ತಿಯು ಕಮ್ಮಿಯಾಗುವುದು. (Observation ಪರೀಕ್ಷಣ)

ವಿದ್ಯಾವ್ಯಾಸಂಗದ ಕಾಲವನ್ನು ಮೂರು ತೆರನಾಗಿ ವಿಂಗಡಿಸಬಹುದು.

(೧) ಶೈಶವ (Infancy) ಏಳುವರ್ಷಗಳ ವರಿಗೆ. (೨) ಬಾಲ್ಯ (childhood) ಹದಿನಾಲ್ಕು ವರುಷಗಳ ವರಿಗೆ. (೩) ಯೌವನ (Youth) ಇಪ್ಪತ್ತೊಂದರ ವರಿಗೆ.

ಈ ಮೂರು ಅವಸ್ಥೆಗಳಲ್ಲಿಯೂ, ಶಾರೀರಕ, ಮಾನಸಿಕ ಬದಲಾವಣೆಗಳು ಸ್ಪಷ್ಟವಾಗಿ ಗೊತ್ತಾಗುತ್ತವೆ. ಅದಕಾರಣ ಬೋಧನೆಯು ಅಯಾ ಕಾಲಕ್ಕೆ ತಕ್ಕಂತಿರಬೇಕು.

ಶೈಶವದಲ್ಲಿ ತಂದೆತಾಯಿಗಳೇ ಶಿಕ್ಷಕರು. ತೊಟ್ಟಿಲಿನಲ್ಲಿ ಆಟವಾಡುತಿರುವ ಮಕ್ಕಳಿಗೂ ಕೂಡ ಇಂದ್ರಿಯಜ್ಞಾನವಿರುವುದು. ಸ್ವಲ್ಪಮಟ್ಟಿಗೆ ಗಮನಶಕ್ತಿಯೂ ಜ್ಞಾಪಕಶಕ್ತಿಯೂ ಇರುವುವು. ಈ ಕಾಲದಲ್ಲಿ ಓದುವುದು, ಬರೆಯುವುದು, ಮಗ್ಗಿ, ಕಿಂಡರ್‌ಗಾರಟ್ಟನ್ ಮತ್ತು ಸುಲಭವಸ್ತುಪಾಠಗಳನ್ನು ಬೋಧಿಸುವುದು ಅವಶ್ಯಕವಾಗಿರುವುದು.

ಬಾಲ್ಯದಲ್ಲಿ ಸಾಧಾರಣವಾಗಿ ತನ್ನ ಅಭಿಪ್ರಾಯಗಳನ್ನು ಪರರಿಗೆ ತಿಳಿಸುವುದಕ್ಕೆ ಬೇಕಾದ ಮಾತುಗಳೆಲ್ಲವೂ ಬಾಲಕನಿಗೆ ತಿಳಿಯುತ್ತವೆ. ಅಂಗಸಾಧನೆಯ ಅಪೇಕ್ಷೆಯು ಹೆಚ್ಚಾಗಿರುವುದು. ಸ್ವತಃ ಯೋಚಿಸುವಶಕ್ತಿಯು ಪ್ರಾರಂಭವಾಗುವುದು. ಜ್ಞಾಪಕಶಕ್ತಿಯು ಬಹು ಚುರುಕಾಗಿರುವುದು. ಅದಕಾರಣ ಅನ್ಯಭಾಷೆ, ಚರಿತ್ರೆ ಮುಂತಾದವುಗಳನ್ನು ಕಲಿಸುವುದಕ್ಕೆ ಇದು ಸಕಾಲವಾಗಿರುತ್ತೆ.

ಹದಿನಾಲ್ಕು ವರುಷಗಳಾದನಂತರ ವಿಮರ್ಶನಾಶಕ್ತಿಯು (Judgment), ವಿಚಾರಶಕ್ತಿಯು ಅಂಕುರಿಸುವುವು. ಪಾಠಶಾಲೆಗಳಲ್ಲಿ ನಿಯಮಿಸಿದ ಸಮಸ್ತ ವಿಷಯ

ಗಳನ್ನು ಬಾಲಕನು ಗ್ರಹಿಸಲು ಸಾಧ್ಯವಾಗಿರುವುದು. ವಸ್ತುನಿರ್ದೇಶಕಗಳಿಲ್ಲದ ಉನ್ನತ ಗ್ರಂಥಗಳನ್ನು ಹೇಳಿಕೊಡಬಹುದು. ಇಲ್ಲಿಗೆ ಪಾಠಶಾಲೆಯ ವ್ಯಾಸಂಗವು ಮುಗಿಯಬೇಕು. ಮನಶ್ಶಕ್ತಿಗಳೆಲ್ಲವೂ ಸಂಪೂರ್ಣ ಅಭಿವೃದ್ಧಿಯನ್ನು ಹೊಂದಿರಬೇಕು, ಅಥವ ಸರಿಯಾದ ಮಾರ್ಗದಲ್ಲಿ ಪ್ರವರ್ತಿಸಿರಬೇಕು.

ನೀತಿಬೋಧನೆ.

ಬಾಲಕನ ನಡೆನುಡಿಗಳನ್ನು ತಿದ್ದುವುದೇ ನೀತಿಬೋಧನೆಯನ್ನಿಸುವುದು. ಬಾಲ್ಯದಲ್ಲಿ ತಂದೆತಾಯಿಗಳೇ ನೀತಿಬೋಧಕರು. ಪಾಠಶಾಲೆಯಲ್ಲಿ ಉಪಾಧ್ಯಾಯನು ಬಾಲಕನ ದುರ್ಮಾರ್ಗಗಳನ್ನು ಬಿಡಿಸುವುದಲ್ಲದೆ, ಸನ್ಮಾರ್ಗದಲ್ಲಿ ಪ್ರವರ್ತಕರಾಗುವಂತೆ ಯತ್ನಿಸತಕ್ಕದ್ದು. ಆದರೆ ಬಾಲ್ಯದಲ್ಲಿ ನೀತಿಬೋಧನೆಗೆ 'ಪರ್ಪೇ' ಸಾಧಕವು. ಕೆಲವು ಸಮಯಗಳಲ್ಲಿ ನಿರ್ಬಂಧವೂ ಸಹ ಅವಶ್ಯಕವು. ಬಾಲ್ಯದಲ್ಲಿ 'ವಿಧೇಯತ್ವವೇ' ಬಾಲಕನಿಗೆ ನೀತಿಮಾರ್ಗವೆಂದು ಹೇಳಬಹುದು.

ನೀತಿಬೋಧನೆಯಲ್ಲಿ ಉಪಾಧ್ಯಾಯನು ಎರಡು ವಿಷಯಗಳನ್ನು ಜ್ಞಾಪಕದಲ್ಲಿಡಬೇಕು. (೧) ದುರ್ಗುಣಗಳನ್ನು ಬಿಡಿಸುವುದು, (೨) ಸದ್ಗುಣಗಳನ್ನು ವೃದ್ಧಿಪಡಿಸುವುದು. ನೀತಿಬೋಧನೆಗೆ ಕೆಲವು ಬಾಲ್ಯಪ್ರವೃತ್ತಿಗಳನ್ನು ಉಪಾಧ್ಯಾಯನು ಸಹಕಾರಿಯಾಗಿಮಾಡಿಕೊಳ್ಳಬೇಕು. (೧) ಸ್ವಾಭಾವಿಕವಾಗಿ ಬಾಲಕರು ತಮ್ಮ ಹಿರಿಯರು ಮಾಡಿದ್ದನ್ನು ಅನುಕರಿಸಲು ಕುತೂಹಲ ಉಳ್ಳವರಾಗಿರುವರು. (೨) ಸಹಾನುಭವವು (Sympathy) ಬಾಲಕರಲ್ಲಿ ಬಹಳವಾಗಿರುವುದು. ಕೆಟ್ಟದ್ದಕ್ಕಾಗಲಿ, ಒಳ್ಳೆಯದಕ್ಕಾಗಲಿ ಬಾಲಕರಲ್ಲಿ ಏಕಮತ್ಯವು ಹೆಚ್ಚು. (೩) ಒಳ್ಳೆಯದಕ್ಕಿಂತ ಕೆಟ್ಟದ್ದನ್ನು ಮಾಡುವುದಕ್ಕೆ ಅವರ ಮನಸ್ಸು ಎಳೆಯುವುದು. ಆದಕಾರಣ ನೀತಿಬೋಧನೆಗೆ ಅಕ್ಕರವಾದ ನೆಗಳ್ತೆಗಳ್ಯಾವವೆಂದರೆ:-(೧) ನಿದರ್ಶನ (೨) ನಿಯಮ. (೩) ಬೋಧನೆ. ಶಾಲಾವ್ಯವಸ್ಥೆಯನ್ನು ಕ್ರಮವಾಗಿಟ್ಟುಕೊಂಡು ಉಪಾಧ್ಯಾಯನು ತನ್ನ ನಡೆನುಡಿಗಳಲ್ಲಿ ಬಾಲಕನಿಗೆ ಅವಶ್ಯಕವಾದ ನೀತಿಮಾರ್ಗವನ್ನು ತಿಳಿಸಬೇಕು. ಏಕೆಂದರೆ ಉಪಾಧ್ಯಾಯನು ಮಾಡುವ ಕಾರ್ಯಗಳೆಲ್ಲವೂ ಉತ್ಕೃಷ್ಟವಾದವುಗಳೆಂದು ಇವನಲ್ಲಿ ಬಾಲಕರು ಸಂಪೂರ್ಣ ನಂಬಿಕೆಯನ್ನಿಡುವರು. ಇದೂ ಅಲ್ಲದೆ ಪಾಠಶಾಲಾ ನಿಯಮಗಳನ್ನು ಸ್ವಲ್ಪವೂ ತಪ್ಪದಂತೆ ಆಚರಣೆಯಲ್ಲಿಡಬೇಕು. ಬೋಧನೆಯಲ್ಲಿ ಸತ್ಕಥೆಗಳ ಮೂಲಕವಾಗಿ ನೀತಿಮಾರ್ಗವನ್ನು ಬೋಧಿಸಬೇಕು.

ಡಿ. ವೆಂಕಟರಾಮ್ಮಯ್ಯ. ಬಿ. ಎ.

ಉಷ್ಟ್ರಪಕ್ಷಿ.

ನಿವಾಸಸ್ಥಾನ.

ಉಷ್ಟ್ರಪಕ್ಷಿಯು ಏಷ್ಯಾ ಮತ್ತು ಆಫ್ರಿಕಾಖಂಡಗಳಲ್ಲಿ ವಾಸಮಾಡುವದಾದಾಗ್ಯೂ, ಈ ಖಂಡಗಳ ಸಕಲ ಪ್ರಾಂತ್ಯಗಳಲ್ಲಿಯೂ ಸಿಕ್ಕುವದಿಲ್ಲ. ಆಫ್ರಿಕಾಖಂಡದ ಮಧ್ಯ ಮತ್ತು ಏಷ್ಯಾಖಂಡದ ಅರೇಬಿಯಾ ದೇಶದ ಮರಳುಕಾಡುಗಳಲ್ಲಿ ವಾಸಿಸುವದಾದರೂ ಚೆನ್ನಾಗಿ ಕಾಪಾಡಿದರೆ ಸಮಶೀತೋಷ್ಣವಲಯುಗಳಲ್ಲಿಯೂ ಜೀವಿಸಬಲ್ಲದು.

ವರ್ಣನೆ.

ಪಕ್ಷಿವರ್ಗಗಳಲ್ಲೆಲ್ಲಾ ಇದು ಕೇವಲ ದೊಡ್ಡದು. ಉಷ್ಟ್ರಪಕ್ಷಿಗಳಲ್ಲಿ ಮುಖ್ಯವಾಗಿ ನಾಲ್ಕುವಿಧಗಳುಂಟು. ಆಫ್ರಿಕಾ ಮತ್ತು ಅರೇಬಿಯಾದಲ್ಲಿ ಸಿಕ್ಕುವ ಮೊದಲನೆಯದು; ದಕ್ಷಿಣ ಅಮೆರಿಕಾಖಂಡದ ''ರಿಯಾ'' ಎಂಬದು ಎರಡನೆಯದು; ಆಸ್ಟ್ರೇಲಿಯಾ ಮತ್ತು ನ್ಯೂಹಾಲೆಂಡ್ ಪ್ರಾಂತ್ಯಗಳ ''ಈಮು'' ಎಂಬುದು ಮೂರನೆಯದು ನಾಲ್ಕನೆಯದು ಮಲಾಕಾ ದ್ವೀಪಗಳಲ್ಲಿನ ''ಕಾಸೊವಾರಿ'' ಎಂಬುದು. ಇವೆಲ್ಲ ಬಾಹ್ಯಚಿಹ್ನೆಗಳಲ್ಲಿ ಹೊರತು ಉಳಿದ ಅಂಶಗಳಲ್ಲಿ ಸಾಮಾನ್ಯವಾಗಿ ಒಂದೆ ಆಗಿರುವದರಿಂದ ಇವುಗಳಲ್ಲೆಲ್ಲ ಮುಖ್ಯವಾದ ಮೊದಲನೆಯದು ಮಾತ್ರ ವರ್ಣಿಸಲ್ಪಡುವದು. ಇದರ ಶರೀರ ಕೊಕ್ಕು ನೇರವಾಗಿಯೂ ದುಂಡಾಗಿಯೂ, ಕೆಳಗಣಕೊಕ್ಕಿಗಿಂತಲು ಉದ್ದವಾಗಿಯೂ ಇದೆ. ಇದರ ಮಧ್ಯದಲ್ಲಿ ಅಗಲವಾದ ಚರ್ಮದ ಪದರವಳ್ಳಿ ಕಳ್ಳದಲ್ಲಿ ಉದ್ದವಾದ ಮೂಗಿನಹೊಳ್ಳೆಗಳವೆ. ಇವು ಯಾವಾಗಲೂ ತೆರೆದಿರುವವು. ನಾಲಿಗೆಯು ಚಿಕ್ಕದಾಗಿಯೂ ದುಂಡಾಗಿಯೂ ಇದೆ. ಕಣ್ಣುಗಳು ದೊಡ್ಡವು ಮತ್ತು ಉದ್ದವಾದ ಪಟಿಗಳನ್ನು ಹೊಂದಿವೆ. ತಲೆಯು ಗಾತ್ರಕ್ಕೆ ಬಹಳ ಚಿಕ್ಕದು. ಕುತ್ತಿಗೆಯು ಬಹಳ ಉದ್ದವಾಗಿದೆ. ರೆಕ್ಕೆಗಳು ಅತ್ಯಂತ ಚಿಕ್ಕನಾಗಿರುವವು. ಬಾಲವೂ ಚಿಕ್ಕದಾಗಿರು

ಉಷ್ಟ್ರಪಕ್ಷಿ.

ವನು. ಎದೆಯಮೇಲೆ ಜೆಪ್ಪು ಕಟ್ಟಿದ ದಿಂಬಿರುವದು. ಜತರವು ದೊಡ್ಡದಾಗಿಯೂ ಬಲವಾಗಿಯೂ, ಅನೇಕ ಗ್ರಂಥಿಗಳುಳ್ಳದ್ದಾಗಿಯೂ ಇದೆ. ಕಾಲುಗಳು ಉದ್ದ ಮತ್ತು ಬಹಳ ಬಲವುಳ್ಳವು. ಪ್ರತಿಕಾಲಿನಲ್ಲಿಯೂ ನಪ್ಪವಾದ ಸ್ವಲ್ಪಮಟ್ಟಿಗೆ ಪದೆಯಿಂದ ಕೂಡಿದ, ಬಲವಾದ ಎರಡು ಬೆರಳುಗಳಿರುವವು. ಒಳಗಿನ ಬೆರಳಿಗೆ ಗೊರಸಿನಂತಿರುವ ಉಗುರಿರುವದು. ಸುಮಾರು ಎಳಂಗುಲಗಳ ಉದ್ದವಿರುವ ಈ ಬೆರಳಿನ ಉಗುರು ಬಲವಾಗಿಯೂ ಹರಿತವಾಗಿಯೂ ಇದೆ. ಹರಟು ಉದ್ದ ಮತ್ತು ಬಹಳ ಬಲವುಳ್ಳದ್ದು. ಗಂಡು ಹಕ್ಕಿಯು ಹೆಣ್ಣಿಗಿಂತ ದೊಡ್ಡದು; ಆರರಿಂದ ಎಂಟಡಿಗಳ ಎತ್ತರವಿರುವದು. ಕ್ಕೆಗಳಲ್ಲಿ ಉದ್ದವಾದ ಮತ್ತು ಮೃದುವಾದ ಗರಿಗಳಿವೆ. ಬಾಲದ ಗರಿಗಳು ಮೃದುವಾಗಿರುವವಲ್ಲದೆ ಬಾಗಿರುತ್ತವೆ. ಗಂಡುಹಕ್ಕಿಯ ದೇಹವೂ ಕುತ್ತಿಗೆಯ ಕೆಳಗಣಭಾಗವೂ ಅಚ್ಚ ಕರೀ ಬಣ್ಣದವಾಗಿವೆ. ಗರಿಗಳು ಕೆದರಿಕೊಂಡಿರುವಾಗ ಅಲ್ಲಲ್ಲಿ ಕೆಲವು ರೀ ಗರಿಗಳು ಕಾಣಿಸುವವು. ರೆಕ್ಕೆಯ ಮತ್ತು ಬಾಲದ ಮೃದುವಾದ ಗರಿಗಳು ಶ್ವೇತವಿರುವವು. ಹೆಣ್ಣುಹಕ್ಕಿಯ ಬಣ್ಣ ಬೂದಿಯಂತಿರುವ ಕಂದಾದಾಗ್ಯೂ ಬಾಲದ ಮತ್ತು ರೆಕ್ಕೆಯ ಗರಿಗಳು ಗಂಡಿನಂತಿವೆ. ಕಾಲುಗಳು ಬೀರೀದಾಗಿ ಗರಿಗಳಿಲ್ಲದೆ ರುವವು.

ಗುಣ, ಸ್ವಭಾವ, ಆಹಾರ.

ಉಷ್ಟ್ರಪಕ್ಷಿಗಳು ಯಾವಾಗಲೂ ಗುಂಪುಗುಂಪಾಗಿರುತವೆ. ಜರೀಫ, ಕಿಗುರಿ, ಮತ್ತು ಇತರ ಪ್ರಾಣಿಗಳೊಂದಿಗೆ ಸೇರಿಕೊಂಡಿರುವವು. ಈ ಪಕ್ಷಿಯು ಬುದ್ಧಿವಂತಿಯೂ ಅಲ್ಲ-ಧೈರ್ಯವುಳ್ಳದ್ದೂ ಅಲ್ಲ. ಇದನ್ನು ಪಳಗಿಸಬಹುದು. ಹಾರುವ ಶಕ್ತಿಯಿಲ್ಲದಿದ್ದರೂ ಅತಿವೇಗದಿಂದ ಓಡಬಲ್ಲದು. ಕೋಪಬಂದಾಗ ಶತ್ರುಗಳನ್ನು ಬಲವಾದ ತನ್ನ ಕಾಲಿನ ಒದೆತದಿಂದಲೂ, ಉಗುರಿನಿಂದಲೂ ಬಹಳವಾಗಿ ಗಾಯಮಾಡುವದು. ಸಾಕಿದವನಿಗೆ ವಿಶ್ವಾಸವನ್ನು ತೋರಿಸುವದಾದರೂ ಹೊರಗಿನವರಿಗೆ ತಂಟೆತಕರಾರನ್ನು ಮಾಡುವದು. ಅಟ್ಟಿದಾಗ ಜಕ್ಕಾಕ್ಕಾರವಾಗಿ ಓಡುವದು. ಒಂದು ಗಂಡುಹಕ್ಕಿಗೆ ಎರಡರಿಂದ ಏಳು ಹೆಣ್ಣುಹಕ್ಕಿಗಳಿರುವವು. ಹೆಣ್ಣು ಒಂದಾವರ್ತಿಗೆ ಹನ್ನೆರಡರಿಂದ ಹದಿನಾರು ಮೊಟ್ಟೆಗಳನ್ನಿಟ್ಟು, ಸುಮಾರು ನಾಲ್ವತ್ತು ದಿವಸಗಳವರೆಗೆ ಗಂಡುಹೆಣ್ಣು ಎರಡೂ ಅವನ್ನು ಬೆಚ್ಚಗೆ ಮಾಡುತವೆ. ಒಂದೊಂದು ಮೊಟ್ಟೆಯು ಐದು ಸೇರು ತೂಕವಿರುವದು. ಮರಳನ್ನು ಬಗಿದು ಅದರಲ್ಲಿ ಮರಿಗಳನ್ನಿಡುವದು. ಎದೆಯು ಮೇಲೆ ಭಾರವನ್ನು ಬಿಟ್ಟು ನೆಲವಹೇರೆ ಕೂಡುವದು. ಮರಳುಕಾಡುಗಳಲ್ಲಿ ಧಾರಾಳವಾಗಿ ಬೆಳೆಯುವ ಕಲ್ಲಂಗಡಿಹಣ್ಣುಗಳೇ ಇದರ ಮುಖ್ಯಾಹಾರವಾದಾಗ್ಯೂ ಸಾಧಾರಣವಾಗಿ ಹುಲ್ಲನ್ನೂ ಧಾನ್ಯಗಳನ್ನೂ ತಿನ್ನುತವೆ. ಸಾಕಿದವು ಹೊಟ್ಟು, ಹಿಂಡಿ, ತರಕಾರಿ, ಬೆಣಚಕಲ್ಲು, ಹಳೇ ಪಾದರಕ್ಷೆ, ಮರದ ತುಂಡುಗಳು, ಮೊಳೆ, ಗರಿ, ಕಸ ಮುಂತಾದವುಗಳನ್ನು ತಿಂದುಬಿಡುವವು. ಇದಕ್ಕೆ ತಿಂಡಿಯಲ್ಲಿ ಅದು ಇದು ಎಂಬ

ಭೇದವೇ ಇಲ್ಲ. ಏನು ಕಂಡರೂ ಅದನ್ನು ನುಂಗಿಬಿಡುವದು. ಈ ವಿಚಿತ್ರಪಕ್ಷಿಯ ಘ್ರಾಣೇಂದ್ರಿಯವು ತೀಕ್ಷ್ಣವಾಗಿದೆ. ಇದು ಇಪ್ಪತ್ತರಿಂದ ಮೂವತ್ತು ವರ್ಷಗಳ ವರೆಗೆ ಬದುಕುವದು.

ಸ್ವಭಾವಕ್ಕೆತಕ್ಕ ಶರೀರರಚನೆ.

ಮರಳು ಕಾಡಿನ ನಿವಾಸಿಯಾದ ಈ ಪಕ್ಷಿಗೆ ಉದ್ದವಾದ ರೆಪ್ಪೆಗಳು ಕಣ್ಣನ್ನು ಬಿಸಿಲಿನ ಜಳದಿಂದಲೂ, ಮರಳಿನಿಂದಲೂ ಕಾಪಾಡುವವು. ಇದು ದೇಹದ ಭಾರವೆನ್ನೆಲ್ಲ ಎದೆಯಮೇಲೆ ಬಿಟ್ಟು, ಕೆಳಗೆ ಕೂತುಕೊಂಡಾಗ, ಒಳಗಣ ಅವಯವಗಳಿಗೆ ಯಾವ ಬಾಧೆಯೂ ಆಗದಂತೆ ಕಾಪಾಡುವದಕ್ಕೆ ಎದೆಯ ಮೇಲಿರುವ ಜಿಡ್ಡುಕಟ್ಟಿದ ದಿಂಬು ಇದಕ್ಕೆ ತಕ್ಕಂತಿದೆ. ಕಾಲಿನಲ್ಲಿ ವಿಶೇಷವಾದ ಸ್ನಾಯುಶಕ್ತಿ ಇರುವದರಿಂದ ಅತಿ ವೇಗವಾಗಿ ಓಡುವದಕ್ಕೆ ಸಹಕಾರಿಯಾಗಿದೆ. ಸಿಕ್ಕಿದ್ದನ್ನೆಲ್ಲಾ ತಿಂದು ಅವುಗಳನ್ನು ಜೀರ್ಣಿಸಿಕೊಳ್ಳುವದಕ್ಕೆ ಅನುಗುಣವಾದ ಜಠರವೂ, ಅದರೊಳಗೆ ಗ್ರಂಥಿಗಳೂ ಈ ಪಕ್ಷಿಗಳಿಗಿರುವವು.

ಹಿಡಿಯುವಕ್ರಮ.

ಅರಬರು ಮತ್ತು ಕೆಲವು ಇತರ ಜನರು ವೇಗವಾದ ಕುದುರೆಗಳ ಮೇಲೆ ಸವಾರಿ ಮಾಡಿಕೊಂಡು ಭರ್ಜಿಗಳಿಂದ ಇವರ ಶಿಕಾರಿಯನ್ನು ಮಾಡುವರು. ಯೂರೋಪಿಯರ್ ಜನರು ಬಂದೂಕಗಳಿಂದಲೂ, ನಾಯಿಗಳ ಸಹಾಯದಿಂದಲೂ ಇದನ್ನು ಕೊಲ್ಲುವರು. ಇದು ಅತಿವೇಗದಿಂದೋಡುವದಾದರೂ, ಚಕ್ರಾಕಾರವಾಗಿ ತಿರುಗುವದರಿಂದ, ಜಾಗ್ರತೆಯಾಗಿ ಅಟ್ಟಲಾಗಿ ಹೋಗಿ ಇದನ್ನು ಕೊಲ್ಲಬಹುದು. ಇದರ ಕಾಲಿನ ಏಟಿಗೆ ಮನುಷ್ಯನಾಗಲೀ, ಕುದುರೆಯಾಗಲೀ, ನಾಯಿಯಾಗಲೀ ಸಿಕ್ಕಿದರೆ ಪುನಃ ಅವುಗಳ ಆಶೆಯೇ ಇಲ್ಲ. ಇವರ ಏಟನ್ನು ತಡೆದು ಜೀವಸಹಿತ ಬರುವದಕ್ಕಾಗುವದೇ ಇಲ್ಲವೆಂದು ಹೇಳಬಹುದು. ಅಫ್ರಿಕಾಖಂಡದ ಕಾಡುಮನುಷ್ಯರು ಇದನ್ನು ಹಿಡಿಯುವದಕ್ಕೊಂದುಪಾಯವನ್ನು ಮಾಡುವರು. ಈ ಪಕ್ಷಿಗಳ ಚರ್ಮವನ್ನು ತಾವು ಧರಿಸಿಕೊಂಡು, ಕುತ್ತಿಗೆಯು ನೆಟ್ಟಗೆ ನಿಂತುಕೊಳ್ಳುವಂತೆ ಕಡ್ಡಿಯನ್ನು ಕೊಟ್ಟು, ಕೈಯಲ್ಲಿ ಅಂಬು ಬಾಣಗಳನ್ನು ತೆಗೆದುಕೊಂಡು, ಈ ಪಕ್ಷಿಗಳ ಮಂದೆಗಳಲ್ಲಿ ನುಗ್ಗಿ, ಬುದ್ಧಿ ಇಲ್ಲದ ಈ ಮಂಕುಗಳನ್ನು ಬಾಣದಿಂದ ಹೊಡೆಯುವರು.

ಉಪಯೋಗ.

ಉಷ್ಟ್ರಪಕ್ಷಿಯ ಮೊಟ್ಟೆಗಳನ್ನೂ ಮಾಂಸವನ್ನೂ ಅನೇಕರು ಆಹಾರಕ್ಕೆ ಉಪಯೋಗಿಸುವರು. ಕರಗಿಸಿದರೆ ಕಿತ್ತಲೆಯು ಹಣ್ಣಿನ ಸಿಪ್ಪೆಯಂತೆ ಆಗುವ ಇದರ

ವನು. ಎದೆಯಮೇಲೆ ಜೆಟ್ಟಿ ಕಟ್ಟಿದ ದಿಂಬಿರುವದು. ಜಠರವು ದೊಡ್ಡದಾಗಿಯೂ ಬಲವಾಗಿಯೂ, ಅನೇಕ ಗ್ರಂಥಿಗಳುಳ್ಳದ್ದಾಗಿಯೂ ಇದೆ. ಕಾಲುಗಳು ಉದ್ದ ಮತ್ತು ಬಹಳ ಬಲವುಳ್ಳವು. ಪ್ರತಿಕಾಲಿನಲ್ಲಿಯೂ ದಪ್ಪವಾದ ಸ್ವಲ್ಪಮಟ್ಟಿಗೆ ಪರೆಯಿಂದ ಕೂಡಿದ, ಬಲವಾದ ಎರಡು ಬೆರಳುಗಳಿರುವವು. ಒಳಗಿನ ಬೆರಳಿಗೆ ಗೊರಸಿನಂತಿರುವ ಉಗುರಿರುವದು. ಸುಮಾರು ಏಳಿಂಗುಲಗಳ ಉದ್ದವಿರುವ ಈ ಬೆರಳಿನ ಉಗುರು ಬಲವಾಗಿಯೂ ಹರಿತವಾಗಿಯೂ ಇದೆ. ಹಗಲು ಉದ್ದ ಮತ್ತು ಬಹಳ ಬಲವುಳ್ಳದ್ದು. ಗಂಡು ಹಕ್ಕಿಯು ಹೆಣ್ಣಿಗಿಂತ ದೊಡ್ಡದು; ಆರರಿಂದ ಎಂಟಡಿಗಳ ಎತ್ತರವಿರುವದು. ರೆಕ್ಕೆಗಳಲ್ಲಿ ಉದ್ದವಾದ ಮತ್ತು ಮೃದುವಾದ ಗರಿಗಳಿವೆ. ಬಾಲದ ಗರಿಗಳು ಮೃದುವಾಗಿರುವವಲ್ಲದೆ ಬಾಗಿರುತ್ತವೆ. ಗಂಡುಹಕ್ಕಿಯ ದೇಹವೂ ಕುತ್ತಿಗೆಯ ಕೆಳಗಣಭಾಗವೂ ಅಚ್ಚಕರೀ ಬಣ್ಣದವಾಗಿವೆ. ಗರಿಗಳು ಕೆದರಿಕೊಂಡಿರುವಾಗ ಅಲ್ಲಲ್ಲಿ ಕೆಲವು ಬಿಳೀ ಗರಿಗಳು ಕಾಣಿಸುವವು. ರೆಕ್ಕೆಯ ಮತ್ತು ಬಾಲದ ಮೃದುವಾದ ಗರಿಗಳು ಬೆಳ್ಳಗಿರುವವು. ಹೆಣ್ಣುಹಕ್ಕಿಯ ಬಣ್ಣ ಬೂದಿಯಂತಿರುವ ಕಂದಾದಾಗ್ಯೂ ಬಾಲದ ಮತ್ತು ರೆಕ್ಕೆಯ ಗರಿಗಳು ಗಂಡಿನಂತಿವೆ. ಕಾಲುಗಳು ಬೀೞೀವಾಗಿ ಗರಿಗಳಿಲ್ಲದೆ ಇರುವವು.

ಗುಣ, ಸ್ವಭಾವ, ಆಹಾರ.

ಉಷ್ಟ್ರಪಕ್ಷಿಗಳು ಯಾವಾಗಲೂ ಗುಂಪುಗುಂಪಾಗಿರುತವೆ. ಜರೀಫ, ಚಿಗುರಿ, ಮತ್ತು ಇತರ ಪ್ರಾಣಿಗಳೊಂದಿಗೆ ಸೇರಿಕೊಂಡಿರುವವು. ಈ ಪಕ್ಷಿಯು ಬುದ್ಧಿಶಾಲಿಯೂ ಅಲ್ಲ-ಧೈರ್ಯವುಳ್ಳದ್ದೂ ಅಲ್ಲ. ಇದನ್ನು ಪಳಗಿಸಬಹುದು. ಹಾರುವ ಶಕ್ತಿ ಇಲ್ಲದಿದ್ದರೂ ಅತಿವೇಗದಿಂದ ಓಡಬಲ್ಲದು. ಕೋಪಬಂದಾಗ ಶತ್ರುಗಳನ್ನು ಬಲವಾದ ತನ್ನ ಕಾಲಿನ ಒದೆತದಿಂದಲೂ, ಉಗುರಿನಿಂದಲೂ ಬಹಳವಾಗಿ ಗಾಯಮಾಡುವದು. ಸಾಕಿದವನಿಗೆ ವಿಶ್ವಾಸವನ್ನು ತೋರಿಸುವದಾದರೂ ಹೊರಗಿನವರಿಗೆ ತಂಟೆ ಮುನ್ನು ಮಾಡುವದು. ಅಟ್ಟಿದಾಗ ಜಕಾರ್ಕಾರವಾಗಿ ಓಡುವದು. ಒಂದು ಗಂಡು ಹಕ್ಕಿಗೆ ಎರಡರಿಂದ ಏಳು ಹೆಣ್ಣುಹಕ್ಕಿಗಳಿರುವವು. ಹೆಣ್ಣು ಒಂದಾವರ್ತಿಗೆ ಹನ್ನೆರಡರಿಂದ ಹದಿನಾರು ಮೊಟ್ಟೆಗಳನ್ನಿಟ್ಟು, ಸುಮಾರು ನಾಲ್ವತ್ತು ದಿವಸಗಳವರೆಗೆ ಗಂಡು ಹೆಣ್ಣು ಎರಡೂ ಅವನ್ನು ಬೆಚ್ಚಗೆ ಮಾಡುತವೆ. ಒಂದೊಂದು ಮೊಟ್ಟೆಯು ಐದು ಸೇರು ತೂಕವಿರುವದು. ಮರಳನ್ನು ಬಗಿದು ಅದರಲ್ಲಿ ಮೊಟ್ಟೆಗಳನ್ನಿಡುವದು. ಎದೆಯು ನೀಲಿ ಭಾರವನ್ನು ಬಿಟ್ಟು ನೆಲದಮೇಲೆ ಕೂಡುವದು. ಮರಳುಕಾಡುಗಳಲ್ಲಿ ಧಾರಾಳವಾಗಿ ಬೆಳೆಯುವ ಕಲ್ಲಂಗಡಿಹಣ್ಣುಗಳೇ ಇದರ ಮುಖ್ಯಾಹಾರವಾದಾಗ್ಯೂ ಸಾಧಾರಣವಾಗಿ ಹುಲ್ಲನ್ನೂ ಧಾನ್ಯಗಳನ್ನೂ ತಿನ್ನುತವೆ. ಸಾಕಿದವು ಹೊಟ್ಟು, ಹಿಂಡಿ, ತರಕಾರಿ, ಬೆಣಜಕಲ್ಲು, ಹಳೇ ಪಾದರಕ್ಷೆ, ಮರದ ತುಂಡುಗಳು, ಮೊಳೆ, ಗರಿ, ಕಸ ಕಡ್ಡಿ ಮುಂತಾದವುಗಳನ್ನು ತಿಂದುಬಿಡುವವು. ಇವಕ್ಕೆ ತಿಂಡಿಯಲ್ಲಿ ಅದು ಇದು ಎಂಬ

ಭೇದವೇ ಇಲ್ಲ. ಏನು ಕಂಡರೂ ಅದನ್ನು ನುಂಗಿಬಿಡುವದು. ಈ ವಿಚಿತ್ರಪಕ್ಷಿಯ ಘ್ರಾಣೇಂದ್ರಿಯವು ತೀಕ್ಷ್ಣವಾಗಿದೆ. ಇದು ಇಪ್ಪತ್ತರಿಂದ ಮೂವತ್ತು ವರ್ಷಗಳ ವರೆಗೆ ಬದುಕುವದು.

ಸ್ವಭಾವಕ್ಕೆತಕ್ಕ ಶರೀರರಚನೆ.

ಮರಳು ಕಾಡಿನ ನಿವಾಸಿಯಾದ ಈ ಪಕ್ಷಿಗೆ ಉದ್ದವಾದ ರೆಪ್ಪೆಗಳು ಕಣ್ಣನ್ನು ಬಿಸಿಲಿನ ಜಳದಿಂದಲೂ, ಮರಳಿನಿಂದಲೂ ಕಾಪಾಡುವವು. ಇದು ದೇಹದ ಭಾರವನ್ನೆಲ್ಲ ಎದೆಯಮೇಲೆ ಬಿಟ್ಟು, ಕೆಳಗೆ ಕೂತುಕೊಂಡಾಗ, ಒಳಗಣ ಅವಯವಗಳಿಗೆ ಯಾವ ಬಾಧೆಯೂ ಆಗದಂತೆ ಕಾಪಾಡುವದಕ್ಕೆ ಎದೆಯ ಮೇಲಿರುವ ಜೆಡ್ಡುಕಟ್ಟಿದ ದಿಂಬು ಇದಕ್ಕೆ ತಕ್ಕಂತಿದೆ. ಕಾಲಿನಲ್ಲಿ ವಿಶೇಷವಾದ ಸ್ನಾಯುಶಕ್ತಿ ಇರುವದರಿಂದ ಅತಿ ವೇಗವಾಗಿ ಓಡುವದಕ್ಕೆ ಸಹಕಾರಿಯಾಗಿದೆ. ಸಿಕ್ಕಿದ್ದನ್ನೆಲ್ಲ ತಿಂದು ಅನ್ನಗಳನ್ನು ಜೀರ್ಣಿಸಿಕೊಳ್ಳುವದಕ್ಕೆ ಅನುಗುಣವಾದ ಜಠರವೂ, ಅದರೊಳಗೆ ಗ್ರಂಥಿಗಳೂ ಈ ಪಕ್ಷಿಗಳಿಗಿರುವವು.

ಹಿಡಿಯುವಕ್ರಮ.

ಅರಬರು ಮತ್ತು ಕೆಲವು ಇತರ ಜನರು ವೇಗವಾದ ಕುದುರೆಗಳ ಮೇಲೆ ಸವಾರಿ ಮಾಡಿಕೊಂಡು ಭರ್ಜಿಗಳಿಂದ ಇವರ ಶಿಕಾರಿಯನ್ನು ಮಾಡುವರು. ಯೂರೋಪಿಯರ್ ಜನರು ಬಂದೂಕಗಳಿಂದಲೂ, ನಾಯಿಗಳ ಸಹಾಯದಿಂದಲೂ ಇದನ್ನು ಕೊಲ್ಲುವರು. ಇದು ಅತಿವೇಗದಿಂದೋಡುವದಾದರೂ, ಚಕ್ರಾಕಾರವಾಗಿ ತಿರುಗುವದರಿಂದ, ಜಾಗ್ರತೆಯಾಗಿ ಅಟ್ಟಲಾಗಿ ಹೋಗಿ ಇದನ್ನು ಕೊಲ್ಲಬಹುದು. ಇದರ ಕಾಲಿನ ಏಟಿಗೆ ಮನುಷ್ಯನಾಗಲೀ, ಕುದುರೆಯಾಗಲೀ, ನಾಯಿಯಾಗಲೀ ಸಿಕ್ಕಿದರೆ ಪುನಃ ಅವುಗಳ ಆಶೆಯೇ ಇಲ್ಲ. ಇವರ ಏಟನ್ನು ತಡೆದು ಜೀವಸಹಿತ ಬರ್ದಕ್ಕಾಗುವದೇ ಇಲ್ಲವೆಂದು ಹೇಳಬಹುದು. ಅಫ್ರಿಕಾಖಂಡದ ಕಾಡುಮನುಷ್ಯರು ಇದನ್ನು ಹಿಡಿಯುವದಕ್ಕೊಂದುಪಾಯವನ್ನು ಮಾಡುವರು. ಈ ಪಕ್ಷಿಗಳ ಚರ್ಮವನ್ನು ತಾವು ಧರಿಸಿಕೊಂಡು, ಕುತ್ತಿಗೆಯು ನೆಟ್ಟಗೆ ನಿಂತುಕೊಳ್ಳುವಂತೆ ಕಡ್ಡಿಯನ್ನು ಕೊಟ್ಟು, ಕೈಯಲ್ಲಿ ಅಂಬು ಬಾಣಗಳನ್ನು ತೆಗೆದುಕೊಂಡು, ಈ ಪಕ್ಷಿಗಳ ಮಂದೆಗಳಲ್ಲಿ ನುಗ್ಗಿ, ಬುದ್ಧಿ ಇಲ್ಲದ ಈ ಮಂಕುಗಳನ್ನು ಬಾಣದಿಂದ ಹೊಡೆಯುವರು.

ಉಪಯೋಗ.

ಉಷ್ಟ್ರಪಕ್ಷಿಯ ಮೊಟ್ಟೆಗಳನ್ನೂ ಮಾಂಸವನ್ನೂ ಅನೇಕರು ಆಹಾರವಾಗಿ ಉಪಯೋಗಿಸುವರು. ಕರಗಿಸಿದರೆ ಕಿತ್ತಲೆಯ ಹಣ್ಣಿನ ಸಿಪ್ಪೆಯಂತೆ ಆಗುವ ಇದರ

ಂಬ್ಬ ಬಹಳ ಉತ್ಕೃಷ್ಟ ವಾದುವೆಂದೆಣಿಸಲ್ಪಟ್ಟಿದೆ. ಇವರ ಮೊಟ್ಟೆಗಳೊಳಗಿ ವನ್ನು ತೆಗೆದು ಆಫ್ರಿಕಾಖಂಡದ ಕಾಡುಜನರು ಮಡಿಕೆಗಳಂತೆ ನೀರು ತುಂಬು ತ್ತಾರೆ. ಒರಟಾದ ಇವರ ಚರ್ಮದಿಂದ ಗುರಾಣಿಗಳನ್ನೂ, ಚರ್ಮ ಮತ್ತು ಗರಿಗ ಳಿಂದ ಜಂಖಾನಗಳನ್ನೂ ಮಾಡುವರು. ಅನೇಕರು ಇವನ್ನು ಈಚೆಗೆ ಸಾಕುವದಕ್ಕೆ ಪ್ರಾರಂಭಿಸಿದಾರೆ. ದಕ್ಷಿಣ ಆಫ್ರಿಕಾಖಂಡವಲ್ಲದೆಯೂ, ಉತ್ತರ ಹಿಂದುಸ್ಥಾನದ ಎರಡು ಸ್ಥಳಗಳಲ್ಲಿಯೂ ಇವನ್ನು ಮುಂದೆ ಮುಂದೆಗಳಾಗಿ ಸಾಕುವರು. ಇವುಗ ಳಿಂದಾಗುವ ಮುಖ್ಯ ಉತ್ಪತ್ತಿಯು ರೆಕ್ಕೆಯ ಮತ್ತು ಬಾಲದ ಅತಿ ಮೃದುವಾದ ಪ್ಲುಗಿರುವ ಗರಿಗಳು. ಒಂದೊಂದು ಗರಿಯ ಬೆಲೆಯು ಒಂದು ರೂಪಾಯಿಗೆ ಕಮ್ಮಿ ಯಾಗಿರುವದಿಲ್ಲ. ಒಂದು ಪೌಂಡಿಗೆ ಸಾಧಾರಣವಾಗಿ ಎಂಭತ್ತರಿಂದ ತೊಂಭತ್ತು ರಿಗಳು ತೂಗುವವು. ಯೂರೋಪಿಯನ್ ಸ್ತ್ರೀಯರು ತಮ್ಮ ಟೋಪಿಗಳನ್ನು ವರ ಗರಿಗಳಿಂದ ಶೃಂಗರಿಸುವರು. ಪೂರ್ವದ ರೋಮನ್ ಚಕ್ರವರ್ತಿಗಳು ಇವರ ಮೆದುಳನ್ನು ಆಹಾರವಾಗಿ ಉಪಯೋಗಿಸುತ್ತಿದ್ದರೆಂದು ತಿಳಿದುಬರುವದು.

ಪಿ. ರಾಘವೇಂದ್ರರಾವ್, ಬಿ. ಎ., ಬಿ. ಎಲ್.

ಗಣಿತ.

[. 142857 ಎಂಬ ಸಂಖ್ಯೆಯನ್ನು 1, 2, 3, 4, 5, 6, ಈ ಸಂಖ್ಯೆಗಳಿಂದ ಣಿಸಿದರೆ ಬರುವ ಲಬ್ಧಗಳಲ್ಲಿ ಗುಣ್ಯದ ಅಂಕಿಗಳೇ ಇರುವವು.

$$142857 \times 1 = 142857$$
$$142857 \times 2 = 285714$$
$$142857 \times 3 = 428571$$
$$142857 \times 4 = 571428$$
$$142857 \times 5 = 714285$$
$$142857 \times 6 = 857142$$

ಈ ಮೇರಿನ ಲಬ್ಧಗಳಲ್ಲಿ ಗುಣ್ಯ ಸಂಖ್ಯೆಯಲ್ಲಿರುವ ಅಂಕಿಗಳು ಮಾತ್ರವಿರುವುದ ಲ್ಲದೆ ಆ ಅಂಕಿಗಳ ಅನುಪೂರ್ವಿಯೂ ಗುಣ್ಯದಲ್ಲಿರುವಂತೆಯೇ ಇರುವದು. ಮೇರಿನ ಯಾವಲಬ್ಧದಲ್ಲಿಯೇ ಅಗರಿ ಇರುವ 1, 4, 2, 8, 5, 7 ಈ ಸಂಖ್ಯೆಗಳ ಅನುಕ್ರಮ ವು ಗುಣ್ಯದಲ್ಲಿರುವಹಾಗೆಯೇ ಇರುವುದು.

ಇದೇ ಸಂಖ್ಯೆಯನ್ನು 7 ರಿಂದ ಗುಣಿಸಿದಲ್ಲಿ ಲಬ್ಧದಲ್ಲಿರುವ ಅಂಕಿಗಳೆಲ್ಲ 9 ಗಳಾಗಿರುವವು.

$\frac{1}{7}$ ನ್ನು ದಶಮಾಂಶದಲ್ಲಿ ಬರೆದರೆ . 142857 ಆಗುವುದು. $\frac{2}{7}$ ಎಂಬುದ
$2 \times \frac{1}{7}$ ಆದುದರಿಂದ ಅದು ದಶಮಾಂಶದಲ್ಲಿ ·285714 ಆಗುವುದು
ಹೀಗೆಯೇ ಮೇಲೆ ಬರೆದಿರುವ ಲಬ್ಧಗಳನ್ನು ಉಪಯೋಗಿ
ಕೊಂಡರೆ $\frac{3}{7}$, $\frac{4}{7}$, $\frac{5}{7}$, $\frac{6}{7}$, ಇವುಗಳನ್ನು ದಶಮಾಂಶದಲ್ಲಿ ಬ
ನೆಯೇ ಬರೆಯಬಹುದು. $\frac{7}{7}$ ಎಂಬುದು ·999999 (ಅಥವಾ ·9
ಆಗುವುದು. ಇವನ್ನು ಪುನಃ ಭಿನ್ನರಾಶಿಯನ್ನಾಗಿ ದಶಮಾಂಶ
ವಿನಿಗಳನ್ನನುಸರಿಸಿ ಬರೆದರೆ $\frac{999999}{999999}$ ಅಥವಾ 1 ಆಗುವುದು
ಇದೂ $\frac{1}{7}$ ಎಂಬುದೂ ಎಷ್ಟೂ ಒಂದೆ..

ಆವರ್ತ ದಶಮಾಂಶಗಳನ್ನು ಭಿನ್ನರಾಶಿಗೆ ತಿರುಗಿಸಬೇಕಾದರೆ ಮೆಕ್ಕ ಪುಸ್ತಕ
ಳಲ್ಲಿ ಹೇಳಿರುವ ವಿಧಿಯು ಸರಿಯೆಂಬುದಕ್ಕೆ ಇದನ್ನು ಒಂದು ಉದಾಹರಣೆಯಾಗಿ ತೋ
ಬಹುದು.

II. ಈ ಸಂದರ್ಭದಲ್ಲಿ ಅಂಕಿಗಳಲ್ಲಿನ ಮತ್ತೊಂದು ಚಮತ್ಕಾರವನ್ನು ತಿಳಿಸಬಹುದು.
1 ರಿಂದ 9 ವರೆಗಿನ ಅಂಕಿಗಳನ್ನು ವ್ಯತ್ಯಸ್ತಕ್ರಮದಿಂದ, ಅಂದರೆ 987654321
ಎಂದು ಬರೆದು 54 ರಿಂದ ಗುಣಿಸಿದರೆ ಲಬ್ಧದಲ್ಲಿ ಮೊದಲು ಮತ್ತು ಕೊನೆ ಅಂಕಿಗಳ
ವಿನಾ ವಿಕ್ಕವುಗಳೆಲ್ಲ 3 ಆಗಿರುವವು.

$$
\begin{array}{r}
987654321 \\
\times \quad 54 \\
\hline
3950617284 \\
4938271605 \\
\hline
53333333334
\end{array}
$$

ಮೊದಲು, ಕೊನೇ ಅಂಕಿಗಳೆರಡೂ ಗುಣಕದ ಅಂಕಿಗಳು. 54 ಕ್ಕೆ ಬದಲಾಗಿ
45 ರಿಂದ ಗುಣಿಸಿದರೆ ಕೊನೇ ಅಂಕಿವಿನಾ ವಿಕ್ಕವುಗಳೆಲ್ಲಿ 4 ಆಗಿರುವುವು. ಈ ಲಬ್ಧ
ದಲ್ಲಿಯೂ ಮೊದಲು, ಕೊನೇ ಅಂಕಿಗಳು ಗುಣಕದ ಅಂಕಿಗಳಾಗಿರುವವು. ಇಷ್ಟೇ
ಅಲ್ಲದೆ ಈ ಸಂಖ್ಯೆಯನ್ನು 54 ರ ಅರ್ಧವಾದ 27 ರಿಂದಾಗಲಿ ಅಥವಾ 27 ನ್ನು
ವ್ಯತ್ಯಾಸದಿಂದ ಬರೆದು ಬರುವ 72 ರಿಂದಾಗಲಿ ಗುಣಿಸಿದರೆ ಬರುವ ಲಬ್ಧಗಳ ಅಂಕಿಗ
ಳಲ್ಲಿ ಇದೇವಿಧವಾದ ಅನುರೂಪ್ಯವು ತೋರುವುದು. ಹೀಗೆ ಗುಣಿಸಿದರೆ ಬರುವ ಲಬ್ಧ
ಗಳು:—266666666667: 71111111112.

III. ಒಂದು ದಿನದ ಆದಾಯವು ತಿಳಿದಲ್ಲಿ ಒಂದು ವರ್ಷಕ್ಕೆ ಇಷ್ಟು ಆದಾಯವೆಂದು
ಸುಲಭವಾಗಿ ಹೇಳುವ ಸೂಕ್ಷ್ಮ—

ಒಂದು ವರ್ಷಕ್ಕೆ 365 ದಿವಸಗಳು.

$365 = 360 + 5 = (192 + 96 + 48 + 24 + 5$

ಅವೆ 192, 96, 48, 24 ಈ ಸಂಖ್ಯೆಗಳು ರೂಪಾಯಿ, ಅರ್ಧರೂಪಾಯಿ, ಪಾವಲಿ, ದೊಡ್ಡಆಣೆಗಳಲ್ಲಿರುವ ಕಾಸುಗಳ ಸಂಖ್ಯೆಗಳಾಗಿರುವುದರಿಂದ ಒಂದು ವರ್ಷದ ಆದಾಯವು ದಿನದ ಆದಾಯದಲ್ಲಿ ಕಾಸುಗಳ ಸಂಖ್ಯೆಯೆಷ್ಟೊ ಅಷ್ಟು ರೂಪಾಯಿ, ಅಷ್ಟು ಅರ್ಧರೂಪಾಯಿ, ಅಷ್ಟು ಪಾವಲಿ, ಅಷ್ಟು ದೊಡ್ಡಾಣೆ. ಇವುಗಳ ಮತ್ತು 5 ದಿನಗಳ ಆದಾಯದ ಮೊತ್ತನಾಗಿರುತ್ತೆ.

ಉದಾಹರಣೆ:-ದಿನಕ್ಕೆ 2 ಆಣೆ 6 ಕಾಸು ಕೂಲಿಯಾದರೆ 1 ವರ್ಷಕ್ಕೆ ಎಷ್ಟು ಸಂಪಾದನೆಯಾಗುವುದು. (ವರ್ಷ 1 ಕ್ಕೆ 365 ದಿವಸ.)

1 ದಿನಕ್ಕೆ 2 ಆ. 6 ಕಾ. ಅಥವಾ 30 ಕಾಸು ಬರುವುದು. ಅದುದರಿಂದ ವರ್ಷಕ್ಕೆ 30 ರೂಪಾಯಿ, 30 ಅರ್ಧರೂಪಾಯಿ, 30 ಪಾವಲಿ, 30 ದೊಡ್ಡಾಣೆ ಮತ್ತು 5 ದಿನಗಳ ಕೂಲಿಯಾಗುವುದು. ಅಂದರೆ 57 ರೂ. 6 ಕಾ. ಸಂಪಾದನೆಯಾಗುವುದು.

ಜಾಗ್ರತೆಯುಳ್ಳ ಹೇಳಬೇಕಾದರೆ ಅನುಸರಿಸತಕ್ಕಕ್ರಮ.

1 ವರ್ಷಕ್ಕೆ ಬರತಕ್ಕದ್ದು 30 ರೂ. + 15 ರೂ. + $7\frac{1}{2}$ ರೂ. + $3\frac{3}{4}$ ರೂ. 5 ದಿನದ ಕೂಲಿ (12 ಆ. 6 ಕಾ.) = ರೂ. 57—0—6.

ಸುಮಾಚಾರಗಳು ಮತ್ತು ಸೂಚನೆಗಳು.

ಮೈಸೂರು ಕರ್ನಾಟಕ ಭಾಷೋಜ್ಜೀವಿನೀ ಪಾಠಶಾಲೆ.

ಸರ್ ಲಿಂಗಿರನೀ ಇಸವಿ ಜೂನ್ ಒಟನೀ ತಾರೀಖಿನಲ್ಲಿ ಈ ಪಾಠಶಾಲೆಯು ವಿದ್ಯಾರ್ಥಿಗಳಿಗೆ ದೇವರಾಜಬಹದೂರರವರ ಧರ್ಮಕೋಶಾಧಿಕಾರಿಗಳೂ ಮತ್ತು ಗೌರ್ನಮೆಂಟಿನವರೂ ಮೈಸೂರ್ ಗೌ॥ ನಾರ್ಮಲ್ ಸ್ಕೂಲ್ ಹಾಲಿನಲ್ಲಿ ಸಭೆ ಸೇರಿ ಬಹುಮಾನವನ್ನು ಕೊಟ್ಟರು—ಆ ಕಾಲದಲ್ಲಿ ನಮ್ಮ ಘನವನ್ನು ಹೊಂದಿದ ಚೀಫ್‌ಜಡ್ಜ್ ಮ॥ರಾ॥ ಶಂಬೂಸೆಟ್ಟರವರು ಅಗ್ರಾಸನವನ್ನು ದಯವಿಟ್ಟು ಸ್ವೀಕರಿಸಿದರು.

ಎಜ್ಯುಕೇಷನ್ ಸೆಕರಟೇರೀಯವರಾದ ಮೆ॥ ಭಾಭಾಸಾಕೇಬರವರು.
ದಬಾರಿಬಕ್ಷೀಯ್ಯರಾವ ಮೆ॥ ನರಸಿಂಹಯ್ಯಂಗಾರ್ಯರವರು.

ಮೆ॥ ಮಲ್ಲಾರಿರಾವ್ ಬಿ. ಎ. ಯವರು. ಮೆ॥ ಆರ್. ಎ. ನರಸಿಂಹಾಚಾರ್ಯರ್ ಎಂ. ಎ. ಯವರು. ಮೆ॥ ಮಹದೇವಶಾಸ್ತ್ರಿ ಬಿ.ಎ. ಯವರು. ಮೆ॥ ವೆಂಕಟರಾಮಾ ಶಾಸ್ತ್ರಿ ಬಿ. ಎ. ಯವರು. ಮೆ॥ ಎಂ. ಕೇಶವೈಯ್ಯ, ಡೆಪ್ಯುಟಿ ಇನ್‌ಸ್ಪೆಕ್ಟರವರು. ಮೆ॥ ಬಿ. ಸುಬ್ಬರಾವ್, ಬಿ. ಎ. ಯವರು. ಮೆ॥ ವೆಂಕಟಕೃಷ್ಣಯ್ಯನವರು. ಮೆ॥ ವಾಸುದೇವೈಯ್ಯನವರು. ಮೆ॥ ಪಂಡಿತರತ್ನಂ ಸೀತಾರಾಮಶಾಸ್ತ್ರಿಗಳು. ಮೆ॥ ಸುಬ್ಬಾಶಾಸ್ತ್ರಿಗಳು. ಮೆ॥ ಜಯರಾಯಾಚಾರ್ಯರು. ಮೆ॥ ರಾಮಶಾಸ್ತ್ರಿಗಳು. ಮೆ॥ ವೆಂಕಟರಾಮಶಾಸ್ತ್ರಿಗಳು.

ಇವರೇ ಮೊದಲಾದ ಮಹನೀಯರೂ ಮತ್ತು ನಾರ್ಮಲ್‌ಸ್ಕೂಲ್‌ಮಾಸ್ಟರ್‌ಗಳೂ ವಿದ್ಯಾರ್ಥಿಗಳೂ ಸೇರಿದ್ದರು.

ಮಹಾ ರಾ॥ ಜಯರಾಂವೆಂಕಟಾಚಾರ್ಯನೂ, ಮಹಾ ರಾ॥ ಶ್ರೀನಿವಾಸರಾಘವಾಚಾರ್ಯರೂ ಸ್ವಕವಿತ್ವವಾದ ಸಂಸ್ಕೃತ ಕನ್ನಡಪ್ರಬಂಧಗಳನ್ನೂ ಮಹಾಭಾರತ ಸೀತಾ ಕಲ್ಯಾಣಪ್ರಬಂಧಗಳನ್ನೂ ಓದಿದಮೇಲೆ ಪಾಠಶಾಲಾ ಸೆಕರಟೇರೀಯವರಾದ ಮೆ॥ ಕೆ ನಾರಾಯಣಯ್ಯಂಗಾರ್ಯರು ಮುಂದೆ ಬರುವ ರಿಪೋರ್ಟನ್ನು ಓದಿದರು.

ಸಭಿಕರೇ:-ಈ ಕರ್ನಾಟಕ ಭಾಷೋಜ್ಜೀವನೀಪಾಠಶಾಲೆಯು ವೈಸೂರಿನ ಅನೇಕ ಮಹನೀಯರುಗಳಿಂದ ೧೮೮೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ಕರ್ನಾಟಕಭಾಷೆಗೆ ಬಹಳ ಪ್ರೋತ್ಸಾಹವನ್ನುಂಟುಮಾಡುತ್ತಲಿದೆ ಎಂಬವಾಗಿ ಹೋವವರುಷದ ರಿಪೋರ್ಟನಲ್ಲಿ ಸವಿಸ್ತಾರವಾಗಿ ವಿಜ್ಞಾಪಿಸಿಕೊಂಡಿದ್ದೆನಷ್ಟೆ.

೧೮೯೩ನೇ ಇಸವಿಯಲ್ಲಿ ಈ ಪಾಠಶಾಲೆಯ—

೧ನೇ ಪಂಡಿತತರಗತಿಯಲ್ಲಿ ೨
೨ನೇ ,, ೫
೧ನೇ ಉಪಾಧ್ಯಾಯತರಗತಿಯಲ್ಲಿ ೨೨
೨ನೇ ,, ... ೧೪

ಒಟ್ಟು ೪೩ ವಿದ್ಯಾರ್ಥಿಗಳು ಓದುತ್ತಲಿದ್ದರು.

ಈ ವರುಷ ಸೆಬ್ಬರವೀಯಲ್ಲಿ ನಡೆದ ಪಂಡಿತಪರೀಕ್ಷೆಗೆ ಈ ಪಾಠಶಾಲೆಯಿಂದ ಒಬ್ಬ ವಿದ್ಯಾರ್ಥಿಯೂ, ಮಹಾ ರಾ॥ ಧರ್ಮಪ್ರವರ್ತಕ ಗುಂಜಾನರಸಿಂಹಯ್ಯನವರ

ಒಂದು ವರ್ಷಕ್ಕೆ 365 ದಿವಸಗಳು.

$$365 = 360 + 5 = (192 + 96 + 48 + 24 - 5$$

ಆದರೆ 192, 96, 48, 24 ಈ ಸಂಖ್ಯೆಗಳು ರೂಪಾಯಿ, ಅರ್ಧರೂಪಾಯಿ, ಪಾವಲಿ, ದೊಡ್ಡಆಣೆಗಳಲ್ಲಿರುವ ಕಾಸುಗಳ ಸಂಖ್ಯೆಗಳಾಗಿರುವುದರಿಂದ ಒಂದು ವರ್ಷದ ಆದಾಯವು ದಿನದ ಆದಾಯದಲ್ಲಿ ಕಾಸುಗಳ ಸಂಖ್ಯೆಯಷ್ಟು ಅಷ್ಟು ರೂಪಾಯಿ, ಅಷ್ಟು ಅರ್ಧರೂಪಾಯಿ, ಅಷ್ಟು ಪಾವಲಿ, ಅಷ್ಟು ದೊಡ್ಡಾಣಿ. ಇವುಗಳ ಮತ್ತು 5 ದಿನಗಳ ಆದಾಯದ ಮೊತ್ತವಾಗಿರುತ್ತೆ.

ಉದಾಹರಣೆ:-ದಿನಕ್ಕೆ 2 ಆಣೆ 6 ಕಾಸು ಕೂಲಿಯಾದರೆ 1 ವರ್ಷಕ್ಕೆ ಎಷ್ಟು ಸಂಪಾದನೆಯಾಗುವುದು. (ವರ್ಷ 1 ಕ್ಕೆ 365 ದಿವಸ.)

1 ದಿನಕ್ಕೆ 2 ಆ. 6 ಕಾ. ಅಥವಾ 30 ಕಾಸು ಬರುವುದು. ಆದುದರಿಂದ 1 ವರ್ಷಕ್ಕೆ 30 ರೂಪಾಯಿ, 30 ಅರ್ಧರೂಪಾಯಿ, 30 ಪಾವಲಿ, 30 ದೊಡ್ಡಾಣಿ ಮತ್ತು 5 ದಿನಗಳ ಕೂಲಿಯಾಗುವುದು. ಅಂದರೆ 57 ರೂ, 6 ಕಾ. ಸಂಪಾದನೆಯಾಗುವುದು.

ಜಾಗ್ರತೆಯುಳ್ಳ ಹೇಳಬೇಕಾದರೆ ಅನುಸರಿಸತಕ್ಕಕ್ರಮ.

1 ವರ್ಷಕ್ಕೆ ಬರತಕ್ಕದ್ದು 30 ರೂ. + 15 ರೂ. + $7\frac{1}{2}$ ರೂ. + $3\frac{3}{4}$ ರೂ.
5 ದಿನದ ಕೂಲಿ (12 ಆ. 6 ಕಾ.) = ರೂ. 57—0—6.

ಸಮಾಚಾರಗಳು ಮತ್ತು ಸೂಚನೆಗಳು.

ಮೈಸೂರು ಕರ್ನಾಟಕ ಭಾಷೋಜ್ಜೀವಿನೀ ಪಾಠಶಾಲೆ.

ಸರ್ ಗರ್ನರ್‌ರವರ ಇಸವಿ ಜೂನ್ ೧೬ನೇ ತಾರೀಖಿನಲ್ಲಿ ಈ ಪಾಠಶಾಲೆಯ ವಿದ್ಯಾರ್ಥಿಗಳಿಗೆ ದೇವರಾಜಬಹದೂರವರ ಧರ್ಮಕೋಶಾಧಿಕಾರಿಗಳೂ ಮತ್ತು ಗೌರ್ನಮೆಂಟ ರವರೂ ಮೈಸೂರ್ ಗೌ॥ ನಾರ್ಮಲ್‌ಸ್ಕೂಲ್ ಹಾಲಿನಲ್ಲಿ ಸಭೆ ಸೇರಿ ಬಹುಮಾನವನ್ನು ಕೊಟ್ಟರು—ಆ ಕಾಲದಲ್ಲಿ ನಮ್ಮ ಘನವನ್ನು ಹೊಂದಿದ ಚೀಫ್‌ಜಡ್ಜ್ ಮು॥ರಾ॥ ಕಂಬೂಸೆಟ್ಟರವರು ಅಗ್ರಾಸನವನ್ನು ದಯವಿಟ್ಟು ಸ್ವೀಕರಿಸಿದರು.

ಎಜ್ಜುಕೇಷನ್ ಸೆಕರ್ಟರೀಯವರಾದ ಮೆ॥ ಥಾಥಾಸಾತ್ಕೇಬರವರು.
ದರ್ಬಾರುಬಕ್ಷೀಯ್ಯರಾದ ಮೆ॥ ನರಸಿಂಹಯ್ಯಂಗಾರ್ಯರವರು.

ಮೆ॥ ಮಲ್ಲಾರಿರಾವ್ ಬಿ. ಎ ಯವರು. ಮೆ॥ ಆರ್. ಎ. ನರಸಿಂಹಾಚಾರ್ಯರ್ ಎಂ. ಎ. ಯವರು. ಮೆ॥ ಮಹದೇವಶಾಸ್ತ್ರಿ ಬಿ.ಎ. ಯವರು. ಮೆ॥ ವೆಂಕಟರಾಮಾ ಶಾಸ್ತ್ರಿ, ಬಿ. ಎ. ಯವರು. ಮೆ॥ ಎಂ. ಕೇಶವೈಯ್ಯ, ಡೆಪ್ಯೂಟಿ ಇನ್‌ಸ್ಪೆಕ್ಟರವರು. ಮೆ॥ ಬಿ. ಸುಬ್ಬರಾವ್, ಬಿ. ಎ. ಯವರು. ಮೆ॥ ವೆಂಕಟಕೃಷ್ಣಯ್ಯನವರು. ಮೆ॥ ವಾಸುದೇವೈಯ್ಯನವರು. ಮೆ॥ ಪಂಡಿತರತ್ನಂ ಸೀತಾರಾಮಶಾಸ್ತ್ರಿಗಳು. ಮೆ॥ ಸುಬ್ಬಾಶಾಸ್ತ್ರಿಗಳು. ಮೆ॥ ಜಯರಾಯಾಚಾರ್ಯರು. ಮೆ॥ ರಾಮಾಶಾಸ್ತ್ರಿಗಳು. ಮೆ॥ ವೆಂಕಟರಾಮಶಾಸ್ತ್ರಿಗಳು.

ಇವರೇ ಮೊದಲಾದ ಮಹನೀಯರೂ ಮತ್ತು ನಾರ್ಮಲ್‌ಸ್ಕೂಲ್‌ಮಾಸ್ತರ್‌ಗಳೂ ವಿದ್ಯಾರ್ಥಿಗಳೂ ಸೇರಿದ್ದರು.

ಮಹಾ ರಾ॥ ಜಯರಾಂವೆಂಕಟಾಚಾರ್ಯನೂ, ಮಹಾ ರಾ॥ ಶ್ರೀನಿವಾಸರಾಘವಾ ಚಾರ್ಯನೂ ಸ್ವಕವಿತ್ವನಾದ ಸಂಸ್ಕೃತ ಕನ್ನಡಪ್ರಬಂಧಗಳನ್ನೂ ಮಹಾಭಾರತ ಗೀತಾ ಕಲ್ಯಾಣಪ್ರಬಂಧಗಳನ್ನೂ ಓದಿದಮೇಲೆ ಪಾಠಶಾಲಾ ಸೆಕರಟೇರೀಯ ದ ಮೆ॥ ಕೆ ನಾರಾಯಣಯ್ಯಂಗಾರ್ಯರು ಮುಂದೆ ಬರುವ ರಿಪೋರ್ಟನ್ನು ಓದಿದರು

ಸಭಿಕರೇ,-ಈ ಕರ್ನಾಟಕ ಭಾಷೋಜ್ಜೀವಿನೀ ಪಾಠಶಾಲೆಯು ವೈಸೂರಿನ ಅನೇಕ ಮಹನೀಯ ವ್ಯಕ್ತಿಗಳಿಂದ ೧೮೮೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ಕರ್ನಾಟಕಭಾಷೆಗೆ ಬಹಳ ಪ್ರೋತ್ಸಾಹವನ್ನುಂಟುಮಾಡುತ್ತಲಿದೆ ಎಂಬವಾಗಿ ಹೋದವರುಷದ ರಿಪೋರ್ಟಿನಲ್ಲಿ ಸವಿಸ್ತಾರವಾಗಿ ವಿಜ್ಞಾಪಿಸಿಕೊಂಡಿದ್ದೆನಷ್ಟೆ.

೧೮೯೩ನೇ ಇಸವಿಯಲ್ಲಿ ಈ ಪಾಠಶಾಲೆಯ—

೧ನೇ ಪಂಡಿತತರಗತಿಯಲ್ಲಿ ೨
೨ನೇ ,, ೪
೧ನೇ ಉಪಾಧ್ಯಾಯತರಗತಿಯಲ್ಲಿ ೨೨
೨ನೇ ,, ... ೧೪

ಒಟ್ಟು ೪೩ ವಿದ್ಯಾರ್ಥಿಗಳು ಓದುತ್ತಲಿದ್ದರು.

ಈ ವರುಷ ಹೆಬ್ಬರವೀಯಲ್ಲಿ ನಡೆದ ಪಂಡಿತಪರೀಕ್ಷೆಗೆ ಈ ಪಾಠಶಾಲೆಯಿಂದ ಒಬ್ಬ ವಿದ್ಯಾರ್ಥಿಯೂ, ಮಹಾ ರಾ॥ ಧರ್ಮಪ್ರವರ್ತಕ ಗುಂಜಾನರಸಿಂಹಯ್ಯನವರ

ಶಾಲೆಯ ಉಪಾಧ್ಯಾಯರಾದ ಜಯರಾಂ ವೆಂಕಟಾಚಾರ್ಯರು ಬಂದಿದ್ದರು. ಈ ನೇಯುವರು ಪಂಡಿತಪರೀಕ್ಷೆಯಲ್ಲಿ ಶ್ಲಾಘನೀಯವಾಗಿ ೧ನೇ ತರಗತಿಯಲ್ಲಿ ತೇರ್ಗಡೆ ಾಗಿರುವರು.

ಕಳೆದ ಡಿಶಂಬರಿನಲ್ಲಿ ನಡೆದ ದೇಶೀಯೋಪಾಧ್ಯಾಯಪರೀಕ್ಷೆಗೆ ಈ ಪಾಠಶಾಲೆ ಂದ ೧೩ ಜನ ವಿದ್ಯಾರ್ಥಿಗಳು ಕಳುಹಿಸಲ್ಪಟ್ಟಿದ್ದರು. ಇವರಲ್ಲಿ ೩ ಜನ ತೇರ್ಗಡೆ ಾದರು. ಒಟ್ಟು ಪ್ರಾವಿನ್ಸಿನಲ್ಲಿ ೨೩ ವಿದ್ಯಾರ್ಥಿಗಳಿಗೆ ೬೦ ಜನ ತೇರ್ಗಡೆಯಾಗಿರು ್ತರೆ. ಆದ್ದರಿಂದ ೫೦೦ ಈ ಪಾಠಶಾಲೆಯಲ್ಲಿಯೂ,, ೧೦೦೦ ೬೦೦ ಪ್ರಾವಿನ್ಸಿನಲ್ಲಿಯೂ ತೇರ್ಗಡೆಯಾಗಿರುವರು.

ಈ ವರುಷದ ಪಂಡಿತಪರೀಕ್ಷಕರಾದ

ಮು॥ ರಾ॥ ಪಂಡಿತರತ್ನಂ ಶೇಷಾರಾವುಶಾಸ್ತ್ರಿಗಳು ಮು॥ ಅರವುನೇ ವಿದ್ವಾಂ ರು ಜಯರಾಯಾಚಾರ್ಯರು. ಮು॥ ಅರಮನೇ ವಿದ್ವಾಂಸರು ಚಾಮರಾಜನಗರದ ಾಮಾಶಾಸ್ತ್ರಿಗಳು. ಮು॥ ಸದ್ವಿದ್ಯಾಶಾಲಾಧ್ಯಕ್ಷಕ ಪೆರೀಸ್ವಾಮಿ ತಿರುಮಲಾಚಾ ರು. ಮು॥ ಆರ್. ನರಸಿಂಹಾಚಾರ್ಯರು—ಎಂ. ಎ. ಯವರು. ಮು॥ ನಂಜನ ೂಡು ಸುಬ್ಬಾಶಾಸ್ತ್ರಿಗಳು. ಮು॥ ಎಸ್. ಜಿ. ನರಸಿಂಹಾಚಾರ್ಯರು. ಮು॥ ಪುಟ್ಟ ರ್ತಿ ಶೇಷಾಚಾರ್ಯರು. ಮು॥ ಲಕ್ಷ್ಮೀನರಸಿಂಹಶಾಸ್ತ್ರಿಗಳು. ಮು॥ ಬಿ. ಮಲ್ಲಪ್ಪ ನವರು. ಮು॥ ವೆಂಕಟರಾಮಾಶಾಸ್ತ್ರಿಗಳು.

ಈ ಮಹನೀಯರು ದಯವಿಟ್ಟು ಈ ಪರೀಕ್ಷೆಯನ್ನು ನಿರೀಕ್ಷಿಸಿದ್ದಕ್ಕೆ ಬಹಳ ತಜ್ಞ್ಞರಾಗಿರುತ್ತೇವೆ.

ದೇವರಾಜಬಹದೂರವರ ಧರ್ಮಕೋಶಾಧಿಕಾರಿಗಳು ೧೯೬೩—೬೪—೬೫ನೇ ರುಷಗಳಲ್ಲಿ ನಡೆವ ಪಂಡಿತ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವ ಮೊದಲು ೩ ಜನ ಾರ್ಥಿಗಳಿಗೆ ಕ್ರಮವಾಗಿ ೧೫೦—೧೦೦-೪೦ ರೂಪಾಯಿಗಳ ಬಹುಮಾನವನ್ನು ಯುವಿಟ್ಟು ಕೊಡುವದಾಗಿ ಪ್ರಚಾರಪಡಿಸಿ, ತದನುಸಾರನಾಗಿಯೇ ನಡಿಕೊಂಡು ರುತ್ತಲಿರುವುದರಿಂದಲೂ, ಕನ್ನಡಭಾಷಾ ಗ್ರಂಥಕರ್ತರಿಗೆ ಬಹುಮಾನವನ್ನು ಕೊಡು ್ತಲಿರುವುದರಿಂದಲೂ ಕನ್ನಡ ಭಾಷಾಭಿವೃದ್ಧಿಗೆ ಬಹಳ ಪ್ರೋತ್ಸಾಹ ುಂಟಾಗುತ್ತ ರುವುದು. ಈ ಮಹನೀಯರನ್ನು ನಾವು ಎಷ್ಟು ಕೊಂಡಾಡಿದರೂ ಸಾಲದು.

ನಮ್ಮ ದೇಶದ ಎಲ್ಲಾ ಜನಗಳಿಗೂ ಸಕಲ ಶಾಸ್ತ್ರಗಳಲ್ಲಿಯೂ ಪರಿಚಯ ುಂಟಾಗಬೇಕಾದರೆ, ಆ ಶಾಸ್ತ್ರವಿಷಯಗಳನ್ನು ದೇಶಭಾಷೆಯಾದ ಕನ್ನಡದಲ್ಲಿಯೇ ಹೇಳಿ ಕೊಟ್ಟಲ್ಲದೆ ಸುಲಭವಾಗಿ ತಿಳಿಯಲಾರದೆಂತಲೂ, ಕರ್ನಾಟಕ ಭಾಷೆಯಲ್ಲಿ ಅಮೂಲಾ ಗ್ರವಾಗಿ ಪರಿಚಯವುಳ್ಳ ಅನೇಕ ಪಂಡಿತರ ಸಹಾಯವಿಲ್ಲದಿದ್ದರೆ ಈ ಕೋರಿಕೆಯು ನೆರ

ಲೋಚಲಾರವೆಂತಲೂ ಎಣಿಸಿ, ಈ ಕರ್ನಾಟಕ ಭಾಷೋಜ್ಜೀವನೀ ಸಭೆಯ ಮಹನೀ ಯ್ಯರು ಇದನ್ನು ಸ್ಥಾಪಿಸಿ, ಇದನ್ನು ಗೌರ್ನಮೆಂಟನವರಿಂದ ಮಾಹೇಯಾನಾ ೩೦ ರೂಪಾಯಿಗಳು ವಿದ್ಯಾರ್ಥಿವೇತನಕ್ಕಾಗಿ ಶ್ರೀಮತ್ ಮಹಾರಾಜರವರ ಸನ್ನಿಧಿ ಯಿಂದ ೩೦ರೂಪಾಯಿಗಳು ಗ್ರಾಂಟುಸಾಯುದಿಂದ ನಡೆಸುತ್ತಾ ಬರುತ್ತಲಿದ್ದರು.

ಯಾವಾಗಲೂ ಪ್ರಜಾಕ್ಷೇಮಚಿಂತಕರಾದ ನಮ್ಮ ಗೌರ್ನಮೆಂಟನವರು ಈ ಪಾತಶಾಲೆಯು ಅಭಿವೃದ್ಧಿಯನ್ನು ನೋಡಿ ಇದನ್ನು ಇನ್ನು ಹೆಚ್ಚಾಗಿ ಅಭಿವೃದ್ಧಿಪಡಿ ಸಬೇಕೆಂದು ಸರ್ಕಾರಕ್ಕೆ ತೆರೆದ-ಕೊಂಡು ನಾರ್ಮಲ್‌ಸ್ಕೂಲ್ ಎಂಬ ಹೆಸರನ್ನಿಟ್ಟ ಪೂರ್ವದಂತೆಯೇ ಪಂಡಿತ ತರಗತಿಗಳೆರಡೂ, ಉಪಾಧ್ಯಾಯರ ತರಗತಿಗಳೆರಡೂ, ಲೋವರ್‌ಸೆಕೆಂಡರಿ ತರಗತಿಯೊಂದು ಒಟ್ಟು ೫ ತರಗತಿಗಳನ್ನಿಟ್ಟ, ಈ ಉದ್ದೇಶಕ್ಕ ನುಸಾರವಾಗಿ ವಿಶೇಷವಾದ ವೇತನಮೊದಲಾದ ಸಹಾಯಗಳನ್ನೂ ವಿದ್ಯಾರ್ಥಿಗಳಿಗ ನುಕೂಲವಾಗಿ ಮೈಸೂರು ಸೂಪರ್‌ಡೆಂಟ್ಸ್ ಹೋಮ್ ಎಂಬ ಒಂದು ಭೋಜನಶಾಲೆ ಯನ್ನು ಏರ್ಪಡಿಸಿ ದೇಶವಿದ್ಯಾಭಿವೃದ್ಧಿಗೆ ಬಹಳ ಪ್ರೋತ್ಸಾಹವನ್ನುಂಟುಮಾಡಿರು ವರು. ಈ ಏರ್ಪಾಡಿನ ಫಲಿತಾಂಶವು ದೇಶದ ಮೂಲೆಗಳಲ್ಲಿ ಸೇರಿರುವ ಅಜ್ಞಾನಾಂ ಧಕಾರವನ್ನೂಕೂಡ ಕ್ಷಿಪ್ರದಲ್ಲಿಯೇ ಹೋಗಲಾಡಿಸುವುದರಲ್ಲಿ ಪರಿಣಮಿಸುವುದು. ಇದಕ್ಕೆ ಸಂದೇಹವೇನೂ ಇಲ್ಲ.

ಮಹನೀಯರಾದ ದೇವರಾಜಬಹದೂರವರ ಧರ್ಮಕೋಶಾಧಿಕಾರಿಗಳು ದೇಶ ಭಾಷೆಗೆ ಪ್ರೋತ್ಸಾಹಪಡಿಸುವಹಾಗೆ ಇತರ ಧಾರ್ಮಿಕರಾದವರು ಯಾವವಿಧವಾಗಿ ಯಾದರೂ ವಿದ್ಯಾರ್ಥಿಗಳಿಗೆ ಪ್ರೋತ್ಸಾಹವನ್ನುಂಟುಮಾಡಿದರೆ ೀಳ್ದಲ್ಲಿಯೇ ಈ ಭಾಷೆಯು ಉನ್ನತಸ್ಥಿತಿಯನ್ನುಹೊಂದಿ ಶೋಭಿಸುವುದು.

ಬಹುಮಾನಗಳು:—

(೧೦೦) ರೂಪಾಯಿಗಳು ದೇವರಾಜಬಹದೂರ್ ಧರ್ಮಕೋಶದಿಂದ ನಂಜನ ಗೂಡು ಮಃ ರಾಃ ಭಟ್ಟಾಶಾಸ್ತ್ರಿಗಳಿಗೆ ಶ್ರೀತಾಚರಿತ್ರೆಯನ್ನು ಬಾಲಕರಿಗೆ ತಿಳಿಯುವ ಹಾಗೆ ಲಲಿತವಾದ ಕನ್ನಡ ಪಟ್ಟಪದೀಗ್ರಂಥವಾಗಿ ಬರೆದದ್ದಕ್ಕೆ ಕೊಡಲ್ಪಟ್ಟಿತು.

(೧೦೦) ರೂಪಾಯಿಗಳು ಇದೇ ಫಂಡಿನಿಂದ ಈ ವರುಷ ಪಂಡಿತಪರೀಕ್ಷೆಯಲ್ಲಿ ಮೊದ ಲನೇಯವರಾಗಿ ತೇರ್ಗಡೆಯಾದ ಮಃ ರಾಃ ಜಯರಾಂವೆಂಕಟಾಚಾರ್ಯರಿಗೆ ಕೊಡಲ್ ಪಟ್ಟಿತು.

ಟಿ. ರಾಮಾಶಾಸ್ತ್ರಿ. ರಂಗನಾಥಚಕ್ರವರ್ತಿ. ಎಸ್. ವೆಂಕಟಕೃಷ್ಣಾಚಾರ್. ಕೆ. ನಂಜುಂಡಶಾಸ್ತ್ರಿ. ಜಿ. ನಂಜುಂಡಯ್ಯ. ವ್ಯಾಸರಾವ್.

ಈ ವಿದ್ಯಾರ್ಥಿಗಳಿಗೆ ಗೌರ್ನಮೆಂಟಿನಿಂದ ಪುಸ್ತಕಗಳ ಬಹುಮಾನವು ದೊರೆ ಯಿತು:

ಸಭಾನಾಯಕರು ಈ ಮುಂದಿನ ಉಪನ್ಯಾಸವನ್ನು ದಯಮಾಡಿಸಿದರು.

ಮಹನೀಯರೆ!-ದೇವರಾಜಬಹದ್ದೂರವರು ವಿದ್ಯಾಪ್ರೋತ್ಸಾಹಕ್ಕಾಗಿ ಕೊಟ್ಟಿರುವ ದ್ರವ್ಯಸಹಾಯದಿಂದ ಈಗ ಕೊಡಲಟ್ಟ ಬಹುಮಾನವನ್ನು ಕೊಡಲು ಅಗಾಧ ನಾಧಿಪತ್ಯವನ್ನು ಅಪೇಕ್ಷಿಸಲ್ಪಟ್ಟಮೇಲೆ ಹಿಂಸಲು ಸಂತೋಷಿಸಿದೆನು.

ವಿದ್ಯಾಪ್ರೋತ್ಸಾಹದಲ್ಲಿ ಬಹಳ ಅಕ್ಕರೆಯುಳ್ಳ ನಮ್ಮ ಶ್ರೀಮನ್ಮಹಾರಾಜರವರು ಘನವನ್ನುಹೊಂದಿದ ನಮ್ಮ ದಿವಾನರಿಂದ ಬಹಳ ಶ್ಲಾಘನೀಯವಾಗಿ ನಡೆಸಲ್ಪಟ್ಟ ನಮ್ಮ ಮಹಾರಾಜರವರ ರಾಜ್ಯಭಾರವು ಬಹಳ ಶಕ್ತರೂ ಉತ್ಸಾಹಿಗಳೂ ಆದ ನಮ್ಮ ಎಜುಕೇಷನ್ ಸೆಕಟರಿ ಮೆ॥ ಭಾಭಾ ಸಾಹೇಬರವರು ಕೂಡಿದಮಟ್ಟಿಗೆ ನಾನಾಪ್ರಕಾರವಾಗಿ ವಿದ್ಯಾಭಿವೃದ್ಧಿಯನ್ನು ಮಾಡುತ್ತಲಿರುವರು. ಈಗ ನೂತನವಾಗಿ ಸ್ಥಾಪಿಸಲ್ಪಟ್ಟ ಈ ನಾರ್ಮಲ್‌ಸ್ಕೂಲ್ ನಮ್ಮ ದೇಶದ ಎಲ್ಲಾಜನರಿಗೂ ಜ್ಞಾನೋದಯವನ್ನುಂಟುಮಾಡುವುದಕ್ಕೂ ಮುಖ್ಯವಾಗಿ ದೇಶಾಭಿವೃದ್ಧಿಗೆ ಕಾರಣೀಕರಾದ ಕಷ್ಟಜೀವಿಗಳಿಗೆ ದೇಶೈಶ್ವರ್ಯಾಭಿವೃದ್ಧಿಗೆ ಅನುಕೂಲವಾದ ತಿಳಿವಳಿಕೆಯನ್ನುಂಟುಮಾಡುವುದಕ್ಕೂ ಬಹಳ ಯೋಗ್ಯವಾದ ಏರ್ಪಾಡಾಗಿರುವುದು. ಸಾಧಾರಣ ಜನರಿಗೆ, ಎಲ್ಲಾವಿಷಯವನ್ನು ದೇಶಭಾಷೆಯ ಮೂಲಕವಾಗಿಯೇ ತಿಳಿಸಬೇಕು. ಇದಕ್ಕಾಗಿ ದೇಶಭಾಷೆಯನ್ನು ಚೆನ್ನಾಗಿತಿಳಿದ ಎಲ್ಲಾವಿಷಯಗಳಲ್ಲಿಯೂ ಗಟ್ಟಿಗರಾದ ಉಪಾಧ್ಯಾಯರುಗಳನ್ನು ಸಿದ್ಧಪಡಿಸಿದಲ್ಲದೆ ಸಾಧ್ಯವಾಗುವುದು. ಈ ಸ್ಕೂಲ್ ಪ್ರಾರಂಭವಾಗಿ ಸ್ವಲ್ಪಕಾಲವೇ ಆದಾಗ್ಯೂ ಕ್ರಮೇಣ ದೇಶಕೆಲ್ಲಾ ವಿದ್ಯವನ್ನು ಹರಡುವದಕ್ಕೆ ಅನುಕೂಲರಾದ ಒಳ್ಳೆಯ ಉಪಾಧ್ಯಾಯರುಗಳು ಲಭಿಸುವಹಾಗೆ ಮಾಡುವುದು.

ಜನಗಳಿಗೆ ನುಡಿ, ನೀತಿ, ಜ್ಞಾನಗಳನ್ನು ವೃದ್ಧಿಪಡಿಸಿ ವಿದ್ಯಾವಂತರನ್ನಾಗಿ ಮಾಡಬೇಕೆಂದು ನಮ್ಮ ಗಾವರ್ನಮೆಂಟ್ ಸರ್ವಪ್ರಯತ್ನಮಾಡುತ್ತಿರುವಲ್ಲಿ ನಾವೆಲ್ಲಿರೂಕೂಡ ನಮ್ಮ ಯೋಗ್ಯತೆಗನುಸಾರವಾಗಿ ವಿದ್ಯಾವಿಷಯದಲ್ಲಿ ಸಹಾಯಮಾಡಲು ಪ್ರವರ್ತಿಸುವುದು ನ್ಯಾಯವಾಗಿರುವುದು.

ವಿದ್ಯಾವಿಷಯದಲ್ಲೇ ಬಹಳ ಉತ್ಸಾಹವುಳ್ಳ ಮೆ॥ ರಾ॥ ರಾಯಬಹದ್ದೂರ್ ರಾಜಕಾರ್ಯ ಪ್ರಸಕ್ತರಾದ ನರಸಿಂಹಯ್ಯಂಗಾರ್ಯರವರು ಸೆಕಟರಿಯವರಾಗಿರುವ ನಮ್ಮ ಈ ದೇವರಾಜಬಹದ್ದೂರವರ ಧರ್ಮಕೋಶಾಧಿಕಾರಿಗಳ ಕಮಿಟಿಗೆ ವಿದ್ಯಾವಿಷಯದಲ್ಲಿ ನಾನಾಪ್ರಕಾರವಾಗಿ ಸಹಾಯಮಾಡುವುದಕ್ಕೆ ಅನುಕೂಲವಾಗುವಹಾಗೆ ಮಾಡಿದ ದೇವರಾಜಬಹದ್ದೂರವರ ಧರ್ಮಪತ್ನಿಯನ್ನನುಸರಿಸಿ ನಮ್ಮ ದೇಶದ ಅನೇಕಮಹನೀಯರು ದೇಶಭಾಷಾಮೂಲಕವಾಗಿ ಪ್ರಜೆಗಳಿಗೆಲ್ಲಾ ವಿದ್ಯೆಯನ್ನು ಹರಡುವ ಪ್ರಯತ್ನದಲ್ಲಿ ಸಹಾಯಮಾಡುವರೆಂದು ನಂಬಿರುವೆನು. ಇಂಥಾವರ ಸಹಾಯವು

ಎಷ್ಟೇ ಕದೆಮೆಯಾಗಿದ್ದರೂ ಸದ್ವ್ಯಯವಾಗುವದು ಅಲ್ಲದೆ ದೇವರಾಜಬಹದ್ದೂ
ರವರ ಹೆಸರು ದೇಶದಲ್ಲಿ ಪ್ರಸಿದ್ಧಿಯಾಗುವಹಾಗೆ ಇವರ ಹೆಸರೂಕೂಡ ಶಾಶ್ವತವಾ
ನಿಲ್ಲುವುದು. ಸಜ್ಜನಾನಾಯಕರಿಗೆ ವಂದನೆಯನ್ನು ಹೇಳಿ ಶ್ರೀಮನ್ಮಹಾರಾಜರವ
ಅಭಿವೃದ್ಧಿಯನ್ನು ಪ್ರಾರ್ಥಿಸಿ ಸಭೆಯು ಹೊರ್ಪಡಿಸಿತು.

ಕೆ. ನಾರಾಯಣ್ಯೆಂಗಾರ್. ಬಿ. ಎ

ಕ್ಷಕಟಣೆಯು.

ಸಿರಿಗನ್ನಡಂಗೆಲ್ಗೆ.

ಧಾರವಾಡ ಕರ್ನಾಟಕ ವಿದ್ಯಾರ್ಥಿಸಂಘದ ಇನಾಮಿನ ಪರೀಕ್ಷೆಯ

ಎಲ್ಲ ಜನರಿಗೆ ತಿಳಿಸುವದೇನಂದರೆ—ಕನ್ನಡಭಾಷೆಯ ಅಭ್ಯಾಸವ ಬೆಳೆಯಿಸೋದಕ್ಕಂ
ಸಂಘದಿಂದ ಹೋದವರುಷ ೧೦೫ ರೂಪಾಯಿಗಳ ಇನಾಮು ಇಡಲ್ಪಟ್ಟಿದ್ದವು. ಆ
ವರುಷವಾದರೂ ಅದೇ ಉದ್ದೇಶದಿಂದ ಕೆಳಗೆ ಬರೆದಂತೆ ಇನಾಮುಗಳು ಇಡಲ್ಪಟ್ಟಿವೆ

ವಿಷಯಗಳ ಹೆಸರು.	ಮೊಬಲಗು ರೂಪಾಯಿ.	ಇನಾಮು ಇಟ್ಟ ವರ ಹೆಸರು.
೧. ಸಾಯಣಾಚಾರ್ಯರ ಚರಿತ್ರವನ್ನು ಬರೆದವರಿಗೆ	೧೫	ಮು॥ರಾ॥ ರಾಘವೇಂದ್ರರಾವ ಗಂಗೋಸಬ್ಬಜಜ್ಜಹಾವೇರಿ.
೨. ಹಿಂದುದೇಶದ ಸ್ತ್ರೀಯರ ಚರಿತ್ರೆಯೂ ಅದರಿಂದ ಸಮಾಜದಮೇಲೆ ಆಗುವ ಫಲಿತಾಮವೂ ಅದನ್ನು ನಿವಾರಿಸುವ ಉಪಾಯಗಳು, ಈ ವಿಷಯದ ಮೇಲೆ ಅಚ್ಚು ಹಾಕಿದರೆ ೫೦ ಪುಟಗಳಾಗುವಷ್ಟು ಪುಸ್ತಕವನ್ನು ಬರೆದವರಿಗೆ	೧೫	ಮು॥ ರಾ॥ ಕೃಷ್ಣಮೂರ್ತಿರಾವರ ಮು॥ರಾ॥ ತಿರುಮಲರಾವ ದೊಡ್ಡ.
೩. ಸ್ವದೇಶಪ್ರೀತಿ, ಸ್ವಭಾಷಾಪ್ರೀತಿ, ಪ್ರಾಮಾಣಿಕತನ, ವಿದ್ಯೆಯಲ್ಲಿ ಕುತುಕ ಮುಂತಾದ ಗುಣಗಳು ಓದಿದವರ ಮನಸ್ಸಿನಲ್ಲಿ ಬರುವಂತೆ ಒಂದು ಹೊಸ ಕಥೆಯನ್ನು ಕನ್ನಡದಲ್ಲಿ ಬರೆದವರಿಗೆ. ಈ ಕಥೆಯು ಅಚ್ಚು ಹಾಕಿದರೆ ಸುಮಾರು ದ್ವಾದಶ ಪತ್ರಿಗಳು ೫೦ ಪುಟಗಳಾಗಬೇಕು.	೧೦	ಮು॥ರಾ॥ ಶಾಮರಾ ಎಮ್. ಎ. ಅಸಿಸ್ಟಂಟ ಎಜ್ಯುಕೇಶನಲ್ ಕ್ರಟರಿ, ಮೈಸೂರ

ಓದಿಕೊಂಡು ಬಂದು ಉತ್ತಮ ಪರೀಕ್ಷೆ ಕೊಟ್ಟವರಿಗೆ.

೪. ಶಬ್ದಾನುಶಾಸನ ಪೂರಾ ಓದಿ ಉತ್ತಮ ಪರೀಕ್ಷೆ ಕೊಟ್ಟವರಿಗೆ	೩೦	ಕರ್ನಾಟಕ ವಿದ್ಯಾವರ್ಧಕಸಂಘ.
೫. ಕವಿವರವಾಚಕೃತ ಕನ್ನಡ ಮಹಾಭಾರತದ ಉದ್ಯೋಗಸಭಾಪರ್ವಗಳನ್ನು ಓದಿ ಪರೀಕ್ಷೆ ಕೊಟ್ಟವರಿಗೆ	೧೫	ಮ ॥ ರಾ ॥ ಕೇಶವ ರಾವ ಬೆಟ್ಟಗುಬ್ಬಿ.
೬. ಉತ್ತರರಾಮಚರಿತ್ರೆ ವಿಕ್ರಮೋರ್ವಶೀಯ ವೆಂಬೆರಡು ನಾಟಕಗಳನ್ನು ಓದಿ ಪರೀಕ್ಷೆ ಕೊಟ್ಟವರಿಗೆ.	೧೫	ಮ॥ರಾ॥ ಶ್ರೀನಿವಾಸ ಅಯಂಗಾರಸೆಟ್ಟೂರ ಅಡ್ವೋಕೇಟ ಹಾಯ ಕೋರ್ಟ ಮುಂಬಯಿ
೭. ಗಂಜಾಕಲ್ಯಾಣವನ್ನು ಓದಿ ಉತ್ತಮ ಪರೀಕ್ಷೆ ಕೊಟ್ಟವರಿಗೆ.	೧೫	ಮ॥ರಾ॥ ರಾಮಚಂದ್ರರಾವ ದೇಶಪಾಂಡೆ ಎಮ್. ಎ.
೮. ವಿಜ್ಞೇಶ್ವರನ್ನಬಸವಪುರಾಣವನ್ನು ಓದಿ ಉತ್ತಮ ಪರೀಕ್ಷೆ ಕೊಟ್ಟವರಿಗೆ.	೨೦	ಮ ॥ ರಾ ॥ ವಿರಪಾಕ್ಷಪ್ಪ ವೀರಸಂಗಪ್ಪಾ ಓಮಖಂಡಿ ಲೋಕಲ ಬೋರ್ಡ ಮೆಂಬರ ಅರಳಿಕಟ್ಟಿ.
೯. ಜೈಮಿನಿಭಾರತ ೬, ೨೬, ೩೦, ೩೧, ೩೨, ೩೩ನೆಯ ಸಂಧಿಗಳನ್ನು ಓದಿ ಉತ್ತಮ ಪರೀಕ್ಷೆ ಯನ್ನು ಕೊಟ್ಟವರಿಗೆ.	೧೦	ಮ।ರಾ। ನಾರಾಯಣ ಗುರುನಾಥಕರ ಗುದರಿ ಬಿ.ಎ.,ಎಲ್.ಎಲ್ಬಿ. ವಕೀಲ ಧಾರವಾಡ.

ಸಭೆಯಲ್ಲಿ ಉತ್ತಮ ಮಾತಾಡುವವರಿಗೆ.

೧೦. ರಾಜಶೇಖರ ವೈಷಭೇಂದ್ರವಿಜಯ ಇವುಗಳ ಸಾರಾಂಶವನ್ನು ಉತ್ತಮವಾಗಿ ಸಭೆಯಲ್ಲಿ ಮಾತಾಡಿದವರಿಗೆ.	೧೦	ಮ । ವೆಂಕಟರಂಗೊ ಕಟ್ಟಿ ಮಾಜಿಪ್ರಿನಿಸಿಪಾಲ ಟ್ರೇನಿಂಗ ಕಾಲೇಜು.
೧೧. ಶಾಲಿವಾಹನಶಕದ ಆರಂಭದಿಂದ ೧೫೬೫ರವರೆಗೆ ಆದ ಕರ್ನಾಟಕರಾಜ್ಯಗಳ ವೈಭವವನ್ನು ಸಭೆಯಲ್ಲಿ ಉತ್ತಮರೀತಿಯಿಂದ ಹೇಳಿದವರಿಗೆ.	೧೦	ಮ। ರಾ। ರಾಮಚಂದ್ರರಾವ ದೇಶಪಾಂಡೆ ಎಮ್. ಎ.

೧೨. ಕರ್ನಾಟಕದ ವಿದ್ಯಾಸ್ಥಿತಿ ಮತ್ತು ಅವರಲ್ಲಿ ಏನಾದರೂ ನ್ಯೂನತೆಗಳಿದ್ದರೆ ಅವುಗಳನ್ನು ಹೋಗಲಾಡಿಸುವ ಉಪಾಯಗಳ ಸಂಬಂಧದಿಂದ ಚೆನ್ನಾಗಿ ಮಾತಾಡಿದವರಿಗೆ.	೧೫	ಜೀವಣರಾವ ಬೆಟ್ಟಗೇರಿ ಬಿ. ಎ., ಎಲ್. ಎಲ್. ಬಿ. ವಕೀಲ ಧಾರವಾಡ
೧೩. ಹಿಂದುಸ್ಥಾದನ ಪೂರ್ವಸ್ಥಿತಿ ಸಾಂಪ್ರತ ಸ್ಥಿತಿಗಳ ನಡುವಿನ ಅಂತರ ಮತ್ತು ಅದರ ಸಂಪೂರ್ಣ ಕಾರಣಗಳನ್ನು ಸಭೆಯಲ್ಲಿ ಉತ್ತಮರೀತಿಯಿಂದ ಹೇಳಿದವರಿಗೆ.	೫	ಮಾ|ರಾ|ಶ್ರೀನಿವಾಸರಾವ ವೀಸಾಯಿ
೧೪. ಕರ್ನಾಟಕಸ್ಥರಿಗೆ ಪರದೇಶಪ್ರವಾಸದಿಂದ ಆಗತಕ್ಕ ಲಾಭಗಳನ್ನು ಉತ್ತಮರೀತಿಯಿಂದ ವಿವರಿಸಿದವರಿಗೆ.	೫	ಮಾ|ರಾ|| ಗುರಪ್ಪಾ ಶೆಟ್ಟಿ
೧೫. ತತ್ಸಮ, ತದ್ಭವ, ಅನ್ಯದೇಶಶಬ್ದಗಳಲ್ಲಿ ಒಂದೂ ಉಪಯೋಗಿಸದೆ ಅಚ್ಚಕನ್ನಡ ಶಬ್ದಗಳನ್ನು ಉಪಯೋಗಿಸಿ ಉಪನ್ಯಾಸವಾರರು ತಮಗೆ ಬೇಕಾದ ಒಂದು ವಿಷಯದ ಮೇಲೆ ಕನಿಷ್ಟಪಕ್ಷಕ್ಕೆ ೧೦ ನಿಮಿಷಗಳವರೆಗೆ ಸುರಸಭಾಷಣಮಾಡಿದವರಿಗೆ.	೫	ಮಾ|ರಾ| ವಿನಾಯಕಬಾಬಾಜಿ ಜೋಶಿ ಬಿ.ಎ., ಅಸಿಸ್ಟಂಟ ಮಾಸ್ತರ ಧಾರವಾಡ ಹಾಯಸೂಲ.
೧೬. ವಿದ್ಯೆ ಕಲಿತವರೆಲ್ಲರೂ ಬಹಳ ಮಾಡಿ ಸರಕಾರಿ ಕೆಲಸವನ್ನು ಬಯಸಿ ಆ ಪ್ರಕಾರದ ಪ್ರಯತ್ನಮಾಡಿ ಕೆಲಸ ಕಯ್ಯಾಗದಿರುವದರಿಂದ ನಿರಿಚ್ಛೆಗಳಾಗುತ್ತಾರೆ. ಅವರಿಂದ ಬೇರೆಬೇರೆ ದ್ರವ್ಯೋತ್ಪಾದಕ ಹೋಕಿಗಳಲ್ಲಿ ಜೀಳುವಂತೆ ವಿದ್ಯೆ ಕಲಿತವರ ಮನಸ್ಸಿನಲ್ಲಿ ಹುಟ್ಟುವಂತೆ ಸಂಭಾಷಣೆ ಮಾಡಿದವರಿಗೆ.	೫	ಮಾ|ರಾ| ಅಂಣರಾವ ಸವಿಲಿಸಿಸ್ಟಂಟ ಮಾಸ್ತರ ಟ್ರೇನಿಂಗ ಕಾಲೇಜ ಧಾರವಾಡ.
೧೭. ಉತ್ತರರಾಮಚರಿತ್ರ ವೇಣೀಸಂಹಾರವೆಂಬ ರಡು ನಾಟಕಗಳನ್ನು ಚನ್ನಾಗಿ ಓದಿ ಅವುಗಳ ಸಾರಾಂಶವನ್ನೂ ಫಲಿತಾರ್ಥವನ್ನೂ ಉತ್ತಮರೀತಿಯಿಂದ ಹೇಳಿದವರಿಗೆ.	೧೦	ಕರ್ನಾಟಕ ವಿದ್ಯಾರ್ಥಿ ಸಂಘ.

೧೪. ಅರ್ಥಶಾಸ್ತ್ರವನ್ನು ಓದುವದರಿಂದ ಉಂಟಾಗುವ ಲಾಭಗಳನ್ನು ಸಭೆಯಲ್ಲಿ ಚನ್ನಾಗಿ ವಿವರಿಸಿದವರಿಗೆ. } ೧೦ ಮು। ರಾ। ಸುಬ್ಬರಾವ ಪತನೀಸ ವಕೀಲ ಧಾರವಾಡ.

೧೫. ಮುಸಲಮಾನರಾಜ್ಯವ ಪೇಶವೇರಾಜ್ಯದ ಹಾಂಗೂ ಇಂಗ್ರೇಜಿ ರಾಜ್ಯವ ಜವಿಾನಬಾಬಿನ ಭಾರವು ರೈತರಮೇಲೆ ಹ್ಯಾಗೆ ಬೀಳುತ್ತದೆ? ಈ ವಿಷಯಕ್ಕೆ ಪೂರ್ಣ ಮಾಹೆತಿಯನ್ನು ಸಭೆಯಲ್ಲಿ ಚನ್ನಾಗಿ ಹೇಳಿದವರಿಗೆ. } ೧೫ ವ। ರಾ। ಹಣಮಂತರಾವ ಶಿರಹಟ್ಟಿ.

ಈ ಇನಾಮಗಳ ಸಂಬಂಧ ಪರೀಕ್ಷೆಯು ಜಯನಾಮಸಂವತ್ಸರದ ಕಾರ್ತೀಕ ಶುದ್ಧ ಪ್ರತಿಪದೆ ಸೋಮವಾರ ಅಂದರೆ ೧೮೯೪ನೇ ಇಸವಿ ಅಕ್ಟೋಬರ ತಾರೀಖು ೮ರಿಂದ ೩ ದಿವಸ ಅಂದರೆ ಬುಧವಾರದ ವರೆಗೆ ಆಗುವದು. ಪರೀಕ್ಷೆಗೆ ಬರುವ ಉಮೇದವಾರರು ಒಂದುತಿಂಗಳೊಳಗಾಗಿ ಅಂದರೆ ೧೮೯೪ನೇ ಸಪ್ತಂಬರನ ಒಳಗಾಗಿ ನಮ್ಮ ಕಡೆಗೆ ತಾವು ಗೆದುಗೊಂತ ವಿಷಯ, ತಮ್ಮ ಹೆಸರು, ವಿಳಾಸ, ವಯಸ್ಸು ಮುಂತಾದ್ದನ್ನು ಸ್ಪಷ್ಟವಾಗಿ ಬರೆದು ಅರ್ಜಿಯನ್ನು ಕಳುಹಿಸಬೇಕು. ಇನಾಮುಗಳಿಗಾಗಿ ಪುಸ್ತಕನಿಬಂಧಗಳನ್ನು ಬರೆದವರು ೧೮೯೪ನೇ ಅಕ್ಟೋಬರ ೧೮೯೪ನೇ ಇಸವಿಯ ಒಳಗಾಗಿ ಅವುಗಳನ್ನು ನಮ್ಮ ಕಡೆಗೆ ಕಳುಹಬೇಕು.

ಪುಸ್ತಕನಿಬಂಧಗಳನ್ನು ಬರೆಯತಕ್ಕವನಿಗೆ ವಯಸ್ಸಿನ ನಿರ್ಬಂಧವಿಲ್ಲ. ಮತ್ತು ಅವರಿಗೆ ಇನಾಮು ಕೊಡುವದಾದರೆ ಹಣವನ್ನೇ ಕೊಡುವೆವು. ಉಳಿದ ಉಮೇದವಾರರ ವಯಸ್ಸು ೩೦ ವರ್ಷಕ್ಕಿಂತ ಕಡಿಮೆ ಇರಬೇಕು. ಮತ್ತು ಅವರಿಗೆ ದೊರೆಯತಕ್ಕ ಇನಾಮಿನಲ್ಲಿ ಅರ್ಧಹಣ ಅರ್ಧಹಣದ ಪುಸ್ತಕಗಳು ಶಿಗುವವು.

ಆಯಾ ವಿಷಯಗಳ ಪರೀಕ್ಷೆಯಲ್ಲಿ ಎಲ್ಲರಿಗಿಂತ ಗುಣಗಳನ್ನು ಪಡೆದವರಿಗೆ ಮಾತ್ರ ಇನಾಮುಗಳು ದೊರೆಯುವವು. ಉಮೇದವಾರರು ಒಂದಕ್ಕಿಂತ ಹೆಚ್ಚು ವಿಷಯಗಳಲ್ಲಿ ಪರೀಕ್ಷೆಗೆ ಕೂಡ್ರಬಹುದು. ಆದರೆ ಒಂದಕ್ಕಿಂತ ಹೆಚ್ಚು ಇನಾಮು ದೊರಕಲಿಕ್ಕಿಲ್ಲ. ಉಮೇದವಾರರಿಗೆ ವ್ಯಾಕರಣಜ್ಞಾನವು ಚನ್ನಾಗಿರಬೇಕು.

ಸಂಘದಿಂದ ಒಮ್ಮೆ ಇನಾಮು ಪಡೆದವರು ತಿರುಗಿ ಅದೇ ವಿಷಯದಲ್ಲಿಯೇ ಪರೀಕ್ಷೆಗೆ ಕೂಡ್ರಲಾಗದು. ಇನಾಮು ದೊರೆತವರಿಗೆ ಸರಟಿಫಿಕೇಟುಗಳು ಕೊಡಲ್ಪಡುವವು.

ಧಾರವಾಡ ಕರ್ನಾಟಕ ವಿದ್ಯಾವರ್ಧನಸಂಘ,
ತಾ॥ ೫ನೇ ಮಾಹೆ ಮೇ ೧೮೯೪ನೇ ಇಸವಿ. } (*Sd.*) *R. H. Desapande.*
ಸನ್ಮಾನಿತ ಕಾರ್ಯದರ್ಶಿ ಕರ್ನಾಟಕ ವಿದ್ಯಾವರ್ಧಕಸಂಘ.

A List of Kannada words, the approved form of which was accepted by the Sub-Committee.

Different forms of words.	Approved form.	Remarks if any.
ತಿಳುಹು, ತಿಳುಹಿಂಸು, ತಿಳಿಸು, ತಿಳಿಹಿಂಸು, ತಿಳಿಯಿಸು ತಿಳಹು ..	ತಿಳುಹು, ತಿಳುಹಿಂಸು, ತಿಳಿಸು, ತಿಳಿಯಿಸು	
ಕರೆ, ಕರೆಯಿಸು, ಕರೆಸು, ಕರಿಸು ..	ಕರೆ, ಕರೆಯಿಸು, ಕರಿಸು	
ತಡೆ, ತಡೆಯಿಸು, ತಡೆಸು, ತಡಿಸು ..	ತಡೆ, ತಡೆಯಿಸು	
ತಾವರೆ, ತಾಮ್ರ, ತಾಂಬ್ರ ..	ತಾಮ್ರ	
ತಾರನಂತೆ, ತರದಂತೆ ..	ತಾರದಂತೆ	
ತಂತಮ್ಮ, ತಮ್ಮತಮ್ಮ	ತಂತಮ್ಮ, ತಮ್ಮತಮ್ಮ	
ತೊಂಬತ್ತು, ತೊಂಭತ್ತು	ತೊಂಬತ್ತು	
ತಿನ್ನಿಸು, ತಿನಿಸು, ತಿನ್ನಿಸು	ತಿನ್ನಿಸು, ತಿನಿಸು	
ಹುಡಕು ಹುಡುಕು	ಹುಡುಕು	

ಚುರಕು, ಚುರುಕು		ಚುರುಕು	
ಮುರಕು, ಮುರುಕು	..	ಮುರುಕು	
ಮುಸಕು, ಮುಸುಕು	..	ಮುಸುಕು, ಮುಸುಗು	
ಗುರತು, ಗುರುತು	..	ಗುರುತು	
ಬಿರಕು, ಬಿರುಕು	..	ಬಿರುಕು	
ತಿರಗ, ತಿರುಗ, ತಿರಿಗ	..	ತಿರುಗು	
ತಗಣೆ, ತಗಣೆ, ತಿಗಣೆ	..	ತಗಣೆ, ತಿಗಣೆ	
ತಡಗಣೆ, ತಡುಗುಣೆ	..	ತಡುಗುಣಿ, ತಡಗಣಿ	
ತಾವ್ನವ, ತೇವ	..	ತೇವ	
ತೋಟ್ಟ, ತೋಂಟ	..	ತೋಟ್ಟ, ತೋಂಟ	
ತುಗರಿ, ತೊಗರಿ, ತೊಗರಿ	..	ತುಗರಿ, ತೊಗರಿ	(ತುವರಿ, ತೊವರಿ)
ತಾತಾನ್ಸರ (?)	..	ತಾತಾನ್ಸರ	
ತಿನ್ನುವಮು, ತಿನ್ನೋನ್ದು	..	ತಿನ್ನುವುದು	
ತಿಳಿಯಿತು, ತೆಳಿಯತು, ತಿಳೀತು	..	ತಿಳಿಯಿತು	
ತೆರಿಸು, ತೆವಿಯಿಸು	..	ತೆರಿಸು (ದಂಡ), ತೆವಿಯಿಸು (ಬಾಗಿಲು)	
ತೆವಿಗೆ, ತೆರಗೆ		ತೆರಿಗೆ	
ಕೊಡಿಸು, ಕೊಡಸು	..	ಕೊಡಿಸು	
ತಕ್ಕೊಂಡು, ತೆಕ್ಕೊಂಡು, ತೆಗದುಕೊಂಡು, ತೆಗೆದು ಕೊಂಡು, ತೆಗದುಕ್ಕೊಂಡು	..	ತೆಗೆದುಕೊಂಡು (?)	

ಲಿಪ್ಯಂತರ ಪ್ರಯೋಗ.

ವಿಯುತ್ತಾನೆ, ವಿಜೀತಾನೆ	ವಿಯುತ್ತಾನೆ
ಗಿಯುತ್ತಾನೆ, ಅಗೀತಾನೆ	ಅಗಿಯುತ್ತಾನೆ
ಬಿಂಡೆ, ಬೆಲೆ	ಬೆಲೆ
ಗಳು, ಬಿಗಳು	ಬಿಗಳು
ಬಡುಕು ಮುಮುಕು, ಘುಮುಕು	ಮುಮ್ಮಕ್ಕು, ಮುಮುಕು
ಡೆ, ನಡೆಯುನು, ನಡಿನು, ನಡೆಸು, ನಡನು	ನಡೆ, ನಡೆಯುನು, ನಡಿನು
(ನುಡಸು, ಕರಸು)	ನುಡಸು
ನಿಸ್ಸ, ನಿಸ್ಸ, ನಿಸ್ಸ, ನಿಸ್ಸ	ನಿಸ್ಸ
ನಿಸ್ಸಿನು, ನಿಸ್ಸಿಯನು (ನಿಸ್ಸಿಯು + ನನು)	ನಿಸ್ಸಿನು, ನಿಸ್ಸಿಯನು
ನಿಸ್ಸೆನು, ನಣಿಯನು	ನಿಸ್ಸೆನು, ನಣಿಯನು
ಸಂಬಿಕೆ, ಸಂಬಿಗೆ, ಸಂ...ಗೆ, ನಡಿಸ್ಸಳ	ಸಂಬಿಕೆ, ಸಂಬಿಗೆ, ಸಂಬಿಗೆ
ನಿನಿಯನು, ನಿನಸು	ನಿನಿಯನು, ನಿನಸು
ಎಲ್ಲನು, ಎಲಿನು, ಎಲ್ಲನು	ಎಲ್ಲನು, ಎಲಿನು
ಗನು, ನಗನು, ನಗನು	ನಗಿನು
ನಿನನು, ನಿನಿನು, ನಿನಿನು	ನಣಿಯನು
ಮಡುವೆ, ನಡಿಪೆ, ನಡೆಪೆ	ಮಡುವೆ
ಬೂಣ, ನೊಳ	. ಕಣ
ಮಡಿದ್ದೆನ್ನ (?)	ನಡದ
ಕ್ಕಿನ, ಸಾಲ್ಯಿನ	ಕ್ಕಿನ

ಕಾಯಿ, ಹಣ್ಣು, (ಹಸ್ತಾನ)	ಗಾದ
ಸಾಳಿಯಗಾರ, ಸಾಳೇಗಾರ, ಸಾಳ್ಯಗಾರ	
ಕೆಲಸ, ಪರಿಣಾ	
ಸಾಲಿಚಿ, ಸಾಲಿಚಿ, ಸಾಚಿ, ಸಾಚಿ	ಸಾಲಿಚಿ
ಹೊರಯಾಸು, ಹೊರ್ಕೈಸು	ಹೊರಯಾಸು, ಹೊರ್ಕೈಸು
ಬರಿ, ಬರಿಯಾಸು, ಬರಿಸು, ಬರಿಸು, ಬರಸು	ಬರಿ, ಬರಿಯಾಸು, ಬರಿಸು
ಟೀಂಟಿ, ಟ್ಯಾಂಟಿ	ಟೀಂಟಿ, ಟೀಂಟಿ
ಬಿತ್ತಿ, ಛಿತ್ತಿ,	ಬಿತ್ತಿ, ಛಿತ್ತಿ
ಜೋಡ, ಜಾಡ	ಜೋಡ
ಬಾರಪಂತಿ, ಬರಪಂತಿ	ಬಾರಪಂತಿ
ಬೈದನು, ಬಯ್ದನು	ಬೈದನು, ಬಯ್ದನು
ಬೆಳಿದನು, ಬೆಳಿದನ್ನು, ಬೆಳಿದುನ್ನು	ಬೆಳಿದುನ್ನು
ಬಿಸಿನೀರು, ಬಿಸುನೀರು (ಬಿಚ್ಚ ನೀ+ನೀರು ಶ.ಮು. 182)	ಬಿಸುನೀರು, ಬಿಸಿನೀರು
ಬಳಿಯಲ್ಲಿ, ಬಳ್ಳಿ	ಬಳಿಯಲ್ಲಿ
ಬಿಸಲು, ಬಿಸಲು	ಬಿಸಲು
ಬಾಗಿಲು, ಬಾಗಲು	ಬಾಗಿಲು
ಬೆಸರು, ಬೆಸ್ಸರು	ಬೆಸರು,
ಬೊಂಬೆ, ಗೊಂಬೆ	ಬೊಂಬೆ
ಬಟ್ಟಾಣಿ, ಬಟಾಣಿ	ಬಟ್ಟಾಣಿ, ಬಟಾಣಿ

ಬರೀದು, ಬರಿದು
ಬೈಗಳ, ಬೈಗಳ
ಬೊಗಳು, ಬಗಳು, ಬೊಗಳು
ಬೋಗಣಿ, ಬೋಗುಣಿ, ಬೋಗೂಣಿ
ಭರವಸ
ಬೊಕ್ಕಸ, ಬಕ್ಕಸ
ಬಂದುದರಿಂದ, ಬಂದದ್ದರಿಂದ
ಬೇಗ, ಬ್ಯಾಗ, ಬೇಳೆ, ಬ್ಯಾಳೆ
ಬಿರುದು, ಬಿಡದು
ಬಯ್ಯುತ್ತಾನೆ, ಬೈಯ್ಯುತ್ತಾನೆ, ಬೈತಾನೆ
ಭಾವಿ, ಬಾವಿ
ಬಿಡುಗಡೆ, ಬಿಡುಗಡೆ
ಹಸರು, ಹಸುರು
ಕುದರೆ, ಕುದುರೆ
ತಿರುಪ್ಪ, ತಿರುಪ್ಪ
ಬಾರಯ್ಯ, ಬಾರಿಯ್ಯ
ಮುಚಿಕೆ, ಮುಚಕೆ
ಇಳಿದು, ಇಳಿದು
ಬಂದನು, ಬಂದನು

ಬರಿದು
ಬೈಗುಳ, ಬಯ್ಗುಳ
ಬೊಗಳು
ಬೋಗಣಿ, ಬೋಗುಣಿ
ಭರವಸ
ಬೊಕ್ಕಸ
ಬಂದುದರಿಂದ
ಬೇಗ, ಬೇಳೆ
ಬಿರುದು
ಬಯ್ಯುತ್ತಾನೆ, ಬೈಯುತ್ತಾನೆ
ಭಾವಿ
ಬಿಡುಗಡೆ
ಹಸುರು
ಕುದುರೆ
ತಿರುಪ್ಪ
ಬಾರಯ್ಯ, ಬಾರಿಯ್ಯ
ಮುಚಕೆ (fold) ಮುಚಕೆ (pot)
ಇಳಿದು
ಬಂದನ

ಸಂಖ್ಯೆ, ಸೆಟ್ಟರು	ನಂಖ...
ಬಿಳಿಗೆ, ಬಿಳಿಗೆ, ಬಿಳಿಗೆ, ಬಿಳಿ, ೧	ಬಿಳಿಗೆ, ಬಿಳಿ, ೧
ಮಂಯ್, ಪೆಂ	ಮೊಯ್, ಪೆಂ, ಮೊಯ್
ಮಂಯ್ಯನ್ನು, ಪೆಂಯನ್ನು	ಮೊಯ್ಯನ್ನು, ಪೆಂಯನ್ನು
ಮಾಸೆ, ಮಾಸೆ	ಮೀಸೆ
ಹೊದಲನಿಯ ಭಾಗ, ಹೊದಲನೇ ಭಾಗ (ಕೂಡ್ರ ದರ್ಪ, 191, ಪ. ಪಾ. 18ಲ)	ಹೊದಲನಿಯ ಭಾಗ, ಹೊದಲನೇ ಭಾಗ
ಹೊದಲಿನಿಂದ, ಹೊದಲಿಂದ	ಹೊದಲಿನಿಂದ, ಹೊದಲಿಂದ
ಮೀ, ಮಾ	ಮೀ, ಮಾ
ಮಡಿಲು, ಹೊತ್ತಲು, ಹೊಡು, ಹೊಡ್ಡ	ಮಡಿಲು, ಮಡಲು
ಮಿಗಸು, ಮಿಗಸು, ಮಿಕ್ಕಿನ	ಮಿಗಸು
ಮರಲು, ಮಣಲು	ಮರಲು, ಮಣಲು
ಹೊಗು, ಮುಗು	ಮುಗು
ಹೊಸಳಿ, ಮುಸಳಿ	ಹೊಸಳಿ
ಹೊಸರು, ಮುಸರು	ಹೊಸರು
ಮುಲನಾಡು ಮಲಿನಾಡು	ಮಲಿನಾಡು
ಮುಕ್ಕಳಿಸು, ಮುಕ್ಕಳಿಸು	ಮುಕ್ಕಳಿಸು
ಮಿದುಳು, ಮಿದುಳು	ಮಿದುಳು

ಮಗ್ಗುಲು, ಮಗ್ಗುಲು, ಪೊಗ್ಗುಲು :
ಮಕ್ಕರಿ, ಮುಂಕರಿ :
ಮೂಲಿ, ಮೂಲಡೆ, ಪೊಲಿ :
ಪೊಂಡ, ಮುಂಡ :
ಮೊಗ್ಗು, ಪೊಗ್ಗು :
ಮನುಷಿ, ಮನುಷಿ :
ಮುಚ್ಚಂಜಿ, ಮುಡಿಸಂಜಿ, ಮೂಸಂಜಿ :
ಮರಸು, ಮರಿಯಾಸು, ಮನಿಸು, ಮರಿಹಿಸು :
ಮುಳಿಗು, ಮುಣಗು, ಮುಳುಗು, ಮುಣಗು :
ಪೊಕ್ಕ, ಮಕ್ಕ, ಮುಖ, ಪೊಱು, ಮಱು, ಪೊಗ :
ಮಲಗಿಕೊ, ಮಲಕ್ಕೊ, ಮಲಗೆಲ್ಲ :
ಮನೆಯುತ್ತ, ಮನೆಯುಚ್ಚ :
ಇಳಿಯುತ್ತಾನೆ, ಇಳ್ಳೋತಾನೆ :
ಮುಗಿತು, ಮುಗೀತು :
ಯಾವತ್ತಾದ, ಯಾವಾತ್ತಿನ :
ಯಮುರುಗೊಳ್ಳು, ಇಡಿರುಗೊಳ್ಳು :
ರಾತ್ರಿ, ರಾತ್ರಿ. (ಸಂಸ್ಕೃತ)
ಪಟಿಯಮ್ಮ, ರಮಮ್ಮ :
ಲೆಕ್ಕ, ಲೆಖ್ಖ :

ಮಗ್ಗುಲು
ಮಕ್ಕರಿ, ಮುಂಕರಿ, ಮುಂಕಣಿ
ಮೂಲಿ, ಮೂಲಡೆ, ಪೊಲಿ, ಮಲಿ, (ಪೊಲಿಗೆ)
ಪೊಂಡೆ
ಪೊಗ್ಗು, ಪೊಗ್ಗೆ
ಮನುಷಿ
ಮುಚ್ಚಂಜಿ
ಮರಸು,
ಮುಳುಗು, ಮುಣಗು,
ಮುಖ, ಪೊಗ
ಮಲಗಿಕೊ
ಮನೆಯುತ್ತ್ರಿ
ಇಳಿಯುತ್ತಾನೆ
ಮುಗಿಯಿತು
ಯಾವತ್ತಿನ
ಎಮುರುಗೊಳ್ಳು, ಇಡಿರುಗೊಳ್ಳು
ರಾತ್ರಿ
ಪಟಿಯಮ್ಮ
ಲೆಕ್ಕ.

ನಾಸಿ, ನಾಶಿ	ನಾಸಿ
ನಿಂಗೆ, ನಿನಗೆ, ನಿಮಗೆ, ನಿಮಿಗೆ, (ನಿಱಿಗಂ)	ನಿನಗೆ
ಪಿಗಸು, ಪಿಗಸು, ಪಿಚ್ಚಸು	ಪಿಚ್ಚಸು
ಪೀಸಿ, ಪೀಸಿ, (ಪೀಲಿಯಾ—ಸಂಸ್ಕೃತ)	ಪೀಲಿಸು
ಪೆಟ್ಟು, ಪೆಟ್ಟು, (ಪೆಟ್ಟಿ)	ಪೆಟ್ಟು
ಪೊಂಸು, ಪೆಚ್ಚಸು, (ಪೊಂಸು = ಪಡೆದ + ಇಸು)	ಪೊಂಸು
ಪೆರೆ, ಪೆರೆ	ಪೆರೆ
ಪೇಲಿಸು, ಪೇಲಿಸು	ಪೇಲಿಸು
ಪೆರಗು, ಪೆರಗು, ಬರಗು	ಪೆರಗು
ಪೇಳಿಸು, ಪೇಳಿಸು	ಪೇಳಿಸು
ಪೆಸಿ, ಪೊಸಿ	ಪೆಸಿ, ಪೊಸಿ
ಪೊಳ್ಪು, ಪಳ್ಪು	ಪೊಳ್ಪು
ಪೇಗಿಕಾಯಿ, ಪೇಗಿಕಾಯಿ	ಪೇಗಿಕಾಯಿ
ಪೇವಗೆ, ಪಾವಗೆ	ಪೇವಗೆ
ಪರಿಪೊಂತು, ಪರಿಪೊಂತು	ಪರಿಪೊಂತು, ಪರಿಪ್ರೊತ್ತು
ಪರಡಿ, ಪರ್ಜೆ, ಪಾರಿ	ಪರಡಿ, ಪಾರಿ, ಪರತಿ
ಪಡಿಯು, ಪಡಿಯು, ಪಡಿದು, ಪಡೆದು	ಪಡಿಯು, ಪಡಿದು
ಪಡಿಲಾಗಿ, ಪೊಡಲ್ಗಾಗಿ	ಪಡಿಲಾಗಿ
ಸಂಗಡಿ, ಸಂಗಡಿ, ಸಂಗಾತಿ	ಸಂಗಡಿ, ಸಂಗಾತಿ

ಹೇಗೆ, ಹಾಗ್ಯಗೆ, ಹಾಗ್ಯಂಗೆ	:	ಹೇಗೆ, ಹಾಗ್ಯಗೆ	
ಹಸು, ಹಸ	:	ಹಸು	
ಹುಟ್ಟುಸ್ವಾದು, ಹುಟ್ಟುಸ್ವಾನದು (ಹುಟ್ಟುಸ್ವಾದು-ಶ.ನಾ.225)		ಹುಟ್ಟುಸ್ವಾದು	
ಹೊರಡು ಹೊರ್ತು, ಹೊರಡೆ	:	ಹೊರಡು	
ಹೊಲದುದರಿಂದ, ಹೊಲದುದರಿಂದ	:	ಹೊಲದುದರಿಂದ, ಹೊಲದಿಂದ	
ಹೊಗಸು, ಹೊಗಸು, ಹೊಕ್ಕಸು	:	ಹೊಗಸು	
ಹೊಡೆಸು, ಹೊಡಿಸು, ಹೊಡೆಯಿಸು, ಹೊಡಿಸು	:	ಹೊಡೆಯಿಸು, ಹೊಡಿಸು	
ಹರಕೆ, ಹರಿಕೆ	:	ಹರಕೆ	
ಹೊಸಲು, ಹೊಸಿಲು	:	ಹೊಸ್ಲು	
ಹೆಂಚು, ಹಂಚು	:	ಹೆಂಚು (tiles) ಹಂಚು (distribute)	
ಹುಣಸೆ, ಹುಳಿ (ಮರ)	:	ಹುಣಿಸೆ	
ಹೊಲಯುವ, ಹೊಲೆಯುತ	:	ಹೊಲೆಯುವ, ಹೊಲೆಯುತ	
ಹುಳಿಗನ್ನಡ, ಹಳಿಕನ್ನಡ, ಹಳಗನ್ನಡ	:	ಹಳಗನ್ನಡ	

ಬತ್ತ.

ಬೆಳೆಯುವ ಸ್ಥಳ.

ಬತ್ತವು ಜೈನಾ, ಅರೇಬಿಯಾ, ಸಿರ್ಕೊ, ಇಂಡಿಯಾ, ಬರ್ಮ, ಸುಮಾತ್ರಾ, ಪರ್ಷಿಯಾ, ಈಜಿಪ್ಟ್, ಮೆಡಗಾಸ್ಕರ್, ಇಟಲಿ, ಸ್ಪೈನ್, ಉತ್ತರ ಅಮೆರಿಕಾಖಂಡದ ವರ್ಜೀನಿಯಾ, ಕೆರೋಲಿನಾಪ್ರಾಂತ್ಯಗಳು, ಪಶ್ಚಿಮದ್ವೀಪಗಳು, ಮತ್ತು ದಕ್ಷಿಣ ಅಮೆರಿಕಾ ಖಂಡಗಳಲ್ಲಿ ದಾರಾಳವಾಗಿ ಬೆಳೆಯುತದೆ.

ವರ್ಣನೆ.

ಇದರ ಮಾತೃಸ್ಥಾನವು ಏಷ್ಯಾಖಂಡ. ಇಂಡಿಯಾ ದೇಶದಿಂದ ಹೊರಟ ಒಂದಾಸ್ಪೊಂದು ಹಡಗು ಉತ್ತರ ಅಮೆರಿಕಾಖಂಡದ ಕೆರೋಲಿನಾಪ್ರಾಂತ್ಯದ ಧಡದಮೇಲೆ ಬೀಳಲು, ಅದರಲ್ಲಿದ್ದ ಬತ್ತದ ಚೀಲಗಳಲ್ಲಿ ಕೆಲವು ಆ ದೇಶದ ಜನರಿಗೆ ಸಿಕ್ಕಿತು. ಅದನ್ನು ತೆಗೆದುಕೊಂಡು ಅವರಲ್ಲಿ ಹಲವರು ಬೆಳೆಯಬೇಕೆಂದು ಪ್ರಯತ್ನಪಟ್ಟರು. ಅವರ ಅಭಿಲಾಷೆಯು ಕೈಗೂಡಿ, ಈಗ ಕೆರೋಲಿನಾ ಬತ್ತವೇ ಬಹಳ ಪ್ರಸಿದ್ಧಿಯನ್ನು ಹೊಂದಿದೆ. ಇದಕ್ಕೆ ನಮ್ಮ ದೇಶದಬತ್ತಕ್ಕೆ ಬೇಕಾಗುವಷ್ಟು ನೀರು ಅವಶ್ಯಕವಿಲ್ಲದಿದ್ದರೂ, ಕಾಳು ಇಲ್ಲಿನದಕ್ಕಿಂತ ಅತ್ಯಂತ ರುಚಿಕರವಾಗಿರುವದು. ತೆನೆಯಲ್ಲಿ ಕಾಳುಗಳು ಸಾಂದ್ರವಾಗಿರುವವಲ್ಲದೆ ಈ ದೇಶದಕ್ಕಿಂತ ಹೆಚ್ಚಾಗಿಯೂ ಇರುವವು. ಇದು ಎರಡರಿಂದ ಹತ್ತಡಿಗಳ ಎತ್ತರ ಬೆಳೆಯುವದು. ಅಗ್ರಭಾಗದಲ್ಲರುವ ತೆನೆಗಳು ಎಂಟು ಅಂಗುಲಗಳಿಂದ ಒಂದು ಅಡಿಯವರೆಗೆ ಉದ್ದವಿದ್ದು ಬಗ್ಗಿಕೊಂಡಿರುತ್ತವೆ. ಕೆಲವುವಿಧ ಬತ್ತದ ಕಾಳುಗಳಿಂದ ಕೂದಲಿನಂತಿರುವ ಒಂದು ರಚನೆಯು ಹೊರಡುವದು. ಬತ್ತಕ್ಕೆ ಶಾಖವೂ ನೀರೂ ಬಹಳ ಅವಶ್ಯಕವಾಗಿರುವದರಿಂದ ಶಾಖ ಪ್ರದೇಶಗಳ ಜೌಗುಭೂಮಿಯಲ್ಲಿ ಚೆನ್ನಾಗಿ ಬೆಳೆಯುತದೆ.

ಇಂಡಿಯಾದೇಶದಲ್ಲಿ ಮೂರುವಿಧವಾದ ಬತ್ತವನ್ನು ಬೆಳೆಯುತಾರೆ. (೧) ಬರಬತ್ತ. ಇದನ್ನು ಇತರ ಕುಷ್ಕಿ ಪೈರುಗಳಂತೆ ಹೊಲಗಳಲ್ಲಿ ಬೆಳೆಯುವರು; (೨) ಮೊಳೆಬತ್ತ. ಬತ್ತವು ಮೊಳಕೆಯಾದಮೇಲೆ ಬಿತ್ತುವದು. (೩) ನಾಟೀಬತ್ತ. ಒಂದು ಅಡಿಯಷ್ಟು ಎತ್ತರವಿರುವ ಸಸಿಗಳನ್ನು ನಾಟೀ ಹಾಕುವದು.

ಬತ್ತಗಳಲ್ಲಿ ಅನೇಕವಿಧಗಳುಂಟು. ಇವುಗಳಲ್ಲಿ ಮುಖ್ಯವಾದವು ಯಾವವೆಂದರೆ:-ದೊಡ್ಡಬತ್ತ, ಹೊಟ್ಟೆಕೆಂಬೂತಿ, ಅರಶಿನಕೆಂಬೂತಿ, ಯಾಲಕ್ಕಿಶಾಜ, ಬಿಳೀ ಸಣ್ಣಬತ್ತ, ಪುಟ್ಟುಬತ್ತಮುಂತಾದವು.

ಬೆಳೆಯುವ ಕ್ರಮ.

ಬರಬತ್ತ:—ಉಳುವಮಕ್ಕೆ ಮೂರುದಿವಸಗಳ ಮುಂದೆ ಭೂಮಿಯನ್ನು ಕಿಮಪಾಡಿ, ಫಾಲ್ಗುಣ, ಚೈತ್ರ, ವೈಶಾಖ ಮಾಸಗಳಲ್ಲಿ ತಿಂಗಳಿಗೆ ಎರಡುಸಲ ಉಳ

ಬೇಕು. ನಾಲ್ಕಾವರ್ತಿ ಉತ್ತಮೇಲೆ, ದನದ ಗೊಬ್ಬರವನ್ನಾಗಲೀ, ಬೂದಿ, ಕಸ ಮುಂತಾದ ಊರಿನ ಕಚಡವನ್ನಾಗಲೀ, ಹಾಕಿ ಮತ್ತೊಂದಾವರ್ತಿ ಉಳಬೇಕು. ಮಳೆಯು ಬಾರದೆ ಇದ್ದರೆ ನೀರನ್ನು ಹಾಯಿಸಿ, ಮೂರುದಿವಸಗಳನಂತರ ಬೀಜವನ್ನು ಕೈಯಿಂದ ಎರಚಿ, ಪುನಃ ಉತ್ತು, ಮಣ್ಣನ್ನು ಮುಚ್ಚಬೇಕು. ಮೊದಲಿನ ತಿಂಗಳಲ್ಲಿ ಬಹಳವಾಗಿ ಮಳೆಯು ಬಿದ್ದರೆ ಪೈರು ನಾಶವಾಗುವದು. ಆದಕಾರಣ ಸುತ್ತಲೂ ಬಚ್ಚಲುಗಳನ್ನು ತೆಗೆದು, ಹೆಚ್ಚಾದ ನೀರು ಹರಿದು ಹೋಗುವಂತೆ ಮಾಡಬೇಕು. ಒಂದು ತಿಂಗಳವರೆಗೂ ಮಳೆಯು ಹುಯ್ಯದಿದ್ದರೆ ಪೈರು ಬಲಿಯುವವರೆಗೂ ನೀರನ್ನು ಹಾಯಿಸುತಿರಬೇಕು. ಮಳೆಯು ಬಿದ್ದಿದ್ದಪಕ್ಷದಲ್ಲಿ ಬಿತ್ತಿದ ನಾಲ್ವತ್ತೈದು ದಿವಸಗಳವರೆಗೂ ನೀರನ್ನು ಹಾಯಿಸಕೂಡದು. ಐವತ್ತನೆಯ ದಿವಸ ಕಳೆಯನ್ನು ಕಿತ್ತು, ಸಸಿಗಳ ಸುತ್ತಲೂ ಮಣ್ಣನ್ನು ಸಡಲಿಸಬೇಕು. ಇದಾದ ಇಪ್ಪತ್ತು ದಿವಸಗಳನಂತರ ಪುನಃ ಕಳೆಯನ್ನು ಕೀಳಬೇಕು. ಇದರಿಂದ ಹದಿನೈದುದಿವಸಗಳನಂತರ ಮತ್ತೊಂದಾವರ್ತಿ ಕಳೆಯನ್ನು ತೆಗೆಯಬೇಕು. ಏಳು ತಿಂಗಳ ಪೈರಾಗಿದ್ದರೆ ಮೇಲೆ ವಿವರಿಸಿದಂತೆ ಮಾಡುವರು. ಐದೂವರೆತಿಂಗಳ ಪೈರಾಗಿದ್ದಪಕ್ಷದಲ್ಲಿ ನೀರನ್ನು ಇಪ್ಪತ್ತನೆಯ ದಿವಸದಿಂದಹಾಯಿಸಿ, ಇಪ್ಪತ್ತು, ಮೂವತ್ತು, ನಾಲ್ವತ್ತನೆಯ ದಿವಸಗಳಲ್ಲಿ ಕಳೆಯನ್ನು ಕೀಳುವರು.

ಮೊಳೆಬತ್ತ:—ಒಂದು ಮಡಕೆಯಲ್ಲಿ ನೀರು ಮತ್ತು ಬತ್ತವನ್ನು ತುಂಬಿ ಮೂರುದಿವಸಗಳವರೆಗೂ ಇಟ್ಟಿದ್ದು, ಅನಂತರ ಅದನ್ನು ತೆಗೆದು, ದನದ ಸಗಣಿಯೊಡನೆ ದಿಗೆ ಸೇರಿಸಿ, ಒಂದು ಮೂಲೆಯಲ್ಲಿ ಗುಡ್ಡೆ ಹಾಕಬೇಕು. ಮೂರು ದಿವಸಗಳಲ್ಲಿ ಮೊಳಕೆಯು ಎದ್ದು ಬಿತ್ತುವದಕ್ಕೆ ಸಿದ್ಧವಾಗುವದು. ಕೆಲವೆಡೆಗಳಲ್ಲಿ ಬತ್ತವನ್ನು ಒಂದು ಚೀಲದಲ್ಲಿ ತುಂಬಿ, ನೆನೆಸಿ, ಎರಡು ದಿವಸಗಳವರೆಗೆ ಭಾರವನ್ನು ಹೇರಿದ್ದು ಮೊಳಕೆಯಾಗುತಲೆ ಬಿತ್ತುವರು. ಆಷಾಢಮಾಸದಲ್ಲಿ ಗದ್ದೆಗೆ ನೀರನ್ನು ಹಾಯಿಸಿ ನಾಲ್ಕಾವರ್ತಿ ಚೆನ್ನಾಗಿ ಉಳಬೇಕು. ಸೊಪ್ಪು, ದನದ ಗೊಬ್ಬರ ಮುಂತಾದವನ್ನು ಹಾಕಿ, ಶ್ರಾವಣಮಾಸದಲ್ಲಿ ಪುನಃ ಉತ್ತು ಹರಿವೆಯನ್ನು ಹೊಡೆದು ನೆಲವನ್ನು ಸಮಮಾಡಿ ಮೊಳಕೆ ಎದ್ದ ಬೀಜವನ್ನು ಎರಚಬೇಕು. ಇಪ್ಪತ್ತುನಾಲ್ಕು ದಿವಸಗಳವರೆಗೂ ದಿನಬಿಟ್ಟುದಿನ ನೀರನ್ನು ಹಾಯಿಸಿ ಭೂಮಿಯನ್ನು ತೇಮವಾಗಿಟ್ಟರದಲ್ಲದೆ, ಇಪ್ಪತ್ತೈದು, ಮೂವತ್ತೈದನೆಯ ದಿವಸಗಳಲ್ಲಿ ಕಳೆಯನ್ನು ಕೀಳಿಸುವದು ಅವಶ್ಯಕವಾಗಿರುತ್ತೆ. ಇಪ್ಪತ್ತೈದನೆಯ ದಿವಸದಿಂದ ಬತ್ತವು ಬಲಿಯುವವರೆಗೂ ನಾಲ್ಕು ಅಂಗುಲ ನೀರು ಇದ್ದೇ ಇರಬೇಕು.

ನಾಟಿಬತ್ತ:—ಜ್ಯೇಷ್ಠ ವೈಶಾಖಮಾಸಗಳಲ್ಲಿ ಮೂರುನಾಲ್ಕಾವರ್ತಿ ಭೂಮಿಯನ್ನು ಚೆನ್ನಾಗಿ ಉತ್ತು, ಸೊಪ್ಪು, ಬೂದಿ, ದನದ ಗೊಬ್ಬರ ಮುಂತಾದವನ್ನು ಹಾಕಿ, ಪುನಃ ಉತ್ತು ಹರಿವೆಯನ್ನು ಹೊಡೆಯಬೇಕು. ಬೀಜವನ್ನು ಒತ್ತಾಗಿ ಹಾಕಿ

ಮಳೆಯು ಬಾರದಿದ್ದರೆ ಎಂಟನೆಯ ಮತ್ತು ಇಪ್ಪತ್ತೆರಡನೆಯ ದಿವಸಗಳಲ್ಲಿ ನೀರನ್ನು ಹಾಯಿಸಬೇಕು. ಐದುತಿಂಗಳ ಪೈರಾಗಿದ್ದರೆ ಇಪ್ಪತ್ತೈದು ಮೂವತ್ತು ದಿವಸಗಳ ವರೆಗೂ; ಆರುತಿಂಗಳದಾಗಿದ್ದರೆ ನಾಲ್ವತ್ತು ದಿವಸಗಳವರೆಗೂ ಬಿಟ್ಟ ನಲ್ಲಿರಬೇಕು. ನಾಟೀ ಹಾಕ್ಕುವದಕ್ಕೆ ಮುಂದೆ ಭೂಮಿಯನ್ನು ಕೇಮುಮಾಡಿ, ಸಸಿಗಳನ್ನು ಕಿತ್ತು, ಸಣ್ಣ ಸಣ್ಣ ಕಂತೆಗಳಾಗಿ ಕಟ್ಟಿ ಬೇರುಗಳನ್ನು ತೊಳೆದು, ಆಮೇಲೆ ನಾಟೀಹಾಕುವದಕ್ಕೆ ಉಪಯೋಗಿಸಬೇಕು.

ನಾಟೀಹಾಕತಕ್ಕ ಭೂಮಿಯನ್ನು ಜೇಷ್ಠಮಾಸದಲ್ಲಿ ನಾಲ್ಕಾವರ್ತಿ ಉತ್ತು ಗೊಬ್ಬರವನ್ನು ಹಾಕತಕ್ಕದ್ದು. ಎಕರೆಗೆ ಎರಡುಸಾವಿರ ಕುರಿಗಳಂತೆ ತಿಡೆದು, ಉತ್ತು, ಹಲಿವೆಯನ್ನು ಹೊಡೆಯಬೇಕು. ಭೂಮಿಯನ್ನು ಕೇಮಮಾಡಿ, ನಾಲ್ಕೈದು ಸಸಿಗಳನ್ನು ಒಂದೊಂದು ಅಡಿ ದೂರದಲ್ಲಿ ನಾಟೀಹಾಕಬೇಕು. ಒಂದು ದಿವಸ ನೀರಿಲ್ಲದೆ ಇಟ್ಟದ್ದು ಕಟಾವಿಗೆ ಬರುವದಕ್ಕೆ ಹದಿನೈದು ದಿವಸಗಳವರೆಗೂ ನಾಲ್ಕು ಅಂಗುಲ ನೀರನ್ನು ಕಟ್ಟಿಯೇ ಇರಬೇಕು. ಕಳೆಯನ್ನು ಕೀಳುವ ಅವಶ್ಯಕತೆಯು ಅಷ್ಟಿರುವದಿಲ್ಲ. ಒಂದೆರಡಾವರ್ತಿ ಕೀಳಿಸಿದರೆ ಉತ್ತಮ. ಬತ್ತದ ಪೈರಿಗೆ ದನದ ಗೊಬ್ಬರ, ಊರುಗೊಬ್ಬರ, ಹೊಂಗೆ, ಎಕ್ಕ ಅವರಿಕೆ, ಜೇವು, ನೀರಿಮುಂತಾದ ಎಲೆಗಳು ಉತ್ತಮವಾದ ಗೊಬ್ಬರವಾಗಿವೆ.

ಬತ್ತದ ಪೈರನ್ನು ಕುಯ್ಯುವದಕ್ಕೆ ಒಂದುವಾರದ ಮೊದಲೇ ನೀರನ್ನು ನಿಲ್ಲಿಸಿ, ಗದ್ದೆಯನ್ನು ಒಣಗಿಸಬೇಕು. ಅನಂತರ ಕುಡುಗೋಲಿನಿಂದ ಬುಡದಲ್ಲಿ ನಾಲ್ಕು ಅಂಗಲದಷ್ಟು ಬಿಟ್ಟು ಕುಯ್ದು ಸುಮಾರು ಹನ್ನೆರಡು ಅಡಿಗಳ ಎತ್ತರದ ಮೆದೆಗಳನ್ನು ಹಾಕಬೇಕು. ಈ ಮೆದೆಗಳಲ್ಲಿ ತೆನೆಗಳು ಒಳಭಾಗದಲ್ಲೂ ಕಡ್ಡಿಗಳು ಹೊರಗಡೆಗೂ ಇರುತ್ತವೆ. ಇಲ್ಲಿ ಒಂದುವಾರ, ಮಳೆ ಬಂದರೆ ಎರಡುವಾರಗಳು ಇದ್ದಮೇಲೆ ''ಕಣ''ಕ್ಕೆ ತೆಗೆದುಕೊಂಡು ಹೋಗುತಾರೆ. ಗದ್ದೆಯ ಒಂದುಭಾಗದಲ್ಲಿ ನೆಲವನ್ನು ಸಗಣಿ ಜೇಡಿಮಣ್ಣು ಮತ್ತು ನೀರಿನಿಂದ ಸಾರಿಸಿ ಸಮವಾಗಿಯೂ ನಯವಾಗಿಯೂ ಮಾಡತಕ್ಕದ್ದು. ಇಲ್ಲಿ ಬತ್ತದ ಪೈರು ಸಮವಾಗಿ ಹರಡಿ ಎತ್ತುಗಳಿಂದ ತುಳಿಸಿದರೆ ತೆನೆಗಳಿಂದ ಬತ್ತವು ಜೀರಿಯಾಗುವದು.

ಉಪಯೋಗ.

ಮೇಲಿನ ಹೊಟ್ಟನ್ನು ತೆಗೆದರೆ ಒಳಗೆ ಅಕ್ಕಿಯು ಇರುವದು. ಇದು ಇಂಡಿಯಾ, ಚೈನಾ ದೇಶಗಳ ಮುಖ್ಯಾಹಾರವಾಗಿದೆ. ಅಮೆರಿಕಾಖಂಡದ ''ನೀಗ್ರೊ'' ಜನರ ಆಹಾರವೂ ಇದೇಆಗಿರುವದು. ಇದರ ಹಿಟ್ಟಿನಿಂದ ಅನೇಕ ಬಗೆಯ ಭಕ್ಷ್ಯಗಳಾಗುವವು. ಬತ್ತದಿಂದ ಬಟ್ಟೆ ಇಳಿಸಿ, ಸಾರಾಯಿಯನ್ನು ಮಾಡುವರು. ಹೊಟ್ಟಿನಿಂದ ಹಳದೀಬಣ್ಣದ ಬರುವದು. ಕಡ್ಡಿಯಿಂದಲೂ ಜೀರಿನಿಂದಲೂ ಕಾಗದವನ್ನು ಮಾಡಬಹುದು. ಬತ್ತ

ವನ್ನು ಮರಳಿನ ಜತೆಗೆ ಹುರಿದರೆ ಅರಳಾಗುವದು. ಸುಲಭವಾಗಿ ಅರಗುವದರಿಂದ ಕಾಯಿಲೆಯವರಿಗೂ ಕೊಡುತ್ತಾರೆ. ಅಕ್ಕಿಯನ್ನು ಮರಳಿನೊಂದಿಗೆ ಹುರಿದರೆ ಪುರಿ ಯನ್ನಿಸಿಕೊಳ್ಳುವದು. ಇದು ಜೀಯಿಸಿದ ಅಕ್ಕಿಗಿಂತ ಜಾಗ್ರತೆಯಾಗಿ ಅರಗುವದು. ರುಚಿಯಾಗಿರುವದರಿಂದ ಅನೇಕರು ಇದನ್ನು ತಿನ್ನುವರು. ಬತ್ತವನ್ನು ನೀರಿನಲ್ಲಿ ನೆನೆಸಿ ಕುಟ್ಟಿದರೆ ಅವಲಕ್ಕಿಯಾಗುವದು. ಸೀಮೆ ಅಗಸೆಬೀಜದ ಪೋಟ್ಲೀಸಿಗಿಂತ ಅಕ್ಕಿಯ ಪೋಟ್ಲಿಸು ಉತ್ತಮವೆಂದು ವೈದ್ಯರು ಹೇಳುತಾರೆ. ಹೊಸ ಅಕ್ಕಿಯು ಜಾಗ್ರತೆಯಾಗಿ ಅರಗುವದಿಲ್ಲ. ತಿಂದರೆ ಹೊಟ್ಟೆನೋವು, ಭೇದಿಮುಂತಾದವುಗಳಿಗೆ ಗುರಿಯಾಗು ವರು. ಗಂಜಿಯನ್ನು ನಾಂಶಿಭೇದಿ ಉಪದ್ರದಲ್ಲಿಯೂ ಆಮಶಂಕೆಯಲ್ಲಿಯೂ ಕೊಡು ತ್ತಾರೆ. ಹಿಟ್ಟಿನಿಂದ ರೊಟ್ಟಿಯನ್ನು ಮಾಡುವರು ಅಕ್ಕಿಯನ್ನು ಜೀಯಿಸಿ ಗಂಜಿ ಯನ್ನು ಸುರಿದುಬಿಡುವದು ಬಹಳ ಕೆಟ್ಟದ್ದು. ಯಾತಕೆಂದರೆ ಸಾರವೆಲ್ಲಾ ಹೋಗಿ ಬಿಡುವದು. ಎಷ್ಟು ನೀರುಬೇಕೋ ಅಷ್ಟೇ ನೀರು ಹಾಕಿ ಜೀಯಿಸಬೇಕು. ನೀಪಾಳ ದಲ್ಲಿ ಕಡ್ಡಿಯಿಂದ ಬುಟ್ಟಿಗಳನ್ನೂ ಹಗ್ಗಗಳನ್ನೂ ಕಾಸ್ಮೀರದಲ್ಲಿ ಹಾವುಗೆಗಳನ್ನು ಮಾಡುತ್ತಾರೆ.

ಬತ್ತವು ಯೂರೋಪ್‌ಖಂಡಕ್ಕೆ ಬಹಳವಾಗಿ ರಫ್ತಾಗುವದರಿಂದ ಅಲ್ಲಿಂದ ಅಗ ನಾದ "ಜಿಕ್" "ಬ್ರಾಂಡಿ" ಎಂಬ ಪಾನಗಳು ಇಂಡಿಯಾಕ್ಕೆ ಬರುತವೆ.

ಎಲ್. ಸುಬ್ಬರಾವ್.

ವಸ್ತುಪಾಠ.

ಕರ್ಪೂರ.

ಉಪಾ.—(ಒಂದು ಕರ್ಪೂರದ ಗೆಡ್ಡೆಯನ್ನು ಮೇಜಿನಮೇಲಿಟ್ಟು,) ಇದು ಹ್ಯಾಗೆ ಕಾಣಿಸುವುದು?

ಬಾಲಕ—ಇದು ಬೆಳ್ಳಗಿರುವ ಒಂದು ಘನಪದಾರ್ಥದಂತೆ.

ಉಪಾ---ಇದು ಸ್ಪರ್ಶಕ್ಕೆ ಹ್ಯಾಗೆ ಇರುವುದು? ಪರೀಕ್ಷಿಸಿ ಹೇಳು?

ಬಾಲಕ—(ಕರ್ಪೂರದ ಗೆಡ್ಡೆಯನ್ನು ತೆಗೆದುಕೊಂಡು ನೋಡಿ) ಇದು ಗಟ್ಟಿಯಾಗಿರು ವುದು.

ಉಪಾ---ಇದರ ರುಚಿನೋಡು.

ಬಾಲಕ—ಇದು ನಾಲಿಗೆಗೆ ಕಹಿಯಾಗಿರುವುದು.

ಉಪಾ---ಇದನ್ನು ಯಾತಕ್ಕೆ ನಿಮ್ಮಲ್ಲಿ ಉಪಯೋಗಿಸುತ್ತಾರೆ?

ಬಾಲಕ—ಇದಕ್ಕೆ ದೀಪಹಚ್ಚಿ ದೇವರಿಗೆ ಆರತಿಮಾಡುವ್ರದಕ್ಕಾಗಿ.

ಇದರ ಸ್ವಭಾವವೇನೆಂದರೆ:—

ಉಪಾ---ಸ್ಪರ್ಶಕ್ಕೆ ಗಟ್ಟಿಯಾದ ಪದಾರ್ಥವಾಗಿಯೂ, ಘ್ರಾಣಕ್ಕೆ ವಾಸನೆ ಕೊಡುವುದಾಗಿಯೂ, ರಸನಕ್ಕೆ ಕಹಿಯಾಗಿಯೂ ಇರುವುದು.
(ಒಂದು ಚೂರು ಕರ್ಪೂರಕ್ಕೆ ದೀಪವನ್ನು ಹಚ್ಚಿ) ಇದರ ಉರಿಯು ಹ್ಯಾಗಿರುವುದು?

ಬಾಲಕ—ಸುಮ್ಮಾರಾಗಿ ಬೆಳ್ಳಗಿರುವುದು.

ಉಪಾ---ಇದು ಉರಿಯುವಾಗ ಬೆಳ್ಳಗಿರುವ ಬೆಳಕನ್ನೂ ವಿಶೇಷವಾಗಿ ಹೊಗೆಯನ್ನೂ ಕೊಡುವುದು.

ಇದರ ಲಕ್ಷಣವೇನೆಂದರೆ:—

ಒಂದು ಗೆಡ್ಡೆ ಕರ್ಪೂರವನ್ನು ತೆಗೆದುಕೊಂಡು ಸಣ್ಣ ಸಣ್ಣ ರವೆಗಳಾಗಿಮಾಡಿ ಒಂದು ಬಟ್ಟಲಿನಲ್ಲಿರುವ ಸ್ವಚ್ಛವಾದ ನೀರಿನಮೇಲೆ ಉದರಿಸುವೆನು. ಏನಾಗುವುದು ನೋಡಿ ಹೇಳಿ.

ಬಾಲಕ—ಕಣಗಳೆಲ್ಲಾ ಸಣ್ಣ ಸಣ್ಣ ಹುಳುಗಳಂತೆ ನೀರಿನಲ್ಲಿ ಹರಿದಾಡುವವು.

ಉಪಾ---ಹೌದು. ಕೆಲವು ಜಾಗ್ರತೆಯಾಗಿ ಓಡಾಡುವುವು. ಕೆಲವು ನಿಧಾನವಾಗಿ ಚಲಿಸುವುವು. ಇನ್ನು ಕೆಲವು ಒಟ್ಟುಗೂಡುವುವು.
ಈಗ ಇದರಮೇಲೆ ಒಂದು ತೊಟ್ಟು ಎಣ್ಣೆಯನ್ನು ಬಿಡುವೆನು. ಎಣ್ಣೆಯ ತೊಟ್ಟು ಇದರ ಮೇಲೆ ಬಿದ್ದೊಡನೆಯೇ ಏನಾಗುವುದು ?

ಬಾಲಕರು-ಎಲ್ಲಾ ಅಲ್ಲಲ್ಲಿಯೆ. ನಿಂತುಹೋದವಲ್ಲ !

ಉಪಾ---ನಿಶ್ಚಯ. ಎಣ್ಣೆಯು ನೀರಿನಮೇಲೆ ಬಿದ್ದೊಡನೆ ಕರ್ಪೂರಕಣಗಳ ಚಲನೆಯು ನಿಲ್ಲುವುದು. ಇನ್ನೊಂದು ವಿಶೇಷವನ್ನು ತೋರಿಸುವೆನು. ಚೆನ್ನಾಗಿ ನೋಡಿ. ನಾನು ಈಗ-ಒಂದು ಕರ್ಪೂರದ ಸಣ್ಣ ಚೂರನ್ನು ನೀರಿನಮೇಲೆ ಸ್ವಲ್ಪ ಸೋಕುವಹಾಗೆ ಹಿಡಿದುಕೊಳ್ಳುವೆನು. ನೀರನ್ನು ನೋಡಿ ?

ಬಾಲಕ—ನೀರು ಕುದಿಯುವಂತೆ ಸಣ್ಣ ಸಣ್ಣ ಗುಳ್ಳೆಗಳು ಏಳುವವು ?

ಉಪಾ---(ಸ್ವಲ್ಪಹೊತ್ತು ಹಾಗೆಯೆ ಹಿಡಿದಿದ್ದು ತರುವಾಯ) ಈಗ ಹ್ಯಾಗೆ ಇದೆ ಹೇಳಿ.

ಬಾಲಕ—ಈಗ ಗುಳ್ಳೆಗಳೇ ಇಲ್ಲ.

ಉಪಾ---ಕೆಲವು ಕರ್ಪೂರದ ಕಣಗಳು ನೀರಿನಲ್ಲಿ ಚೆನ್ನಾಗಿ ಕರಗಿಹೋದವು. ಆದುದರಿಂದ ಗುಳ್ಳೆಗಳೆಲ್ಲಾ ಅಡಗಿಹೋದವು.

II. ಇದರ ಉಪಯೋಗಗಳು.

ಉಪಾ---ಇದರ ಉಪಯೋಗ ಒಂದಾದರೋ ನಿಮ್ಮೆಲ್ಲರಿಗೂ ತಿಳಿದೇ ಇರುವುದು. ಅದೇನೆಂದರೆ—(೧) ದೇವತಾರಾಧನೆಗೆ ಹಿಂದೂಜನಗಳು ಇದನ್ನು ವಿಶೇಷವಾಗಿ ಉಪಯೋಗಿಸುವರು. ಇನ್ನೊಂದುವಿಧವಾಗಿ ಇದನ್ನು ಉಪಯೋಗಪಡಿಸಿಕೊಳ್ಳುತ್ತಾರೆ—ಅದು ನಿಮ್ಮಲ್ಲಿ ಕೆಲವರಿಗೆಮಾತ್ರ ತಿಳಿದಿರಬಹುದು. ಯಾರಾದರು ಒಬ್ಬರು ಹೇಳಿ ?

ಬಾಲಕ—ಹುಳ ಹೊಡಿಯುವಂತೆ ಕರ್ಪೂರವನ್ನು ಬಟ್ಟೆಯೊಡನೆ ಪೆಟ್ಟಿಗೆಯಲ್ಲಿಡುವರು.

ಉಪಾ---ಆ ಕರ್ಪೂರದ ವಾಸನೆಯು ಕೆಲವು ಕ್ರಿಮಿಕೀಟಗಳಿಗೆ ಆಗುವುದಿಲ್ಲವಾದುದರಿಂದಲೇ ಸರ್ವವಸ್ತುಪ್ರದರ್ಶನಶಾಲೆ (Museum) ಗಳಲ್ಲಿ ಜೀವರಹಿತವಾದ ಶರೀರಗಳನ್ನು ಕಾಪಾಡುವುದಕ್ಕೆ ಕರ್ಪೂರದ ಗೆಡ್ಡೆಗಳನ್ನು ಅಲ್ಲಲ್ಲಿಯೆ ಇಟ್ಟಿರುತ್ತಾರೆ. ಸಾಧಾರಣವಾಗಿ ಒಳ್ಳೆ ಬಟ್ಟೆಗಳನ್ನು ಕೆಲವುಕಾಲ ಉಪಯೋಗಿಸದೆ ಪೆಟ್ಟಿಗೆಯಲ್ಲಿಡುವಾಗ ಜೊತೆಯಲ್ಲಿ ಕರ್ಪೂರದ ಗೆಡ್ಡೆಯನ್ನು ನುಸಿಹಿಡಿದು ಹೋಗದಂತೆ ಇಡುವರು.

೩ ಕರ್ಪೂರವನ್ನೂ, ಇದರ ಧೃತಿಯನ್ನೂ ವಿಶೇಷವಾಗಿ ಔಷಧಿಗ ಉಪಯೋಗಿಸುವರು.

III. ಕರ್ಪೂರವು ಸಿಗುವಸ್ಥಳ.

ಉಪಾ---ಕರ್ಪೂರವು ವಿಶೇಷವಾಗಿ ಯಾವ ದೇಶದಿಂದ ತರಲ್ಪಡುವುದು ?

ಬಾಲಕ—ಜಪಾರ್ಜ, ಜಾವ, ಸುಮಾತ್ರ, ಬೋರ್ನಿಯೋ—ಈ ದ್ವೀಪಗಳಿಂದ.

ಉಪಾ---ಇವುಗಳನ್ನು ಭೂಪಠದಲ್ಲಿ ತೋರಿಸು. ಈ ದ್ವೀಪಗಳಿಂದ ಇದು ತರಲ್ಪಡುವುದಕ್ಕೆ ಕಾರಣವೇನು ?

ಬಾಲಕ—ಇಲ್ಲಿ ಕರ್ಪೂರವು ವಿಶೇಷವಾಗಿ ದೊರೆಯುವುದರಿಂದ.

ಉಪಾ---ಕರ್ಪೂರವನ್ನು ಒಂದುಜಾತಿ ಗಿಡದಿಂದ ತೆಗೆಯುವರು. ಈ ಜಾತಿ ಗಿಡವು ವಿಶೇಷವಾಗಿ ಮೇಲೆ ಹೇಳಿದ ದ್ವೀಪಗಳಲ್ಲಿ ಬೆಳೆಯುವುದು. ಈ ಗಿಡವು ಸುಮಾರು ೪೦ ಅಥವ ೫೫ ಅಡಿ ಎತ್ತರವಿರುತ್ತದೆ. ಇದರ ತೊಗಟೆ ಮೃದುವಾಗಿಯೂ ಸುಮಾರು ಎಲೆಹಸರಿನ ವರ್ಣವಾಗಿಯೂ ಇರುವುದು. ಇದರ ಜೇಗು ಬೆಳ್ಳಗೂ ಸುವಾಸನೆಯಾಗಿಯೂ ಇರುವುದು. ಇದರ ಎಲೆಗಳು ಲಕ್ಕಿಸೊಪ್ಪಿನಂತೆ ಕೋಮಲವಾಗಿಯೂ, ಇದರ ಹುವ್ವು ಬೆಳ್ಳಗೂ ಚಿಕ್ಕದಾಗಿಯೂ, ಆರು ದಳಗಳುಳ್ಳದ್ದಾಗಿಯೂ ಇರುವುದು.

ಈ ಗಿಡದ ನಾರಿನಲ್ಲಿಯೂ, ಗರ್ಭದಲ್ಲಿಯೂ, ಮುಖ್ಯವಾಗಿ ಗಂಟುಗಂಟಾದ ಸ್ಥಳಗಳಲ್ಲಿಯೂ, ಹೇರಳವಾಗಿ ಕರ್ಪೂರವು ಸಿಗುವುದು.

ಇದರಿಂದ ಕರ್ಪೂರವನ್ನು ಒಂದೊಂದು ದೇಶದಲ್ಲಿ ಒಂದೊಂದುವಿಧವಾಗಿ ತೆಗೆಯುವರು.

ಸುಮಾತ್ರ ಮತ್ತು ಬೋರ್ನಿಯೋದ್ವೀಪಗಳಲ್ಲಿ ಕರ್ಪೂರದ ಗಿಡದ ಕಟ್ಟಿಗೆಯನ್ನು ಕೀಳಿ ಅಲ್ಲಿ ಹಳಕುಹಳಕಾಗಿಯೇ ಸಿಕ್ಕುವ ಕರ್ಪೂರವನ್ನು ತೆಗೆದುಕೊಳ್ಳುವರು. ಈ ರೀತಿಯಾಗಿ ಕರ್ಪೂರವನ್ನು ಕೂಡಿಹಾಕಿದರೆ ಒಂದು ಗಿಡದಲ್ಲಿ ಸುಮಾರು ೨೦ ಪೌಂಡುತೂಕ ಕರ್ಪೂರವು ಸಿಕ್ಕುತ್ತದೆ.

ಫಾರೊಮೋಸಾದ್ವೀಪದಲ್ಲಿ, ಭಾರಿಯಾದ ಮರಗಳನ್ನು ಕಡಿದು ಬಲವಾದವುಗಳನ್ನು ತೊಲೆ ಜಂತಿಮೊದಲಾದವುಗಳಿಗೆ ಉಪಯೋಗಿಸಿಕೊಂಡು, ಕೊಂಬೆಗಳನ್ನೂ ಕಡ್ಡಿಗಳನ್ನೂ ಚೂರುಚೂರಾಗಿ ಕತ್ತರಿಸಿ, ಸೀಸೆಗಳಲ್ಲಿ ತುಂಬಿ ಕರ್ಪೂರದ ಬಟ್ಟೆಯನ್ನು ಇಳಿಸುವರು.

ಚೀನಾದೇಶದಲ್ಲಿ ಕರ್ಪೂರದ ಗಿಡದ ಚಿಕ್ಕೆಗಳನ್ನು ತುಂಡುತುಂಡಾಗಿ ಕತ್ತರಿಸಿ ಎರಡುಮೂರು ದಿವಸಗಳ ವರೆಗೂ ನೀರಿನಲ್ಲಿ ನೆನೆಹಾಕಿ ಆಮೇಲೆ ಚೆನ್ನಾಗಿ ಕಾಯಲಿಕ್ಕೆ ಇಡುವರು. ನೀರು ಮರಳಿದಹಾಗೆಲ್ಲಾ ಒಂದು ಕಟ್ಟಿಗೆಯಿಂದ ಇದನ್ನು ತೊಳಿಸಲು ಆರಂಭಿಸುವರು. ತೊಳಿಸುತಾ ತೊಳಿಸುತಾ ಕಟ್ಟಿಗೆಗೆಲ್ಲಾ ಕರ್ಪೂರದ ಹಳಕು ಹತ್ತಿಕೊಳ್ಳುವುವು. ಈ ಪಾಕವನ್ನು ತರುವಾಯ ಒಂದು ತಟ್ಟೆಗೆ ಹೊಯ್ಯುವರು. ಅಲ್ಲಿಯೆ ಕೆಲವು ಘಂಟೆಯಮೇಲೆ ಹೆತ್ತ ಹೆಕ್ಕಳೆಗಳಾಗುವುವು.

ಮಡ್ಡಿಕರ್ಪೂರವನ್ನೂ ಶೋಧಿಸಿ ಅದನ್ನು ಔಷಧಿಗೆ ಉಪಯೋಗಿಸುವರು.

ಹೀಗೆ ತಯ್ಯಾರು ಮಾಡಿದ ಕರ್ಪೂರವನ್ನು ದೇಶಗಳಿಗೆಲ್ಲಾ ವರ್ತಕರು ತಗದುಕೊಂಡುಹೋಗಿ ನಾನಾದೇಶಗಳಲ್ಲಿ ಮಾರುವರು.

ಮೈಸೂರು ವಿದ್ಯಾಭ್ಯಾಸದ ಇಲಾಖೆಯ ರಿಪೋರ್ಟು.

1892—1893.

ಕನ್ನಡ ಸ್ಕೂಲ್‌ಗಳ ವಿಷಯದಲ್ಲಿ ಎಜ್ಯುಕೇಷನ್ ಸೆಕ್ರಟರಿ ಸಾಹೇಬರವರ ಅಭಿಪ್ರಾಯ.

ಕನ್ನಡ ಮಿಡಲ್‌ಸ್ಕೂಲ್‌ಗಳು.

ನಮ್ಮ ಸಂಸ್ಥಾನದಲ್ಲಿ ಕನ್ನಡ ಮಿಡಲ್‌ಸ್ಕೂಲ್‌ತರಗತಿಗೆ ಪಾಠಹೇಳುವ ಸರಕಾರಿ ಸ್ಕೂಲುಗಳ ಒಟ್ಟು ಸಂಖ್ಯೆಯು ೪೧. ಈ ಪೈಕಿ ೬೯ ತಾಲ್ಲೂಕುಸ್ಕೂಲುಗಳು, ೧೭೨ ತಾಲ್ಲೂಕುಬ್ರಾಂಚ್ ಸ್ಕೂಲುಗಳು. ವಿದ್ಯಾರ್ಥಿಗಳ ಸಂಖ್ಯೆಯು ೨೦ಂಕ್ಕೆ ಕಮ್ಮಿ ಇಲ್ಲದ ದೊಡ್ಡ ಸ್ಕೂಲುಗಳು-ದೊಡ್ಡಬಳ್ಳಾಪುರದ ಸ್ಕೂಲಿನಲ್ಲಿ ೨೭೧ ಮಂದಿ

ವಿದ್ಯಾರ್ಥಿಗಳು, ಬೆಂಗಳೂರು ಮ್ಯುನಿಸಿಪಲ್ ಕನ್ನಡ ಸ್ಕೂಲುನಲ್ಲಿ ೩೦೦, ದೇವನ ಹಳ್ಳಿ ಸ್ಕೂಲುನಲ್ಲಿ ೨೦೦, ಚಿಕ್ಕಬಳ್ಳಾಪುರದ ಸ್ಕೂಲುನಲ್ಲಿ ೨೯೦, ಶಿಡ್ಲಘಟ್ಟದ ಸ್ಕೂಲುನಲ್ಲಿ ೨೫೧, ಮೈಸೂರು ಸ್ಕೂಲುನಲ್ಲಿ ೨೧೨, ನಂಜನಗೂಡು ಸ್ಕೂಲುನಲ್ಲಿ ೨೮೦, ಹಾಸನದ ಸ್ಕೂಲುನಲ್ಲಿ ೨೩೯, ಡಾವಣಗೆರೆಸ್ಕೂಲುನಲ್ಲಿ ೩೫೦, ಶಿವಮೊಗ್ಗ ಸ್ಕೂಲುನಲ್ಲ ೨೧೦.

ಬೆಂಗಳೂರು ಡಿಸ್ಟ್ರಿಕ್ಟ್:-ದೊಡ್ಡಬಳ್ಳಾಪುರದ ಸ್ಕೂಲು ಈ ಡಿಸ್ಟ್ರಿಕ್ಟ್‌ನಲ್ಲಿರುವ ಇತರ ಸ್ಕೂಲುಗಳ ವಿದ್ಯಾರ್ಥಿಗಳಸಂಖ್ಯೆಗಿಂತ ಹೆಚ್ಚಾದ ಸಂಖ್ಯೆಯುಳ್ಳ ದಾಗಿಯೂ, ದೊಡ್ಡದಾಗಿಯೂ, ಉತ್ತಮಸ್ಥಿತಿಯಲ್ಲಿಯೂ ಇದೆ. ಸರಜಾಪುರ, ತ್ಯಾಮಗುಂಡ್ಲು ಸ್ಕೂಲುಗಳು ಒಳ್ಳೇಸ್ಥಿತಿಯಲ್ಲಿವೆ. ಚನ್ನಪಟ್ಟ್ಣ, ಕ್ಲೋಸ್‌ಪೇಟೆ, ಹೊಸಕೋಟೆ, ಕಾನಕಾನಹಳ್ಳಿ ಸ್ಕೂಲುಗಳು ಸುಮಾರಾಗಿ ಒಳ್ಳೇಸ್ಥಿತಿಯಲ್ಲಿವೆ. ಆನೇಕಲ್, ದೇವನಹಳ್ಳಿ, ಮಾಗಡಿ, ನೆಲಮಂಗಲದ ಸ್ಕೂಲುಗಳು ಅಭಿವೃದ್ಧಿಗೆ ತರತಕ್ಕವುಗಳಾಗಿವೆ.

ಕೋಲಾರ ಡಿಸ್ಟ್ರಿಕ್ಟ್:—ಚಿಕ್ಕಬಳ್ಳಾಪುರದ ಸ್ಕೂಲುನಲ್ಲಿ ೨೯೦ ಜನ ವಿದ್ಯಾರ್ಥಿಗಳುಳ್ಳದಾಗಿಯೂ ಈಡಿಸ್ಟ್ರಿಕ್ಟ್‌ನಲ್ಲಿ ದೊಡ್ಡದಾಗಿಯೂ ಇದೆ. ಇದಕ್ಕೆ ಒಂದು ಸರಿಯಾದ ಕಟ್ಟಡವು ಅವಶ್ಯಕವಾಗಿದೆ. ಕನ್ನಡದಜೊತೇಲಿ ತೆಲುಗುಸಹಾ ಕಲಿಸುತ್ತೆ. ಇಲ್ಲಿಂದ ಲೋವರ್‌ಸೆಕೆಂಡರಿ ಪರೀಕ್ಷೆಯಲ್ಲಿ ಒಬ್ಬನೇ ಒಬ್ಬ ವಿದ್ಯಾರ್ಥಿಯು ತೇರ್ಗಡೆಯಾಗಿರುತ್ತಾನೆ. ಶಿಡ್ಲಘಟ್ಟದ ಕನ್ನಡಸ್ಕೂಲುನಲ್ಲಿ ೨೪೯ನೇ ಇಸವಿಯಲ್ಲಿ ೨೪೪ ಜನ ವಿದ್ಯಾರ್ಥಿಗಳಿದ್ದರು. ೯೩ನೇ ಇಸವಿ ಜೂನ್ ತಿಂಗಳಲ್ಲಿ ೨೫೧ ಜನ ವಿದ್ಯಾರ್ಥಿಗಳಿದಾರೆ. ಇಲ್ಲಿಂದ ಇಬ್ಬರು ವಿದ್ಯಾರ್ಥಿಗಳು ಲೋವರ್‌ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುತ್ತಾರೆ. ಚಿಂತಾಮಣಿ ಸ್ಕೂಲುನಲ್ಲಿ ೨೪೭ ಜನ ವಿದ್ಯಾರ್ಥಿಗಳಿದಾರೆ. ಇಲ್ಲಿಂದ ಒಬ್ಬ ವಿದ್ಯಾರ್ಥಿಯು ಲೋವರ್‌ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುತ್ತಾನೆ. ಗೋರೀಬಿದನೂರು ಸ್ಕೂಲುನಲ್ಲಿ ೨೦೯ ಜನ ವಿದ್ಯಾರ್ಥಿಗಳಿದಾರೆ. ಇದು ಇನ್ನು ಅಭಿವೃದ್ಧಿಗೆ ಬರತಕ್ಕದ್ದಾಗಿರುತ್ತೆ. ಶ್ರೀನಿವಾಸಪುರದ ಸ್ಕೂಲುನಲ್ಲಿ ೧೫೫ ಜನ ವಿದ್ಯಾರ್ಥಿಗಳಿದಾರೆ. ಇದು ಈಗಿನ ಹೆಡ್‌ಮಾಸ್ಟರಿಂದ ಸ್ವಲ್ಪ ಅಭಿವೃದ್ಧಿಗೆ ಬಂದಿರುತ್ತೆ. ಬಾಗೇಪಲ್ಲಿ, ಮುಳಬಾಗಲು, ಸ್ಕೂಲುಗಳ ಅಭಿವೃದ್ಧಿಯು ತೃಪ್ತಿಕರವಾಗಿಲ್ಲ. ಕಂದವಾರದ ತಾಲ್ಲೂಕು ಬ್ರಾಂಚ್‌ಸ್ಕೂಲು ಸುಮಾರಾಗಿ ಒಳ್ಳೇಸ್ಥಿತಿಯಲ್ಲಿದೆ. ಗುಡಿಬಂಡೆ ಸ್ಕೂಲುನಿಂದ ಲೋವರ್‌ಸೆಕೆಂಡರಿ ಪರೀಕ್ಷೆಯಲ್ಲಿ ಇಬ್ಬರು ವಿದ್ಯಾರ್ಥಿಗಳು ತೇರ್ಗಡೆಯಾಗಿರುತ್ತಾರೆ. ಇದು ಈಗಿನ ಹೆಡ್‌ಮಾಸ್ಟರಿಂದ ಚೆನ್ನಾಗಿ ಅಭಿವೃದ್ಧಿ ಮಾಡಲ್ಪಟ್ಟರುತ್ತೆ. ಮಾಲೂರು ಲಂಡನ್ ಮಿಸ್ಸಿ ಸ್ಕೂಲುನಲ್ಲಿ ೧೫೫ ಜನ ವಿದ್ಯಾರ್ಥಿಗಳಿದಾರೆ. ಇದರ ಅಭಿವೃದ್ಧಿಯೂ ತೃಪ್ತಿಕರ

ವಾಗಿಲ್ಲ. ಇಲ್ಲಿಂದ ಲೋವರ್‌ಸೆಕೆಂಡರಿ ಪರೀಕ್ಷೆಯಲ್ಲಿ ಇಬ್ಬರು ವಿದ್ಯಾರ್ಥಿಗಳು ತೇರ್ಗಡೆಯಾಗಿರುತ್ತಾರೆ.

ತುಮಕೂರು ಡಿಸ್ಟ್ರಿಕ್ಟ್ :—ತೀರ್ಥದ ಕನ್ನಡ ಸ್ಕೂಲು ಅಭಿವೃದ್ಧಿಯು ಸ್ವಲ್ಪವೂ ತೃಪ್ತಿಕರವಾಗಿಲ್ಲ. ಚಿಕ್ಕನಾಯಕನಹಳ್ಳಿ ಸ್ಕೂಲು ಈ ಡಿಸ್ಟ್ರಿಕ್ಟಿನ ಇತರ ಸ್ಕೂಲುಗಳಲ್ಲೆಲ್ಲಾ ದೊಡ್ಡದಾಗಿಯೂ, ಉತ್ತಮಸ್ಥಿತಿಯಲ್ಲಿಯೂ ಇದೆ. ಇಲ್ಲಿಂದ ಮೂರುಜನ ವಿದ್ಯಾರ್ಥಿಗಳು ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುತ್ತಾರೆ. ಕುಣಿಗಲ್ ಸ್ಕೂಲು ತೃಪ್ತಿಕರವಾಗಿದೆ. ಇಲ್ಲಿಂದ ಮೂರು ಜನ ವಿದ್ಯಾರ್ಥಿಗಳು ಲೋವರ್‌ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುತ್ತಾರೆ. ಕೊರಟಗಿರಿ ಸ್ಕೂಲು ಸ್ವಲ್ಪಸ್ವಲ್ಪ ಅಭಿವೃದ್ಧಿಗೆ ಬಂದಿರುತ್ತೆ. ಮದ್ದಗಿರಿ, ತುಮಕೂರು ಗಾ॥ ಕ॥ ಸ್ಕೂಲುಗಳು ಒಳ್ಳೇಸ್ಥಿತಿಗೆ ತರಬೇಕಾಗಿವೆ. ತಿಪಟೂರು ಸ್ಕೂಲು ಕೆಟ್ಟುಹೋಗಿದೆ. ಪಾವುಗಡದ ಸ್ಕೂಲು ಸುಮಾರಾಗಿ ಒಳ್ಳೇಸ್ಥಿತಿಯಲ್ಲಿದೆ ತುರುವೇಕೆರೆ ತಾಲ್ಲೂಕುಸ್ಕೂಲು, ಬೆಳ್ಳಾವಿ, ಹುಲಿಯೂರ್ ತಾಲ್ಲೂಕು ಬಾ೦ಚ್‌ಸ್ಕೂಲುಗಳ ಅಭಿವೃದ್ಧಿಯೂ ತೃಪ್ತಿಕರವಾಗಿಲ್ಲ. ನೊಣವಿನಕೆರೆಸ್ಕೂಲು ಈ ಸಂವತ್ಸರದಲ್ಲಿ ಬಹಳ ಅಭಿವೃದ್ಧಿಗೆ ಬಂದಿರುತ್ತೆ.

ಚಿತ್ರದುರ್ಗ ಡಿಸ್ಟ್ರಿಕ್ಟ್ :—ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್ ಸ್ಕೂಲುನಲ್ಲಿ ೧೬೩ ಜನ ವಿದ್ಯಾರ್ಥಿಗಳಿದಾರೆ. ಇದು ಸುಮಾರಾಗಿ ಒಳ್ಳೆ ಸ್ಥಿತಿಯಲ್ಲಿದೆ. ಲೋವರ್ ಸೆಕೆಂಡರಿ ತರಗತಿಯಲ್ಲಿ ವಿಶೇಷವಾಗಿ ವಿದ್ಯಾರ್ಥಿಗಳಿಲ್ಲ. ಈ ವಿಷಯದಲ್ಲಿ ಈಗಿನ ಹೆಡ್‌ಮ್ಯಾಸ್ಟರ್ ಗಮನ ಕೊಡಬೇಕಾಗಿರುತ್ತೆ. ಹೊಳಲುಕೆರೆ ಸ್ಕೂಲುನಲ್ಲಿ ೧೦೪ ಜನ ವಿದ್ಯಾರ್ಥಿಗಳಿದಾರೆ. ಇದರ ಅಭಿವೃದ್ಧಿಯೂ ತೃಪ್ತಿಕರವಾಗಿಲ್ಲ. ಹೊಸದುರ್ಗದ ಸ್ಕೂಲುನಲ್ಲಿ ೧೬೩ ಜನ ವಿದ್ಯಾರ್ಥಿಗಳಿದಾರೆ. ಇವೆರಡು ಸ್ಕೂಲುಗಳು ಸುಮಾರಾಗಿ ಒಳ್ಳೇಸ್ಥಿತಿಯಲ್ಲಿವೆ. ದಾವಣಗೆರೆ ಸ್ಕೂಲು ಮತ್ತು ಇದರ ಮೂರು ಬಾ೦ಚ್ ಸ್ಕೂಲುಗಳಲ್ಲಿ ಒಟ್ಟುಸೇರಿ ೩೫೦ ಜನ ವಿದ್ಯಾರ್ಥಿಗಳಿದಾರೆ. ಈ ಸಂಸ್ಥಾನದ ಇನ್ನ್ಯಾವ ಕನ್ನಡ ಸ್ಕೂಲುಗಳಲ್ಲಿಯೂ ಇಷ್ಟುಜನ ವಿದ್ಯಾರ್ಥಿಗಳಿಲ್ಲ. ಈ ಸ್ಕೂಲಿನ ಮತ್ತು ಇದರ ಬಾ೦ಚ್‌ಸ್ಕೂಲುಗಳ ಅಭಿವೃದ್ಧಿಯೂ ತೃಪ್ತಿಕರವಾಗಿದೆ. ಮೊಳಕಾಲುಮುರಿ ತಾಲ್ಲೂಕು ಸ್ಕೂಲು ತುಂಬಾ ಹೀನಸ್ಥಿತಿಯಲ್ಲಿದೆ. ಶಿವಮೊಗ್ಗಾಸ್ಕೂಲುನಲ್ಲಿ ೨೯೦ ಜನ ವಿದ್ಯಾರ್ಥಿಗಳಿದಾರೆ. ಇದು ಅಭಿವೃದ್ಧಿಗೆ ಬರತಕ್ಕದ್ದಾಗಿರುತ್ತೆ. ಗಣಿತ, ಭೂಗೋಳ, ಚರಿತ್ರೆಗಳಲ್ಲಿ ಬೋಧನೆಯು ತೃಪ್ತಿಕರವಾಗಿಲ್ಲ. ಶಿಕಾರಿಪುರದ ಸ್ಕೂಲು ಹೀನಸ್ಥಿತಿಯಲ್ಲಿದೆ. ಇಲ್ಲಿನ ಉಪಾಧ್ಯಾಯರು ತಕ್ಕಷ್ಟು ಅನುಭವಸ್ಥರಾಗಿಲ್ಲ. ಚೆನ್ನಗಿರಿ ಸ್ಕೂಲುನಲ್ಲಿ ೧೨೭ ಜನ ವಿದ್ಯಾರ್ಥಿಗಳಿದಾರೆ. ಲೋವರ್‌ಸೆಕೆಂಡರಿ ತರಗತಿಯಲ್ಲಿ ಗಣಿತ, ಭೂಗೋಳ, ಚರಿತ್ರೆ, ಇವುಗಳ ಬೋಧನೆಯು ಸರಿಯಾಗಿಲ್ಲ. ಸಾಗರ, ತೀರ್ಥಹಳ್ಳಿ ಸ್ಕೂಲುಗಳ ಅಭಿವೃದ್ಧಿಯು ಸುಮಾರಾಗಿ ಒಳ್ಳೇಸ್ಥಿತಿಯಲ್ಲಿವೆ.

ಹೊನ್ನಾಳಿಸ್ಕೂಲುನಲ್ಲಿ ಅಭಿವೃದ್ಧಿಯೇನೂ ಕಾಣಬರುವುದಿಲ್ಲ. ನ್ಯಾಮತಿ ಸ್ಕೂಲು ಹೀನಸ್ಥಿತಿಯಲ್ಲಿದೆ. ಹೊಳೆಹೊನ್ನೂರು ಸ್ಕೂಲಿನ ಅಭಿವೃದ್ಧಿಯು ತೃಪ್ತಿಕರವಾಗಿಲ್ಲ.

ಹಾಸನದ ಸ್ಕೂಲುನಲ್ಲಿ ೨೩೪ ಜನ ವಿದ್ಯಾರ್ಥಿಗಳಿದಾರೆ. ಇದು ಸುಮಾರಾಗಿ ಉತ್ತಮಸ್ಥಿತಿಯಲ್ಲಿದೆ. ಇದು ಇನ್ನೂ ಅಭಿವೃದ್ಧಿಗೆ ಬರಬೇಕಾಗಿರುತ್ತೆ. ಅರಸೀಕೆರೆ ಸ್ಕೂಲನಲ್ಲಿ ಮುತವರ್ಜಿಯಿಂದ ಕೆಲಸ ನಡೆಯುವಹಾಗೆ ತೋರುವುದಿಲ್ಲ. ಬಾಣಾವಾರದ ಸ್ಕೂಲು ಅಭಿವೃದ್ಧಿಸ್ಥಿತಿಯಲ್ಲಿದೆ. ಚನ್ನರಾಯಪಟ್ಟಣದ ಸ್ಕೂಲುಸ್ಥಿತಿಯು ತೃಪ್ತಿಕರವಾಗಿಲ್ಲ. ಅರಕಲಗೂಡು ಸ್ಕೂಲು ಒಳ್ಳೇ ಸ್ಥಿತಿಯಲ್ಲಿದೆ. ಹೊಳೆನರಸೀಪುರದ ಸ್ಕೂಲು ಸುಮಾರಾಗಿ ಚೆನ್ನಾಗಿದೆ. ಸಕಲೇಶಪುರದ ಸ್ಕೂಲು ಅಭಿವೃದ್ಧಿಯು ತೃಪ್ತಿಕರವಾಗಿಲ್ಲ. ಬೇಲೂರು ಸ್ಕೂಲು ಹಾಸನಡಿಸ್ಟ್ರಿಕ್ಟಿನಲ್ಲಿ ತುಂಬಾ ಅಭಿವೃದ್ಧಿಸ್ಥಿತಿಯಲ್ಲಿರುತ್ತೆ. ಇಲ್ಲಿಂದ ಲೋವರ್‌ಸೆಕೆಂಡರಿ ಪರೀಕ್ಷೆಯಲ್ಲಿ ನಾಲ್ಕುಜನ ವಿದ್ಯಾರ್ಥಿಗಳು ತೇರ್ಗಡೆಯಾಗಿರುತ್ತಾರೆ. ಈ ಸ್ಕೂಲು ಈಗಿನ ಹೆಡ್‌ಮಾಸ್ಟರಿಂದ ತುಂಬಾ ಅಭಿವೃದ್ಧಿಗೆ ಬಂದಿರುತ್ತೆ. ಗಾರ್ಮದ ಸ್ಕೂಲು ಅಭಿವೃದ್ಧಿಯು ತೃಪ್ತಿಕರವಾಗಿಲ್ಲ.

ಕಡೂರು ಸ್ಕೂಲು ಸುಮಾರಾಗಿ ಉತ್ತಮಸ್ಥಿತಿಯಲ್ಲಿರುತ್ತೆ. ಬೀರೂರು ತರೀಕೆರೆ ಸ್ಕೂಲುಗಳು ಅಭಿವೃದ್ಧಿಗೆ ಬರತಕ್ಕವುಗಳಾಗಿವೆ. ಇವೆರಡರಲ್ಲಿ ವಿದ್ಯಾರ್ಥಿಗಳು ಬಹಳ ಕಮ್ಮಿ. ಎಡೆಹಳ್ಳಿ ಸ್ಕೂಲಿನ ಸ್ಥಿತಿಯು ಸುಮಾರಾಗಿದೆ. ಶೃಂಗೇರಿ ಮತ್ತು ಮೂಡಗೆರೆ ಸ್ಕೂಲುಗಳು ಒಳ್ಳೇಸ್ಥಿತಿಗೆ ಬಂದಿರುತ್ತವೆ.

ಮೈಸೂರು ತಾಲ್ಲೂಕು ಕನ್ನಡಸ್ಕೂಲುನಲ್ಲಿ ೨೮೬ ಜನ ವಿದ್ಯಾರ್ಥಿಗಳಿದಾರೆ. ಇದು ಈ ವರುಷದಲ್ಲಿ ತುಂಬಾ ಅಭಿವೃದ್ಧಿಗೆ ಬಂದಿದೆ. ಶ್ರೀರಂಗಪಟ್ಟಣದ ಸ್ಕೂಲು ಸುಮಾರಾಗಿ ಚೆನ್ನಾಗಿದೆ. ಮಂಡ್ಯದ ಸ್ಕೂಲಿನ ಮಿಡಲ್‌ಸ್ಕೂಲ್ ತರಗತಿಯಲ್ಲಿ ನಾಲ್ಕುಜನ ವಿದ್ಯಾರ್ಥಿಗಳುಮಾತ್ರವೇ ಇರುತ್ತಾರೆ. ಇದರ ಅಭಿವೃದ್ಧಿಸ್ಥಿತಿಯು ತೃಪ್ತಿಕರವಾಗಿಲ್ಲ. ನಾಗಮಂಗಲದ ಸ್ಕೂಲು ತುಂಬಾ ಅಭಿವೃದ್ಧಿಗೆ ಬಂದಿರುತ್ತೆ. ಇಲ್ಲಿಂದ ಲೋವರ್‌ಸೆಕೆಂಡರಿ ತರಗತಿಯಲ್ಲಿ ಇಬ್ಬರು ವಿದ್ಯಾರ್ಥಿಗಳು ತೇರ್ಗಡೆಯಾಗಿರುತ್ತಾರೆ. ಈ ಸ್ಕೂಲು ಸ್ಥಾಪಿತವಾದ ಲಾಗಾಯಿತು ಲೋವರ್‌ಸೆಕೆಂಡರಿ ತರಗತಿಯಲ್ಲಿ ವಿದ್ಯಾರ್ಥಿಗಳು ತೇರ್ಗಡೆಯಾದದ್ದು ಇದೇ ಮೊದಲು. ಎಡತೊರೆ, ಹುಣಸೂರು ಸ್ಕೂಲುಗಳ ಸ್ಥಿತಿಯು ತೃಪ್ತಿಕರವಾಗಿಲ್ಲ. ಗಂಜಾಂ, ಕೃಷ್ಣರಾಜಪೇಟೆ ಸ್ಕೂಲುಗಳು ಸುಮಾರಾಗಿ ಒಳ್ಳೇಸ್ಥಿತಿಯಲ್ಲಿವೆ. ಮಿರಲೆ ತಾಲ್ಲೂಕು ಬಾಣಂಚೆ ಸ್ಕೂಲು ಅಭಿವೃದ್ಧಿಗೆ ಬಂದಿರುತ್ತೆ. ಮೈಸೂರು ಶಿವರಾಂಪೇಟೆ ವೆಸ್ಲಿಯನ್ ಮಿಷನ್ ಸ್ಕೂಲಿನಲ್ಲಿ ೨೧೦ ಜನ ವಿದ್ಯಾರ್ಥಿಗಳಿದಾರೆ. ಇಲ್ಲಿಂದ ಲೋವರ್ ಸೆಕೆಂಡರಿ ಪರೀಕ್ಷೆಗೆ ಹೋಗಿದ್ದ ಹದಿಮೂರು ವಿದ್ಯಾರ್ಥಿಗಳ ಪೈಕಿ ಹತ್ತುಜನ ವಿದ್ಯಾರ್ಥಿಗಳು ತೇರ್ಗಡೆಯಾಗಿರುತ್ತಾರೆ. ಇದರ ಅಭಿವೃದ್ಧಿಯೂ ಉತ್ತಮಸ್ಥಿತಿಯಲ್ಲಿದೆ. ಮೈಸೂರು ಮಂಡ್ಯಾಟೆ ವೆಸ್ಲಿಯನ್‌ಮಿಷನ್‌ಸ್ಕೂಲು, ಮಂಡ್ಯದ ತಾಲ್ಲೂಕು ಕ್ಯಾತನಗೆರೆ ಸ್ಕೂಲು ಇವು

ಳ ಅಭಿವೃದ್ಧಿಯೂ ತೃಪ್ತಿಕರವಾಗಿವೆ. ನಂಜನಗೂಡುಸ್ಕೂಲು ಈ ಸಂಸ್ಥಾನದಲ್ಲಿ ಇವ ಇತರ ಸ್ಕೂಲುಗಳ ಅಭಿವೃದ್ಧಿಗಿಂತಲೂ ಉತ್ತಮಸ್ಥಿತಿಯಲ್ಲಿರುತ್ತದೆ. ಇದರಲ್ಲಿ ೪೦ ಜನ ವಿದ್ಯಾರ್ಥಿಗಳಿದಾರೆ. ಇಲ್ಲಿಂದ ಹತ್ತುಜನ ವಿದ್ಯಾರ್ಥಿಗಳು ಲೋಪರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುತ್ತಾರೆ. ತೇರ್ಗಡೆಯಾದವರಲ್ಲಿ ಒಬ್ಬನು ಮೊದಲನೇ ತರಗತಿಯಲ್ಲಿ ಮೊದಲನೇಯವನಾಗಿರುತ್ತಾನೆ. ಸಾಗರ ಸ್ಕೂಲುನಲ್ಲಿ ೧೩೩ ಜನ ವಿದ್ಯಾರ್ಥಿಗಳಿದಾರೆ; ಮಳವಳ್ಳಿ ಸ್ಕೂಲುನಲ್ಲಿ ೯೮ ಜನ ವಿದ್ಯಾರ್ಥಿಗಳಿದಾರೆ; ಇವೆಡರ ಅಭಿವೃದ್ಧಿಯೂ ತೃಪ್ತಿಕರವಾಗಿದೆ. ಚಾಮರಾಜನಗರದ ಸ್ಕೂಲು ಹೀನಸ್ಥಿತಿಯಲ್ಲಿದೆ. ಗುಂಡ್ಲುಪೇಟೆ, ತಿರುಮಲಕೂಡ್ಲು ಸ್ಕೂಲುಗಳು ಸುಮಾರಾಗಿ ಒಳ್ಳೇಸ್ಥಿತಿಯಲ್ಲಿವೆ.

ಪಾಠಕ್ರಮ.

ಪಾಠಕ್ರಮವನ್ನು ಮೂರುಶೆರನಾಗಿ ಭಾಗಿಸಬಹುದು.

I. (Discipline) ತಿದ್ದುವಿಕೆ.
II. (Instruction) ಶಿಕ್ಷಣ.
III. (Organisation) ಶಾಲಾನಿಬಂಧನೆ.

ಪಾಠಶಾಲೆಯು ಬಾಲಕರನ್ನು ಕ್ರಮಗೊಳಿಸಿ ಅವರ ನಡೆನುಡಿಗಳನ್ನು ತಿದ್ದುಪಾಟು ಮಾಡುವ್ರದಕ್ಕೆ ಬೇಕಾದ ಸಾಧನಗಳನ್ನು, ಇವುಗಳಿಂದುಂಟಾಗುವ ಫಲಿತಾಂಶಗಳನ್ನು "ತಿದ್ದುವಿಕೆಯು (Discipline) ನಿರ್ದೇಶಿಸುವುದು. ಬೋಧನಾಕಾರ್ಯಕ್ಕೆ ಅವಶ್ಯಕವಾದ ಸಾಧಕಗಳೆಲ್ಲಕ್ಕೂ ವೆವಸ್ಥೆ ಎನ್ನಿಬಹುದು. ಉಪಾಧ್ಯಾಯನು ಬಾಲಕರ ಜ್ಞಾನಾಭಿವೃದ್ಧಿಗೆ ಬೇಕಾದ ವಿಷಯಗಳನ್ನು ಮಾತ್ರ ತಿಳಿದವನಾದರೆ ಸದ್ಬೋಧಕನೆನಿಸಿಕೊಳ್ಳಲಾರನು. ಆಳಿಕೆಯ ಸಾಮರ್ಥ್ಯವಿಲ್ಲದಿದ್ದಲ್ಲಿ ಅತನ ಬೋಧನೆಯು ನಿಷ್ಪ್ರಯೋಜನವಾಗುವುದು. ಪಾಠಶಾಲೆಯು ಕೆಲಸದಲ್ಲಿ ಕ್ರಮವು, ಬಾಲಕರಲ್ಲಿ ಗಮನವು, ಆಸಕ್ತಿಯು, ನಿರ್ಬಂಧವಿಲ್ಲದ ವಿಧೇಯತ್ವವು, ಸದ್ವೃತ್ತಿಯು ಇರುವುದಕ್ಕನುಸಾರವಾಗಿ ತಿದ್ದುವಿಕೆಯು ಇರುವುದೆಂದು ಹೇಳಬಹುದು.

I. ತಿದ್ದುವಿಕೆಗೆ ಸಹಕಾರಿಗಳು :—

ಅನುಕೂಲವಾದ ಶಾಲಾಗೃಹ, ಕ್ರಮವಾದ Time Table ಪಾಠನಿಯಮಿಕಪಟ್ಟಿ ಮತ್ತು ಇತರ ಸಾಮಗ್ರಿಗಳು ಅವಶ್ಯಕವು

ತಿದ್ದುವಿಕೆಯಿಂದ ಪಾಠಶಾಲೆಗುಂಟಾಗುವ ಅನುಕೂಲಗಳು :—

(1) ಶಿಕ್ಷಣಕ್ಕೆ ಅನುಕೂಲವಾದ ಕ್ರಮವೂ, ನಿಯಮಾನುವರ್ತ್ತಿಯೂ, ಬಾಲಕರಲ್ಲಿ ನೆಲೆಗೊಳ್ಳುವುವು.

(2) ಉಪಾಧ್ಯಾಯನ ಸೌಕರ್ಯಕ್ಕೆ ಅವಶ್ಯಕವಾದದ್ದು.

(3) ತಿದ್ದುವಿಕೆಯನ್ನು ಬಾಲಕರೂ ಅಪೇಕ್ಷಿಸುವರು. ಎಷ್ಟು ಅವಿಧೇಯರೆಂದು ಬಾಲಕರು ದೂಷಿಸಲ್ಪಟ್ಟರೂ ತಿದ್ದುವಿಕೆಯುಳ್ಳ ಶಾಲಾ ನಿಯಮಗಳನ್ನು ಅನುಸರಿಸಲು ಪ್ರೀತಿಸುವರಲ್ಲದೆ ಅನಾಯಕರಾಗಿರಲಿಕ್ಕೆ ಅಪೇಕ್ಷಿಸುವುದಿಲ್ಲ.

(4) ಸುವ್ಯವಸ್ಥೆಯಿಂದ ನಿಯಮಾನುಸಾರವಾಗಿ ಸರ್ವಕಾಲದಲ್ಲಿಯೂ ನಡೆಯುವ ಪದ್ಧತಿಯು ಬಾಲಕರಲ್ಲಿ ಅಭಿವೃದ್ಧಿಗಾನ್ನು ಹೊವುದು.

(5) ಮಾನಸಿಕ ನೀತಿಮಾರ್ಗ ಅಭಿವೃದ್ಧಿಗೆ ತಿದ್ದುವಿಕೆಯು ಅತ್ಯಂತ ಅವಶ್ಯಕವು.

∴ ತಿದ್ದುವಿಕೆಯ ಉದ್ದೇಶಗಳು :—

(1) ಸರಿಯಾದ ಕ್ರಮ.—ತರಗತಿಯಲ್ಲಿ ಬಾಲಕರೆಲ್ಲರೂ ಕೂಗಾಟವಿಲ್ಲದೆ ಕೆಲಸ ಮಾಡಬೇಕು. ಹೀಗೆ ಹೇಳೋಣದರಿಂದ ನಿಶ್ಶಬ್ದವಾಗಿರಬೇಕೆಂಬ ಅರ್ಥವಲ್ಲ. ಪಾಠಶಾಲೆಯ ಪ್ರತಿಯೊಂದು ಕೆಲಸವನ್ನು ಅದರದರ ಕ್ಲೃಪ್ತಕಾಲದಲ್ಲಿ ನಡಿಸತಕ್ಕದ್ದು.

(2) ಗಮನ.—ಬಾಲಕರಲ್ಲಿ ಗಮನವಿಡುವ ಅಭ್ಯಾಸವನ್ನು ವಿಕರೀತಿಯಾಗಿ ಅಭಿವೃದ್ಧಿಪಡಿಸಲು ಆಗುವುದಿಲ್ಲ. ಅವರ ಸ್ವಭಾವ ಮತ್ತು ವಯಸ್ಸನ್ನು ಅನುಸರಿಸಿ ಗಮನಶಕ್ತಿಯನ್ನು ಸ್ಥಿರಗೊಳಿಸಬೇಕು. ಬಲಾತ್ಕಾರದಿಂದ ಗಮನವಿರುವಂತೆ ಮಾಡಿದಲ್ಲಿ ಬಾಲಕರು ಗಮನವನ್ನು ನಟಿಸುವರೇ ಅಲ್ಲದೆ ನಿಜವಾದ ಗಮನವನ್ನಿಡುವುದಿಲ್ಲ.

(3) ಪರಿಶ್ರಮ.—ಬಾಲಕರು ಗಮನವಿಟ್ಟು ಬಹಳ ಹೊತ್ತಿನ ವರಿಗೂ ತಮ್ಮ ಕೆಲಸವನ್ನು ಮಾಡುವ ಅಭ್ಯಾಸವನ್ನುಂಟುಮಾಡಬೇಕು. ಬಾಲ್ಯದಲ್ಲಿ ಕಠಿಣವಾದ ಸಂಗತಿಗಳನ್ನು ಪರಿಶ್ರಮದಿಂದ ತಿಳಿಯಲು ಹುಡುಗರ ಮನಸ್ಸು ತಿರಸ್ಕರಿಸುವುದು. ಆದರೆ ದೊಡ್ಡವರಾದ ನಂತರ ಅನೇಕ ಕಠಿಣವಾದ ಪ್ರೀತಿಕರವಲ್ಲದ ಕಾರ್ಯಗಳನ್ನು ಮಾಡಬೇಕಾಗಿರುವುದರಿಂದ ಬಾಲ್ಯದಿಂದಲೂ

ಕೆಲಸವನ್ನು ಪರಿಶ್ರಮದಿಂದ ಮಾಡುವ ಅಭ್ಯಾಸವನ್ನು ಕ್ರಮೇಣ ವೃದ್ಧಿಪಡಿಸುವುದು ಉಪಾಧ್ಯಾಯನ ಕರ್ತವ್ಯವು.

(4) ಆಸಕ್ತಿ.—ಇದನ್ನುಂಟುಮಾಡಲು, ಉಪಯೋಗವಾದಅವಶ್ಯಕವಾ ಮತ್ತು ಬಾಲಕರು ತಿಳಿಯಲು ಸಾಧ್ಯವಾದ ವಿಷಯಗಳನು ಬೋಧಿಸಬೇಕು. ಪಾಠಶಾಲೆಯಲ್ಲಿ ಕಲಿಯುವ ಸಂಗತಿಗಳಿಗೂ ಬಾಲಕರ ಅನುಭವದಲ್ಲಿರುವ ಸಂಗತಿಗಳಿಗೂ ಪರಸ್ಪರ ಸಂಬಂ ವನ್ನು ಆಗಾಗ್ಗೆ ತಿಳಿಸುತ್ತಿರಬೇಕು.

ಡಿ. ವೆಂಕಟರಾಮ್ಮಯ್ಯ, ಬಿ.ಎ.

ಗಣಿತ.

ದಶಮಾಂಶ.

I. ಗಣಿತಶಾಸ್ತ್ರವನ್ನು ಪ್ರಾರಂಭಿಸಿದಾಗಲೆ ನಾವ್ರುಗಳು ಅಂಕಿಗಳಿಗೆ ಎರಡ ವಿಧವಾದ ಬೆಲೆಗಳುಂಟೆಂದು ಕಲಿತಿರುತ್ತೇವೆ. ಅಂಕಿಗಳಿಗೆ ಸ್ವಾಭಾವಿಕವಾಗಿರು ಬೆಲೆಯೊಂದು; ಸಂಖ್ಯೆಗಳಲ್ಲಿ ಏಕ, ದಶ, ಶತ, ಮುಂತಾದ ಸ್ಥಾನಗಳಲ್ಲಿರುವುದರಿ ದುಂಟಾಗುವ ಹೆಚ್ಚಾನ ಬೆಲೆಯು ಎರಡನೆಯದು. ಉದಾಹರಣೆಗಾಗಿ 4388 ಎಂ ಸಂಖ್ಯೆಯನ್ನು ತೆಗೆದುಕೊಳ್ಳುಂಣ. ಇದರಲ್ಲಿ ಏಕಸ್ಥಾನದಲ್ಲಿರುವ 8 ಎಂಬ ಅಂಕಿಯ ಅದನ್ನು ಸಾಧಾರಣವಾಗಿ ಎಷ್ಟೆಂದು ಉಚ್ಚರಿಸುವೆವೋ ಅಷ್ಟು ಬೆಲೆಯುಳ್ಳದ್ದಾಗಿರ ದಶಸ್ಥಾನದಲ್ಲಿರುವ 8ರ ಬೆಲೆಯು $8 \times 10 = 80$. ಶತಸ್ಥಾನದಲ್ಲಿರುವ 3 ಬೆಲೆಯು $3 \times 100 = 300$; ಸಹಸ್ರಸ್ಥಾನದಲ್ಲಿರುವ 4 ಬೆಲೆಯು $4 \times 100 = 4000$. ಅಂದರೆ ಅಂಕಿಯು ಎಡಕ್ಕೆ ಒಂದೊಂದು ಸ್ಥಾನ ಹೆಚ್ಚಾಗಿ ಇದ್ದಹಾಗೆ ಅದರ ಬೆಲೆಯು 10 ರಷ್ಟು ಹೆಚ್ಚುತ್ತ ಹೋಗುವುದು. ಅಥವಾ ಅಂಕಿಯು ಬಲ ಒಂದೊಂದು ಸ್ಥಾನ ಹೆಚ್ಚಾಗಿ ಇದ್ದಹಾಗೆಲ್ಲ ಅದರ ಬೆಲೆಯು 10 ರಷ್ಟು ಕಡಮೆಯ ಗುತ್ತ ಬರುವುದೆಂದಾರೂ ಹೇಳಬಹುದು. ಹೀಗೆ ಸ್ಥಾನಗಳನ್ನು ಸೂಚಿಸುವುದ ಊರ್ಧ್ವರೇಖೆಗಳನ್ನು ಬರೆದು ಕಲಂಗಳನ್ನು ಮಾಡಿ ಬಲಗಡೆಯಿಂದ ಎಡಕ್ಕೆ ಎಣಿ 4ನೇ ಕಲಂನಲ್ಲಿ 7 ಎಂಬ ಸಂಖ್ಯೆಯನ್ನು ಬರೆದರೆ ಅದರ ಬೆಲೆಯು 7000 ಆಗ ವುದು; 3ನೇ ಕಲಂನಲ್ಲಿ ಅದೇ ಅಂಕಿಯನ್ನು ಬರೆದರೆ 700 ಆಗುವುದು; ಹೀಗೆಯೆ 2ನೇಯುದರಲ್ಲಿ 70 ಆಗುವುದು; 1ನೇ ಕಲಂನಲ್ಲಿ ಬರೆದರೆ ಅಂಕಿಯ ಸಹಜಬೆಲೆಯೂ 7 ಆಗುವುದು. ಹೀಗೆಯೆ ಬಲಕ್ಕೆ ಬರುತ್ತಬರುತ್ತ ಅಂಕಿಯ ಬೆಲೆಯು ಹಿಂದಿ ಸ್ಥಾನದಲ್ಲಿದ್ದದ್ದಕ್ಕಿಂತಲು 10 ರಷ್ಟು ಕಡಮೆಯಾಗುವುದು. ಆದುದರಿಂದ ಬಲಗ

ಅಂತ್ಯದಲ್ಲಿರುವ ಊರ್ಧ್ವರೇಖೆಯ ಆಚೆಗೆ ಮತ್ತೆ ಕೆಲವು ರೇಖೆಗಳನ್ನು ಬರೆದು ಕಲಂಗಳನ್ನು ಮಾಡಿ ಮೇಲೆ ಹೇಳಿದ 7 ಎಂಬ ಅಂಕಿಯನ್ನು ಅವುಗಳಲ್ಲಿ ಮೊದಲನೆಯದರಲ್ಲಿ ಬರೆದರೆ ಅದರ ಬೆಲೆಯು $\frac{7}{10}$ ಆಗುವುದು. ಬಲಗಡೆಗೆ ಎರಡನೆಯ ಕಲಂನಲ್ಲಿ ಬರೆದರೆ $\frac{7}{100}$ ಆಗುವುದು. ಹೀಗೆಯೆ ಅಂಕಿಯ ಬೆಲೆಯು 10 ರಷ್ಟು ಕಡಮೆಯಾಗುತ್ತಾ ಬರುವುದು. ಈ ಕಲಂಗಳು ಮುಂದೆ ಬರೆದಿರುವಂತೆ ಕಾಣುವುವು:

ಹೀಗೆಯೆ ಇನ್ನೂ ಕಲಂಗಳನ್ನು ಬರೆಯಬಹುದು.	ಸಹಸ್ರಾಂಶ	ಶತಾಂಶ	ದಶಾಂಶ	ಏಕ	ದಶಾಂಶ	ಶತಾಂಶ	ಸಹಸ್ರಾಂಶ	ಹೀಗೆಯೆ ಇನ್ನೂ ಕಲಂಗಳನ್ನು ಬರೆಯಬಹುದು

ಆದರೆ ಈ ರೀತಿಯಾಗಿ ರೇಖೆಗಳನ್ನು ಬರೆಯುವುದು ಅನನುಕೂಲವಾದ್ದರಿಂದ ಸೌಲಭ್ಯವನ್ನುಂಟುಮಾಡಿಕೊಳ್ಳುವುದಕೊಸ್ಕರ ಏಕ, ದಶ, ಶತ ಮುಂತಾದ ಗುಣಸ್ಥಾನಗಳಿಗೂ ದಶಾಂಶ, ಶತಾಂಶ ಮುಂತಾದ ಅಂಶಸ್ಥಾನಗಳಿಗೂ ಮಧ್ಯದಲ್ಲಿ ಒಂದು ಚುಕ್ಕೆಯನ್ನು ಸಂಕೇತರೂಪವಾಗಿಡುವ ಪದ್ಧತಿಯು ವಾಡಿಕೆಯಾಗಿದೆ. ಚುಕ್ಕೆಯ ಬಲಗಡೆಯಲ್ಲಿರುವ ಸಂಖ್ಯೆಗೆ ದಶಮಾಂಶವೆಂದು ಹೆಸರು.

ಮೇಲೆ ಹೇಳಿದ ದಶಮಾಂಶಸ್ವರೂಪವನ್ನು ಚೆನ್ನಾಗಿ ತಿಳಿದುಕೊಂಡರೆ ದಶಮಾಂಶವನ್ನು ಭಿನ್ನರಾಶಿಯನ್ನಾಗಿ ಮಾಡುವುದು ಬಹಳ ಸುಲಭವಾಗುವುದು.

ಉದಾ: ·2308

ಈ ದಶಮಾಂಶದಲ್ಲ 2 ರ ಬೆಲೆಯು 2 ದಶಾಂಶ ಅಥವಾ $\frac{2}{10}$

3 ..... 3 ಶತಾಂಶ ..... $\frac{3}{100}$

0 ಎಂಬುದು ಸಹಸ್ರಾಂಶವಿಲ್ಲವೆಂದು ತೋರಿಸುವುದು.

8 ರ ಬೆಲೆಯು 8 ದಶ ಸಹಸ್ರಾಂಶ ಅಥವಾ $\frac{8}{10,000}$

$$\therefore \quad \cdot 2308 = \frac{2}{10} + \frac{3}{100} + \frac{0}{1,000} + \frac{8}{10,000} = \frac{2308}{10,000}$$

ಈ ಉದಾಹರಣೆಯಿಂದ ದಶಮಾಂಶಗಳನ್ನು ಭಿನ್ನರಾಶಿಯನ್ನಾಗಿ ಮಾಡುವುದಕ್ಕೆ ಬೇಕಾದ ವಿಧಿಯನ್ನು ಕಂಡು ಹಿಡಿಯಬಹುದು. ಆ ವಿಧಿಯೇನೆಂದರೆ :— ದಶಮಾಂಶದಲ್ಲಿನ ಅಂಕಿಗಳನ್ನು ಚುಕ್ಕೆಯನ್ನು ಬಿಟ್ಟು ಅದೇ ಕ್ರಮವಾಗಿ ಬರೆದು

ಅದನ್ನು ಭಿನ್ನರಾಶಿಯ ಅಂಶವನ್ನಾಗಿ ಮಾಡಿ ಛೇದದಲ್ಲಿ 1 ನ್ನು ಬರೆದು ಅದರ ಮುಂದೆ ದಶಮಾಂಶದಲ್ಲಿನ ಅಂಕಿಗಳ ಸಂಖ್ಯೆ ಎಷ್ಟಿರುವುದೊ ಅಷ್ಟು ಸೊನ್ನೆಗಳನ್ನು ಬರೆಯುತಕ್ಕದ್ದು.

[ಹೀಗೆ ಮಾಡಿ ಬಂದ ಭಿನ್ನರಾಶಿಗಳು ಕನಿಷ್ಠರೂಪದಲ್ಲಿರುವುವೆಂದು ನಿಶ್ಚಯವಿಲ್ಲ. ಉದಾ:— $\frac{2308}{10000} = \frac{577}{2500}$; $\cdot 125 = \frac{125}{1000} = \frac{1}{8}$]

ಛೇದದಲ್ಲಿ 10 ಅಥವಾ 100, 1000 ಮುಂತಾದ 10 ರ ಅಪವರ್ತ್ಯಗಳಿರುವ ಭಿನ್ನರಾಶಿಗಳನ್ನು ಒಡನೆಯೇ ದಶಮಾಂಶದಲ್ಲಿ ಬರೆಯಬಹುದು :—

ಉದಾ:—

$$\frac{3}{10} = \cdot 3; \quad \frac{5}{10} = \cdot 5$$

$$\frac{41}{100} = \frac{40}{100} + \frac{1}{100} = \frac{4}{10} + \frac{1}{100} = \cdot 41$$

$$\frac{729}{1000} = \frac{700}{1000} + \frac{20}{1000} + \frac{9}{1000} = \frac{7}{10} + \frac{2}{100} + \frac{9}{1000} = \cdot 729.$$

$$\frac{7}{1000} = \cdot 007.$$

ದಶಮಾಂಶಗಳನ್ನು 10 ಅಥವಾ 10 ರ ಅಪವರ್ತ್ಯಗಳಿಂದ ಗುಣಿಸುವುದು, ಭಾಗಿಸುವುದು ಸಹ ದಶಮಾಂಶಸ್ವರೂಪವನ್ನು ತಿಳಿದಲ್ಲಿ ಬಹಳ ಸುಲಭ. 10 ರಿಂದ ಗುಣಿಸಬೇಕಾದರೆ ದಶಮಾಂಶಸೂಚಕವಾದ ಚುಕ್ಕೆಯನ್ನು ಬಲಕ್ಕೆ 1 ಸ್ಥಾನ ಒತ್ತಿಸಬೇಕಾಗುವುದು. 100 ರಿಂದಾದರೆ 2 ಸ್ಥಾನಗಳು ಒತ್ತಿಸಬೇಕಾಗುವುದು. ಹೀಗೆಯೇ ಇತರ ಅಪವರ್ತ್ಯಗಳಿಗೂ ಸಹ. ಭಾಗಿಸುವುದಾದರೆ ಚುಕ್ಕೆಯನ್ನು ಎಡಕ್ಕೆ ಬದಲಾಗಿ ಬಲಕ್ಕೆ ಒತ್ತಿಸಬೇಕಾಗುವುದು.

ವಿದ್ಯಾದಾಯಿನಿ.

ಭಾಗ ೨.] ಸೆಪ್ಟಂಬರ್ ೧೯೦೮. [ಸಂಚಿಕೆ ೯.

ಶಾರೀರಭಾಗ.

ಆಹಾರವು ರಕ್ತಕ್ಕೆ ಬಂದು ಸೇರುತ್ತಿರುವ ಬಗೆಯನ್ನು ಹಿಂದೆ ಹೇಳಿದ್ದಾಯಿತು. ರಕ್ತವೆಂದರೇನು? ಇದರಲ್ಲಿ ಸೇರಿರುವ ವಸ್ತುಗಳಾವುವು. ಇದು ದೇಹದಲ್ಲಿ ಸಂಚರಿಸುತ್ತಿರುವ ಬಗೆ ಹ್ಯಾಗೆ, ಎಂಬೀ ವಿಷಯಗಳನ್ನು ಈಗ ವಿಚಾರಮಾಡಲು ಸಮಯವಾಗಿದೆ.—

ರಕ್ತವು ನೋಡುವುದಕ್ಕೆ ಕೆನ್ನೀರಾಗಿರುವುದು. ಗಾಯವೆಡೆದು ರಕ್ತವು ಸುರಿಯುವಾಗ ಕೆಲವು ಹೊತ್ತು ಅದು ಗಾಯದಿಂದ ಪ್ರವಹಿಸುವುದು; ಕೆಲವುಹೊತ್ತು ಊಟೆಗಳಲ್ಲಿ ನೀರು ಊರುವಂತೆ ಊರುವುದು; ಅದರೆ ರಕ್ತವನ್ನು ಸ್ವಲ್ಪ ಪರೀಕ್ಷಿಸಿ ನೋಡಿದಲ್ಲಿ ಸ್ವಲ್ಪ ಹಳದಿಯಾಗಿ ಕಾಣುವ ಅಚ್ಚನೀರೂ ಇದರಲ್ಲಿ ತೇಲಾಡುತ್ತಿರುವ ಅಸಂಖ್ಯಾತವಾದ ಅಣುರೂಪದ ಬಟ್ಟಕಾಳುಗಳೂ ಸೇರಿ ರಕ್ತವಾಗಿರುವುದು ಗೊತ್ತಾಗುವುದು. ಈ ಬಟ್ಟವಸ್ತುಗಳಲ್ಲಿ ಕೆಲವು ಕೆಂಪಿಗೂ ಕೆಲವು ಬಿಳ್ಪಿಗೂ ಇರುವುವು. ಅದರೆ ಕೆಂಪಾದ ಬಟ್ಟಕಾಳುಗಳೇ ವಿಸ್ತಾರವಾಗಿರುವವು. ಇವು ಚಕ್ರಾಕಾರವಾಗಿರುವ ಹೊಳಪಿನ



ರಕ್ತದ ಬಟ್ಟಗಳು.

ತಗ್ಗಾಗಿಯೂ ಇರುವುದರಿಂದ ಅಂಗಡಿಗಳಲ್ಲಿ ಮಾರುವ ಬಿಸ್ಕಟ್ಟಿನಂತಿರುವವು. ಬಿಳೀ ಬಟ್ಟಕಾಳುಗಳು ಕೆಂಪಿನ ವುಗಳಿಂದ ದೊಡ್ಡವಾಗಿ ಚಂಡಿನಂತೆ ಗುಂಡಾಗಿರುವವು. ಇವುಗಳ ಆಕಾರವು ಆಗಾಗ್ಗೆ ಬದಲಾಗುತ್ತಲೇ ಇರುವುದು. ರಕ್ತವು ಕೆಂಪಿಗೆ ಕಾಣಲು ಅದರಲ್ಲಿನ ಕೆಂಪಾದ ಬಟ್ಟಕಾಳುಗಳೇ ಕಾರಣವಾಗಿರುವವು. ಈ ಬಟ್ಟಕಾಳುಗಳಿಗೆ ಆಕ್ಸಿಜನ್ ವಾಯುವನ್ನು ಹೀರುವ ಶಕ್ತಿಯು ಇರುವುದು. ನಮ್ಮ ಸುತ್ತಮುತ್ತಿರುವ ವಾಯುಮಂಡಲದ ವಾಯುವು ನಮ್ಮ ಶ್ವಾಸಕೋಶಗಳಿಗೆ ಹೋದಾಗ ಇದರಲ್ಲಿನ ಆಕ್ಸಿಜನ್ ವಾಯುವನ್ನು ಆ ಕೆಂಪು ಬಟ್ಟಗಳು ಹೀರುತ್ತಿರುವವು. ಶರೀರದ ಸಮಸ್ತಾಂಗೋಪಾಂಗಗಳೂ ಜೀವಿಸಿರಲು ಆಕ್ಸಿಜನ್ ವಾಯುವು ಅತ್ಯವಶ್ಯವಾಗಿರುವುದು. ರಕ್ತದಿಂದ ಆಗುತ್ತಿರುವ ಪ್ರಯೋಜನಗಳಲ್ಲಿ ಆಕ್ಸಿಜನ್ ವಿಷಯವಾದ ವಿಶೇಷ ಪ್ರಯೋ

ಜನವನ್ನು ಮುಂದೆ ವಿವರಿಸಲಾಗುವುದು. ಹೀಗೆ ರಕ್ತವು ಆಹಾರವಾಹಕವಾಗಿರುವ ದಲ್ಲದೆ ಆಕ್ಸಿಜನ್ ವಾಹಕವಾಗಿಯೂ ಇರುವುದು. ಶರೀರಕ್ಕೆ ಆಕ್ಸಿಜನ್ ವಾಯುವು ಆಹಾರದಷ್ಟು ಅವಶ್ಯವಾಗಿರುವುದು. ಕೆಲಸದಿಂದ ಕೃಶವಾದ ಅಂಗಗಳನ್ನು ಆಹಾರವು ಉಜ್ಜೀವಿಸುತ್ತಿರುವುದು. ಕೆಲಸದಿಂದ ಉಂಟಾದ ಕಶ್ಮಲಗಳನ್ನು ಆಕ್ಸಿಜನ್ ವಾಯುವು ಸುಡುತ್ತಿರುವುದು. ಹೀಗಿದು ದೇಹದಲ್ಲಿನ ಕಶ್ಮಲಗಳನ್ನು ಹೋಗಲಾಡಿಸುತ್ತಿರುವುದು. ಹೀಗೆ ಆಹಾರವನ್ನೂ ಆಕ್ಸಿಜನ್ ವಾಯುವನ್ನೂ ರಕ್ತವು ಶರೀರದ ಸರ್ವಾಂಗೋಪಾಂಗಗಳಿಗೂ ಒಯ್ದು ಆಹಾರವನ್ನು ಕೆಲಸ ಮಾಡತಕ್ಕ ಶರೀರ ಸಾಮಗ್ರಿಗಳಿಗೂ ಉಪಯೋಗಕ್ಕೆ ಬಾರದ ಕಶ್ಮಲಗಳನ್ನು ಸುಡುವುದಕ್ಕೆ ಆಕ್ಸಿಜನ್ ವಾಯುವನ್ನು ಒದಗಿಸುತ್ತಿರುವುದು.

ಹೀಗೆ ಆಹಾರಾದಿಗಳನ್ನು ಅತ್ಯಾವಶ್ಯಕರವಾಗಿ ಶರೀರಸಾಮಗ್ರಿಗಳಿಗೆ ತಂದು ಸೇರಿಸುತ್ತಿರುವ ಈ ರಕ್ತವು ದೇಹದಲ್ಲಿ ಹ್ಯಾಗೆ ಸಂಚರಿಸುತ್ತಿರುವುದು. ಶರೀರ



ಹೃದಯ ಕಮಲ.

ಸಾಮಗ್ರಿಗಳಲ್ಲಿ ಹ್ಯಾಗೆ ವ್ಯಾಪಿಸುತ್ತಿರುವುದು ಎಂಬಂಶಗಳನ್ನು ಈಗ ವಿಚಾರಿಸಬಹುದಾಗಿದೆ. ದೇಹದಲ್ಲಿ ರಕ್ತವು ನಾಳಗಳ ಮೂಲಕವಾಗಿ ಸಂಚರಿಸುತ್ತಿರುವುದು. ಇವುಗಳಿಗೆ ರಕ್ತವಾಹಿಗಳೆಂದು ಹೆಸರು. ಇವು ಹೃದಯದಿಂದ ಹೊರಟು ಸುತ್ತಿಕೊಂಡು ಮತ್ತೆ ಹೃದಯಕ್ಕೆ ಬಂದು ಸೇರುತ್ತಿರುವವು. ಹೃದಯವು ರಕ್ತವನ್ನು ತನ್ನಿಂದಹೊರ ಹೊರಡುವ ರಕ್ತವಾಹಿಗಳಿಗೆ ನಿರಂತರವಾಗಿ ಸೇದುತ್ತಿರುವುದು. ಈ ರಕ್ತವಾಹಿಗಳ

ಮೂಲಕವಾಗಿ ರಕ್ತವು ಶರೀರಸಾಮಗ್ರಿಯನ್ನು ಸೇರುವುದು. ಹೃದಯವು ಬಲವಾದ ಮಾಂಸದ ಚೀಲವಾಗಿದೆ. ಗಾತ್ರದಲ್ಲಿ ಒಂದು ಹಿಡಿಗುಷ್ಟಿರುವುದು. ಆಕಾರದಲ್ಲಿ ಮುಗುಳ್ತ ಕಮಲದಂತಿರುವುದು. ರಬ್ಬರು ಚೆಂಡಿನಲ್ಲಿ ನೀರು ತುಂಬಿ ಬಲವಾಗಿ ಕಿವಿಚಿದರೆ ಅದರಲ್ಲಿನ ನೀರು ಸರ್ರನೆ ಹೊರಹೊರಡುವುದು ಸ್ಪಷ್ಟವು. ಹೀಗೆಯೇ ರಕ್ತದಿಂದ ತುಂಬಿದ ಹೃದಯವು ಸಂಕುಚಿಸಿದಾಗ ಒಳಗಣ ರಕ್ತವು ಹೊರಹೊರಡುವ ರಕ್ತವಾಹಿಗಳಿಗೆ ಬರುವುದು. ಅಲ್ಲಿಂದ ರಕ್ತವು ಈ ರಕ್ತವಾಹಿಗಳ ಮೂಲಕವಾಗಿ ಶರೀರದ ಸಕಲ ಭಾಗಗಳಿಗೂ ವ್ಯಾಪಿಸುವುದು. ದೊಡ್ಡ ಮರದಲ್ಲಿ ಕೊಂಬೆಗಳೊಡೆದು ಇವುಗಳಿಂದ ಮತ್ತೆ ಸಣ್ಣ ಕೊಂಬೆಗಳೊಡೆದು ಇವು ಕೊನೆಗೆ ಸಣ್ಣ ಸಣ್ಣ ಕಡ್ಡಿಗಳಾಗೊಡೆಯುವಂತೆ ಹೃದಯದಿಂದ ಹೊರಡುವ ರಕ್ತವಾಹಿನಿಯು ಅನೇಕ ಶಾಖೆಗಳಾಗೊಡೆದು ಇವುಗಳಿಂದ ಅನೇಕ ಉಪಶಾಖೆಗಳೊಡೆದು ಕೊನೆಗೆ ಅತ್ಯಂತಸೂಕ್ಷ್ಮಗಳಾದ ನಾಳಗಳಾಗೊಡೆಯುವುದು. ಈ ಸೂಕ್ಷ್ಮನಾಳಗಳು ಮಾಂಸ ಮೊದಲಾದ ಶರೀರಸಾಮಗ್ರಿಗಳಲ್ಲಿ ಜಾಲರೂಪವಾಗಿ ಹರಡಿರುವವು. ಈ ನಾಳಭಿತ್ತಿಯು ಬಹಳ ತೆಳುವಾದ ಪರೆಯಾಗಿರುವುದರಿಂದ ವಾಯುರೂಪವಸ್ತುಗಳೂ ಅನ್ನರಸಮೊದಲಾದ ರಸರೂಪವಸ್ತುಗಳೂ ಸುಲಭವಾಗಿ ಈ ಪರೆಯೊಳಗೆ ತೂರಿ ಶರೀರ ಸಾಮಗ್ರಿಗಳಿಂದ ರಕ್ತಕ್ಕೂ ರಕ್ತದಿಂದ ಆ ಸಾಮಗ್ರಿಗಳಿಗೂ ಬರುವುದಕ್ಕೆ ಅಸ್ಪದವಾಗಿದೆ. ಹೀಗೆ ಈ ನಾಳಗಳಿಗೆ ಬಂದ ರಕ್ತವು ಇನ್ನಾವಳ್ಳಿಗೂ ಹಿಂದಕ್ಕೆ ಬಂದ ದಾರಿಯನ್ನು ಮತ್ತೆ ಹಿಡಿಯಲೂ ಆಗುವುದಿಲ್ಲ. ಏಕೆಂದರೆ ಹೃದಯವು ರಕ್ತವನ್ನು ರಕ್ತವಾಹಿಗಳಾದೀ ನಾಳಗಳಿಗೆ ಮೇಲೆಮೇಲೆ ತೋಯ್ತಿರುವುದೆಂದು ಹಿಂದೆಯೇ ಹೇಳಿದೆಯಷ್ಟೆ. ಹೀಗಿರಲು ಮುಂದೆ ಈ ಸೂಕ್ಷ್ಮನಾಳಗಳು ಒಂದಕ್ಕೊಂದು ಸೇರಿ ಸಣ್ಣ ಸಣ್ಣ ನಾಳಗಳಾಗಿ ಇವುಗಳ ಸೇರಿಕೆಯಿಂದದೊಡ್ಡನಾಳಗಳಾಗಿ ಕೊನೆಗೆ ಹೃದಯದಿಂದ ಹೊರಹೊರಡುವ ನಾಳಗಳಷ್ಟು ದೊಡ್ಡವಾಗಿ ಹೃದಯಕ್ಕೆ ಬಂದು ಸೇರುತ್ತಿರುವವು. ಹೃದಯವು ಸಂಕುಚಿಸಿದ ನಂತರ ಬರಿದಾಗಿರುವಾಗ ಈ ನಾಳಗಳಲ್ಲಿ ಬಂದ ರಕ್ತವು ಹೃದಯವನ್ನು ತುಂಬುವುದು. ಮತ್ತೆ ಹೃದಯವು ಸಂಕುಚಿಸಿ ಈ ರಕ್ತವನ್ನು ಹೊರ ಹೊರಡಿಸುವುದು. ಹೀಗೆ ರಕ್ತವು ಹೃದಯದಿಂದ ಹೊರಟು ಕೆಲವು ನಾಳಗಳಿಗೆ ಬಂದು ಅಲ್ಲಿಂದತಿಸೂಕ್ಷ್ಮವಾದ ಮತ್ತೆ ಕೆಲವು ನಾಳಗಳಲ್ಲಿ ಹರಿದು ಅಲ್ಲಿಂದ ಮತ್ತೆ ಕೆಲವು ನಾಳಗಳ ಮೂಲಕವಾಗಿ ಹೃದಯಕ್ಕೆ ಬಂದು ಸೇರುತ್ತಿರುವುದು. ಹೃದಯದಿಂದ ಹೊರಡುವ ನಾಳಗಳು ಸೂಕ್ಷ್ಮನಾಳಗಳು ಹೃದಯಕ್ಕೆ ಬಂದು ಸೇರುವ ನಾಳಗಳು ಎಂಬೀ ರಕ್ತವಾಹಿಗಳ ಜೋಡಣೆಯು



ರಕ್ತಾಭಿಸರಣ.

ಹ್ಯಾಗಿರುವುದೆಂದರೆ:—ಬುಡದಿಂದ ಹಿಡಿದು ತುದಿಯ ವರೆಗೂ ಪೊಳ್ಳಾದ ಎರಡು ಮುಗಳಲ್ಲಿ ಒಂದರ ತುದಿಯಲ್ಲಿನ ಎಲೆನಾರುಗಳು ಮತ್ತೊಂದರ ತುದಿಯಲ್ಲಿನ ಎಲೆನಾರುಗಳೊಡನೆ ಸೇರಿದ್ದು ಬುಡಗಳು ಪೊಳ್ಳಾದ ಹೃದಯಾಕಾರಮಾಲಕ್ಕೆ ಸೇರಿದ್ದರೆ ಹ್ಯಾಗೋ ಹಾಗಿರುವುದು. ಹೃದಯದಿಂದ ರಕ್ತವನ್ನು ಶರೀರಸಾಮಗ್ರಿಗಳಿಗಾಗಿ ತೆಗೆದುಕೊಂಡು ಹೋಗುವ ನಾಳಗಳಿಗೆ ಧಮನಿಗಳೆಂದು ಹೆಸರು. ರಕ್ತವನ್ನು ಹೃದಯಕ್ಕೆ ಮತ್ತೆ ತರುವ ನಾಳಗಳಿಗೆ ಸಿರೆಗಳೆಂದು ಹೆಸರು. ಜಾಲದಂತೆ ಹರಡಿರುವ ಸೂಕ್ಷ್ಮನಾಳಗಳಿಗೆ ರೋಮನಾಳಗಳೆಂದೆನ್ನಬಹುದು.

ಕೋ. ಕಂ. ವೆಂಕಟಶಾಮ್ಯಯ್ಯ, ಬಿ. ಎ.

ನೆಲಕಡಲೆ.

ಬೆಳೆಯುವಸ್ಥಳ.

ಇದು ಮೆಸಿಲಾ, ಮತ್ತು ಹಿಂದೂಸ್ಥಾನದಲ್ಲಿಯೂ ದಕ್ಷಿಣ ಅಮೆರಿಕಾ ಮತ್ತು ಆಫ್ರಿಕಾ ಖಂಡಗಳಲ್ಲಿಯೂ ಬೆಳೆಯುವುದು. ಇಂಡಿಯಾದೇಶದಲ್ಲಿ ದಕ್ಷಿಣ ಆರ್ಕಾಟ್ ಜಿಲ್ಲೆಯಲ್ಲಿ ವಿಶೇಷವಾಗಿ ಆಗುವುದು.

ವರ್ಣನೆ.

ನೆಲಕಡಲೆಯು ಅಮೆರಿಕಾಖಂಡದ ನಿವಾಸಿಯಾದರೂ ಈಗ ಸುಮಾರು ನೂರೈವತ್ತು ವರ್ಷಗಳಿಂದ ಇದನ್ನು ಹಿಂದುಸ್ಥಾನದಲ್ಲಿ ಬೆಳೆಯುತ್ತಿರುವರು. ಈ ಸಸಿಯು ಸೀರು ಆರು ಅಂಗುಲಗಳ ಉದ್ದವಿದ್ದು ಅದರಿಂದ ಅನೇಕ ಕೊಂಬೆಗಳು ಹೊರಡುತವೆ. ಸೀರುಗಳಲ್ಲಿ ಅನೇಕ ಸಣ್ಣ ಸಣ್ಣ ಗಂಟುಗಳಿರುವುವು. ಮೊಳಕೆಯಾದ ಮೇಲೆ, ಮೊದಲ್ಲಿ ನಾರಾಗಿರುವ ಕಾಂಡವು ಮೆತ್ತಗೂ, ಸಿಹಿಯಾಗಿಯೂ, ಬಿಳುಪಾಗಿಯೂ ಇರುವ ಒರೆಯಿಂದ ಮುಚ್ಚಿಕೊಂಡಿರುತ್ತೆ. ಒಂದು ಅಡಿಯಷ್ಟು ಎತ್ತರವಾಗಿಯೂ ಪ್ರಸ್ಪರಹಿತವಾಗಿಯೂ ಇರುವ ಕಾಂಡದಿಂದ ಐದರಿಂದ ಹದಿನೈದರವರೆಗೂ ಬಳ್ಳಿಯಂತಿರುವ ಕೊಂಬೆಗಳು ಹೊರಡುವುವು. ಬಳ್ಳಿಯು, ಅಂಡಾಕಾರವಾದ ನಾಲ್ಕು ಪತ್ರಗಳಿಂದ ಕೂಡಿದ ಅವಯವಿ ಪತ್ರವುಳ್ಳದ್ದು (Compound leaf). ಎಸುರುಪದುರಾಗಿರುವ ಹಳದೀಹೂವುಗಳು ಕೊಳವೆಯಂತಿರುವ ಕುಸುಮಗಳುಳ್ಳವು. ಕುಸುಮವು ಒಣಗಿ ಕೋಶದಮೇಲೆ ಖಟ್ವೆಯು (Torus) ಉದ್ದವಾಗಿ ತನ್ನ ಕೊನೆಯಲ್ಲಿರುವ ಅಂಡಾಶಯವನ್ನು ಕೊಡನೆ ಭೂಮಿಯೊಳಗೆ ನಾಲ್ಕಾರು ಅಂಗುಲಗಳವರೆಗೆ ಪ್ರವೇಶಿಸುವುದು. ಕಾಯಿಯು ಸಿಪ್ಪೆಯು ಹಳದಿ ಛಾಯೆವುಳ್ಳದ್ದಾಗಿಯೂ, ದಪ್ಪವಾಗಿಯೂ, ಮೃದುವಾ

ಗಿಯೂ, ಸಿಹಿಯಾಗಿಯೂ, ಒಳಗೆ ಚಿಕ್ಕ ಚಿಕ್ಕ ಬಿಳೀ ಬೀಜಗಳುಳ್ಳದ್ದಾಗಿಯೂ ಇರುವುದು. ಬೀಜವು ಬಲಿತಹಾಗೆಲ್ಲ ಸಿಪ್ಪೆಯು ಸುರುಟಿಕೊಂಡು ಹೋಗುವುದಲ್ಲದೆ, ರುಚಿಯು ಕಮ್ಮಿಯಾಗಿ, ಒರಟಾಗುವುದು. ಕಾಯಿಯಲ್ಲಿ ಒಂದರಿಂದ ನಾಲ್ಕು ಬೀಜಗಳವರೆಗೆ ಇರುತವೆ. ಐದು ಬೀಜಗಳೂ ಇರುವುದುಂಟು. ಬೀಜದಮೇಲಣ ಪದರು ಮೊದಲು ಬೆಳ್ಳಗಿದ್ದು ಕಡೆಗೆ ಬೂದುಬಣ್ಣವನ್ನು ಹೊಂದುವುದು. ಅಡ್ಡನಾಗಿದ್ದ ಎಲೆಗಳು ರಾತ್ರಿಯಲ್ಲಿ ನೀಟಾಗಿ ಗಿಡವು ನಿಶ್ಚಲವಾಗಿರುವುದು.

ಬೆಳೆಯುವ ಕ್ರಮ.

ನೆಲಕಡಲೆಯ ಬೆಳವಳಿಗೆಗೆ ಸುಣ್ಣವುಳ್ಳ ಮರಳು ಗೋಡು ಉತ್ಕೃಷ್ಟವಾದ್ದು. ಕೆಂಪಾಗಿದ್ದಲ್ಲಿ ಮತ್ತೂ ಉತ್ತಮ. ಭೂಮಿಯಲ್ಲಿ ಜೇಡಿ ಮಣ್ಣು ಹೆಚ್ಚಾಗಿದ್ದರೆ ಬೆಳೆಯುವುದಿಲ್ಲ. ನಿಮ್ನಪ್ರದೇಶವೂ ಜೋಗು ಭೂಮಿಯು ಇದಕ್ಕೆ ಅನುಕೂಲಿಸುವುದಿಲ್ಲ.

ಮುಂಗಾರಿನಲ್ಲಿ ಒಂದೆರಡು ಹದ ಮಳೆ ಬೀಳುತಲೆ, ಮೂರುನಾಲ್ಕಾವರ್ತಿ ಉತ್ತು ಕಳೆಯನ್ನು ಕೀಳಬೇಕು. ಬಿತ್ತುವುದಕ್ಕೆ ಅನುಕೂಲವಾಗುವವರೆಗೂ ಮಣ್ಣನ್ನು ಆಗಾಗ್ಗೆ ಕೆದಕುತ್ತಿರಬೇಕು. ಉತ್ತಮೇಲೆ ಗೊಬ್ಬರವನ್ನು ಹಾಕುವುದು ಅವಶ್ಯಕ. ಕೆಲವೆಡೆಗಳಲ್ಲಿ ಕುರಿಮಂದೆಯನ್ನು ತಡೆಯುವುದುಂಟು. ಹೀಗೆ ಮೂರು ನಾಲ್ಕು ದಿವಸಗಳು ತಡೆಯುವುದರಿಂದ ಅವುಗಳ ಹಿಕ್ಕೆ ಮತ್ತು ಗಂಜಲವು ಸೇರಿ ಗೊಬ್ಬರವಾಗುವುದು. ಮತ್ತೆ ಕೆಲವರು ಎಕರೆಗೆ ಇಪ್ಪತ್ತು ಮೂವತ್ತು ಗಾಡಿ ದನದ ಗೊಬ್ಬರವನ್ನು ಹಾಕುವರು.

ಬಿತ್ತುವುದಕ್ಕೆ ಒಂದು ದಿವಸ ಮುಂಚಿತವಾಗಿ ಕೈಯಿಂದ ಬೀಜವನ್ನು ಬಿಡಿಸಬೇಕು. ಎಣ್ಣೆಗಾಗಿ ಬಿಡಿಸುವಂತೆ ದೊಣ್ಣೆಯಿಂದ ಬಡೆದರೆ ಬೀಜವು ಒಡೆದು ಹೋಗುವುದಲ್ಲದೆ, ಇತರ ವಿಧವಾಗಿ ಬಿತ್ತುವುದಕ್ಕೂ ಬರುವುದಿಲ್ಲ. ಬೀಜದ ಮೇಲಣ ಎಳೆಗೆಂಪಾದ ಹೊದಿಕೆಯನ್ನು ತೆಗೆದರೆ ಮೊಳಕೆಯು ಏಳುವುದಿಲ್ಲ. ಬಿತ್ತುವ ದಿವಸ ಬೆಳಿಗ್ಗೆ ಒಂದಾವರ್ತಿ ಉತ್ತು, ಸಾಯಂಕಾಲದಲ್ಲಿ ಬಿತ್ತಬೇಕು. ಒಬ್ಬನು ಭೂಮಿಯನ್ನು ಉಳುತಾ ಹೋಗುವನು. ಅವನಹಿಂದೆ ಮೂರು ನಾಲ್ಕುಮಂದಿ ಹೆಂಗಸರು ಮಡಲಲ್ಲಿ ಕಾಳುಗಳನ್ನು ಹಾಕಿಕೊಂಡು ಉತ್ತ ಸಾಲಿನಲ್ಲಿ ಅರ್ಧ ಅಡಿಯ ದೂರಕ್ಕೆ ಅವುಗಳನ್ನು ಹಾಕುತಾ ಹೋಗುವರು. ಪಕ್ಕದ ಸಾಲು ಹೊಡೆಯುವಾಗ ಅದರ ಮಣ್ಣು ಮೊದಲಿನಸಾಲಿಗೆ ಬಿದ್ದು ಬೀಜವನ್ನು ಮುಚ್ಚುವುದು. ಹಸನಾದ ಭೂಮಿಯಾದರೆ ಎಕರೆ ಒಂದಕ್ಕೆ ಹದಿನೈದು ಇಪ್ಪತ್ತು ಸೇರು ಕಾಳು ಸಾಕು. ಇಲ್ಲದಿದ್ದರೆ ಮೂವತ್ತು ನಾಲ್ವತ್ತು ಸೇರುಗಳು ಬೇಕಾಗುವುದು.

ಮಳೆಯು ಬೀಳದಿದ್ದರೆ ನೀರು ಕಟ್ಟುವುದಕ್ಕೆ ಆಗುವಂತೆ ಆರಡಿ ಉದ್ದ, ಆರಡಿ ಅಗಲವಿರತಕ್ಕ ಸಾತಿಗಳನ್ನು ತೋಡುವರು. ಬಿತ್ತಿದ ನಾಲ್ಕು ಐದು ದಿವಸಗಳವರೆಗೂ ಹಗಲಲ್ಲಿ ಕಾಗೆಗಳಿಂದಲೂ, ರಾತ್ರಿಯಲ್ಲಿ ನರಿಗಳಿಂದಲೂ ಅಪಾಯವಿಲ್ಲದಂತೆ ಕಾವಲಿಡಬೇಕು. ಸಾಮಾನ್ಯವಾಗಿ ನಾಲ್ಕನೆಯ ದಿವಸ ಮೊಳಕೆಯು ಏಳುವುದಕ್ಕೆ ಪ್ರಾರಂಭಿಸಿ, ಒಂದುವಾರದೊಳಗೆ ಎಲ್ಲಾ ಕಡೆಯಲ್ಲಿಯೂ ಹರಡಿಕೊಳ್ಳುವುದು. ತೇವವು ಸಾಲದೆ ಮೊಳಕೆ ಏಳುವನು ತಡವಾದಲ್ಲಿ ನೀರನ್ನು ಕಟ್ಟಬಹುದು. ಮೂರು ನಾಲ್ಕು ವಾರಗಳಲ್ಲಿ ಸಸಿಗಳು ನಾಲ್ಕಾರು ಅಂಗುಲಗಳ ಎತ್ತರವಾಗುವವು. ಆಗ ಕಳೆಯನ್ನು ಕಿತ್ತು ಸಸಿಗಳು ಹೆಚ್ಚಾಗಿದ್ದರೆ ತೆಗೆದು ಹಾಕಬೇಕು. ಕಾಯಿಗಳು ಭೂಮಿಯೊಳಗೆ ಪಲಿಸುವುದರಿಂದ ಗಿಡಗಳು ಒತ್ತಾಗಿದ್ದರೆ ಬಳ್ಳಿಗಳು ಹರಡಿಕೊಳ್ಳುವುದಕ್ಕಾಗದೆ ಫಲವು ಕಡಮೆಯಾಗುವುದು. ಇದಲ್ಲದೆ ವಾಯು ಸಂಚಾರವು ಸರಿಯಾಗಿ ಆಗದಿರುವುದರಿಂದ ಬೂಷವು ಕೊಳೆಯುವುದು.

ಒಂದು ತಿಂಗಳ ವರೆಗೂ ನೀರನ್ನು ಕಟ್ಟತಕ್ಕ ಅವಶ್ಯಕವಿಲ್ಲ. ಆಮೇಲೆ ಮಳೆ ಇಲ್ಲದಿದ್ದರೆ ಒಂದೆರಡು ವಾರಗಳಿಗೊಂದಾವರ್ತಿ ನೀರನ್ನು ಕಟ್ಟಬೇಕಾಗುತ್ತೆ. ನೀರು ಅಥವ ಮಳೆಯು ಹೆಚ್ಚಾದರೆ ಸಸಿಗಳು ತೆಳ್ಳಗೂ, ಉದ್ದವಾಗಿಯೂ, ನೆಟ್ಟಗೂ ಬೆಳೆಯುವುವಲ್ಲದೆ, ಬಿಟ್ಟ ಕಾಯಿಗಳಲ್ಲಿ ಬೀಜವೇ ಇರುವುದಿಲ್ಲ. ಆರೇಳು ತಿಂಗಳು ಬೆಳೆದ ನಂತರ ಗಿಡಗಳು ಬಾಡಿ, ನೆಲಕ್ಕುರುಳುವುವು. ಆಗೆದು ನೋಡಿದಾಗ ಕಾಯಿಯು ಗಟ್ಟಿಯಾಗಿಯೂ, ಸುಲಿಯುವುದಕ್ಕೆ ಸುಲಭವಾಗಿಯೂ, ಬೀಜದ ಮೇಲುಗಡೆ ಕಂದು ವರ್ಣವಾಗಿಯೂ ಇದ್ದರೆ ಕಟಾವಿಗೆ ಸಿದ್ಧವಾಗಿದೆಂದು ತಿಳಿಯತಕ್ಕದ್ದು. ಆಗ ನೀರನ್ನು ನಿಲ್ಲಿಸಿ ಗಿಡಗಳನ್ನು ಒಣಗುವುದಕ್ಕೆ ಬಿಟ್ಟು, ಕಟಾವಿನ ಹಿಂದಣ ಸಾಯಂಕಾಲದಲ್ಲಿ ನೀರನ್ನು ಕಟ್ಟಿ, ಮಾರನೆಯ ದಿವಸ ಬೆಳಿಗ್ಗೆ ಗಿಡಗಳನ್ನು ಕಿತ್ತು, ಅನಂತರ ಆಗೆದು ಒಳಗಿರುವ ಕಾಯಿಗಳನ್ನು ಆರಿಸಿ ಗಿಡಗಳನ್ನು ಒಣಗಿಸಿ ಮೆದೇ ಹಾಕಬೇಕು. ಕಾಯಿಯನ್ನು ಆರಿಸಿ ತೆಗೆಯುವುದಕ್ಕೆ ಜನರು ಸಿಕ್ಕದಿದ್ದರೆ, ಸ್ವಲ್ಪಸ್ವಲ್ಪವಾಗಿ ನೀರನ್ನು ಕಟ್ಟಿ, ಕಾಯಿಗಳನ್ನು ತೆಗೆಯಬೇಕು. ನೀರು ಕಟ್ಟದಕಡೆ ಕಾಯಿಗಳನ್ನು ತೆಗೆಯದಿದ್ದರೆ ಒಂದೆರಡು ದಿವಸಗಳಲ್ಲಿ ಮೊಳಕೆಯು ಏಳುವುದು.

ಗದ್ದೆಗಳಲ್ಲಿ ಬೆಳೆದರೆ ನೀರನ್ನು ಹಾಯಿಸಿ ಉಳುತಾರೆ. ನೀರಿಗಿಂತ ಕಾಯಿಗಳು ಹಗುರವಾಗಿರುವಕಾರಣ ಮೇಲಕ್ಕೆ ತೇಲಿಬರುತವೆ. ಗದ್ದೆಯಮೇಲೆ ಒಂದು ಹಲಿಗೆಯನ್ನು ಎಳೆಯುವುದರಿಂದ ಕಾಯಿಗಳೆಲ್ಲ ಒಂದು ಕೊನೆಗೆ ಬಂದು ಸೇರುತವೆ. ಆಗೆದು ಆರಿಸುವುದಕ್ಕೆ ಮುಂದೆ ಭೂಮಿಯು ಚೆನ್ನಾಗಿ ಒಣಗಿರಬೇಕು. ಈ ಕಾಲದಲ್ಲಿ ಒಂದು ಹವ ಮಳೆಯು ಬಿದ್ದರೆ ಕಾಯಿಗಳೆಲ್ಲ ಮೊಳಕೆಯಾಗುವುವು.

ನೆಲಕಡಲೆಕಾಯಿಯ ಎಣ್ಣೆಯನ್ನು ಮಾಡಬೇಕಾದರೆ ಕಾಯಿಗಳನ್ನು ಚೆನ್ನಾಗಿ ಒಣಗಿಸಿ ದೊಣ್ಣೆಗಳಿಂದ ಬಡಿಯುವರು. ಒಂದು ಬಂಡಿ ಕಾಯನ್ನು ಗಾಣಕ್ಕೆ ಸಿದ್ಧ

ಪಡಿಸಬೇಕಾದರೆ ಎರಡು ಗಂಡಾಳುಗಳಿಗೂ ಒಂದು ಹೆಣ್ಣಾಳಿಗೂ ಆರು ಘಂಟೆಗಳ ಕಾಲ ಬೇಕಾಗುವುದು. ಇಷ್ಟು ಕಾಯಿಯಿಂದ ಎಣ್ಣೆಯನ್ನು ತೆಗೆಯುವುದಕ್ಕೆ ನಾಲ್ಕು ಐದು ಘಂಟೆಗಳ ಕಾಲ ಬೇಕಾಗುವುದು. ನಮ್ಮ ಗಾಣಗಳಿಂದ ಹಿಂಡಿಯಲ್ಲಿ ಎಣ್ಣೆಯು ನಿಲ್ಲದಂತೆ ತೆಗೆಯುವುದಕ್ಕಾಗುವುದಿಲ್ಲ. ಇಲ್ಲಿನ ಹಿಂಡಿಯು ಫ್ರಾನ್ಸ್ ದೇಶಕ್ಕೆ ವಿಶೇಷವಾಗಿ ರಫ್ತಾಗಿ, ಅಲ್ಲಿ ಇದರಿಂದ ಪುನಃ ಎಣ್ಣೆಯನ್ನು ತೆಗೆಯುತಾರೆ. ಕಾಯಿಯಲ್ಲಿ ೧೦೦ ಗಲ್ಲಿ ೪೦ ಭಾಗ ಎಣ್ಣೆ ಇದೆ ಎಂದು ಶಾಸ್ತ್ರಜ್ಞರಿಂದ ಗೊತ್ತಾಗಿದೆ. ಆದರೆ ೩೪ ರಗಿಂತ ಹೆಚ್ಚಾಗಿ ತೆಗೆಯುವುದಕ್ಕಾಗುವುದಿಲ್ಲ.

ಉಪಯೋಗಗಳು.

ಒಣಗಿರುವ ಗಿಡಗಳನ್ನು ಹಸುಗಳಿಗೆ ಕೊಟ್ಟರೆ ಹಾಲು ಹೆಚ್ಚಾಗುವದೆಂದು ಹೇಳುವರು. ಇತರ ಎಣ್ಣೆಗಳಂತೆ ಮಷ್ಟು ಹಿಡಿಯದೆ ಇರುವುದರಿಂದ ಅಡಿಗೆಗೆ ಉಪಯೋಗಕರವಾಗಿರುವುದಲ್ಲದೆ ದೀಪಕ್ಕೂ ಯಂತ್ರಕ್ಕೂ ಬೇಕಾಗಿರುತ್ತೆ. ಒಳ್ಳೆಣ್ಣೆ ಸೀಮೆ ಹಿಪ್ಪೆಎಣ್ಣೆಗಳ ಜತೆಗೆ ಬೆರೆಕೆ ಮಾಡುವುದುಂಟು. ಹಿಂಡಿಯು ದನಕರುಗಳಿಗೆ ಉತ್ತಮವಾದ ಆಹಾರವಾಗಿದೆ. ಇದನ್ನು ಪುಡಿಮಾಡಿ "ಕೋಕೋ ಆ" ಎಂಬ ಆಹಾರದೊಡನೆ ಸೇರಿಸುತ್ತಾರೆ. ಹಿಂಡಿಯು ಉತ್ಕೃಷ್ಟವಾದ ಗೊಬ್ಬರವಾಗಿದೆ. ಕಾಯಿಗಳನ್ನು ಸುಟ್ಟು ತಿನ್ನುವದುಂಟು.

ಎಲ್. ಸುಬ್ಬರಾವ್

ದೀಪದಕಡ್ಡಿ.

ವಸ್ತುಪಾಠ.

ಉಪಾಧ್ಯಾಯ.—(ಎರಡುಮೂರು ದೀಪದಕಡ್ಡಿ ಪೆಟ್ಟಿಗೆಗಳನ್ನು ಮೇಜಿನಮೇಲೆ ಇಟ್ಟ) ಇವುಗಳ ಹೇಸರೇನು?

ಬಾ.—ದೀಪದಕಡ್ಡಿಯ ಪೆಟ್ಟಿಗೆ.

ಉ.— ಇದನ್ನು ಯಾತಕ್ಕೆ ಉಪಯೋಗಿಸುವರು?

ಬಾ.—ದೀಪವನ್ನು ಹಚ್ಚಿಸುವುದಕ್ಕೆ.

ಉ.— ಇದರಿಂದ ಹ್ಯಾಗೆ ದೀಪವನ್ನು ಹಚ್ಚಿಸುವರು?

ಬಾ.—ಅದರಲ್ಲಿರುವ ಕಡ್ಡಿಯನ್ನು ತೆಗೆದು ಅದರಮೇಲೆ ತಿಕ್ಕುವುದರಿಂದ

ಉ.— ಇದರಮೇಲೇ ಉಜ್ಜಬೇಕೆಂಬುವುದು ಅವಶ್ಯಕವೊ?

ಬಾ.—ಅದೇನೂ ಇಲ್ಲ. ಎಲ್ಲಿ ಉಜ್ಜಿದರೂ ಹತ್ತಿಕೊಳ್ಳುವುದು.

ಉ.— ಹಾಗಾದರೆ ಮಿತ್ರಗೆ ಇರುವ ಈ ಪದಾರ್ಥದಮೇಲೆ ಉಜ್ಜುವೆನು. ಹತ್ತುವುದೇನು ನೋಡಿ.

ಬಾ.—ಕಡ್ಡಿಯು ಹತ್ತಿಕೊಳ್ಳಲಿಲ್ಲ.

ಉ.—ಒಳ್ಳೇವು, ಸ್ವಲ್ಪ ತರತರಕಾದ ಈ ಸ್ಥಳದಲ್ಲಿ ಉಜ್ಜುವೆನು. ಈಗ ಏನಾಗುತ್ತೆ ಹೇಳಿ.

ಬಾ.—ಈಗ ಹತ್ತಿಕೊಳ್ಳುವುದು.

ಉ.—ಇದರಿಂದ ಏನು ತಿಳಿದುಕೊಳ್ಳಬಹುದೆಂದರೆ:-ಅತಿ ನುಣುಪಾಗಿಯೂ ಮೃದುವಾಗಿಯೂ ಇರುವ ಪದಾರ್ಥದ ಮೇಲೆ ಉಜ್ಜಿದರೆ ದೀಪದ ಕಡ್ಡಿಯು ಹತ್ತಿಕೊಳ್ಳುವುದಿಲ್ಲವೆಂತಲೂ, ಘಟ್ಟಿಯಾಗಿಯೂ ತರತರಕಾಗಿಯೂ ಇರುವ ಪದಾರ್ಥದ ಮೇಲೆ ಹತ್ತಿಕೊಳ್ಳುವುದೆಂತಲೂ ತಿಳಿದುಕೊಳ್ಳಬಹುದು. ಮೃದುವಾದ ಪದಾರ್ಥದಮೇಲೆ ಉಜ್ಜಿದಾಗ ಹತ್ತದೆ ಇದದ್ದಕ್ಕೂ ಒರಟಾದ ಪದಾರ್ಥದಮೇಲೆ ಉಜ್ಜಿದಾಗ ಹತ್ತಿಕೊಂಡದ್ದಕ್ಕೂ ಕಾರಣವೇನೆಂದರೆ-ಮೊದಲನೆಯದು ಬಹಳೆ ಮೃದುವಾಗಿಯೂ, ಯಾವ ಅಡಚಣೆ ಇಲ್ಲದೆಯೂ ಇದ್ದುದರಿಂದ ಅಲ್ಲಿ ಕಡ್ಡಿಯು ಜಾರಿ ಈ ಕಡ್ಡಿಯು ಹತ್ತಿಕೊಳ್ಳುವುದಕ್ಕೆ ಸಾಕಾದಷ್ಟು ಶಾಖ ಹುಟ್ಟಲಿಲ್ಲ. ಎರಡನೆಯದು ತರತರಕನಾಗಿಯೂ, ಘಟ್ಟಿಯಾಗಿಯೂ, ಅಡಚಣೆಯುಳ್ಳದ್ದಾಗಿಯೂ ಇದ್ದುದರಿಂದ ಶಾಖವು ಉಂಟಾಯಿತು. ಸಾಧಾರಣವಾಗಿ ಛಳಿಗಾಲದಲ್ಲಿ ಕಾಯಿಸಿಕೊಳ್ಳುವುದಕ್ಕೆ ಬೆಂಕಿ ಇಲ್ಲದೆ ಇದ್ದಾಗ ಕೈಕಾಲಿನಲ್ಲಿ ಶಾಖ ಹುಟ್ಟುವಂತೆ ಮಾಡಿಕೊಳ್ಳುವುದಕ್ಕೆ ಏನು ಮಾಡುತ್ತೇವೆ?
-ನಮ್ಮ ಕೈಗಳನ್ನು ಉಜ್ಜಿಕೊಳ್ಳುತ್ತೇವೆ.
ಹಾದು ಅದರಿಂದ ಶಾಖಹುಟ್ಟುವುದು. ದೀಪದಕಡ್ಡಿಯು ಈಚೆಗೆ ಈ ದೇಶಗಳಿಗೆ ಬಂದದ್ದು. ಇದಕ್ಕೆ ಮುಂಚೆ ಯಾರಾದರೂ ಒಬ್ಬರಮನೆಯಲ್ಲಿ ದೀಪವೂ ಬೆಂಕಿಯೂ ಇದ್ದರೆ ನೆರೆಹೊರೆಯವರೆಲ್ಲರೂ ಅಲ್ಲಿಗೆ ಹೋಗಿ ಬೆಂಕಿ, ದೀಪ ಇವುಗಳನ್ನು ತರೂವುದು ಈಗಲೂ ಗ್ರಾಮಾಂತರಗಳಲ್ಲಿ ನಾಡಿಕೆಯಾಗಿ ಇವೆ. ನಮ್ಮಲ್ಲಿ ಈಗ್ಯೂ ಈ ರೀತಿಯಾಗಿ ಹೇಳುವುದು ಎಲ್ಲರೂ ಕೇಳಿರಬಹುದು. ಏನಂದರೆ ಬೆಳಗಾದರೆ ಅವರ ಮನೆಗೆ ನಾವು ಬೆಂಕಿಗೆ, ದೀಪಕ್ಕೆ ಹೋಗಬೇಕು. ಅವಮೊಡನೆ ಕಲಹವಾಡತಕ್ಕದ್ದು ಯುಕ್ತವಲ್ಲ. ಇದು ಹಾಗಿರಲಿ. ದೀಪದ ಕಡ್ಡಿಯು ಇಲ್ಲದೆ ಇದ್ದಾಗ ಹ್ಯಾಗೆ ದೀಪ, ಬೆಂಕಿ ಇವುಗಳನ್ನು ಹತ್ತಿಸುತಿದ್ದರು. ಅದನ್ನು ತಿಳಿದುಕೊಳ್ಳೋಣ. ದೊಡ್ಡದೊಡ್ಡ ಪಟ್ಟಣಗಳಲ್ಲಿ ಬೀದಿಯಲ್ಲಿ ಹೊಸದಾಗಿ ಲಾಳಕಟ್ಟಿದ ಕುದುರೆಗಳು, ಕುದುರೆಬಂಡಿಗಳು ಇವುಗಳು ಜೋರಾಗಿ ಹೋಗುತ್ತಿರುವಾಗಲೂ, ಮನೆಗಳಲ್ಲಿ ಒರಳಲ್ಲಿ ಭತ್ತಮೊದಲಾದುದನ್ನು ಕುಟ್ಟು

ನಾಗ ದಾಯುತಪ್ಪಿ ಒರಳುಕಲ್ಲಿನ ಮೇಲೆ ಹಾರೆಯೇ ಆಗಲಿ, ಕಬ್ಬಿಣದಕಟ್ಟು ಹಾಕಿದ ಒನಿಕೆಯೇ ಆಗಲಿ ಬಿದ್ದಾಗ, ಸ್ವಲ್ಪ ಕತ್ತಲೆಯಾಗಿದ್ದರೆ ಏನುಕಾಣುವುದು ?

ನಾ.—ಕಿಡಿಯು ಹಾರಿದಂತೆ.

ಗು.— ಇದರಿಂದ ನಾವು ಬೆಣಚಕಲ್ಲಿನ (ಚಕ್ಕಮುಕ್ಕಿ ಕಲ್ಲು) ಮೇಲೆ ಕಬ್ಬಿಣವನ್ನು ಘಟ್ಟಿಯಾಗಿ ಹೊಡೆಯೋಣದರಿಂದ ಬೆಂಕಿಯು ಹುಟ್ಟುವುದು. ಹೀಗೆ ಹೊಡೆದು ಬೆಂಕಿ ಬಿದ್ದಾಗ ಸ್ವಲ್ಪ ಹತ್ತಿಯನ್ನಾಗಲೀ, ಒಣಗಿದ ಹುಲ್ಲನ್ನಾಗಲೀ ಇಟ್ಟು ಬೆಂಕಿ ಹತ್ತಿಸುತ್ತಿದ್ದರು. ನಿಮ್ಮಲ್ಲಿ ಕೆಲವರು ಯಾಗಗಳನ್ನು ನೋಡಿರಬಹುದು. ಅಲ್ಲಿ ಶ್ರೌಷ್ಠಾಗ್ನಿ ಪ್ರತಿಷ್ಠಾಪನೆಯನ್ನು ಮಾಡುವುದಕ್ಕಾಗಿ ಶಮಿವೃಕ್ಷದ ಎರಡು ತುಂಡುಗಳನ್ನು ತೆಗೆದುಕೊಂಡು ಘರ್ಷಣಮಾಡುವರು. ಈ ಘರ್ಷಣದಿಂದ ಉಂಟಾದ ಅಗ್ನಿಯನ್ನು ಪ್ರತಿಷ್ಠಾಪಿಸುವರು. ಆದಿಯಲ್ಲಿ ಅಗ್ನಿಯನುಂಟುಮಾಡಲು ಇದೇ ಮುಖ್ಯವಾದ ಮಾರ್ಗ. ಪೂರ್ವಕಾಲದಲ್ಲಿ ಬೆಂಕಿಯನ್ನು ಪಡೆಯಲು ಎಷ್ಟು ಶ್ರಮವಾಗಿತ್ತು ಈಗ ಎಷ್ಟು ಸುಲಭವಾಗಿ ದೀಪವನ್ನು ಹತ್ತಿಸಬಹುದು. ಬೆಂಕಿಯನ್ನು ಹೊತ್ತಿಡ ಬಹುದು! ಇದು ಯಾತರಿಂದ ?

ನಾ.—ಇದು ದೀಪದಕಡ್ಡಿಯ ಸಹಾಯದಿಂದ.

ಗು.— ಈ ಪೆಟ್ಟಿಗೆಯಲ್ಲಿ ಸವೊರು ಎಷ್ಟುಕಡ್ಡಿಗಳಿರಬಹುದು ನೋಡಿ ?

ನಾ.—ಸುಮಾರು ನೂರೈವತ್ತಕ್ಕೆ ಕಡಿಮೆ ಇಲ್ಲದೆ ಇದೆ.

ಗು.— ಇಷ್ಟು ಕಡ್ಡಿಗಳು ಬಹಳ ಸುಲಭ ಕ್ರಯಕ್ಕೆ ದೊರೆಯುವುದು. ಇದನ್ನು ಒಬ್ಬನೇ ಕೂತುಕೊಂಡು ಒಂದು ದೀಪದ ಕಡ್ಡಿ ಪೆಟ್ಟಿಗೆಯನ್ನು ತಯಾರು ಮಾಡಬೇಕೆಂದರೆ ಬಹಳ ಶ್ರಮ. ಒಂದು ದಿವಸದಲ್ಲಿ ಎರಡು ಮೂರು ದೀಪದ ಕಡ್ಡಿ ಪೆಟ್ಟಿಗೆಯನ್ನು ತಯಾರು ಮಾಡುವುದಕ್ಕೆ ಆಗುವುದಿಲ್ಲ. ಇದನ್ನು ತಯಾರು ಮಾಡತಕ್ಕದ್ದು ಶ್ರಮವಾದರೂ ಅತಿ ಸುಲಭವಾದ ಕ್ರಯಕ್ಕೆ ಕೊಡುವರು. ಇದರ ವ್ಯಾಪಾರ ಮಾಡತಕ್ಕವರು ಲಾಭವನ್ನೂ ಪಡೆಯುವರು. ಹ್ಯಾಗೆಂದರೆ—ಇದು ಎಲ್ಲರಿಗೂ ಅವಶ್ಯಕವಾದ ಪದಾರ್ಥವಾಗಿರುವುದರಿಂದಲೂ, ಸುಲಭಕ್ರಯಕ್ಕೆ ದೊರೆಯುವುದರಿಂದಲೂ ಎಲ್ಲರೂ ತೆಗೆದುಕೊಳ್ಳುವರು. ಅದರಿಂದ ವಿಶೇಷವಾಗಿ ಖರ್ಚಾಗುವುದು. ವ್ಯಾಪಾರಗಾರರಿಗೆ ಲಾಭವೂ ಆಗುವುದು. ಜಾಗ್ರತೆಯಲ್ಲಿ ವಿಶೇಷವಾಗಿ ಈ ಪದಾರ್ಥವನ್ನು ಒದಗಿಸುವುದಕ್ಕಾಗಿ ಒಂದೊಂದು ಕೆಲಸವನ್ನು ಒಬ್ಬೊಬ್ಬರು ಮಾಡುತ್ತಾ ಒಂದು ದಿನಕ್ಕೆ ಎಲ್ಲಿಯಾವರೂ ಸಾಧಾರಣವಾಗಿ ಸಾವಿರಾರು ಪೆಟ್ಟಿಗೆಗಳನ್ನು ತಯಾರುಮಾಡಿ ಹಾಕುವರು. ಇದನ್ನು ತಯಾರು ಮಾಡತಕ್ಕ ವಿಧಾನವನ್ನು

ಸ್ವಲ್ಪ ಯೋಚನೆ ಮಾಡಿದರೆ ನೀವೇ ಹೇಳಬಹುದು. ಇದರ ಹೆಸರೇನು?

ಬಾ.—ಇದು ದೀಪದಕಡ್ಡಿ.

ಉ.— ಬೆಂಕಿಯು ತತ್‌ಕ್ಷಣವೇ ಹತ್ತಿಕೊಳ್ಳುವುದಕ್ಕಾಗಿ ಒಣಗಿದ ಮರವನ್ನು ಸಣ್ಣ ಸಣ್ಣಗೆ ಸೀಳಿಹಾಕುವರು. ಆಮೇಲೆ ಏನು ಮಾಡುತ್ತಾರೆ?

ಬಾ.—ಅವುಗಳನ್ನು ಚಿಕ್ಕಚಿಕ್ಕದಾಗಿ ಕತ್ತರಿಸಬಹುದು.

ಉ.— ಹೌದು, ಒಂದೇ ಅಳತೆಗೆ ಕತ್ತರಿಸಿ ಕತ್ತರಿಸಿ ರಾಸಿ ಹಾಕುವರು ಕೆಲವರು. ಈ ದೀಪದಕಡ್ಡಿಯಲ್ಲಿ ಮರವಲ್ಲದೆ ಇನ್ನೇನು ಕಾಣುವುದು, ಚೆನ್ನಾಗಿ ನೋಡಿ ಹೇಳಿ.

ಬಾ.—ತುದಿಯಲ್ಲಿ ರಂಜಕವು ಇರುವುದು.

ಉ.— ಇದೇ ಮುಖ್ಯವಾದ ಭಾಗ. ಈ ರಂಜಕವನ್ನು ಹ್ಯಾಗೆ ತಯಾರು ಮಾಡುತ್ತಾರೆ, ಅದನ್ನು ತಿಳಿದುಕೊಳ್ಳಬೇಕು. ಆದರೆ ಒಂದು ಪದಾರ್ಥವು ಇದರಲ್ಲಿ ಇದ್ದೇ ಇರಬೇಕೆಂದು ತೋರುತ್ತೆ. ಅದೇನೆಂದರೆ—ಬೆಂಕಿಯನ್ನು ಹುಟ್ಟಿಸುವ ಪದಾರ್ಥ. ಈ ಪದಾರ್ಥವಿಲ್ಲದೇ ಉಜ್ಜಿದಾಗ ಉಂಟಾದ ಘರ್ಷಣ (Friction) ದಿಂದ ಶಾಖ ಹುಟ್ಟಿ ಬೆಂಕಿಯು ಉಂಟಾಗುವುದು. ಸಾಧಾರಣವಾಗಿ ರಂಜಕಕ್ಕೆ ಈ ಪದಾರ್ಥಗಳನ್ನು ಸೇರಿಸುವರು. ಇದು ಯಾವವೆಂದರೆ—Phosphorus, ಫಾಸ್‌ಫರಸ್ ಗಂಧಕ, (Chlorate of Potash,) ಪೆಟ್ಲುಪ್ಪು, ಸಣ್ಣಸಣ್ಣ ಮರಳು, ಗೋಂದು, ಇವುಗಳನ್ನೆಲ್ಲಾ ನೀರಿನೊಡನೆ ಸೇರಿಸಿ ಕಡ್ಡಿಯ ತುದಿಗೆ ಹಚ್ಚುವರು. (ಕೆಲವು ಕಡ್ಡಿಗಳನ್ನು ಬೇರೆಬೇರೆ ಪೆಟ್ಟಿಗೆಗಳಿಂದ ತೆಗೆದು) ಇವುಗಳ ತುದಿಯಲ್ಲಿರತಕ್ಕ ರಂಜಕದ ಬಣ್ಣಗಳನ್ನು ಹೇಳಿ.

ಬಾ.—ಒಂದು ಕೆಂಪಿಗೆ ಇದೆ. ಒಂದು ಕಪ್ಪಿಗೆ ಇದೆ. ಇನ್ನೊಂದು ಸ್ವಲ್ಪ ಹಳದಿವರ್ಣ ಉಳ್ಳದ್ದಾಗಿದೆ.

ಉ.— ವರ್ಣ ವ್ಯತ್ಯಾಸಕ್ಕೆ ಕಾರಣವೇನೆಂದರೆ—ಮೇಲೆ ಹೇಳಿದ ಪದಾರ್ಥಗಳೊಡನೆ ನಾನಾ ಬಣ್ಣಗಳನ್ನೂ ಸೇರಿಸುತ್ತಾರೆ. ದೀಪದಕಡ್ಡಿಯ ಪೆಟ್ಟಿಗೆಗಳನ್ನು ಪರೀಕ್ಷಿಸಿ ಇರತಕ್ಕ ವ್ಯತ್ಯಾಸವನ್ನು ತಿಳಿಸಿ.

ಬಾ.—ಒಂದು ಪೆಟ್ಟಿಗೆಯ ಪಕ್ಕದಲ್ಲಿ ಸ್ವಲ್ಪಸ್ವಲ್ಪ ತರತರಕನಾಗಿಯೂ ಇನ್ನೊಂದು ಪೆಟ್ಟಿಗೆಯ ಪಕ್ಕದಲ್ಲಿ ನಯವಾಗಿರುವ ಒಂದುವಿಧವಾದ ಕಾಗದವೂ ಅಂಟಿಸಿದಂತೆ ಕಾಣುವುದು.

ಉ.— ಎರಡು ಪೆಟ್ಟಿಗೆಗಳಿಂದಲೂ ಕಡ್ಡಿಗಳನ್ನು ತೆಗೆದು ಒಂದು ಪೆಟ್ಟಿಗೆಯ ತರಕನಾದ ಪಕ್ಕದಮೇಲೆ ಉಜ್ಜುವೆನು. ಕಡ್ಡಿಯು ಹತ್ತುವುದೇನು ನೋಡಿ.

ಬಾ.—ಈ ಕಡ್ಡಿಯು ಹತ್ತಿಕೊಂಡಿತು.

ಉ.— ಇನ್ನೊಂದು ಕಡ್ಡಿಯನ್ನು ಇದರಮೇಲೆಯೇ ಗೀಚುವೆನು. ಕಡ್ಡಿಯು ಹತ್ತಿ ಕೊಳ್ಳಲಿಲ್ಲ. ಇತರ ಸ್ಥಳಗಳಲ್ಲಿ ಗೀಚುತ್ತೇನೆ. ಇದು ಎಲ್ಲಿ ಗೀಚಿದರೂ ಹತ್ತಿ ಕೊಳ್ಳಲಿಲ್ಲವಲ್ಲ. ಈಸಲ ಇನ್ನೊಂದು ಪೆಟ್ಟಿಗೆಯ ಮೇಲೆ ನಯವಾಗಿರುವ ಪಕ್ಕ ದಮೇಲೆ ಉಜ್ಜುವೆನು. ತತ್‌ಕ್ಷಣವೇ ಹತ್ತಿಕೊಳ್ಳುವುದು. ಇದಕ್ಕೆ ಕಾರಣವೇನೆಂದರೆ—ಕಡ್ಡಿಗೆ ಹಚ್ಚಿರುವ ರಂಜಕದಲ್ಲಿ (Chlorate of Potash) ಗಂಧಕ ಮತ್ತು ಇತರ ಪದಾರ್ಥಗಳೂ, ಆ ಕಾಗದದ ಮೇಲೆ ಫಾಸ್‌ಫರಸ್ (Phosphorus) ಇರುವುದು. ಇವೆರಡರ ಸಮ್ಮೇಳನದಿಂದ ಬೆಂಕಿಯು ಹುಟ್ಟುವುದು. ಈ ವಿಧವಾದ ದೀಪದಕಡ್ಡಿ ಪೆಟ್ಟಿಗೆಗಳು ಬಹಳ ಅನುಕೂಲವಾದಬ್ದು. ಅಪಾಯವಿಲ್ಲದ್ದು. ಇನ್ನೊಂದು ವಿಧವಾದ ದೀಪದ ಕಡ್ಡಿಯು ಬಹಳ ಅಪಾಯಕರವಾದದ್ದು. ಜೆನಾ್ನಗಿ ಇಂಥಾ ಕಡ್ಡಿಯಿಂದ ತುಂಬಿದ ಪೆಟ್ಟಿಗೆಯನ್ನು ಬಲವಾಗಿ ನೆಲದಮೇಲೆ ಎಸೆದರೆ ಭಗ್ನನೆ ಹತ್ತಿಕೊಳ್ಳುವ್ವದು. ಇತರ ಸಾಮಾನಿನೊಡನೆ ದೀಪದ ಕಡ್ಡಿಯ ಸರಕನು, ಕಳ:ಹಿಸಬೇಕಾದರೆ ಬಹಳ ಜಾಗರೂಕತೆಯಿಂದ ಕಳುಹಿಸುವರು.

ನಾನು ಮೊದಲನೆಯಾವರ್ತಿ ದೀಪದ ಕಡ್ಡಿಯನ್ನು ಉಜ್ಜಿದಾಗ ಹಳದಿಯು ಬಣ್ಣವಾಗಿರತಕ್ಕ ಗಂಧಕವು ಕುದ್ದಂತೆ ಇದ್ದುದು ನೀವು ನೋಡಿರಬಹುದು. ಇದಕ್ಕೆ ಕಾರಣವೇನೆಂದರೆ—ಕಡ್ಡಿಯನ್ನು ಸಣ್ಣಸಣ್ಣಗೆ ಯಂತ್ರದ ಸಹಾಯದಿಂದ ಸೀಳಿ ಕೊಂಡು ಒಂದೇಸಮನಾಗಿ ಕತ್ತರಿಸಿ ಒಟ್ಟುಗೂಡಿಸಿ, ಒಂದೊಂದು ಕಟ್ಟಾಗಿ ತೆಗೆದು ಕೊಂಡು ಮೊದಲು ನೈಟರ್‌ನಲ್ಲಿ ಅದ್ದಿ ತರುವಾಯ ತಯಾರು ಮಾಡಿಟ್ಟುಕೊಂಡಿದ್ದ ರಂಜಕವನ್ನು ಸವರಿ ಒಣಗಲಿಕ್ಕೆ ಇಡುವರು. ಒಣಗಿದಮೇಲೆ ಸಣ್ಣಸಣ್ಣ ಪೆಟ್ಟಿಗೆಗಳಿಗೆ ತುಂಬುವರು. ಕಡ್ಡಿಯು ನೆನೆದು ಇದ್ದರೆ ಹತ್ತುವುದಿಲ್ಲವೆಂದು ಎಲ್ಲರಿಗೂ ತಿಳಿದೇ ಇದೆ. ಆದುದರಿಂದ ಜೆನಾ್ನಗಿ ಒಣಗಿದಮೇಲೆ ಪೆಟ್ಟಿಗೆಗಳಿಗೆ ತುಂಬಿ ಮಾರಲಿಕ್ಕೆ ಸಿದ್ಧಮಾಡುವರು. ಈ ದೀಪದ ಕಾರಖಾನೆಯಲ್ಲಿ ಕೆಲಸ ಮಾಡತಕ್ಕವರು ವಿಶೇಷವಾಗಿ ಹೆಂಗಸರು.

ನಮ್ಮ ಪೂರ್ವಿಕರು ವಿಶೇಷ ಶ್ರಮದಿಂದ ಬೆಂಕಿಯನ್ನು ಹತ್ತಿಸುತ್ತಿದ್ದರು. ನಾವು ಅಷ್ಟು ಶ್ರಮಪಡದೆ ಬೆಂಕಿಯನ್ನು ಹತ್ತಿಸುವೆವು. ಹೀಗೆ ಸುಲಭವಾಗಿರುವ ಪದಾರ್ಥವನ್ನೂ ನಾವು ಸರಿಯಾಗಿ ಜಾಗರೂಕರಾಗಿ ಉಪಯೋಗಿಸದೆ ಹೋದರೆ ಬಹು ಕೇಡು ಸಂಭವಿಸಬಹುದು. ಆದುದರಿಂದಲೇ 'ಬೆಂಕಿಯೊಡನೆಸರಸವೆ' 'ಬೆಂಕಿಯ ಸಹವಾಸ ಸಹವಾಸವಲ್ಲ' ಎಂಬ ಲೋಕವಾರ್ತೆಗಳನ್ನು ನಾವೆಲ್ಲರೂ ಕೇಳಿರುತ್ತೆವೆಯಾದಕಾರಣ ಬೆಂಕಿಯನ್ನೇ ಆಗಲಿ, ಬೆಂಕಿಕಡ್ಡಿ ಪೊಟ್ಟಣವನ್ನೇ ಆಗಲಿ, ತಿಳಿಯದ ಮಕ್ಕಳ ಕೈಗೆ ಆಡಲಿಕ್ಕೆ ಕೊಟ್ಟು ಪ್ರಮಾದವನ್ನುಂಟುಮಾಡದೆ ಜಾಗ್ರತೆ

ದಾಗ ಚಾಗರೂಕತೆಯಿಂದ ಉಪಯೋಗಿಸಿಕೊಂಡರೆ ಬೆಂಕಿಯಿಂದ ವಿಶೇಷ ಪ್ರಯೋಜನವನ್ನು ಪಡೆಯಬಹುದು.

ಗಣಿತ.

ದಶಮಾಂಶ.

. ಹಿಂದಿನ ಸಂಚಿಕೆಯಲ್ಲಿ ಛೇದದಲ್ಲಿ 10 ಅಥವಾ 10 ರ ಕೃತಿಗಳಿರತಕ್ಕ(power) ಭಿನ್ನರಾಶಿಗಳನ್ನು ದಶಮಾಂಶವನ್ನಾಗಿ ಮಾಡುವ ಕ್ರಮವನ್ನು ತಿಳಿಸಿದ್ದಾಯಿತು. ಆ ವಿಧಿಯ ಸಹಾಯದಿಂದ ಯಾವ ಭಿನ್ನರಾಶಿಯನ್ನೇ ಆಗಲಿ ದಶಮಾಂಶವನ್ನಾಗಿ ಮಾಡುವುದಕ್ಕೆ ಬೇಕಾದ ವಿಧಿಯನ್ನು ಕಂಡು ಹಿಡಿಯಬಹುದು. ಅದು ಹೇಗೆಂದರೆ— ಛೇದದ ಅಪವರ್ತ್ಯವಾದ 10 ರ ಕೃತಿಯಿಂದ ಅಂಶವನ್ನು ಗುಣಿಸಿ ಭಿನ್ನರಾಶಿಯ ಬೆಲೆಯು ವ್ಯತ್ಯಾಸವನ್ನು ಹೊಂದದಿರುವುದಕ್ಕಾಗಿ ಆದೇ ಸಂಖ್ಯೆಯಿಂದ ಛೇದವನ್ನೂ ಗುಣಿಸತಕ್ಕದ್ದು. ಹೀಗೆ ಮಾಡಿ ಬಂದ ಭಿನ್ನರಾಶಿಯ ಅಂಶಛೇದವೆರಡನ್ನೂ ಮೊದಲಿನ ಛೇದದಿಂದ ಭಾಗಿಸಿದರೆ ಛೇದದಲ್ಲಿ 10 ರ ಕೃತಿಮಾತ್ರವಿರುವ ರೂಪವು ಬರುವುದು. ಅದನ್ನು ಅನಂತರದಲ್ಲಿ ದಶಮಾಂಶದಲ್ಲಿ ಸುಲಭವಾಗಿ ಬರೆಯಬಹುದು. ಉದಾಹರಣೆಗಾಗಿ $\frac{1}{2}$ ಎಂಬುದನ್ನು ತೆಗೆದುಕೊಳ್ಳುವಣ. ಇದರಲ್ಲಿ ಅಂಶ ಮತ್ತು ಛೇದ ಇವುಗಳನ್ನು 10 ರಿಂದ ಗುಣಿಸಿದರೆ $\frac{10}{20}$. ಆಗುವುದು. 10 ಮತ್ತು 20 ಇವೆರಡನ್ನೂ 2 ರಿಂದ ಭಾಗಿಸಿದರೆ $\frac{5}{10}$ ಆಗುವುದು. ಆದರೆ $\frac{5}{10} = \cdot 5$

$\therefore \frac{1}{2} = \cdot 5$. ಬೇರೊಂದು ಉದಾಹರಣೆಗಾಗಿ $\frac{7}{32}$ ನ್ನು ತೆಗೆದುಕೊಳ್ಳುವಣ. ಇಲ್ಲಿ 100,000 ದಿಂದ ಗುಣಿಸಬೇಕಾಗುವುದು.

$$\frac{7}{32} = \frac{7 \times 100,000}{32 \times 100,000} = \frac{700,000}{3,200,000} = \frac{21,975}{100,000} = \cdot 21975.$$

ಈ ಮೇಲಿನ ಉದಾಹರಣೆಗಳಿಂದ ಲೆಕ್ಕ ಪುಸ್ತಕಗಳಲ್ಲಿ ಭಿನ್ನರಾಶಿಗಳನ್ನು ದಶಮಾಂಶಗಳನ್ನಾಗಿ ಮಾಡುವುದಕ್ಕೆ ಹೇಳಿರುವ ಕ್ರಮವನ್ನು ಊಹಿಸಬಹುದು. ಅದೇನಂದರೆ—ಭಿನ್ನರಾಶಿಯ ಅಂಶವನ್ನು ಭಾಜ್ಯವನ್ನಾಗಿ ಮಾಡಿ ಅದರ ಮುಂದೆ ಸೊನ್ನೆಗಳನ್ನು ಸೇರಿಸುತ್ತ ಶೇಷವಿಲ್ಲದೆ ಹೋಗುವವರಿಗೂ ಛೇದದಿಂದ ಭಾಗಿಸುವುದು. ಭಾಗಿಸಿ ಬಂದ ಭಾಗಲಬ್ಧದ ಹಿಂದೆ ಚುಕ್ಕೆಯನ್ನಿಟ್ಟರೆ ಅದು ಭಿನ್ನರಾಶಿಗೆ ಸರಿಯಾದ ದಶಮಾಂಶವಾಗುವುದು.

ಈ ಕ್ರಮವನ್ನನುಸರಿಸಿ $\frac{1}{3}$ ಎಂಬುದನ್ನು ದಶಮಾಂಶದಲ್ಲಿ ಬರೆದರೆ ·33333 .... ಎಂದು ಬರುವುದು. ಹೀಗೆ ಪಾರವಿಲ್ಲದೆ ಬರುವುದನ್ನು ಸೂಚಿಸುವುದಕ್ಕೆ ·3̇ ಎಂದು ಬರೆಯುವುದು ವಾಡಿಕೆಯಾಗಿದೆ. ಹಾಗೆಯೆ $\frac{5}{6}$ ಎಂಬುದನ್ನು ದಶಮಾಂಶವಾಡಿದರೆ ·833333 .... ಎಂದು ಬರುವುದು. ಇದನ್ನು ·83̇ ಎಂದು ಬರೆಯುವರು. ಮೊದಲನೆಯುದಕ್ಕೆ ಶುದ್ಧ ಆವರ್ತಿದಶಮಾಂಶವೆಂತಲೂ, ಎರಡನೆಯುದಕ್ಕೆ ಮಿಶ್ರ ಆವರ್ತಿ ದಶಮಾಂಶವೆಂತಲೂ ಹೆಸರು. ಅನೇಕ ಅಂಕಿಗಳು ಆವರ್ತಿಯಿಂದ ಬರುವುದೂ ಉಂಟು. ಉದಾ : $\frac{1}{7}$ ಇದು 142857142857 ..... ಅಥವಾ $1\dot{4}2857\dot{1}$ ಆಗುವುದು.

ಹೀಗೆ ಪಾರವಿಲ್ಲದೆ ಅಂಕಿಗಳು ಬರಲು ಕಾರಣವೇನಿರಬಹುದೆಂದು ತಿಳಿಯಬೇಕಾದರೆ ಭಿನ್ನರಾಶಿಗಳನ್ನು ದಶಮಾಂಶವನ್ನಾಗಿ ಮಾಡುವುದಕ್ಕೆ ಹಿಂದೆ ಹೇಳಿದ ವಿಧಿಯನ್ನು ಪರ್ಯಾಲೋಚಿಸಿದರೆ ಗೊತ್ತಾಗುವುದು. ಆ ವಿಧಿಯಲ್ಲಿ ಛೇದದ ಅಪವರ್ತ್ಯವಾದ 10 ರ ಕೃತಿಗಳಿಂದ ಅಂಶಗಳನ್ನು ಗುಣಿಸತಕ್ಕದ್ದೆಂದು ಹೇಳಿದೆ. ಆದರೆ 3, 6, 7 ಇಂಥ ಸಂಖ್ಯೆಗಳ ಅಪವರ್ತ್ಯಗಳಾದ 10 ರ ಕೃತಿಗಳ್ಯಾವವೂ ಇಲ್ಲದಿರುವುದರಿಂದ ಪಾರವಿಲ್ಲದೆ ಅಂಕಿಗಳು ಬರಲು ಕಾರಣವಾಯಿತು. ಛೇದದ ಅಪವರ್ತನಗಳೆಲ್ಲಾ 10 ರ ಅಪವರ್ತನಗಳಾದ 2, 5 ಇವುಗಳಲ್ಲಿ ಮಾತ್ರವಾಗಿರುವ ಹೀಗೆ ಪಾರವಿಲ್ಲದೆ ಹೋಗುವುದಿಲ್ಲ. ಇವೆರಡರಲ್ಲಿ (2, 5) ಯಾವೆದೂ ಛೇದದ ಅಪವರ್ತನವಲ್ಲದೆ ಇದ್ದರೆ ಆ ಭಿನ್ನರಾಶಿಯು ಶುದ್ಧ ಆವರ್ತಿ ದಶಮಾಂಶವಾಗುವುದು. ಅವುಗಳ ಜೊತೆಗೆ ಬೇರೆ ಅಂಕಿಗಳೂ ಛೇದದ ಅಪವರ್ತನಗಳಾಗಿದ್ದಲ್ಲಿ ಮಿಶ್ರ ಆವರ್ತಿ ದಶಮಾಂಶವಾಗುವುದು. ಉದಾಹರಣೆ—

ಆವರ್ತಿ ಇಲ್ಲದ ದಶಮಾಂಶಕ್ಕೆ $\frac{1}{2}$, $\frac{1}{8}$; $\frac{1}{5}$, $\frac{1}{25}$; $\frac{1}{10}$, $\frac{1}{20}$, $\frac{1}{50}$

ಶುದ್ಧ ಆವರ್ತಿ ದಶಮಾಂಶಕ್ಕೆ $\frac{1}{3}$; $\frac{1}{7}$; $\frac{1}{9}$.

ಮಿಶ್ರ ಆವರ್ತಿ ದಶಮಾಂಶಕ್ಕೆ $\frac{1}{6}$, $\frac{1}{12}$; $\frac{1}{15}$; $\frac{1}{30}$.

ಆವರ್ತಿ ದಶಮಾಂಶಗಳನ್ನು ಭಿನ್ನರಾಶಿಗಳನ್ನಾಗಿ ಮಾಡತಕ್ಕ ಕ್ರಮವನ್ನು ಕಂಡು ಹಿಡಿಯುವ ಬಗೆ—

$\cdot\dot{5} = \cdot55555\ldots\ldots$

ಇದನ್ನು 10 ರಿಂದ ಗುಣಿಸಿದರೆ

$$\begin{array}{r} \cdot 55555\cdots\cdots \\ 10 \\ \hline 5\cdot 55555\cdots\cdots \end{array}$$

$\therefore \quad 10 \times \cdot\dot{5} = 5\cdot\dot{5}$

$\therefore \quad 10\times\cdot\dot{5} - \cdot\dot{5} = 5\cdot\dot{5}$

$\therefore \quad 9 \times \cdot\dot{5} = 5 \quad \therefore \cdot\dot{5} = \frac{5}{9}$

ಬೇರೊಂದು ಉದಾಹರಣೆ—$\cdot\dot{2}\dot{0}\dot{4}$

$$\cdot\dot{2}\dot{0}\dot{4} = \cdot 204204204\cdots\cdots$$

$$1000 \times \cdot\dot{2}\dot{0}\dot{4} = 204\cdot 204204\cdots\cdot = 204\cdot\dot{2}\dot{0}\dot{4}$$

$$\therefore \quad 999 \times \cdot\dot{2}\dot{0}\dot{4} = 204 \therefore \cdot\dot{2}\dot{0}\dot{4} = \frac{204}{999}$$

ಅಂದರೆ ಆವರ್ತಿ ದಶಮಾಂಶವನ್ನು ಭಿನ್ನರಾಶಿಯನ್ನಾಗಿ ಮಾಡಬೇಕ ನರೆ ದಶಮಾಂಶದ ಅಂಕಿಗಳನ್ನು ಚುಕ್ಕೆಗಳನ್ನು ಬಿಟ್ಟು ಅದೇ ಕ್ರಮದಲ್ಲಿ ಬರೆದ ಅದನ್ನು ಭಿನ್ನರಾಶಿಯ ಅಂಶವನ್ನಾಗಿ ಮಾಡಿ ಛೇದದಲ್ಲಿ ದಶಮಾಂಶದಲ್ಲಿನ ಅಂ ಗಳ ಸಂಖ್ಯೆ ಎಷ್ಟಿರುವುದೊ ಅಷ್ಟು ಒಂಬತ್ತುಗಳನ್ನು ಬರೆಯತಕ್ಕದ್ದು.

ಮಿಶ್ರ ಆವರ್ತಿ ದಶಮಾಂಶವಾದರೂ ಹೀಗೆಯೆ ಮಾಡತಕ್ಕದ್ದು.

ಉದಾಹರಣೆ—$\cdot 3\dot{4}$

$$\cdot 3\dot{4} = \cdot 34444\cdots\cdots$$

$$100 \times 3\dot{4} = 34\cdot 444\cdots\cdot = 34\cdot\dot{4}$$

$$10 \times \cdot 3\dot{4} = 3\cdot 4444\cdots\cdots = 3\cdot\dot{4}$$

$\therefore \quad 90 \times \cdot 3\dot{4} = 31$ (ವ್ಯವಕಲನದಿಂದ)

$$\therefore \cdot 3\dot{4} = \frac{31}{90} = \frac{34-3}{90}$$

ಅಂದರೆ ಭಿನ್ನರಾಶಿಯನ್ನಾಗಿ ಮಾಡಬೇಕಾದ ದಶಮಾಂಶದ ಅಂಕಿಗಳನ್ನು ಚುಕ್ಕೆಗಳನ್ನು ಬಿಟ್ಟು ಅದೇ ಕ್ರಮವಾಗಿ ಬರೆದು ಅದರಲ್ಲಿ ಆವರ್ತಿ ಇಲ್ಲದಿರುವ ಅಂ ಗಳನ್ನು ಕಳೆದು ಉಳಿದದ್ದನ್ನು ಭಿನ್ನರಾಶಿಯ ಅಂಶವನ್ನಾಗಿ ಮಾಡಿ ಛೇದದಲ್ಲಿ ಆವರ್ತಿ

ಇರುವ ಅಂಕಿಗಳ ಸಂಖ್ಯೆಯೆಷ್ಟೋ ಅಷ್ಟು ಒಂಬತ್ತುಗಳನ್ನು ಬರೆದು ಅವುಗಳಮುಂದೆ ಆವರ್ತಿ ಇಲ್ಲದಿರುವ ಅಂಕಿಗಳ ಸಂಖ್ಯೆಯೆಷ್ಟೋ ಅಷ್ಟು ಸೊನ್ನೆಗಳನ್ನು ಬರೆಯುತಕ್ಕದ್ದು.

ಮೇಲೆ ಹೇಳಿದಂತಿರುವ ದಶಮಾಂಶಸ್ವರೂಪವನ್ನು ಜೆನ್ನಾಗಿ ತಿಳಿದಲ್ಲಿ ಅದು ಭಿನ್ನರಾಶಿಯ ರೂಪಾಂತರವೆಂದು ಸ್ಪಷ್ಟವಾಗುವುದು. ಹೀಗೆ ಬಿನ್ನರಾಶಿಯನ್ನಾಗಿಯೇ ಬರೆಯಬಹುದಾದವುಗಳನ್ನು ದಶಮಾಂಶಗಳಾಗಿ ಬರೆಯುವ್ರದರಿಂದ ಕೆಲವುಸಂದರ್ಭಗಳಲ್ಲಿ ಲೆಕ್ಕವನ್ನು ಮಾಡುವಾಗ ಬಹಳಮಟ್ಟಿಗೆ ಸೌಕರ್ಯ ಉಂಟಾಗುವುದು. ಇದಕ್ಕೆ ದೃಷ್ಟಾಂತವಾಗಿ ಲೆಕ್ಕದ ಪುಸ್ತಕಗಳಲ್ಲಿ ಉದಾಹರಣೆಗಳು ದೊರೆಯುವವು. ಸಾಧಾರಣವಾಗಿ ಅಂಥ ಪುಸ್ತಕಗಳಲ್ಲಿಲ್ಲದಿರುವ ಎರಡು ಪ್ರಶ್ನೆಗಳನ್ನು ಇಲ್ಲಿ ಕೊಡುತ್ತೇವೆ :—

(1) 3·1415 ಎಂಬುವದರ ವರ್ಗವನ್ನು ಕಂಡು ಹಿಡಿಯಬೇಕು.

(2) $\frac{1}{5}+\frac{1}{5\times5}+\frac{1}{5\times5\times5}+\frac{1}{5\times5\times5\times5}+\cdots\cdots$ ಇದರಬೆಲೆಯನ್ನು

(5 ದಶಮಾಂಶಸ್ಥಾನದವರಿಗೆ ಕಂಡುಹಿಡಿದರೆ ಸಾಕು)

M. H.

☞ ಇವೆರಡು ಪ್ರಶ್ನೆಗಳನ್ನು ಮಾಡುವರೀತಿಯನ್ನು ಮುಂದಿನ ಸಂಚಿಕೆಯಲ್ಲಿ ತೋರಿಸುವೆವು. ಈ ಲೆಕ್ಕಗಳನ್ನುಮಾಡಿ ತಿಳಿಸಲಿಚ್ಛಿಯುಳ್ಳವರು ಅಷ್ಟರೊಳಗೆ ಬರೆದು ಮ್ಯಾನೇಜರವರ ಹತ್ತರಕ್ಕೆ ಕಳುಹಿಸತಕ್ಕದ್ದು.

ಮೈಸೂರು ವಿದ್ಯಾಭ್ಯಾಸದ ಇಲಾಖೆಯ ರಿಪೋರ್ಟು.

1892—1893.

ಕನ್ನಡ ಸ್ಕೂಲ್‌ಗಳ ವಿಷಯದಲ್ಲಿ ಎಜ್ಯುಕೇಷನ್ ಸೆಕ್ರಟರಿ ಸಾಹೇಬರವರ ಅಭಿಪ್ರಾಯಗಳು.

ಕನ್ನಡ ಪ್ರೈಮರಿಸ್ಕೂಲುಗಳ

ಎಲ್ಲಾ ಹೋಬಳಿ ಸ್ಕೂಲುಗಳು ಪ್ರೈಮರಿಸ್ಕೂಲು ಗ್ರೇಡಿಗೆ ಸೇರಿಸಲ್ಪಟ್ಟಿವೆ. ಇವುಗಳಲ್ಲಿ ಪ್ರೈಮರಿ ತರಗತಿಗಳಿಗೆ ಮೇಲ್ಪಟ್ಟ ಪಾಠಗಳನ್ನು ಭೋಧಿಸುವ ಅತ್ಯವಶ್ಯಕವಿಲ್ಲವು. ಆದಾಗ್ಯೂ ಕೆಲವು ಹೋಬಳಿ ಸ್ಕೂಲುಗಳಲ್ಲಿ ಪ್ರೈಮರಿ ತರಗತಿ

ಮೇಲ್ಪಟ್ಟ ಪಾಠವು ನಡಿಯುತ್ತೆ. ಇವುಗಳನ್ನು ಶಾಶ್ವಿತವಾಗಿ ನಡಿಯುವಹಾ ಮಾಡಲು ವಿಶೇಷ ವಿದ್ಯಾರ್ಥಿಗಳಿಲ್ಲದಿರವದೇ ಕಾರಣವಾಗಿದೆ. ಮತ್ತು ಕೆಲಸ ಹೋ। ಸ್ಕೂಲುಗಳಿಂದ ವಿದ್ಯಾರ್ಥಿಗಳು ಲೊವರ್ ಸೆಕೆಂಡರಿ ಪರೀಕ್ಷೆಯಲ್ಲಿ ಪ್ರ ವರ್ಷದಲ್ಲಿ ತೇರ್ಗಡೆಯಾಗುತ್ತಾ ಬಂದಿರುತ್ತಾರೆ. ಕುಣಿಗಲ್ ತಾ। ಅಮೃರ್ತೂರ ಹೋ। ಸ್ಕೂಲುನಿಂದ ೪ ಮಂದಿ, ದೊಡ್ಡ ಬಳ್ಳಾಪುರದ ತಾ। ಕೋಡಿಹಳ್ಳಿ ಹೋ ಸ್ಕೂಲುನಿಂದ ೩ ಮಂದಿ, ಮಳವಳ್ಳಿ ತಾ। ಪೂರೆಗಾಲಿ ಹೋ। ಸ್ಕೂಲುನಿಂದ ೭ ಮಂದಿ, ವಿದ್ಯಾರ್ಥಿಗಳು ತೇರ್ಗಡೆಯಾಗಿರುತ್ತಾರೆ. ತಿ। ನರಸಿಪುರದ ತಾ। ಶ್ರೀ ರಂಗರಾಜಪುರದ ಹೋ।ಸ್ಕೂಲುನಿಂದ, ಚಿಂತಾಮಣಿ ತಾ।ದೊಡ್ಡಗಂಜೂರು ಹೋ। ಸ್ಕೂಲುನಿಂದ, ಹೋದ ವರಷದ ಹಾಗೆಯೇ ಒಬ್ಬೊಬ್ಬ ವಿದ್ಯಾರ್ಥಿಯು ತೇರ್ಗಡೆ ಯಾಗಿರುತ್ತಾನೆ. ಇವೇ ಅಲ್ಲದೆ ಹೊಸಕೋಟೆ ತಾ। ಚಾಮಸಂದ್ರದ ಹೋ। ಸ್ಕೂಲುನಿಂದ, ಗೋವಿನಿದನೂರು ತಾ।। ದೊಡ್ಡನಾಯಕನ ಪಾಳ್ಯ. ಮಂಡ್ಯದ ತಾ। ಗುತ್ಲು ಹೊ। ಸ್ಕೂಲಿನಿಂದ, ಒಬ್ಬೊಬ್ಬ ವಿದ್ಯಾರ್ಥಿಯು ತೇರ್ಗಡೆಯಾದ್ದು ಇದೇ ಮೊದಲುವರ್ಷ.

ಬೆಂಗಳೂರು ಡಿಸ್ಟ್ರಿಕ್ಟು.

ಈ ಡಿಸ್ಟ್ರಿಕ್ಟ್‌ನಲ್ಲಿ ತಾಲ್ಲೂಕ್ ಬಾ್ರಂಚ್ ಸ್ಕೂಲುಗಳ ಒಟ್ಟು ಸಂಖೆಯು ೨೮. ಹೋಬಳಿಸ್ಕೂಲುಗಳ ವಟ್ಟು ಸಂಖೆಯು ೧೫೨. ತಾ। ಬಾ್ರಂಚ್ ಸ್ಕೂಲುಗಳಿಗೂ ಹೋಬಳಿ ಸ್ಕೂಲುಗಳಿಗೂ ಇರುವ ತಾರತಮ್ಯವೆನೆಂದರೆ—ಮೊದ ಲನೇತರಹದಲ್ಲಿ ಒಂದಾಣೆ ಸ್ಕೂಲು ಫೀ ವಸೂಲುಮಾಡುತ್ತೆ. ಎರಡನೇದರಲ್ಲಿ ಸ್ಕೂಲು ಫೀ ಇಲ್ಲವೇಇಲ್ಲ. ಈ ಡಿಸ್ಟ್ರಿಕ್ಟ್‌ನಲ್ಲಿನ ಹೋಬಳಿ ಸ್ಕೂಲುಗಳು ಶೇಕಡಾ ೬೦ ಒಳ್ಳೆಸ್ಥಿತಿಯಲ್ಲಿವೆ, ೧೩ ಒಳ್ಳೆಸ್ಥಿತಿಗೆ ಬರತಕ್ಕವುಗಳಾಗಿವೆ, ನಿಂತವುಗಳು ಹೀನಸ್ಥಿತಿ ಯಲ್ಲಿವೆಂದು ರಿಪೋರ್ಟು ಮಾಡಲ್ಪಟ್ಟಿವೆ.

ಕೋಲಾರಡಿಸ್ಟ್ರಿಕ್ಟ್.

ಈ ಡಿಸ್ಟ್ರಿಕ್ಟ್ ತಾ। ಸ್ಕೂಲುನಲ್ಲಿ ೧೩೦ ಮಂದಿ ವಿದ್ಯಾರ್ಥಿಗಳಿದಾರೆ. ಬೌರಿಂಗ್ ಸ್ಯಾಟೆ ತಾ। ಸ್ಕೂಲುನಲ್ಲಿ ೪೬ ಮಂದಿ ವಿದ್ಯಾರ್ಥಿಗಳಿದಾರೆ. ಈವೆರಡು ಸೆ್ರಮೆರಿ ಸ್ಕೂಲುಗಳಾಗಿವೆ. ಇವುಗಳು ಹೆಚ್ಚು ಗೆ್ರಡಿಗೆ ಬರಬಹುದಾಗಿವೆ. ಕೋಲಾರ ತಾ। ಕಟಾರಿಪಾಳ್ಯದ ತಾ। ಬಾ್ರಂಚ್ ಸ್ಕೂಲುನಲ್ಲಿ ೪೦ ಮಂದಿ ವಿದ್ಯಾ ರ್ಥಿಗಳಿದಾರೆ. ಮಾಲೂರು ತಾ। ಲಕ್ಕೂರು ಸ್ಕೂಲುನಲ್ಲಿ ೬೧ ಮಂದಿ ವಿದ್ಯಾರ್ಥಿ ಗಳಿದಾರೆ. ಈವೆರಡು ಸ್ಕೂಲುಗಳು ತುಂಬಾ ಅಭಿವೈದ್ಧಿಸ್ಥಿತಿಯಲ್ಲವೆ. ಗೋವಿ ಬಿದನೂರು ತಾಲ್ಲೂಕು ಕರಿಕಲಹಳ್ಳಿ ತಾ। ಬಾ್ರಂಚ್ ಸ್ಕೂಲು ಒಳ್ಳೇ ಅಭಿ ವೈದ್ಧಿಗೆ ಬಂದಿರುತ್ತೆ. ವಕ್ಕಲೇರಿ ತಾ। ಬಾ್ರಂಚ್ ಸೂಲು ಒಳ್ಳೇಸ್ಥಿತಿಯಲ್ಲಿದೆ.

ಜೋಡಿಚಾವರಹಳ್ಳಿ ಸಗುಟೂರು, ಉತ್ತನೂರು, ಕೊಳತ್ತೂರು, ಸ್ಕೂಲುಗಳು ಸುಮಾರಾಗಿ ಒಳ್ಳೇಸ್ಥಿತಿಯುಲ್ಲವೆ. ಕೋಲಾರ ತಾ। ಆರಾಬ್ಬಿಕೂತನೂರು, ಚಿಂತಾಮಣಿ ತಾ। ಸೋಮಯಾಜಲುಪಳ್ಳಿ, ಬ್ಯಾರಿಂಗ್‌ಪೇಟೆ ತಾ। ಹುನಕುಂದ, ಮಾಲೂರು ತಾ। ಚೊಕ್ಕಂಡಹಳ್ಳಿ, ರಾಜೇನಹಳ್ಳಿ ಹೋ। ಸ್ಕೂಲುಗಳು ಹೀನಸ್ಥಿತಿಗೆ ಬರುತ್ತವ್ತೆ ಇವೆ. ಈ ಡಿಸ್ಟ್ರಿಕ್‌ನಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ೯೦ಕ್ಕೆ ಮೀರಿದ ಹೋಬಳಿ ಸ್ಕೂಲುಗಳು ೨೮. ಹೀನಸ್ಥಿತಿಯಲ್ಲಿರುವ ಸ್ಕೂಲುಗಳ ೯.

ತುಮಕೂರು ಡಿಸ್ಟ್ರಿಕ್ಟು.

ಚಿಕ್ಕನಾಯಕನಹಳ್ಳಿ ತಾ। ಕುರುಬರಸೆಟ್ಟಿಹಳ್ಳಿ ಹೋ। ಸ್ಕೂಲು ಸ್ಥಿತಿಯು ತೃಪ್ತಿಕರವಾಗಿಲ್ಲ. ಕಣಕೆರೆ ತಾ। ಬ್ರಾಂಚ್‌ಸ್ಕೂಲಿನಲ್ಲಿ ಅಭಿವೃದ್ಧಿ ಏನೂ ತೋರಿಬರುವುದಿಲ್ಲ. ಈ ಡಿಸ್ಟ್ರಿಕ್ಟ್‌ನಲ್ಲಿ ಹೀನಸ್ಥಿತಿಯಲ್ಲಿರುವ ತಾ। ಸ್ಕೂಲುಗಳು ೧೧. ೧೨ನೇ ಹೋ। ಸ್ಕೂಲುಗಳಲ್ಲಿ ಅಮೃತೂರು, ಬರಗೂರು ಸ್ಕೂಲುಗಳು ಮಿನಹ ಬಾಕಿ ಸ್ಕೂಲುಗಳು ಮಿಡಲ್‌ಸ್ಕೂಲು ಗ್ರೇಡಿಗೆ ಬಂದಿರುತ್ತವೆ. ದೊಡ್ಡ ಪ್ರೈಮರಿ ಸ್ಕೂಲುಗಳ ಸಂಖ್ಯೆಯು ೪೧, ಚಿಕ್ಕ ಪ್ರೈಮರಿ ಸ್ಕೂಲುಗಳ ಸಂಖ್ಯೆಯು ೪೨. ಅಮೃತೂರು ಸ್ಕೂಲು ಈ ಡಿಸ್ಟ್ರಿಕ್ಟಿನ ಹೋ। ಸ್ಕೂಲುಗಳಲ್ಲಿ ದೊಡ್ಡದಾಗಿಯೂ ಉತ್ತಮ ಸ್ಥಿತಿಯಲ್ಲಿಯೂ ಇವೆ. ಬರಗೂರುಸ್ಕೂಲು ಸುಮಾರಾಗಿ ಒಳ್ಳೇಸ್ಥಿತಿಯುಲ್ಲಿದೆ. ಕ್ಯಾತಸಂದ್ರದಸ್ಕೂಲು ದೊಡ್ಡ ಪ್ರೈಮರಿಸ್ಕೂಲಾಗಿಯೂ ಸುಮಾರಾಗಿ ಒಳ್ಳೇಸ್ಥಿತಿಯಲ್ಲಿದೆ. ಇದರಲ್ಲಿ ೧೦೨ ಮಂದಿ ವಿದ್ಯಾರ್ಥಿಗಳಿದಾರೆ. ಈ ಡಿಸ್ಟ್ರಿಕ್ಟ್‌ನಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ೫೦ಕ್ಕೆ ಮೀರಿದ ಹೋ। ಸ್ಕೂಲುಗಳು ೨೦. ಈಪೈಕಿ ೧೪ ಸ್ಕೂಲುಗಳ ಸ್ಥಿತಿಯು ತೃಪ್ತಿಕರವಾಗಿದೆ. ಬಾಕಿ ಸ್ಕೂಲುಗಳು ಸುಮಾರಾಗಿ ಒಳ್ಳೇಸ್ಥಿತಿಯಲ್ಲಿಯೇ ಆಗಲಿ ಅಥವಾ ಹೀನಸ್ಥಿತಿಯಲ್ಲಿಯೇ ಆಗಲಿ ಇವೆ. ಈ ಡಿಸ್ಟ್ರಿಕ್ಟ್‌ನ ಹೋ। ಸ್ಕೂಲುಗಳು ಈವರುಷದಲ್ಲಿ ತುಂಬಾ ಅಭಿವೃದ್ಧಿಗೆ ಬಂದಿರುತ್ತೆ.

ಚಿತ್ರದುರ್ಗದ ಡಿಸ್ಟ್ರಿಕ್ಟು.

ಚಿಳ್ಳೇಕೆರೆ, ಹಿರಿಯೂರು ತಾ। ಸ್ಕೂಲುಗಳು ಮಿಡಲ್‌ಸ್ಕೂಲು ಗ್ರೇಡಿಗೆ ತರತಕ್ಕವುಗಳಾಗಿವೆ. ಇವುಗಳ ಸ್ಥಿತಿಯು ತೃಪ್ತಿಕರವಾಗಿಲ್ಲ. ಜಗಲೂರು ತಾ। ಸ್ಕೂಲು ಸುಮಾರಾಗಿ ಒಳ್ಳೇಸ್ಥಿತಿಯಲ್ಲಿದ್ದಾಗ್ಯೂ ತುಂಬಾ ಅಭಿವೃದ್ಧಿಗೆ ತರಬೇಕಾಗಿರುತ್ತೆ. ಕೋಣಸಾಗರ, ರಾಮಗಿರಿ, ಬುರುಜನಟ್ಟೆ ತಾ। ಬ್ರಾಂಚ್‌ಸ್ಕೂಲುಗಳು ಉತ್ತಮಸ್ಥಿತಿಯಲ್ಲಿವೆ. ಹಡದಿಸ್ಕೂಲು ತುಂಬಾ ಹೀನಸ್ಥಿತಿಯಲ್ಲಿದೆ. ಈಡಿಸ್ಟ್ರಿಕ್ಟ್‌ನಲ್ಲಿ ತಾ। ಬ್ರಾಂಚ್ ಸ್ಕೂಲುಗಳೆಲ್ಲ ಒಳ್ಳೇಸ್ಥಿತಿಯಲಿವೆ. ತುರುವನೂರು.

ಮಲೇಬನ್ನೂರು, ಸಿರಿಗೆರೆ, ತಾಳ್ಯ, ಮಾಯಕೊಂಡ, ಹರಳಹಳ್ಳಿ, ಸೋಕ್ಕೆ, ರಾಣಿ ಪುರ, ದೇವಸಮುದ್ರ, ಸಿದ್ದವನಹಳ್ಳಿ ಸ್ಕೂಲುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ೫೦೪ ವಿಹಾರಿದೆ. ಇವೆಲ್ಲಾ ದೊಡ್ಡಸ್ಕೈಮರಿಸ್ಕೂಲುಗಳಾಗಿಯೂ ಅಭಿವೃದ್ಧಿಯಲ್ಲಿ ತೃಪ್ತಿಕರವಾಗಿಯೂ ಇವೆ. ೧೯ ಹೋಬಳಿ ಸ್ಕೂಲುಗಳು ಹೀನಸ್ಥಿತಿಯಲ್ಲಿವೆ ಎಂದು ರಿಪೋರ್ಟುಮಾಡಿದ್ದಾರೆ.

ಸಿವಮೊಗ್ಗಾ ಡಿಸ್ಟ್ರಿಕ್ಟ.

ನಗರ, ಸೊರಬ ತಾಲೂಕು ಸ್ಕೂಲುಗಳು ಪ್ರೈಮರಿ ಗ್ರೇಡಿಗೆ ಸೇರಿರುತ್ತವೆ. ನಗರದ ಸ್ಕೂಲಿನಲ್ಲಿ ೫೧ ಮಂದಿ ವಿದ್ಯಾರ್ಥಿಗಳಿದಾರೆ. ಇದು ಸುಮಾರಾಗಿ ಒಳ್ಳೆಯ ಸ್ಥಿತಿಯಲ್ಲಿದೆ. ಸೊರಬದಸ್ಕೂಲಿನಲ್ಲಿ ೭೭ ಮಂದಿ ವಿದ್ಯಾರ್ಥಿಗಳಿದಾರೆ. ಇದರ ಅಭಿವೃದ್ಧಿಯು ತೃಪ್ತಿಕರವಾಗಿಲ್ಲ. ಈ ಡಿಸ್ಟ್ರಿಕ್ಟ್‌ನಲ್ಲಿ ೭ ತಾಲೂಕು ಬ್ರಾಂಚ್ ಸ್ಕೂಲುಗಳಿವೆ. ಇವೇ ಪ್ರೈಮರಿ ಗ್ರೇಡಿನವುಗಳಾಗಿವೆ. ಸಿರಾಳಕೊಪ್ಪದ ಸ್ಕೂಲಿನಲ್ಲಿ ೧೦೩ ನುಂದ ವಿದ್ಯಾರ್ಥಿಗಳಿದಾರೆ. ಇದರ ಅಭಿವೃದ್ಧಿಯು ತೃಪ್ತಿಕರವಾಗಿದೆ. ಹಾರನಹಳ್ಳಿ, ಆಯನೂರು, ಕುಂಸಿ, ಅನಂತಪುರ, ಸ್ಕೂಲುಗಳಸ್ಥಿತಿ ಚೆನ್ನಾಗಿಲ್ಲ. ಬೆಂಕಿಪುರ ಮತ್ತು ಆರಗದ ಸ್ಕೂಲುಗಳು ಸುಮಾರಾಗಿ ಒಳ್ಳೇ ಸ್ಥಿತಿಯಲ್ಲಿರುತ್ತವೆ. ಈ ಡಿಸ್ಟ್ರಿಕ್ಟ್‌ನಲ್ಲಿ ಹೋಬಳಿ ಸ್ಕೂಲುಗಳು ಕಮ್ಮಿಯಾದವು. ಈ ಡಿಸ್ಟ್ರಿಕ್ಟ್‌ನಲ್ಲಿರುವ ಹೋಬಳಿ ಸ್ಕೂಲುಗಳ ಒಟ್ಟು ಸಂಖ್ಯೆಯು ೧೧೭. ವಿದ್ಯಾರ್ಥಿಗಳ ಸಂಖ್ಯೆಯು ೫೦ ಕ್ಕೆ ವಿಹಾರಿದ ಹೋಬಳಿ ಸ್ಕೂಲುಗಳ ಸಂಖ್ಯೆಯು ೪. ನಿಂತವುಗಳಲ್ಲಿ ೧೩ ವಿನಹಾ ಬಾಕಿ ಸ್ಕೂಲುಗಳಸ್ಥಿತಿಯು ತೃಪ್ತಿಕರವಾಗಿಲ್ಲ. ಈ ಡಿಸ್ಟ್ರಿಕ್ಟ್‌ನಲ್ಲಿ ಒಳ್ಳೇಸ್ಥಿತಿಯಲ್ಲಿರುವ ಸ್ಕೂಲುಗಳು ಶೇಕಡಾ ೬೬. ಹೊನ್ನಾಳೀ ತಾಲ್ಲೂಕಿನಲ್ಲಿರುವ ಸ್ಕೂಲುಗಳು ಒಳ್ಳೇಸ್ಥಿತಿಯಲ್ಲಿವೆ. ಚೆನ್ನಗಿರಿ, ಸಿವಮೊಗ್ಗ, ಶಿಕಾರಿಪುರದಸ್ಕೂಲುಗಳು ಸುಮಾರಾಗಿ ಒಳ್ಳೇಸ್ಥಿತಿಯಲ್ಲಿವೆ. ಸಾಗರ, ನಗರ, ಸೊರಬ, ತೀರ್ಥಹಳ್ಳಿ ಇಂಥಾ ಮಲನಾಡು ತಾಲ್ಲೂಕುಗಳಲ್ಲಿರುವ ಸ್ಕೂಲುಗಳ ಸ್ಥಿತಿಯು ತುಂಬಾ ಶೋಚನೀಯವಾಗಿದೆ. ಸಿವಮೊಗ್ಗ ತಾಲೂ ದರ್ಗಿಗುಡಿ ದ್ರವ್ಯಸಹಾಯದ ವೆಸ್ಲ್ಯನ್ ಮಿಷನ್ ಸ್ಕೂಲು ಅಭಿವೃದ್ಧಿಯು ತೃಪ್ತಿಕರವಾಗಿಲ್ಲ.

ನದಿಯವರ್ಣನೆ.

ರಾಗ ಜಂಗಲ್—ರೂಪಕತಾಳ.

ಹೊಳೆಯೆಂತು ಕಾಣುತಿರುವದಿಲ್ಲಿ । ಗೆಳೆಯನೆನೋಡೈ ॥ ಪ ॥
ಜಳದಿಂದತುಂಬಿ ತುಳುಕುತೆಕಂ । ಗೊಳಿಸುತಿರುವದೈ ॥ ಅ ॥
ಇದೊ ಸ್ನಾನಕಾಗಿವಮಾಡಿದ ಸೋ । ಪಾನವಿರುವದು ॥
ಇದೊ ಗಾನಮಾಡುತಿರುವ ಹಕ್ಕಿಗಳ್ । ಕಾಣುತಿರುವವು ॥ ೧ ॥

ದಡದಲ್ಲಿ ಗಿಡಗಳೆಲ್ಲ ಬೇರುಸಡಲಿ ಬಿಳುವವೈ ॥
ಬಿಡದಿಲ್ಲಿ ಗುಡುಗಿನಂತೆ ಶಬ್ದ । ಮೂಡುತಿರುವದೈ ॥ ೨ ॥
ನಡುದಾರಿಯಲ್ಲಿ ಬಂಡೆಗಳಿಗೆ । ತೆರೆಯು ಹೊಡೆಯುತ ॥
ಪೊಡೆಚಂಡಿನಂತೆ ಮೇಲಕ್ಕೆದ್ದು । ಬೀಳುತಿರುವವು ॥ ೩ ॥
ಬಿಳುಪಾದ ನೊರೆಯು ನೀರಮೇ । ಲೋಡುತಿರುವದು ॥
ತಳದಿಂದ ಮೇಲಕೆದ್ದು ಸುತ್ತಿ । ಸುಳಿವಸುಳಿಗಳು ॥ ೪ ॥
ಜನರೆಲ್ಲ ದೀಪಗಳನು ನೀರ । ಮೇಲೆಬಿಡುವರೈ ॥
ಮನಕೆಂತು ಸುಖವಕೊಡುವದಿಲ್ಲಿ । ನೋಡು ಮಿತ್ರನೆ ॥ ೫ ॥

ರಾಗ—ಬಿಲಹರಿ—ರೂಪಕತಾಳ.

ಓಡಿಬನ್ನಿರೆ । ನೋಡುವದಕೆ । ಹುಡುಗರೆ ॥ ಪ ॥
ಕೂಡಿನದಿಯೊ । ಳಾಡಿಮುದದಿ । ಪಾಡಿನೋಡುವ ॥ ಅ ॥

ಸ್ನಾನಕಾಗಿನಿ । ರ್ಮಾಣವಾದ ಸೋ ।
ಪಾನಮೇಪರಿತಾಣುತಿರ್ಪುದು ॥
ನಾನಾಪಕ್ಷಿಗ । ಳೀನದಿಯೊಳು ।
ಗಾನಮಾಡುವವು ॥ ೧ ॥

ನೀರಹೊಯ್ಲಿನಿಂ । ಬೇರುಗಳಿಲ್ಲದ ।
ಈ ಮರಂಗಳು । ಬೀಳುತಿರ್ಪುವು ।
ನೀರಹಕ್ಕಿಗಳ್ । ಸೇರಿಮುದದಿ ।
ಹಾರಾಡುವವು ॥ ೨ ॥

ಕಪ್ಪೆಚಿಪ್ಪುಗ । ಳೊಪ್ಪಿನಿಂದಲೆ ।
ಕುಪ್ಪೆಕುಪ್ಪೆಗಳಾಗಿ ತೋರ್ಪವು ॥
ಕಪ್ಪಾಗಿರುವ । ದಪ್ಪಗುಂಡುಗಳ್ ।
ನೆಪ್ಪುತೋರುವವು ॥ ೩ ॥

ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿಗಳು

ಮೈಸೂರು ಗೌರ್ನಮೆಂಟು ನಾರ್ಮಲ್‌ಸ್ಕೂಲು V. ನೇ ತರಗತಿ.

ಆಗಸ್ಟ್ 1894.

ಪಾಠಕ್ರಮ—ಕಾಲ ೩ ಘಂಟೆ.

I. (a) ತಿದ್ದುವಿಕೆ, ಶಿಕ್ಷಣ, ಇತರ ವ್ಯವಸ್ಥೆ ಅಥವಾ ಶಾಲಾನಿಬಂಧನೆ. ಇವುಗಳ ವ್ಯತ್ಯಾಸವನ್ನು ವಿವರಿಸಿರಿ.

(b) ತಿದ್ದುವಿಕೆಯನ್ನು ಸ್ಥಾಪಿಸಲು ಉಪಾಧ್ಯಾಯನಿಗೆ ಸಹಕಾರಿಗಳ್ಯಾವುವು. ಪ್ರತಿಯೊಂದನ್ನು ವಿಶದವಾಗಿ ಬರೆಯಿರಿ.

II. (1) ಪಾಠಶಾಲಾನಿಯಮಕ್ಕೆ ವ್ಯತಿರಿಕ್ತವಾಗಿ ನಡೆಯುವುದು.

(2) ಕೆಟ್ಟನಡತೆಯುಳ್ಳವನಾಗಿರುವುದು.

(3) ಪದೇಪದೇ ಸೋಮಾರಿಗಳಾಗಿಯೂ ಪಾಠಕ್ಕೆ ಗಮನಕೊಡದೆ ಇರುವುದು.

ಈ ಸಂದರ್ಭಗಳಲ್ಲಿ ತಿದ್ದುಪಾಟು ಮಾಡತಕ್ಕ ಉಪಾಯಗಳನ್ನು ವಿಶದಪಡಿಸಿ.

III. (a) ತಿದ್ದುವಿಕೆಯ ಉದ್ದೇಶಗಳ್ಯಾವುವು.

(b) ತಿದ್ದುವಿಕೆಯನ್ನು ಸ್ಥಾಪಿಸಲು ಉಪಾಧ್ಯಾಯನಲ್ಲಿರಬೇಕಾದ ಗುಣಗಳನ್ನು ಬರೆಯುವುದು.

IV. ಶಿಕ್ಷೆ, ಬಹುಮಾನ ಇವುಗಳಿಂದ ತಿದ್ದುವಿಕೆಗೆ ಆಗುವ ಅನುಕೂಲಗಳೇನು.

V. (a) ಕಲಿಸೋಣವೆಂದರೇನು.

(b) ಶಿಕ್ಷಣದ ಪದ್ಧತಿಗಳನ್ನು ಬರೆದು ಪರಸ್ಪರ ಪದ್ಧತಿಯಲ್ಲಿರುವ ಬಾಧಕ ಬಾಧಕಗಳನ್ನು ಉದಾಹರಣೆಗಳಿಂದ ವ್ಯಕ್ತಪಡಿಸಿರಿ.

VI. (a) ಪೂರಕಪಾಠಗಳು ಸಿದ್ಧತೆಯ ಪಾಠಗಳು—ಇವುಗಳ ವೈಲಕ್ಷಣ್ಯವನ್ನು ಬರೆಯುನ್ನದು.

(b) ಇಂಥಾ ಪಾಠಗಳನ್ನು ಕೊಡವುದರಲ್ಲಿ ಉಪಾಧ್ಯಾಯನು ಜ್ಞಾಪಕದಲ್ಲಿಡುವ ಅಂಶಗಳ್ಯಾವುವು.

VII. "ಶಿಕ್ಷಣದ ತತ್ವಗಳು" ಇವುಗಳಲ್ಲಿ ಮುಖ್ಯವಾದವುಗಳ್ಯಾವವು. ವಿವರಿಸಿರಿ.

VIII. (*a*) ಪಾಠಾನುಭವದಲ್ಲಿ ಟಿಪ್ಪಣಿಯನ್ನು ಬರೆಯುವುದರಿಂದ ಉಪಯೋಗವೇನು? ಹತ್ತಿಯ ಬಟ್ಟೆಯವಿಷಯವಾಗಿ ಟಿಪ್ಪಣಿಯೊಂದನ್ನು ಬರೆದು ನಿಮ್ಮ ಉತ್ತರವನ್ನು ವ್ಯಕ್ತಪಡಿಸಿರಿ.

(*b*) ನಿಮ್ಮ ಪಾಠಶಾಲೆಯಲ್ಲಿರುವ ನ್ಯೂನತೆಗಳನ್ನು ತಿಳಿಸಿ? ಸಹಾಯಕ್ಕೆ ಉಪಾಧ್ಯಾಯರು ಅವಶ್ಯಕವೆಂದು ನಿಮ್ಮ ಇನ್‌ಸ್ಪೆಕ್ಟರಿಗೆ ಒಂದು ಸರಕಾರಿ ಕಾಗದವನ್ನು ಬರೆಯಿರಿ.

ಡಿ. ವೆಂಕಟರಾಮಯ್ಯ, ಬಿ. ಎ.

ವಿರಾಟಪರ್ವದ ಟಿಪ್ಪಣಿ.

(೨) ವಿಜಯ= ವಿಶೇಷವಾಗಿ ಜಯವುಳ್ಳ

(೩) ಶ್ವೇತವಾಹನ= ಬೆಳ್ಳಗಿರುವ ಕುದುರೆಗಳೇ ವಾಹನವಾಗಿಯುಳ್ಳವನು

(೪) ಕಿರೀಟೀ= ತಲೆಯಲ್ಲಿ ಕಿರೀಟವುಳ್ಳ, ಅಂದರೆ ಇಂದ್ರನು ಇವನಿಗೆ ತಲೆಯಲ್ಲಿ ತನ್ನ ಕಿರೀಟವನ್ನು ಇಟ್ಟು ಯುದ್ಧಕ್ಕೆ ಕಳುಹಿಸಿದನ

(೫) ಬೀಭತ್ಸು= ನಿಂದಿತ ಕಾರ್ಯವನ್ನು ಮಾಡದೇ ಇರುವನು

(೬) ಸವ್ಯಸಾಚೀ= ಎಡಗೈಯಿಂದ ಬಾಣವನ್ನು ಹೂಡುವವನು

(೭) ಫಲ್ಗುನ= ಪುಬ್ಬಾ ಉತ್ತರಾ ನಕ್ಷತ್ರಗಳ ಸಂಧಿಕಾಲದಲ್ಲಿ ಹಗಲುಹುಟ್ಟಿದವನಾದುದರಿಂದ ಫಲ್ಗುನನೆಂದು ಹೇಳಲ್ಪಡುವನು

(೮) ಜಿಷ್ಣು = ಹಿಮ್ಮೆಟ್ಟದೆ ಯುದ್ಧದಲ್ಲಿ ಶತ್ರುಗಳನ್ನು ಜಯಿಸುವ ಸ್ವಭಾವವುಳ್ಳವನು.

(೯) ಪಾರ್ಥ= ಪೃಥೆಯೆಂದು ಹೆಸರುಳ್ಳ ಕುಂತಿಗೆ ಮಗನಾದುದರಿಂದ ಪಾರ್ಥನು

(೧೦) ನವರತ್ನಪ್ರಭಾಭಾಸಮಾನ= ಒಂಭತ್ತುವಿಧವಾದ ರತ್ನಗಳ ಕಾಂತಿಗಳಿಂದ ಶೋಭಿಸುವವನು.

೪೩. (೧) ಅಗಾಧ= ನೆಲೆಯಿಲ್ಲದ್ದ, ಅಗುಲು— ಕನ್ನಡ

೪೫. (೧) ಪುರೀಷ= ಕಶ್ಮಲ

(೨) ಉತ್ಸರ್ಜನ= ಬಿಡುವುದು

(೩) ರಥನೇಮಿಧ್ವನಿ= ರಥಚಕ್ರದ ಅರಗಳಧ್ವನಿ

೪೬. (೧) ದೃಷ್ಟಿಗೋಚರ= ದೃಷ್ಟಿಗೆವಿಷಯ

(೨) ಸೌಧ= ಮಹಡಿ, ಉಪ್ಪರಿಗೆ

(೩) ಉಗ್ಗಳಿಸು= ಸ್ತುತಿಸು

೪೭. (೧) ಆಕರ್ಣಾಂತವಾಗಿ= ಕಿವಿಯವರೆಗೆ ಸೆಳೆದು

(೨) ಇಂಧನ= ಕಟ್ಟಿಗೆ

೪೮. (೧) ದಿವ್ಯರತ್ನಪ್ರಭಾದೇದೀಪ್ಯಮಾನ= ಸುಂದರವಾದ ರತ್ನಗಳ ಕಾಂತಿಗಳಿಂದ ಅತ್ಯಂತವಾಗಿ ಶೋಭಿಸುತ್ತಿರುವ

(೨) ವಿಚಿತ್ರಮುಕ್ತಾವಿತಾನಶೋಭಿತ= ನಾನಾವಿಧವಾದ ಮುತ್ತುಗಳಿಗೊಂಚಲುಗಳಿಂದ ಪ್ರಕಾಶಿಸುವ

(೩) ವಂದಾರಪ್ರಸೂನಾಭಿರಾಮ= ಪಾರಿಜಾತ ಪುಷ್ಪಗಳಿಂದ ಮನೋಹರವಾದ

(೪) ದಿವ್ಯಸಿಂಹಾಸನಾಸೀನ= ಶ್ರೇಷ್ಟವಾದ ಸಿಂಹಾಸನದಲ್ಲಿ ಕೂತಿರುವ

(೫) ಏಕಾದಶರುದ್ರರು= ಉಗ್ರ, ಸೋನು, ಶರ್ವಾ, ಮೃಗವ್ಯಾಧ, ರಂಜಿತು, ಭಿಕ್ಷುಕ, ಅಹಿರ್ಬುಧ್ನ್ಯ, ಪಿನಾಕೀ, ಕಾಪಾಲಿಕೇಶ್ವರ, ಭೌಮ, ಕಪಾಲಿಕೇಯ

(೬) ದ್ವಾದಶಾದಿತ್ಯರು= ಅರ್ಯಮಾ, ಮಿತ್ರ, ಅರುಣ, ಅರ್ಕ, ಭಗು ಪೂಷ, ಇಂದ್ರ, ವಿವಸ್ವಾನ್, ಗರ್ಜನ್ಯಧಾತಾ, ವಿಷ್ಣು, ಅಂಶ, ತ್ವಾಷ್ಟ, ಎಂಬೀನಾಮಗಳು ದ್ವಾದಶಾದಿತ್ಯರದು

(೭) ವರುಣ, ವೃಷಭ, ನಹುಷ, ಜಯ, ಅನಿಲ, ವಿಷ್ಣು, ಪ್ರಭಾಸ, ಪ್ರತ್ಯೂಷ

೪೯. (೧) ಝಂಝಾವಾತ= ಮಳೆಯಿಂದಕೂಡಿದ ಬಿರುಗಾಳಿ

೫೪. (೧) ಕುಂಭಸಂಭವ= ಕಲಶದಲ್ಲಿ ಹುಟ್ಟಿದ

(೨) ಸವ್ಯಾಪಸವ್ಯ= ಎಡಬಲಗಳು

(೩) ಸ್ನಿಗ್ಧ= ಮನೋಹರವಾದ

(೪) ಗಾಂಡೀವಮುಕ್ತಗಳಾದ= ಗಾಂಡೀವಧನುಸ್ಸಿಂದ ಬಿಡಲ್ಪಟ್ಟ, ನಾರುಚ= ಬಾಣಗಳು

(೫) ಸುವರ್ಣಪುಂಖಪ್ರಭಾಭಾಸಮಾನವಾಗಿ= ಬಂಗಾರದ ಹಿಡಿಗಳ ಕಾಂತಿಯಿಂದ ಶೋಭಿಸುತ್ತಿರುವ

(೬) ವಿದಳಿತಗಳಾದ ಕೂಬರಗಳು= ಸೀಳಲ್ಪಟ್ಟ ತೇರಿನ ಮುಂಭಾಗವು (ಮುಂಕಣಿ)

———+*+———.

☞ ಸೂಚನೆ. ಮೈಸೂರು ರಾಯಲ್ ಸ್ಕೂಲ್ ಅಸಿಸ್ಟೆಂಟ್ ಟ್ಯೂಟರ್ ಪಿ. ರಾಘವೇಂದ್ರಾಯರಿಂದ ಕನ್ನಡದಲ್ಲಿ ರಚಿಸಲ್ಪಟ್ಟಿರುವ "ಪ್ರಾಣಿಶಾಸ್ತ್ರ" ವೆಂಬ ಪುಸ್ತಕವು ಈ ಸೀಮೆಯ ಕನ್ನಡ ಪಾಠಶಾಲೆಗಳಲ್ಲಿ ಬಹುಮಾನವಾಗಿ ಕೊಡುವುದಕ್ಕೆ ಉಪಯೋಗಿಸಬಹುದೆಂತ ತಿಳಿಸಲ್ಪಟ್ಟಿದೆ.

ಲೋವರ್‌ಪ್ರೈಮರಿ ಮಕ್ಕಳ A. B. ತರಗತಿಗಳಿಗೆ ಉಪಾಧ್ಯಾಯರು ಹೇಳುವುದಕ್ಕೆ ಯೋಗ್ಯವಾದ ಕಥೆಗಳು.

ಸತ್ಯವಂತರಾದ ಕಟ್ಟಿಗೆಯವರು.

ರಷ್ಯಾದೇಶದ ಒಂದು ಕಾಡಿನಲ್ಲಿ ಕಾಡು ಮರಗಳನ್ನು ಕಡಿದು ಜೀವಿಸುತ್ತಿದ್ದ ತಂದೆ ಮಕ್ಕಳಿಬ್ಬರು ಒಂದು ಗುಡಿಸಲಿನಲ್ಲಿ ವಾಸಮಾಡಿಕೊಂಡಿದ್ದರು. ಆ ಮಾರ್ಗವಾಗಿ ಜನಸಂಚಾರವೇ ಇರುತಿರಲಿಲ್ಲ. ಹೀಗಿರುವಾಗ ಐಶ್ವರ್ಯವಂತನಾದ ಸಾಹುಕಾರನೊಬ್ಬನು ರಷ್ಯಾದೇಶದ ರಾಜಧಾನಿಯಾದ ಸೆಂಟ್‌ಪೀಟರ್ಸ್‌ಬರ್ಗಿಗೆ ಆ ಗುಡಿಸಲಿನ ಮಾರ್ಗವಾಗಿಯೇ ಹೋಗಬೇಕಾಗಿ ಬಂತು. ಆ ಗುಡಿಸಲಹತ್ತರ ಹೋಗುತಿರುವಾಗಲೇ ಕತ್ತಲೆಯಾದುದರಿಂದ ಗುಡಿಸಲಿನಲ್ಲಿದ್ದವರು ಇವನನ್ನು ನೋಡಿ ಆ ರಾತ್ರಿ ಅವರೊಡನೆ ಅಲ್ಲಿಯೇ ಕಳಿಯಬೇಕೆಂದು ಬಹಳವಾಗಿ ಬೇಡಿಕೊಂಡರು. ಸಾಹುಕಾರನು ಅವರ ಪ್ರಾರ್ಥನೆಯನ್ನು ಮನಃಪೂರ್ವಕವಾಗಿ ಅಂಗೀಕರಿಸಿದನು. ಬೆಳಿಗ್ಗೆ ಎದ್ದು ಪ್ರಯಾಣಕ್ಕೆ ಸಿದ್ಧವಾಗಲು, ಇವರುಗಳು ಆ ರಾತ್ರಿ ತನಗೆಮಾಡಿದ ಉಪಚಾರಕ್ಕಾಗಿ ಪ್ರತ್ಯುಪಕಾರವನ್ನು ಮಾಡಬೇಕೆಂದು ಇದ್ದ ಸಾಹುಕಾರನನ್ನು ನೋಡಿ, ಕಟ್ಟಿಗೆಯನ್ನು ಮಾರಿ ಜೀವಿಸುತ್ತಿದ್ದ ಆ ಬಡವರು ಪ್ರತ್ಯುಪಕಾರವನ್ನು ಸ್ವೀಕರಿಸದೆ, 'ಈ ಅರಣ್ಯದಲ್ಲಿ ಮನುಷ್ಯಮುಖವೇ ಅಪರೂಪವಾದ ನಮ್ಮಗಳಿಗೆ ನಿಮ್ಮ ದರ್ಶನವೇಭಾಗ್ಯ. ನೀವು ನಮ್ಮೊಡನೆ ಒಂದು ರಾತ್ರಿ ಕಳೆದುದುಕ್ಕಾಗಿ ನಾವೇ ನಿಮ್ಮನ್ನು ಪೂಜಿಸಬೇಕು' ಎಂದರು. ಅದಕ್ಕಾಸಾಹುಕಾರನು ಅವರುಗಳನ್ನು ವಂದಿಸಿ, ಅವರ ಉಪಚಾರವನ್ನು ನಿಷ್ಕಾಪಟ್ಯವೆನ್ನೂ ನೋಡಿ ಸಂತೋಷಪಡುತ್ತಾ ಹೊರಟುಹೋದನು. ಆ ದಿನ ಪ್ರಯಾಣಾನಂತರ ಸಾಯುಂಕಾಲ ತನ್ನ ಹಣದ ಗಂಟನ್ನು ನೋಡಿಕೊಂಡನು. ಅದೇ ಇರಲಿಲ್ಲ! "ಅಯ್ಯೋ! ನಿಷ್ಕಪಟಿಗಳಾಗಿಯೂ, ಸಜ್ಜನರಾಗಿಯೂ,

ಇರುವರೆಂದು ಭಾವಿಸಿದ್ದ ಕಟ್ಟಿಗೆಯವರು ಅಂಥಾವರಾಗಿ ತೋರುವುದಿಲ್ಲವಲ್ಲ.'' ಎಂದು ಕೊಂಡನು.

ಹೀಗೆಯೇ ಕೆಲವುಕಾಲ ಕಳೆದವು. ಬಹುವರ್ಷಗಳಾದಮೇಲೆ ಅದೇಮಾರ್ಗವಾಗಿ ಪ್ರಯಾಣಮಾಡಿ ಬಂದ ಆ ಸಾಹುಕಾರನೇ ಅದೇ ಗುಡಿಸಲಿನಲ್ಲಿಯೇ ಇಳಿದನು. ಈ ಕಟ್ಟಿಗೆಯವನು ಅವನ ಮಗ ಇವರೇ ಅಲ್ಲಿ ಇದ್ದವರು. ಆದರೆ ಅವರುಗಳಿಗೆ ಇವನೇ ಆ ಸಾಹುಕಾರನೆಂದು ಹೋದ ಗಂಟನವಿಷಯವಾಗಿ ಅವನೇ ಹೇಳುವವರೆಗೂ ಗೊತ್ತಾಗಲಿಲ್ಲ. 'ಆಃ! ಹಾಗಾದರೆ ನೀವೇಯೆ ಬಹು ದಿವಸಗಳಿಗೆ ಮುಂಚೆ ನಮ್ಮಲ್ಲಿ ಇಳಿದು ಇದ್ದವರು? ನಮ್ಮೊಡನೆ ಬನ್ನಿ. ನಿಮ್ಮ ಹಣದ ಗಂಟು ಇರುವ ಸ್ಥಳವನ್ನು ತೋರಿಸುವೆವು. ನನ್ನ ಮಗ ನಿಮ್ಮ ಹಣದ ಗಂಟು ಈ ಗುಡಿಸಲಿಗೆ ಸ್ವಲ್ಪ ದೂರದಲ್ಲಿ ಬಿದ್ದಿದ್ದನ್ನು ನೋಡಿದನು. ಆದರೆ ನಮ್ಮಿಬ್ಬರಲ್ಲಿ ಯಾರಿಗೂ ಆ ಗಂಟನ್ನು ಮುಟ್ಟುವುದಕ್ಕೆ ಮನಸ್ಸು ಬರಲಿಲ್ಲ. ಅದುದರಿಂದ ಅಲ್ಲಿಯೇ ಹೂಳಿಬಿಟ್ಟೆವು. ಇನ್ನೂ ಆ ಸ್ಥಳದಲ್ಲಿಯೇ ಇರುವುದು.' ಎಂದು ಹೇಳಿ, ಅವನನ್ನು ಅಲ್ಲಿಗೆ ಕರೆದುಕೊಂಡುಹೋಗಿ, ನೋಡಲು ಒಂದು ಕಾಸುಸಹಿತವಾಗಿ ಅಲುಗದೇ ಇದ್ದ ಆ ಗಂಟು ಸಿಕ್ಕಿತು. ಅನ್ಯಾಯವಾಗಿ ನಿರಪರಾಧಿಗಳನ್ನು ಅಪರಾಧಿಗಳು, ಮೋಸಗಾರರು ಎಂದು ತಿಳಿದಿದ್ದ ಸಾಹುಕಾರನ ಮನಸ್ಸು ಬಹು ಖಿನ್ನವಾಯಿತು. ಇವರೇ ಸತ್ಯವಂತರು. ಸಾಹುಕಾರನು ಇವರನ್ನು ಬಹಳವಾಗಿ ಕೊಂಡಾಡಿದನು. ಅವರು ಸತ್ಯವಂತರಾದುದರಿಂದ ಇವರನ್ನು ಎಲ್ಲರೂ ಈಗಲೂ ಕೊಂಡಾಡುತ್ತಾರೆ. ಅದಕಾರಣ ನೀವೆಲ್ಲರೂ ಸತ್ಯವಂತರಾಗಿರುವುದಕ್ಕೆ ಪ್ರಯತ್ನಮಾಡಬೇಕು. ಇದರಿಂದ ಕೀರ್ತಿಯುಂಟಾಗುವುದು.

N. B. ಉಪಾಧ್ಯಾಯನು ಬಾಲಕರಿಗೆ ಕಥೆಯನ್ನು ಹೇಳಿದಮೇಲೆ ಈ ವಿಷಯವಾದ ಪ್ರಶ್ನೆಗಳನ್ನು ಕೇಳುವುದು.

ಕಟ್ಟಿಗೆಯವನೆಲ್ಲಿದ್ದರು? ಅದು ಎಂಥಾದ್ದು? ಅಲ್ಲಿಗೆ ಯಾರು ಬಂದರು? ಅವನನ್ನು ಕಟ್ಟಿಗೆಯವರು ಹ್ಯಾಗೆ ಕಂಡರು? ಆ ಗುಡಿಸಲನ್ನು ಬಿಟ್ಟು ಹೋದಮೇಲೆ ಅವನು ಏನನ್ನು ನೋಡಿಕೊಂಡನು? ಯಾರು ತೆಗೆದುಕೊಂಡಿರಬಹುದೆಂದು ಯೋಚಿಸಿದನು? ಆಮೇಲೆ ಆ ಗಂಟು ಹ್ಯಾಗೆ ಗೊತ್ತಾಯಿತು? ಈ ಕಥೆಯಿಂದ ನಾವು ಏನು ತಿಳಿದುಕೊಳ್ಳಬಹುದು? ಯಾತರಿಂದ ನಮಗೆ ಕೀರ್ತಿ ಬರುವುದು?

ವಿದ್ಯಾದಾಯಿನಿ.

ಭಾಗ. ೨] ಅಕ್ಟೋಬರ್ ೧೯೨೪. [ಸಂಚಿಕೆ. ೪೦

II. ಕಿಂಡರ್‌ಗಾರ್ಟ್ನ್.

ಫ್ರೋಬೆಲ್ (Frœbel) ಎಂಬುವನು ಕಿಂಡರ್‌ಗಾರ್ಟ್ನ್ (Kindergarten) ಪಾಠಕ್ರಮವನ್ನು ಸ್ಥಾಪಿಸಿದನೆಂದು ತಿಳಿಸಿರುತ್ತೇವೆ. ಆದರೆ ಕಳೆದ ಮೂವತ್ತು ವರುಷಗಳಿಂದೀಚಿಗೆಮಾತ್ರ, ಇಂಗ್ಲೆಂಡ್, ಇತರ ಯೂರೋಪ್ ದೇಶಗಳಲ್ಲಿಯೂ ಅಮೆರಿಕಾಖಂಡದಲ್ಲಿಯೂ ಶಿಕ್ಷಕರು ಕಿಂಡರ್‌ಗಾರ್ಟ್ನ್ ಅಳವಡಿಸುವದಕ್ಕೆ ಪ್ರಾರಂಭಿಸಿರುತ್ತಾರೆ.

ಹೀಗೆ ಬೋಧಿಸುತ್ತಿದ್ದರೂ ಕಿಂಡರ್‌ಗಾರ್ಟ್ನ್ ಉದ್ದೇಶವನ್ನೂ ಅದರ ತತ್ವವನ್ನೂ ತಿಳಿದಿರುವ ಶಿಕ್ಷಕರು ಬಹಳ ಕಡಮೆ. ಕಿಂಡರ್‌ಗಾರ್ಟ್ನ್ ಬೋಧಿಸುವ ಪಾಠಶಾಲೆಗಳಲ್ಲಿ ಎರಡು ವರುಷದಿಂದ ಏಳು ವರುಷ ವಯಸ್ಸಿನ ಬಾಲಕರಿಗೆ ಪುಸ್ತಕಗಳನ್ನೋದಿಸುವ ಪದಾರ್ಥಜ್ಞಾನವನ್ನು ವಸ್ತುಗಳಮೂಲಕದಿಂದಲೆ ಉಂಟುಮಾಡತಕ್ಕದ್ದು. ಇಂದ್ರಿಯಶಕ್ತಿಗಳ ಅಭಿವೃದ್ಧಿಯೇ ಕಿಂಡರ್‌ಗಾರ್ಟ್ನ್ ಪಾಠಕ್ರಮದ ಮುಖ್ಯ ಉದ್ದೇಶವು. ಈ ಉದ್ದೇಶವು ಹೇಗೆ ನೆರವೇರುವುದೆಂಬುವುದನ್ನು ನಿರ್ಧರಿಸಬೇಕಾದಲ್ಲಿ ಫ್ರೋಬೆಲ್ಲನೆಂಬುವನು ಯಾವ ಆಧಾರವನ್ನಿಟ್ಟುಕೊಂಡು ತನ್ನ ಪದ್ಧತಿಯನ್ನು ಸ್ಥಾಪಿಸಿದನೋ ಅವನ್ನು ವಿಚಾರಿಸೋಣ.

ಬಾಲ್ಯಸ್ವಭಾವಕ್ಕೆ ಲಕ್ಷಣವು ಯಾವುದೆಂದು ಕೇಳಿದಲ್ಲಿ ನಿಸ್ಸಂದೇಹವಾಗಿ 'ತಪ' ವೆಂದು ಹೇಳಬಹುದು. ಆಟವಾಡದಿರುವ ಮಗುವು ಅದು ಮಗುವೇ ಅಲ್ಲವು. ಆರೋಗ್ಯಸ್ಥಿತಿಯುಳ್ಳವು ಪ್ರತಿ ಒಂದು ಶಿಶುವು ಬಹಳ ಚಟುವಟಿಕೆಯುಳ್ಳದಾಗಿರುವುದೆಂಬುವದು ತಂದೆತಾಯಿಗಳೆಲ್ಲರಿಗೂ ಗೊತ್ತೇ ಇರುವದು. ನಿರ್ಲಕ್ಷ್ಯವಾಗಿ ನೋಡಿದಲ್ಲಿ ಈ ಚಟುವಟಿಕೆಯು ಉದ್ದೇಶರಹಿತವೆಂದು ಅನೇಕರು ತಿಳಿಯುವರು.

ಆದರೆ ವಿಮರ್ಶಿಸಿದಲ್ಲಿ ಚಟುವಟಿಕೆಯು, ಶಾರೀರಕ, ಮಾನಸಿಕ ಲಾಭವುಳ್ಳದ್ದು ಅವಶ್ಯಕವಾದುದೆಂದು ವೇದ್ಯವಾಗುವದು. ಸಸ್ಯಾದಿಗಳ ಮತ್ತು ಜೀವಜಂತುಗಳ ಅಭಿ

ವೃದ್ಧಿಯೂ "ಚಟುವಟಿಕೆಯೇ ಅಭಿವೃದ್ಧಿಗೆ ಕಾರಣ" ವೆಂಬ ನಿಯಮವನ್ನೇ ಅನುಸರಿಸಿರುವುದು. ಸಸಿಗಳ ನಾಳಗಳಲ್ಲಿ ಅವುಗಳ ಪೋಷಣೆಗೆ ಅವಶ್ಯಕವಾದ ರಸವು ಚಲಿಸುವುದು. ಪ್ರಾಣಿಗಳ ಶರೀರದಲ್ಲಿ ರಕ್ತವು ಚಲಿಸುವುದು.

ಮನಶ್ಶಕ್ತಿಗಳೂ ಈ ನಿಯಮವನ್ನೇ ಅನುಸರಿಸಿರುವುವು. ಯಾವಮನೋವ್ಯಾಪಾರವೂ ಮೆದುಳಿನಲ್ಲಿ ಚಲನೆಯುಂಟಾಗದಿದ್ದಲ್ಲಿ ನಡಿಯುವುದೇ ಇಲ್ಲವು. ಆದಕಾರಣ ನಿರಾತಂಕವಾದ ಚಟುವಟಿಕೆಯು ಮಕ್ಕಳ ಅಭಿವೃದ್ಧಿಗೆ ಅತ್ಯಂತ ಅವಶ್ಯಕವಾದದ್ದು. ಈ ಕಾರಣದಿಂದಲೇ ಮಕ್ಕಳ ಆಟವನ್ನು ವೃದ್ಧಿಪಡಿಸಬೇಕೆಂಬುವುದು. ಕಿಂಡರಗಾರ್ಟನ್ ಬೋಧನೆಯ ಪ್ರಾಮುಖ್ಯವೂ ಇದರಿಂದಲೇ.

ಮಕ್ಕಳ ಆಟದ ತತ್ವವನ್ನು ಫ್ರೋಬೆಲ್ಲನು ತಿಳಿದುಕೊಂಡದ್ದಲ್ಲದೆ ಈ ಆಟದಲ್ಲಿ ಜನಗಳ ಅಭಿವೃದ್ಧಿಯನ್ನು, ನಾಗರಿಕತೆಯನ್ನು ಸೂಚಿಸುವ ಸ್ವಾಭಾವಿಕಚಿನ್ಹೆಗಳು ವ್ಯಕ್ತವಾಗುವವೆಂದು ಬೋಧಿಸಿದನು. ಅಂದರೆ ಹುಟ್ಟುತಾ ಮನುಷ್ಯನಲ್ಲಿ ಅಬೋಧಕವಾದ ಜ್ಞಾನವಿರುವುದೆಂತಲೂ, ಈ ಜ್ಞಾನವೇ ಮುಂದಣ ಅಭಿವೃದ್ಧಿಗೂ ನಾಗರಿಕತೆಗೂ ಕಾರಣವೆಂತಲೂ ತಾತ್ಪರ್ಯವು. ಹೇಗೆಂದರೆ ಪಕ್ಷಿಗಳು ತಮ್ಮ ಮೂತಿಗಳನ್ನು ಕಟ್ಟುವ ಶಕ್ತಿಯನ್ನು ಸ್ವಭಾವಸಿದ್ಧವಾಗಿ ಹೊಂದಿರುವುವು. ನೆಯೇ ಈ ಶಕ್ತಿಯು ವ್ಯತ್ಯಾಸವನ್ನು ಹೊಂದದೇ ಕೊನೆವರೆಗೂ ಏಕರೀತಿಯಾಗಿರುವುದು. ಮನುಷ್ಯನಲ್ಲಾದರೋ ಈ ನೈಸರ್ಗಿಕಜ್ಞಾನವು ವಿದ್ಯಾಭ್ಯಾಸದಿಂದ ವ್ಯತ್ಯಾಸವನ್ನು ಹೊಂದುವುದು. ಮನುಷ್ಯನಿಗೂ ಇತರ ಜೀವಜಂತುಗಳಿಗೂ ಇದೇ ವ್ಯತ್ಯಾಸವು.

ಭೂಮಿಯಲ್ಲಿ ನಟ್ಟಂಥಾ ಬೀಜವು ಭೂಮಿಯೊಳಗಿನ ಕತ್ತಲನ್ನು ತಪ್ಪಿಸಿಕೊಂಡು ಸೂರ್ಯನಬೆಳಕಿಗೆ ಬರುವುದಕ್ಕೆ ಹೇಗೆ ಕಷ್ಟಪಡುತ್ತಿದೆಯೋ ಅದೇರೀತಿಯಾಗಿ ಶಾಲ್ಯಾವಸ್ಥೆಗೆ ಸ್ವಾಭಾವಿಕವಾದ ಚಟುವಟಿಕೆಯನ್ನು ಬಿಟ್ಟು ಶಿಶುವು ಕ್ರಮವಾಗಿ ಅಭಿವೃದ್ಧಿಯನ್ನು ಹೊಂದುವುದು. ಸಸ್ಯಾದಿಗಳ ಭ್ರೂಣವು ಪಕ್ವವಾಗಿ ಅಂಕುರಿಸಿ, ತಿಳಿದು ಪುಷ್ಪಫಲುಗಳನ್ನು ಬಿಡಬೇಕಾದಲ್ಲಿ ಎಷ್ಟೆಬಿಡದೆ ಪೋಷಣೆಯು ಹೇಗೆ ಅವಶ್ಯವೋ ಅದೇರೀತಿಯಾಗಿ ಮಕ್ಕಳು ದೊಡ್ಡವರಾಗಿ ಅಭಿವೃದ್ಧಿಯನ್ನು ಹೊಂದಿ ತಮ್ಮ ಶಕ್ತಿಗಳೆಲ್ಲವನ್ನೂ ಸಂಪೂರ್ಣತೆಯಿಂದುಪಯೋಗಿಸಿಕೊಳ್ಳಬೇಕಾದರೆ ಕ್ರಮವಾದ ವಿದ್ಯಾಪೋಷಣೆಯು ಅವಶ್ಯಕವಾಗಿರುವುದು.

ಆವಶ್ಯಕತೆಯಿಂದ ಕಿಂಡರಗಾರ್ಟನ್ (ಮಕ್ಕಳತೋಟ) (Kindergarten = child's garden) ಎಂಬುದರ ಅರ್ಥವು ವಿಶದವಾದಂತಾಯಿತು.

ಬೇರೆ ಬೇರೆ ದೇಶದ ಜನಗಳು ಒಬ್ಬರನ್ನೊಬ್ಬರು ನಾಗರಿಕತೆಯಲ್ಲಿ ಮೀರಿಸಿದ್ದರೂ, ನೈಸರ್ಗಿಕಜ್ಞಾನವು ಎಲ್ಲರಿಗೂ ಸಾಮಾನ್ಯವಾಗಿರುವುದು. ಆದಕಾರಣ ಶಿಕ್ಷಕರು ಬಾಲಕರ ನೈಸರ್ಗಿಕಜ್ಞಾನವನ್ನು ಚೆನ್ನಾಗಿ ಪರೀಕ್ಷಿಸಬೇಕು.

ಬಾಲ್ಯಸ್ವಭಾವವನ್ನು ತಿಳಿಯದವನು ಹೇಗೆತಾನೆ ಸತ್ಪಿಕ್ಷಕನಾದಾನು? ಎಂದಿಗೂ ಆಗಲಾರನು. ಬಾಲಕರ ಸಹಜಜ್ಞಾನವನ್ನು ಅವರ ಆಟಗಳಲ್ಲಿಯೇ ಗೊತ್ತುಮಾಡಬಹುದು.

ಡಿ. ವೆಂಕಟರಾಮ್ಮಯ್ಯ, ಬಿ. ಎ.

ಉಕ್ಕಿನ ಪೇನ.

(ಸ್ಟೀಲ್ ಮುಳ್ಳು.)

ಉಕ್ಕಿನ ಪೇನಗಳನ್ನು ಕಂಡು ಹಿಡಿಯುವುದಕ್ಕೆಮುಂಚೆ ಜನರು ಕಂಚಗಳನ್ನೂ, ಲಾಳದ ಕಡ್ಡಿಗಳನ್ನೂ, ಬಾತಿನ ಗರಿಗಳನ್ನೂ ಲೆಕ್ಕಣಿಕೆಯಾಗಿ ಉಪಯೋಗಿಸುತ್ತಿದ್ದರು. ಹಿಂದುಸ್ಥಾನದಲ್ಲಿ ಉಕ್ಕಿನ ಪೇನಗಳನ್ನು ವಿಶೇಷವಾಗಿ ಉಪಯೋಗಿಸುತ್ತಿರುವರಾದಾಗ್ಯೂ, ಅನೇಕ ಸ್ಥಳಗಳಲ್ಲಿ ಕಂಚ, ಲಾಳದ ಕಡ್ಡಿ, ಗರಿಮುಂತಾದವು ಈಗಲೂ ಆಚರಣೆಯಲ್ಲಿವೆ. ಹೋದಶತಮಾನದಲ್ಲಿ ಇಂಗ್ಲೆಂಡ್ ದೇಶದಲ್ಲಿ ಕೆಂಪು ಅಥವ ವಜ್ರದಮೂತಿಗಳುಳ್ಳ ಲೋಹದ ಪೇನಗಳನ್ನು ಉಪಯೋಗಿಸುತ್ತಿದ್ದರೆಂತಲೂ, ಆದರೆ ಇವನ್ನುಮಾಡುವುದು ಬಹಳ ಶ್ರಮವಾದುದರಿಂದಲೂ, ಇವುಗಳ ಬೆಲೆಯು ಅಧಿಕವಾದುದರಿಂದಲೂ ಇವನ್ನು ಬಿಟ್ಟ ಬಿಟ್ಟರೆಂದು ತಿಳಿದುಬರುತ್ತದೆ. ಗರಿಗಳನ್ನು ಈಗಿನ ಪೇನಗಳಂತೆ ಕತ್ತರಿಸಿ, ಉಪಯೋಗಿಸುತ್ತಿದ್ದರೆಂದು ಗೊತ್ತಾಗುತ್ತದೆ. ಪ್ರಾಯೇಣ ಈವಿಧವಾದ ಪೇನಗಳು ಈಗಲೂ ವಾಡಿಕೆಯುಲ್ಲಿವೆ. ಆದರೆ ಸರ್ವವಿಷಯಗಳಲ್ಲಿಯೂ ಸುಲಭಸಾಧ್ಯವಾಗಿರುವ ಉಕ್ಕಿನ ಪೇನಗಳು ಇತರ ಪೇನಗಳನ್ನು ಎಲ್ಲೆಲ್ಲಿಯೂ ಹಿಂದುಮಾಡುತ್ತಾ ಬಂದಿವೆ. ಉಕ್ಕಿನ ಪೇನವು ಇಂಥವನಿಂದ ಕಂಡು ಹಿಡಿಯಲ್ಪಟ್ಟಿತೆಂದು ಖಂಡಿತವಾಗಿ ಹೇಳುವುದಕ್ಕಾಗುವುದಿಲ್ಲ. ಆದರೆ ಸರ್‌ಜೋಸಯ ಮೇಸ್ಟ್ ಎಂಬವರು ಇದರ ಕಾರ್ಖಾನೆಯನ್ನು ಮೊದಲು ಸ್ಥಾಪಿಸಿ ಈ ಪೇನಗಳ ಅನುಕೂಲತೆಯನ್ನು ಪ್ರಚುರಪಡಿಸಿದವೆಂದು ಹೇಳಬಹುದು. ಸುಮಾರು ಐವತ್ತುವರ್ಷಗಳಿಂದ ಉಕ್ಕಿನ ಪೇನಗಳ ಪ್ರಾಬಲ್ಯವು ವಿಶೇಷವಾಗಿ ಹೆಚ್ಚುತ್ತಾ ಬಂದಿದೆ.

ಅಮೆರಿಕಾಖಂಡದ ಯುನೈಟೆಡ್ ಸ್ಟೇಟ್ಸ್‌ನಲ್ಲಿಯೂ, ಯೂರೊಪ್‌ಖಂಡದ ಫ್ರಾನ್ಸ್, ಜರ್ಮನಿ ದೇಶಗಳಲ್ಲಿಯೂ, ಉಕ್ಕಿನ ಪೇನವು ವಿಶೇಷವಾಗಿ ತಯಾರಾಗುವುದಾದರೂ, ಇಂಗ್ಲೆಂಡ್‌ದೇಶದಲ್ಲಿನ ಬರ್ಮಿಂಗ್‌ಹ್ಯಾಂ ಪಟ್ಟಣವು ಉಕ್ಕಿನ ಪೇನಗಳಿಗೆ ತವರುಮನೆಯಾಗಿರುವುದು. ಇಲ್ಲಿ ತಯಾರಾಗುವಷ್ಟು ಮತ್ತೆಲ್ಲಿಯೂ ಆಗುವುದಿಲ್ಲ. ನಮ್ಮ ದೇಶದಲ್ಲಿ ಉಪಯೋಗಿಸುವ ಪೇನಗಳೆಲ್ಲ ಈ ಪಟ್ಟಣದಲ್ಲಿಯೇ ತಯಾರಾದವೆಂದು ಹೇಳಬಹುದು.

ಉಕ್ಕಿನ ಸೇನವನ್ನು ಉಕ್ಕಿನಿಂದ ಮಾಡುತ್ತಾರೆಂಬುದಕ್ಕೆ ಅದರ ಹೆಸರೇ ಸಾಕಾದ ದೃಷ್ಟಾಂತವಾಗಿದೆ. ಸ್ವೀಡ್‌ದೇಶದ ಕಬ್ಬಿಣದಲ್ಲಿ ಅಂಗಗಳು ಬಹುಸಾಂದ್ರವಾಗಿಯೂ ಬಲವಾಗಿಯೂ ಇರುವದರಿಂದ ಅಲ್ಲಿನ ಕಬ್ಬಿಣದಿಂದ ಆದ ಉಕ್ಕನ್ನು ಈ ಕೆಲಸಕ್ಕೆ ಉಪಯೋಗಿಸುವರು ಇಂಥಾ ಉಕ್ಕನ್ನ ಉರುಳಿಗಳಲ್ಲಿ ಲಂಬಕ ತಗಡುಗಳಾಗಿ ಮಾಡಿ ಇವುಗಳನ್ನು ಹದಿನೆಂಟು ಅಂಗುಲಗಳ ಅಗಲ, ನಾಲ್ಕೂವರೆ ಅಡಿಗಳ ಉದ್ದವಿರುವ ತುಂಡುಗಳಾಗಿ ಕತ್ತರಿಸುತ್ತಾರೆ. ಈ ತಗಡಿನ ತುಂಡುಗಳನ್ನು ಲೋಹದ ಪೆಟ್ಟಿಗೆಗಳಲ್ಲಿ ತುಂಬಿ, ಬೆಳ್ಳಿಗೆ ಕಾಣಿಸುವನೆಗೂ ಕುಲುಮೆಯಲ್ಲಿ ಕಾಯಿಸುವರು. ಇದರಿಂದ ಉಕ್ಕಿನ ಸೇನ ಮಾಡಲ್ಪದಕ್ಕೆ ತಕ್ಕ ಕಾದ ಬರುವದು. ಹೀಗೆ ಹನ್ನೆರಡು ಘಂಟೆಗಳು ಕಾದಬಳಿಕ, ಅವುಗಳನ್ನು ಆರಿಸಿ, ಲೋಹದ ಪುಡಿಯಿಂದ ತುಂಬಿದ, ತಿರುಗುತ್ತಿರುವ ಬಾನೆಗಳಲ್ಲಿ ತುಂಬುವರು. ಹೀಗೆ ಮಾಡುವುದರಿಂದ ಉಕ್ಕಿನ ತಗಡುಗಳಮೇಲಣ ಪದರಗಳು ಮತ್ತು ಒರಟಾದ ಏಣುಗಳು ಹೋಗಲಾಡಿಸಲ್ಪಡುವವು ತರುವಾಯ ಈ ಪಟ್ಟಿಗಳನ್ನು ಗಂಧಕ ದ್ರಾವಕವಿರುವ ಪಾತ್ರೆಗಳಲ್ಲಿ ಹಾಕುವರು. ಇದರಿಂದ ಪಟ್ಟಿಗಳಿಗೆ ನುಣುಪುಂಟಾಗುವುದು. ಈಗ ಈ ಪಟ್ಟಿಗಳನ್ನು ಒಂದೊಂದಾಗಿ ಉಕ್ಕಿನ ಉರುಳಿಗಳ ನಡುವೆ ದಾಟಿಸುವುದು. ಇಮ್ಮಟ್ಟಹೊತ್ತಿಗೆ ಪಟ್ಟಿಯು ಏಂದು ಅಂಗುಲದಲ್ಲಿ ನೂರು ಅರವತ್ತನೆಯ ಭಾಗದಷ್ಟು ದಪ್ಪವಾಗುವದು; ಉದ್ದವು ಹದಿನೆಂಟು ಅಂಗುಲಗಳಿಂದ ನಾಲ್ಕೂವರೆ ಅಡಿಯಷ್ಟಾಗಿರುವುದು. ಈ ಸ್ಥಿತಿಯಲ್ಲಿ ಸ್ವೀಡ ತಗಡು ಉಕ್ಕಿನ ಸೇನಗಳಿಗೆ ಸಾಕಾದಷ್ಟು ದಪ್ಪವಿರುವುದಲ್ಲದೆ, ತಕ್ಕಷ್ಟು ಹದವಾಗಿರುವುದು. ಇಂಥಾ ಪಟ್ಟಿಗಳನ್ನು ಕೆಲವು ಅಚ್ಚುಗಳಲ್ಲಿತಳಿಸಿ, ಅಚ್ಚಿನ ಹಿಡಿಯನ್ನು ಅವುಕುತ್ತಾ ಬರುವರು. ಇವರಿಂದ ಎರಡು ಸೇನಗಳಿಗೆ ಸಾಕಾದಷ್ಟು ತಗಡಿನ ತುಂಡುಗಳು ಸೇನದ ಆಕಾರವಾಗಿ ಕತ್ತರಿಸಿ ಬೀಳುವುವು. ಈ ಕೆಲಸವು ಸಾಮಾನ್ಯವಾಗಿ ಹೆಂಗಸರಿಂದ ಮಾಡಲ್ಪಡುವುದು. ಚೆನ್ನಾಗಿ ಕೆಲಸವನ್ನು ಕಲಿತ ಹೆಂಗಸು ದಿನವೊಂದಕ್ಕೆ ೨೮೮೦ ಸೇನಗಳನ್ನು ತಗಡುಗಳಿಂದ ಕತ್ತರಿಸಬಲ್ಲಳು. ಹೀಗಾದ ನಂತರ ಈ ತುಂಡುಗಳನ್ನು ಒಂದೊಂದಾಗಿ ಮತ್ತೊಂದು ಅಚ್ಚಿನಲ್ಲಿ ಒತ್ತುವರು. ಇಲ್ಲಿ ಪಕ್ಕದ ಸೀಳುಗಳೂ ಮಧ್ಯದವೂ ಆಗುವುವು ಇವರಿಂದ ಸೇನದ ಬಳುಕು ವಿಕೆಯು ಹೆಚ್ಚಾಗುವುದು. ಈ ತುಂಡುಗಳನ್ನು ಮತ್ತೆ ಮೂಸಿಗಳಲ್ಲಿ ತಂಬಿ ಕುಲುಮೆಯಲ್ಲಿ ಪುಟಕ್ಕೆ ಹಾಕುವರು. ಹೀಗೆ ಕಾಯಿಸುವದರಿಂದ ಸೇನಗಳಿಗೆ ಸ್ಥಿತಿಸ್ಥಾಪಕತ್ವವೂ ಹೆಚ್ಚುವುದಲ್ಲದೆ ಅವು ಮೃದುವಾಗುವವು. ಹೊಲಗೆ ಯಂತ್ರಗಳಂತಿರುವ ಕೆಲವು ಅಚ್ಚುಗಳಲ್ಲಿ ಈ ತುಂಡುಗಳನ್ನು ಒಂದೊಂದಾಗಿ ಅವುಕುವರು. ಈ ಅಚ್ಚಿನಲ್ಲಿ ಒತ್ತುವದರಿಂದ ಉಕ್ಕಿನ ಸೇನಗಳಮೇಲಣ ಅಕ್ಷರಗಳೂ ಚಿತ್ರಗಳೂ ಆಗುವವು. ಇದುವರೆಗೆ ಸೇನವು ಚಪ್ಪಟೆಯಾಗಿರುವುದು. ಇವುಗಳನ್ನು ಬಾಗಿಸುವುದಕ್ಕೋಸ್ಕರ ಮತ್ತೊಂದು ಅಚ್ಚಿನೊಳಗೆ ನೂಕಿಸುವರು. ಕೆಲವು ಹಲವಾಗಿಯೂ ಸೀಳಿ ಉಳಿದ

ಗಿಯೂ ಇರುವ ಈ ಅಚ್ಚಿನ ಮೂತಿಗಳ ನಡುವೆ ತುಂಡುಗಳು ಅವ್ಯಕಲ್ಪಡುವುದ ರಿಂದ ಇವು ಉಂಟಾಗುವವು. ಮೂರನೆಯ ಅವೃತ್ತಿ ಈ ಸೇನಗಳನ್ನು ಮೊಸಿಗಳಲ್ಲಿ ತುಂಬಿ, ಕುಲುಮೆಯಲ್ಲಿ ಕಾಯಿಸುವರು. ಬೆಳ್ಳಗೆ ಕಾಣಿಸುವಷ್ಟು ಕಾದಮೇಲೆ ಇವು ಗಳನ್ನು ಹೊರಕ್ಕೆ ತೆಗೆದು, ಎಣ್ಣೆಯ ಕಡಾಯಿಯಲ್ಲಿ ಅದ್ದುವರು. ಇದರಿಂದ ಉಕ್ಕು ಕೈಯಲ್ಲಿ ಅವಕಿದರೆ ಪ್ರತಿಯಾಗುವಂತಾಗುವುದು. ಅನಂತರ ಇವನ್ನು ತವರದ ಬಾನೆಯಲ್ಲಿ ತುಂಬಿ ಮೇಲಣ ಜಿಡ್ಡನ್ನು ಹೋಗಲಾಡಿಸಿ ಹದವನ್ನು ಕೊಡುವರು. ಹದ ಕೊಡುವುದಕ್ಕೆ ಮೇಲುಗಡೆ ತೆರೆದಿರುವ ಮತ್ತು ಬಾಣಲೆಯಂತಿರುವ ಒಂದು ಪಾತ್ರೆ ಯಲ್ಲಿ ಇವನ್ನು ಹಾಕಿ ಕಾಯಿಸುವರು. ಕ್ರಮೇಣ ಸೇನಗಳು ನೀಲವರ್ಣವನ್ನು ಹೊಂದುವವು. ಸೇನವು ಹದವಾಗುವುದಕ್ಕೆ ಇದೇ ಗುರ್ತಾದುದರಿಂದ, ಹೀಗಾ ಗುತ್ತಲೆ ಅವನ್ನು ಬಾಣಲೆಯಿಂದ ತೆಗೆದುಬಿಡುವರು.

ಅನಂತರ ಮರಳು, ಕುರಂಜಿಕಲ್ಲಿನ ಪುಡಿ ಮುಂತಾದವುಗಳಿಂದ ತುಂಬಿದ ಬಾನೆಗಳಲ್ಲಿ ಈ ಸೇನಗಳನ್ನು ಹಾಕಿ, ಬಾನೆಗಳನ್ನು ತಿರುಗಿಸುವುರು. ಹೀಗೆ ತಿರುಗು ವುದರಿಂದ, ಸೇನಗಳು ಜೆನ್ನಾಗಿ ಉಜ್ಜಿ ಕೊಂಡು ಶುಭ್ರವಾಗುವುವು. ಈ ಸೇನಗಳನ್ನು ಒಂದೊಂದಾಗಿ ತೆಗೆದುಕೊಂಡು ಸಾಣೆಗೆ ಹಿಡಿಯುವರು. ಕೆಲವುಭಾಗದಲ್ಲಿಮಾತ್ರ ಸಾಣೆ ಹಿಡಿಯುವುದರಿಂದ ಸೇನವು ಅಲ್ಲಿ ತೆಳುವಾಗುವುದು. ಇದರಿಂದ ಇದರ ಬಳು ಕುವಿಕೆಯು ಹೆಚ್ಚಾಗುತ್ತದೆ. ಈಗ ಸೇನವು ಮಧ್ಯದ ಸೀಳನ್ನು ಹೊಂದುವುದಕ್ಕೆ ಸಿದ್ಧವಾಗಿರುವುದು. ಮೇಲುಳಿ ಇರುವ ಒಂದು ಅಚ್ಚಿನ ಅಡಿಗಲ್ಲಿನಮೇಲೆ ಸೇನ ವನ್ನು ಇಟ್ಟು, ಹಿಡಿಯನ್ನು ತಿರುಗಿಸುವರು. ಉಳಿಯು ಇಳಿದುಬಂದು ಸೇನಕ್ಕೆ ಮಧ್ಯನ ಸೀಳನ್ನು ಕೊಡುವುದು. ಮುಂಬೆ ಸೇನಗಳಿಗೆ ವರ್ಣವನ್ನು ಕೊಡುವುದ ಕ್ಕೋಸ್ಕರ ಲೋಹದ ಉರುಳೆಗಳಲ್ಲಿ ಅವನ್ನುತುಂಬಿ ಇದ್ದಲಿನ ಬೆಂಕಿಯ ಕಾವಿಗೆ ಹಿಡಿಯುವರು. ವೈರಗನ್ನು ಕೊಡುವುದಕ್ಕೆ ಅವಲಕ್ಕಿಅದಗು ಕರಗಿಸಿದ ಮಣ್ಣೆಣ್ಣೆ ಯಲ್ಲಿ ಇವನ್ನು ಅದ್ದಿ, ಒಣಗಿಸುವರು. ಇದಾದಮೇಲೆ ಸೇನವು ಉಪಯೋಗಕ್ಕೆ ಸಿದ್ಧವಾಗಿರುವುದು. ಉಕ್ಕಿನ ಸೇನಗಳು ಬೇಗ ಮಣ್ಣು ಹಿಡಿದು ಹೋಗುವುದರಿಂದ ಚಿನ್ನದ ಸೇನಗಳನ್ನುಮಾಡಿ, ಅವರ ಟಾಂಗಿಗೆ "ಇರತಿಯಂ" ಎಂಬ ಲೋಹವನ್ನು ಬೆಸದು, ಮೂರಿಯು ಸಮಯವಂತೆ ಮಾಡುವುದೂ ಉಂಟು. ಆದರೆ ಇದನ್ನು ಮಾಡು ವುದು ಕಷ್ಟವಾದುದರಿಂದಲೂ ಬೆಲೆಯು ಹೆಚ್ಚಾಗುವುದರಿಂದಲೂ ಇದು ವಾಡಿಕೆಯಲ್ಲಿ ಬರುವದಾಗಿ ತೋರುವುದಿಲ್ಲ.

ಪೂರ್ಣ ರಾಘವೇಂದ್ರರಾವ್, ಬಿ.ಎ., ಬಿ.ಎಲ್.

ಅಳಲು.

ಮನೆಯ ಹಿತ್ತಲಿನಲ್ಲಿರುವ ದೊಡ್ಡ ಮೊಡ್ಡ ಮರಗಳಲ್ಲಿ ಒಂದು ಕೊಂಬೆಯಿಂದ ಇನ್ನೊಂದು ಕೊಂಬೆಗೆ ಹಾರುತಾ, ಸರಸರನೇ ಮರವನ್ನು ಹತ್ತುತಾ, ಚೀಪ್ ಚೀಪ್‌ಧ್ವನಿಯನ್ನು ಮಾಡುತಾ, ನೋಡಲಿಕ್ಕೆ ಸುಂದರವಾಗಿಯೂ, ಚಿಕ್ಕದಾಗಿಯೂ, ತುಂಬಾ ಕೂದಲಿರುವ ಬಾಲವುಳ್ಳದ್ದಾಗಿಯೂ ಇರುವ ಅಳಲನ್ನು ಯಾರುತಾನೇ ನೋಡಿ ಇಲ್ಲ! ಅದನ್ನು ನೋಡಿದೊಡನೆಯೇ, ಸ್ವಲ್ಪ ನಿಂತುಕೊಂಡು ತಿರುಗಿ ಚೆನ್ನಾಗಿ ನೋಡಬೇಕೆಂಬ ಆಸೆಯು ಯಾರಿಗೆತಾನೆ ಉಂಟಾಗುವದಿಲ್ಲ! ಸಾಧಾರಣವಾಗಿ ಯಾವ ತೋಪ್ಪನಲ್ಲಿಯೇ ಹೋಗಲಿ ಇದನ್ನು ನೋಡಬಹುದು. ಅಲ್ಲಿ ಹತ್ತಿರ ಹತ್ತಿರ ನಾನಾಜಾತಿ ಮರಗಳು ಇರೋಣದರಿಂದಲೂ, ನಾನಾವಿಧ ಹಣ್ಣು ಕಾಯಿಗಳು ಸಿಕ್ಕುವದರಿಂದಲೂ, ವಿಶೇಷ ಜನಗಲಭೆ ಇಲ್ಲದೆ ಇರುವದರಿಂದ ನಿರ್ಭಯವಾಗಿ ವಿಹರಿಸುವುದಕ್ಕೆ ಇವುಗಳಿಗೆ ಅನುಕೂಲವಾಗಿರುವ ಸ್ಥಳವಾಗಿರುವದರಿಂದಲೂ, ಅಲ್ಲಿ ಹೇರಳವಾಗಿ ಇರುತ್ತವೆ. ಯಾವದಾದರೂ ಒಂದು ತೋಪಿಗೆ ಹೋದೊಡನೆಯೇ ಕಪಿಯ ಬಾಧೆ ವಿಶೇಷವಾಗಿಲ್ಲದ ಸ್ಥಳಗಳಲ್ಲಿ ಮನೋಹರವಾದ ಪಕ್ಷಿಗಳ ಧ್ವನಿಯೂ, ಬಣಗಿ ತವಗಾಗಿ ಬಿದ್ದಿರುವ ಎಲೆಗಳಮೇಲೆ ಒಂದರನ್ನೊಂದು ಅಟ್ಟಿಕ್ಕೊಂಡು ಸರಸರನೆ ಇವುಗಳು ಓಡಾಡುವಾಗ ಉಂಟಾಗುವ ಶಬ್ದವೂ, ಐದು ಆರು ಅಳಲುಗಳು ಒಟ್ಟಿಗೆ ಏನೋ ಒಂದು ಕೆಲಸವು ಮಿಂಚಿಹೋದಂತೆ, ಮರವನ್ನು ಹತ್ತುವುದೂ, ಇನ್ನುಕೆಲವು ಮೇಲಿನಿಂದ ಅತಿ ತ್ವರೆಯಿಂದ ಇಳಿದು ಬರುವುದೂ, ಇವುಗಳು ಸಂದಿಸಿದಾಗ ಗಾಬರಿಯಿಂದ ಒಂದು ವಿಶೇಷ ಸಂಗತಿಯನ್ನು ಹೇಳುವಂತೆಯಾಗಲಿ, ಯಾವುದೋ ಒಂದು ಕಾರ್ಯಕ್ಕಾಗಿ ಜಗಳವಾಡುವಂತೆಯಾಗಲಿ, ಇವುಗಳು ಮಾಡುವ ಕೀಚ್ ಕೀಚ್ ಧ್ವನಿಯೂ, ಕೇಳಿಬರುವುದು. ಇವುಗಳ ಆಟಪಾಟಗಳನ್ನು ನೋಡಿದರೆ ಯಾವ ಚಿಂತೆಯೂ ಇಲ್ಲದೆ ಇವುಗಳು ಎಷ್ಟೋ ಸಂತೋಷವಾಗಿರುವಂತೆ ಕಾಣುವದು.

ಇದು ಜನಸ್ತೋಮವಿಲ್ಲದ ಸ್ಥಳವಲ್ಲಿ ಸ್ವೇಚ್ಛೆಯಾಗಿ ವಿಹರಿಸುವುದೆಂದು ಹೇಳಿದೆಯಷ್ಟೆ. ಆದ್ದರಿಂದ ಇದರ ಚರ್ಯೆಗಳನ್ನು ನೋಡಬೇಕಾದರೆ ಸದ್ದುಮಾಡದೆ ಒಂದುಕಡೆ ಮರೆಯಾಗಿ ನಿಂತುಕೊಂಡು ನೋಡಬೇಕು. ನಾವು ಸ್ವಲ್ಪ ಶಬ್ದಮಾಡಿದರೇ ಸಾಕು, ಸ್ವಲ್ಪ ಹುಟ್ಟಿಯಾಗಿ ಸಡೆದರೆಸಾಕು, ಇವುಗಳು ನೀಳವಾದ ಕಿವಿಯಿಂದ ಶಬ್ದವನ್ನು ಗ್ರಹಿಸಿ, ಎಲ್ಲಿಲ್ಲಿದ್ದವೋ ಅಲ್ಲಲ್ಲಿಯೇ ಮಾಯವಾದಂತೆ ಗಾಬರಿಯಾಗಿ, ಕಣ್ಣುಮರೆಯಾಗುವುವು. ಇದರ ಚಲುವಾದ ಆಕಾರ ನೋಡುವುದಕ್ಕೆ ಚಿಕ್ಕದಾಗಿದ್ದರೂ, ಈ ಪ್ರಾಣಿಯು ಸೇರಿರುವವರ್ಗಕ್ಕೆ ಪ್ರಪಂಚದಲ್ಲಿರುವ ಪ್ರಾಣಿಗಳಲ್ಲಿ ಅನೇಕಪ್ರಾಣಿಗಳು ಸೇರಿವೆ. ಈ ವರ್ಗಕ್ಕೆ ಆಹಾರವನ್ನು ಅಗೆದುತಿನ್ನುವ (ದಂಶಾಸನ) ಪ್ರಾಣಿವರ್ಗವೆಂದು ಹೆಸರು.

ಒಂದುಪ್ರಾಣಿಯು ಮುಂದಿನ ಹಲ್ಲುಗಳನ್ನು ನೋಡೋಣದರಿಂದಲೇ
ನು ಈ ವರ್ಗಕ್ಕೆ ಸೇರಿದ್ದೆಂದು ಹೇಳಬಹುದು. ಕಪಿ, ಇಲಿ, ಹೆಗ್ಗಣ, ಮೊಲ ಇವು
ಳ ಹಲ್ಲುಗಳನ್ನು ನೋಡಿದರೆ ಉಳಿದ ಎಲ್ಲಾ ಹಲ್ಲುಗಳಿಗಿಂತಲೂ ಮುಂದಿನ ಹಲ್ಲು
ಳುಮಾತ್ರ ಸ್ವಲ್ಪ ಮುಂದಾಗಿ ಕಾಣಿಸುವುದು. ಈ ಮುಂದಿನ ಹಲ್ಲುಗಳನ್ನೇ
ವುಗಳು ವಿಶೇಷವಾಗಿ ಉಪಯೋಗಿಸುವುದರಿಂದ ಈ ಹಲ್ಲುಗಳು ಸವೆದು ಹೋದ
ಾಗೆಲ್ಲಾ ಅಗಿದು ತಿನ್ನುವುದಕ್ಕೆ ಅನುಕೂಲವಾಗಿರುವಂತೆ ಸವನಾಗಿ ಬೆಳೆಯುವುವು.

ಸೀಬೇಕಾಯಿ, ಬೇಲದಕಾಯಿ, ಮಾವಿನಕಾಯಿ ಇವುಗಳನ್ನು ಮಾರಲಿಕ್ಕೆ
ರುವವರು, ಗಿಣಿ ಕಡಿದ ಹಣ್ಣು, ಗಿಣಿ ಕಡಿದ ಕಾಯಿ, ಎಂದು ಬೇರೆ ತೆಗೆದು ಇಡುವುದು
ಾಧಾರಣವಾಗಿ ಎಲ್ಲರಿಗೂ ತಿಳಿದಿದೆಯಷ್ಟೆ. ಇವುಗಳಲ್ಲಿ ಗಿಣಿಕಡಿದ ಕಾಯಿ ಹಣ್ಣು
ಸ್ವಲ್ಪವಾಗಿದ್ದರೂ ಅಳಲು ಕಡಿದ ಹಣ್ಣು ಕಾಯಿಗಳೇ ವಿಶೇಷವಾಗಿರುವುವು. ಅಳ
ುಗೆ ಬೇಲದಕಾಯಿ, ಸೀಬೇಕಾಯಿ, ಇಂಥಾ ಘಟ್ಟಿಯಾದ ಸಲಗಳನ್ನು ಕಂಡರೆ
ಇಷ್ಟ. ಆದರೆ ಇದಕ್ಕೆ ಅಡಿಕೆಕಾಯಿ, ಬಾದಾಮಿಕಾಯಿ ಇವುಗಳಲ್ಲಿ ವಿಶೇಷವಿಶ್ವಾಸ.
ಿಡಗಳನ್ನು ಹತ್ತಿ, ಕಾಯಿಯನ್ನು ಕೊಯಿದು, ಹಿಡಿದುಕೊಂಡು ತಿನ್ನಲು ಅನುಕೂ
ಲವಾಗಿರುವ ಮುಂಗಾಲನಲ್ಲಿ ಘಟ್ಟಿಯಾಗಿ ಕಾಯಿಯನ್ನು ಹಿಡಿದುಕ್ಕೊಂಡು, ಮು
ಗಾಲುಗಳಿಗಿಂತಲೂ, ಸ್ವಲ್ಪ ಉದ್ದವಾಗಿರುವ ಹಿಂಗಾಲುಗಳಮೇಲೆ ಕೂತುಕೊಂಡು,
ಬಾಲವನ್ನು ಬೆನ್ನಿಗೆ ತಗಲಿರುವಂತೆ ಮೇಲಕ್ಕೆ ಎತ್ತಿಕೊಂಡು, ತಿನ್ನುತಲಿದ್ದ ಕೆಲವು
ಅಳಲುಗಳನ್ನು ನೋಡಿರಬಹುದು. ಅಡಿಕೆ, ಬಾದಾಮಿಕಾಯಿಗಳು ಸಿಕ್ಕಿದ ದಿವಸವೇ
ಇವುಗಳಿಗೆ ಹಬ್ಬದ ದಿವಸ. ಅಡಿಕೆಕಾಯಿಯ ತುದಿಯಲ್ಲಿರುವ ಗಂಟನ್ನು ಮೊದಲ
ಕತ್ತರಿಸಿ ಆಮೇಲೆ ಚೆನ್ನಾಗಿ ಕಚ್ಚಿ ಹಲ್ಲಿನಿಂದ ಸಿಪ್ಪೆಯನ್ನು ಸುತ್ತಲೂ ಸುಲಿದು,
ಒಳಗೆ ಇರತಕ್ಕ ಅಡಿಕೆಯನ್ನು ತಿನ್ನುವುದು. ಹಸೀ ಬಾದಾಮಿಯನ್ನು ಹೀಗೆಯೇ
ಸುಲಿದು ಬೀಜವನ್ನು ತಿನ್ನುವುದು. ತಿನ್ನುವುದುಮಾತ್ರವೇ ಅಲ್ಲ, ಅಡಿಕೆ, ಬಾದಾಮಿ
ಇವುಗಳ ಫಲಕಾಲದಲ್ಲಿ ಪ್ರತಿಯೊಂದೂ ತನ್ನ ಕೈಲಾದಮಟ್ಟಿಗೆ ಕಾಯಿಗಳನ್ನು
ಸಂಗ್ರಹಿಸಿ, ಮಳೆಗಾಲದಲ್ಲಿ ತನಗೆ ಆಹಾರ ಸಿಕ್ಕದೆ ಇರುವಾಗ ಉಪಯೋಗಕ್ಕೆ ಬರು
ವಂತೆ ಗಟ್ಟಿಯಾದ ಸ್ಥಳದಲ್ಲಿ ಬಚ್ಚಿಡುವವು. ಇದು ಎಂಥಾ ಜಾಣತನ!

ಹಗಲುಹೊತ್ತಿನಲ್ಲೆಲ್ಲಾ ಸ್ವೇಚ್ಛೆಯಾಗಿ ವಿಹರಿಸುತ್ತಾ ಮಳೆಗಾಲಕ್ಕೆ ಒ
ಗವಂತೆ ಆಹಾರವನ್ನು ಸೇಖರಿಸುತಾ ಇದ್ದು ರಾತ್ರಿಯಾದೊಡನೆ ಮೆಲಗಿಕೊಳ್ಳು
ದಕ್ಕೆ ಅನುಕೂಲವಾದ ಗೂಡುಗಳನ್ನು ಕಟ್ಟಿಕೊಳ್ಳುವುದರಲ್ಲೂ, ಇದು ತನ್ನ ಜಾತ
ರ್ಯವನ್ನು ತೋರಿಸುತ್ತದೆ. ಇತರರಿಂದ ತನ್ನ ಗೂಡುಗಳಿಗೆ ತೊಂದರೆಬಾರದಂ
ದೊಷ್ಟ ಮರಗಳಲ್ಲಿ ಎತ್ತರವಾಗಿರುವ ಕೊಂಬೆಯ ಮೇಲುಗಡೆ ಇದರ ಗೂಡನು
ಕಟ್ಟುತ್ತದೆ. ದೊಷ್ಟ ಮಳೆಬಂದಾಗ ನಾವುಗಳು ಗಾರೆಗಚ್ಚು ಮುಂತಾದವುಗಳಿಂ
ಕಟ್ಟಿದ ಅನೇಕ ಮನೆಗಳು ಸೋರಿ ನೀರು ನಿಂತು ಅನಾನುಕೂಲವಾಗುವುದ

ಸನಿಯುಷ್ಟೆ. ಆದರೆ ಅಲ್ಪಪ್ರಾಣಿಗಳಾದ ಇವುಗಳು ಕಸಕಡ್ಡಿ ಸೊಪ್ಪುಸೊಪ್ಪಿಗೆ, ಹುಲ್ಲು ಸೆತ್ತೆ ಇವುಗಳಿಂದ ಕಟ್ಟಿದ ಗೂಡಿನಲ್ಲಿ ಎಂಥಾ ಮಳೆಬಂದಾಗ್ಯೂ ಒಂದುತೊಟ್ಟು ನೀರು ಸಹಿತ ಗೂಡಿನೊಳಕ್ಕೆ ಬೀಳುವುದಿಲ್ಲವೆಂಬುವುದು ಕೇಳುವುದಕ್ಕೆ ಬಹಳ ಆಶ್ಚರ್ಯವನ್ನುಂಟುಮಾಡುವುದಿಲ್ಲವೆ! ಇಷ್ಟು ಅನುಕೂಲವಾದ ಗೂಡಿನಲ್ಲಿ ರಾತ್ರಿಯೆಲ್ಲಾ ಇಮ್ಮು ಮಲಗಿಕೊಂಡು ನಿದ್ದೆಮಾಡುತದೆ. ಹಗಲು ಹೊತ್ತಿನಲ್ಲಿ ಸಹಿಸಲಾರದಷ್ಟು ಬಿಸಲಾದರೆ ಎರಡು ಮೂರು ಘಂಟೆಕಾಲ ಗೂಡಿನಲ್ಲಿದ್ದು ಬಿಸಲು ಸ್ವಲ್ಪ ತಂಪಿದೊಡನೆಯೆ ಬಹು ಪಟುವಾದ ಇವು ಗೂಡಿನಲ್ಲಿ ಶೆರೆಯಲ್ಲಿದ್ದಂತೆ ಇರಲು ಮನಸ್ಸಿಲ್ಲದೆ ಬೇಕಾದಂತೆ ಓಡಾಡುವುದಕ್ಕೆ ಹೊರಗೆ ಬರುತದೆ. ಆದರೆ ಮಳಗಾಲದಲ್ಲಿ ಮಾತ್ರ ಯತ್ನವಿಲ್ಲದೆ ವಿಶೇಷವಾಗಿ ಗೂಡಿನಲ್ಲಿಯೇ ಮಳೆಗಾಲ ಕಳೆಯುವವರೆಗೂ ವಾಸ ಮಾಡುತ್ತದೆ.

ದೊಡ್ಡ ದೊಡ್ಡ ಮರಗಳನ್ನು ಲಕ್ಷ್ಯವಿಲ್ಲದೆ ಹತ್ತುವುದೂ, ಸಣ್ಣ ಸಣ್ಣ ರೆಂಬೆಯಮೇಲೆ ಓಡಾಡುವುದೂ, ಕೊಂಬೆಯಿಂದ ಕೊಂಬೆಗೆ ಸುಲಭವಾಗಿ ನೆಗೆಯುವುದೂ ಇವೆಲ್ಲ ಅದಕ್ಕೆ ಬಹು ಸುಲಭವಾಗಿ ಇರುವುದನ್ನು ನೋಡಿದರೆ ಆಶ್ಚರ್ಯವೇನೋ ಉಂಟಾಗುತ್ತೆ. ಚೆನ್ನಾಗಿ ಪರಿಶೀಲಿಸಿ ಅದರ ಶರೀರ ರಚನೆಯನ್ನು ನೋಡಿದರೆ ಅದರ ಕಾಲಿನ ಉಗುರುಗಳು ಮರದ ತೊಕ್ಕೆಯ ಸಣ್ಣ ಸಣ್ಣ ಸಂದಿನಲ್ಲಿ ಸಹಿತವಾಗಿ ಪ್ರವೇಶಿಸಿ ಘಟ್ಟಿಯಾಗಿ ಹಿಡಿದುಕೊಳ್ಳುವಷ್ಟು ಅನುಕೂಲವಾಗಿವೆ. ಇದರ ಮೈಬಣ್ಣವೂ, ಗಾತ್ರವೂ ಎರಡು ಮೂರುವಿಧ ಉಂಟು.

ಇದರ ಬಾಲವ ಕೂದಲನ್ನು ಚಿತ್ರಗಾರರು ಚಿತ್ರದ ರೇಖೆಗೆ ಉಪಯೋಗಿಸುವುದುಂಟು.

ಇದರ ಮರಿಯನ್ನು ಹಿಡಿದು ಮನೆಯಲ್ಲಿ ಗಿಣಿ, ಬೆಕ್ಕು, ಬಿಳಿ ಇಲಿ ಇವುಗಳನ್ನು ಸಲಕುವಂತೆ ಸಾಕುವರು.

ಈ ದೇಶದಲ್ಲರುವ ಅಳಲಿನ ಬೆನ್ನಿನಮೇಲೆ ಮೂರು ಪಟ್ಟೆಗಳು ಇರುವುದನ್ನು ಎಲ್ಲರೂ ನೋಡಿರಬಹುದು. ಈ ಪಟ್ಟೆಗಳು ಇರುವದಕ್ಕೆ, ನಮ್ಮಲ್ಲಿ ವಾಡಿಕೆಯಾಗಿ ಹೇಳುವ ಒಂದು ಕಥೆ ಉಂಟು.

ರಾಮದೇವರು, ರಾವಣನನ್ನು ಕೊಂದು, ಸೀತೆಯನ್ನು ಬಿಡಿಸಿಕೊಂಡು ಬರಬೇಕೆಂದು ಲಂಕೆಗೆ ಮುತ್ತಿಗೆ ಹಾಕುವಕಾಲದಲ್ಲಿ, ಸಮುದ್ರಕ್ಕೆ ಸೇತುವೆಯನ್ನು ಕಟ್ಟಬೇಕಾಯಿತು. ಆಗ ಶೂರಾಗ್ರಗಣ್ಯನಾದ ಹನುಮಂತನೇ ಮೊದಲಾದವರು ಸಣ್ಣ ಸಣ್ಣ ಬೆಟ್ಟ ಗುಡ್ಡಗಳನ್ನು ತಮ್ಮ ಬಾಹುಬಲಾಕ್ರಮದಿಂದ ತಂದು ಸೇತುವೆಯನ್ನು ಕಟ್ಟುವುದಕ್ಕಾಗಿ ಸಮುದ್ರದಲ್ಲಿ ಉರಳಿಸುತಿದ್ದರು. ಹೀಗೆ ಆ ಸೇತುವೆಯನ್ನು ಕಟ್ಟುವುದಕ್ಕಾಗಿ ಆ ಸೈನ್ಯದಲ್ಲಿದ್ದ ಪ್ರತಿಯೊಬ್ಬನೂ ಹಗಲೂ ರಾತ್ರಿ ಕೆಲಸ ಮಾಡುತಿದ್ದಾಗ್ಗೆ, ದಂಡಕಾರಣ್ಯದಲ್ಲಿದ್ದ ಅಳಲುಗಳೆಲ್ಲವೂ ಬಂದು, ತಮ್ಮ ಶಕ್ತ್ಯನುಸಾರ

ಸಾರ ಸಹಾಯಮಾಡಬೇಕೆಂದು ಎಣಿಸಿ, ಉಪ್ಪಾಗಿಯೂ ಅಂಟು ಅಂಟಾಗಿಯೂ, ಇರುವ ಸಮುದ್ರದ ನೀರಿನಲ್ಲಿ ಮುಳುಗಿ ದಡಕ್ಕೆ ಬಂದು ಮಳಲಮೇಲೆ ಹೊರಳಿ ತನ್ನ ಮೈಗೆ ಹತ್ತಿದ ಮಳಲಿನೊಡನೆ ಹೋಗಿ ಅಲ್ಲಿ ಬಿಟ್ಟಿದ್ದ ಸಂದಿ ಸಂದಿಗಳಿಗೆಲ್ಲಾ ಮಳಲನ್ನು ತುಂಬಿದನೆಂತಲೂ, ಆಗ ಶ್ರೀರಾಮರು ಇವುಗಳ ಭಕ್ತಿಗೆ ಮೆಚ್ಚಿ ತಮ್ಮ ಕೈಯನ್ನು ಬೆನ್ನಿನಮೇಲೆ ಸವರಿ ಆಶೀರ್ವಾದಮಾಡಿದರೆಂತಲೂ ಅದೇ ಈಗಲೂ ಇರುವ ರಾಮದೇವರ ಬೆರಳಿನ ಗುರುತೆಂತಲೂ ಹೇಳುತ್ತಾರೆ. ಇದಕ್ಕನುಗುಣವಾಗಿ 'ಅಳಲುಭಕ್ತ ಮಳಲುನೇವೆ' ಎಂಬ ಗಾದೆಯೂ ಈಗಲೂ ಪ್ರಚಾರದಲ್ಲಿದೆ

ಗಣಿತ.

ಹಿಂದಿನ ಸಂಚಿಕೆಯಲ್ಲಿನ ಪ್ರಶ್ನೆಗಳನ್ನು ಮಾಡುವ ವಿಧಾನ.

I. 3·1415 ಎಂಬದರ ವರ್ಗವನ್ನು ಕಂಡು ಹಿಡಿಯುವಲ್ಲಿ

$3{\cdot}1415 = 3 + {\cdot}1 + {\cdot}04 + {\cdot}001 + {\cdot}0005$

ಬೀಜಗಣಿತವನ್ನು ಓದಿದವರಿಗೆ

$$(a+b+c+d+e)^2 = a^2 + b^2 + c^2 + d^2 + e^2$$
$$+ 2a(b+c+d+e) + 2b(c+d+e) + 2c(d+e) + 2de$$

ಎಂದು ಗೊತ್ತಿರುವುದು. ಇದರಂತೆಯೆ ಮೇಲೆ ಹೇಳಿದ ದಶಮಾಂಶದ ವರ್ಗವನ್ನು ಬರೆದರೆ

$3^2 + {\cdot}1^2 + ({\cdot}04)^2 + ({\cdot}001)^2 + ({\cdot}0005)^2 + 2\times3\times{\cdot}1415$
$+ 2\times{\cdot}1\times{\cdot}0415 + 2\times{\cdot}04\times{\cdot}0015 + 2\times{\cdot}001\times{\cdot}0005$

ಆಗುವುದು.

$3^2 = 9$; $({\cdot}1)^2 = {\cdot}01$; $({\cdot}04)^2 = {\cdot}0016$; $({\cdot}001)^2 = 000001$
$({\cdot}0005)^2 = {\cdot}00000025$ ಇವುಗಳು ಸಂಕಲನದಿಂದ
9·01160125 ಆಗುವುವು.

$2\times3\cdot\times{\cdot}1415 = {\cdot}8490$
$2\times1\ \times{\cdot}0415 = {\cdot}00830$
$2\times{\cdot}04\ \times{\cdot}0015 = {\cdot}000120$
$2\times{\cdot}001\times{\cdot}0005 = {\cdot}0000010$

$\therefore\quad (3{\cdot}1415)^2 = 9{\cdot}86902225.$

ಈ ಉದಾಹರಣೆಯಿಂದ ಯಾವ ದಶಮಾಂಶದ ವರ್ಗವನ್ನೇ ಆಗಲಿ ಸುಲಭವಾಗಿ ಬರೆಯುವೆಬಗೆಯನ್ನ ಊಹಿಸಬಹುದು.

II. $\frac{1}{5} + \frac{1}{5\times5} + \frac{1}{5\times5\times5} + \frac{1}{5\times5\times5\times5} + \ldots\ldots$

ಇದರ ಬೆಲೆಯನ್ನು ಕಂಡು ಹಿಡಿಯುವ ಬಗೆ.

ಈ ಲೆಕ್ಕದಲ್ಲಿ ಮೊದಲನೆಯ ಭಿನ್ನರಾಶಿಯನ್ನು 5 ರಿಂದ ಭಾಗಿಸಿದರೆ 2ನೆಯ ಭಿನ್ನರಾಶಿಯು ಬರುವುದು. ಅದನ್ನು 5 ರಿಂದ ಭಾಗಿಸಿದರೆ 3 ನೇಯದು ಬರುವುದು. ಹೀಗೆಯೇ ಯಾವದೊಂದು ಭಿನ್ನರಾಶಿಯನ್ನು 5 ರಿಂದ ಭಾಗಿಸಿದರೂ ಅದರ ಮುಂದಿನ ಭಿನ್ನರಾಶಿಯು ಬರುವುದು. ಈ ವಿಧಿಯನ್ನನುಸರಿಸಿ ಪಾರವಿಲ್ಲದಷ್ಟು ರಾಶಿಗಳನ್ನು ಬರೆದು ಅವುಗಳನ್ನೆಲ್ಲ ಸಂಕಲನ ಮಾಡಿದರೆ ಬರುವ ಉತ್ತರವನ್ನು ಕಂಡು ಹಿಡಿಯಬೇಕೆಂಬುದು ಲೆಕ್ಕದ ಅರ್ಥವು. ಲೆಕ್ಕದಲ್ಲಿ 4 ನೇ ಭಿನ್ನರಾಶಿಯು ಬಲಗಡೆಗೆ ಇರುವ ಚುಕ್ಕೆಗಳು ಅಸಂಖ್ಯಾತವಾಗಿ ಭಿನ್ನರಾಶಿಗಳನ್ನು ಬರೆಯಬೇಕೆಂಬುದರ ದ್ಯೋತಕಗಳಾಗಿರುವುವು.

ಇದನ್ನು ಮಾಡುವ ಕ್ರಮ.

$\frac{1}{5}$ ಎಂಬುದನ್ನು ದಶಮಾಂಶದಲ್ಲಿ ·2 ಎಂದು ಬರೆಯಬಹುದು. 2 ನೆಯದರಿಂದ $\frac{1}{5\times5}$ ಎಂಬುದು $\frac{1}{5}$ ನ್ನು 5 ರಿಂದ ಭಾಗಿಸಿ ಬಂದುದಾದ್ದರಿಂದ ಅದನ್ನು ದಶಮಾಂಶವಾಗಿ ಬರೆಯಬೇಕಾದರೆ ·2 ಎಂಬುದನ್ನು 5 ರಿಂದ ಭಾಗಿಸಿ ಬಂದದ್ದನ್ನು ಬರೆಯಬಹುದು. ಇವೇಪ್ರಕಾರವಾಗಿ ಇತರ ಭಿನ್ನರಾಶಿಗಳನ್ನೂ ಬದಲಾಯಿಸಿ ದಶಮಾಂಶದಲ್ಲಿ ಬರುವುದೇನೆಂದರೆ—

$$\frac{1}{5} = \cdot2$$

$$\frac{1}{5\times5} \text{ ಅಥವಾ } \frac{1}{5^2} = \frac{\cdot2}{5} = \cdot04$$

$$\frac{1}{5\times5\times5} \text{ ಅಥವಾ } \frac{1}{5^3} = \frac{\cdot04}{5} = \cdot008$$

$$\frac{1}{5^4} = \frac{\cdot008}{5} = \cdot0016$$

$$\frac{1}{5^5} = \frac{\cdot0016}{5} = \cdot00032$$

$$\frac{1}{5^6} = \frac{\cdot00032}{5} = \cdot000064$$

$$\frac{1}{57} = \frac{\cdot 000064}{5} = \cdot 0000128$$

$$\frac{1}{58} = \frac{\cdot 0000128}{5} = \cdot 00000256$$

$$\cdot 24999936.$$

ಇನ್ನು ಮುಂದಿನ ಭಿನ್ನರಾಶಿಗಳೆಲ್ಲ ದಶಮಾಂಶಮಾಂಶದಲ್ಲಿ ಬರೆದಾಗ ಮೊದಲು 3 ಸ್ಥಾನಗಳು ಸೊನ್ನೆಗಳುಳ್ಳವಾಗಿರುವುವು. ಆದುದರಿಂದ ಅವುಗಳನ್ನು ಈ ಮೇಲಿನ ದಶಮಾಂಶಗಳಿಗೆ ಸೇರಿಸುವುದರಿಂದ ಮೊದಲು 5 ಅಂಕಿಗಳಲ್ಲಿ ಬದಲಾವಣೆಗಳೇನೂ ಆಗುವುದಿಲ್ಲ. ನಮಗೆ ಪ್ರಕೃತದಲ್ಲಿ ದಶಮಾಂಶದ 5 ಸ್ಥಾನಗಳವರೆಗೆ ಉತ್ತರ ಬೇಕಾಗಿರುವುದರಿಂದ ಮೇಲೆ ಬರೆದಿರುವ ದಶಮಾಂಶಗಳನ್ನೆಲ್ಲ ಕೂಡಿ ಬಂದ ಉತ್ತರದಲ್ಲಿ ಮೊದಲು 5 ಅಂಕಿಗಳನ್ನು ಉತ್ತರವಾಗಿ ಹೇಳಬಹುದು. ·24999 ಎಂಬುದು ಲೆಕ್ಕದ ಉತ್ತರವು.

ಹೀಗೆಯೇ ಎಷ್ಟು ದಶಮಾಂಶಸ್ಥಾನಗಳವರಿಗೆ ಬೇಕಾದರೂ ಉತ್ತರವನ್ನು ಕಂಡು ಹಿಡಿಯಬಹುದು. ಸಾಧಾರಣವಾಗಿ 7, 8 ದಶಮಾಂಶಸ್ಥಾನಗಳಿಗಿಂತ ಹೆಚ್ಚಾಗಿ ಉಪಯೋಗಕ್ಕೆ ಬೇಕಾಗುವುದಿಲ್ಲ. ದಶಮಾಂಶಗಳನ್ನಾಗಿ ತಿರುಗಿಸದೆ ಭಿನ್ನರಾಶಿಗಳನ್ನಾಗಿಯೇ (ಸಾರವಿಲ್ಲದಷ್ಟು) ಬರೆದು ಅವುಗಳ ಮೊತ್ತವನ್ನು ಕಂಡು ಹಿಡಿಯುವುದು ಸಾಧ್ಯವೆಂಬುದು ಸುಲಭವೇದ್ಯವು.

ಮಾಡುವುದಕ್ಕೆ ಲೆಕ್ಕಗಳು—

I. $1 + \frac{1}{2} + \frac{1}{2\times 3} + \frac{1}{2\times 3\times 4} + \frac{1}{2\times 3\times 4\times 5} + \cdots$

(ದಶಮಾಂಶದ 5 ಸ್ಥಾನದವರಿಗೆ ಉತ್ತರವನ್ನು ಕಂಡು ಹಿಡಿಯತಕ್ಕದ್ದು.)

II. (1) $30\cdot 27\dot{4}\dot{1} \times 16$

(2) $8\cdot 3\dot{6} \times 12\cdot 1\dot{6}$

(ಈ ಲೆಕ್ಕಗಳಲ್ಲಿರುವ ಆವೃತ್ತಿದಶಮಾಂಶಗಳನ್ನು ಭಿನ್ನರಾಶಿಗಳನ್ನಾಗಿ ಮಾಡದೇನೇ ಲಬ್ಧವನ್ನು ಕಂಡು ಹಿಡಿಯತಕ್ಕದ್ದು.)

ಎಂ. ಹೆಚ್.

ಪಾಠಕ್ರಮ.

ಸ್ಲೇಟ್—(ಕಲ್ಲು ಹಲಿಗೆ.)

ಒಂದು ಸ್ಲೇಟನ್ನು ತೋರಿಸಿ, ಅದರ ಹೆಸರನ್ನೂ ಉಪಯೋಗವನ್ನೂ ಕೇಳುವುದು. ಬೋರ್ಡಿನಮೇಲೆ ಸ್ಲೇಟ್, ಕಲ್ಲುಹಲಿಗೆ ಎಂದು ಬರೆದು ವಿದ್ಯಾರ್ಥಿಗಳಿಂದ ಓದಿಸಬೇಕು.

ಒಂದು ಕೈಯಲ್ಲಿ ಸ್ಲೇಟನ್ನು ಹಿಡಿದುಕೊಂಡು ಇನ್ನೊಂದರಿಂದ ಬರೆಯಲಿಕ್ಕೆ ಉಪಯೋಗಿಸುವ ಕಲ್ಲು ಹಲಿಗೆಯನ್ನೂ, ಸುತ್ತಲೂ ಹಾಕಿರುವ ಮರದ ಕಟ್ಟನ್ನೂ ತೋರಿಸಿ ಸ್ಲೇಟಿನಲ್ಲಿ ಕಲ್ಲು ಹಲಿಗೆಯು ಭಾಗ ಒಂದು, ಮರದ ಕಟ್ಟು ಒಂದು, ಎರಡೂ ಇವೆ ಎಂದು ಬಾಲಕರಿಂದಲೇ ಹೇಳಿಸಬೇಕು.

ಒಬ್ಬ ಬಾಲಕನನ್ನು ಕರೆದು ಸ್ವಲ್ಪ ತರತರಕನಾದ ಕಲ್ಲಿನಮೇಲೆ ಕೈಯನ್ನು ಉಜ್ಜಿಂದು ಹೇಳಿ, ತರುವಾಯ ಸ್ಲೇಟಿನಮೇಲೂ ಕೈಯನ್ನು ಉಜ್ಜು ಎಂದು ಅವೆರಡಕ್ಕೂ ಇರುವ ವ್ಯತ್ಯಾಸವನ್ನು ಅವನಿಂದಲೇ ತಿಳಿಯಬೇಕು. ಸ್ಲೇಟು ನುಣುಪಾಗಿರುವುದೆಂದು ಬೋರ್ಡಿನಮೇಲೆ ಬರಿಯುವುದು. ನುಣುಪಾಗಿರುವ ಇತರ ಪದಾರ್ಥಗಳ ಹೆಸರನ್ನು ಬಾಲಕರಿಂದ ಹೇಳಿಸುವುದು. ಉಪಯೋಗಿಸಿದಹಾಗೆಲ್ಲಾ ಸ್ಲೇಟು ನುಣುಪಾಗುವುದೆಂಬುವುದನ್ನು ಕೆಲವು ಉದಾಹರಣೆಗಳಿಂದ ತಿಳಿಸುವುದು. ಸ್ಲೇಟು ನುಣುಪಾಗಿಲ್ಲದೇ ಹೋದರೆ, ಅದರಮೇಲೆ ಬರಿಯುವುದಕ್ಕೆ ಅದು ಅನುಕೂಲಿಸುವದಿಲ್ಲವೆಂಬ ವಿಷಯವನ್ನು ವ್ಯಕ್ತಪಡಿಸುವುದು.

ಬಣ್ಣ:—ಸ್ವಲ್ಪ ಕೆಂಪು, ಕಪ್ಪು, ಸ್ವಲ್ಪ ನೀಲಿಛಾಯೆಗಳೂ, ಸ್ಲೇಟಿನಲ್ಲಿ ಅಲ್ಲಲ್ಲಿಯೇ ಇರುವ ಹಸರ ಚುಕ್ಕೆಗಳೂ ಉಳ್ಳ ಸ್ಲೇಟುಗಳನ್ನು ತೋರಿಸಿ, ಬಾಲಕರಿಂದ ಅವರ ಬಣ್ಣಗಳನ್ನು ಹೇಳಿಸುವುದು. ಸೀಮೆಸುಣ್ಣ (chalk) ದಿಂದ ಕಪ್ಪುಹಲಿಗೆಯ (Black Board) ಮೇಲೂ, ಬೆಳ್ಳಗಿರುವ ಗೋಡೆಯಮೇಲೂ ಸೀಸದಕಡ್ಡಿ (Black lead pencil) ಇಂದ ಬೆಳ್ಳಗಿರುವ ಗೋಡೆಯಮೇಲೂ, ಕಪ್ಪು ಹಲಿಗೆಯ ಮೇಲೂ ಬರೆದು ತೋರಿಸಿ ಬಳಪದಿಂದ, ಸೀಮೆಸುಣ್ಣದಿಂದ ಬರಿಯುವುದಕ್ಕೆ ಹಲಿಗೆಯು ಎಷ್ಟು ಕಸ್ಸಾಗಿದ್ದರೂ ಒಳ್ಳೇದೆಂಬ ಸಂಗತಿಯನ್ನು ಸೂಚಿಸಬೇಕು. ಆದುದರಿಂದಲೆ ಕಪ್ಪು ಹಲಿಗೆಯನ್ನು ವಿಶೇಷವಾಗಿ ಉಪಯೋಗಿಸುವರು ಎಂಬುವದನ್ನು ಬಾಲಕರಿಂದ ಹೇಳಿಸಬೇಕು. ಉಪಯೋಗಿಸಿದಹಾಗೆಲ್ಲಾ ಸ್ಲೇಟು ನುಣುಪಾಗೆ ಏಂತೆ ಕಪ್ಪು ಬಣ್ಣವೂ ಹೆಚ್ಚುವುದೆಂದು, ಹೊಸದಾದ ಸ್ಲೇಟನ್ನೂ, ಸ್ವಲ್ಪ ಕಳೆದಾದ ಸ್ಲೇಟನ್ನೂ ತೋರಿಸಿ ಯಾತರಲ್ಲಿ ಕಪ್ಪು ವಿಶೇಷವಾಗಿರುವುದೋ ಅದನ್ನು ವಿದ್ಯಾರ್ಥಿಗಳೇ ಹೇಳುವಂತೇ ಮಾಡಬೇಕು.

ಗಾತ್ರ:—ಒಂದು ಸ್ಲೇಟಿನ ಕಟ್ಟನ್ನು ತೆಗೆದು ಸ್ಲೇಟಿನ ದಪ್ಪವನ್ನೂ, ಕಟ್ಟಿಹಾಕಿನ ಕಲ್ಲುಹಲಿಗೆಯ ಚೂರು ಒಂದನ್ನು ನೆಲದಮೇಲೆ ಎತ್ತಿಹಾಕಿ ಅದು ಚೂರು ಚೂರಾದುದನ್ನು ತೋರಿಸಿ, ಕಲ್ಲುಹಲಿಗೆ ಹೆಳ್ಳಗೆ ಇದೆ ಎಂದು ಹೇಳುವುದು. ದಪ್ಪವಾಗಿದ್ದರೆ ಬಹಳ ಭಾರವಾಗುವುದರಿಂದ ಸಾಧಾರಣವಾಗಿ ಉಪಯೋಗಿಸಲು ಅನಾನುಕೂಲವಾಗುವುದು ಎಂಬ ಸಂಗತಿಯನ್ನು ತಿಳಿಸುವುದು. ಕನ್ನಡಿ, ಗಾಜಿನ ಸಾಮಾನುಗಳು, ಕಂಚು, ಕಲ್ಲುಹಲಿಗೆ ಇವುಗಳು ಬಹು ಸೂಕ್ಷ್ಮವಾದ ಪದಾರ್ಥಗಳೆಂತಲೂ, ಇವನ್ನು ಬಹಳ ಜಾಗರೂಕತೆಯಿಂದ ಉಪಯೋಗಿಸಬೇಕೆಂತಲೂ ಹೇಳುವುದು. ಹೀಗೆ ಕಲ್ಲುಮೇರೆಯಾಗಲಿ, ಯಾವದಾದರೂ ಘಟ್ಟಯಾದ ಪದಾರ್ಥದಮೇಲೆಯಾಗಲಿ ಎತ್ತಿ ಹಾಕಿನವು ಒಡೆದು ಹೋಗುವ ಪದಾರ್ಥದಲಕ್ಷಣಕ್ಕೆ 'ಭಂಗುರ' (brittle) ಎಂದು ಹೆಸರು. ಒಂದು ಒಳ್ಳೇ ಬಳಾಪನ್ನು ಕೊಟ್ಟು ಸ್ಲೇಟಿನಮೇಲೆ ಒಬ್ಬ ಹುಡುಗನ ಕೈಲಿ ಬರೆಸಿ, ಅಳಿಸಿಸುವುದು. ಅಳಿಸಿದಮೇಲೆ ಯಾವವಿಧವಾದ ಗುರುತು ಇಲ್ಲದೆ ಇರುವುದನ್ನು ತೋರಿಸುವುದು. ಸಣ್ಣ ಸಣ್ಣ ಮರಳುಮಿಶ್ರವಾದ ಇನ್ನೊಂದು ಬಳಾಪನ್ನು ಕೊಟ್ಟು, ಇನ್ನೊಂದಾವರ್ತಿ ಬರಿಸಿದಾಗ ಅದರಿಂದುಂಟಾದ ಗೀಚು ಪಾಚುಗಳನ್ನು ತೋರಿಸುವುದು. ಅದುದರಿಂದ ನುಣುಪಾದ ಬಳಾಪಿನಿಂದ ಬರೆದು ಅಳಿಸಿದರೆ ಯಾವವಿಧವಾದ ಗುರುತು, ಗೀಚುಪಾಚು ಇರುವುದಿಲ್ಲವೆಂದು ಹೇಳುವುದು.

ಕಟ್ಟು:—ಕಟ್ಟಿನ ಗಾತ್ರವನ್ನೂ, ಸ್ಲೇಟಿನಗಾತ್ರವನ್ನೂ ತೋರಿಸಿ, ಕಟ್ಟಿನ ಗಾತ್ರವು ಸ್ಲೇಟಿನ ಗಾತ್ರಕ್ಕಿಂತ ಹೆಚ್ಚಾಗಿರುವುವೆಂದು ಬಾಲಕರಿಂದಲೇ ಹೇಳಿಸುವುದು. ಮರವ ಕಟ್ಟನ್ನು ಸೇರಿಸುವರೀತಿಯನ್ನು, ಒಂದು ಸ್ಲೇಟಿನ ಕಟ್ಟನ್ನು ತೆಗೆದು ತೋರಿಸುವುದು. ಕಟ್ಟಿನ ಮೂಲೆಗಳು ಬಿಗಿಯಾಗಿಲ್ಲದಿದ್ದರೆ ಕಟ್ಟಿನಿಂದ ಜಾರಿ ಸ್ಲೇಟು ಈಚೆಗೆ ಬಿದ್ದು ಒಡೆದುಹೋಗುವುದೆಂದು, ಒಂದು ಸ್ಲೇಟಿನ ಕಟ್ಟನ್ನು ಸಡರಿಸಿ ತೋರಿಸುವುದು. ಆದುದರಿಂದ ಕಟ್ಟಿನ ಮೂಲೆಗಳು ಬಿಗುವಾಗಿರಬೇಕೆಂದು ಹುಡುಗರಿಂದಲೇ ಹೇಳಿಸಬೇಕು. ಇದಕ್ಕಾಗಿ ಸ್ಲೇಟುಗಳ ಕಟ್ಟಿನ ಮೂಲೆಗೆ ಹಿತ್ತಾಳೆ, ಕಬ್ಬಿಣ ಇವುಗಳ ಕಟ್ಟನ್ನು ಹಾಕಿ ಜೆನ್ನಾಗಿ ಮೊಳೆ ಹೊಡೆದಿರುವೆಂದು, ಅಂಥಾ ಒಂದು ಸ್ಲೇಟನ್ನು ತೋರಿಸುವುದು.

ಕಟ್ಟಿನ ಉಪಯೋಗ:—ಕಲ್ಲು ಹಲಿಗೆಯ ಅಂಚುಗಳಿಂದ ಕೈ ಕೊಯ್ದು ಹೋಗದಹಾಗೆ ಇರುತ್ತವೆ. ಕಟ್ಟುಗಳು ಸ್ವಲ್ಪ ಸುತ್ತಲೂ ದಪ್ಪವಾಗಿರೋಣದರಿಂದ ನೆಲವನ್ನು ಬಿದ್ದಾಗ ಕಟ್ಟುಗಳಿಗೆ ಪೆಟ್ಟುಬಾಕುವುದೇಹೊರತಾಗಿ ಒಳಗಿರುವ ಸ್ಲೇಟಿಗೆ ಸಾಧಾರಣವಾಗಿ ಪೆಟ್ಟು ತಗಲುವುದಿಲ್ಲವೆಂಬ ಸಂಗತಿಯನ್ನು ವಿವರಿಸಬೇಕು.

ಕಲ್ಲುಹಲಿಗೆಯ ಉಪಯೋಗ:-ಕೆಲವು ವರುಷಗಳ ಹಿಂದೆ ದೊಡ್ಡ ದೊಡ್ಡ ದಾವ ವತ್ತ ಹುಡುಗಳನ್ನು ಮಾತಿಕೊಂಡು, ಕಪ್ಪುಬಳೆದು, ಹಿಟ್ಟಿನ ಬಳಪದ-ಕಲ್ಲನ್ನು ತೆಗೆದುಕೊಂಡು ಬರೆಯುತಿದ್ದರು. ಈಗ ಅದಕ್ಕೆ ಬದುಲಾಗಿ ಹೊತ್ತುಕೊಂಡು

ಹೋಗುವುದಕ್ಕೆ ಸುಲಭನಾಗಿಯೂ ವಿಶೇಷವಾಗಿ ಕಾಗದ ವೆಚ್ಚವಿಲ್ಲದೆ ಲೆಕ್ಕಮುಂತಾದವುಗಳು ಮಾಡುವುದಕ್ಕೆ ಅನುಕೂಲವಾಗಿಯೂ ಇದೆ ಇದಲ್ಲದೆ ಕೆಲವುದೇಶಗಳಲ್ಲಿ ಹೆಂಚಿನಂತೆ ಛಾವಣಿಯಮೇಲೆ ಹೊದ್ದಿಸುವುದಕ್ಕೂ ಕಲ್ಲುಹಲಿಗೆಯನ್ನು ಉಪಯೋಗಿಸುವರು.

ವಿದ್ಯಾಭ್ಯಾಸದ ಇಲಾಖೆ ರಿಪೋರ್ಟ್.

1892—93.

ಕನ್ನಡಸ್ಕೂಲ್‌ಗಳ ವಿಷಯದಲ್ಲಿ ಎಜ್ಯುಕೇಷ್ಣ ಸೆಕ್ರಟೆರಿಸಾಹೇಬರವರ ಅಭಿಪ್ರಾಯಗಳು.

ಕನ್ನಡಪ್ರೈಮರಿಸ್ಕೂಲುಗಳು.

ಕಡೂರುಡಿಸ್ಟ್ರಿಕ್ಟ.

ಚಿಕ್ಕಮಗಳೂರು ತಾ। ಸ್ಕೂಲಿನಲ್ಲಿ ೧೮೪ ಮಂದಿ ವಿದ್ಯಾರ್ಥಿಗಳಿದಾರೆ. ಇದು ಪ್ರೈಮರಿ ಸ್ಕೂಲಾಗಿದೆ. ಸಕ್ಕರೆಪಟ್ಟಣದ ಸ್ಕೂಲಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಕಮ್ಮಿಯಾದವು. ಆದಾಗ್ಯೂ ಇದರ ಅಭಿವೃದ್ಧಿಯು ಸುಮಾರಾಗಿ ಒಳ್ಳೆಸ್ಥಿತಿಯಲ್ಲಿದೆ. ಅಜಂಪುರ ಮತ್ತು ಬಸವನಹಳ್ಳಿ ಸ್ಕೂಲುಗಳ ಅಭಿವೃದ್ಧಿಯು ತೃಪ್ತಿಕರನಾಗಿದೆ. ಈ ವರುಷದಲ್ಲಿ ೫ ಹೋ। ಸ್ಕೂಲುಗಳು ಈ ಡಿಸ್ಟ್ರಿಕ್‌ನಲ್ಲಿ ಕಮ್ಮಿಯಾದವು. ವಿದ್ಯಾರ್ಥಿಗಳ ಸಂಖ್ಯೆಯು ೫೦ ಕ್ಕೆ ಮಿಾರಿದ ಹೋ। ಸ್ಕೂಲುಗಳು ಹುಲಿಕೆರೆ, ಕೂಡೂರು, ಸಿಡಘಟ್ಟ, ಯಗಟಿ, ಯಲ್ಲಂಬಲಸೆ ಮತ್ತು ಸಿವನೆ.

ಹಾಸನ ಡಿಸ್ಟ್ರಿಕ್ಟ.

ಬಾಗೂರು, ಬೇಲೂರುಸೇಂಟೆ ತಾ। ಬ್ರಾಂಚ್ ಸ್ಕೂಲುಗಳು ಸುಮಾರಾಗಿ ಒಳ್ಳೇಸ್ಥಿತಿಯಲ್ಲಿವೆ. ಈ ಡಿಸ್ಟ್ರಿಕ್‌ನಲ್ಲಿ ೫ ಹೋ। ಸ್ಕೂಲುಗಳು ಕಮ್ಮಿಯಾದವು. ವಿದ್ಯಾರ್ಥಿಗಳ ಸಂಖ್ಯೆಯು ೫೦ ಕ್ಕೆ ಮಿಾರಿದ ಸ್ಕೂಲುಗಳು ಶ್ರವಣಬಳಗುಳ, ಬಸವಾಪಟ್ಣ, ಸಾಲಿಗ್ರಾಮ, ಕೇರಳಾಪುರ, ಆಲೂರು, ಕೋಣನೂರು, ನುಗ್ಗೇಹಳ್ಳಿ, ಹಾರನಹಳ್ಳಿ, ತಗರೆ, ಗೋರೂರು, ಹಿರಿಸಾವೆ, ಮತ್ತು ಹಳೇಬೀಡು, ಸೆಟ್ಟಳ್ಳಿ ದ್ರವ್ಯಸಹಾಯದ ಸ್ಕೂಲು ಸುಮಾರಾಗಿ ಒಳ್ಳೆಸ್ಥಿತಿಯಲ್ಲಿವೆ.

ಮೈಸೂರು ಡಿಸ್ಟ್ರಿಕ್ಟ.

ಮೈಸೂರು ಮಂಡಿ ಸ್ಕೂಲುನಲ್ಲಿ ೭೧ ಮಂದಿ ವಿದ್ಯಾರ್ಥಿಗಳಿದಾರೆ, ನಜರಬಾದ್ ಸ್ಕೂಲುನಲ್ಲಿ ೭೯ ಮಂದಿ ವಿದ್ಯಾರ್ಥಿಗಳಿದಾರೆ. ಇವೆರಡರ ಅಭಿವೃದ್ಧಿಯು

ತೃಪ್ತಿಕರವಾಗಿಲ್ಲ. ಕ್ಯಾತನಹಳ್ಳಿ ಸ್ಕೂಲುನಲ್ಲಿ ೯೦ ಮಂದಿ ವಿದ್ಯಾರ್ಥಿಗಳಿದಾರೆ. ಇವರ ಅಭಿವೃದ್ಧಿಯು ಒಳ್ಳೆಸ್ಥಿತಿಯಲ್ಲಿರುತ್ತದೆ. ಗಂಜಾಂ ಶುಕ್ರವಾರಪೇಟೆಸ್ಕೂಲುನಲ್ಲಿ ೬೧ ಮಂದಿ ವಿದ್ಯಾರ್ಥಿಗಳಿದಾರೆ. ಮದ್ದೂರು ಸ್ಕೂಲುನಲ್ಲಿ ೪೫ ಮಂದಿ ವಿದ್ಯಾರ್ಥಿಗಳಿದಾರೆ. ಇವೆರಡರ ಅಭಿವೃದ್ಧಿಯು ಸುಮಾರಾಗಿ ಒಳ್ಳೆಸ್ಥಿತಿಯಲ್ಲಿದೆ. ಶ್ರೀರಂಗಪಟ್ಟಣದ ತಾ। ಬಾಬೂರಾಯನಕೊಪ್ಪಲು, ಕೃಷ್ಣರಾಜಪೇಟೆ ತಾ। ಹಿರೀಕಳಲೆ ಇವೆರಡುಸ್ಥಳದ ಸ್ಕೂಲುಗಳ ಸ್ಥಿತಿಯು ತೃಪ್ತಿಕರವಾಗಿದೆ. ಗಂಜಾಂನಲ್ಲಿ ಒಳ್ಳೆ ಕೊಯ್ಯುವ ಬೀದಿ ಬಾ।ಂಚ್ ಸ್ಕೂಲು, ಮಂಡ್ಯದ ತಾಲ್ಲೂಕು ಹೊಸಕೆರೆ ಸ್ಕೂಲು ಹೀನಸ್ಥಿತಿಯಲ್ಲಿವೆ. ಮಳವಳ್ಳಿಪೇಟೆ ಬಾ।ಂಚ್ ಸ್ಕೂಲುನಲ್ಲಿ ೧೦೧ ಮಂದಿ ವಿದ್ಯಾರ್ಥಿಗಳಿದಾರೆ. ಇದರ ಅಭಿವೃದ್ಧಿಯು ತೃಪ್ತಿಕರವಾಗಿದೆ. ಹೆಗ್ಗಡದೇವನಕೋಟೆ ಸ್ಕೂಲುನಲ್ಲಿ ೪೫ ಮಂದಿ ವಿದ್ಯಾರ್ಥಿಗಳಿದಾರೆ. ಇದರ ಅಭಿವೃದ್ಧಿಯು ಕೆಟ್ಟರುತ್ತೆ. ತಿರುಮಲಕೂಡ್ಲು ಬಾ।ಂಚ್ ಸ್ಕೂಲುನಲ್ಲಿ ೨೪ ಮಂದಿ ವಿದ್ಯಾರ್ಥಿಗಳಿದಾರೆ. ಇದರ ಅಭಿವೃದ್ಧಿಯು ತೃಪ್ತಿಕರವಾಗಿದೆ. ಚಿಕ್ಕಯ್ಯನಛತ್ರದ ಸ್ಕೂಲು ತೃಪ್ತಿಕರವಾಗಿಲ್ಲ. ಚಾಮಲಾಪುರದ ಬಾ।ಂಚ್ ಸ್ಕೂಲು ೧೯೯೬ ನೇ ಇಸವಿ ಡಿಶಂಬರು ತಿಂಗಳಲ್ಲಿ ಸಾಸಿಸಲ್ಪಟ್ಟಿತು. ಈ ಡಿಸ್ಟ್ರಿಕ್ಟ್‌ನಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ೫೦ ಕ್ಕೆ ವಿಾರಿ ಹೋ। ಸ್ಕೂಲುಗಳು ೩೧. ಮೇಲುಕೋಟೆ ಹೋ। ಸ್ಕೂಲು ೨೧೩ ಮಂ ವಿದ್ಯಾರ್ಥಿಗಳುಳ್ಳದ್ದಾಗಿಯೂ, ಅಭಿವೃದ್ಧಿಸ್ಥಿತಿಯಲ್ಲಿದೆ. ನೆಲಮನೆ, ಕಿಕ್ಕೇರಿ, ಸಾಗ್ರಾಮ, ಸೆರಿಯಾಪಟ್ಣ, ಬೆಟ್ಟದಪುರದ ಸ್ಕೂಲುಗಳು ಸುಮಾರಾಗಿ ಒಳ್ಳೆಸ್ಥಿತಿಯಲ್ಲಿವೆ. ದುದ್ದ, ಗುತ್ತಲು, ಹೊಸ ಅಗ್ರಹಾರ, ಹೊಸಬನೂರು ಸ್ಕೂಲುಗಳು ಒಳ್ಳೆಸ್ಥಿತಿಯಲ್ಲಿವೆ. ಭೇರ್ಯದ ಸ್ಕೂಲು ತೃಪ್ತಿಕರವಾಗಿಲ್ಲ. ಪೂರ್ಗಾಲಿ, ಶ್ರೀರಂಗರಾಜಪುರದ ಸ್ಕೂಲುಗಳು ಉತ್ತಮಸ್ಥಿತಿಯಲ್ಲಿವೆ ತಲಕಾಡು, ಚಿಕ್ಕಅರಸಿಕೆರೆ, ಹೊಂಗನೂರು, ಕೊತ್ತಳವಾಡಿ, ಸೋಮಹಳ್ಳಿ, ಸೋಮೇಶ್ವರಹುಂಡಿ, ವೀರಗೂಡು ಸ್ಕೂಲುಗಳು ಕೆಟ್ಟವೆ. ಹೋಬಳಿ ಸ್ಕೂಲುಗಳಲ್ಲಿ, ಹುಣಸೂರು ತಾ। ಕಲ್‌ಕೊಣನೂರು, ಕೃಷ್ಣರಾಜಪೇಟೆ ತಾ। ಸೊಳ್ಳೇಪುರ, ನಾಗಮಂಗಲ ತಾ। ಜವರನಹಳ್ಳಿ, ಮಂಡ್ಯದ ತಾ। ಉಮ್ಮಡಹಳ್ಳಿ ಸ್ಕೂಲುಗಳು ಒಳ್ಳೆಸ್ಥಿತಿಯಲ್ಲಿವೆ. ಮೈಸೂರು ಹೋ। ಅಗ್ರಹಾರದ ವೆಸ್ಲಿಯನ್ ಮಿಷ್ ಕನ್ನಡಸ್ಕೂಲು, ಕೋಟೆ ಬಾಲಬೋಧಿನಿ ಪಾಠಶಾಲೆ ಸುಮಾರಾಗಿ ಒಳ್ಳೆ ಸ್ಥಿತಿಯಲ್ಲವೆ. ಸೇಂಟ್ ಜೋಸಫ್ ತಮಿಳು ಹುಡುಗರ ಸ್ಕೂಲು ಅಭಿವೃದ್ಧಿಯು ತೃಪ್ತಿಕರವಾಗಿಲ್ಲ.

ನೈಟ್‌ಸ್ಕೂಲುಗಳು.

ತಾಲ್ಲೂಕಿನಲ್ಲಿರುವ ವ್ಯವಸಾಯದ ನೈಟ್ ಸ್ಕೂಲುನಲ್ಲಿ ೩೦ ಮಂದಿ ವಿದ್ಯಾರ್ಥಿಗಳಿದ್ದಾರೆ ಇವರಲ್ಲರು ಕೂಲಿಯಿಂದ ಜೀವಿಸುವವರಾಗಿದ್ದಾರೆ. ಇದು ಅಭಿವೃದ್ಧಿಸ್ಥಿತಿಯಲ್ಲಿದೆ. ಕಬ್ಬಳಗಪ್ಪ ತಾ. ಅನೂರು-ಹೋಬಳಿ ಸ್ಕೂಲು ಮ್ಯಾನೇಜರು ಒಂದು ನೈಟ್‌ಸ್ಕೂಲು ಏರ್ಪಡಿಸಿದ್ದಾರೆ. ಇದಕ್ಕೆ ಇವರು (ಹಗಲು ೭ ಘಂಟೆಯಿಂದ ೧೧ ಘಂಟೆವರಿಗೆ ಬಾಲಕ ವಿದ್ಯಾರ್ಥಿಗಳಿಗೆ ಪಾಠಹೇಳಿ) ರಾತ್ರಿವೇಳೆ ಸ್ವಲ್ಪ ವಯಸ್ಸಾದವರಿಗೆ ಎರಡು ಘಂಟೆಕಾಲ ಪಾಠ ಹೇಳುತ್ತಾರೆ. ಮೈಸೂರು ದೊಡ್ಡಪ್ಯಾಟೆ ನೈಟ್‌ಸ್ಕೂಲುನಲ್ಲಿ ೧೮೪ ಮಂದಿ ವಿದ್ಯಾರ್ಥಿಗಳಿದ್ದಾರೆ. ಈ ಪೈಕಿ ೫೦ ಮಂದಿ ಮಹಮ್ಮದಿ ಮತಸ್ಥರಾಗಿಯೂ, ಇದ್ದಾರೆ. ಇವರ ಅಭಿವೃದ್ಧಿಯು ತೃಪ್ತಿಕರವಾಗಿದೆ. ಈ ಸ್ಕೂಲಿನ ಅನುಕೂಲವನ್ನು ಕೂಲಿನಾಲಿಮಾಡುವವರು ತಿಳಿದು ಗುಂಪು ಗುಂಪಾಗಿ ಬರಲು ೧೮೯೩ ನೇ ಇಸವಿ ಫಿಬ್ರವರಿ ತಿಂಗಳಲ್ಲಿ ಮಂಡಿಮೊಹಲ್ಲೆಯಲ್ಲಿ ಒಂದು ಬಾ್ರಂಚ್ ನೈಟ್‌ಸ್ಕೂಲನ್ನು ಏರ್ಪಡಿಸುವುದು ಅವಶ್ಯಕವಾಗಿಬಂತು. ಈಗ ಮಂಡಿ ಬಾ್ರಂಚ್ ಸ್ಕೂಲುನಲ್ಲಿ ೪೪ ಮಂದಿ ವಿದ್ಯಾರ್ಥಿಗಳಿದ್ದಾರೆ ಈ ಪೈಕಿ ೧೯ ಮಂದಿ ಮಹಮ್ಮದೀಯರಾಗಿಯೂ, ೩೭ ಮಂದಿ ಶೂದ್ರರಾಗಿಯೂ ಇದ್ದಾರೆ. ದೊಡ್ಡಪೇಟೆ ನೈಟ್‌ಸ್ಕೂಲುನಲ್ಲಿಯೂ ಮತ್ತು ಇದರ ಬಾ್ರಂಚ್ ಸ್ಕೂಲುನಲ್ಲಿಯೂ ಕೂಡ ೩೬ ಮಂದಿ ವಾ್ಯಪಾರಸ್ಥರಾಗಿಯೂ, ೪೫ ಮಂದಿ ಕೈಗಾರಿಕೆಯವರಾಗಿಯೂ ೩೦ ಮಂದಿ ಕೂಲಿಯವರಾಗಿಯೂ, ೧೦ ಮಂದಿ ಅಗಸರಾಗಿಯೂ, ೪ ಮಂದಿ ಬೈರಾಗಿ ಇಲ್ಲವೆ ಸನ್ಯಾಸಿ ಮತಸ್ಥರಾಗಿಯೂ ಇದ್ದಾರೆ. ಮೇಲುಕೋಟೆ ನೈಟ್ ಸ್ಕೂಲುನಲ್ಲಿ ೪೦ ಮಂದಿ ವಿದ್ಯಾರ್ಥಿಗಳಿದ್ದಾರೆ. ಇವರೆಲ್ಲರೂ ಶೂದ್ರರಾಗಿದ್ದಾರೆ. ಇದರ ಅಭಿವೃದ್ಧಿಯು ಒಳ್ಳೆಸ್ಥಿತಿಯಲ್ಲಿದೆ. ಆದರೆ ಹೋದವರುಷಕ್ಕಿಂತಲೂ ಈವರುಷದಲ್ಲಿ ವಿದ್ಯಾರ್ಥಿಗಳಸಂಖ್ಯೆಯು ಕವಿ್ಮಯಾಗಿದೆ. ಮೀರಲೆ ನೈಟ್‌ಸ್ಕೂಲುನಲ್ಲಿ ೭೦ಮಂದಿ ವಿದ್ಯಾರ್ಥಿಗಳಿದ್ದಾರೆ. ಇವರೆಲ್ಲರು ಶೂದ್ರರಾಗಿದ್ದಾರೆ. ಸ್ಕೂಲು ಸುಮಾರಾಗಿ ಒಳ್ಳೆ ಸ್ಥಿತಿಯಲ್ಲಿದೆ. ನಂಜನಗೂಡಿನಲ್ಲಿರುವ ವ್ಯವಸಾಯದ ನೈಟ್‌ಸ್ಕೂಲು ೧೮೯೩ನೇ ಇಸವಿ ಸೆಪ್ಟಂಬರ್ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು. ಇದರಲ್ಲಿ ೪೩ ಮಂದಿ ವಿದ್ಯಾರ್ಥಿಗಳಿದ್ದಾರೆ. ತುಮಕೂರು, ಚಿತ್ರದುರ್ಗ, ಕಡೂರು, ಹಾಸನಜಿಲ್ಲಾಕ್ಕೇಂದ್ರಗಳಲ್ಲಿ ನೈಟ್‌ಸ್ಕೂಲುಗಳೇ ಇಲ್ಲ. ಆದರೆ ಕೆಲವು ಹೋಬಳಿ ಸ್ಕೂಲುಮ್ಯಾಸ್ಟರ್‌ಗಳು ನೈಟ್ ಸ್ಕೂಲುಗಳನ್ನು ಏರ್ಪಡಿಸುವುದರಲ್ಲಿ ಅಪೇಕ್ಷಿಸುತ್ತಾರೆ. ನೈಟ್‌ಸ್ಕೂಲುಗಳನ್ನು ಏರ್ಪಡಿಸುವ ವಿಷಯದಲ್ಲಿ ಗೌರ್ನಮೆಂಟಿನವರ ಆಲೋಚನೆಯಲ್ಲಿದೆ. ಹಿಂದಿನ ಜಾನೆ ಷುಮಾರಿ ಲೆಕ್ಕದಪ್ರಕಾರ ಶೇಕಡಾ ೪೫.೪ ಮಂದಿ ಅವಿದ್ಯಾವಂತರಾಗಿದ್ದಾರೆ. ಈ ಕೊರತೆಯನ್ನು ಕಮ್ಮಿಮಾಡುವುದಕ್ಕೆ ನೈಟ್‌ಸ್ಕೂಲುಗಳು ಹೋಬಳಿ ಸ್ಕೂಲುಗಳಷ್ಟು ಅವಶ್ಯಕನಾಗಿರುತ್ತವೆ.

ಮೈಸೂರು ಗೌರ್ನಮೆಂಟ್ ನಾರ್ಮಲ್ ಸ್ಕೂಲ್

ಲೋವರ್ ಸೆಕೆಂಡರಿ ತರಗತಿ.

ಕನ್ನಡ ಕಾವ್ಯ—ವ್ಯಾಕರಣ—ಕಾಲ ೩ ಘಂಟೆ.

I. ಈ ಪದ್ಯದ ಅರ್ಥವನ್ನು ವಾಕ್ಯರೂಪವಾಗಿ ಬರೆಯಿರಿ :—

(*a*) ಬರೆದವನಿತ್ತಮಾವವನಘಾಲದೊಳಾಸರಸೀರುಹೋದ್ಭವಂ। ದೊರೆ
ವುದನಿತ್ತೆಯೂಷುತದೊಳಂ ಪಿರಿದೈದದುಮೇರುವೆಲ್ಲಿಯುಂ ॥ ಎಲೆಯ
ದಿರಾಧ್ಯರಂ ಬರಿದೆದೈನ್ಯದೆ ಧೈರ್ಯವತಾಳು ಕೂಪದೊಳ್। ಕರಗಮಿ
ನಿತ್ತು ನೀರನೊಳಕೊಂಬುದನಿತ್ತನಿವಾರ್ಧಿಯಲ್ಲಿಯುಂ ॥

(*b*) ಒಡನೊಂದಿದೊರ್ಗಲವಿಂಗೆ ಪಾಲಿನಳಲಂನೋಡುತ್ತೆನೀರಗ್ನಿಯೊಳ್।
ಕಿಡೆತನ್ನೀರದಳಲ್ಗಣಂಕಡಿಯುತಂಪಾಲಗ್ನಿಯೊಳ್ಬೇಳಲಾಂ। ತೊಡ
ನೀರಂಕುಡಿಕೂಡೆ ಸೈರಣೆಯತಾಂತಾಳ್ದತ್ತು ಪಾಲಿಂತುಸಂ। ಗಡಿಸಿ
ಕ್ಕುಂಗಡಸಾಧುಮೈತ್ರಿಯಿನಿತುಂಪೇಳ್ವರ್ನಯಜ್ಞರ್ವಲಂ ॥

II. ಈ ಪದ್ಯವನ್ನು ಪೂರ್ತಿಯಾಗಿ ಬರೆಯಿರಿ :—

(*a*) ... ... ನೃಪತಿದುರ್ನಯದಿಂದತಿಲಾಲನಂಗಳಿಂ। ... ...
ಯಧರ್ಮದಿನೀಳೆ ... ... ॥ ಕುತನಯನಿಂಕುಲಂಮಡಿರದಿಂಮತಿ
... ... । ... ... ನನಾದರದಿಂಕೆಳೆನಾಶಮೈದುಗುಂ॥

(*b*) ಕವಿಯು ದುರ್ಜನರ ಸ್ನೇಹವನ್ನು (ಮುಂಬಗಲ್ ನೆಳಲಿನಪೊಳ್ಕೆಯಿಂದೆ) ಎಂಬುದಾಗಿ ವರ್ಣಿಸಿರುವ ಪದ್ಯದ ಉತ್ತರಾರ್ಧವನ್ನು ಬರೆಯಿರಿ.

II. ಈ ವಾಕ್ಯಗಳು ಯಾವಸಂದರ್ಭದಲ್ಲಿ ಹೇಳಲ್ಪಟ್ಟಿವೆ? ಮತ್ತು ಇವುಗಳ ತಾತ್ಪರ್ಯವೇನು?—

(1) ಆಸಲಲಮೆಕಾವಕರ್ಬುನೆದಮೇಲುರುಳಲ್ ಪೆಸರುಂಮಸಳ್ಗುಂ (2) ಮಣಿದಪರಾರ್ಚಿಸಲ್ಕಿಳೆಯೊಳುನ್ನತಿಯುಂ। ಚಿತ್ರಚರಿತ್ರವುತ್ತಮ ; (3) ಭುವಿಯೊಳಿನ್ನಿದ್ರಜೊರ್ಮ್ಮೆಯೊರ್ಮ್ಮೆಮಣಿಪರ್ಯಂಕಾಗ್ರದೋಳ್.

IV. (*a*) ಕೆಳಗಣ ಶಬ್ದಗಳ ಅರ್ಥವನ್ನು ಬರೆಯಿರಿ:—ಬಿಸಂ, ಏಸಿರ್, ತೊಡವು, ತರಿಸದು, ಮುಂಬಗಲ್, ಅಣಲ್, ತಣಿರ, ಧೀರರಂ, ಪಿಶುನ, ಸುಮನಸುಚ್ಚು, ಕುಲ್ಯಂ, ಒಲ್ವಾಟಿ, ಕೈತವರ್, ಡರ್, ಓಮೆ ಧಿರಮಣಂ.

(*b*) ಈ ಸಮಾಸ ಶಬ್ದಗಳ ಸಮಾಸದ ಹೆಸರನ್ನು ಹೇಳಿ:—ಈ ಶಿರ

ಸ್ಥಿತಂ, ಜರಾಮೃತಿಭಯ ವಿರಹಿತಂ, ವಾಗ್ಭೂಷಣಂ, ಸಮಸ್ತ ವಿದ್ಯಾನಿಪುಣಂ, ಸರಿಪಿಂಗಿದ, ಮಹಾಮುದಂ.

(*c*) ಈ ಪದಗಳ ಪದವಿಭಾಗವನ್ನುಮಾಡಿ ಸಂಧಿಗಳ ಹೆಸರನ್ನು ಹೇಳಿ-ಮಾನೋನ್ನತ, ಶರನ್ನದಿ, ಸಜ್ಜನರ್, ಎಡರೆನಿತಡಸಿದೊಡಂ, ಮುದವಳಿದಾನೆ, ಬಿಡದಮಮೋಕ್ಷಯಂ.

V. (*a*) ಐವತ್ತೆರಡಕ್ಷರಗಳಲ್ಲಿ—ಕನ್ನಡಮಾತುಗಳಲ್ಲಮಾತ್ರ ಪ್ರಯೋಗಿಸ ಲ್ಪಡುವ ಅಕ್ಷರಗಳು ಯಾವುವು? ಸಂಸ್ಕೃತದಲ್ಲಿಮಾತ್ರ ಪ್ರಯೋ ಗಿಸಲ್ಪಡುವ ಅಕ್ಷರಗಳು ಯಾವವು? (*b*) ಯ, ವ, ರ, ಲ, ಂ, ಃ, ಏ, ಓ, ಈ ಅಕ್ಷರಗಳು ಹುಟ್ಟುವ ಸ್ಥಾನಗಳನ್ನೂ ಅವರಿಂದಹೊಂ ದಿದ ಹೆಸರುಗಳನ್ನೂ ಹೇಳಿ. (*c*) ಸಂಧಿಯಂದರೇನು? ಕನ್ನಡ ದಲ್ಲಿ ಬರುವ ಸಂಧಿಕಾರ್ಯಗಳು ಯಾವವು? ವಿವರಿಸಿ; ಒಂದೊಂದ ಉದಾಹರಣೆಯನ್ನು ಕೊಡಿ. (*d*) ಜನ್ಮಾನ್ತರ, ದಿಙ್ನಾಗ, ಮನ್ವಂತರ, ಪ್ರಾತಃಕಾಲ, ಈ ಪದಗಳಲ್ಲಿರುವ ಸಂಧಿಕಾರ್ಯಗಳನ್ನು ವಿವರಿಸಿ, ಹೆಸರನ್ನು ಹೇಳಿ.

VI. (*a*) ಸುಬಂತಪ್ರಕೃತಿಗಳೆಷ್ಟುವಿಧ? ಒಂದೊಂದಕ್ಕೆ ಒಂದೊಂದು ಉದಾ ಹರಣೆಯನ್ನು ಕೊಡಿ. (*b*) ನಾಮವಾಚಕವು ಎಷ್ಟುವಿಧವು? ದೇಶ, ಕಾಲ, ಕುಂಟ, ಕುರುಡ, ರಾಮ, ಕೃಷ್ಣ, ಈ ಶಬ್ದಗಳು ಯಾವನಾಮಗಳು? (*c*) ದೊಡ್ಡದು, ಒಂದು, ಈ ಶಬ್ದಗಳಿಗೆ ಪುಲ್ಲಿಂಗೈಕವಚನದಲ್ಲಿ ಪ್ರಥಮೆ, ತೃತೀಯೆ, ಸಪ್ತಮಿಯಾವಿಭಕ್ತಿರೂಪ ಗಳನ್ನು ಬರೆಯಿರಿ.

VII. (*a*) ಅಕ್ಕುಂ, ಕೊಟ್ಟಂ, ಮಂದಿಪೆಂ, ಇಕ್ಕುರ್ಗಂ, ಈ ಕ್ರಿಯಾಪದಗಳ ಧಾತುಗಳು ಯಾವವು? (*b*) ಧಾತುವಿಂದರೇನು? ಧಾತುಗಳಮೇಲೆ ಎಷ್ಟುವಿಧ ಪ್ರತ್ಯಯಗಳು ಸೇರುವವು? (*c*) ಕಾಣು ಧಾತುವಿಗೆ ಉತ್ತಮಪುರುಷೈಕವಚನದಲ್ಲಿ ಭೂತರೂಪವನ್ನೂ, ಎನ್ನುಧಾತು ವಿಗೆ ಪ್ರಥಮಪುರುಷ ಬಹುವಚನದಲ್ಲಿ ನಿಷೇಧಕ್ರಿಯಾರೂಪವನ್ನು ಬರೆಯಿರಿ. (*d*) ಈ ಧಾತುಗಳಭಾವ ಕೃದಂತರೂಪಗಳನ್ನು ಬರೆ ಯಿರಿ.—ಮಾಡು, ಕೊಡು, ಮರೆ, ಮೇ, ಓಡು.

VIII. (*a*) ವಂತ, ಇಗ, ಅಲ, ಕಾರ, ಈ ತದ್ಧಿತಪ್ರತ್ಯಯಗಳು ಯಾವ ಅರ್ಥ ದಲ್ಲಿ ಬರುತ್ತೆ? ನಾಮವಾಚಕಗಳಮೇಲೆ ಸೇರಿಸಿ ಬರೆಯಿರಿ.

(*b*) ಆಣೆ, ನೊಗ, ಚಾರಿ, ಬಂಜೆ, ಈ ಶಬ್ದಗಳ ತತ್ಸಮರೂಪವನ್ನು ಬರೆಯಿರಿ.

IX. (*a*) ಪಾಂಡವರು ವಿರಾಟರಾಯನ ಪಟ್ಟಣಕ್ಕೆ ಯಾತಕ್ಕೆ ಹೋದರು? ಅವರು ಯಾವರೀತಿಯಲ್ಲ ಅಲ್ಲಿದ್ದರು? ಅದನ್ನು ಸಂಕ್ಷೇಪವಾಗಿ ವಿವರಿಸಿ.

(*b*) ಕೀಚಕನು ಯಾರು? ಯಾರಿಂದ ಹತನಾದನು? ಕಾರಣವೇನು? ಸಂಕ್ಷೇಪವಾಗಿ ೧೦ ಪಜ್ಜಿಗೆವಿಾರದಂತೆ ಬರೆಯಿರಿ.

ಸೂಚನೆಗಳು ಮತ್ತು ಸಮಾಚಾರಗಳು.

ಧಾರವಾಡದ ಟ್ರೇನಿಂಗ್ ಕಾಲೀಜಿನ ರೈಟರ್ ಮಾ॥ ಹಾಲಕಟ್ಟಿಯವರಿಂದ ರಚಿಸಲ್ಪಟ್ಟಿರುವ ಸಿಕಂದರನಚರಿತ್ರೆಯನ್ನು ಬಹುಮಾನ ಪುಸ್ತಕವಾಗಿ ಕೊಡಬಹುದೆಂದು ವಿದ್ಯಾಭ್ಯಾಸದ ಇಲಾಖೆ ಸೆಕ್ರಟರಿಯವರು ಅಪ್ಪಣೆ ಕೊಟ್ಟಿರುತ್ತಾರೆ.

ಕಳೆದ ಸೆಪ್ಟಂಬರ್ ೨೧ ನೇ ತಾ। ಪಾ॥ತೀಕಾಲ ಚಿಕ್ಕಬಳ್ಳಾಪುರದ ಇಂಗ್ಲಿಷ್ ಹೈಸ್ಕೂಲು ಕಟ್ಟಡದಲ್ಲಿ ಇಂಗ್ಲಿಷ್ ಹೈಸ್ಕೂಲು, ಕನ್ನಡಸ್ಕೂಲು, ಹಿಂದೂ ಸ್ತಾನಿ ಸ್ಕೂಲು, ಕಂದವರದ ತಾಲ್ಲೂಕು ಬಾ॥ಂಚ್ ಕನ್ನಡಸ್ಕೂಲು—ಈ ಸ್ಕೂಲುಗಳ ವಿದ್ಯಾರ್ಥಿಗಳಿಗೆ ಬಹುಮಾನವನ್ನು ಕೊಡುವುದಕ್ಕಾಗಿ ಒಂದು ಸಭೆಯು ಏರ್ಪಟ್ಟಿತು. ಸಬ್‌ಡಿವಿಜ್ ಆಫೀಸರಾದ ಮಾ॥ ರಾ॥ ಎ. ಕೃಷ್ಣಸ್ವಾಮಿಐಯ್ಯಂಗಾರ್ ಬಿ. ಎ ಯವರು ಅಗ್ರಾಸನವನ್ನು ವಹಿಸಿದ್ದರು. ಮಾ॥ ರಾ॥ ಡಿಪಟಿ ಇನ್‌ಸ್ಪೆಕ್ಟರು ಡಿ. ಸುಬ್ಬಯ್ಯ ಬಿ. ಎ. ಮಾ॥ರಾ॥ ಮುನಸಿಪ್ ಬಿ. ಎಸ್. ಕೃಷ್ಣಸ್ವಾಮಿಐಯ್ಯಂಗಾರ್ ಬಿ ಎ. ಬಿ. ಎಲ್. ಮುಂತಾದ ದೊಡ್ಡಮನುಷ್ಯರು ಸಭೆಯನ್ನು ಅಲಂಕರಿಸಿದ್ದರು. ಆಯಾ ಪಾಠಶಾಲಾಧ್ಯಕ್ಷರು ೯೫—೯೮ ನೇ ಇಸವಿಯಲ್ಲಿ ತಮ್ಮ ತಮ್ಮ ಪಾಠಶಾಲೆಯಲ್ಲಿ ನಡೆದ ವಿದ್ಯಾಭಿವೃದ್ಧಿಯನ್ನು ಕುರಿತು ಉಪನ್ಯಾಸಮಾಡಿದರು. ಸಭಾಧ್ಯಕ್ಷರು ಪ್ರೋತ್ಸಾಹಕರವಾದ ಮಾತುಗಳನ್ನಾಡಿ ಸಭಿಕರಿಗೂ ವಿದ್ಯಾರ್ಥಿಗಳಿಗೂ ತುಂಬ ಸಂತೋಷವನ್ನುಂಟುಮಾಡಿದರು. ಶ್ರೀಚಾಮುಂಡೇಶ್ವರಿಸ್ತುತಿ, ಶ್ರೀಮನ್ಮಹಾರಾಜರವರ ಗುಣವರ್ಣನೆ ಮುಂತಾದ ಹಾಡುಗಳು ಹೇಳಲ್ಪಟ್ಟವು. ಮಧ್ಯಾಹ್ನದವೇಲೆ ವಿದ್ಯಾರ್ಥಿಗಳಿಗೆ ಆಟಗಳು, ಸಾಧಕಗಳು ಮುಂತಾದವು ಏರ್ಪಟ್ಟು ಕ್ರಮವಾಗಿ ನಡೆಸಲ್ಪಟ್ಟವು. ಇದಕ್ಕಾಗಿ ಡಿಪಟಿಕವಿಾಷನರು ಮಾ॥ ರಾ॥ ಮರದಯ್ಯನವರು, ಎಕ್ಸಿಕ್ಯೂಟಿವ್ ಇಂಜನಿಯರು ಮಾ॥ ರಾ॥ ಶ್ರೀನಿವಾಸಾಯರು ಮೊದಲಾಗಿ ೧೦೫ ರೂಪಾಯಿ ಚಂದಾ ಕೊಟ್ಟಿದ್ದರು. ಮುನಸಿಫ್ ಮಾ॥ ರಾ॥ ಕೃಷ್ಣಸ್ವಾಮಿಐಯ್ಯಂಗಾರ್ರು ಆಫೀಗಳ ವಿಷಯಗಳಲ್ಲಿ ಬಹು ಅಭಿಮಾನದಿಂದ ಸಹಾಯವಾಡಿದರು. ಹೈಸ್ಕೂಲು ಹೆಡ್ ಮ್ಯಾಸ್ಟರು ಮಾ॥ ರಾ॥ ಗೋಪಾಲರಾಯರು, ಕಂದವರದ ಹೆಡ್ ಮ್ಯಾಸ್ಟರು ಮಾ॥ ರಾ॥ ಭಾಷ್ಯಾಜಾರ್ರು ಮುಂತಾದರು ಅತ್ಯಂತ ಆಸಕ್ತಿಯಿಂದ

ವಿದ್ಯಾಭಿವೃದ್ಧಿ ಮಾಡುತ್ತಿರುವುದನ್ನು ಕೇಳಿ ಬಹಳ ಸಂತೋಷಪಡಬೇಕಾಗಿದೆ.

ಶ್ರೀಮತ್ಮಹಾರಾಣಿಯವರ ಬಾಲಿಕಾ ಪಾಠಶಾಲೆಯ ಉಪಾಧ್ಯಕ್ಷರಾದ ಮಿಸ್ ಕೆವಿಂದಿನ ಕಸ್ತಗಿರಿ ಬಿ. ಎ. ಯವರು ಒಂದು ವರ್ಷ ರಜಾ ತೆಗೆದುಕೊಂಡ ದ್ದರಿಂದ ಇವರ ಬದಲಿ ಮಿಸ್ ಫ್ರೋಸಾಲ್ ಬಿ. ಎ. ಎಂಬವರು ನಿಯಮಿಸಲ್ಪಟ್ಟ ದಾರೆ. ಹಿಂದೂಜನರಲ್ಲಿ ವಿದ್ಯಾವತಿಯರಾದ ಸ್ತ್ರೀಯರು ಈಚೆಗೆ ಅಧಿಕವಾಗುತ್ತಿರುವು ದಕ್ಕೆ ಸಂತೋಷಿಸಬೇಕು.

ಬೀರೂರು ಕನ್ನಡಸ್ಕೂಲ್ ಮ್ಯಾಸ್ಟರು ಮಾ॥ ರಾ॥ ಕೃಷ್ಣಯ್ಯನವರಿಗೆ ಒಂದುವರ್ಷ ಫರ್ಲೋರಜಾ ಕೊಡಲ್ಪಟ್ಟರ್ತೆ. ವವಹೊಗ್ಗೆ ಕಾಲೇಜಿನಲ್ಲಿ ಅ। ಮ್ಯಾಸ್ಟ ರಾಗಿದ್ದ ಮಾ॥ ರಾ॥ ಗಂಗಯ್ಯನವರು ಮೃತಪಟ್ಟರೆಂದು ಕೇಳಿ ತುಂಬಾ ವಿಷಾದಿಸು ತ್ತೇವೆ. ಇವರು ವಿದ್ಯಾಭ್ಯಾಸದ ಇಲಾಖೆಯಲ್ಲಿ ಬಹುಕಾಲದಿಂದ ಕೆಲಸಮಾಡುತ್ತಿ ದ್ದರು. ಮತ್ತು ಸಮರ್ಥರೆಂದು ಹೆಸರನ್ನುಪಡೆದಿದ್ದರು.

ಮಾ॥ ರಾ ॥ ರಘುನಾಥರಾಯರು ರಚಿಸಿರುವ ಕರ್ಣಾಟಕಬಾಷಾವ್ಯಾಕರ ಣೋಪನ್ಯಾಸಮಂಜರಿ ಮಾ॥ ರಾ॥ ಎಂ. ಬಿ. ಶ್ರೀನಿವಾಸಯ್ಯಂಗಾರ್ಯರು ರಚಿಸಿರುವ ಕರ್ಣಾಟಕ ವಾಚಕಬೋಧಿನಿ, ಲಾಯರ್ ಖುರೈಷಿಯರು ರಚಿಸಿರುವ ಡ್ರಿಲ್‌ಬುಕ್ ಎಂಬ ಪುಸ್ತಕಗಳು ನಮ್ಮಬಳಿಗೆ ಕಳುಹಿಸಲ್ಪಟ್ಟಿವೆ. ಇವುಗಳ ವಿಷಯವಾಗಿ ನಮ್ಮ ಅಭಿಪ್ರಾಯವನ್ನು ಮುಂದಿನ ಸಂಚಿಕೆಯಲ್ಲಿ ತಿಳಿಸುತ್ತೇವೆ.

• ತಾಲ್ಲೂಕು ಸ್ಕೂಲುಗಳ ಮ್ಯಾಸ್ಟರುಗಳಲ್ಲಿ ಕೆಲವ್ರ ವರ್ಗಾವರ್ಗಿಗಳು ಕೂಡ ಆಗುವಂತೆ ವರ್ತಮಾನವಿದೆ.

ಕಳೆದ ಸೆಪ್ಟಂಬರು ಮೊದಲನೆ ತಾ। ನಿಂದ ತಾಲ್ಲೂಕು ಸ್ಥಳಗಳಲ್ಲಿದ್ದ ಇಂಗ್ಲಿ ಷ್ ಮತ್ತು ಕನ್ನಡಸ್ಕೂಲುಗಳನ್ನು ಒಂದಾಗಿಸೇರಿಸಿ ಒಬ್ಬ ಹೆ। ಮ್ಯಾಸ್ಟರನ್ನು ನಿಯಮಿಸಿರುತ್ತಾರೆ.

ದೇವನಹಳ್ಳಿ ತಾಲ್ಲೂಕು ಬೂದಿಗೆರೆ ಹೋಬಳಿ ಮ್ಯಾಸ್ಟರಾಗಿದ್ದ ವೆಂಕಟ ಕೃಷ್ಣಯ್ಯನವರು ಮೃತಪಟ್ಟದ್ದರಿಂದ ಅವರ ಬದುಲಿ ಶಿವನಪುರದ ಹೋಬಳಿ ಮ್ಯಾ ಸ್ಟರು ರಾಮಾಚಾರ್ಯರು ನಿಯಮಿಸಲ್ಪಟ್ಟಿದಾರೆ.

ಚನ್ನರಾಯಪಟ್ಟಣದ ತಾಲ್ಲೂಕು ಬೈರಮಂಗಲದ ಹೋಬಳಿ ಸ್ಕೂಲು ಮ್ಯಾಸ್ಟರು ವೆಂಕಟಕೃಷ್ಣಯ್ಯನವರಿಗೆ ೧೦ ರೂ। ನಿಂದ ೧೨ ರೂಪಾಯಿಗೆ ಬಡತಿ ಯಾಗಿರುತ್ತೆ.

ಮೈಸೂರು ಗೌರನಮೆಂಟ್‌ನವರು ದಾರವಾಡದಲ್ಲಿ ಈ ತಿಂಗಳಲ್ಲಿ ನಡೆಯುವ ಕರ್ಣಾಟಕ ವಿದ್ಯಾವರ್ಧಕಸಂಘದ ಪರಿಕ್ಷೆಗೆ ವಿದ್ಯಾಭ್ಯಾಸದ ಇಲಾಖಾ ಸೆಕ್ರಟೇರಿಯ ವರ ಅಸಿಸ್ಟೆಂಟರಾದ ಮಾ॥ ರಾ॥ ಎಂ. ಶಾಮರಾವ್ ಎಂ. ಎ. ಯವರಿಗೆ ಪರಿಕ್ಷಕ ರಾಗಿ ಹೋಗಬೇಕೆಂದು ಅಪ್ಪಣೆ ಕೊಡಿಸಿರುತ್ತಾರೆ.

ಮೈಸೂರು ದೇಶೀಯ ಪರೀಕ್ಷೆಗಳು.

ಡಿಶಂಬರ್ ೧೯೨೮.

ಪರೀಕ್ಷೆ ಕರ್ತರ ಹೆಸರುಗಳು.

ಭಾಗಗಳು.	ಹೆಸರುಗಳು.
ಇಂಗ್ಲಿಷ್ (ನ್ಯಾಕರಣ ಮತ್ತು ಭಾಷೆ) ..	ಮೆ॥ ಸಿ. ಎಂ. ಲೆನರ್ಡ್, ಬಿ.ಎ. ಪ್ರಿಂಸಿಪಲ್ ಅಸಿಸ್ಟೆಂಟ್, ಸೆಂಟ್ರಲ್ ಕಾಲೇಜ್, ಬೆಂಗಳೂರು. ಮೆ॥ ಎ. ಇ. ಅಡಾಲ್‌ಫಸ್, ಬಿ. ಎ. ಪ್ರೊಫೆಸರ್, ಮಹಾರಾಜಾ ಕಾಲೀಜ್ ಮೈಸೂರು.
ಇಂಗ್ಲಿಷ್ ಬರವಣಿಗೆ ಮತ್ತು ಉಕ್ತನಾಕ್ಯಲೇಖನ ..	ಮೆ. ಎ. ಜಿ. ಕಿಂಗ್ ಬಿ.ಎ., ಹೆಡ್‌ಮಾಸ್ಟರ್ ಗೌರ್ನಮೆಂಟ್ ಕಾಲೀಜ್ ಶಿವಮೊಗ್ಗ.
ಕನ್ನಡ ಪರಿವರ್ತನ ಲೋವರ್ ಸೆಕೆಂಡರಿ ಪರೀಕ್ಷೆ ಮತ್ತು ಪಾಠಶಾಲೆ ಕ್ರಮ ಉಪಾಧ್ಯಾಯಪರೀಕ್ಷೆ ..	ಮ ॥ ರಾ ॥ ವೆಂಕಟರಾಮೈಯ್ಯ ಬಿ. ಎ. ಹೆಡ್‌ಮಾಸ್ಟರು, ಗೌರ್ನಮೆಂಟ್ ಸ್ಕೂಲ್, ತುಮಕೂರು.
ಗಣಿತ (ಇಂಗ್ಲಿಷ್ ವಿದ್ಯಾರ್ಥಿಗಳಿಗೆ) ಲೋವರ್ ಸೆಕೆಂಡರಿ ಪರೀಕ್ಷೆಗೆ ..	ಮ ॥ ರಾ॥ ಎಂ. ಟಿ. ನಾರಾಯ್ಯಂಗಾರ್, ಎಂ. ಎ., ಅಸಿಸ್ಟೆಂಟ್ ಮ್ಯಾಸ್ಟರ್ ಸೆಂಟ್ರಲ್ ಕಾಲೀಜ್, ಬೆಂಗಳೂರು.
ಲೇಖಾಗಣಿತ ಮತ್ತು ಬೀಜಗಣಿತ (ಇಂಗ್ಲಿಷ್ ವಿದ್ಯಾರ್ಥಿಗಳಿಗೆ) ಲೋವರ್ ಸೆಕೆಂಡರಿ ..	ಮ॥ ರಾ॥ ವೆಂಕಟಸಾಮಿನಾಯಿಡು: ಬಿ.ಎ., ಅಸಿಸ್ಟೆಂಟ್ ಮ್ಯಾಸ್ಟರ್ ಸೆಂಟ್ರಲ್ ಕಾಲೀಜ್, ಬೆಂಗಳೂರು.
ಕನ್ನಡ ಪಾಠಪುಸ್ತಕ (ಉಪಾಧ್ಯಾಯ ಪರೀಕ್ಷೆ)	ಮ ॥ ರಾ ॥ ಎಸ್. ಜಿ. ನರಸಿಂಹಾಚಾರ್ ಓರಿಯಂಟಲ್ ಪುಸ್ತಕದ ಭಂಡಾರ ಮೈಸೂರು.
ಕನ್ನಡ ವ್ಯಾಕರಣ (ಲೋವರ್ ಸೆಕೆಂಡರಿ ಪರೀಕ್ಷೆ)	

ಕನ್ನಡ ಸಾಹಪುಸ್ತಕ (ಲೋವರ್‌ಸೆಕೆಂಡರಿ ಪರೀಕ್ಷೆ) ಕನ್ನಡ ವ್ಯಾಕರಣ (ಉಸಾದ್ಯಾಯಪರೀಕ್ಷೆ)	..
ಕನ್ನಡ (ವಾಕ್ಯರಚನೆ) ಲೋವರ್‌ಸೆಕೆಂಡರಿ ಮತ್ತು ಉಸಾಧ್ಯಾಯ ಪರೀಕ್ಷೆಗಳಿಗೆ	..
ಕನ್ನಡ (ಬರವಣಿಗೆ ಮತ್ತು ಉಕ್ತವಾಕ್ಯಲೇಖನ) ಲೋವರ್‌ಸೆಕೆಂಡರಿ ಪರೀಕ್ಷೆ	..
ಹಿಂದೂಸ್ಥಾನಿ ಮತ್ತು ಫಾರಸಿ ವ್ಯಾಕರಣ, ಕಾವ್ಯ, (ವಾಕ್ಯರಚನೆ) (ಲೋವರ್ ಕೆಸೆಂಡರಿ ಮತ್ತು ಉಸಾದ್ಯಾಯಪರೀಕ್ಷೆಗಳು)	..
ಹಿಂದುಸ್ಥಾನಿ ಚರಿತ್ರೆ, ಭೂಗೋಳ, ಭೂಪಟಬರೆಯುವುದು ಮತ್ತು ಬಾಕಿ ಹಿಂದುಸ್ಥಾನಿ ಪ್ರಶ್ನಪತ್ರಗಳಿಗೆ	
ಸಂಸ್ಕೃತ—ಎಲ್ಲಾಪತ್ರಗಳಿಗೆ ಲೋವರ್ ಸೆಕೆಂಡರಿ ಪರೀಕ್ಷೆಗೆ	..
ತೆಲಗು— ಡಿಟೊ	..
ತಮಳು— ಡಿಟೊ	..
ಗಣಿತ (ಕನ್ನಡ ವಿದ್ಯಾರ್ಥಿಗಳಿಗೆ) ಲೋವರ್ ಸೆಕೆಂಡರಿ ಮತ್ತು ಉಸಾಧ್ಯಾಯಪರೀಕ್ಷೆಗಳು	..

ಮ ॥ ರಾ ॥ ಕೆ. ವೆಂಕಟಶಾಮ್ಯಿಯ್ಯ, ಬಿ. ಎ., ಅಸಿಸ್ಟೆಂಟ್ ಮ್ಯಾಸ್ಟರ್, ಮಹಾರಾಜಾ ಕಾಲೀಜ್ ಮೈಸೂರು.

ಮ ॥ ರಾ ॥ ಎಂ. ಬಿ. ಶ್ರೀನಿವಾಸ್ಯೆಯ್ಯಂಗಾರ್, ಬಿ.ಎ. ಹೆಡ್ಮಾಸ್ಟರ್ ಗೌರ್ನಮೆಂಟ್ ಹೈಸ್ಕೂಲ್, ಕೋಲಾರ್.

ಮೆ॥ ಎಂ. ಕ್ಲಾಪ್ಯಾಂ, ಮ್ಯಾನೇಜರ್, ಮೈಸೂರು ದೇಶೀಯಪರೀಕ್ಷೆ, ಬೆಂಗಳೂರು.

ಮೆ॥ಸೈದ್ ಮಹಮದ್, ಹಿಂದುಸ್ಥಾನಿ ಅಸಿಸ್ಟೆಂಟ್ ದೆಪ್ಯುಟಿ ಇನ್‌ಸ್ಪೆಕ್ಟರ್, ಪೂರ್ವದ ಸರ್ಕಲ್, ಬೆಂಗಳೂರು. ಮೆ॥ ಅಬ್ದುಲ್ ಹೆ ಮ್ಯಾನೇಜರ್ ಗವರ್ನಮೆಂಟ್ ಬುಕ್‌ಡಿಪೊ, ಬೆಂಗಳೂರು.

ಮೆ॥ ವ ಹಮದ್‌ಜಾ ಹಿಮುದೀನ್ ಮಕ್ಕೆ, ಬಿ.ಎ., ಸುಲ್ತಾನ್‌ಪೇಟೆ, ಬೆಂಗಳೂರು.

ಮೆ॥ರಾ॥ ಲಕ್ಷ್ಮೀಪತೈಯ್ಯ, ಬಿ.ಎ., ಹೆಡ್ಮಾಸ್ಟರ್, ಸಿಟಿ ಮ್ಯುನಿಸಿಪಲ್ ಇಂಗ್ಲಿಷ್ ಸ್ಕೂಲ್, ಬೆಂಗಳೂರು.

ಮ ॥ ರಾ ॥ ಮಹದೇವಶಾಸ್ತ್ರಿ, ಬಿ. ಎ., ಕ್ಯೂರೇಟರ್, ಓರಿಯಂಟಲ್ ಪುಸ್ತಕ ಭಂಡಾರ, ಮೈಸೂರು.

ಮ ॥ ರಾ ॥ ಎಸ್. ಕೃಷ್ಣಶಾಮ್ಯಿಯ್ಯಂಗಾರ್, ಬಿ.ಎ., ಲಕ್ಷ್ಮಣಪೊದರಿಯಾಡ್ ಸ್ಟ್ರೀಟ್, ಬೆಂಗಳೂರು.

ಮೆ॥ ರಾ॥ ಹೆಚ್. ಆರ್. ಮೂರ್ತಿರಾವ್, ಬಿ. ಎ., ಅಸಿಸ್ಟೆಂಟ್ ಮ್ಯಾಸ್ಟರ್, ಗವರ್ನಮೆಂಟು ಕಾಲೀಜ್ ಶಿವಮೊಗ್ಗ

ಕ್ಷೇಖಾಗಣಿತ, ಬೀಜಗಣಿತ, (ಉಪಾಧ್ಯಾಯಪರಿಕ್ಷೆ)
ಕ್ಷೇತ್ರಗಣಿತ, ಲೋವರ್‌ಸೆಕೆಂಡರಿ ಪರಿಕ್ಷೆ ...
ಆರೋಗ್ಯಶಾಸ್ತ್ರ ಲೋವರ್‌ಸೆಕೆಂಡರಿ ಪರಿಕ್ಷೆ ...

ವ್ಯವಸಾಯಶಾಸ್ತ್ರ ಲೋವರ್‌ಸೆಕೆಂಡರಿ ಪರಿಕ್ಷೆ ..

ಶಾಸ್ತ್ರ (ಉಪಾಧ್ಯಾಯಪರಿಕ್ಷೆ) ಪ್ರಾಕೃತ ಭೂಗೋಳ
ಶಾಸ್ತ್ರ ಲೋವರ್‌ಸೆಕೆಂಡರಿ ಪರಿಕ್ಷೆ ..
ಹಿಂದೂದೇಶದ ಚರಿತ್ರೆ ಲೋವರ್‌ಸೆಕೆಂಡರಿ, ಉಪಾ
ಧ್ಯಾಯರ ಪರಿಕ್ಷೆ ..

ಭೂಗೋಳ ಲೋವರ್‌ಸೆಕೆಂಡರಿ ಪರಿಕ್ಷೆ, ..
ಭೂಪಟ ಬರೆಯುವುದು, ಲೋವರ್‌ಸೆಕೆಂಡರಿ, ಉಪಾ
ಧ್ಯಾಯ ಪರಿಕ್ಷೆಗಳು ಮತ್ತು ಭೂಗೋಳ ಉಪಾ
ಧ್ಯಾಯ ಪರಿಕ್ಷೆ
ಪಾಕಶಾಸ್ತ್ರ

ಪೀಠಿಕೆ

ಮಾ॥ರಾ॥ ಎಸ್. ಮಲ್ಲಾಹರಿರಾವ್, ಬಿ.ಎ., ಮಹಾರಾಜಾ ಕಾಲೇಜ್, ಮೈಸೂರ
ಮಾ॥ ರಾ॥ ಎಸ್. ವೆಂಕಟೇಶೈಯ್ಯಂಗಾರ್, ಬಿ. ಎ, ಅಸಿಸ್ಟೆಂಟ್‌ಮ್ಯಾಸ್ಟರ್
ಸೆಂಟ್ರಲ್‌ಕಾಲೇಜ್ ಬೆಂಗಳೂರು
ಮಾ॥ ರಾ॥ ಕೆ. ಶೇಷಾದ್ರಿಐಂಗಾರ್, ಡಿ. ಎಜಿ. ಎಂ. ಆರ್. ಎ. ಎಸ್, ನಂ
ಶಿಗೇಜೀರಿ ಬೆಂಗಳೂರು
ಮಾ॥ ರಾ॥ ಸಿ. ಎಂ. ವಿಜಯರಾಘವಾಚಾರ್, ಬಿ. ಎ. ಅಸಿಸ್ಟೆಂಟ್ ಮ್ಯಾಸ್ಟರ
ಗೌರ್ನಮೆಂಟ್ ಕಾಲೇಜ್ ಶಿವಮೊಗ್ಗ
ಮಾ॥ ರಾ॥ ಸಿ. ಕೃಷ್ಣರಾವ್, ಬಿ. ಎ. ಹೆಡ್‌ಮಾಸ್ಟರ್ ಗೌರ್ನಮೆಂಟ್ ಹೈಸ್ಕೂಲ
ಚಿಕ್ಕಮಗಳೂರ. ಮತ್ತು ಮಾ॥ ರಾ॥ ಆರ್. ರಘುನಾಥರಾವ್, ಬಿ. ಎ. ಅ
ಸ್ಟೆಂಟ್ ಮ್ಯಾಸ್ಟರ್ ಸೆಂಟ್ರಲ್‌ಕಾಲೇಜ್ ಬೆಂಗಳೂರು
ಮಾ॥ ರಾ॥ ಪಿ. ಶ್ರೀನಿವಾಸೈಯ್ಯಂಗಾರ್, ಬಿ. ಎ. ಅಸಿಸ್ಟೆಟ್ ಮ್ಯಾಸ್ಟರ್ ಗೌರ್ನ
ಮೆಂಟ್ ಕಾಲಿಜ್ ಶಿವಮೊಗ್ಗ
ಮಾ॥ ರಾ॥ ವೀರಭದ್ರಯ್ಯ, ಬಿ. ಎ. ಅಸಿಸ್ಟೆಂಟ್ ಮಾಸ್ಟರ್ ಗೌರ್ನಮೆಂಟ್ ಹೈ
ಸ್ಕೂಲ್ ಚಿತ್ರದುರ್ಗ.
ಮಾ॥ ರಾ॥ ಮರಿಮಲ್ಲಪ್ಪನವರ ಸ್ಕೂಲು ಹೆಡ್‌ಮಾಸ್ಟರ್ ಎಂ. ವೆಂಕಟಕೃಷ್ಣಪ್ಪನ
ವರ ಹೆಂಡತಿಯವರು ಮೈಸೂರು
ಮಾ॥ ಗಲಿಫರ್ ಸಾಹೇಬರವರ ಹೆಂಡತಿಯವರು. ಮಾ॥ ಹಡಸ್ಸ್ ಸಾಹೇಬರವರ
ಹೆಂಡತಿಯವರು. ವೆಸ್ಲ್ಯನ್‌ಮಿಷ್ಟ್ ಬೆಂಗಳೂರು

ಒಳ್ಳೆ ಮನಸ್ಸು.

ಫ್ರೆಂಚ್ ದೇಶದ ಒಂದು ದೊಡ್ಡಪಟ್ಟಣದಲ್ಲಿ ಇಬ್ಬರು ಕಲ್ಲುಕುಟುಕರು ಹೊಸದಾಗಿ ಕಟ್ಟುತಲಿದ್ದ ಒಂದು ಅರಮನೆಯಲ್ಲ ಕಲ್ಲುಕೆಲಸ ಮಾಡುತಲಿದ್ದರು. ಒಂದು ದಿವಸ ಕಾಲಾವಧಿಯುಮೇಲೆ ಇತರರೊಡನೆ ಇವರು ಕೆಲಸಮಾಡುತಿರುವಾಗ ಅದು ಮುರಿದು ಹೋಯಿತು. ಬಹುಮಂದಿಯು ಮೇಲಿನಿಂದ ಕೆಳಕ್ಕೆಬಿದ್ದು ಅಲ್ಲಿಯೇ ಸತ್ತುಹೋದರು. ಅಯ್ಯೋಪಾಪ! ಹೀಗೆ ಏಕಾಯೇಕಿಯಾಗಿ ಕೆಳಕ್ಕೆಬಿದ್ದು ಸಾಯುತ್ತೇವೆಂದು ಅವರಿಗೆ ಸ್ವಲ್ಪವೂ ತೋರಿರಲಿಲ್ಲ. ಅಲ್ಲಿ ಕೆಲಸಮಾಡುತಿದ್ದವರಲ್ಲಿ ಈ ಇಬ್ಬರು ಕಲ್ಲುಕುಟುಕರುಮಾತ್ರ ಒಂದು ಮುರಿದುಹೋದ ಮರದ ತುಂಡಿನ ಪೀಲೆ ನಿಂತು, ಬಲವಾಗಿ ನೆಟ್ಟಿದ್ದ ಒಂದು ಬೊಂಬನ್ನು ಘಟ್ಟಿಯಾಗಿ ಹಿಡಿದುಕೊಂಡು ಇದ್ದರು. ಆವೆ ಇವರಿಬ್ಬರ ಭಾರಕ್ಕೆ ಆ ಬೊಂಬು ಲೊಟಲೊಟನೆ ಮುರಿಯುವ ಹಾಗಿತ್ತು. ಆಗ ಅವರಿಬ್ಬರಲ್ಲಿ ಚಿಕ್ಕವನು ತನ್ನ ಮನಸ್ಸಿನಲ್ಲಿಯೇ "ಈಗ ನಾವಿಬ್ಬರೂ ಬದುಕಲೇ ಬೇಕೆಂದು ಈ ಬೊಂಬನ್ನ ಬಲವಾಗಿ ಹಿಡಿದುಕೊಂಡರೆ ನಮ್ಮಿಬ್ಬರ ಭಾರಕ್ಕೆ ಬೊಂಬು ಮುರಿದುಹೋಗುವುದು ನಿಜ. ನಾವಿಬ್ಬರೂ ಸಾಯುವುದು ನಿಜ. ಆದುದರಿಂದ ನಮ್ಮಿಬ್ಬರಲ್ಲಿ ಯಾರಾದರೂ ಒಬ್ಬ ಇವನ್ನು ಬಿಟ್ಟುಬಿಟ್ಟರೆ ಇನ್ನೊಬ್ಬ ಬದುಕಿಕೊಳ್ಳಬಹುದು. ನನಗಾದರೋ ಹೆಂಡತಿ ಮಕ್ಕಳು ಯಾರೂಇಲ್ಲ. ನಾನೊಬ್ಬಂಟಿಗ. ಇವನಾದರೋ ಬಹಳ ಬಡವ. ದೊಡ್ಡ ಸಂಸಾರಿ. ಏಳು ಎಂಟು ಜನ ಮಕ್ಕಳು. ಎಲ್ಲರೂ ಚಿಕ್ಕವರು. ಇವನಲ್ಲದೆ ಇನ್ಯಾರೂ ಮನೆಗೆ ತಂದು ಹಾಕುವರಿಲ್ಲ. ಇವನು ಸತ್ತರೆ ಇವನ ಮನೆಯಲ್ಲಿ ಎಲ್ಲರೂ ಸಾಯುವರು. ಇದಕ್ಕಾಗಿ ಒಬ್ಬಂಟಿಗನಾದ ನಾನು ಸಾಯುವುದೇ ಲೇಸು." ಎಂದು ಯೋಚಿಸಿ ಇನ್ನೊಬ್ಬನನ್ನು ಕೂಗಿ "ನೀನು ಮಕ್ಕಳೊಂದಿಗ, ನೀನು ಜೀವಿಸಲೇಬೇಕು" ಎಂದು ಹೇಳಿ, ದೇವರನ್ನು ನೆನೆಸುತ್ತಾ ಕೈಯನ್ನು ಬಿಟ್ಟುಬಿಟ್ಟನು. ನೆಲದಮೇಲೆ ಬಿದ್ದೊಡನೆಯೇ ತಲೆಯು ಒಡೆದುಹೋಯಿತು. ಇನ್ನೊಬ್ಬನು ಬದುಕಿಕೊಂಡನು. ಆ ಚಿಕ್ಕಹುಡುಗನ ಮನಸ್ಸು ಎಷ್ಟು ಒಳ್ಳೇಮನಸ್ಸು!

ಪ್ರಶ್ನೆಗಳು:-ಇಬ್ಬರು ಕಲ್ಲುಕುಟುಕರು ಎಲ್ಲಿ ಕೆಲಸಮಾಡುತಿದ್ದರು? ಯಾತರಮೇಲೆ ನಿಂತುಕೊಂಡಿದ್ದರು? ಆದು ಏನಾಯಿತು? ಕೆಲಸಮಾಡುತಿದ್ದವರು ಏನಾದರು? ಅವರಲ್ಲಿ ಯಾರು ಉಳಿದರು? ಉಳಿದವರಲ್ಲಿ ಚಿಕ್ಕವನು ಏನು ಯೋಚಿಸಿದನು? ಅಮೇಲೆ ಏನು ಮಾಡಿದನು? ಎಂಥಾವನ ಮನಸ್ಸು ಒಳ್ಳೇದು? ಈ ಕಥೆಯಿಂದ ಏನು ತಿಳಿದು ಕೊಳ್ಳಬಹುದು?

☞ ಇಲ್ಲಿನೇ ಪುಟ ೨೫ನೆ ಪಜ್ಞೆಯಲ್ಲಿ ಸಾಫ್ಯವೆಂಬುದು ಎಂಬ ಮಾತಿಗೆ ಸಾಧ್ಯವೆಲ್ಲವೆಂದುಓದಿಕೊಳ್ಳಬೇಕು

ವಿದ್ಯಾದಾಯಿನಿ

ಭಾಗ ೭.] ನವುಬರ್ ೧೯೦೪. [ಸಂಚಿಕೆ ೧೧.

ರಗ್ಬಿಪಾಠಶಾಲೆಯ ಅಧ್ಯಕ್ಷನಾದ ಥಾಮಸ್ ಆರ್ನಾಲ್ಡ್

ಗುರುಭಕ್ತಿಯು ಪ್ರಥಮಕರ್ತವ್ಯವೆಂದು ನಮ್ಮ ದೇಶದಲ್ಲಿ ಪೂರ್ವಕಾಲದಿಂದಲೂ ಜನರು ಹೇಳುತಲಿದಾರೆ. ಅದೇಪ್ರಕಾರ ಗುರುಕುಲವಾಸವೂ ಗುರುಶಿಶ್ರೂಷೆಯೂ ಬಹುಕಾಲದಿಂದಲೂ ನಡೆದುಬಂತು. ಆದರೆ ಈಚೆಗೆ ಕಾರಣಾಂತರಗಳಿಂದ ಆ ಪದ್ಧತಿಯು ಶಿಥಿಲವಾಗಿ ಉಪಾಧ್ಯಾಯರಿಗೂ ಶಿಷ್ಯರಿಗೂ ಪಾಠಶಾಲೆಯಲ್ಲಿ ಪಾಠ ನಡೆಯುವ ಕಾಲದಲ್ಲಿ ಎಷ್ಟು ಪರಿಚಯವುಂಟಾಗುವುದೋ ಅಷ್ಟೇ ಕೊರ್ತು, ಇದಕ್ಕೆ ಅಧಿಕವಾದ ಪರಿಚಯಕ್ಕೆ ಅವಕಾಶವಿಲ್ಲದಂತಾಗಿದೆ. ಹೀಗಿರುವುದು ಬಹು ಶೋಚನೀಯವಾದ ಸಂಗತಿ. ಪೂರ್ವಕಾಲದಲ್ಲಿ ಬಹುವಂದಿ ಶಿಷ್ಯರಿಗೆ ಅನ್ನವನ್ನು ಹಾಕಿ ವಿದ್ಯಾದಾನಮಾಡಿದ ಗುರುಗಳು ಅನೇಕರಿದಾರೆ. ಈಗಿನಕಾಲದಲ್ಲಿ ಸರ್ಕಾರದವರು ಸಹಾಯಮಾಡಿದರೂ, ಶಿಷ್ಯರಿಗೆ ಸರಿಯಾಗಿ ವಿದ್ಯಾಭ್ಯಾಸಮಾಡಿಸುವ ಉಪಾಧ್ಯಾಯರು ವಿರಳವಾಗಿದಾರೆ. ವಿದ್ಯವಿದ್ದರೆ ಜನರು ಗೌರವವಾಗಿ ಕಾಣುತ್ತಾರೆಂಬ ಅಂಶ ಸಕಲರಿಗೂ ತಿಳಿದೇ ಇದೆ. ಅನೇಕ ಉಪಾಧ್ಯಾಯರು ಈ ವಿಷಯವನ್ನು ತಿಳಿದಿದ್ದರೂ ತಮ್ಮ ಪಾಂಡಿತ್ಯವನ್ನು ವೃದ್ಧಿಪಡಿಸಿಕೊಂಡು ಯಶಸ್ಸನ್ನು ಪಡೆಯದೆ, ವೃಥಾ ಕಾಲಹರಣಮಾಡಿ ಉಪಾಧ್ಯಾಯನಿಗೆ ಜನರಲ್ಲಿ ಗೌರವವಿಲ್ಲವೆಂದು ಹೇಳುತ್ತಾ ತಮ್ಮ ತಪ್ಪಿತಕ್ಕೆ ಪರರನ್ನು ಗರಿಮಾಡಿ ಮನಸ್ಸಿಗೆ ಸಮಾಧಾನಮಾಡಿಕೊಳ್ಳುವರು. ಉಪಾಧ್ಯಾಯರಿಗೆ ಗೌರವವಿಲ್ಲವೆಂದು ಹೇಳುವುದು ಶುದ್ಧ ತಪ್ಪು. ಪಾಂಡಿತ್ಯವಿಲ್ಲದ ಉಪಾಧ್ಯಾಯನನ್ನು ಜನರು ಗೌರವಿಸುವುದಿಲ್ಲವೇ ಹೊರ್ತು ಪಂಡಿತಮನ್ಯರಾಗಿಯೂ ಶ್ರದ್ಧೆಯುಳ್ಳವರಾಗಿಯೂ ಇರುವವರನ್ನು ಸದಾಕಾಲದಲ್ಲಿಯೂ ಪೊಂದಿಸುವರು. ಇದಕ್ಕೆ ಇಂಗ್ಲೆಂಡ್ ದೇಶದಲ್ಲಿರುವ ರಗ್ಬಿ ಎಂಬ ಊರಿನ ಪಾಠಶಾಲೆಯ ಅಧ್ಯಕ್ಷನಾದ ಥಾಮಸ್ ಆರ್ನಾಲ್ಡ್ ಎಂಬಾತನೇ ಸಾಕ್ಷಿ.

ಈತನು ಐಲ್ ಆಫ್ ವೈಟ್‌ನಲ್ಲಿರುವ ವೆಸ್ಟ್‌ಕೋವಿಸ್ ಎಂಬ ಸ್ಥಳದಲ್ಲಿ ೧೭೯೫ನೇ ಇಸವಿಯಲ್ಲಿ ಹುಟ್ಟಿದನು. ಬಾಲ್ಯದಲ್ಲಿಯೇ ತಂದೆಯು ತೀರಿಹೋದುದರಿಂದ ಇವನ

ಸೋವರತ್ತೆಯು ಇವನನ್ನು ಪೋಷಿಸಿ ಬಾಲಶಿಕ್ಷೆಯನ್ನು ಮಾಡಿದಳು. ವಿಂಚೆಸ್ಟರ್ ಊರಿನ ಪಾಠಶಾಲೆಯಲ್ಲಿ ಆರನಾಲ್ಡನು ಓದುತ್ತಿರುವಾಗ ವಿಶೇಷ ಬುದ್ಧಿಕೌಶಲ್ಯವ್ಯಾಪ್ತಿಯನ್ನು ತೋರ್ಪಡಿಸಲಿಲ್ಲ; ಆತನು ಇನ್ನು ಬಾಲಕನಾದರೂ ತನ್ನ ವಯಸ್ಸಿಗೆವಿಹಾರಿ ನುರ್ಯಾಯವನ್ನು ವಿನಯವನ್ನು ತನ್ನ ನಡತೆಯಲ್ಲಿ ತೋರ್ಪಡಿಸುತ್ತಿದ್ದನು; ಇದಲ್ಲದೆ ಕಾವ್ಯ ಭೂವಿವರಣೆ, ಚರಿತ್ರೆಗಳನ್ನು ಓದುವುದು, ನಾಟಕಗಳನ್ನು ಬರೆಯುವುದು, ಇವೇ ಅವನಿಗೆ ಇಷ್ಟವಾದ ಕೆಲಸಗಳಾಗಿದ್ದವು. ಅನಂತರ ಆಕ್ಸ್‌ಫರ್ಡ್ ಯೂನಿವರಿಸಿಟಿಯಂಬ ಸಾರಿಸೆದಲ್ಲಿ ವಿದ್ಯಾರ್ಥಿಯಾಗಿದ್ದು ೧೮೧೫ ನೆ ಇಸವಿಯಲ್ಲಿ ಬಿ. ಎ ಪರಿಕ್ಷೆಯಲ್ಲಿ ಮೊದಲನೆಯ ತರಗತಿಯಲ್ಲಿ ತೇರ್ಗಡೆಯಾದನು. ಓರಿಯಲ್ ಕಾಲೀಜಿನಲ್ಲಿ ಒಂದು ಫೇತನವು ಉಳಿಯಲು, ಅಲ್ಲಿನ ಅಧಿಕಾರಿಗಳು ಆರನಾಲ್ಡ್‌ಗಿಂತ ಬುದ್ಧಿವಂತರಾದ ವಿದ್ಯಾರ್ಥಿಗಳಿದ್ದರೂ, ಅವನಲ್ಲಿ ಭವಿಷ್ಯತ್ತಿನಲ್ಲಿ ಪ್ರಕಾಶಕ್ಕೆ ಬರುವ ಶಕ್ತಿಗಳು ನೆಲೆಗೊಂಡಿವೆಯೆಂದು ಅರಿದು ಆ ಫೇತನವನ್ನು ಅವನಿಗೆ ಕೊಟ್ಟರು. ಅದು ಅವನಿಗೆ ನಾಲ್ಕುವರ್ಷಕಾಲ ನಡೆಯಿತು. ಆ ಕಾಲದಲ್ಲಿ ಆರನಾಲ್ಡನು ಪಾಠಶಾಲೆಯ ಪುಸ್ತಕ ಭಂಡಾರದಲ್ಲಿನ್ದ ಅನೇಕ ಗ್ರಂಥಗಳನ್ನು ಓದಿ, ತಾನು ಓದಿದ ಪುಸ್ತಕಗಳ ಸಾರಾಂಶವನ್ನು ಬರೆದು ಮನಸ್ಸಿಗೆ ಧೃಡಪಡಿಸಿಕೊಂಡು, ಇನ್ನು ಅನೇಕವಿಧಗಳಲ್ಲಿ ವಿಷಯಾನ್ವೇಷಣ ಮಾಡಿ ಪಾಂಡಿತ್ಯವನ್ನು ವೈದ್ದಿಪಡಿಸಿಕೊಂಡನು. ಈ ಗ್ರಂಥಾವಲೋಕನವೂ ವಿಷಯಾನ್ವೇಷಣವೂ ಆರನಾಲ್ಡನ ಮುಂದಿನ ಕಾರ್ಯಗಳಿಗೆ ಒಳ್ಳೇಸಾಧಕಗಳಾಗಿ ಪರಿಣಮಿಸಿದವು.

ಆರನಾಲ್ಡನು ೧೮೨೦ ನೆ ಇಸವಿಯಲ್ಲಿ ಮದುವೆಯನ್ನು ಮಾಡಿಕೊಂಡು ಲೇಲ್‌ಹ್ಯಾಂ ಎಂಬ ಸ್ಥಳದಲ್ಲಿ ತನ್ನ ಪತ್ನಿಯೊಡನೆ ವಾಸಮಾಡುವುದಕ್ಕೆ ಉಪಕ್ರಮಿಸಿದನು. ಜೀವನಕ್ಕಾಗಿ, ವಿಶ್ವತ್ ಸಮಾಜನ (University) ಪರಿಕ್ಷೆಗಳಿಗೆ ಓದುತ್ತಿರುವ ವಿದ್ಯಾರ್ಥಿಗಳಿಗೆ ಪಾಠಗಳನ್ನು ಕೇಳಿ ಅದರಿಂದ ವರಮಾನವನ್ನು ಪಡೆಯುತ್ತಿದ್ದನು. ಆ ಕಾಲದಲ್ಲಿ ಹೀಗೆ ವ್ಯಾಸಂಗಮಾಡಿಸುವವರಿಗೆ ಜನರಲ್ಲಿ ವಿಶೇಷ ಗೌರವವಿರಲಿಲ್ಲ. ಆದರೂ ಆರನಾಲ್ಡನು ಜನರ ಅನಾದರಣೆಗೆ ಗಮನಿಸದೆ ತಾನುಮಾಡುವ ಕೆಲಸವು ಲೋಕೋಪಕಾರವಾದುದೆಂದು ಧೃಡವಾಗಿ ನಂಬಿ ಅದನ್ನು ಶ್ರದ್ಧೆಯಿಂದಲೂ ಸಾಂಗವಾಗಿಯೂ ನೆರವೇರಿಸುವುದರಲ್ಲಿ ನಿರತನಾಗಿದ್ದನು. ಈ ಲೋಕದಲ್ಲಿ ಜನಿಸಿದ ಪ್ರತಿಯೊಬ್ಬ ಮನುಷ್ಯನು ತನ್ನ ಜೀವಿತಕಾಲದಲ್ಲಿ ಸವಿಾಚೀನವಾದ ಉದ್ದೇಶವೊಂದನ್ನು ಮುಂದಿಟ್ಟುಕೊಂಡು, ಆ ಉದ್ದೇಶವನ್ನು ನೆರವೇರುವ ಮಾರ್ಗಗಳನ್ನು ಹುಡುಕಿ, ಉದ್ದೇಶವನ್ನು ಸಫಲಗೊಳಿಸುವುದರಲ್ಲಿ ಆಸಕ್ತನಾಗಿರಬೇಕೇಹೊರ್ತು, ನರಜನ್ಮವೆತ್ತಿದ್ದಕ್ಕೆ ಸಾರ್ಥಕವಿಲ್ಲದೆ ಪಶುಸಾಮ್ಯನಾಗಿಮ್ಮುಕೊಂಡು ಜೀವವನ್ನು ಬಿಡುವುದು ಅನುಚಿತವೆಂದು ಆರನಾಲ್ಡನು ತಿಳಿದು, ತನ್ನ ಪಾಲಿಗೆ ಬಂದ ಕೆಲಸವನ್ನು ಮನಃಪೂರ್ವಕವಾಗಿ ನೆರವೇರಿಸುತಿದ್ದನು.

ಹೀಗಿರುವಾಗ ೧೮೨೮ ನೆ ಇಸವಿಯಲ್ಲಿ ರಗ್ಬಿಯೂರಿನ ಪಾಠಶಾಲೆಯು ಮು ಖ್ಯಾಧಿಕಾರಕ್ಕೆ ಒಬ್ಬರನ್ನು ನಿಯಮಿಸಬೇಕಾಯಿತು. ಅರನಾಲ್ಡನು ಈ ಕೆಲಸವು ತನಗೆ ಅಗುವುದು ಸಾಧ್ಯವಲ್ಲವೆಂದು ಭಾವಿಸಿ ಅದು ತನಗೆ ಅಗಬೇಕೆಂದು ಕೇಳಿಕೊಳ್ಳದೆ ಸುಮ್ಮನಿದ್ದನು. ಕೊನೆಗೆ, ಕೆಲವು ಯೋಗ್ಯತಾಪಕ್ಷಪಾತಿಗಳ ಸಲಹೆಯಿಂದ ಕೇಳಿಕೊ ಳ್ಳಲು, ಪಾಠಶಾಲೆಯ ವಿಚಾರಕರ್ತರು ಅವನ ಯೋಗ್ಯತಾಪತ್ರಗಳನ್ನು ಆಲೋ ಕಿಸಿ ಅವನೇ ಅರ್ಹನೆಂದು ನಿಷ್ಕರ್ಷಿಸಿ ಪಾಠಶಾಲೆಯ ಅಧ್ಯಕ್ಷನಾಗಿ ಅವನನ್ನು ನಿಯ ಮಿಸಿದರು.

ರಗ್ಬಿ ಪಾಠಶಾಲೆಯ ಅಧ್ಯಕ್ಷನಾಗಿ ಅರನಾಲ್ಡನು ನಿಯಮಿಸಲ್ಪಟ್ಟಕ್ಕೆ, ದೇಶ ದಲ್ಲಿ ವಿದ್ಯಾಭ್ಯಾಸದ ಕ್ರಮವನ್ನೇ ಬದಲಾಯಿಸಿ ಉತ್ತಮಸ್ಥಿತಿಗೆ ತರುವನೆಂದು ಡಾಕ್ಟರ ಹಾಕಿನ್ಸ್ ಎಂಬ ಪಂಡಿತನು ತಾನು ಕೊಟ್ಟ ಯೋಗ್ಯತಾಪತ್ರಿಕೆಯಲ್ಲಿ ಅಭಿ ಪ್ರಾಯಪಟ್ಟಿದ್ದನು. ಅವನ ಅಭಿಪ್ರಾಯವು ಕಾರ್ಯತಃ ಅದೇ ಪ್ರಕಾರ ಪರಿಣಮಿಸಿತು. ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ ವೃದ್ಧಿಪಡಿಸುವುದೇ ಪ್ರಧಾನವೆಂದು ಅನೇಕವಿಷಯಗಳನ್ನು ಗಟ್ಟಿಮಾಡಿಸುತಿದ್ದರು. ಲ್ಯಾಟಿನ್ ಭಾಷೆಯನ್ನು ಅಧಿಕವಾಗಿ ಕಲಿಸಿ, ಚರಿತ್ರೆ ಗಣಿತಮುಂತಾದ ಅಂಶಗಳಿಗೆ ಅಧಿಕವಾಗಿ ಗಮನಕೊಡುತ್ತಿರಲಿಲ್ಲ. ಇದಲ್ಲದೆ ವಿದ್ಯಾರ್ಥಿಗಳ ನಡತೆಯು ಸಮರ್ಪಕವಾಗಿರುತಿರಲಿಲ್ಲ. ಅರನಾಲ್ಡನು ಈ ಮಾರ್ಗ ಗಳು ಅಕ್ರಮವೆಂದು ಊಹಿಸಿ ಸನ್ಮಾರ್ಗದಲ್ಲಿ ವಿದ್ಯಾರ್ಥಿಗಳಿಗೆ ವ್ಯಾಸಂಗಮಾಡಿಸಲುಪ ಕ್ರಮಿಸಿದನು. ಗಿಣಿಗಳಂತೆ ವಿದ್ಯಾರ್ಥಿಗಳು ಬರೀಮಾತು ಕಲಿಯುವುದರಿಂದ ನಿಷ್ಪ್ರ ಯೋಜನವೆಂದು ಅರಿದು, ಒಬ್ಬ ವಿದ್ಯಾರ್ಥಿಯು ಕಲಿತ ಸಂಗತಿಗಳು ಸ್ವಲ್ಪವೇ ಆದರೂ ಅವುಗಳನ್ನು ಚೆನ್ನಾಗಿ ಮನಪಟ್ಟುಮಾಡಿಕೊಂಡು ಮುಂದೆ ಸಂಗತಿಗಳನ್ನು ಗ್ರಹಿ ಸುವ ಶಕ್ತಿಯುಂಟಾಗಿವೆಯೆಂದು ತಿಳಿದನೆ ಅಂಥವನಲ್ಲಿ ಗಾಢ್ಯಶಕ್ತಿ ಹೆಚ್ಚಾಗಿಲ್ಲದೆ ಬರೀ ಸಂಗತಿಗಳನ್ನುಮಾತ್ರ ತಿಳಿದಿರುವ ವಿದ್ಯಾರ್ಥಿಯಲ್ಲಿ ಮಾಡುತಿದ್ದಕ್ಕಿಂದ ಹೆಚ್ಚು ವಿಶ್ವಾಸ ಮಾಡುತಿದ್ದನು. ಮಸಲು ರಾಮಾಯಣವೆಲ್ಲ ಕಂಠಪಾಠವಾಗಿ ಹೇಳುವುದ ಕ್ಕಿಂತ ಅಲ್ಲಿರುವ ಶ್ಲೋಕಗಳ ಅರ್ಥವನ್ನು ತಿಳಿಯುವುದು ಉತ್ತಮವೆಂದು ಅದಕ್ಕನು ಗುಣವಾಗಿ ಬೋಧಿಸುತಿದ್ದನು. ವಿದ್ಯಾರ್ಥಿಗಳ ಶಕ್ತಿಗಳೆಲ್ಲ ಪ್ರಕಾಶಕ್ಕೆ ಬರಲು ಸ್ವಲ್ಪ ಅವಕಾಶ ಬೇಕಾದ್ದರಿಂದ ಬಾಲ್ಯದಲ್ಲಿಯೇ ಸಮಸ್ತವನ್ನು ಅವರಿಗೆ ಕಲಿಸುವುದು ಅಸಾಧ್ಯ, ಅದರಿಂದ ಮುಂದೆ ಬಾಲಕರು ಮುಸ್ಕರಾದಮೇಲೆ ವಿಷಯಗಳನ್ನು ಸುಲಭ ವಾಗಿ ಗ್ರಹಿಸುವ ಶಕ್ತಿಯುಂಟುಮಾಡುವುದೇ ಶಿಕ್ಷಕರ ಮುಖ್ಯೋದ್ದೇಶವಾಗಿರಬೇ ಕೆಂದು ಅಭಿಪ್ರಾಯಪಟ್ಟಿದ್ದನು. ಇದಲ್ಲದೆ ಪ್ರತಿವಿದ್ಯಾರ್ಥಿಯು ತನ್ನ ಮನಸ್ಸನ್ನು ಸ್ವಾಧೀನಪಡಿಸಿಕೊಂಡು ನೀತಿಮಾರ್ಗದಲ್ಲಿ ನಡೆಯುವುದಕ್ಕೆ ಕಲಿಯಬೇಕೆಂದೂ, ಜೀವ ನದಲ್ಲಿ ಪ್ರತಿಯೊಬ್ಬನು ಒಂದು ಉದ್ದೇಶವನ್ನು ಮುಂದಿಟ್ಟುಕೊಂಡು ಅದನ್ನು ನೆರವೇರಿಸುವುದರಲ್ಲಿ ಆಸಕ್ತನಾಗಬೇಕೆಂದೂ ಬೋಧಿಸುತಿದ್ದನು. ಮುಖ್ಯವಾಗಿ,

ವಿದ್ಯಾರ್ಥಿಯು ಪಾಠಶಾಲೆಯನ್ನು ಬಿಡುವುದರೊಳಗೆ ನೈಜವಾದ ಸಾಹಸವೂ, ಔತ್ಸ್ಸಕ್ಯವೂ, ಸತ್ಯವೆಲಂಬನೆಯೂ ಅವನಿಗೆ ಜೆನ್ನಾಗಿ ತಿಳಿದಿರಬೇಕೆಂದು ಅರನಾಲ್ಡನು ಹೇಳುತಿದ್ದನು.

ಉಪಾಧ್ಯಾಯನು ಕಾಯಶಕ್ತಿಯುಳ್ಳವನಾಗಿಯೂ, ವಿಷಯಾನ್ವೇಷಣೆಯಿಂದ ಪಾಂಡಿತ್ಯವನ್ನು ಯಾವಾಗಲೂ ವೃದ್ಧಿಪಡಿಸಿಕೊಳ್ಳುವವನಾಗಿಯೂ, ಧರ್ಮಾಶ್ರಯನಿರತನಾಗಿಯೂ, ಸಾಧುಸ್ವಭಾವವುಳ್ಳವನಾಗಿಯೂ, ಕ್ಷಮಾ, ಅನುಕಂಪ ಈ ಗುಣಗಳುಳ್ಳವನಾಗಿಯೂ ಇರಬೇಕೆಂದು ಅರನಾಲ್ಡನ ಅಭಿಪ್ರಾಯ. ತನ್ನ ಪಾಠಶಾಲೆಯ ಮಹತ್ತಿನೆಟ್ಟಲುಗಳನ್ನು ಸರಾಗವಾಗಿ ಹತ್ತುವುದಕ್ಕೆ ಕಾಲುಗಳು ಸೋತಾಗ, ಮುಂದೆ ಪಾಠಶಾಲಾಧ್ಯಕ್ಷನಾಗಿರುವುದಕ್ಕೆ ತಾನು ಅರ್ಹನಲ್ಲವೆಂದು ಭಾವಿಸಿಕೊಳ್ಳುವುದಾಗಿ ಹೇಳುತಿದ್ದನು. ಉಪಾಧ್ಯಾಯನಿಗೆ ಪಾಂಡಿತ್ಯವಿಲ್ಲವೆಂದು ವಿದ್ಯಾರ್ಥಿಗಳಿಗೆ ತಿಳಿದರೆ, ಅವರಿಗೆ ಅವನಲ್ಲಿ ಗೌರವವು ತಪ್ಪಿಹೋಗುವುದು. ಇದಲ್ಲದೆ ಕೆಲವರು ತಾವೇ ಅವನಿಗಿಂತ ಬುದ್ಧಿವಂತರೆಂದು ತಿಳಿದು ಅಹಂಕಾರದಿಂದ ಕೆಟ್ಟುಹೋಗುವರು. ಕೆಲವರು ವಿದ್ಯಾಲಾಭವೇ ಇಲ್ಲದೆ ವೃಥಾ ಕಾಲಕ್ಷೇಪಮಾಡುವರು. ಆದುದರಿಂದ ಪ್ರತಿಯೊಬ್ಬ ಉಪಾಧ್ಯಾಯನು ತನಗೆ ಬರುವ ಸಂಬಳವೇ ಪ್ರಧಾನವೆಂದು ತಿಳಿಯದೆ, ಹಾಗೆ ಸೊಸಿಗಳಿಗೆ ನೀರು ಹಾಕಿ ಆದರದಿಂದ ಬೆಳೆಸಿದರೆ ದೊಡ್ಡ ಮರಗಳಾಗುವುದೋ ಹಾಗೆ ಬಾಲಕರಿಗೆ ಯೋಗ್ಯವಾದ ಉದ್ದೇಶವನ್ನು ಸಕಾಲದಲ್ಲಿ ಮಾಡಿದರೆ ಅವರಿಗೆ ಇವರಿಂದ ಪ್ರಯೋಜನವೆಂದು ತಿಳಿದು ಆಪ್ರಕಾರ ನಡೆಯಬೇಕೆಂದು ಅರನಾಲ್ಡನು ತೋರಿಸುತಿದ್ದನು. ಅರನಾಲ್ಡನಲ್ಲಿ ಇನ್ನೊಂದು ಗುಣವಿತ್ತು. ಕೆಲವು ಅಧ್ಯಕ್ಷರು ತಮ್ಮ ಸಹಾಯೋಪಾಧ್ಯಾಯರಿಗೆ ಹೆಸರು ಬಂದರೆ ಅದರಿಂದ ತಮಗೆ ಗೌರವಕ್ಕೆ ಸಂದುಕವೆಂದು ತಪ್ಪುಭಾವನೆಯಿಂದ ಅವರನ್ನು ಕೀಳದೆ ಪಾಠಶಾಲೆಯ ಕೆಲಸಗಳನ್ನು ಮಾಡುವರು. ಅರನಾಲ್ಡನು ಇದರಿಂದ ಅವರಿಗೆ ಔತ್ಸ್ಸಕ್ಯ ಕಡಮೆಯೆಂದು ಭಾವಿಸಿ ತನ್ನ ಸಹಾಯೋಪಾಧ್ಯಾಯರೆಲ್ಲರನ್ನು ವಾರಕ್ಕೆ ಮೂರಾವರ್ತಿ ಒಂದುಕಡೆ ಸೇರಿಸಿ ಅವರ ಅಲೋಚನೆಯನ್ನು ಕೇಳುತಿದ್ದನು. ಒಂದಾವರ್ತಿ ಅರನಾಲ್ಡನು 'ಈ ಪಾಠಶಾಲೆಗೆ ಹುಡುಗರು ನನ್ನ ಸಹಾಯೋಪಾಧ್ಯಾಯನ ಬೋಧನೆಗಾಗಿ ಬರುವರೆಂದು ಕೇಳಿ ಆ ಮಾತಿನಿಂದ ನನಗೆ ಬಳು ಸಂತೋಷವಾಗುತ್ತದೆ' ಎಂದು ಮತ್ಸರವಿಲ್ಲದೆ ಹೇಳಿದನು.

ದೊಡ್ಡ ತರಗತಿಯಲ್ಲಿ ಓದುವ ಹುಡುಗರನ್ನು ಸಣ್ಣ ತರಗತಿಯಲ್ಲಿ ಓದುವ ಹುಡುಗರ ನಡತೆಯು ಪರಾಂಬರಿಕೆಬಗ್ಗೆ ನಿಯಮಿಸಿ, ಯಾವಾಗಲೂ ಹುಡುಗರು ಜಾಗರೂಕತೆ ಕಲಿಯುವಂತೆ ಅರನಾಲ್ಡನು ನೋಡಿಕೊಳ್ಳುತಿದ್ದನು. ಸಂದರ್ಭಬಂದಾಗ ಹುಡುಗರನ್ನು ಹೊಡೆಯುವುದಕ್ಕೆ ಹಿಂದೆಗೆಯುತ್ತಿರಲಿಲ್ಲ. ಆದರೆ ಹುಡುಗರಲ್ಲಿ ಪ್ರೀತಿಯನ್ನು ತೋರಿಸುತಿದ್ದುದರಿಂದಲೂ, ತಂದೆತಾಯಿಗಳಿಗೆ ಅವನಲ್ಲಿ ಸಂಪೂರ್ಣ

ನಂಬಿಕೆ ಇದ್ದುದರಿಂದಲೂ, ರಗ್ಬಿ ಪಾಠಶಾಲೆಯು ಬಲು ಪ್ರಖ್ಯಾತಿಯನ್ನುಹೊಂದಿತು. ಆರನಾಲ್ಡನ ಕೀರ್ತಿಯನ್ನು ಕೇಳಿ ೧೮೫೯ ನೆ ಇಸವಿಯಲ್ಲಿ ಅವನನ್ನು ಆಕ್ಸ್‌ಫರ್ಡ್ ಯೂನಿವರ್ಸಿಟಿಯಲ್ಲಿ ಚರಿತ್ರೆಯ ಬೋಧಕನಾಗಿ ನಿಯಮಿಸಿದರು. ಆದರೆ ಈ ಗೌರವವಾದ ಕೆಲಸವನ್ನು ಆರನಾಲ್ಡನು ಬಹಳಕಾಲ ಅನುಭವಿಸಲಿಲ್ಲ; ೧೮೪೨ ನೆ ಇಸವಿ ಜೂನ್ ೧೨ನೇ ತಾರೀಖಿನಲ್ಲಿ ಕಾಲಾಧೀನನಾದನು. ಈತನ ಹೆಸರು ಇಂಗ್ಲೆಂಡ್ ದೇಶದಲ್ಲಿ ಈಗಲೂ ಪ್ರಸಿದ್ಧಿಯಾಗಿದೆ, ಮುಂದೆಯೂ ಇವನನ್ನು ಮರೆಯುವಹಾಗಿಲ್ಲ.

ಈ ದೇಶದ ಉಪಾಧ್ಯಾಯರು ಆರನಾಲ್ಡನ ದೃಷ್ಟಾಂತವನ್ನು ಸ್ಮರಣೆಯಲ್ಲಿಟ್ಟು ತಾವೂ ಕೂಡಿದಮಟ್ಟಿಗೆ ಅವನಂತೆ ನಡೆಯುವುದಕ್ಕೆ ಯತ್ನಿಸಬೇಕು. ಉಪಾಧ್ಯಾಯರು ತನುಗೆ ಪ್ರೋತ್ಸಾಹವಿಲ್ಲವೆಂದು ಹೇಳುವ ಮಾತು ತಪ್ಪು. ತಮಗೆ ನಿಯಮಿಸಿರುವ ಕೆಲಸವನ್ನು ಶ್ರದ್ಧೆಯಿಂದಮಾಡಿದರೆ ಮೇಲಿನ ಅಧಿಕಾರಿಗಳು ಅವರಿಗೆ ಪ್ರೋತ್ಸಾಹಪಡಿಸದೆ ಇರುವದೇ ಇಲ್ಲ. ಈ ವಿಷಯವನ್ನು ಉಪಾಧ್ಯಾಯರು ಮನಸ್ಸಿನಲ್ಲಿಟ್ಟು ತಮ್ಮ ಕಾರ್ಯವನ್ನು ಸರಿಯಾಗಿ ನೆರವೇರಿಸಿ ಕೀರ್ತಿಯನ್ನು ಪಡೆಯಬೇಕು.

ಹಿಮ್ಮು, ಮುಂಜು.

ಅಜ್ಜ—ಬೆಳಿಗ್ಗೆ ಹೊತ್ತಿಗೆಮುಂಚೆ ಎದ್ದು ನೋಡಿದರೆ ಗಿಡದ ಎಲೆಮೇಲೂ, ಹುಲ್ಲು ಗರಿಕೆಮೇಲೂ, ಏನು ಕಾಣಿಸುತ್ತೆ?

ಕಿಟ್ಟು—ಹನಿರು ಕಾಣಿಸುತ್ತೆ.

ಭಾಮ—ಹನಿರಲ್ಲ, ಅಜ್ಜಯ್ಯಾ. ಕಾಣಿಸುವದು ಎಲೆ, ಹುವ್ವು, ಅದೆಲ್ಲಾ.

ಸತ್ಯ—ಸಣ್ಣ ಸಣ್ಣ ನೀರಿನ ಹನಿ ಇರುವದು, ಅಲ್ಲವೆ, ಅಜ್ಜಿಯಯ್ಯಾ?

ಅಜ್ಜ—ಹವ್ವದು. ಸಣ್ಣ ನೀರಿನ ಹನಿಗಳು. ಅದು ಹ್ಯಾಗೆಬಂತು ಹೇಳೀರಾ?

ಕಿಟ್ಟು—ರಾತ್ರಿಯಾರೋ ನೀರಿರಚಿರಬೇಕು;

ಭಾಮ—ಇಲ್ಲ, ಈ ಹನಿಗಳೆಲ್ಲ ಗಿಡದ ಒಳಗಿನಿಂದಲೇ ಬಂದದ್ದು.

ಸತ್ಯ—ಹ್ಯಾಂಗೊ ಆಕಾಶದಿಂದ ಬಿದ್ದಿರಬೇಕು.

ಅಜ್ಜ—ಆಕಾಶದಿಂದ ಹ್ಯಾಗೆ ಬಿತ್ತು, ಕೇಳಿ.

ಮೂರುಜನರೂ—ತಿಳಿಯದು.

ಅಜ್ಜ—ಕನ್ನಡಿಯಮೇಲೆ ಹಾ ಎಂದು ನೀವು ಯಾವಾಗಲಾದರೂ ಊದಿ ನೋಡಿದ್ದೀರಾ?

ಕಿಟ್ಟು--ನೋಡಿದೇನೆ, ಅದರಮೇಲೆ ಏನೋ ಮುಚ್ಚಿಕೊಂಡು ಕನ್ನಡಿ ಮಂಕಾ ಗುವುದು.

ಅಜ್ಜ—ಇನ್ನೂ ಹಾಗೆಯೇ ಊದಿದರೆ ಏನು ಕಾಣುತ್ತೆ?

ಭಾಮು--ಮುಖ ಕಾಣುತ್ತೆ.

ಸತ್ಯ—ನಾನೂ ಕನ್ನಡಿಯಮೇಲೆ ಹಾಗೆ ಊದಿ ನೋಡಿದೇನೆ. ಮುಖ ಕಾಣಿಸಿದ್ದು ಕಾಣೆ; ಏಕೆ, ಅರುಸಾರಿ ಹಾಗೆಯೇ ಊದಿದರೆ, ಕನ್ನಡಿಯಮೇಲೆ ಸಣ್ಣ ಸಣ್ಣ ನೀರಿನ ಹನಿಗಳು ಕಾಣುವವು.

ಅಜ್ಜ—ಸತ್ಯಾ, ನೀನು ಹೇಳಿದ್ದು ಸರಿ. ಅಂಥಾ ನೀರಿನ ಸೀರು ಹನಿ ಕನ್ನಡಿಯ ಮೇಲೆ ಎಲ್ಲಿಂದ ಬಂತು?

ಭಾಮು—ಬಂದೆ ಬಂದೆ. ನಾನು ಹೇಳುತ್ತೇನೆ. ನಾವು ಊದಲು ಕನ್ನಡಿಯು ಒಳಗಿದ್ದ ನೀರು ಈಚೆಗೆ ಬಂತು.

ಕಿಟ್ಟು--ಆ ನೀರು ನಮ್ಮ ಎಂಜಲಲ್ಲವೆ ಅಜ್ಜಯ್ಯಾ?

ಸತ್ಯ—ಕನ್ನಡಿಯೊಳಗೆ ನೀರೆಲ್ಲಿ ಬಂತು? ನಾವು ಉಗಳದೆ ಇರುವಾಗ ಅಲ್ಲಿ ಎಂಜಲೆಲ್ಲಿಬಂತು?

ಅಜ್ಜ—ಸತ್ಯಾ, ನಿನ್ನ ಆಕ್ಷೇಪಣೆ ಸರಿ. ಕನ್ನಡಿಯಮೇಲೆ ಹಾಗೆ ನೀರು ಹುಟ್ಟುವುದಕ್ಕೆ ಕಾರಣವನ್ನು ಹೇಳುತ್ತೇನೆ, ಕೇಳಿ. ಗಾಳಿಯಲ್ಲಿ ಯಾವಾಗಲೂ ಅಲ್ಪಸ್ವಲ್ಪ ಜಲಕಣಗಳು ಇದ್ದೇ ಇರುವವು. ನಮ್ಮ ಕಣ್ಣಿಗೆ ಮಾತ್ರ ಅವು ಕಾಣಿಸುವುದಿಲ್ಲ. ಗಾಳಿಯಲ್ಲಿ ತನು ಹೆಚ್ಚಾದರೆ, ಈ ಸಣ್ಣ ಸಣ್ಣ ಜಲಕಣಗಳು ಒಂದಕ್ಕೊಂದು ಸೇರಿ, ನಮ್ಮ ಕಣ್ಣಿಗೆ ಸ್ವಲ್ಪ ಕಾಣುವವು; ತನುವು ಇನ್ನೂ ಹೆಚ್ಚಾದರೆ, ಆ ಕಣಗಳು ಇನ್ನೂ ಸೇರಿಕೊಂಡು, ಇನ್ನೂದೊಡ್ಡ ದೊಡ್ಡದಾಗಿ ಕಾಣಿಸುವವು. ಕನ್ನಡಿಯಮೇಲೆ ನಾವು ಉಸಿರನ್ನು ಬಿಟ್ಟಕೂಡಲೆ, ಆ ಉಸಿರಿನಿಂದ ಗಾಳಿಯಲ್ಲಿರುವ ಜಲಕಣಗಳು ಅದರ ಮೇಲೆ ಕೂತುಕೊಳ್ಳುವವು.

ಕಿಟ್ಟು, ಭಾಮು--ಅದು ಯಾಕೆ ಹಾಗೆ ಕೂತುಕೊಳ್ಳಬೇಕು.

ಅಜ್ಜ—ನಮ್ಮ ಉಸಿರು ಸ್ವಲ್ಪ ಬೆಚ್ಚಗೆ ಇರುವುದು, ಕನ್ನಡಿ ಅದಕ್ಕಿಂತಲೂ ತಣ್ಣಗಿರುವುದು. ಹ್ಯಾಗೆಂದರೆ, ಕನ್ನಡಿಯಲ್ಲಿ ತನು ಹೆಚ್ಚು. ಉಸಿರಿನ ಜಲಕಣಗಳು ತನುವಾವ ಕನ್ನಡಿಯಮೇಲೆ ಬಿದ್ದಕೂಡಲೆ, ಒಂದಕ್ಕೊಂದು ಸೇರಿ ಮೊದಲು ತೆಳ್ಳಗೆ ತೆಳುವಾಗಿ ಕಾಣುವ್ವದು; ಉಸಿರು ಇನ್ನೂ ಹೆಚ್ಚಿದರೆ ಅದರ ಜಲಕಣಗಳು ಇದರಮೇಲೆ ಬಿದ್ದು ಒಂದಕ್ಕೊಂದು ಕೂಡಿಕೊಂಡು ಸಣ್ಣ ಸಣ್ಣ ಹನಿಯಾಗಿ ಕಾಣುವ್ವದು.

ಕಿಟ್ಟು -ಹುಲ್ಲುಗರಿಕೆಯಮೇಲೆ ಬೆಳಗಾಗ ನೀರಿನ ಹನಿಗಳು ಕಾಣುವ್ವದಕ್ಕೆ ಕಾರಣ ಇನ್ನೂ ತಿಳಿಯುಲಿಲ್ಲ.

ಭಾಮ-ಇವನ ಮಾತೇನು, ಅಜ್ಜ್ಜಯ್ಯಾ? ನನಗೆ ಆಗಲೇ ತಿಳಿಯತು. ನಮ್ಮ ಉಸಿರಿನಲ್ಲಿ ಇರುವ ನೀರು ಒಂದಕ್ಕೊಂದು ಸೇರಿ, ಹುಲ್ಲುಗರಿಕೇಮೇಲೆ ಹನಿ ಹನಿಯಾಗಿ ಕಾಣಿಸುವ್ವದು.

ಸತ್ಯ—ನಮ್ಮ ಉಸಿರಿನ ಜಲಕಣಗಳು ಹುಲ್ಲುಗರಿಕೆಯ ಮೇಲೆ ಕಾಣಿಸುವುದು ಎಂದು ಹೇಳಿಲಿಲ್ಲ; ಕನ್ನಡಿಯಮೇಲೆ ಕಾಣಿಸುವ್ವದು. ಅಷ್ಟರ ಮಟ್ಟಿಗೆ ತಿಳಿ.

ಅಜ್ಜ—ಕನ್ನಡಿಯ ಸಾಮ್ಯವನ್ನು ತೆಗೆದುಕೊಂಡು, ನಾನು ಹೇಳಿದ ಮಾತಿನಲ್ಲಿ ನೀವು ಎರಡು ಅಂಶಗಳನ್ನು ಮನಸ್ಸಿನಲ್ಲಿ ಇಡಬೇಕು: ಒಂದನೇದು, ವಾಯುವಿನಲ್ಲಿ ಜಲಕಣಗಳಿವೆ. ಎರಡನೇದು, ವಾಯುವಿನ ತನು ಹೆಚ್ಚಿದಾಗ, ಆ ಕಣಗಳು ನಮ್ಮ ಕಣ್ಣಿಗೆ ಕಾಣುವವ್ವ.

ಸತ್ಯ—ಜಾಜ್ಞಾಪಕವಿವೆ; ಮುಂದಕ್ಕೆ ಹೇಳಿ.

ಅಜ್ಜ—ಗಿಡದ ಎಲೆಗಳೂ, ಹುಲ್ಲುಗರಿಕೆಯೂ, ಹಗಲೆಲ್ಲಾ ಬಿಸಲಿನಲ್ಲಿ ಕಾಯುವವು; ರಾತ್ರೆ ಇವ್ವಗಳ ಶಖೆ ಹೋಗುತಾ, ಹೋಗುತಾ, ಇಪ್ಪುಗಳಲ್ಲಿ ತನು ಹೆಚ್ಚುವ್ವದು. ಹೀಗೆ ತನುವಾದ ಗರಿಕೆಯಮೇಲೆ ಹೊರಗಿನ ಗಾಳಿ ತಗಲುಲು, ಆ ಗಾಳಿಯಲ್ಲಿಯೂ, ತನು ಹೆಚ್ಚುವ್ವದು; ಕೂಡಲೆ ಆ ಗಾಳಿಯಲ್ಲಿರತಕ್ಕ ಜಲಕಣಗಳು ಒಂದಕ್ಕೊಂದು ಸೇರಿ, ಹನಿಗಳಾಗುವವು. ಈ ಹನಿ ಗಾಳಿಯ ಜೊತೆಯಲ್ಲಿ ಓಡಿಯಾಡುವ್ವದು; ಭಾರ ಹೆಚ್ಚಾಗಿ ಗಿಡದ ಎಲೆಗಳ ಮೇಲೂ ಹುಲ್ಲುಗರಿಕೆಯಮೇಲೂ ನಿಂತುಕೊಳ್ಳುವ್ವದು. ಈ ನೀರು ಕಾಣಿಗೆ ಹಿಮಜಲವೆಂದು ಹೆಸರು.

ಸತ್ಯ—ನೀವು ಹೇಳಿದ್ದೆಲ್ಲಾ ತಿಳಿಯತು; ಆದರೆ ಇದಕ್ಕೆ ಹಿಮಜಲವೆಂದು ಹೇಳುವೀರಿ. ಥಳಿಗಾಲದಲ್ಲಿ ಮಂಜು ಬೀಳುವ್ವದಿಲ್ಲವೆ? ಆ ಮಂಜಿನಿಂದ ಈ ನೀರು ಆಗಿದ್ದರೆ ಹಿಮಜಲವೆಂದು ಹೇಳಬಹುದು; ಹಾಗೆ ಹಿಮ ಇಲ್ಲದೆ ಇರುವಾಗಲೂ ಇವಕ್ಕೆ ಆ ಹೆಸರು ಹ್ಯಾಗೆ ಬಂದೀತು?

ಅಜ್ಜ—ಅಂಥಾ ಹಿಮ ನಮ್ಮ ಕಣ್ಣಿಗೆ ಕಾಣದೇ ಇದ್ದಾಗ್ಯೂ, ಅದರಿಂದಲೇ ಈ ಹಿಮಗಳು ಕಾಟ್ಟದ್ದು ಇದೆಲ್ಲಕ್ಕೂ ಕಾರಣ ಒಂದೇ.

ಭಾಮ—ನೀವು ಹೇಳಿದ್ದು ಸರಿ, ಅಜ್ಜಯ್ಯಾ, ಗಾಳಿಯ ಜಲಕಣ ಹುಲ್ಲುಗರಿಕೆಯ ಮೇಲೆ ಕೂತುಕೊಳ್ಳುತ್ತೆ, ನಾವು ಬಿಟ್ಟ ಉಸಿರಿನಲ್ಲಿರುವ ಜಲಕಣ ಆಕಾಶಕ್ಕೆ ಹೋಗಿ ಹಿಮವಾಗುತ್ತೆ. ಇಷ್ಟೇಹವ್ವದೋ, ಇಲ್ಲವೋ? ನನಗೆ ಎಲ್ಲಾ ತಿಳಿಯಿತು.

ಸತ್ಯ—ಭಾಮಾ, ತಿಳಿಯದ ಮಾತನ್ನು ಒಂದೊಂದಾಗಿ ಆಡುವುದರಲ್ಲಿ ನೀನು ಬಹು ಜಾಣೆ. ನಮ್ಮ ಉಸಿರಿನಲ್ಲಿರುವ ಸ್ವಲ್ಪ ಜಲಕಣದಿಂದ ಆಕಾಶವೆಲ್ಲ ಹಿಮಮಯವಾದೀತೇ?

ಕಿಟ್ಟು—ನನಗೂ ಅದೇ ಸಂಶಯ.

ಅಜ್ಜ—ನಾನು ಹೇಳುತ್ತೇನೆ ಕೇಳಿ. ರಾತ್ರೆಕಾಲದಲ್ಲಿ ಭೂಮಿಯು ಶಖೆ ಆದಿ, ತನು ತಣ್ಣಚ್ಚುವುದು; ಬಿಸಿಯಾದ ಗಾಳಿ ಅದರಮೇಲೆ ಬೀಸಿದರೆ, ಆ ಗಾಳಿಯಲ್ಲಿಯೂ ತನು ತಣ್ಣಚ್ಚುವುದು. ಆವಕಾರಣ ಗಾಳಿಯ ಜಲಕಣಗಳು ಒಂದಕ್ಕೊಂದು ಸೇರಿ, ಹೊಗೆಯಾಕಾರದಿಂದ ನಮ್ಮ ಕಣ್ಣಿಗೆ ಕಾಣಿಸುವವು; ಇದೇ ಹಿಮ, ಅಥವಾ ಮಂಜು. ಈ ಮಂಜು ನೀರಿನ ಮೇಲೂ, ಬಿಟ್ಟದಮೇಲೂ ಹೆಚ್ಚಾಗಿ ಬೀಳುವುದು.

ಎಂ. ಎಸ್. ಪುಟ್ಟಣ್ಣ, ಬಿ. ಎ.

ಕಬ್ಬು.

ಬೆಳೆಯುವಸ್ಥಳ:—ಇದು ಹಿಂದುಸ್ಥಾನ, ಚೀನಾ, ವೆಸ್ಟ್ ಇಂಡೀಸ್, ಬ್ರೆಜಿಲ್, ಮಾರಿಷಸ್ ಮುಂತಾದ ಜಾನಪದ ಪ್ರಾಂತ್ಯಗಳಲ್ಲಿ ಬೆಳೆಯುವುದು.

ವರ್ಣನೆ:—ಕಬ್ಬು ನಿಜತೃಣಜಾತಿಗೆ ಸೇರಿದ್ದು. ಇದು ಏಳರಿಂದ ಹದಿನೈದು ಅಡಿಗಳ ಎತ್ತರದವರೆಗೆ ಬೆಳೆಯುತ್ತದೆ. ಕಬ್ಬಿನ ಜಲ್ಲೆಯಲ್ಲಿ ಗೆಣ್ಣುಗಳಿರುವವು. ಈ ಗೆಣ್ಣುಗಳಿಂದಲೇ ಗರಿಗಳು ಹುಟ್ಟುವವು. ಗರಿಗಳು ಉದ್ದನಾಗಿಯೂ, ಕಿರಿಯವಾಗಿಯೂ ಇವೆ. ಇವುಗಳ ಅಂಚುಗಳು ಗರಗಸದಂತಿರುವವು. ಗರಿಗಳ ಬುಡವು ಒರೆಯಂತೆ ಸರಳಿಯಾಗಿ, ಕಾಂಡವನ್ನು ಹಿಡಿಯುವುದು. ಅಗ್ರಭಾಗದಲ್ಲಿ ಒಂದು ಹೂವಿನ ಕುಚ್ಚು ಇರುವುದು. ಕಬ್ಬುಗಳಲ್ಲಿ ಕೆಂಪು, ಬಿಳಪು, ಪಟ್ಟಾಪಟ್ಟಿ, ಮತ್ತು ಕಡ್ಡಿಕಬ್ಬು ಎಂಬುದಾಗಿ ನಾಲ್ಕು ಭೇದಗಳುಂಟು.

ಬೆಳೆಯುವಕ್ರಮ:—ಮರಳುಗೋಡಿನಲ್ಲಿ ಕೆಂಪು ಮತ್ತು ಕಡ್ಡಿ ಕಬ್ಬು ಹೇಡಿನಲ್ಲಿ ಬಿಳೇ ಕಬ್ಬು; ಗೋಡಿನಲ್ಲಿ ಪಟ್ಟಾಪಟ್ಟಿ ಕಬ್ಬು ಚೆನ್ನಾಗಿ ಬೆಳೆಯುತ್ತವೆ. ಗೋಮು ನೆಲದಲ್ಲಿ ಸುಣ್ಣವು ಕಬ್ಬಿಣವು ತುಕ್ಕು ಇವ್ವಲ್ಲಿ ಕಬ್ಬು ಅತ್ಯುತ್ತಮವಾಗಿ ಬೆಳೆಯುವುದು. ಕಬ್ಬು ಭೂಮಿಯ ಸಾರವನ್ನು ಬಹಳವಾಗಿ ಎಳೆದುಕೊಳ್ಳುವುದರಿಂದ ಇದನ್ನು ಒಂದೊಂದುಕಡೆ ಮೂರು ನಾಲ್ಕು ವರ್ಷಗಳಿಗೊಂದಾವರ್ತಿ ಬೆಳೆಯಬೇಕು

ಕಬ್ಬಿಗೆ ರಂಜಕಾಮ್ಲವೂ ಸುಣ್ಣವೂ ವಿಶೇಷವಾಗಿ ಬೇಕಾಗಿರುವುದರಿಂದ ಮೊಳೆಯನ್ನು ಪುಡಿಮಾಡಿ ಹಾಕಿದಲ್ಲಿ ಉತ್ಕೃಷ್ಟವಾದ ಗೊಬ್ಬರವಾಗುವುದು. ಉಪ್ಪನ್ನು ಜಿರಿಸಿದ ಅನು ಹುಳುಗಳನ್ನು ಕೊಲ್ಲುವುದಲ್ಲದೆ ಭೂಮಿಯಲ್ಲಿ ತಂಪು ಕಡಮೆಯಾಗಿದ್ದರೆ ಸಸಿಗಳು ಒಣಗಿಹೋಗದಂತೆ ಕಾಪಾಡುವುದು. ಜನವ ಗೊಬ್ಬರವನ್ನಾಗಲಿ, ಹಿಂಡಿಯನ್ನಾಗಲಿ ಹಾಕಬೇಕಾದರೆ ಅವುಗಳನ್ನು ಚೆನ್ನಾಗಿ ಕೊಳೆಸಿ ಹಾಕಬೇಕು. ಪಶ್ಚಿಮದ್ವೀಪಗಳಲ್ಲಿ ಕಬ್ಬಿನ ಸಾಲುಗಳ ನಡುವೆ ನೀಲಿಯನ್ನು ಬೆಳೆದು, ಎರಡು ತಿಂಗಳಮೇಲೆ ಅದನ್ನು ಕತ್ತರಿಸಿ ಗೊಬ್ಬರವಾಗಿ ಉಪಯೋಗಿಸುವರು. ಜ್ಯೇಷ್ಠ ಆಷಾಢ ಮಾಸಗಳಲ್ಲಿ ಸ್ವಲ್ಪವಾದರೂ ತೇವವಿದ್ದರೆ ಎರಡು ಹತ್ತಾವೃತ್ತಿ ಉಳುತ್ತಾರೆ; ಇಲ್ಲದಿದ್ದರೆ ಪಿಕಾಸಿಗಳಿಂದ ಭೂಮಿಯನ್ನು ಸಡಲಿಸಿ, ಆಳೋಳಾವೃತ್ತಿ ಉಳುವುದು. ಮೂರು ಗೆಣ್ಣುಗಳಿರತಕ್ಕ ತುಂಡುಗಳನ್ನು ಕತ್ತರಿಸಿ, ನೀರನ್ನು ಚಿಮುಕಿಸಿ, ಸಗಣಿಯಿಂದಲೂ ಹುಲ್ಲಿನಿಂದಲೂ ಮುಚ್ಚುವುದು. ಅಗ್ರಭಾಗದ ತುಂಡುಗಳು ಉತ್ತಮವಾದವು. ಮೊಳೆಕೆಯಾಗುವವರೆಗೂ ನೀರನ್ನು ಚಿಮುಕಿಸುತ್ತಿರಬೇಕು. ನೇಗಿಲಿನ ಸಾಲುಗಳು ಒಂದೊಂದು ಅಡಿಯು ದೂರದಲ್ಲಿ ಇರಬೇಕು. ಆ ಸಾಲುಗಳಲ್ಲಿ ಎರಡು ಅಡಿಗಳಿಗೆ ಒಂದೊಂದು ತುಂಡನ್ನು ನೆಡುವುದು. ಇಲ್ಲದಿದ್ದರೆ ಗುಂಡಿಗಳಲ್ಲಿ ಹೂಳಿ, ಹಗುರವಾಗಿ ಮಣ್ಣನ್ನು ಎರಚಬೇಕು. ಬೀಜ ಮೊಳೆಯುವವರೆಗೆ ಪ್ರತಿದಿವಸವೂ ನೀರನ್ನು ಕಟ್ಟಬೇಕು. ಭೂಮಿಯಲ್ಲಿ ಜೇಡಿಮಣ್ಣು ಹೆಚ್ಚಾಗಿದ್ದರೆ ಎರಡುದಿನಗಳಿಗೊಂದಾವೃತ್ತಿ ನೀರನ್ನು ಕಟ್ಟಿದರೆ ಸಾಕು. ಹದಿನೈದು ಇಪ್ಪತ್ತು ದಿವಸಗಳವರೆಗೆ ನೇಗಲುಸಾಲಿನ ಹಳ್ಳಗಳಲ್ಲಿ ನೆಟ್ಟಿದ್ದರೆ, ನೇಗಲನ್ನು ದಿಬ್ಬಗಳ ಮಧ್ಯದಲ್ಲಿ ಹೊಡೆದು, ಹಳ್ಳವಿದ್ದಕಡೆ ದಿಬ್ಬ, ದಿಬ್ಬವಿದ್ದಕಡೆ ಹಳ್ಳವನ್ನು ಮಾಡಿ ಸುತ್ತಲೂ ಚೆನ್ನಾಗಿ ಕಳೆಯನ್ನು ಕೀಳಬೇಕು. ಎರಡನೆಯ ತಿಂಗಳಲ್ಲಿ ವಾರಕ್ಕೆ ಮೂರಾವೃತ್ತಿ ನೀರನ್ನು ಕಟ್ಟುವುದಲ್ಲದೆ ತಿಂಗಳ ಕೊನೆಯಲ್ಲಿ ಕಳೆಯನ್ನು ಕೀಳಬೇಕು. ಚೆನ್ನಾಗಿ ಕೊಳೆತ ಗೊಬ್ಬರವನ್ನು ಈ ಕಾಲದಲ್ಲಿ ಹಾಕಿ, ಸಸಿಗಳ ಸುತ್ತಲೂ ಮಣ್ಣನ್ನು ಗುಡ್ಡೆಮಾಡುವುದು ಉತ್ತಮ. ನಾಲ್ಕನೆಯ ತಿಂಗಳಲ್ಲಿ ಭೂಮಿಯನ್ನು ಸಡಲಿಸಿ, ಸಸಿಗಳ ಸುತ್ತಲೂ ಮಣ್ಣನ್ನು ಗುಡ್ಡೆಹಾಕುವುದಲ್ಲದೆ ವಾರಕ್ಕೆರಡುಸಾರಿ



ಕಬ್ಬು.

ನೀರನ್ನು ಕಟ್ಟುತ್ತಿರಬೇಕು. ಐದನೆಯ ತಿಂಗಳಲ್ಲಿ ಮತ್ತೊಂದಾವೃತ್ತಿ ಕಳೆಯನ್ನು ಕೀಳಬೇಕು. ಆಗ ಪ್ರತಿಯೊಂದರಲ್ಲಿಯೂ ಹತ್ತು ಹನ್ನೆರಡು ಗರಿಗಳಿರುವವು. ಇವುಗಳಲ್ಲಿ ಕೆಟ್ಟುಹೋದವುಗಳನ್ನು ತೆಗೆದು ಮಿಕ್ಕವುಗಳನ್ನು ಕಟ್ಟಬೇಕು. ಮಳೆಯು ಬೀಳದಿದ್ದರೆ ಹದಿನೈದುದಿವಸಗಳಿಗೊಂದಾವೃತ್ತಿ ನೀರನ್ನು ಕಟ್ಟುತ್ತಿರಬೇಕು. ಎಂಟನೆಯ ತಿಂಗಳ ಕೊನೆಯಭಾಗದಲ್ಲಿ ಇನ್ನೊಂದುಸಾರಿ ಗರಿಗಳನ್ನು ಕಟ್ಟಬೇಕು. ಹನ್ನೆರಡನೆಯ ತಿಂಗಳಿಗೆ ಕಟಾವಿಗೆ ಸಿದ್ಧವಾಗುವುದು. ಒಂದು ಎಕರೆಗೆ ಒಂದುಸಾವಿರದ ಒಂಬೈನೂರು ಮಣ ಕಬ್ಬಿನ ಜಲ್ಲೆಗಳಾಗುವವು. ಇವುಗಳಿಂದ ನೂರ ಇಪ್ಪತ್ತೈದರಿಂದ ನೂರ ಎಂಬತ್ತು ಮಣ ಬೆಲ್ಲವು ಸಿಕ್ಕುವದು.

ಬೆಲ್ಲವನ್ನುಮಾಡುವಕ್ರಮ.—ಹಾಲನ್ನ ತೆಗೆಯುವುದಕ್ಕೆ ಎರಡುವಿಧವಾದ ಯಂತ್ರಗಳನ್ನು ಉಪಯೋಗಿಸುತ್ತಾರೆ—ಒಂದು ಎಣ್ಣೆಯ ಗಾಣದಂತಿರುವದು; ಮತ್ತೊಂದು ಮರದುತ್ತಿನಿಂದ ತಿರುಗಿಸಲ್ಪಡುವ ಎರಡು ಉರುಳೆಗಳುಳ್ಳದ್ದು. ಈ ಉರುಳೆಗಳ ಮಧ್ಯನಲ್ಲಿ ಕಬ್ಬಿನ ಜಲ್ಲೆಗಳನ್ನು ಕೊಡುವುದು. ಕಬ್ಬಿನ ಹಾಲನ್ನು ತೆಗೆದಮೇಲೆ ಒಂದು ಕಬ್ಬಿಣದ ಕೊಪ್ಪರಿಗೆಯೊಳಗೆ, ಬಟ್ಟೆಯಮೂಲಕ ಶೋಧಿಸುವುರು. ಅನಂತರ ಸುಣ್ಣದ ತಿಳಿಯನ್ನು ಸೇರಿಸುತ್ತಾರೆ. ನಾಲ್ಕು ಐದು ಗಂಟೆಗಳಕಾಲ ಚೆನ್ನಾಗಿ ಕುದಿಸಿ, ಗೋರ್ಮಣೆಯಿಂದ ಕಲಕಿ, ಮೇಲೆಬರುವ ನೊರೆಯನ್ನು ತೆಗೆದು ಹಾಕಬೇಕು. ನೊರೆಯಲ್ಲ ಹೋಗಿ ಗೋರ್ಮಣೆಯಿಂದ ತೊಟ್ಟು ತೊಟ್ಟಾಗಿ ಬಿದ್ದರೆ ಕಾಸಿದ್ದು ಸಾಕೆಂದು ತಿಳಿಯಬಹುದು. ಅನಂತರ ಮೂರು ನಾಲ್ಕು ಗಂಟೆಯವರೆಗೆ "ಕಾನು" ವಿನಲ್ಲ ಹಾಕಿ, ಆರಿಸಿ, ಅಚ್ಚುಗಳಿಗೆ ಹಾಕಬೇಕು. ಸುಮಾರು ನಾಲ್ಕು ಗಂಟೆಗಳು ಅಲ್ಲಿದ್ದಮೇಲೆ ಅಚ್ಚನ್ನು ತಲೆಕೆಳಗೆಮಾಡಿದರೆ ಬೆಲ್ಲವು ಗಟ್ಟಿಯಾಗಿ ಕೆಳಕ್ಕೆ ಬೀಳುವುದು.

ಸಕ್ಕರೆಮಾಡುವಕ್ರಮ:—ಕಬ್ಬಿನ ಹಾಲು ಬೇಗನೆ ಹುಳಿಯಾಗುವುದರಿಂದ ಅವನ್ನು ಅನೇಕದಿವಸಗಳವರೆಗೆ ಇಡುವುದಕ್ಕಾಗುವುದಿಲ್ಲ. ಸುಣ್ಣವನ್ನು ಸೇರಿಸಿದರೆ ಕಬ್ಬಿನ ಹಾಲಿನಲ್ಲಿರುವ ಆಮ್ಲಗುಣವನ್ನು ಹೋಗಲಾಡಿಸಿ, "ಸಚ್ಚಾರ" ಗಳ ಗುಣವು ಬರುವುದು. ಹೀಗೆ ಮಾಡುವುದರಿಂದ ಹಾಲು ಕೆಡುವುದಿಲ್ಲ. ಹಾಲು ಕಾಯುತ್ತಿರುವಾಗ ಅದರೊಳಗಿನ ಕಶ್ಮಲಗಳೂ, ಅದರ ಜೊತೆಯಲ್ಲಿ ಬಂದ ಇತರ ಪದಾರ್ಥಗಳೂ ನೊರೆಯಾಗಿ ಮೇಲಕ್ಕೆ ತೇಲುತ್ತವೆ. ಈ ನೊರೆಯನ್ನು ಆಗಾಗ್ಗೆ ತೆಗೆದು ಹಾಕುತ್ತಿರಬೇಕು. ಹಾಲು ಪಾಕದಷ್ಟು ಗಟ್ಟಿಯಾದಮೇಲೆ ಕಾಯಿಸುವುದನ್ನು ನಿಲ್ಲಿಸಬೇಕು. ಇದನ್ನು ಅಲ್ಲಾಡಿಸದೆ ಕೆಲವು ಗಂಟೆಗಳವರೆಗೆ ಬಿಟ್ಟಿದ್ದರೆ ಸಕ್ಕರೆಯು ಮಿಣಗುಟ್ಟುವ ಹರಳುಗಳಾಗಿ ನಿಲ್ಲುವುದು. ಬಾರಿಬಾರಿಗೂ ಕಲಕುತ್ತಿದ್ದರೆ ಹರಳುಗಳು ದೊಡ್ಡವಾಗುವುದಿಲ್ಲ. ಕಂದು ಬಣ್ಣವಾಗಿರುವ ಈ ಸಕ್ಕರೆಯನ್ನು ಕಾಕಂಬಿಯಿಂದ ಬೇರ್ಪಡಿಸಬೇಕು.

ಈ ಸಕ್ಕರೆಯನ್ನು ನೀರಿನಲ್ಲಿ ಕರಗಿಸಿ, ಸಾರಜನಕಸಂಬಂಧವಾದ ವಸ್ತುಗಳ ಕೆಲವನ್ನು ಸೇರಿಸಿ ಕಾಯಿಸಿದರೆ ಅವು ಗಟ್ಟಿಯಾಗಿ ಪಾಕದಲ್ಲಿರುವ ಕಶ್ಮಲಗಳೊಡನೆ ಮೇಲಕ್ಕೆ ತೇಲುವವು. ಇವುಗಳನ್ನು ಸುಲಭವಾಗಿ ತೆಗೆಯಬಹುದು. ಅಮೇಲೆ ಇದ್ದಿಲಿನಮೂಲಕ ದಾಟಿಸುವಾಗ ಇದ್ದಿಲು ಇದರ ಬಣ್ಣವನ್ನು ಹೀರಿಕೊಳ್ಳುತ್ತದೆ. ಸಣ್ಣ ಸಣ್ಣ ರಂಧ್ರಗಳಿರತಕ್ಕ ಉರುಳಿಗಳಲ್ಲಿ ಇದನ್ನು ತುಂಬಿ, ಉರುಳಿಗಳನ್ನು ಅತ್ಯಂತ ರಭಸವಾಗಿ ತಿರುಗಿಸುವುದರಿಂದ ಸಕ್ಕರೆಯು ಹರಳು ಹರಳಾಗಿ ನಿಲ್ಲುವುದು.

ಸಕ್ಕರೆಯಲ್ಲಿದ್ದ ನೀರು ರಂಧ್ರಗಳಮೂಲಕ ಹೊರಗೆ ಹೊರಡುವುದು. ಹೀಗೆ ತಯಾರಾದ ಸಕ್ಕರೆಯನ್ನೇ ಇಲ್ಲಿನವರು ಅಪ್ಪಗಾಮ್ರದ ಸಕ್ಕರೆ ಎಂದು ಕರೆಯುವರು.

ಯೂರೋಪ್ ಖಂಡದಲ್ಲಿ ಬೀಟ್‌ರೂಟ್‌ನಿಂದಲೂ, ಅಮಿರಿಕಾಖಂಡದಲ್ಲಿ ಮೇಪಲ್ ಮರದಿಂದಲೂ ಸಕ್ಕರೆಯನ್ನು ತೆಗೆಯುತ್ತಾರೆ.

ಉಪಯೋಗ:—ಹಸಿದಾದ ಕಬ್ಬು ರುಚಿಯಾಗಿರುವುದರಿಂದ ಎಲ್ಲರೂ ಅದನ್ನು ತಿನ್ನುವರು. ಇದರಿಂದ ಬೆಲ್ಲವೂ ಸಕ್ಕರೆಯೂ ಆಗುತ್ತವೆ. ಮೇಲಣ ಭಾಗದ ಗರಿಗಳು ದನಗಳಿಗೆ ಮೇವಾಗುವುವು. ಸಕ್ಕರೆಯನ್ನು ಕಾಫಿ, ಟೀ, ಪೆರಿಬತ್ ಮುಂತಾದ ಪಾನದ್ರವ್ಯಗಳಲ್ಲಿಯೂ ಭಕ್ಷಭೋಜ್ಯಾದಿಗಳಲ್ಲಿಯೂ ಉಪಯೋಗಿಸುತ್ತಾರೆ

ಎಲ್. ಸುಬ್ಬು

ಕಿಂಡರ್‌ಗಾರ್ಟ್ನ್.

ಬಾಲ್ಯವಿದ್ಯಾಭ್ಯಾಸದಲ್ಲಿ ಉಪಾಧ್ಯಾಯನು ಸ್ವಭಾವಕ್ಕೆ ವ್ಯತಿರಿಕ್ತವಾಗಿ ನಡೆಯುವೆ ಮಕ್ಕಳ ಆಟಪಾಟಗಳಿಗೆ ಗಮನಕೊಟ್ಟು ತಿದ್ದಿ ಕ್ರಮಗೊಳಿಸುವುದಕ್ಕಿಂತಲೂ ಅತಿಶಯವಾದ ಕೆಲಸವು ಬೇರೆ ಇಲ್ಲವೆಂದು ತಿಳಿಯತಕ್ಕದ್ದು—ಯಾತಕಂದರೆ ಮೇಲೆ ಹೇಳಿದಂತೆ ಈ ಆಟಪಾಟಗಳಲ್ಲಿಯೇ ಬಾಲಕರ ಸಹಜವೃತ್ತಿಗಳನ್ನು ಗೊತ್ತುಮಾಡಬೇಕಲ್ಲದೆ ಬೇರೆ ಯಾವವಿಧವೂ ಇಲ್ಲವು. ಸಹಜವೃತ್ತಿಗಳೆಂದರೆ ಅಭ್ಯಾಸದಿಂದಲೂ ಅನುಭವದಿಂದಲೂ ಕಲಿಯದೇ ಸ್ವಭಾವವಾಗಿ ನೆಲೆಗೊಂಡಿರುವ ಅಪೇಕ್ಷೆಗಳೆಂದು ಅರ್ಥವು.

ಶರೀರಪೋಷಣೆಗೆ ಅವಶ್ಯಕವಾದ ಆಹಾರಾಪೇಕ್ಷೆಯು ತೃಪ್ತಿಯನ್ನು ಹೊಂದಿದಕೂಡಲೆ ಚಲನಾಪ್ರೀತಿಯು ವ್ಯಕ್ತವಾಗುವುದು. ಶೈಶವಾವಸ್ಥೆಯಲ್ಲಿ ಮಕ್ಕಳು ಕೈಕಾಲುಗಳನ್ನು ಉದ್ದೇಶವಿಲ್ಲದೆ ಚಲಿಯಿಸುವುವು. ಕೈಕಾಲುಗಳಿಗೆ ಸ್ವಲ್ಪ ಶಕ್ತಿ

ಬಂದಕೂಡಲೆ ವಿರಾಮವಿಲ್ಲದೆ ಓಡಾಡುವದರಲ್ಲಿಯೂ, ಕುಣಿಯುವುದರಲ್ಲಿಯೂ, ಕುಪ್ಪಳಿಸುವುದರಲ್ಲಿಯೂ ಮಕ್ಕಳು ಆಸಕ್ತಿಯನ್ನುಹೊಂದುವರು. ಈ ವಿಷಯವಾದ ಚಲನೆಗಳಿಂದಲೇ ಮಕ್ಕಳ ಅವಯವಗಳು ಕ್ರಮವಾಗಿ ಅಭಿವೃದ್ಧಿಯನ್ನುಹೊಂದುವವು. ಆದ ಕಾರಣ ಸಹಜವಾದ ಚಟುವಟಿಕೆಯನ್ನು ವೃದ್ಧಿಪಡಿಸುವುದು ಅವಶ್ಯಕವು. ಕಿಂಡರ್‌ಗಾರ್ಟನ್ ಪಾಠಕ್ರಮದಲ್ಲಿ ವಿಸ್ತರಿಸಿರುವ ಗಾನಯುಕ್ತವಾದ ಅಂಗಸಾಧನೆಗಳಿಂದ ಈ ಉದ್ದೇಶವು ನೆರವೇರುವುದು. ಮುಖ್ಯವಾಗಿ ಉಪಾಧ್ಯಾಯನು ಬಾಲಕರಿಗೆ ಅಂಗಸಾಧನೆಯನ್ನು ಮಾಡಿಸದಿದ್ದಲ್ಲಿ ದೇಹವ ಅಭಿವೃದ್ಧಿಗೆ ಕೊರತೆಯುಂಟಾಗಿ ಮಕ್ಕಳು ದೊಡ್ಡವರಾದನಂತರ ಎಷ್ಟು ಬುದ್ಧಿವಂತರಾದಾಗ್ಯೂ ಕಾಯಪುಷ್ಟಿಯಿಲ್ಲದ್ದರಿಂದ ಕಠಿನವಾದ ಕೆಲಸಗಳಿಗೆ ಪ್ರವರ್ತಿಸಿ ಪೂರೈಸುವದಕ್ಕೆ ಅಶಕ್ತರಾಗುವರು.

ಚಟುವಟಿಕೆಯಲ್ಲಿ ಪ್ರೀತಿ ಇರುವಂತೆ ಬಾಲಕರಿಗೆ ವ್ಯವಸಾಯದಲ್ಲಿಯೂ ಪ್ರೀತಿ ಇರುವುದು. ಇದಕ್ಕೆ ಸಾಧನೆಯನ್ನು ಒದಗಿಸಿಕೊಡದಿರುವುದರಿಂದಲೇ ಬಾಲಕರು ಬೀದಿಯ ಧೂಳನ್ನು ಎತ್ತಿಕೊಂಡು ಆಡುವುದರಲ್ಲಿಯಾದರೂ ಸಂತೋಷಪಡುವರು. ಭೂಮಿಯನ್ನು ಅಗೆಯುವುದು, ಮರಳನ್ನು ತೋಡುವದು ಸಾರಂಭದಲ್ಲಿ ಅಲ್ಪ ಕೆಲಸಗಳೆಂದು ತೋರಿದರೂ ಅವುಗಳ ಫಲಿತಾಂಶವು ಮುಖ್ಯವಾದದ್ದು. ಬೀಜಗಳನ್ನು ಬಿತ್ತುವುದರಲ್ಲಿಯೂ ಸಸಿಗಳನ್ನು ನೆಡುವುದರಲ್ಲಿಯೂ ಮಕ್ಕಳಿಗೆ ಅತ್ಯಂತ ಸಂತೋಷ ಉಂಟಾಗುವುದು. ಈ ಅಭಿಲಾಷೆಗೆ ಪ್ರೋತ್ಸಾಹಕೊಡದಿದ್ದರಾಗಲಿ ಅಥವ ಅದನ್ನು ನಾಶಪಡಿಸಿದರಾಗಲಿ ಉಂಟಾಗುತಿದ್ದ ಪ್ರಯೋಜನವು ದೊರೆಯದಿರುವುದು ಮಾತ್ರವಲ್ಲದೆ ಮಕ್ಕಳು ಕೇವಲ ಸೋಮಾರಿಗಳಾಗುವರು. ಮೇಲೆ ಹೇಳಿದ ತತ್ವವನ್ನು ತಿಳಿದ ತಂದೆ ತಾಯಿಗಳು ಮಕ್ಕಳಿಗೆ ತಕ್ಕ ಸಾಮಗ್ರಿಗಳನ್ನೊದಗಿಸಿಕೊಟ್ಟಲ್ಲಿ ಅವರು ಭೂಮಿಯನ್ನು ಅಗೆದು ಬೀಜಗಳನ್ನು ಹುಟ್ಟಿಹಾಕಿ, ಸಸಿಗಳಿಗೆ ನೀರುಹಾಯಿಸು ಪುಷ್ಪ, ಫಲಗಳು ಬಿಡುವ ಕಾಲವನ್ನು ಅತ್ಯಾತುರದಿಂದ ನಿರೀಕ್ಷಿಸಿಕೊಂಡಿರುವರು. ಇಲ್ಲದೆ ಆಯಾ ಕಾಲದಲ್ಲಿ ಭೂಪ್ರಾಣವು ಅಂಕುರಿಸುವುದು, ಪುಷ್ಪಿಸುವುದು, ಫಲಿಸುವುದು, ಇವುಗಳನ್ನು ನೋಡುತ್ತಿರುವುದರಿಂದಲೂ, ಕೋಳಿ, ಗಿಣಿ, ಮುಂತಾದ ಪಕ್ಷಿಗಳು ತಮ್ಮ ಗೂಡು ಕಟ್ಟುವದನ್ನು, ದುಂಬಿ, ಚಿಟ್ಟೆ ಮುಂತಾದ ಪ್ರಾಣಿಗಳು ಮಕರಂದ ಪಾನವೆಸಾಡುವುದಕ್ಕೆ ಬರುವುದನ್ನು ನೋಡುವುದರಿಂದಲು, ಮಕ್ಕಳು ಪಾಠಶಾಲೆಯಲ್ಲಿ ಪುಸ್ತಕಗಳನ್ನೋದಿ ಕಲಿಯುವ ಜ್ಞಾನಕ್ಕಿಂತಲೂ ಅತಿಶಯವಾದ ಜ್ಞಾನವನ್ನು ಸಂಪಾದಿಸುವರು.

ಆದರೆ ಮಕ್ಕಳ ಇಂದ್ರಿಯಗಳ ಸಂತೋಷಮಾತ್ರವೇ ಅವರ ಜ್ಞಾನಾಭಿವೃದ್ಧಿಗೆ ಮುಖ್ಯ ಕಾರಣವೆಂದು ತಿಳಿಯಕೂಡದು ಸಸಿ ಮೃಗಾದಿಗಳನ್ನು ಪ್ರೀತಿಸುವುದರಿಂದ ಬಾಲ್ಯಕ್ಕೆ ಸ್ವಾಭಾವಿಕವಾದ ಸ್ವಾರ್ಥಿಲಾಷೆಯು ಕ್ರಮೇಣ ನಾಶಹೊಂದಿ ಪರೋಪಕಾರಬುದ್ಧಿಯು ಅಂಕುರಿಸುವುದು. ಆದರೆ ಬಲಾತ್ಕಾರದಿಂದ ಯಾವ ಕೆಲಸ

ವನ್ನು ಮಾಡಿಸಕೂಡದು. ಸುಲಭವಾದ ಮಾರ್ಗಗಳನ್ನು ತೋರಿಸಿದಲ್ಲಿ ಅನಂತರ ಅಸಹಾಯರಾಗಿ ತಾವೇ ಕೆಲಸಮಾಡಬೇಕೆಂಬ ಅಪೇಕ್ಷೆಯು ಬಾಲಕರಲ್ಲಿ ಉಂಟಾಗುವುದು.

ಸಸಿಮೃಗಾದಿಗಳನ್ನು ಪೋಷಿಸಬೇಕೆಂಬ ಅಪೇಕ್ಷೆಯು ಮಕ್ಕಳಲ್ಲಿ ಅತಿಶಯವಾಗಿರುವುದರಿಂದಲೇ ಫ್ರೋಬೆಲ್ಲನು (Frœbel) ಈ ಪದ್ಧತಿಗೆ 'ಕಿಂಡರ್‌ಗಾರ್ಟನ್' ಎಂದು ಹೆಸರಿಟ್ಟಿದ್ದರಿಂದ ಹಿಂದಣ ಸಂಚಿಕೆಯಲ್ಲಿ ಈ ಪದಕ್ಕೆ ಸೂಚಿಸಿರುವ ಅರ್ಥದಿಂದಲೂ, ಇಲ್ಲಿ ವಿವರಿಸಿರುವ ಅರ್ಥದಿಂದಲೂ ಸಂಪೂರ್ಣ ಸಾರ್ಥಿಕ್ಯವನ್ನು ಕೊಟ್ಟಂತಾಯಿತು.

ಡಿ. ವೆಂಕಟರಾಮಯ್ಯ, ಬಿ. ಎ.

ಗಣಿತ.

ತ್ರಿಕೋಣದ ಕೋಣಗಳಲ್ಲೊಂದು ಸಮವಾಗಿದ್ದರೆ ಆ ತ್ರಿಕೋಣಕ್ಕೆ ಸಮಕೋಣತ್ರಿಕೋಣವೆಂದು ಹೆಸರು. A B C ಎಂಬುದು ಒಂದು ಸಮಕೋಣತ್ರಿಕೋಣದ ಆಕೃತಿಯು. ಇದರಲ್ಲಿ A C B ಎಂಬುದು ಸಮಕೋಣವು. ಇದಕ್ಕೆ ಎದುರಾಗಿರುವ A B ಎಂಬ ಭುಜಕ್ಕೆ ಕರ್ಣರೇಖೆಯೆಂದು ಹೆಸರು.



ಸಮಕೋಣದ ಮೂರು ಭುಜಗಳಲ್ಲಿ ಯಾವ ಎರಡರ ಅಳತೆಯು ತಿಳಿದರೂ ಮೂರನೇ ಭುಜದ ಅಳತೆಯನ್ನು ಕಂಡು ಹಿಡಿಯಬಹುದು.

I. ಕರ್ಣರೇಖೆಯನ್ನು ಕಂಡು ಹಿಡಿಯುವ ವಿಧಾನ:—

ಭುಜಗಳ ವರ್ಗಗಳನ್ನು ಸೇರಿಸಿ ಬಂದದ್ದರ ವರ್ಗಮೂಲವನ್ನು ಕಂಡು ಹಿಡಿಯಬೇಕು.

ಉದಾಹರಣೆ (1) ಒಂದು ಭುಜದ ಅಳತೆಯು 3 ಅಡಿ, ಎರಡನೆಯದರದು 4 ಅಡಿ. 3 ರ ವರ್ಗ 9, 4 ರದು 16; 9 ಕ್ಕೆ 16 ರನ್ನು ಸೇರಿಸಿದರೆ 25 ಆಗುವುದು. 25 ರ ವರ್ಗಮೂಲವು 5. ಆದುದರಿಂದ ಕರ್ಣರೇಖೆಯು ಅಳತೆಯು 5 ಅಡಿ.

ಉದಾಹರಣೆ (2) ಒಂದು ಭುಜದ ಅಳತೆಯು 2 ಅಡಿ, ಎರಡನೆಯದರದು 10 ಅಂಗುಲ.

2 ಅಡಿಗಳಿಗೆ 24 ಅಂಗುಲಗಳು, 24 ರ ವರ್ಗ 576, 10 ರ ವರ್ಗ 100; 576 ಕ್ಕೆ 100 ನ್ನು ಸೇರಿಸಿದರೆ 676 ಆಗುವುದು. 676 ರ ವರ್ಗಮೂಲವು 26. ಆದುದರಿಂದ ಕರ್ಣರೇಖೆಯ ಅಳತೆಯು 26 ಅಂಗುಲ.

ಎರಡನೆಯ ಉದಾಹರಣೆಯನ್ನು ಮಾಡುವಲ್ಲಿ 2 ಅಡಿ ಎಂಬುದನ್ನು ಅಂಗುಲಗಳನ್ನಾಗಿ ಮಾಡಿದೆವು; ಅಥವಾ 10 ಅಂಗುಲವೆಂಬುದನ್ನು ಅಡಿಯನ್ನಾಗಿ ಮಾಡಿ ಲೆಕ್ಕವನ್ನು ಮಾಡಬಹುದಾಗಿತ್ತು. ಹೀಗೆಯೇ ಇಂಥ ಲೆಕ್ಕಗಳಲ್ಲಿ ಬರತಕ್ಕ ಅಳತೆಗಳನ್ನೆಲ್ಲ ಒಂದೇ ರೂಪದಲ್ಲಿಟ್ಟು ಮಾಡಬೇಕು. ಕೆಲವು ಅಡಿಗಳನ್ನಾಗಿಟ್ಟು ಮತ್ತೆ ಕೆಲವನ್ನು ಅಂಗುಲಗಳನ್ನಾಗಿಟ್ಟು ಮೇಲೆ ಹೇಳಿದ ವಿಧಿಯನ್ನು ಉಪಯೋಗಿಸುವುದಕ್ಕೆ ಯತ್ನಿಸಬಾರದು.

II. ಕರ್ಣರೇಖೆಯು ಮತ್ತು ಒಂದು ಭುಜದ ಅಳತೆಗಳು ತಿಳಿದರೆ ಉಳಿದ ಭುಜದ ಅಳತೆಯನ್ನು ಕಂಡುಹಿಡಿಯುವ ವಿಧಾನ:—

ಕರ್ಣರೇಖೆಯ ವರ್ಗದಿಂದ ತಿಳಿದಿರತಕ್ಕ ಭುಜದ ವರ್ಗವನ್ನು ಕಳೆದು ಉಳಿದ ದ್ದರ ವರ್ಗಮೂಲವನ್ನು ಕಂಡು ಹಿಡಿಯಬೇಕು.

ಉದಾಹರಣೆ—ಕರ್ಣರೇಖೆಯ ಅಳತೆ 26 ಅಂಗುಲ, ಒಂದು ಭುಜದ್ದು 2 ಅಡಿ.

26 ವರ್ಗ 696, 2 ಅಡಿಗಳಿಗೆ 24 ಅಂಗುಲ, 24 ರ ವರ್ಗ 596. 696 ರಲ್ಲಿ 596 ರನ್ನು ಕಳೆದರೆ 100 ಉಳಿಯುವುದು. 100 ರ ವರ್ಗಮೂಲವು 10. ಆದುದರಿಂದ ಉಳಿದ ಭುಜದ ಅಳತೆಯು 10 ಅಂಗುಲ.

ಈ ವಿಧಿಯನ್ನು ಮೊದಲನೇ ವಿಧಿಯಿಂದ ಸುಲಭವಾಗಿ ಊಹಿಸಬಹುದೆಂದು ಸ್ವಲ್ಪ ಯೋಚಿಸಿದರೆ ಸ್ಪಷ್ಟವಾಗುವುದು. ಲೆಕ್ಕಗಳನ್ನು ಮಾಡುವಾಗ ಹೆಚ್ಚಾಗಿ ಸೌಲಭ್ಯವನ್ನುಂಟುಮಾಡಿಕೊಳ್ಳುವುದಕ್ಕೆ ಇದೇ ವಿಧಿಯನ್ನು ಬೇರೆ ರೀತಿಯಲ್ಲಿ ಹೇಳುವುದುಂಟು. ಅದು ಹೇಗೆಂದರೆ:—

ಕರ್ಣರೇಖೆಯು ಮತ್ತು ತಿಳಿದಿರತಕ್ಕ ಭುಜದ ಅಳತೆಗಳನ್ನು ಸೇರಿಸಿ ಬಂದ ದ್ದನ್ನ ಅವೆರಡಕ್ಕಿರುವ ವ್ಯತ್ಯಾಸದಿಂದ ಗುಣಿಸಿಬಂದ ಲಬ್ಧದ ವರ್ಗಮೂಲವನ್ನು ಕಂಡುಹಿಡಿಯಬೇಕು.

ಮೇಲೆ ಹೇಳಿದ ಲೆಕ್ಕವನ್ನೇ ಉದಾಹರಣೆಯಾಗಿ ತೆಗೆದುಕೊಳ್ಳುವಣ.

26ಕ್ಕೆ 24 ನ್ನು ಸೇರಿಸಿದರೆ 50 ಆಗುವುದು, 26 ಕ್ಕೂ 24 ಕ್ಕೂ ಇರತಕ್ಕ ವ್ಯತ್ಯಾಸವು 2. 50 ನ್ನು 2 ರಿಂದ ಗುಣಿಸಿದರೆ 100 ಬರುವುದು. 100 ರ ವರ್ಗ ಮೂಲವು 10. ಆದುದರಿಂದ ಉಳಿದ ಭುಜದ ಅಳತೆಯು 10 ಅಂಗುಲ.

ಮೇಲೆ ಮಾಡಿರುವ ಲೆಕ್ಕಗಳಲ್ಲಿ ಬಂದ ಸಂಖ್ಯೆಗಳ ವರ್ಗಮೂಲಗಳನ್ನು ಸರಿಯಾಗಿ ಕಂಡು ಹಿಡಿಯುವುದು ಸುಲಭವಾಗಿತ್ತು. ಹಾಗಿಲ್ಲದೆಯೂ ಇರಬಹುದು. ಅಂಥ ಸಂದರ್ಭಗಳಲ್ಲಿ ಸಂಖ್ಯೆಗಳ ವರ್ಗಮೂಲಗಳನ್ನು ಕಂಡುಹಿಡಿಯುತ್ತ ಎಷ್ಟು ದಶಮಾಂಶಸ್ಥಾನಗಳವರೆಗೆ ಉತ್ತರವು ಅವಶ್ಯಕವೊ ಅಷ್ಟು ಸ್ಥಾನಗಳು ಬಂದನಂತರ ನಿಲ್ಲಿಸತಕ್ಕದ್ದು.

ಉದಾಹರಣೆ —ಕರ್ಣರೇಖೆಯು ಅಳತೆಯು 2 ಅಡಿ 3 ಅಂಗುಲ, ಒಂದು ಭುಜವು 8 ಅಂಗುಲ.

2 ಅಡಿ 3 ಅಂಗುಲ = 27 ಅಂಗುಲ.

$27 + 8 = 35$

$27 - 8 = 19$

$35 \times 19 = 665$

$\sqrt{665.0000} = 25.78$

4

45) 265

225

507) 4000

3549

5148) 45100

41184

3916

ಎರಡು ದಶಮಾಂಶಸ್ಥಾನಗಳ ವರೆಗೆ ಉತ್ತರ ಬೇಕಾದರೆ ಉಳಿದ ಭುಜದ ಅಳತೆಯು ಸುಮಾರು 25·78 ಅಂಗುಲ.

ಮಾಡುವುದಕ್ಕೆ ಲೆಕ್ಕಗಳು.

(1) ಸಮಕೋಣ ತ್ರಿಕೋಣದ ಒಂದು ಭುಜದ ಅಳತೆಯು 408 ಅಡಿ. ಕರ್ಣರೇಖೆಯ ಮತ್ತು ಉಳಿದ ಭುಜದ ಅಳತೆಗಳ ಮೊತ್ತವು 578 ಅಡಿ. ಕರ್ಣರೇಖೆಯ ಮತ್ತು ಆ ಭುಜದ ಅಳತೆಗಳೆಷ್ಟು?

(2) ಒಂದು ತ್ರಿಕೋಣದ ಭುಜಗಳಲ್ಲಿ ಪ್ರತಿಯೊಂದೂ 1 ಅಡಿಯುದ್ದವಿರುವುದು. ಆ ತ್ರಿಕೋಣವ ಎತ್ತರವೆಷ್ಟಿರಬೇಕು?

ಪರೀಕ್ಷೆಗೆ ಹೋಗಿರತಕ್ಕ ವಿದ್ಯಾರ್ಥಿಗಳು ಜ್ಞಾಪಕದಲ್ಲಿಡತಕ್ಕ ಮುಖ್ಯಾಂಶಗಳು.

---

(೧) ಪರೀಕ್ಷೆಗೆ ಪ್ರಾರಂಭಿಸುವುದಕ್ಕೆ ಒಂದು ವಾರವಿರುವಹಾಗೆಯೆ ವಿಶೇಷವಾಗಿ ಹಗಲು-ರಾತ್ರಿ ನಿದ್ರೆಕೆಟ್ಟು ವ್ಯಾಸಂಗಮಾಡುವುದನ್ನು ಬಿಟ್ಟುಬಿಡಬೇಕು. ನಾಳೆ ದಿವಸ ಪರೀಕ್ಷೆಯು ಪ್ರಾರಂಭಿಸುವುದಾದರೆ ಕೆಲವುಮಂದಿ ವಿದ್ಯಾರ್ಥಿಗಳು ಹಿಂದಿನರಾತ್ರೆಯಲ್ಲಾ ನಿದ್ದೆಗೆಟ್ಟು, ಪರೀಕ್ಷೆಯಲ್ಲಿ ಚೆನ್ನಾಗಿ ತೇರ್ಗಡೆಯಾಗುತ್ತೇವೆಂಬ ಅಭಿಪ್ರಾಯದಿಂದ ಓದುವರು. ಹೀಗೆ ನಿದ್ರೆಕೆಡೋಣದರಿಂದ ಕಣ್ಣುಗಳು ಕೆಂಪಾಗಿ ನೀರು ಸುರಿಯಲು, ಕೈಲಿರುವ ಪ್ರಶ್ನಪತ್ರಿಕೆಯನ್ನು ಓದಲಿಕ್ಕೆ ಕೂಡ ಅನಾನುಕೂಲವಾಗಿಯೂ, ಮತ್ತಾಗಿಯೂ, ಬುದ್ಧಿ ಮಂಕಾಗಿ, ಯಾವದನ್ನೂ ಬರಿಯುವುದಕ್ಕೆ ತೋಚದೆ ಶ್ರಮೆಪಟ್ಟು ಓದಿದ್ದಕ್ಕೆ ಸಫಲವಿಲ್ಲದೇ ಹೋಗುವುದು. ಆದುದರಿಂದ ಪರೀಕ್ಷೆಯು ನಡೆಯುತ್ತಲಿರುವಾಗಲೂ, ಪರೀಕ್ಷೆಯ ಹಿಂದಣದಿವಸದಲ್ಲಿಯೂ ರಾತ್ರಿವೇಳೆ ವಿಶೇಷ ನಿದ್ದೆಗೆಟ್ಟು ಓದಬಾರದು. ನಿದ್ದೆಗಣ್ಣಿನಲ್ಲಿ ಎಷ್ಟು ಓದಿದಾಗ್ಯೂ ಪ್ರಯೋಜನವಿಲ್ಲ. ಪಾಠಚಿಂತನೆ, ಆವರ್ತನ ಪುನರಾವರ್ತನ ಇವೆಲ್ಲವನ್ನೂ ಪರೀಕ್ಷೆಯು ಇನ್ನೆಂಟು ದಿವಸವಿದೆ ಎಂಬುವಷ್ಟರಲ್ಲಿಯೇ ಮಾಡಿಕೊಂಡಿದ್ದು, ಆ ಎಂಟುದಿನಗಳಲ್ಲಿ ಮುಖ್ಯ ಸಂಗತಿಗಳನ್ನು ಮಾತ್ರ ನೋಡಿಕೊಳ್ಳುತ್ತಿರಬೇಕು.

(೨) ಪರೀಕ್ಷೆಯು ಆರಂಭಿಸುವುದಕ್ಕೆ ಸುಮಾರು ಅರ್ಧಘಂಟೆ ಮುಂಚಿತನಾಗಿಯೆ, ವಿದ್ಯಾರ್ಥಿಗಳು ತಮ್ಮತಮ್ಮ ಟಿಕಿಟ್ (Hall Ticket) ಗಳೊಡನೆ ಪರೀಕ್ಷೆಯು ಆಗುವ ಸ್ಥಳಕ್ಕೆ ಬಂದಿರಬೇಕು. ಮೊದಲನೆಯ ದಿವಸ ಮಾತ್ರ ಇನ್ನು ಸ್ವಲ್ಪ ಮುಂಚಿತವಾಗಿಯೆ ಬಂದು ತಮ್ಮತಮ್ಮ ಸ್ಥಳಗಳನ್ನು ನೋಡಿಕೊಂಡಿರಬೇಕು.

(೩) ಮೊದಲನೆಯ ಅವರ್ತಿ ಘಂಟೆ ಹೊಡೆದೊಡನೆಯೆ ತಮ್ಮತಮ್ಮ ಸ್ಥಳದಲ್ಲಿ ಬಂದು ಕೂತುಕೊಂಡು, ಮೇಜಿನಮೇಲೆ ಇಟ್ಟಿರತಕ್ಕ ಕಾಗದಗಳನ್ನು ತೆಗೆದುಕೊಂಡು ಸುಮಾರು ಮೂರುಬೆಟ್ಟಗಲ ಕಾಗದವನ್ನ ಎತಭಾಗದಲ್ಲಿ ಮಡಿಸಿ ಬರೆಯುವುದಕ್ಕೆ ಸಿದ್ಧಪಡಿಸಿಕೊಳ್ಳಬೇಕು. ಕಾಗದದ ಎರಡುಭಾಗದಲ್ಲಿಯೂ ಬರೆಯಕೂಡದು.

(೪) ವಿದ್ಯಾರ್ಥಿಗಳೆಲ್ಲರೂ ತಮ್ಮತಮ್ಮ ಪೇನವನ್ನು ತಂದಿರುವುದು ಉತ್ತಮ. ಕೆಲವುಮಂದಿ ವಿದ್ಯಾರ್ಥಿಗಳು ಅಲ್ಲಿಯೇ ಸ್ಟೀಲ್‌ಪೇನವನ್ನು ಕೊಡುವೆಂದು, ತಮಗೆ ಪರಿಚಿತವಾದ ಪೇನವನ್ನು ಮನೆಯಲ್ಲಿಯೇ ಬಿಟ್ಟು ಬರುವರು. ಅಲ್ಲಟ್ಟಿರತಕ್ಕ ಪೇನಗಳು ಹೊಸದಾಗಿರುವುದರಿಂದ ಬರೆಯಲಿಕ್ಕೆ ಪ್ರಾರಂಭಿಸಿದೊಡನೆ ಶಾಯಿ ಧುಮಿಕಿ ಸ್ವಲ್ಪ

25 ಅಡಿಯುದ್ದವಿರುವ ಏಣಿಯೊಂದನ್ನು ಒಂದು ಗೋಡೆಗೆ ಸಮನಾಗಿ ನಿಲ್ಲಿಸಿದೆ. ನೆಲದಮೇಲೆ ಏಣಿಯು ಬುಡವನ್ನು ಎಷ್ಟುದೂರವಿಳಿವರೆ ಏಣಿಯ ಮೇಲಭಾಗವು ಗೋಡೆಯಮೇಲೆ ಒಂದು ಅಡಿ ಕೆಳಕ್ಕೆ ಬರುವುದು ?

(ಮೊಡಿದ ಲೆಕ್ಕಗಳನ್ನು ಮ್ಯಾನೇಜರವರಿಗೆ ನವೆಂಬರ್ ೭೦ ನೇ ತಾರೀಖಿನ ಒಳಗೆ ಕಳುಹಿಸಿಕೊಡಬೇಕು.)

ಹಿಂದಿನ ಸಂಚಿಕೆಯಲ್ಲಿನ ಲೆಕ್ಕವನ್ನು ಮಾಡುವರೀತಿ;—

$$1 = 1{\cdot}00000$$

$$\frac{1}{1\times2} = {\cdot}50000$$

$$\frac{1}{1\times2\times3} = {\cdot}16666$$

$$\frac{1}{1\times\cdots\times4} = {\cdot}04166$$

$$\frac{1}{\cdots\times5} = {\cdot}00833$$

$$\frac{1}{1\times\cdots\times6} = {\cdot}00138$$

$$\frac{1}{\cdots\times7} = {\cdot}00019$$

$$\frac{1}{\times\cdots\times8} = {\cdot}00002$$

$$1{\cdot}71824$$

ನಾಲ್ಕು ದಶಮಾಂಶಸ್ಥಾನಗಳವರೆಗೆ ಲೆಕ್ಕದ ಉತ್ತರವು.

$$1{\cdot}7182$$

ಪರೀಕ್ಷೆಗೆ ಹೋಗಿರತಕ್ಕ ವಿದ್ಯಾರ್ಥಿಗಳು ಜ್ಞಾಪಕದಲ್ಲಿಡತಕ್ಕ ಮುಖ್ಯಾಂಶಗಳು.

---

(೧) ಪರೀಕ್ಷೆಗೆ ಪ್ರಾರಂಭಿಸುವುದಕ್ಕೆ ಒಂದು ವಾರವಿರುವಹಾಗೆಯೆ ವಿಶೇಷವಾಗಿ ಹಗಲು-ರಾತ್ರಿ ನಿದ್ರೆಕೆಟ್ಟು ವ್ಯಾಸಂಗಮಾಡುವುದನ್ನು ಬಿಟ್ಟುಬಿಡಬೇಕು. ನಾಳೆ ದಿವಸ ಪರೀಕ್ಷೆಯು ಪ್ರಾರಂಭಿಸುವುದಾದರೆ ಕೆಲವುಮಂದಿ ವಿದ್ಯಾರ್ಥಿಗಳು ಹಿಂದಿನರಾತ್ರೆಯಲ್ಲಾ ನಿದ್ದೆಗೆಟ್ಟು, ಪರೀಕ್ಷೆಯಲ್ಲಿ ಚೆನ್ನಾಗಿ ತೇರ್ಗಡೆಯಾಗುತ್ತೇವೆಂಬ ಅಭಿಪ್ರಾಯದಿಂದ ಓದುವರು. ಹೀಗೆ ನಿದ್ರೆಕೆಡೋಣದರಿಂದ ಕಣ್ಣುಗಳು ಕೆಂಪಾಗಿ ನೀರು ಸುರಿಯಲು, ಕೈಲಿರುವ ಪ್ರಶ್ನಪತ್ರಿಕೆಯನ್ನು ಓದಲಿಕ್ಕೆ ಕೂಡ ಅನಾನುಕೂಲವಾಗಿಯೂ, ಮತ್ತಾಗಿಯೂ, ಬುದ್ಧಿ ಮಂಕಾಗಿ, ಯಾವೆದನ್ನೂ ಬರಿಯುವುದಕ್ಕೆ ತೋಚದೆ ಶ್ರಮಪಟ್ಟು ಓದಿದ್ದಕ್ಕೆ ಸಫಲವಿಲ್ಲದೇ ಹೋಗುವುದು. ಆದುದರಿಂದ ಪರೀಕ್ಷೆಯು ನಡೆಯುತ್ತಲಿರುವಾಗಲೂ, ಪರೀಕ್ಷೆಯ ಹಿಂದಣದಿವಸದಲ್ಲಿಯೂ ರಾತ್ರಿವೇಳೆ ವಿಶೇಷ ನಿದ್ದೆಗೆಟ್ಟು ಓದಬಾರದು. ನಿದ್ದೆಗಣ್ಣಿನಲ್ಲಿ ಎಷ್ಟು ಓದಿದಾಗ್ಯೂ ಪ್ರಯೋಜನವಿಲ್ಲ. ಪಾಠಚಿಂತನೆ, ಆವರ್ತನ ಪುನರಾವರ್ತನ ಇವೆಲ್ಲವನ್ನೂ ಪರೀಕ್ಷೆಯು ಇನ್ನೆಂಟು ದಿವಸವಿದೆ ಎಂಬುವಷ್ಟರಲ್ಲಿಯೇ ಮಾಡಿಕೊಂಡಿದ್ದು, ಆ ಎಂಟುದಿನಗಳಲ್ಲಿ ಮುಖ್ಯ ಸಂಗತಿಗಳನ್ನು ಮಾತ್ರ ನೋಡಿಕೊಳ್ಳುತ್ತಿರಬೇಕು.

(೨) ಪರೀಕ್ಷೆಯು ಆರಂಭಿಸುವುದಕ್ಕೆ ಸುಮಾರು ಅರ್ಧಘಂಟೆ ಮುಂಚಿತವಾಗಿಯೆ, ವಿದ್ಯಾರ್ಥಿಗಳು ತಮ್ಮತಮ್ಮ ಟಿಕೆಟ್ (Hall Ticket) ಗಳೊಡನೆ ಪರೀಕ್ಷೆಯು ಆಗುವ ಸ್ಥಳಕ್ಕೆ ಬಂದಿರಬೇಕು. ಮೊದಲನೆಯ ದಿವಸ ಮಾತ್ರ ಇನ್ನು ಸ್ವಲ್ಪ ಮುಂಚಿತವಾಗಿಯೆ ಬಂದು ತಮ್ಮತಮ್ಮ ಸ್ಥಳಗಳನ್ನು ನೋಡಿಕೊಂಡಿರಬೇಕು.

(೩) ಮೊದಲನೆಯ ಅವರ್ತಿ ಘಂಟೆ ಹೊಡೆದೊಡನೆಯೆ ತಮ್ಮತಮ್ಮ ಸ್ಥಳದಲ್ಲಿ ಬಂದು ಕೂತುಕೊಂಡು, ಮೇಜಿನಮೇಲೆ ಇಟ್ಟಿರತಕ್ಕ ಕಾಗದಗಳನ್ನು ತೆಗೆದುಕೊಂಡು ಸುಮಾರು ಮೂರುಬೆಟ್ಟಗಲ ಕಾಗದವನ್ನ ಎತಭಾಗದಲ್ಲಿ ಮಡಿಸಿ ಬರೆಯುವುದಕ್ಕೆ ಸಿದ್ಧಪಡಿಸಿಕೊಳ್ಳಬೇಕು. ಕಾಗದದ ಎರಡುಭಾಗದಲ್ಲಿಯೂ ಬರೆಯಕೂಡದು.

(೪) ವಿದ್ಯಾರ್ಥಿಗಳೆಲ್ಲರೂ ತಮ್ಮತಮ್ಮ ಪೇನವನ್ನು ತಂದಿರುವುದು ಉತ್ತಮ. ಕೆಲವುಮಂದಿ ವಿದ್ಯಾರ್ಥಿಗಳು ಅಲ್ಲಿಯೇ ಸ್ಟೀಲ್‌ಪೇನವನ್ನು ಕೊಡುವೆಂದು, ತಮಗೆ ಪಳಗಿರುವ ಪೇನವನ್ನು ಮನೆಯಲ್ಲಿಯೇ ಬಿಟ್ಟು ಬರುವರು. ಅಲ್ಲಿಟ್ಟಿರತಕ್ಕ ಪೇನಗಳು ಹೊಸದಾಗಿರುವುದರಿಂದ ಬರೆಯಲಿಕ್ಕೆ ಪ್ರಾರಂಭಿಸಿದೊಡನೆ [illegible] ಘಮಿಕೆ ಸ್ವಲ್ಪ

ಹೊತ್ತು ಬರೆಯುವಿಕ್ಕೆ ಅನಾನುಕೂಲವಾಗದಿರುವ ತೆರನಾಗಿ ಮೊದಲನೆಯ ಪತ್ರದಲ್ಲಿ ದೊಡ್ಡದಾಗಿ ರಿಜಿಸ್ಟರ್ ನಂಬರು, ಹೆಸರು, ವಿಷಯದ ಹೆಸರು, ಇವು ಮೂರನ್ನೂ ಅಗತ್ಯವಾಗಿ ಬರೆಯಬೇಕು.

(೪) ಬರೆದಭಾಗೆಲ್ಲಾ ಪ್ರತಿ ಕಾಗದವ ಬಲಗಡೆಯ ಮೂಲೆಯಲ್ಲಿ ಪುಟದ ಸಂಖ್ಯೆ, ಮಧ್ಯದಲ್ಲಿ ರಿಜಿಸ್ಟರ್ ನಂಬರು, ಮಾಡಿಸಿದ್ದ ಭಾಗದಲ್ಲಿ ಪ್ರಶ್ನೆಯ ಸಂಖ್ಯೆ, ಯಾವದಾದರೂ ಒಂದು ಪ್ರಶ್ನೆಯು ಒಂದು ಭಾಗವಾಗಿದ್ದರೆ ಪ್ರಶ್ನೆಯ ಸಂಖ್ಯೆ, ಪ್ರಶ್ನಭಾಗದ ಸಂಖ್ಯೆ ಎರಡನ್ನೂ ಬರೆಯಬೇಕು. ಒಂದು ಪ್ರಶ್ನೆಯ ಉತ್ತರವು ಒಂದು ಪುಟದಲ್ಲಿಯೇ ಮುಗಿಯದಿದ್ದಲ್ಲಿ ಉತ್ತರವು ಪೂರೈಸುವವರೆಗೂ ಪ್ರತಿಪುಟದಲ್ಲಿಯೂ ಪ್ರಶ್ನೆಯ ಸಂಖ್ಯೆಯನ್ನು ಬರೆಯುತ್ತಿರಬೇಕು.

(೬) ರೇಖಾಗಣಿತ, ಕ್ಷೇತ್ರಗಣಿತಗಳಿಗೆ ಉತ್ತರವನ್ನು ಬರೆಯುವ ಕಾಲದಲ್ಲಿ ರುಜುಪ್ರಮಾಣವು ಮುಗಿಯುವವರೆಗೂ ಪ್ರತಿಪುಟದಲ್ಲಿಯೂ ಆಕೃತಿಗಳನ್ನು ಬರೆಯಬೇಕು. ವಿಷಯಗಳನ್ನ ಬರೆಯುವಾಗ ಅಕ್ಷರಗಳನ್ನು ವಿಶದವಾಗಿಯೂ, ಆಕೃತಿಗಳನ್ನು ನೋಡುವುದಕ್ಕೆ ಚೆನ್ನಾಗಿಯೂ ಬರೆಯುವುದು ಅತ್ಯವಶ್ಯಕ.

(೭) ಪ್ರಶ್ನಪತ್ರವನ್ನು ಕೊಟ್ಟೊಡನೆಯೆ ಉತ್ತರವನ್ನು ಬರೆಯಲು ಆರಂಭಿಸಬಾರದು. ಒಂದಾವರ್ತಿ ಪ್ರಶ್ನಪತ್ರವೆನ್ನೆಲ್ಲಾ ಓದಿಕೊಳ್ಳಬೇಕು. ಕೆಲವು ವೇಳೆ ಪತ್ರದ ಎರಡು ಭಾಗದಲ್ಲೂ ಪ್ರಶ್ನೆಯನ್ನು ಅಚ್ಚುಹಾಕಿರುವ ಪದ್ಧತಿಯುಂಟು. ಆದುದರಿಂದ ಪ್ರಶ್ನಾಪತ್ರದ ಎರಡುಭಾಗವನ್ನೂ ನೋಡಬೇಕು.

(೮) ಒಂದಾವರ್ತಿ ಓದಿಕೊಂಡು ಪ್ರಶ್ನೆಗಳನ್ನೆಲ್ಲಾ ಓದಿದ ತರುವಾಯ, ಇನ್ನೊಂದಾವರ್ತಿ ಮೊದಲಿಂದಲೂ ಓದಿಕೊಂಡು, ಚೆನ್ನಾಗಿ ತಿಳಿದ ಮತ್ತು ಸುಲಭವಾದ ಪ್ರಶ್ನೆಗಳನ್ನು ಗುರುತುಮಾಡಿಕೊಳ್ಳಬೇಕು. ಕಠಿನವಾದ ಪ್ರಶ್ನೆಗಳಿಗೂ ಚೆನ್ನಾಗಿ ತಿಳಿಯದ ಪ್ರಶ್ನೆಗಳಿಗೂ ಉತ್ತರವನ್ನು ಬರೆಯಲು ಆದಿಯಲ್ಲಿಯೇ ಆರಂಭಿಸಬಾರದು.

(೯) ಹೀಗೆ ಗುರುತುಮಾಡಿಕೊಂಡ ಪ್ರಶ್ನೆಗಳಿಗೆ ಒಂದೊಂದಾಗಿ ಉತ್ತರವನ್ನು ಬರೆಯುತ್ತಾ ಬರಬೇಕು. ಒಂದು ಪ್ರಶ್ನೆಯು ವಿಷಯವಾಗಿಯೆ ವಿಶೇಷ ಸಂಗತಿ ತಿಳಿಯುವೆವೆಂದು ಒಂದೇ ಪ್ರಶ್ನೆಗೆ ಉತ್ತರವನ್ನು ಬರೆಯುತ್ತಾ ಒಂದೆರಡು ಘಂಟೆಗಳ ಕಾಲ ಕಳೆಯಬಾರದು. ಒಂದುವೇಳೆ ಮೂರು ಘಂಟೆಯೊಳಗಾಗಿ ಅಲ್ಲಿರುವ ಪ್ರಶ್ನೆಗಳಿಗೆಲ್ಲಾ ಉತ್ತರವನ್ನು ಕೊಡಲು ಸಾಧ್ಯವಿಲ್ಲವೆಂದು ತಿಳಿದರೆ ಪ್ರತಿ ಪ್ರಶ್ನೆಗೂ ಮುಖ್ಯಮುಖ್ಯವಾದ ಅಂಶಗಳನ್ನೇ ಉತ್ತರವನ್ನಾಗಿ ಬರೆಯುತ್ತಾ ಸಾಧ್ಯವಾದಮಟ್ಟಿಗೂ ತಿಳಿದ ಪ್ರಶ್ನೆಗಳಿಗೆಲ್ಲಾ ಉತ್ತರವನ್ನು ಬರೆಯುವದಕ್ಕೆ ಪ್ರಯತ್ನ ಮಾಡಬೇಕು.

(೧೦) ಪ್ರಶ್ನೆಗಳಿಗೆ ತಕ್ಕಷ್ಟು ಉತ್ತರವನ್ನು ಮಾತ್ರ ಬರೆಯಬೇಕು. ಹೆಚ್ಚಾಗಿ ಬರೆಯಲು ಆರಂಭಿಸುವುದರಿಂದ, ಕಾಲಹರಣ, ತಪ್ಪು, ಇವುಗಳಾಗುವವಲ್ಲದೆ ಇನ್ನೇನು ಪ್ರಯೋಜನವಿಲ್ಲ.

(೧೧) ಕೊಟ್ಟರತಕ್ಕ ಕಾಲವು ಪೂರೈಸುತ್ತಾ ಬಂದಂತೆ, ಗಾಬರಿಯಿಂದ ಉತ್ತರ ಬರೆಯುದೆ ಬಿಟ್ಟರುವ ಪ್ರಶ್ನೆಗಳನ್ನು ಒಂದೊಂದಾಗಿ ತೆಗೆದುಕೊಂಡು ಸ್ವೋಚ್ಛೆಯಾಗಿ ಗೀಚುವುದಕ್ಕಿಂತ ಬರೆದುದನ್ನೆಲ್ಲಾ ಪುನಃ ಓದಿ ತಿದ್ದುವುದರಲ್ಲಿ ವಿಶೇಷ ಪ್ರಯೋಜನ ಉಂಟು. ಪುನರವಲೋಕನದಿಂದ ಕೈತಪ್ಪಿ ಬಿಟ್ಟುಹೋದವನ್ನೆಲ್ಲಾ ತಿದ್ದಿ, ಬರೆಯ ಬಹುದು. ಆಮೇಲಿಂದ ಅವಶ್ಯಕನಾಗಿ ಬರೆದುದನ್ನು ಕಾಲು ಘಂಟೆಯು ಇರುವ ಹಾಗೆಯೇ ಪುನಃ ಓದಬೇಕು. ಯಾವುದನ್ನೆ ಆಗಲಿ ನಾವು ಬರೆದುದನ್ನು ಪುನಃ ಓದುವುದು ಉತ್ತಮ. ಇದರಿಂದ ವಿಶೇಷ ಪ್ರಯೋಜನವು.

(೧೨) ಉತ್ತರದ ಪತ್ರಿಕೆಗಳನ್ನು ಕೊಡುವಾಗ ರಿಜಸ್ಟರ್ ನಂಬರೂ ಹೆಸರೂ ಬರೆದಿರುವುದನ್ನು ನೋಡಿ ಕೊಡಬೇಕು. ಇವೆರಡರಲ್ಲಿ ಯಾವುದಾದರೂ ಒಂದಿಲ್ಲದೆ ಹೋದರೆ ಅಂಥಾ ಉತ್ತರದ ಪತ್ರಿಕೆಗಳನ್ನು ನೋಡುವುದಿಲ್ಲ. ಆದುದರಿಂದ ಕಾಗದವನ್ನು ಮಡಿಸದೊತನೆಯೇ, ಮೇಲಣ ಭಾಗದಲ್ಲಿ ಹೆಸರನ್ನೂ ರಿಜಸ್ಟರ್ ನಂಬರನ್ನೂ ನೋಡಿ ಕೊಡಬೇಕು.

(೧೩) ಒಂದು ವಿಷಯದಲ್ಲಿ ತನ್ನ ಮನಸ್ಸಿಗೆ ತೃಪ್ತಿಯಾಗುವಷ್ಟು ಚೆನ್ನಾಗಿ ಮಾತಿಲ್ಲವೆಂದೆಣಿಸಿ ಆಗಲಿ, ತೇರ್ಗಡೆಯಾಗುವುದಿಲ್ಲವೆಂದಾಲೋಚಿಸಿಯಾಗಲಿ ಅಸಮಾಧಾನವನ್ನು ಅಧೈರ್ಯವನ್ನು ಪಟ್ಟು ಮುಂದಿನ ವಿಷಯಗಳನ್ನು ಓದದೆ ಇರಬಾರದು. ಪರೀಕ್ಷೆಗೆ ಬಾರದೆ ತಪ್ಪಿಸಿಕೊಳ್ಳಲೂಬಾರದು.

ನಾರ್ಮಲ್‌ಸ್ಕೂಲ್.

ಆರೋಗ್ಯ.

(೧) ವಾಯುವನ್ನು ಆಹಾರವೆಂದು ಭಾವಿಸಬಹುದೆ ?
(೨) ವಾಯುವಿನಲ್ಲಿ ಏನೇನು ಸೇರಿವೆ ?
(೩) ವಾಯುವನ್ನು ಒಳಗೆ ಸೆಳೆದುಕೊಂಡಾಗ ಏನಾಗುತ್ತದೆ ?
(೪) ವಾಯುವು ಇಲ್ಲದಿದ್ದರೆ ಏನಾಗುತಿತ್ತು ?

(೫) ರಕ್ತಶುದ್ಧಿಯಾಗುವುದು ಎಲ್ಲಿ?

(೬) ರಕ್ತವು ಶುದ್ಧಿಯಾಗುವುದೆಂದೇನು? ಯಾತಕ್ಕೋಸ್ಕರ ಶುದ್ಧಿಯಾಗಬೇಕು?

(೭) ಸಾರಜನಕ ಮತ್ತು ಇಂಗಾಲಾಮ್ಲದ ಉಪಯೋಗವೇನು?

(೮) ರಕ್ತವು ಹ್ಯಾಗೆ ಶುದ್ಧಿಯಾಗುತ್ತದೆ?

(೯) ನಿಶ್ವಾಸದ ವಾಯುವಿಗೂ ಉಛ್ವಾಸದ ವಾಯುವಿಗೂ ವ್ಯತ್ಯಾಸವೇನು?

(೧೦) ಒಂದು ಸಣ್ಣ ಕೊಠಡಿಯಲ್ಲಿ ಅನೇಕರು ಮಲಗಿದರೆ ಏನಾಗುವದು?

(೧೧) ದೀಪ ಉರಿಯುವುದು ಹ್ಯಾಗೆ?

(೧೨) ಉರಿಯುತ್ತಿರುವ ದೀಪವನ್ನು ನಮ್ಮ ಪ್ರಾಣಕ್ಕೆ ಹೋಲಿಸಬಹುದೆ?

ನೀರು.

(೧೩) ನೀರನ್ನು ಶೋಧಿಸತಕ್ಕ ಕ್ರಮಗಳ್ಯಾವವು?

(೧೪) "ಶುದ್ಧವಾದ ನೀರು" ಅಂದರೇನು?

(೧೫) ನೀರನ್ನೂ ಸಾಬೂನನ್ನೂ ಉಜ್ಜಿ ನೊರೆಯು ಬಾರದಿದ್ದರೆ ಅಂಥಾ ನೀರನ್ನು ಸ್ನಾನಕ್ಕೆ ಉಪಯೋಗಿಸಬಹುದೆ? ಯಾತಕ್ಕೆ ನೊರೆಯು ಬರಲಿಲ್ಲ?

(೧೬) ಬಾವಿಯ ನೀರು ಉತ್ತಮವೋ? ಕೆರೆಯ ನೀರು ಉತ್ತಮವೋ?

(೧೭) ನದೀನೀರಿನ ವಿಷಯವಾಗಿ ನಿಮಗೆ ತಿಳಿದಿರುವ್ರದನ್ನು ಬರೆಯಿರಿ.

ಆಹಾರ.

(೧೮) ನಾವು ತೆಗೆದುಕೊಳತಕ್ಕ ಆಹಾರದಲ್ಲಿ ಏನೇನು ಇರಬೇಕು? ಇವುಗಳಲ್ಲಿ ಯಾವದಾದರೂ ಒಂದು ಕಡಿಮೆಯಾದರೆ ಏನಾಗುವದು?

(೧೯) ಹಾಲಿನಲ್ಲಿರುವ ವಸ್ತುಗಳ್ಯಾವವು? ಯಾವಯಾವದು ಎಷ್ಟೆಷ್ಟಿರುವ್ರದು?

(೨೦) ವಿಶ್ರವಾದ ಆಹಾರವನ್ನು ತೆಗೆದುಕೊಳ್ಳುವುದಕ್ಕೆ ಕಾರಣವೇನು?

(೨೧) ಸಾರಜನಕದ ಉಪಯೋಗವೇನು? ಯಾವಯಾವ ಆಹಾರದಲ್ಲಿ ಸಿಕ್ಕುವುದು? ನಮ್ಮ ದೇಹದ ಯಾವಭಾಗದಿಂದ ಹೊರಡುವ ಕಶ್ಮಲದಲ್ಲಿರುವ್ರದು?

(೨೨) ಯಾವುಯಾವ ಲವಣಗಳು ನಮ್ಮ ದೇಹಕ್ಕೆ ಬೇಕಾಗಿವೆ? ಅವುಗಳ ಉಪಯೋಗವೇನು?

ಮೈಸೂರು ಗೌರ್ನಮೆಂಟ್ ನಾರ್ಮಲ್‌ಸ್ಕೂಲ್.

(೧) ಕರ್ನಾಟಭಾಷೆಯನ್ನು ವಿಶೇಷವಾಗಿ ಅಭಿವೃದ್ಧಿಗೊಳಿಸಬೇಕೆಂಬ ಉದ್ದೇಶದಿಂದ ಒಂದು ಪಂಡಿತಪರೀಕ್ಷೆಯು ಪ್ರತಿವರ್ಷದಲ್ಲಿಯೂ ಮೈಸೂರಲ್ಲಿ ನಡೆಸಲ್ಪಡುವುದಾಗಿ ನಿಶ್ಚಯಿಸಲ್ಪಟ್ಟಿರುತ್ತದೆ. ಈ ಪರೀಕ್ಷೆಯು ೧೯೧೪ನೇ ಫಿಬ್ರವರಿ ೩೦ಗಳಲ್ಲಿ ಮೊದಲನೇ ಸೋಮವಾರ ಪ್ರಾರಂಭಿಸಲ್ಪಡುತ್ತದೆ.

(೨) ಈ ಪರೀಕ್ಷೆಗೆ ಸೇರಬೇಕೆಂಬ ಅಪೇಕ್ಷೆಯುಳ್ಳವರು [illegible] ತಾರೀಖಿನೊಳಗಾಗಿ ಮೈಸೂರು ನಾರ್ಮಲ್‌ಸ್ಕೂಲ್ ಹೆಡ್‌ಮಾಸ್ಟರ್ ಬಂದು ಸೇರುವಂತೆ ವಿಜ್ಞಾಪನೆಯನ್ನು ಬರೆದುಕೊಳ್ಳಬೇಕು.

(೩) ಈ ಪರೀಕ್ಷೆಗೆ ಅಗಬೇಕಾದ ಗ್ರಂಥಗಳು ಮತ್ತು ಪ್ರಶ್ನಪತ್ರಿಕೆಗಳ ಕ್ರಮ:-

	ಪರೀಕ್ಷಾಗ್ರಂಥಗಳ ವಿವರ.	ಪ್ರಶ್ನಪತ್ರಿಕೆಗಳ ಕಾಲ.	ಪೂರ್ಣಾಂ
	ಸಂಸ್ಕೃತ.		
೧.	ಕುವಲಯಾನಂದ, ಪ್ರತಾಪರುದ್ರೀಯ.	೩ ಘಂಟೆ	...
೨.	ಶಾಕುಂತಳ, ವೇಣೀಸಂಹಾರ, ಅನರ್ಘರಾಘವನಾಟಕಗಳು	೩ ,,	೧೫೦
೩.	ಕಾದಂಬರೀ ಪೂರ್ವಭಾಗ... ...	೩ ,,	೧೫೦
	ಟಿಪ್ಪಣಿ:—ಇವುಗಳಲ್ಲಿ ಸಂಸ್ಕೃತ ವ್ಯಾಕರಣಗಳು ಸೇರಿರುತ್ತವೆ.		
	ಕನ್ನಡ.		
೪.	ಶಬ್ದಮಣಿದರ್ಪಣ ಧಾತುನಾಥಸಹ; ಶಬ್ದಾನುಶಾಸನ ಸವ್ಯಾಖ್ಯಾನ, ಕಾವ್ಯಾವಲೋಕನ ಅರ್ಥಾಲಂಕಾರ; ಅಪ್ರತಿಮವೀರಚರಿತಾಲಂಕಾರ		

C.	೫.	ಪಂಪರಾಮಾಯಣ, ಜೈಮಿನಿಭಾರತ, ಗಿರಿಜಾಕಲ್ಯಾಣ ಮೊದಲಿಂದ ೭ ಆಶ್ವಾಸಗಳು	೩ ಘಂಟೆ.	೧೭೦
	೬.	ಕನ್ನಡ ಕಾದಂಬರಿ ಪೂರ್ವಭಾಗ, ರಾಜಶೇಖರವಿಲಾಸ	೩ ,,	೧೭೦
	೭.	ಕಬ್ಬಿಗರಕಾವ, ಜಗನ್ನಾಥವಿಜಯ ಮೊದಲಿಂದ ೩ ಅಧ್ಯಾಯಗಳು, ಅನುಭವಾಮೃತ ಮೊದಲಿಂದ ೬ ಅಧ್ಯಾಯಗಳು	೩ ,,	೧೭೦
B.	೮.	ಕಂತಸಾಕಗಳ ಪದ್ಯಗಳು— ಪಂಪರಾಮಾಯಣದಲ್ಲಿ ೯ನೇ ಆಶ್ವಾಸ, ರಾಜಶೇಖರವಿಲಾಸ ೧೯—೨೧ನೇ ಆಶ್ವಾಸಗಳು, ಜೈಮಿನಿಭಾರತ ೨೬ ಮತ್ತು ೩೧ನೇ ಸಂಧಿಗಳು; ಜಗನ್ನಾಥವಿಜಯ ೩ನೇ ಅಧ್ಯಾಯ; ಕಬ್ಬಿಗರಕಾವ ಮೊದಲಿಂದ ೧೦೦ ಪದ್ಯಗಳು ...	೩ ,,	೧೦೦
B.	೯.	ಕನ್ನಡದಲ್ಲಿ ಪದ್ಯರೂಪದಲ್ಲಿಯಾಗಲಿ ಗದ್ಯರೂಪದಲ್ಲಿ ಯಾಗಲಿ ಯಾವುದಾದರು ಒಂದು ವಿಷಯದಲ್ಲಿ ಬರೆಯುವಿಕೆ ...	೩ ,,	೧೦೦
B.	೧೦.	ಸಂಸ್ಕೃತದಿಂದ ಕನ್ನಡಕ್ಕೂ, ಕನ್ನಡದಿಂದ ಸಂಸ್ಕೃತಕ್ಕೂ ಪರಿವರ್ತನೆ ...	೩ ,,	೧೦೦

A. B. C. ಎಂಬ ಪ್ರತಿಯೊಂದು ಮುಖ್ಯಾಂಶದಲ್ಲಿಯೂ ನೇಕಡ ೪೦ರ ಮೇರೆ ಅಂಕಗಳನ್ನು ಪಡೆದು, ಒಟ್ಟು ಪೂರ್ಣಾಂಕದಲ್ಲಿ ನೇಕಡ ೬೦ಕ್ಕೆ ಕಮ್ಮಿ ಇಲ್ಲದೆ ಅಂಕಗಳನ್ನು ಪಡೆದವರು ಮೊದಲನೆಯ ತರಗತಿಯಲ್ಲಿಯೂ, ನೇಕಡ ೫೦ಕ್ಕೆ ಕಮ್ಮಿ ಇಲ್ಲದೆ ಅಂಕಗಳನ್ನು ಪಡೆದವರು ಎರಡನೇ ತರಗತಿಯಲ್ಲಿಯೂ ತೇರ್ಗಡೆಯಾದಂತೆ ಎಣಿಸಲ್ಪಡುವರು.

ಕೆ ನಾರಾಯಣಶೆಟ್ಟಿಂಗಾರ್,
ಹೆಡಾಫೀಸ್ಟರ್,
ನಾರ್ಮಲ್‌ಸ್ಕೂಲ್.

ತಾ॥ ೩೦ನೇ ಅಕ್ಟೋಬರ್ ೧೯೧೪,
ಮೈಸೂರು.

ಸಮಾಚಾರಗಳು ಮತ್ತು ಸೂಚನೆಗಳು.

ಮೈಸೂರು ದಕ್ಷಿಣಸರ್ಕಲ್ ಡೆಪ್ಯುಟಿ ಇನ್‌ಸ್ಪೆಕ್ಟರ ಆಫೀಸ್‌ಚಾರ್ಜನ್ನು ಮೆ॥ ರಾ॥ದೇಸಿಕಾಚಾರ್ಯರು ಕಳೆದ ತಿಂಗಳು ೨೧ನೇ ತಾರೀಕಿನಲ್ಲಿ ವಹಿಸಿದರು. ಅದೇದಿವಸ ಮೆ॥ ಕೇಶವಯ್ಯನವರು ಹಾಸನಕ್ಕೆ ಪ್ರಯಾಣಮಾಡಿದರು.

ದಿನಾರ್ಜಸಾಹೇಬರು ವಿದ್ಯಾಭ್ಯಾಸದ ಇಲಾಖೆಯಲ್ಲಿರುವ ಉಪಾಧ್ಯಾಯರಿಗೆ ಬಡ್ತಿ ಕೊಡುವುದಕ್ಕೂ, ಹೊಸದಾಗಿ ಕೆಲಸವು ಏರ್ಪಾಡು ಮಾಡುವುದಕ್ಕೂ ಬಡ್ಜೆಟ್ಟು ಅಂದಾಜುಪ್ರಕಾರ ೩೫,೬೧೫ ರೂಪಾಯಿ ಹೆಚ್ಚಾಗಿ ಸ್ಯಾಂಕ್ಷನ್ ಮಾಡಿರುತ್ತಾರೆ.

ಗೌರನಮೆಂಟಿಗೆ ಸಲ್ಲುತಿದ್ದ ಮೊಹತರ್ಫ ಅರ್ಧಭಾಗವು ಮ್ಯುನಿಸಿಪಾಲಿಟಿಗಳಿಗೆ ಕೊಡಲ್ಪಟ್ಟದ್ದರಿಂದ ಕನ್ನಡ ಸ್ಕೂಲುಗಳಿಗಾಗಿ ಮ್ಯುನಿಸಿಪಾಲಿಟಿಗಳು ವರ್ಷಕ್ಕೆ ೧೫,೦೦೦ ರೂಪಾಯಿ ಕೊಡತಕ್ಕದ್ದೆಂದು ಗೊತ್ತಾಗಿದೆ. ಈ ಕಾರಣದಿಂದ ಹೊಸದಾಗಿ ಪಾಠಶಾಲೆಗಳನ್ನು ಇಡತಕ್ಕದ್ದೆಂದು ವಿಧಿಸಲ್ಪಟ್ಟಿದೆ.

ವಿದ್ಯಾಭ್ಯಾಸದ ಇಲಾಖಾ ಸಕ್ರೆಟರಿ ಹಜರತ್ ಭಾಭಾಸಾಹೇಬರು ಅಕ್ಟೋಬರ್ ೨೫ರಲ್ಲಿ ಬೆಂಗಳೂರಿಗೆ ಹೋಗಿ ೨೮ನೇ ಭಾನುವಾರ ಮೈಸೂರಿಗೆ ಬಂದರು.

ಮಿಸ್ ಸಟಕ್ಲಿಫೋಸಾಲ್ ಬಿ. ಎ. ಇವರು ಮಹಾರಾಣಿಯವರ ಬಾಲಿಕಾ ಪಾಠಶಾಲೆಯ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಚಾರ್ಜನ್ನು ಅಕ್ಟೋಬರ್ ೭ಂಗಳಲ್ಲಿ ವಹಿಸಿದರು. ಇವರು ಸ್ತ್ರೀಯರಲ್ಲಿ ಬಹು ಪ್ರಾಧಿಮೆಯುಳ್ಳವರು. ಮತ್ತು ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರುತ್ತಾರೆ.

ಹಾಸನದ ಗೌ॥ ಕನ್ನಡಸ್ಕೂಲ್ ಹೆಡ್‌ಮಾಸ್ಟರು ಸುಬ್ಬಣ್ಣನವರನ್ನು ಅರಕಲಗೂಡು ಆಂಗ್ಲೋವರ್ನಾಕ್ಯುಲರ್ ಸ್ಕೂಲ್ ಒಂದನೇ ಅ॥ ಮ್ಯಾಸ್ಟರಾಗಿಯೂ, ಅಲ್ಲಿನ ಒಂದನೇ ಅ॥ ಮ್ಯಾಸ್ಟರು ಅಳಸಿಂಗಾಚಾರ್ಯರನ್ನು ಹಾಸನಕ್ಕೂ ವರ್ಗಾವರ್ಗಿ ಮಾಡಿರುತ್ತಾರೆ. ಈ ವರ್ಗಾವರ್ಗಿಯು ಬರುವ ಜನವರೀತಿಂಗಳಿಂದ ಅಜಮಾಸಿಗೆ ಬರತಕ್ಕದ್ದೆಂದು ಗೊತ್ತಾಗಿದೆ.

ಅಕ್ಟೋಬರು ೧೮ನೇ ತಾರೀಕಿನಲ್ಲಿ ಶ್ರೀರಂಗೇರಿಯ ಕನ್ನಡಸ್ಕೂಲು ವಿದ್ಯಾರ್ಥಿಗಳಿಗೆ ಬಹುಮಾನವನ್ನು ಕೊಡುವುದಕ್ಕಾಗಿ ಒಂದು ಸಭೆಯು ಏರ್ಪಟ್ಟಿತ್ತು. ಈ ಸಭೆಗೆ ಮೆ॥ ರಾ॥ ಅವಲ್ಲಾರ್ ಸೀತಾರಾಮಯ್ಯನವರು ಅಗ್ರಾಸನಾಧಿಪತಿಗಳಾಗಿದ್ದರು. ಮೆ॥ ಕೊಪ್ಪದ ಅವಲ್‌ದಾರ್ ಸುಬ್ಬರಾಯರು, ಹಾಸ್ಪಿಟಲ್ ಅಸಿಸ್ಟೆಂಟರು, ಹಿರಣ್ಯಪ್ಪನವರು, ವೀರಭದ್ರರು ಮತ್ತಿತರರವರು ಸಭೆಯನ್ನು ಅಲಂಕರಿಸಿದ್ದರು. ಹೆ॥ ಮಾಸ್ಟರ್ ಸುಬ್ರಹ್ಮಣ್ಯಯ್ಯನವರು ರಿಪೋರ್ಟನ್ನು ಓದಿದರು. ಅದರಿಂದ ಪಾಠಶಾಲೆಯಲ್ಲಿ ೧೧೦ ಮಂದಿ ವಿದ್ಯಾರ್ಥಿಗಳು ಇರುವುದಾಗಿಯೂ ಈವರ್ಷದ ಲೋ. ರ್ ಸಕಂಡರಿ ಪರೀಕ್ಷೆಗೆ ನಾಲ್ಕುಮಂದಿಯನ್ನು ಕಳುಹಿಸಿರುವುದಾಗಿಯೂ ತಿಳಿಯಬರುತ್ತೆ. ಸಭಾಧ್ಯಕ್ಷರು, ಸುಬ್ಬರಾಯರು, ನಾಗಭೂಷಣರಾಯರು ವಿದ್ಯಾಭ್ಯಾಸದ ವಿಷಯದಲ್ಲಿ

C.	೫.	ಪಂಪರಾಮಾಯಣ, ಜೈಮಿನಿಭಾರತ, ಗಿರಿಜಾಕಲ್ಯಾಣ ಮೊದಲಿಂದ ೭ ಆಶ್ವಾಸಗಳು	೩ ಘಂಟೆ.	೧೬೦
	೬.	ಕನ್ನಡ ಕಾದಂಬರಿ ಪೂರ್ವಭಾಗ, ರಾಜಶೇಖರವಿಲಾಸ	೩ ,,	೧೬೦
	೭.	ಕಬ್ಬಿಗರಕಾವ, ಜಗನ್ನಾಥವಿಜಯ ಮೊದಲಿಂದ ೩ ಅಧ್ಯಾಯಗಳು, ಅನುಭವಾಮೃತ ಮೊದಲಿಂದ ೬ ಅಧ್ಯಾಯಗಳು	೩ ,,	೧೬೦
B.	೮.	ಕಂಠಪಾಠಗಳ ಪದ್ಯಗಳು— ಪಂಪರಾಮಾಯಣದಲ್ಲಿ ೯ನೇ ಆಶ್ವಾಸ, ರಾಜಶೇಖರವಿಲಾಸ ೧–೯–೧೧ನೇ ಆಶ್ವಾಸಗಳು, ಜೈಮಿನಿಭಾರತ ೨೬ ಮತ್ತು ೩೦ನೇ ಸಂಧಿಗಳು; ಜಗನ್ನಾಥವಿಜಯ ೩ನೇ ಅಧ್ಯಾಯ; ಕಬ್ಬಿಗರಕಾವ ಮೊದಲಿಂದ ೧೦೦ ಪದ್ಯಗಳು ...	೩ ,,	೧೦೦
B.	೯.	ಕನ್ನಡದಲ್ಲಿ ಪದ್ಯರೂಪದಲ್ಲಿಯಾಗಲಿ ಗದ್ಯರೂಪದಲ್ಲಿ ಯಾಗಲಿ ಯಾವಪಾಠವರು ಒಂದು ವಿಷಯದಲ್ಲಿ ಬರೆಯುವಿಕೆ ...	೩ ,,	೧೦೦
B.	೧೦.	ಸಂಸ್ಕೃತದಿಂದ ಕನ್ನಡಕ್ಕೂ, ಕನ್ನಡದಿಂದ ಸಂಸ್ಕೃತಕ್ಕೂ ಪರಿವರ್ತನೆ ...	೩ ,,	೧೬೦

A. B. C. ಎಂಬ ಪ್ರತಿಯೊಂದು ಮುಖ್ಯಾಂಶದಲ್ಲಿಯೂ ನೇಕಡ ೪೦ ರಮೇಲೆ ಅಂಕಗಳನ್ನು ಪಡೆದು, ಒಟ್ಟು ಪೂರ್ಣಾಂಕದಲ್ಲಿ ನೇಕಡ ೬೦ ಕ್ಕೆ ಕಮ್ಮಿ ಇಲ್ಲದೆ ಅಂಕಗಳನ್ನು ಪಡೆದವರು ಮೊದಲನೆಯ ತರಗತಿಯಲ್ಲಿಯೂ, ನೇಕಡಾ ೪೦ ಕ್ಕೆ ಕಮ್ಮಿ ಇಲ್ಲದೆ ಅಂಕಗಳನ್ನು ಪಡೆದವರು ಎರಡನೇ ತರಗತಿಯಲ್ಲಿಯೂ ತೇರ್ಗಡೆಯಾದಂತೆ ಎಣಿಸಲ್ಪಡುವರು.

ಕೆ ನಾರಾಯಣಶೆಟ್ಟಿಂಗಾರ್,
ಹೆಡ್‌ಮಾಸ್ಟರ್,
ನಾರ್ಮಲ್‌ಸ್ಕೂಲ್.

ತಾ॥ ೩೦ನೇ ಅಕ್ಟೋಬರ್ ೧೯೧೪,
ಮೈಸೂರು.

ಸಮಾಚಾರಗಳು ಮತ್ತು ಸೂಚನೆಗಳು.

ಮೈಸೂರು ದಕ್ಷಿಣಸರ್ಕಲ್ ಡೆಪ್ಯುಟಿ ಇನ್‌ಸ್ಪೆಕ್ಟರ ಆಫೀಸ್‌ಚಾರ್ಜನ್ನು ಮು॥ ರಾ॥ದೇಸಿಕಾಚಾರ್ಯರು ಕಳೆದ ತಿಂಗಳು ೨೫ನೇ ತಾರೀಕಿನಲ್ಲಿ ವಹಿಸಿದರು. ಅದೇದಿವಸ ಮು॥ ಕೇಶವಯ್ಯನವರು ಹಾಸನಕ್ಕೆ ಪ್ರಯಾಣವಾಡಿದರು.

ದಿವಾನ್‌ಸಾಹೇಬರು ವಿದ್ಯಾಭ್ಯಾಸದ ಇಲಾಖೆಯಲ್ಲಿರುವ ಉಪಾಧ್ಯಾಯರಿಗೆ ಬಡ್ತಿ ಕೊಡುವುದಕ್ಕೂ, ಹೊಸದಾಗಿ ಕೆಲಸವು ಏರ್ಪಾಡು ಮಾಡುವುದಕ್ಕೂ ಬಜ್ಜಟ್ಟು ಅಂದಾಜುಪ್ರಕಾರ ೩೫,೬೧೫ ರೂಪಾಯಿ ಹೆಚ್ಚಾಗಿ ಸ್ಯಾಂಕ್ಷನ್ ಮಾಡಿರುತ್ತಾರೆ.

ಗೌರನಮೆಂಟಿಗೆ ಸಲ್ಲುತಿದ್ದ ಪೊಕತರ್ಫ ಆರ್ಥಭಾಗವು ಮ್ಯುನಿಸಿಪಾಲಿಟಿಗಳಿಗೆ ಕೊಡಲ್ಪಟ್ಟದ್ದರಿಂದ ಕನ್ನಡ ಸ್ಕೂಲುಗಳಿಗಾಗಿ ಮ್ಯುನಿಸಿಪಾಲಿಟಿಗಳು ವರ್ಷಕ್ಕೆ ೧೫,೦೦೦ ರೂಪಾಯಿ ಕೊಡತಕ್ಕದ್ದೆಂದು ಗೊತ್ತಾಗಿದೆ. ಈ ಹಣದಿಂದ ಹೊಸದಾಗಿ ಪಾಠಶಾಲೆಗಳನ್ನು ಇಡತಕ್ಕದ್ದೆಂದು ವಿಧಿಸಲ್ಪಟ್ಟಿದೆ.

ವಿದ್ಯಾಭ್ಯಾಸದ ಇಲಾಖಾ ಸೆಕ್ರಟೆರಿ ಹಜರತ್ ಖಾಜಾಸಾಹೇಬರು ಅಕ್ಟೋಬರ್ ೨೫ರಲ್ಲಿ ಬೆಂಗಳೂರಿಗೆ ಹೋಗಿ ೨೮ನೇ ಭಾನುವಾರ ಮೈಸೂರಿಗೆ ಬಂದರು.

ಮಿಸ್ ಸಲಿಫೋಸಾಲ್ ಬಿ. ಎ. ಇವರು ಮಹಾರಾಣಿಯವರ ಬಾಲಿಕಾ ಪಾಠಶಾಲೆಯ ಅಸಿ॥ ಲೇಡಿ ಸೂಪರಿಂಟೆಂಡೆಂಟ್ ಚಾರ್ಜನ್ನು ಅಕ್ಟೋಬರ್ ತಿಂಗಳಲ್ಲಿ ವಹಿಸಿದರು. ಇವರು ಸ್ತ್ರೀಯರಲ್ಲಿ ಬಹು ಪ್ರೌಢಿಮೆಯುಳ್ಳವರು. ಮತ್ತು ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರುತ್ತಾರೆ.

ಹಾಸನದ ಗೌ॥ ಕನ್ನಡಸ್ಕೂಲ್ ಹೆಡ್‌ಮಾಸ್ಟರು ಸುಬ್ಬಣ್ಣನವರನ್ನು ಅರ ಕಲಗೂಡು ಆಂಗ್ಲೋವರ್ನಾಕ್ಯುಲರ್ ಸ್ಕೂಲ್ ಒಂದನೇ ಅ॥ ಮ್ಯಾಸ್ಟರಾಗಿಯೂ, ಅಲ್ಲಿನ ಒಂದನೇ ಅ॥ ಮ್ಯಾಸ್ಟರು ಅಳಸಿಂಗಾಚಾರ್ಯರನ್ನು ಹಾಸನಕ್ಕೂ ವರ್ಗಾವಣೆ ಮಾಡಿರುತ್ತಾರೆ ಈ ವರ್ಗಾವರ್ಗಿಯು ಬರುವ ಜನವರೀತಿಂಗಳಿಂದ ಆಚರಣೆಗೆ ಬರತಕ್ಕದ್ದೆಂದು ಗೊತ್ತಾಗಿದೆ.

ಅಕ್ಟೋಬರು ೧೮ನೇ ತಾರೀಕಿನಲ್ಲಿ ಶ್ರಿಂಗೇರಿಯ ಕನ್ನಡಸ್ಕೂಲು ವಿದ್ಯಾರ್ಥಿಗಳಿಗೆ ಬಹುಮಾನವನ್ನು ಕೊಡುವುದಕ್ಕಾಗಿ ಒಂದು ಸಭೆಯು ಏರ್ಪಟ್ಟಿತ್ತು. ಈ ಸಭೆಗೆ ಮು॥ ರಾ॥ ಅಮಲ್ದಾರ್ ಸೀತಾರಾಮಯ್ಯನವರು ಅಗ್ರಾಸನಾಧಿಪತಿಗಳಾಗಿದ್ದರು. ಮು॥ ಕೊಪ್ಪದ ಅಮಲ್‌ದಾರ್ ಸುಬ್ಬರಾಯರು, ಹಾಸ್ಪಿಟಲ್ ಅಸಿಸ್ಟೆಂಟರು, ಹಿರಿಯಣ್ಣಪ್ಪನವರು, ಪೀಸಶೆಟ್ಟರು ಮುಂತಾದವರು ಸಭೆಯನ್ನು ಅಲಂಕರಿಸಿದ್ದರು. ಹೆ॥ ಮಾಸ್ಟರ್ ಸುಬ್ರಹ್ಮಣ್ಯಯ್ಯನವರು ರಿಪೋರ್ಟನ್ನು ಓದಿದರು. ಅದರಿಂದ ಪಾಠಶಾಲೆಯಲ್ಲಿ ೧೧೦ ಮಂದಿ ವಿದ್ಯಾರ್ಥಿಗಳು ಇರುವುದಾಗಿಯೂ ಈವರ್ಷದ ಲೋ. ರ್ ಸಕಂಡರಿ ಪರೀಕ್ಷೆಗೆ ನಾಲ್ಕುಮಂದಿಯನ್ನು ಕಳುಹಿಸಿರುವುದಾಗಿಯೂ ತಿಳಿಯಬರುತ್ತೆ. ಸಭಾಧ್ಯಕ್ಷರು, ಸುಬ್ಬರಾಯರು, ನಾಗಭೂಷಣರಾಯರು ವಿದ್ಯಾಭ್ಯಾಸದ ವಿಷಯದಲ್ಲಿ

ಾತನಾಡಿದರು. ಮೆ॥ ಹಿತಣ್ಯಸ್ವಾನವರು ವಿದ್ಯಾರ್ಥಿಗಳಿಗೆ ಸಕ್ಕರೆಯನ್ನು ಹಂಚಿದರು.

ಮುಂದೆ ಹೇಳುವ ತಿಂಗಳುಗಳಲ್ಲೀ ಗಾ॥ಂಟುಗಳನ್ನು ಹ॥ ಸೆಕ್ರಟೆರಿಯ
ರು ಸ್ಯಾಂಕ್ಷ್ಯಮಾಡಿರುತ್ತಾರೆ:—ಸಾಗರದ ಸಂಸ್ಕೃತಪಾಠಶಾಲೆ ೧೦ ರೂ, ಗೋರಿ
ದನೂರು ತಾ॥ ಮಂಜೇನಹಳ್ಳಿ ಸಂಸ್ಕೃತಪಾಠಶಾಲೆ ೧೫ ರೂ, ಚನ್ನಪಟ್ಟಣದ
ಯಲಕ್ಷಮ್ಮಣ್ಣಿ ಬಾಲಿಕಾಪಾಠಶಾಲೆ ೧೦ ರೂ, ಶ್ರೀರಂಗಪಟ್ಟಣದ ಬಾಲಿಕಾ ಪಾಠ
ಶಾಲೆ ೧೦ ರೂ, ತರೀಕೆರೆಯಲ್ಲಿರುವ ಹಾಜಿ ರಸೂಖಾನರ ಹಿಂದುಸ್ತಾನೀಪಾಠಶಾಲೆ ೫
ರೂ, ಸಕ್ಲೇಸಪುರದ ಬಾಲಿಕಾಪಾಠಶಾಲೆ ೬ ರೂ. ನಿಂದ ೧೦ ರೂ, ಮದ್ದಗಿರಿ ಬಾಲಿಕಾ
ಪಾಠಶಾಲೆ ೧೦ ರೂ. ನಿಂದ ೧೫ ರೂ, ತುಮಕೂರು ನೈಟ್‌ಸ್ಕೂಲ್ ೧೫ ರೂ, ತುಮ
ಕೂರು ಹೊರಪೇಟೆ ಬಾಲಿಕಾಪಾಠಶಾಲೆ ೧೫ ರೂ, ಮೈಸೂರು ಇಟ್ಟಿಗೇಗೂಡು
ಸ್ಕೂಲ್ ೧೫ ರೂ. ನಿಂದ ೨೦ ರೂ.

ಚಾಮರಾಜನಗರ, ಹೊಳಲಕೆರೆ, ಕಡೂರು, ಎಡತೊರೆ, ಕೃಷ್ಣರಾಜಪೇಟೆ
ಸ್ಥಳಗಳಲ್ಲಿ ಇಂಗ್ಲಿಷ್ ಸ್ಕೂಲುಗಳನ್ನು ಸ್ಥಾಪಿಸಬೇಕೆಂದು ಸ್ಯಾಂಕ್ಷ್ಯೆ ಆಗಿದೆ.

ಮಾಲೂರು ಹಿಂದುಸ್ತಾನಿ ಸ್ಕೂಲುಮಾಸ್ಟರು ಉರ್ದುನಿಘಂಟೆಂಬ ಪುಸ್ತ
ಕ ಪ್ರತಿಗಳನ್ನು ಮಾರುವುದಕ್ಕೆ ಕೆಂಗೇರಿ ಮತ್ತು ತುರುವೇಕೆರೆ ಹಿಂದುಸ್ತಾನಿ ಸ್ಕೂ
ಲ್‌ಮಾಸ್ಟರುಗಳಿಗೆ ಕಳುಹಿಸಿದ್ದರು. ಆ ಮ್ಯಾಸ್ಟರುಗಳು ಪ್ರತಿಗಳನ್ನು ಟಪಾಲು ಹಾ
ಯುಕೊಡದೆ ಸರ್ಕಾರಿಯಾಗಿ ಪುನಃ ಮಾಲೂರಿಗೆ ಕಳುಹಿಸಿದರು. ಹಾಸಲು ಕೊಡದೆ
ಇಂಗೆ ಮಾಡಿದ್ದು ಅಕ್ರಮವೆಂದು ಪೋಸ್ಟ್ ಆಫೀಸ್ ಸೂಪರಿಂಟೆಂಡೆಂಟರು ಹ॥
ಸೆಕ್ರಟೆರಿ ಸಾಹೇಬರಿಗೆ ಬರೆದಿದ್ದರಮೇಲೆ ಕೆಂಗೇರಿ ಮತ್ತು ತುರುವೇಕೆರೆ ಮ್ಯಾಸ್ಟರು
ಗಳು ಮಾಡಿದ್ದು ಅಕ್ರಮವೆಂದು ಅವರಿಗೆ ಸೆಕ್ರಟೆರೀಸಾಹೇಬರು ಜುಲ್ಮಾನೆಯನ್ನು
ವಿಧಿಸಿದಾರೆ. ಇತರ ಮ್ಯಾಸ್ಟರುಗಳು ಇದರಿಂದ ಎಚ್ಚರಗೊಳ್ಳಬೇಕು. ಸ್ವಂತ ಸಾಮಾ
ನುಗಳನ್ನು ಸರ್ಕಾರಿಯಾಗಿ ಕಳುಹಿಸಿದರೆ ಅವರಿಂದ ಬಾಧಕ ಉಂಟಾಗುತ್ತೆ. ಇದಲ್ಲದೆ
ಸೆಕ್ರಟೆರಿ ಸಾಹೇಬರ ಗಮನಕ್ಕೆ ಬಂದು ಅವರ ಕೋಪಕ್ಕೆ ಪಾತ್ರರಾಗುತ್ತಾರೆ
ಸರ್ಕಾರೀವಿಷಯವಲ್ಲದೆ ಬೇರೆ ಯಾವದನ್ನೂ ಕಾಗದದಲ್ಲಿ ಬರೆದು ಸರ್ಕಾರಿ ಎಂದ
ಳುಹಿಸಕೂಡದು.

ಸೆಕ್ರಟೆರಿ ಸಾಹೇಬರು ಮುಂದೆ ಹೇಳುವ ಪ್ರಕಾರ ಬಡತಿಗಳನ್ನು ಸ್ಯಾಂಕ್ಷ್ಯೆ
ಮಾಡಿರುತ್ತಾರೆ:—ಚನ್ನಪಟ್ಟಣದ ಗಾ॥ ಕನ್ನಡಸ್ಕೂಲ್ ಹೆ॥ ಮ್ಯಾಸ್ಟರು ಅಣ್ಣಯ್ಯ
ನವರಿಗೆ ೨೫ ರೂ. ನಿಂದ ೩೦ ರೂ. ಗೆ, ಚಿಕ್ಕಬಳ್ಳಾಪುರದ ಗರ್ಲ್ಸ್‌ಸ್ಕೂಲ್ ಹೆ॥
ಮ್ಯಾ॥ ಸುಬ್ಬಾಶಾಸ್ತ್ರಿಗಳಿಗೆ ೧೫ ರೂ. ನಿಂದ ೨೦ ರೂ, ಚಿಕ್ಕನಾಯಕನಹಳ್ಳಿ
ಕನ್ನಡ ಸ್ಕೂಲ್‌ಮ್ಯಾಸ್ಟರು ಶ್ರೀನಿವಾಸಯ್ಯಂಗಾರ್ಯರಿಗೆ ೨೫ ರೂ. ನಿಂದ ೩೦ ರೂ
ತರೀಕೆರೆ ಕನ್ನಡಮ್ಯಾಸ್ಟರು ಕೆ ರಾಮಸ್ವಾಮಯ್ಯಂಗಾರ್ಯರಿಗೆ ೧೫ ರೂ ನಿಂದ ೨೦
ರೂ, ಹರಿಹರದ ಕನ್ನಡಮ್ಯಾಸ್ಟರು ಕೃಷ್ಣಪ್ಪನವರಿಗೆ ೨೫ ರೂ. ನಿಂದ ೩೦ ರೂ. ಗೆ

ವಿದ್ಯಾದಾಯಿನಿ.

ಭಾಗ ೭.] ಡಿಸೆಂಬರ್ ೧೯೨೪. [ಸಂಚಿಕೆ ೧೦

ಸಿಂಹ.

ಮಹಾಬಲಶಾಲಿಯೂಪವರಿಂದ ಮೃಗರಾಜನೆಂದು ಪ್ರಸಿದ್ಧಗೊಂಡಿರು ಈ ವ್ಯಗವು, ಮೃಗಜಾತಿಯಲ್ಲಿ ಅಲ್ಪವಾದ ಬೆಕ್ಕಿನ ವರ್ಗಕ್ಕೆ ಸೇರಿದ್ದ. ದೊಡ್ಡ ಬೆಕ್ಕು ಎಂದು ಹೇಳಿದರೆ, ಆದಿಯಲ್ಲಿ ಆಶ್ಚರ್ಯವನ್ನುಂಟುಮಾಡುತ್ತೆ. ಸಿಂಹವು ಎಷ್ಟು ದೊಡ್ಡ ಪ್ರಾಣಿಯು, ಎಷ್ಟು ಪರಾಕ್ರಮಿಯಾಗಿದ್ದರೂ ಶರೀರರಚನೆಯಲ್ಲಿ ಸಾಧಾರಣವಾಗಿ ಮನೆಯಲ್ಲೆಲ್ಲಾ ಓಡಾಡುವ ಬೆಕ್ಕಿನ ಶರೀರರಚನೆಯನ್ನೇ ಹೋಲುವುದು. ಒಂದು ಬೆಕ್ಕನ್ನು ಹಿಡಿದುಕೊಂಡು, ಅದರ ಕಾಲು, ಕಣ್ಣು, ಮುಖ ಇವೇ ಮುಂತಾದ ಅವಯವಗಳನ್ನು ಪರೀಕ್ಷಿಸಿದರೆ ಸಿಂಹದ ಶರೀರರಚನೆಯನ್ನು ಪುನಃ ಪರೀಕ್ಷಿಸಲು ಅವಶ್ಯಕವಿಲ್ಲ.

ಸಿಂಹವು ಕೋಪಾಟೋಪದಿಂದ ಆನೆಯಮೇಲೆ ಬಿದ್ದು ಒಂದಾವರ್ತಿ ಅಪ್ಪಳಿಸಿದರೆ ಆನೆಯ ಕುಂಭಸ್ಥಳವಾದರೂ ಸೀಳಿಹೋಗುವುದು. ಬಲವಾದ ಆನೆಯ ಕುಂಭಸ್ಥಳವನ್ನಾದರೂ ಬಗೆಯುವಷ್ಟು ತೀಕ್ಷ್ಣವಾಗಿರುವ ಸಿಂಹದ ಉಗುರು, ರಚನೆಯಲ್ಲಿ ಮಾತ್ರ ಬೆಕ್ಕಿನ ಉಗುರಿನಂತೆಯೇ ಇರುವುದು. ಆದರೆ ಬೆಕ್ಕಿನ ಉಗುರಿಗಿಂತ ಬಹಳ ದೊಡ್ಡದಾಗಿಯೂ, ಬಲವಾಗಿಯೂ ಇರುವುದು. ಸಿಂಹವು ಪ್ರಾಣಿಗಳಮೇಲೆ ಬಿದ್ದು ಅವುಗಳನ್ನು ಕೆಡಹಿ, ಕೊಂದು ಭಕ್ಷಿಸುವುದರಿಂದ, ಇದಕ್ಕೆ ಅನುಕೂಲವಾಗಿ ಜೀವಿಗಳುವ ಆಯುಧವೇ ಇದರ ಉಗುರು. ಉಗುರೇ ಇವಕ್ಕೆ ಆಯುಧವಾಗಿರುವುದರಿಂದ ಇವು ಯಾವಾಗಲೂ ಹರಿತವಾಗಿರಬೇಕು. ಸಿಂಹವು ಚತುಷ್ಪಾದ ಜಂತುವಾದುದರಿಂದ ಇದರ ಉಗುರು ನೆಲಕ್ಕೆ ತಗಲಿತಗಲಿ ಮಂಡಾಗಿಹೋಗದಹಾಗೆ ಇರಲು ಈ ಉಗುರುಗಳಿಗೆ ಒರೆಯುಂತೆ ಇರುವ ಚೀಲಗಳು ಇರುವವ್ವು. ಸಿಂಹದ ಪಂಜದಲ್ಲಿರತಕ್ಕ ಒಂದೊಂದು ಉಗುರಿಗೂ ಒಂದೊಂದು ಚೀಲವಿರುವುದು. ಉಪಯೋಗಿಸದೆ ಇರುವಾಗಲೆಲ್ಲಾ

ಉಗುರನ್ನು ಸಿಂಹವು ಒಳಕ್ಕೆ ಸೆಳೆದುಕೊಂಡಿರುವುದು. ಇದೇರೀತಿಯಾದ ಸೃಷ್ಟಿಯನ್ನು ಬೆಕ್ಕಿನ ಪಂಜದಲ್ಲಿ ಚೆನ್ನಾಗಿ ನೋಡಬಹುದು. ಅದರೆ ನಾಯಿಯ ಉಗರನ್ನು ಪರೀಕ್ಷಿಸಿದರೆ ಅದು ನೆಲಕ್ಕೆ ತಗಲಿತಗಲಿ ಮೊಂಡಾಗಿರುವುದೆಂದು ತಿಳಿದುಬರುವುದು. ಸಿಂಹ, ಬೆಕ್ಕು ಇವುಗಳ ಪಂಜದಲ್ಲಿ ಚೀಲವು ಇರುವಂತೆ ನಾಯಿಯ ಪಂಜದಲ್ಲಿ ಚೀಲವು ಇಲ್ಲದೆ ಇರೋಣವೆ ಇದಕ್ಕೆ ಕಾರಣವು. ಸಿಂಹವೂ, ಬೆಕ್ಕೂ ಎಷ್ಟು ಕಠಿಣವಾದ ಭೂಮಿಯು ವೇಲೆಯಾಗಲಿ, ಎಷ್ಟುದಿವಸವಾದರೂ ಆಗಲಿ, ಹ್ಯಾಗೆ ನಡೆದಾಗ್ಯೂ ಅವುಗಳ ಉಗರು ನೆಲಕ್ಕೆ ತಗಲಿ, ನಾಯಿಯು ಉಗುರಿನಂತೆ ಮೊಂಡಾಗುವುದಿಲ್ಲ.

ಸಿಂಹವು ವಿಶೇಷವಾಗಿ ಮಾಂಸಾಹಾರಿಯಾಮದರಿಂದ, ಯಾವ ಪ್ರಾಣಿಯು ನೀಲಾದರೂ ಬೀಳಬೇಕಾದರೆ, ಮೆತ್ತಗೆ, ನಿಶ್ಶಬ್ದವಾಗಿ ತೆವಳಿಕೊಂಡುಹೋಗಿ, ಆ ಪ್ರಾಣಿಯು ಗೋಚರಕ್ಕೆ ಬಾರದಂತೆ ಸರಿಯಾದ ಸ್ಥಳದಿಂದ ಹೊಂಚುಹಾಕಿಕೊಂಡು, ಅನುಕೂಲವಾದ ಸಮಯವು ದೊರೆತೊಡನೆಯೆ ನೆಗೆದು ಆ ಪ್ರಾಣಿಯನ್ನು ಸಾಮಾನ್ಯವಾಗಿ ಕುತ್ತಿಗೆಯ ಹತ್ತರ ಕಚ್ಚಿ ಹಿಡಿಯುವುದು. ಸಿಂಹವು ಬಲವಾದರೂ



ಶೀಘ್ರರೂಕತೆಯಿಂದ ಪ್ರಾಣಿಗಳ ಮೇಲೆ ಬೀಳುವುದು ಅವಶ್ಯವು. ಯಾತಕ್ಕೆಂದರೆ ಕೆಲವು ಮೃಗಗಳು ಸಿಂಹಕ್ಕಿಂತಲೂ ಅತಿ ವೇಗವಾಗಿ ಓಡುವುವು. ಅಂಥಾ ಮೃಗಗಳನ್ನು ಇದು ಬೆನ್ನಟ್ಟಿ ಹಿಡಿದು ವಶಪಡಿಸಿಕೊಳ್ಳುವುದು ಶಕ್ಯವಾಗುವುದು. ತಾನಾಗಿ

ವಿಶೇಷ ಕಷ್ಟಪಡುವುದನ್ನು ತಪ್ಪಿಸಿಕೊಳ್ಳುವುದು ಇದರ ಸ್ವಭಾವವಾದುದರಿಂದ ಉಪಾಯಾಂತರಗಳಿಂದ, ವಿಶೇಷ ಶ್ರಮಪಡದಹಾಗೆ ಆಹಾರವನ್ನು ತಾನಿದ್ದೆಡೆಗೆ ಎಳೆದುಕೊಳ್ಳುವುದೂ, ಆಹಾರವಿದ್ದ ಸ್ಥಳಕ್ಕೆ ಸದ್ದುಮಾಡದಂತೆ ಹೋಗಿ ಹೊಂಚುಹಾಕಿಕೊಂಡು ಮೃಗಗಳ ಮೇಲೆ ಬಿದ್ದು ಆಹಾರವನ್ನು ಸಂಪಾದಿಸಿಕೊಳ್ಳುವುದೂ ಇದರ ಸಹಜಗುಣವು. ಇದಕ್ಕೆ ಅನುಕೂಲವಾಗಿಯೇ ಇದರ ಅಂಗಾಲಿನಲ್ಲಿ ಮಾಂಸಭರಿತವಾದ ಮೃದುವಾದ ನಾಲ್ಕು ದಿಂಬುಗಳು ಇರುವುವು. ನಿಶ್ಶಬ್ದವಾಗಿ ನಡೆಯುವುದಕ್ಕೆ ಇವು ಬಹಳ ಸಹಾಯಮಾಡುವುವು. ಇವುಗಳನ್ನು ಬೆಕ್ಕಿನ ಅಂಗಾಲಿನಲ್ಲಿ ಚೆನ್ನಾಗಿ ನೋಡಬಹುದು. ಕೆಲವ್ಹೇಳೆ ಬೆಕ್ಕಿನ ಹೆಜ್ಜೆಯ ಸಪ್ಪಳವು ಕೇಳಿಬರುವದೇ ಇಲ್ಲ. ಸಿಂಹವು ಅಷ್ಟು ಬಲವಾದ ಮತ್ತು ದೊಡ್ಡದಾದ ಪ್ರಾಣಿಯಾಗಿದ್ದಾಗ್ಯೂ ಅಂಗಾಲಿನಲ್ಲಿರುವ ಈ ದಿಂಬುಗಳ ಸಹಾಯದಿಂದ, ತನಗೆ ಆಹಾರಕ್ಕೆ ಸಿಕ್ಕುವ ಪ್ರಾಣಿಯು ಹೆಜ್ಜೆಯ ಶಬ್ದದಿಂದ ಸ್ವಲ್ಪವೂ ಎಚ್ಚೆತ್ತುಕೊಳ್ಳದಹಾಗೆ, ಬೆಕ್ಕಿನಷ್ಟು ನಿಶ್ಶಬ್ದವಾಗಿ ಆಹಾರವಿರುವ ಎಡೆಗೆ ಹೋಗಿ, ಆಹಾರವನ್ನು ಸಂಪಾದಿಸಿಕೊಳ್ಳುವುದು.

ಬೆಕ್ಕಿಗೆ ವಿಾಸೆಯು ಇರುವಂತೆ ಸಿಂಹಕ್ಕೂ ಇರುವುದು. ಬೆಕ್ಕು ತನ್ನ ವಿಾಸೆಯಿಂದ ಏನು ಪ್ರಯೋಜನವನ್ನು ಪಡೆಯುತ್ತದೆಯೋ ಆ ಪ್ರಯೋಜನವನ್ನೇ ಸಿಂಹವೂ ಪಡೆಯುವುದು. ಈ ಮೃಗಗಳು ತಮ್ಮತಮ್ಮ ವಿಾಸೆಯಿಂದ ಪ್ರಯೋಜನವನ್ನು ಪಡೆಯುವುದು ಎಂಬುವುದು ಹಾಸ್ಯಾಸ್ಪದವಾಗಿಲ್ಲವೆ! ಆದರೆ ಸೃಷ್ಟಿಯಲ್ಲಿ ಯಾವದನ್ನೂ ಹಿಯ್ಯಾಳಿಸಲಾಗದು. ಎಲ್ಲದರಿಂದಲೂ ಪ್ರಯೋಜನ ಉಂಟು. ಸದ್ಯಕ್ಕೆ ಈ ಜಾತಿ ಮೃಗಗಳಿಗೆ ವಿಾಸೆಯಿಂದ ಇರುವ ಪ್ರಯೋಜನವನ್ನು ತಿಳಿಯೋಣ. ಈ ಮೃಗಗಳು ಆಹಾರಾರ್ಥವಾಗಿ ಹೊಂಚುಕಾಯುತಾ ಅಲ್ಲಲ್ಲಿ ನಿಶ್ಶಬ್ದವಾಗಿ ಚಲಿಸುವಾಗ ವಿಾಸೆಯು ಬಹಳ ಉಪಯೋಗವಾಗಿರುವುದು. ಬೆಕ್ಕಿನ ವಿಾಸೆಯನ್ನು ನೋಡಿದರೆ ಅದರ ಉದ್ದವು, ಬೆಕ್ಕಿನ ಮೈ ಅಗಲದಷ್ಟು ಇರುವುದು. ವಿಾಸೆಯ ಪ್ರತಿ ಕೂದಲಿನ ಕೊನೆಯಲ್ಲಿಯೂ ಎಷ್ಟರಮಟ್ಟಿಗೆ ಸ್ಪರ್ಶಶಕ್ತಿಯು ಇರುವುದೆಂದರೆ ಅದರ ವಿಾಸೆಗೆ ಏನಾದರೂ ಸ್ವಲ್ಪ ಸೂಕ್ಷ್ಮವಾಗಿ ಸೋಂಕಿದರೇ ಸಾಕು; ಅದು ತಿಳಿದುಕೊಳ್ಳುವುದು. ಇಂಥಾ ಶಕ್ತಿಯು ಈ ವಿಾಸೆಯಲ್ಲಿರುವುದರಿಂದಲೇ ಈ ಜಾತಿ ಪ್ರಾಣಿಗಳಿಗೆ ವಿಾಸೆಯು ಬಹಳ ಪ್ರಯೋಜನಕಾರಿ ಎಂದು ಹೇಳಿರುವುದು. ಆಹಾರಕ್ಕೆ ಈಡಾಗಿರುವ ಪ್ರಾಣಿಯನ್ನು ಹಿಡಿಯುವುದರಲ್ಲಿ ವಿಾಸೆಯು ಏನು ಸಹಾಯಮಾಡುವುದು ಎಂದು ಕೇಳಿ

ಬಹುದು. ಇದರಿಂದ ಬಯಲುವುದನ್ನು ಓದೋಣವರಿಂದ ಬೆಕ್ಕಿನ ವರ್ಗಕ್ಕೆ ಸೇರಿದ ಪ್ರಾಣಿಗಳ ವಿಾಸೆಯ ಪ್ರಯೋಜನವು ವ್ಯಕ್ತವಾಗುವುದು.

ಗಿಣಿಯು ನುರಿಯನ್ನೇ ಆಗಲಿ, ಇರಿಯನ್ನೇ ಆಗಲಿ, ಇನ್ನಾವ್ಯವೆದಾದರೂ ತನಗೆ ಆಹಾರಕ್ಕೆ ಈಡಾಗುವ ಪ್ರಾಣಿಯನ್ನೇ ಆಗಲಿ, ಬೆಕ್ಕು ನೋಡಿದಾಗ, ಅದನ್ನು ಹಿಡಿದುಕೊಳ್ಳಲು ಹೊಂಚುಹಾಕುತಾ, ಆ ಪ್ರಾಣಿಗೆ ಗೋಚರವಾಗದಂತೆ ನಿಶ್ಶಬ್ದವಾಗಿ ಅಲ್ಲಿ ಇಲ್ಲಿ ನುಸಿಮುಕೊಂಡು ಹೋಗುತಾ ಯಾವಾಗಲೂ ತನ್ನ ದೃಷ್ಟಿಯನ್ನೆಲ್ಲಾ ಆ ಪ್ರಾಣಿಯ ಮೇಲೆ ಸಂಪೂರ್ಣವಾಗಿ ಇಟ್ಟುಕೊಂಡು ಅದರ ಬೆನ್ನುಹತ್ತುವುದು. ಹೀಗೆ ಆ ಬೀಳಿನಮೇಲೆ ದೃಷ್ಟಿಯನ್ನೆಲ್ಲಾ ಇಟ್ಟುಕೊಂಡು ಹೋಗಬೇಕಾದ ಬೆಕ್ಕಿಗೆ ತನ್ನ ದಾರಿಯಮೇಲೆ ಅಷ್ಟು ಗಮನವಿರುವುದಿಲ್ಲ. ಕಲವುವೇಳೆ ಒತ್ತಾದ ಪೊದರಿನಲ್ಲಿಯೂ ಸಣ್ಣ ಸಣ್ಣ ಬಿಲದಲ್ಲಿಯೂ ನುಗ್ಗಬೇಕಾಗಿಬರುವುದು. ಹೊಂಚು ಕಾಯುವುದೂ, ಬೆನ್ನಟ್ಟಿ ಗೋಪ್ಯವಾಗಿ ಹೋಗುವುದೂ, ಯಾವಪ್ರಾಣಿಗೇ ಆಗಲಿ ಸುಲಭಪ್ರಯತ್ನವಲ್ಲ. ಇಂಥಾ ಕಾಲದಲ್ಲಿ ಈ ಪ್ರಾಣಿಗಳಿಗೆ ವಿಾಸೆಯೇ ಸಹಾಯವು. ಸಿಂಹವು ಶರೀರವನ್ನು ಎಷ್ಟು ಸಂಕೋಚಪಡಿಸಿಕೊಂಡು ನುಗ್ಗಿದಾಗ್ಯೂ ಸ್ಥಳವು ಚಿಕ್ಕ ಡಾಗಿದ್ದರೆ ಇದು ತಲೆ ಹಾಕಿದೊಡನೆಯೆ ಅದರಲ್ಲಿ ಶರೀರವು ನುಗ್ಗಲಾರದೆಂದು ಇದರ ವಿಾಸೆಯು ತತ್‌ಕ್ಷಣವೇ ಹೇಳುವುದು. ವಿಶೇಷ ಗಲಭೆಯನ್ನುಂಟುಮಾಡಿ ಅದರಿಂದ ಆ ಪ್ರಾಣಿಯು ಎಚ್ಚೆತ್ತುಗೊಂಡು ಓಡಿಹೋಗದಂತೆ ತನ್ನ ತಲೆಯನ್ನು ಒಡನೆಯೆ ಹಿಂದೆಗೆದು ಬೇರೆ ಮಾರ್ಗವನ್ನು ಹುಡುಕುವುದು. ಇದರಿಂದ ವಿಾಸೆಯು ಸಿಂಹದ ಮುಖಕ್ಕೆ ಅಲಂಕಾರಮಾತ್ರವಾಗಿಯೇ ಇಲ್ಲ, ಅದಕ್ಕೆ ವಿಶೇಷ ಉಪಕಾರಿಯಾಗಿಯೂ ಇರುವುದೆಂದು ಹೇಳಬಹುದು.

ಶಾರೀರಭಾಗ. (೨೦೪ ನೇ ಪುಟದಿಂದ)

ಹೀಗೆ ಆಕ್ಸಿಜನ್ ವಾಯುವೂ ಅನ್ನರಸವೂ ತುಂಬಿರುವ ಅಚ್ಚ ಕೆಂಪಾದ ಶುದ್ಧರಕ್ತವು ಹೃದಯಕಮಲದಿಂದ ಹೊರಟು ಧಮನಿಗಳ ಮಾರ್ಗವಾಗಿ ಹರಿದು ರೋಮನಾಳಗಳ ಮೂಲಕವಾಗಿ ಶರೀರದ ಸರ್ವಸಾವಿರಾರುಗಳಿಗೂ ಹೋಗಿ ಆ ಸೂಕ್ಷ್ಮಾಂಗಗಳಿಗೆ ತಾನು ತಂದಿರುವ ಅನ್ನರಸವನ್ನೂ ಆಕ್ಸಿಜನ್ ವಾಯುವನ್ನೂ

ಕೊಟ್ಟು ಆ ಸಮಗ್ರಿಗಳಿಂದ ಕಶ್ಮಲವನ್ನೂ ಹಳದಾಗಿ ಕೆಲಸಕ್ಕೆ ಬಾರದ ವಸ್ತುಗಳನ್ನೂ ತೆಗೆದುಕೊಂಡು ಮಲಿನವಾಗಿ ಸ್ವಲ್ಪ ನೀಲಿ ಸೇರಿದ ಕೆಂಪುಬಣ್ಣವುಳ್ಳದ್ದಾಗಿ ಶಿರೆಗಳ ಮಾರ್ಗವಾಗಿ ಹರಿದು ಹೃದಯಕಮಲಕ್ಕೆ ಮತ್ತೆ ಬಂದು ಸೇರುವುದು. ಇಲ್ಲಿಗೆ ರಕ್ತಾಭಿಸರಣವೆಂಬುದರಲ್ಲಿ ಒಂದು ಭಾಗವು ಪೂರೈಸಿದಂತಾಗುವುದು. ಆದರೆ ಹೀಗೆ ಹೃದಯಕಮಲಕ್ಕೆ ಬಂದು ಬೀಳುವ ರಕ್ತವು ಮಲಿನವಾಗಿಯೂ ಹಳದಾಗಿ ಕೆಲಸಕ್ಕೆ ಬಾರದ ವಸ್ತುಗಳಿಂದ ತುಂಬಿರುವುದರಿಂದಲೂ ಈ ರಕ್ತವೇ ಮತ್ತೆ ಹೃದಯಕಮಲದಿಂದ ಹೊರಟು ನೆಟ್ಟಗೆ ಶರೀರ ಸಾಮಗ್ರಿಗಳಿಗೆ ಹೋಗುವುದರಿಂದ ಪ್ರಯೋಜನವಿಲ್ಲ. ಶರೀರಸಾಮಗ್ರಿಗಳಿಗಾಗಿ ಹೊರಡುವುದಕ್ಕೆ ಮುಂಚೆ ಈ ರಕ್ತದಲ್ಲಿ ಸೇರಿರುವ ಕಶ್ಮಲವೆಲ್ಲ ಹೋಗಿ ನಿರ್ಮಲವಾದ ಆಕ್ಸಿಜನ್ ವಾಯು ಬಂದು ಸೇರಬೇಕು. ಇದಕ್ಕಾಗಿ ಈ ಮಲಿನರಕ್ತವು ಹೃದಯಕಮಲದಿಂದ ಹೊರಟು ಶ್ವಾಸಕೋಶಗಳಿಗೆ ಹೋಗುವುದು. ಶರೀರದಲ್ಲಿ ಶ್ವಾಸಕೋಶಗಳೆರಡಿವೆ. ಎದೆಗೂಡಿನಲ್ಲಿ ಹೃದಯಕಮಲದೆಡಕ್ಕೊಂದು ಕೋಶವು ಬಲಕ್ಕೊಂದು ಕೋಶವು ಇವೆ. ಈಕೋಶಗಳಲ್ಲಿ ರಕ್ತದಲ್ಲಿನ ಕಶ್ಮಲವು ಹೋಗಿ ನಿರ್ಮಲವಾದ ಆಕ್ಸಿಜನ್ ವಾಯು ರಕ್ತಕ್ಕೆ ಬಂದು ಸೇರುತಿರುವುದು. ಹೀಗೆ ರಕ್ತಾಭಿಸರಣವು ಇರ್ತೆರನಾಗಿರುವುದು. ಸಾಮಾನ್ಯವಾಗಿ ಶರೀರಾಂಗಗಳ ಮೂಲಕವಾಗಿ ಹರಿಯುವುದೊಂದು. ಶ್ವಾಸಕೋಶಗಳ ಮೂಲಕವಾಗಿ ಹರಿಯುವುದು ಮತ್ತೊಂದು. ಇನಿತೂ ಏಕಕಾಲದಲ್ಲೇ ನಡೆಯುತ್ತಿರುವುವು. ಒಳಗಡೆ ಪೊಳ್ಳಾಗಿರುವ ಎರಡು ಮಾಂಸಖಂಡಗಳು ಸೇರಿ ಹೃದಯಕಮಲವಾಗಿರುವುದರಿಂದ ಹೀಗೆ ಏಕಕಾಲದಲ್ಲಿ ಆಗುವ ಇಬ್ಬಗೆ ರಕ್ತಾಭಿಸರಣಕ್ಕೆ ಅವಕಾಶವುಂಟಾಗಿದೆ. ಈ ಮಾಂಸಖಂಡಗಳಲ್ಲಿ ಒಂದು ಹೃದಯಕಮಲ ಬಲಭಾಗವಾಗಿಯೂ ಮತ್ತೊಂದು ಎಡಭಾಗವಾಗಿಯೂ ಇರುವುದು. ಹೃದಯಕಮಲದ ಎಡಭಾಗವು ಕಶ್ಮಲವೆಲ್ಲಾ ಹೋಗಿ ಆಕ್ಸಿಜನ್ ವಾಯು ತುಂಬಿರುವ ಶುದ್ಧರಕ್ತವನ್ನು ಮೇಲೆ ಹೇಳಿರುವಂತೆ ಶರೀರಾಂಗಗಳಿಗೆಲ್ಲಾ ಸೇರಿಸುವುದು. ಬಲಭಾಗವು ಅದೇಕಾಲದಲ್ಲಿ ಮಲಿನವಾದ ರಕ್ತವನ್ನು ಶ್ವಾಸಕೋಶಗಳಿಗೆ ಸೇರಿಸುತ್ತಿರುವುದು. ಹಿಂದೆ ಕೊಟ್ಟಿರುವ ನಕ್ಷೆಯಲ್ಲಿ ಈ ಎರಡು ಮಾರ್ಗಗಳನ್ನು ಬಾಣಮುಖಗಳಿಂದ ಸ್ಪಷ್ಟವಾಗಿ ತೋರಿದೆ. ಆ ನಕ್ಷೆಯನ್ನು ದಿರಿಗಿಟ್ಟುಕೊಂಡಲ್ಲಿ ಮೇಲಣ ವಿವರಣೆಯು ಚೆನ್ನಾಗಿ ಗೊತ್ತಾಗುವುದು. ಹೃದಯಕಮಲದ ಎಡಬಲ ಭಾಗಗಳು ಮತ್ತೆರಡೆರಡು ಭಾಗವಾಗಿರುವುದು. ಈ ಭಾಗಗಳಲ್ಲಿ ಮೇಲಣದಕ್ಕೆ

ಹೃತ್ಕರ್ಣವೆಂತಲೂ, ಕೆಳಕೆಣದಕ್ಕೆ ಹೃತ್ಕಕ್ಷಿ ಎಂತಲೂ ಹೆಸರು. ಬಲಗಡೆ ಹೃತ್ಕರ್ಣವೂ, ಹೃತ್ಕಕ್ಷಿಯೂ ಶ್ವಾಸಕೋಶಕ್ಕೆ ರಕ್ತವನ್ನೊಯ್ಯುವವು. ಎಡದ ಹೃತ್ಕರ್ಣವೂ ಹೃತ್ಕಕ್ಷಿಯೂ ಶರೀರಗಳಿಗೊಯ್ಯುತ್ತಿರುವುವು ಹೀಗಿರುವುದರಿಂದ ಶುದ್ಧರಕ್ತವು ಎಡದ ಹೃತ್ಕಕ್ಷಿಯಿಂದ ಹೊರಟು ಧಮನಿಗಳನ್ನು ಪ್ರವೇಶಿಸುವುದು. ಮತ್ತು ಇವುಗಳ ಮೂಲಕವಾಗಿ ಹರಿದು ಸರ್ವಾಂಗಗಳಿಗೆ ಹೋಗುವುದು. ಈ ಅಂಗಗಳಲ್ಲಿ ಹರಿಯುವಾಗ ಕಶ್ಮಲಯುಕ್ತವಾದ ಆ ರಕ್ತವೂ ಶಿರೆಗಳ ಮೂಲಕವಾಗಿ ಬಲದ ಹೃತ್ಕರ್ಣಕ್ಕೆ ಬರುವುದು. ಇಲ್ಲಿಂದದು ಬಲದ ಹೃತ್ಕಕ್ಷಿಗೆ ಹೋಗುವುದು. ಅಲ್ಲಿಂದ ಶ್ವಾಸಕೋಶಗಳಿಗೆ ಹೋಗುವುದು. ಇಲ್ಲಿ ಶ್ವಾಸೋಛ್ವಾಸಕಾರ್ಯವು ಅದರ ಕಶ್ಮಲಗಳನ್ನು ಹೋಗಲಾಡಿಸಿ ಅದನ್ನು ಸಿದ್ಧಿಗೊಳಿಸುವುದು. ಹೀಗೆ ಶುದ್ಧವಾದ ರಕ್ತವು ಎಡದ ಹೃತ್ಕರ್ಣಕ್ಕೆ ಬರುವುದು. ಅಲ್ಲಿಂದ ಹೊರಟು ಎಡದ ಹೃತ್ಕಕ್ಷಿಗೆ ಬಂದು ಸೇರುವುದು. ಹೃತ್ಕಮಲದ ಕೋಶಗಳು ಒಂದರಮೇಲೊಂದು ಸಂಕುಚಿಸುವುದಿಲ್ಲ. ಎಡಬಲದ ಹೃತ್ಕರ್ಣಗಳು ಮೊದಲು ಸಂಕುಚಿಸಿ ರಕ್ತವನ್ನು ಆಯಾ ಹೃತ್ಕಕ್ಷಿಗಳಿಗೆ ಹಿಂಡುವುವು. ಹೃತ್ಕಕ್ಷಿಗಳಿಗೆ ತುಂಬಿಕೊಂಡತೆ ಏಕಕಾಲದಲ್ಲಿ ಸಂಕುಚಿಸಿ ಬೇರೆಬೇರೆ ಮಾರ್ಗಗಳಲ್ಲಿ ಒಂದು ಶ್ವಾಸಕೋಶಕ್ಕೂ ಮತ್ತೊಂದು ಶರೀರಾಂಗಗಳಿಗೂ ರಕ್ತವನ್ನು ಏಕಕಾಲದಲ್ಲಿ ಸೇರುವುವು.



ನಕ್ಷೆಯಲ್ಲಿ h ಹೃದಯ. c ಬಲದ ಹೃತ್ಕರ್ಣ. v ಬಲದ ಹೃತ್ಕಕ್ಷಿ. c' ಎಡದ ಹೃತ್ಕರ್ಣ. v' ಎಡದ ಹೃತ್ಕಕ್ಷಿ. a ಶರೀರಾಂಗಗಳಿಗೆ ರಕ್ತವನ್ನೊಯ್ಯುವ ಧಮನಿಗಳು. d ಈ ಅಂಗಗಳಿಂದ ರಕ್ತವನ್ನು ಮತ್ತೆ ಹೃದಯ ಕಮಲಕ್ಕೆ ತರುವ ಶಿರೆಗಳು. f ಶ್ವಾಸಕೋಶಕ್ಕೆ ರಕ್ತವನ್ನೊಯ್ಯುವ ಧಮನಿಗಳು. b ಶ್ವಾಸಕೋಶಲೋಮನಾಳಗಳು. g ಶುದ್ಧರಕ್ತವನ್ನು ತರುವ ಶಿರೆಗಳು. e ಶರೀರಾಂಗಲೋಮನಾಳಗಳು.

ಕೊ. ಕಂ ವೆಂಕಟಶಾಮ್ಯಯ. ಬಿ. ಎ.

ಜಗಳದಿಂದ ಉಂಟಾಗುವ ಕೇಡು.

ಕೆಲವು ದಿವಸಗಳ ಮುಂಚೆ ಒಂದು ಹಳ್ಳಿಯಲ್ಲಿ ಬಹಳ ಹಣವಂತರಾದ ಅಣ್ಣ ತಮ್ಮಂದಿರು ಇಬ್ಬರು ರೈತರು ವಾಸಮಾಡಿಕೊಂಡಿದ್ದರು. ಇವರಿಗೆ ಬೇಕಾದಷ್ಟು ಹೊಲ, ಮನೆ, ದನಕರ, ಕುರಿ ಇದ್ದವು. ಇವರಿಬ್ಬರಲ್ಲಿ ಕಿರಿಯವನು ಬೆಳಗ್ಗೆ ಅಷ್ಟು ಹೊತ್ತಿಗೆ ಎದ್ದು ದನ ಕುರಿ ಮೊದಲಾದವುಗಳನ್ನು ಮೇಯಿಸುವುದಕ್ಕೆ ಅಟ್ಟಕೊಂಡು ಹೋಗುವುದು, ಮೇಯಿಸಿಕೊಂಡು ಸಂಜೆಹೊತ್ತಿಗೆ ಮನೆಗೆ ಬರುವುದು, ದನಗಳ ಮೈ ತಿಕ್ಕುವುದು, ಕುರಿಗಳ ತುಬಟವನ್ನು ಕತ್ತರಿಸುವುದು ಹೀಗೆಯೆ ಬಹಳ ಎಚ್ಚರಿಕೆಯಿಂದ ಅವುಗಳನ್ನು ನೋಡಿಕೊಳ್ಳುತಿದ್ದನು. ಹಿರಿಯವನು ಮನೆ, ಹೊಲ, ಗದ್ದೆ ಇವುಗಳ ಪರಾಂಬರಿಕೆಯನ್ನು ತೆಗೆದುಕೊಳ್ಳುತಿದ್ದನು. ಕಿರಿಯವನು ಮರಿ, ಹಾಲು, ತುಬಟ ಇವುಗಳನ್ನು ಆಗಾಗ್ಗೆ ಮಾರಿ, ಅವುಗಳಿಂದ ಬಂದ ಹಣವನ್ನು ತನ್ನ ಅಣ್ಣನ ಕೈಲಿ ಕೊಡುತಿದ್ದನು. ಇದಕ್ಕೆ ಅಣ್ಣನಾದವನು ತಾನು ಮನೆಗೆ ಸಾಕಾಗುವಷ್ಟು ದವಸವನ್ನು ಇಟ್ಟುಕೊಂಡು ಉಳಿದುದನ್ನೆಲ್ಲಾ ಮಾರಿ ಗಂಟುಮಾಡುತಿದ್ದನು. ಇಬ್ಬರೂ ಕಷ್ಟಪಟ್ಟು ಹಣವನ್ನು ಕೂಡಿಹಾಕುತ ಇದ್ದುದರಿಂದ ಕೆಲವು ಕಾಲದಲ್ಲಿಯೇ ಇವರು ತುಂಬಾ ಹಣಗಾರರು ಆದರು. ಆ ಹಳ್ಳಿಯಲ್ಲಿದ್ದ ಕೆಟ್ಟ ಜನರು ಇವರನ್ನು ನೋಡಿ ಸಹಿಸಲಾರದೆ ಹೊಟ್ಟೇಕಿಚ್ಚುಪಡುತಿದ್ದರು. ಹೀಗೆಯೇ ಸ್ವಲ್ಪದಿವಸಗಳು ಕಳೆದವು. ಒಂದುದಿವಸ ಅಲ್ಲಿದ್ದ ಕೆಡುಕರಲ್ಲಿ ಒಬ್ಬನು "ಇವರಿಬ್ಬರ ಏಳಿಗೆಗೆ ಒಬ್ಬರಲ್ಲಿ ಒಬ್ಬರಿಗೆ ಇರತಕ್ಕ ನಂಬಿಕೆಯೇ ಕಾರಣವು. ನಂಬಿಕೆಯೂ, ಪ್ರೀತಿಯೂ ಇಲ್ಲದಿದ್ದರೆ ಹೀಗೆ ಏಳಿಗೆಯುಂಟಾಗುವುದೇ ಇಲ್ಲ, ಆದಕಾರಣ ಯಾವದಾದರು ಒಂದು ಉಪಾಯದಿಂದ ಒಬ್ಬರಲ್ಲಿ ಒಬ್ಬರಿಗಿರತಕ್ಕ ನಂಬಿಕೆಯನ್ನು ಕೆಡಸಿದರೆ ಅಷ್ಟೇ ಸಾಕು. ಅದರಿಂದ ಎಲ್ಲಾ ಹಾಳಾಗುವುದು" ಎಂದು ಯೋಚಿಸಿದನು. ಹೀಗೆಂದುಕೊಂಡು ಅವರಿಬ್ಬರಲ್ಲಿ ಸ್ನೇಹವನ್ನು ಬೆಳೆಸಿದನು. ತರುವಾಯ ಇವನು ಸ್ನೇಹಿತನಾದುದರಿಂದ ಅಣ್ಣ ಎಲ್ಲವನೂ ತಮ್ಮನಿಗೆ ಹೇಳಬೇಕಾದರೆ ಇವನಲ್ಲಿ ಹೇಳಿ ಕಳುಹಿಸುತಿದ್ದನು, ತಮ್ಮನೂ ಇದೇ ರೀತಿಯಾಗಿ ಮಾಡುತಿದ್ದನು. ಕೆಲವುದಿನಗಳು ಹೀ

ಅಣ್ಣ ತಮ್ಮಂದಿರಿಬ್ಬರಿಗೆ ಹುಟ್ಟಿದ ನಂತರ

ಮಾತುಗಳನ್ನು ಸೇರಿಸಿ ತಮ್ಮನಿಗ ಹೇಳುವ

ದನ್ನೂ ಅಣ್ಣನಿಗೆ ಹೇಳುವುದೂ, ಈ ಕೆಟ್ಟ ಉಪಾಯದಿಂದ ಒಬ್ಬರಲ್ಲಿ ಒಬ್ಬರಿಗೆ ಇರ ತಕ್ಕ ನಂಬಿಕೆಯನ್ನು ಕೆಡಿಸಿದನು. ಇದರಿಂದ ಜಗಳ ಹುಟ್ಟಿತು. ಈ ಜಗಳಕ್ಕೆಲ್ಲಾ ಕಾರಣ ಈ ಕೆಟ್ಟ ಸ್ನೇಹಿತನಾದನು. ಒಬ್ಬ ಸ್ನೇಹಿತನು ತನ್ನ ಮಾತು ತನ್ನ ಸಲಹಗಳಿಂದ ಎಷ್ಟು ಕೆಟ್ಟೆದ್ದನ್ನಾದರೂ ಮಾಡಬಹುದು; ಎಷ್ಟು ಒಳ್ಳೇದನ್ನಾದರೂ ಮಾಡಬಹುದು. ಒಳ್ಳೇ ಸ್ನೇಹಿತರು ಒಳ್ಳೇದನ್ನೇ ಬಯಸುವರು. ಯಾವಾಗಲೂ ಒಳ್ಳೇದನ್ನೇ ಮಾಡುವರು. ಕೆಟ್ಟವರು ಕೇಡನ್ನೇ ಬಗೆಯುವರು. ಆದುದರಿಂದ ಸ್ನೇಹವನ್ನು ಬೆಳೆಸುವುದಕ್ಕೆ ಮುಂಚಿತವಾಗಿಯೆ ನಡತೆಯನ್ನು ಚೆನ್ನಾಗಿ ತಿಳಿದು ಸ್ನೇಹವನ್ನೂ ಬೆಳೆಯಿಸಬೇಕು. ಸ್ನೇಹವನ್ನು ನಿಧಾನವಾಗಿ ಬೆಳೆಸಿದಮೊಬ್ಬ ಒಳ್ಳೇದು. ಕೆಡಕನ ಗುಣವನ್ನು ಚೆನ್ನಾಗಿ ತಿಳಿಯದೆ ಆಪ್ತನನ್ನಾಗಿ ಮಾಡಿಕೊಂಡ ಇಬ್ಬರ ಗತಿಯು ಏನಾಯಿತು ನೋಡೋಣ. ಆ ಕೆಟ್ಟ ಸ್ನೇಹಿತನಿಂದ ಉಂಟಾದ ಜಗಳವು ದಿನೇದಿನೇ ಹೆಚ್ಚಿ ಕೊನೆಗೆ ಆಸ್ತಿಯನ್ನು ಪಾಲುಮಾಡಬೇಕೆಂದು ಹಠ ಹಿಡಿದರು. ಇವರಿಬ್ಬರೂ ಜಗಳದಲ್ಲಿ ಇದ್ದುದರಿಂದ ಮನೆ, ಹೊಲ, ಕುರಿ, ದನ, ಇವುಗಳನ್ನು ನೋಡಿಕೊಳ್ಳುವವರು ಯಾರೂ ಇಲ್ಲದೆ ಆಗಲೇ ಬಹಳ ನಷ್ಟ ಉಂಟಾಯಿತು. ಪಾಲಾಗುವುದಕ್ಕೆ ಇಬ್ಬರೂ ಸಮ್ಮತಿಸಿದರು. ಒಂದೊಂದಾಗಿ ಸಮಪಾಲು ಮಾಡಿಕೊಂಡು ಕೊನೆಗೆ ಕುರಿಮಂದೆಯ ಬಳಿಗೆ ಬಂದರು. ಮಂದೆಯಲ್ಲಿ ನೂರೊಂಬತ್ತು ಕುರಿಗಳಿದ್ದವು. ಇಬ್ಬರೂ ಐವತ್ತುಐವತ್ತು ಕುರಿಗಳನ್ನು ತೆಗೆದುಕೊಂಡರು. ಉಳಿದ ಒಂದು ಕುರಿಯು ನನಗೆ ಬರಬೇಕೆಂತಲೂ ತನಗೆ ಬರಬೇಕೆಂತಲೂ ಹೋರಾಡಿ, ಕಡೆಗೆ ಆ ಕುರಿಯು ಇಬ್ಬರಿಗೂ ಸೇರತಕ್ಕದ್ದೆಂದು ಗೊತ್ತುಮಾಡಿಕೊಂಡರು. ಒಂದು ದಿವಸ ಅಣ್ಣನಿಗೆ ಸ್ವಲ್ಪ ತುಬಟ ಬೇಕಾಗಿದ್ದುದರಿಂದ ಆ ಕುರಿಯ ತುಬಟವನ್ನೇ ಕತ್ತರಿಸಿಕೊಳ್ಳಬೇಕೆಂದು ಹೊರಟನು. ಇದಕ್ಕಾಗಿ ತಿರುಗಿ ಜಗಳವಾಯಿತು. ಮನಸ್ಸು ಒಡೆದುಹೋದಮೇಲೆ ಯಾವುದೊಂದೂ ತಪ್ಪು; ಯಾವುದಕ್ಕೂ ಜಗಳವೆ. ಈ ಜಗಳದಲ್ಲಿ ಒಂದು ಭಾಗದ ತುಬಟವನ್ನು ಕತ್ತರಿಸಿಕೊಳ್ಳಬಹುದೆಂದು ಒಪ್ಪಿದರು. ಅಣ್ಣನು ತರುವಾಯ ಕುರಿಯ ಒಂದುಪಕ್ಕದ ತುಬಟವನ್ನು ಮಾತ್ರ ಕತ್ತರಿಸಿಕೊಂಡನು. ಇದರಿಂದ ಕುರಿಗೆ ಕಾಯಿಲೆಯಾಗಿ ಇಬ್ಬರಿಗೂ ಸೇರಿವಾದುದರಿಂದ ನೋಡಿಕೊಳ್ಳುವವರು ಯಾರೂ ಇಲ್ಲದೆ ಒಂದು ಕಣ್ಣಲ್ಲಿ ಸತ್ತು ಬಿದ್ದಿತು. ಆ ಕುರಿ ಸತ್ತುಹೋದರೂ ಜಗಳಬೇಕೇ ತಪ್ಪಲಿಲ್ಲ. ಕುರಿಯು ಒಂದುಭಾಗದ ತುಬಟಮಾತ್ರ ಕತ್ತರಿಸಿಕೊಂಡದ್ದರಿಂದ ಕುರಿಗೆ ಕಾಯಿಲೆಯಾಗಿ ಸತ್ತಿ

ತೆಂದು ಒಬ್ಬನೂ, ಕುರಿಯ ಇನ್ನೊಂದು ಭಾಗದ ತುಬಟವನ್ನು ಕತ್ತರಿಸಿಕೊಳ್ಳದೆ ಹೋಮದರಿಂದ ಒಂದುಕಡೆ ತೂಕ ಹೆಚ್ಚಾಗಿ ಹಳ್ಳಕ್ಕೆ ಬಿದ್ದು ಸತ್ತಿತೆಂದು ಇನ್ನೊಬ್ಬನೂ, ಹೀಗೆಯೆ ಮಾತು ಬೆಳೆದು, ಗುದ್ದಾಟಕ್ಕೆ ಬಂದು, ಕಳ್ಳರಿಗೆ ಹತ್ತಿ ಅಲ್ಲಿ ಕೀರ್ತನೆ ವಾಗುವುದರೊಳಗಾಗಿ ಮನೆ, ಹೊಲ, ಗದ್ದೆ, ದನ, ಕುರಿ, ಇವುಗಳನ್ನೆಲ್ಲಾ ಮಾರಿ ಕೊಂಡು, ಇದ್ದುದೆಲ್ಲಾ ಹೋದಮೇಲೆ ಕೊನೆಗೆ ತಿನ್ನುವುದಕ್ಕೆ ಅನ್ನಸಹಾ ಇಲ್ಲದೆ ಜೀತಕ್ಕೆ ನಿಲ್ಲಬೇಕಾಗಿ ಬಂತು ಕೆಟ್ಟ ಸ್ನೇಹ ಮಾಡಲಾಗಿ ಜಗಳ ಉಂಟಾಯಿತು. ಜಗಳವಾಡಲಾಗಿ ಆಸ್ತಿಯನ್ನು ನೋಡಿಕೊಳ್ಳುವರಿಲ್ಲದೆ ನಷ್ಟ ಉಂಟಾಯಿತು; ಕಳ್ಳರಿಗೂ ಹತ್ತಬೇಕಾಗಿ ಬಂತು. ಕಳ್ಳರಿಗೆ ಹೋಗಲಾಗಿ ಇದ್ದುದೆಲ್ಲವೂ ಹೋಗಿ ಜೀತಕ್ಕೆ ನಿಲ್ಲಬೇಕಾಗಿ ಬಂತು. ಆದುದರಿಂದ ಕೆಟ್ಟ ಸ್ನೇಹವೂ ಮಾಡಲಾಗದು. ಜಗಳವೂ ಆಡಬಾರದು.

☞ ಇದನ್ನು ಹೇಳಿದಮೇಲೆ ಈರೀತಿಯಾದ ಪ್ರಶ್ನೆಗಳನ್ನು ಉಪಾಧ್ಯಾಯರು ಬಾಲಕರಿಗೆ ಕೇಳಬೇಕು.

೧. ಇಬ್ಬರು ಅಣ್ಣತಮ್ಮಂದಿರು ಯಾವರೀತಿಯಲ್ಲಿದ್ದರು? ಇದಕ್ಕೆ ಕಾರಣವೇನು?

೨. ಜಗಳ ಉಂಟಾಗಲಿಕ್ಕೆ ಏನು ಕಾರಣ?

೩. ಸ್ನೇಹವನ್ನು ಹ್ಯಾಗೆ ಬೆಳೆಸಬೇಕು?

೪. ಎಂಥಾವರ ಸ್ನೇಹವನ್ನು ಮಾಡಬಾರದು?

೫. ಅದರಿಂದ ಏನಾಗುವುದು?

೬. ಜಗಳವನ್ನು ಯಾತಕ್ಕೆ ಆಡಬಾರದು?

೭. ಜಗಳವಾಡಿದ ಇಬ್ಬರು ಅಣ್ಣತಮ್ಮಂದಿರ ಗತಿ ಏನಾಯಿತು?

೮. ಈ ಕಥೆಯಿಂದ ನಾವು ಏನು ತಿಳಿದುಕೊಳ್ಳಬಹುದು?

ಗಂಧದ ಮರ.

ಬೆಳೆಯುವ ಸ್ಥಳ.

ಇದು ಮೈಸೂರು, ಕೊಯಮತ್ತೂರು, ಸೇಲಂ ಕೊಡಗು ಸೀಮೆಗಳಲ್ಲಿ ಬೆಳೆಯುವುದು.

ವರ್ಣನೆ.

ಗಂಧದ ಮರವು ಸುಮಾರು ಮೂವತ್ತು ನಾಲ್ವತ್ತು ಅಡಿಗಳ ಎತ್ತರ ಬೆಳೆಯುತ್ತಿದೆ ಇದರ ಎಲೆಯು ಹಸುರಾಗಿಯೂ ಕಿರಿದಾಗಿಯೂ ಎದುರುಪದರಾಗಿಯೂ ಇರುವುದು. ಕಾಯಿಯು ಸೀಬಿಯಾಗಿಯೂ ಎಣ್ಣೆಯುಳ್ಳದ್ದಾಗಿಯೂ ಇದೆ. ತೊಗಟೆಯು ಸುರಬಿಕೊಂಡು ಒಳಮುಖವು ಕೆಂಪಾಗಿರುತ್ತದೆ. ಕೆಚ್ಚು ಹಳದಿಕೂಡಿದ ಕೆಂಪುಬಣ್ಣವುಳ್ಳದ್ದಾಗಿಯೂ ಸುವಾಸನೆಯಾಗಿಯೂ, ಗಟ್ಟಿಯಾಗಿಯೂ ಇರುವುದು ಮರವು ಎಳೆಯದಾಗಿದ್ದಾಗ ಕೆಚ್ಚು ಬಿಳುಪಾಗಿರುವುದು. ಬಲಿತ ಕೆಚ್ಚಿನಲ್ಲಿಯೂ, ಬೇರಿನಲ್ಲಿಯೂ ಎಣ್ಣೆಯು ಇರುತ್ತದೆ; ಆದರೆ ಬೇರಿನಲ್ಲಿ ಹೆಚ್ಚಾಗಿ ಎಣ್ಣೆಯು ಇರುವುದು. ಕೆಚ್ಚಿನಲ್ಲಿರುವ ಗುರುತುಗಳಿಂದ "ನಾಗ" ಮತ್ತು "ನವಿಲುಕಣ್ಣು" ಎಂಬ ಭೇದಗಳನ್ನಿಟ್ಟುಕೊಂಡಿದಾರೆ. ಮೈಸೂರಿನಲ್ಲಿ ಇದರ ವಿಷಯವಾದ ಹಕ್ಕೆಲ್ಲವೂ ಸರಕಾರವರಿಗೆ ಸೇರಿದೆ. ಹೂಗಳು ಗೊಂಚಲಾಗಿ ಬಿಟ್ಟು ಮೊದಲು ಹಳದಿಬಣ್ಣವಾಗಿದ್ದು ಆಮೇಲೆ ನೇರಿಲೆಬಣ್ಣವನ್ನು ಹೊಂದುವುವು.

ಬೆಳೆಯುವ ಕ್ರಮ.

ಕಾಯಿಗಳನ್ನು ತೆಗೆದು ಒಣಗಿಸಿ, ಮಳೆಗಾಲದವರೆಗೂ ಕೆಡದಂತೆ ಇಟ್ಟರಬೇಕು. ಕೊಳೆತ ಸೊಪ್ಪಿನ ಗೊಬ್ಬರದೊಂದಿಗೆ ಮರಳನ್ನು ಹಾಕಿ ಒಟ್ಟಾಗಿ ಮಾಡಬೇಕು. ಇದರಮೇಲೆ ಹುಲ್ಲು ಸೊಪ್ಪು ಮೊದಲಾದುವನ್ನು ಹಾಕಿ, ನೀರನ್ನು ಕಟ್ಟುತ್ತಿರಬೇಕು. ಒಂದೆರಡು ಹದ ಮಳೆಯಾದಮೇಲೆ ಒಟ್ಟಿನಿಂದ ಸಸಿಗಳನ್ನು ತೆಗೆದುಕೊಂಡು ಹೋಗಿ ಬೇಕಾದ ಸ್ಥಳಗಳಲ್ಲಿ ನಟ್ಟು, ನೀರನ್ನು ಹಾಕಬೇಕು. ಎಲೆಯು ಬಹು ರುಚಿಯಾಗಿರುವುದರಿಂದ ಮೇಕೆ, ಮೊಲ ಮೊದಲಾದವು ತಿನ್ನದಂತೆ ಮುಳ್ಳನ್ನು ಕಟ್ಟುವುದು ಅವಶ್ಯಕ. ಹಕ್ಕಿಗಳು ತಿಂದುಹಾಕಿದ ಬೀಜಗಳಿಂದ ಬೇಲಿಗಳಲ್ಲಿಯೂ ಕಾಲುವೆಗಳ ಪಾರ್ಶ್ವಗಳಲ್ಲಿಯೂ ಬೆಳೆಯುತ್ತದೆ. ಸಾಧಾರಣವಾಗಿ ಕಾರೆಗಿಡಗಳ ಮಧ್ಯದಲ್ಲಿ ಬೆಳೆಯುವುದು ಹೆಚ್ಚು. ಈ ಗಿಡವು ಬೆಳೆಯುವುದು ನಿಧಾನ.

ಉಪಯೋಗ.

ಮರವು ಗಟ್ಟಿಯಾಗಿಯೂ, ಸುವಾಸನೆಯಾಗಿಯೂ ಇರುವುದರಿಂದ ಪೆಟ್ಟಿಗೆ, ಬೆತ್ತ, ಪೇನದ ಹಿಡಿ, ಬೀಸಣಿಗೆ ಮೊದಲಾದ ಕೆಲಸಗಳಿಗೆ ಬರುತ್ತದೆ. ಇದರಲ್ಲಿ ಸುವಾ

ಸನೆಯಾದ ಎಣ್ಣೆಯು ಇರುವುದರಿಂದ ಹುಳು ಬೀಳುವುದಿಲ್ಲ. ಇದರ ಹುಡಿಯಿಂದ ಮೈ ಬತ್ತನ್ನು ಮಾಡಿ ಕುಡಿದರೆ ತಂಪೆಂದು ಹೇಳುತ್ತಾರೆ. ಜ್ವರ, ಪಿತ್ತ ಮುಂತಾದ ಅನೇಕ ರೋಗಗಳಲ್ಲಿ ಇದನ್ನು ಉಪಯೋಗಿಸುವರು. ಗಂಧದ ಎಣ್ಣೆಯನ್ನು ಇನ್ನೂ ಅನೇಕ ವಿಧವಾಗಿ ಉಪಯೋಗಿಸುತ್ತಾರೆ. ಕೆಲವರು ಅಡಕೆಗೆ ಬದುಲಾಗಿ ಇದರ ತೊಗಟೆಯನ್ನು ಉಪಯೋಗಿಸುವರು. ಚಕ್ಕೆಯಿಂದ ಗಂಧವನ್ನು ತೆಗೆದು ಮೈಗೆ ತೊಡೆದುಕೊಂಡರೆ ದೇಹಕ್ಕೆ ತಂಪಾಗುವುದು.

ಗಂಧದ ಎಣ್ಣೆಯನ್ನು ತೆಗೆಯುವ ಕ್ರಮ.

ಎರಡೂವರೆ ಅಡಿಗಳ ಆಳ, ಅರ್ಧವರೆ ಅಡಿಗಳ ಸುತ್ತಳತೆಯುಳ್ಳ ಗಡಿಗೆಯನ್ನು ತೆಗೆದುಕೊಂಡು, ಎರಡು ವೀಸ ತೂಗುವಷ್ಟು ಉತ್ತಮವಾದ ಗಂಧದ ಮರವನ್ನು ತುಂಡುತುಂಡಾಗಿ ಕತ್ತರಿಸಿ, ಗಡಿಗೆಯಲ್ಲಿ ತುಂಬಿ, ತುಂಡುಗಳನ್ನು ಮುಚ್ಚುವಷ್ಟು ನೀರನ್ನು ಸುರಿದು, ಜೇಡಿಮಣ್ಣಿನಿಂದ ಗಡಿಗೆಯ ಬಾಯನ್ನು ಮುಚ್ಚಬೇಕು. ಐದೂವರೆ ಅಡಿಗಳ ಉದ್ದವಿರುವ ತಾಮ್ರದ ಕೊಳವೆಯನ್ನು ಕೊನೆಗಳಲ್ಲಿ ಬಗ್ಗಿಸಿ, ಒಂದು ಕೊನೆಯನ್ನು ಜೇಡಿಮಣ್ಣಿನ ಮುಚ್ಚಳದೊಳಗೂ, ಮತ್ತೊಂದನ್ನು ಒಂದು ತಾಮ್ರದ ಪಾತ್ರೆಯೊಳಗೂ ಬಿಡಬೇಕು. ನೀರು ತುಂಬಿದ ಒಂದು ಗಡಿಗೆಯಲ್ಲಿ ಈ ತಾಮ್ರದ ಪಾತ್ರೆಯನ್ನಿಡತಕ್ಕದ್ದು. ಗಂಧದ ತುಂಡುಗಳಿರುವ ಪಾತ್ರೆಯ ಕೆಳಗೆ ಉರಿಯನ್ನು ಹಾಕಿ, ಹತ್ತು ದಿವಸಗಳವರೆಗೂ ಉರಿಸುತ್ತಿರಬೇಕು. ನೀರು ಕಡಮೆಯಾದಹಾಗೆಲ್ಲ ಹೆಚ್ಚು ನೀರನ್ನು ಸೇರಿಸುತ್ತಿರತಕ್ಕದ್ದು. ಗಂಧದ ಎಣ್ಣೆಯು ಆವಿರೂಪವಾಗಿ ಹೊರಟು ತಾಮ್ರದ ಕೊಳವೆಯ ಮೂಲಕ ಕೆಳಗಿರುವ ಪಾತ್ರೆಯನ್ನು ಸೇರಿ, ಅಲ್ಲಿಯ ತನುವಿನಿಂದ ತನ್ನ ನಿಜರೂಪವನ್ನು ಹೊಂದುವುದು. ಹೀಗೆ ತಯಾರಾದ ಎಣ್ಣೆಯು ಸುವಾಸನೆಯಾಗಿಯೂ, ಸ್ವಲ್ಪ ಹಳದಿಯ ಛಾಯೆಯುಳ್ಳದ್ದಾಗಿಯೂ ಇರುವುದು.

ಎಲ್. ಸುಬ್ಬರಾವ್.

ಲೆಕ್ಕ.

(ಹಿಂದಿನ ಸಂಚಿಕೆಯಲ್ಲಿನ ಲೆಕ್ಕಗಳನ್ನು ಮಾಡುವ ವಿಧಾನ.)

(1) 408 ಅಡಿಯು ಒಂದು ಘನದ ಅಳತೆಯಾದುದರಿಂದ ಕರ್ಣರೇಖೆಯ ಮತ್ತು

ಉಳಿದ ಭುಜಗಳ ಅಳತೆಗಳನ್ನು ಸೇರಿಸಿ ಬಂದದ್ದನ್ನು ಅವೆರಡಕ್ಕಿರುವ ವ್ಯತ್ಯಾಸದಿಂದ ಗುಣಿಸಿದರೆ 408 ರ ವರ್ಗಕ್ಕೆ ಸರಿಹೋಗುವುದು. ಆದುದರಿಂದ 408 ರ ವರ್ಗ ಅಂದರೆ 166464 ನ್ನು 578 ರಿಂದ ಭಾಗಿಸಿದರೆ ಕರ್ಣರೇಖೆಯ ಅಳತೆಗೂ ಮತ್ತು ಉಳಿದ ಭುಜದ ಅಳತೆಗೂ ಇರತಕ್ಕ ವ್ಯತ್ಯಾಸವು ಗೊತ್ತಾಗುವುದು.

ಆ ವ್ಯತ್ಯಾಸವು $\frac{166464}{578} = 288.$

ಕರ್ಣರೇಖೆಯ ಮತ್ತು ಉಳಿದ ಭುಜದ ಅಳತೆಗಳ ಮೊತ್ತ 578 ಅಡಿ

ವ್ಯತ್ಯಾಸ 288 ಅಡಿ.

ಇವೆರಡನ್ನು ಕೂಡಿಸಿ ಬರುವ $578 + 288 = 866$ ನ್ನು 2 ರಿಂದ ಭಾಗಿಸಿದರೆ 433 ಅಡಿ ಬರುವುದು. ಇದೇ ಕರ್ಣರೇಖೆಯ ಅಳತೆ. ಉಳಿದ ಭುಜದ ಅಳತೆಯು

$$578 - 433 = 145 \text{ ಅಡಿ.}$$

(2) ಸಮತ್ರಿಭುಜತ್ರಿಕೋಣವಾಗಿರುವುದರಿಂದ ಒಂದು ಭುಜವನ್ನು ಸಮವಾಗಿ ಭಾಗಿಸಿ ಹಾಗೆ ಭಾಗಿಸತಕ್ಕ ಬಿಂದುವನ್ನು ಎದುರಾಗಿರುವ ಕೋಣಕ್ಕೆ ಸೇರಿಸುವ ರೇಖೆಯು ತ್ರಿಕೋಣದ ಎತ್ತರವಾಗಿರುವುದೆಂದು ರೇಖಾಗಣಿತದಿಂದ ಸ್ಪಷ್ಟವಾಗುವುದು. ಎತ್ತರದ ರೇಖೆಯು ತ್ರಿಕೋಣವನ್ನು ಎರಡು ಸಮಕೋಣತ್ರಿಕೋಣಗಳನ್ನಾಗಿ ಭಾಗಿಸುವುದು. ಪ್ರತಿಯೊಂದರಲ್ಲಿಯೂ ಕರ್ಣರೇಖೆಯ ಅಳತೆಯು 1 ಅಡಿ. ಒಂದು ಭುಜದ್ದು $\frac{1}{2}$ ಅಡಿ. ಉಳಿದ ಭುಜವೇ ತ್ರಿಕೋಣದ ಎತ್ತರ.

ಇದುದರಿಂದ ಎತ್ತರವನ್ನು ತಿಳಿಯಬೇಕಾದರೆ $(1 + \frac{1}{2})$ ನ್ನು $(1 - \frac{1}{2})$ ರಿಂದ ಗುಣಿಸಿ ಬರುವುದರ ವರ್ಗಮೂಲವನ್ನು ಕಂಡು ಹಿಡಿಯಬೇಕು.

$$\frac{1}{2}) \times (1 - \frac{1}{2}) = \frac{3}{2} \times \frac{1}{2} = \frac{3}{4}$$

$$\frac{3}{4} \text{ ರ ವರ್ಗಮೂಲ} = \frac{3 \text{ ರ ವರ್ಗಮೂಲ}}{4 \text{ ರ ವರ್ಗಮೂಲ}} = \frac{3\text{ರ ವರ್ಗಮೂಲ}}{2}$$

= 3 ರ ವರ್ಗಮೂಲದ ಅರ್ಧ.

3 ರ ವರ್ಗಮೂಲವನ್ನು ಸರಿಯಾಗಿ ಗೊತ್ತುಮಾಡುವದಕ್ಕಾಗುವುದಿಲ್ಲ. ಮೂರು ದಶಮಾಂಶಸ್ಥಾನಗಳವರೆಗೆ ಅದರ ವರ್ಗಮೂಲವು 1·732. ಆದುದರಿಂದ ಎತ್ತರವು ಮೂರು ದಶಮಾಂಶಸ್ಥಾನಗಳ ಮಟ್ಟಿಗೆ

$$\frac{\cdot 732}{2} = \cdot 866 \text{ ಅಡಿ.}$$

(3) ಏಣಿಯನ್ನು ಗೋಡೆಗೆ ಸಮನಾಗಿ ನಿಲ್ಲಿಸಲಾಗುವುದರಿಂದ ಅದರ ಮೇಲು ಭಾಗವು 25 ಅಡಿಯು ಎತ್ತರವಲ್ಲಿದೆ. ಒಂದು ಅಡಿ ಕೆಳಗೆ ಬಂದರೆ 24 ಅಡಿಯು ಎತ್ತರದಲ್ಲಿರುತ್ತೆ. 24 ಅಡಿಯೆ ಒಂದು ಭುಜದ ಅಳತೆ ಯಾಗುತ್ತೆ. ನೆಲದಮೇಲೆ ಎಷ್ಟು ದೂರವಿಳೆದೆನ್ನೊ ಅದು ಮತ್ತೊಂದು ಭುಜದ್ದು. ಏಣಿಯೆ ಆ ಸಮಕೋಣತ್ರಿಕೋಣದ ಕರ್ಣರೇಖೆಯಾಗುವುದು. ಕರ್ಣರೇಖೆಯು ಮತ್ತು ಒಂದು ಭುಜದ ಅಳತೆಯು ತಿಳಿದಿರುವುದರಿಂದ ಉಳಿದ ಭುಜದ ಅಳತೆಯು $(25 + 24) \times (25 - 24) = 49$ ರ ವರ್ಗಮೂಲ $= 7$ ಅಡಿ.

ಅಂದರೆ ಏಣಿಯ ಕೆಳಭಾಗವನ್ನು 7 ಅಡಿಗಳ ದೂರ ನೆಹದಮೇಲೆ ಎಳೆದರೆ ಅದರ ಮೇಲುಭಾಗವು ಗೋಡೆಯಮೇಲೆ 1 ಅಡಿ ಕೆಳಕ್ಕೆ ಬರುವುದು.

(ಮೊಳ್ಳಾಕಲು ಮುರು ಗೌ॥ಕ॥ ಸ್ಕೂಲು ವಿದ್ಯಾರ್ಥಿಗಳು ಸಿ, ವಿ, ಭೀಮಾಚಾರ್, ಎಂ, ರಾಘವೇಂದ್ರರಾವ್ ಎಂಬುವರು ೧ ೨ ನೇ ಲೆಕ್ಕಗಳನ್ನು ಸರಿಯಾಗಿಮಾಡಿ ಕಳುಹಿಸಿದಾರೆ.)

ಮಾಡುವುದಕ್ಕೆ ಲೆಕ್ಕಗಳು.

(1) 40 ಅಡಿಯುದ್ದವಿರುವ ಏಣಿಯೊಂದನ್ನು 24 ಅಡಿ ಎತ್ತರವಿರುವ ಕಿಟಕಿಗೆ ಸರಿಯಾಗಿ ಇಟ್ಟಿದೆ. ಅದನ್ನು ಹಾಗೆಯೆ ಅದೇ ಬೀದಿಯ ಎದುರ ಸಾಲಿನವರೆಗೆ ತಿರುಗಿಸಿದರೆ 32 ಅಡಿ ಎತ್ತರದಲ್ಲಿರುವ ಕಿಟಿಗೆಯು ಸಿಕ್ಕುತ್ತದೆ. ಆ ಬೀದಿಯ ಅಗಲವೆಷ್ಟು?

(2) ಒಂದು ತ್ರಿಕೋಣದ ತಳರೇಖೆಯು 56 ಅಡಿಯುದ್ದವಿರುವುದು; ಎತ್ತರವು 15 ಅಡಿ. ಒಂದು ಭುಜದ ಅಳತೆಯು 25 ಅಡಿ. ಉಳಿದ ಭುಜದ ಅಳತೆಯೆಷ್ಟು?

(3) ಒಂದು ತೆಂಗಿನಮರವು ಗಾಳಿಯಿಂದ ಮಧ್ಯದಲ್ಲಿ ಮುರದು ಬಿತ್ತು. ನುರದ ಮೇಲು ಭಾಗವು ಬುಡದಿಂದ 15 ಅಡಿ ದೂರದಲ್ಲಿ ನೆಲಕ್ಕೆ ತಗಲಿತ್ತು. ಮುರದುಬಿದ್ದ ಭಾಗವು 39 ಅಡಿಯಾದರೆ ಮರವು ಎಷ್ಟೆತ್ತರವಾಗಿತ್ತು?

(4) ಒಂದು ಹೊಲವು 196 ಅಡಿಯುದ್ದವಾಗಿಯೂ 147 ಅಡಿ ಅಗಲವಾಗಿಯೂ ಇರುವುದು. ಸುತ್ತಲೂ ಇರುವ ಬೇಲಿಯ ಮಗ್ಗಲಲ್ಲಿ ಕಾಲುದಾರಿ ಇರುವುದು. ಹೊಲದ ಒಂದು ಕೊನೆಯಿಂದ ಎದುರುಕೊನೆಗೆ ಹೋಗಬೇಕಾದರೆ ಕಾಲುದಾರಿಯನ್ನು ಬಿಟ್ಟು ನೇರವಾಗಿ ಹೋಗುವುದರಿಂದ ಎಷ್ಟುದೂರ ಕೂಡಿಬರುವುದು?

M. H.

ಸಮಾಧಾನೋಪದೇಶ.

ರಾಗ ॥ ಜಂಗಲ್ ॥ ಆದಿತಾಳ ॥

(ಅರಳಿದ ಮಲ್ಲಿಗೆ ಎಂಬಂತೆ ಹಾಡುವುದು)

ನಿನೀಜನಕರಿಗಭಿವಂದಿಸುವುದು ॥ ಮನದೊಳು ಹರುಷದಲಿ ॥
ನುಡಿದೆ ಗುರುಹಿರಿಯರ ಸಂಭಾವಿಸಿ ॥ ನೆನವುದು ವಾಣಿಯನು ॥ಪ
ರವಿನಚಿತ್ತವನರಿಯುತ ನಡೆವುದು ॥ ಪರಿಪರಿವಿದ್ಯೆಗಳಂ ॥
ವಿಚಾರಿಸಿ ಸಂಭಾವನೆಗೈಯ್ವುದು ॥ ಸರಸೋಕ್ತಿಗಳಿಂದ ॥ ೧ ॥
ರುದೈವವು ವಿದ್ಯಾರ್ಥಿಗೆ ನಿಜಗುರು ॥ ಪರವಶಿವಂಕರನು ॥
ರುಷೋ ಬ್ರಹ್ಮಾಚ್ಯುತಹರಭಾರತಿ ॥ ಗುರುವೇ ನಿಜಜನಕಂ ॥ ೨ ।
ವ್ಯೆಯೆ ಲೋಕಾಧಾರವು ಹಿತಕರ ॥ ವಿದ್ಯೆಯೆ ಬಹುಕರಣಂ ॥
ವ್ಯೆಯೆ ಗೌರವಕಾರಣಮದರಿಂ ॥ ವಿದ್ಯೆಯನೋದುವುದೈ ॥ ೩ ॥
ವ್ಯೆಯೆ ಬಂಧುವು ವಿದ್ಯೆಯೆ ಭೂಷಣ ವಿದ್ಯೆಯೆ ಸತಿಸುತರು ॥
ವ್ಯೆಯೆ ಮೂಲಧನಾರ್ಜನೆಯದರಿಂ ॥ ವಿದ್ಯೆಯ ನೋದುವುದೈ ॥ ೪ ॥
ಧ್ಯೇನುಪರೀಶನ ಧ್ಯಾನವಗೈಯ್ಯುತ ಮಾನಸದೊಳು ಸತತಂ ॥
ಜ್ಞಾನವಸುವಿಚಾರವೆ ಸಂಗ್ರಹಿಪುದು॥ ಮಾನವಪುಂಗವನೀಂ ॥ ೫ ॥

ಎ. ಬೇಟೆರಾಯಪರೀಕ್ಷಿತ,
ಅ॥ಮ್ಯಾಸ್ಟರ್, ಕುಂಸಿಗಲ್.

೧೨ನೆಯ ಪೇಶ್ವೆಯನಾದ

ಬಾಳಾಜಿ ವಿಶ್ವನಾಥಭಟ್ಟ. I.

ಕ.....ದಲ್ಲಿ ಶ್ರೀವರ್ಧನವೆಂಬ * ಊರು ಇರುತ್ತದೆ. ಅದು ೧೬, ೧೭ನೇ ಶತಮಾನಗಳಲ್ಲಿ ನಿಜಾಮಶಾಹಿ—ಅದಿಲ್‌ಶಾಹಿ ರಾಜ್ಯಗಳಿಗೆ ಸೇರಿತ್ತು. ಮುಂದೆ

* ಇದು ರತ್ನಾಗಿರಿ ಜಿಲ್ಲೆಯಲ್ಲಿ ಬಾನವತೋಟದ ಒತ್ತಿನಮೇಲೆ ಇರುತ್ತದೆ.

೧೪ನೆಯ ಶತಕದ ಆರಂಭದಲ್ಲಿ ಹಬಸಿಯರಂಕೆಯಲ್ಲಿ ಬಂತು. ಮತ್ತು ಈಗಾದರೂ ಜಂಜೀರಿಯ ಹಬಸಿಯ ಜಾತಿಯ ನವಾಬನ ಕಯ್ಯಿಳಗಿರುತ್ತದೆ.

ಈಗ ೨೦೦ ವರ್ಷಗಳ ಹಿಂದೆ ಇದೇ ಊರ ದೇಶಮುಖಿಯ ಅಧಿಕಾರವನ್ನು ವಿಶ್ವನಾಥಭಟ್ಟನೆಂಬ ಕೊಂಕಣಸ್ಥ ಬ್ರಾಹ್ಮಣನೊಬ್ಬನು ನೋಡುತ್ತಿದ್ದನು. ಇವನಿಗೆ ಬಾಳಾಜಿ, † ಜಾನೋಜಿಯೆಂಬಿಬ್ಬರು ಗಂಡುಮಕ್ಕಳಿದ್ದರು. ಮೇಲೆ ಹೇಳಿದಂತೆ ಹಬಸಿಯರು ಈವೂರನ್ನು ಹಿಡಿದುಕೊಂಡಾಗ ಅವರು ಜಾನೋಜಿಯನ್ನು ಸೆರೆ ಹಿಡಿದು, ಗೋಣಿತಟ್ಟಿನ ಚೀಲದಲ್ಲಿ ಹಾಕಿ, ಸಮುದ್ರದಲ್ಲಿ ಮುಳುಗಿಸಿಕೊಂದು ಬಿಟ್ಟರು. ಬಾಳಾಜಿಯು ಅವರಿಂದ ತಪ್ಪಿಸಿಕೊಂಡು ವೇಳವೆಂಬೂರಿಗೆ ¶ ಓಡಿ ಹೋದನು. ಬಾಳಾಜಿ ಮಹಾದೇವಭಾನು ಎಂಬವನು ಇವನ ಸ್ನೇಹಿತನಾಗಿದ್ದನು. ‖ ವೇಳಕ್ಕೆ ಹಬಸಿಯರು ದಂಡೆತ್ತಿ ಬರುವರೆಂಬ ಸುದ್ದಿಯಿದ್ದುದರಿಂದ ಬಾಳಾಜಿವಿಶ್ವನಾಥನೂ ಬಾಳಾಜಿ ಮಹದೇವನೂ ಇವನ ಇಬ್ಬರು ತಮ್ಮಂದಿರೂ ‡ ಕೂಡಿ ಸಾತಾರೆಯರಸನ ದಂಡಿನಲ್ಲಿ ದೊಡ್ಡ ಅಧಿಕಾರಿಯಾದ ಧನಾಜಿಜಾಧವರಾಯನ ಆಶ್ರಯಕ್ಕೆ ಹೋದರು.

---

† ಆಂಗ್ರೆಯನಿಗೂ ಹಬಸಿಯವರಿಗೂ ಯುದ್ಧವಾರಂಭವಾಗಲು ಜಾನೋಜಿಯು ಆಂಗ್ರೇಯನ ಪಕ್ಷ ಹಿಡಿದು ಒಳಸಂಚುಮಾಡದೊಡಗಿ ಹಬಸಿಯರ ದ್ವೇಷಕ್ಕೆ ಪಾತ್ರನಾದನು.

¶ ಇದು ಸಾವಿತ್ರೀನದಿಯ ದಂಡೆಯ (ದಡದ) ಮೇಲಿದೆ.

‖ ಬಾಳಾಜಿ ವಿಶ್ವನಾಥನು ಅಂಜನವೇಲಕ್ಕೆ ಹೋಗಲು ಅಲ್ಲಿಯ ಕಿಲ್ಲೇದಾರನು ಅವನನ್ನು ಸೆರೆಯಲ್ಲಿಟ್ಟನು. ಆಗ ಬಾಳಾಜಿಮಹಾದೇವಭಾನುವು ವಿಶ್ವಪ್ರಯತ್ನ ಮಾಡಿ, ಕಿಲ್ಲೇದಾರನಿಗೆ ಲಂಚ ಕೊಟ್ಟು ಅವನನ್ನು ಬಿಡಿಸಿದನು. ಆಗ ಬಾಳಾಜಿ ವಿಶ್ವನಾಥನು ತನಗೆ ದೊರೆದ ಒಂದು ರೊಟ್ಟಿಯಲ್ಲಿ ಅರ್ಧ ರೊಟ್ಟಿಯನ್ನು ಅವನಿಗೆ ಕೊಡುವೆನೆಂದು ಮಾತು ಕೊಟ್ಟನು.

‡ ರಾಮಾಜಿಮಹದೇವಭಾನು, ಹರಿಮಹದೇವಭಾನು, ಇವರಿಬ್ಬರು ಬಾಳಾಜಿ ವಸುದೇವಭಾನುವಿನ ತಮ್ಮಂದಿರು.

ಈ ಕಾಲಕ್ಕೆ ಸಾತಾರೆಯಲ್ಲಿ, ರಾಜಾರಾಮ ಮಹಾರಾಜನ ಹೆಂಡತಿಯಾ
ತಾರಾಬಾಯಿಯು ಆಳುತ್ತಿದ್ದಳು. ಅವನಂಗಜೀಬನು ಮೃತನಾದುದರಿಂದ ಬಿಡುಗ
ಮಾಡಲ್ಪಟ್ಟ ಶಾಹು ಮಹಾರಾಜನು ತನ್ನ ರಾಜ್ಯವನ್ನು ತೆಗೆದುಕೊಳ್ಳಲಿಕ್ಕೆ ತಿರು
ಬರುತ್ತಾನೆಂಬ ಸುದ್ದಿಯನ್ನು ಕೇಳಿ, ತನ್ನ ಗಂಡನಾದ ರಾಜಾರಾಮನು ಶ್ರವ
ಪಟ್ಟ ಮೊಗಲರಿಂದ ಕಾಪಾಡಿದ ರಾಜ್ಯವನ್ನು ತನ್ನ ಮಗನೇ ಆಳಬೇಕೆಂಬುದ್ದೇ
ದಿಂದ ಆ ವೀರನನ್ನಿತೆಯು ಎಲ್ಲ ಪ್ರಧಾನರನ್ನು ಕರೆಸಿ, ಅವರಿಂದ ಕ್ರಿಯೆಯನ್ನು ತೆಗೆದ
ಕೊಂಡು ಧನಾಜಿಜಾಧವರಾಯನನ್ನೂ ಖಂಡೋಜಿ ಬಲ್ಲಾಳನನ್ನೂ ದೊಡ್ಡ ದಂ
ನೊಡನೆ ಶಾಹುರಾಜನಿಗಿದುರಾಗಲಿಕ್ಕೆ ಬಾನಪೇಶಕ್ಕೆ ಕಳುಹಿಂದಳು. ಧನಾಜಿಯೊಡ
ಹೋಗಿದ್ದ ಬಾಳಾಜಿ ವಿಶ್ವನಾಥನ ವಿದ್ಯಮಾನ ಒಳಸಂಚು ನಡಿಸಿ, ಶಾಹುಮಹಾ
ರಾಜನು ಧನಾಜಿಯನ್ನು ಒಡಕೊಂಡನು. ಅವರಿಬ್ಬರು ಕೂಡಿ ಸಾತಾರೆಯ ಹೌದಿಯ
ಹಿಡಿದುದರಿಂದ ತಾರಾಬಾಯಿಯು ತನ್ನ ನಂಬಿಕೆಯ ಅಧಿಕಾರಿಗಳಾದ ರಾಮಚಂದ್ರ
ಪಂತ ಮುಂತಾದವರೊಡನೆ ಕೊಲ್ಹಾಪುರಕ್ಕೆ ಹೋದಳು. ಇತ್ತ ಶಾಹು ಮಹಾರಾಜನ
ಸಾತಾರೆಯನ್ನು ತೆಗೆದುಕೊಂಡು ಅಲ್ಲಿ ಪಟ್ಟಾಭಿಷಿಕ್ತನಾದನು. (ಮಾರ್ಚ್ ೧೭೦೭)

ಧನಾಜಿಜಾಧವನು ಮೊದಲಿನಂತೇ ಮುಖ್ಯಸೇನಾಪತಿಯಾಗಿ ತಾರಾಬಾಯಿ
ಯ ಪಕ್ಷದ ದಂಡಿಗಿಮರಾಗಲಿಕ್ಕೆ ಕೊಲ್ಹಾಪುರಕ್ಕೆ ಹೋದನು. ಅವನ ಕೈಕೆಳಗಿನ
ರಾಯಸವನಾದ ಬಾಳಾಜಿಯು ಅವನೊಲುಮೆಯನ್ನೂ ಶಾಹುಮಹಾರಾಜನೊಲ
ಮೆಯನ್ನೂ ಬಹು ಶ್ರಮದಿಂದ ಸಂಪಾದಿಸಿದನು. ಇವನ್ನು ನೋಡಿ ಹೊಟ್ಟೆಕಿಚ್ಚಿ
ನಿಂದಲೋ ಮತ್ತೆ ಯಾವ ಕಾರಣದಿಂದಲೋ ಧನಾಜಿಯ ಮಗನಾದ ಚಂದ್ರಸೇನನ
ಬಾಳಾಜಿಯ ದ್ವೇಷಮಾಡದೊಡಗಿದನು. ಇಷ್ಟರಲ್ಲಿ ಧನಾಜಿಯು ಕೊಲ್ಹಾಪು
ದಿಂದ ತಿರುಗಿ ಬರುವಾಗ ದಾರಿಯಲ್ಲಿ ಸತ್ತುಗರಿಂದ ಅವನ ತರುವಾಯ ಅವನ ಮಗ
ನಾದ ಚಂದ್ರಸೇನನು ಮುಖ್ಯ ಸೇನಾನಾಯಕನಾದನು. (೧೭೦೯).

ಮತ್ತಮರುಷ ಶಾಹು ಮಹಾರಾಜನು ಮೊಗಲಾಯಿಯಲ್ಲಿ ಚೌಥಾಯಿಸರದೇ
ಮುಖಿಯ ಹಕ್ಕನ್ನು ಸ್ಥಾಪಿಸುವುದಕ್ಕೆ ಚಂದ್ರಸೇನಜಾಧವನನ್ನೂ ಅಲ್ಲಿ ತನಗೆ ಬರತಕ್ಕ
ಋಣವನ್ನೆತ್ತಲಿಕ್ಕೆ ಅವನ ಹಗೆಯಾದ ಬಾಳಾಜಿ ವಿಶ್ವನಾಥನನ್ನೂ ಕಳುಹಿದನು. ಒಂದ
ನೆನೆ ಅವರಿಬ್ಬರೂ ಒಂದೇ ಎಜೆಯಲ್ಲುಳಿದಾಗ ಬಾಳಾಜಿಯಕಡೆಯವನಾದ ಪೀರಾಜಿ
ಎಂಬವನೊಬ್ಬ ಸಿಲ್ಲೇದಾರನು ಒಂದು ಚಿಗರೆ (ಜಿಂಕೆ) ಯನ್ನು ಬೆನ್ನಟ್ಟಿ ಹೋದನು.

ಅದು ಕರ್ಮಧರ್ಮ ಸಂಯೋಗದಿಂದ ಚಂದ್ರಸೇನನ ರಾಯಸದವನಾದ ವ್ಯಾಸರಾಯ ನೆಂಬ * ಗ್ರಹಸ್ಥನ ಡೇರೆಯನ್ನು ಹೊಕ್ಕಿತು. ಅವನು ಬ್ರಾಹ್ಮಣನಾದುದರಿಂದ ತನ್ನ ಬೆನ್ನುಬಿದ್ದ ಆ ಚಿಗರೆಯನ್ನು ಪೀರಾಜಿಗೊಪ್ಪಿಸಲೊಡಂಬಡಲಿಲ್ಲ. ಆದರೆ ಪೀರಾಜಿಯು ಹಟಹಿಡಿದು ವ್ಯಾಸರಾಯನ ಹಿಂದೆ ಅಡಗಿಕೊಂಡಿದ್ದ ಚಿಗರೆಯನ್ನು ತನ್ನ ಬರ್ಜಿಯಿಂದ ಇರಿದನು. ಆಗ ಆ ಬರ್ಜಿಯು ತಪ್ಪಿ ವ್ಯಾಸರಾಯನಿಗೆ ತಾಕಿತು. ಅದನ್ನು ನೋಡಿ ಪೀರಾಜಿಯು ಹೆದರಿ ಓಡಿಹೋಗಿ ಬಾಳಾಜಿಯ ಮೊರೆಬಿದ್ದನು.

ಇತ್ತ ಚಂದ್ರಸೇನನು ಈ ಸುದ್ದಿಯನ್ನು ಕೇಳಿ ಪೀರಾಜಿಯನ್ನು ದಂಡಿಸುವ ಉದ್ದೇಶದಿಂದ ಅವನನ್ನು ತನಗೊಪ್ಪಿಸಲಿಕ್ಕೆ ಬಾಳಾಜಿಗೆ ಹೇಳಿಕಳುಹಿದನು. ಅದಕ್ಕೆ ಬಾಳಾಜಿಯು ಒಪ್ಪದ್ದರಿಂದ ಚಂದ್ರಸೇನನು ಅವನನ್ನೂ ಪೀರಾಜಿಯನ್ನೂ ಹಿಡಿದು ತರಲಿಕ್ಕೆ ಪಡೆಗಾರರಿಗಪ್ಪಣೆಯಿತ್ತನು. ಈ ಸುದ್ದಿಯು ಹತ್ತಿದಕೂಡಲೆ ಬಾಳಾಜಿಯು ತನ್ನ ಜನರೊಡನೆ ಸಾಸ್ವಾಡಕ್ಕೆ ಓಡಿಹೋದನು. ಅಲ್ಲಿಯ ಮುಖ್ಯಸ್ಥನು ಅವನನ್ನು ಒಳಗೆ ಬಿಡದ್ದರಿಂದ, ತನ್ನಿಬ್ಬರು (ಬಾಜೀರಾವ್, ಚಿಮಣಾಜಿ) ಮಕ್ಕಳೊಡನೆ ಪಾಂಡವೆಗಡಕ್ಕೆ ಓಡಿದನು. ಅಲ್ಲಿಯಧಿಕಾರಿಯಾದರೂ ಅವನನ್ನು ಒಳಗೆ ಬಿಡಲಿಲ್ಲ. ಆದುದರಿಂದ ಅವನ ಸಂಗಡಿಗರಾದ ಪಿಲಾಜಿಜಾಧವ, ಧೂಮಲರೆಂಬಿಬ್ಬರು ಸಿಲ್ಲೇದಾರರು ಕೆಲವು ದಂಡಾಳುಗಳನ್ನು ಕೂಡಿಸಿದರು. ಅಷ್ಟರಲ್ಲಿ ಆ ಕೋಟೆಯ ಮುಖ್ಯಸ್ಥನಿಗೆ ಬಾಳಾಜಿಯನ್ನು ಕಾಪಾಡಬೇಕೆಂದು ಶಾಹುಮಹಾರಾಜನ ಅಪ್ಪಣೆಯಾದ್ದರಿಂದ ಬಾಳಾಜಿಯು ಸುರಕ್ಷಿತವಾಗಿ ಅಲ್ಲಿ ನಿಂತುಕೊಂಡನು.

ಅತ್ತ ಚಂದ್ರಸೇನಜಾಧವನು ಪೀರಾಜಿಯನ್ನೂ ಅವನಪಕ್ಷ ಹಿಡಿದ ಬಾಳಾಜಿಯನ್ನೂ ದಂಡಿಸಬೇಕೆಂದು ಹಟಹಿಡಿದುದರಿಂದಲೂ ಶಾಹುಮಹಾರಾಜನು ಹಾಗೆ ಮಾಡಲಿಕ್ಕೊಡಂಬಡದುದರಿಂದಲೂ ಅವರೊಳಗೆ ವಿರೋಧಹುಟ್ಟಿತು. ಆದಕಾರಣ ಮಹಾರಾಜನು ಅಹಮ್ಮದನಗರದ ನೆರೆಯಲ್ಲಿದ್ದ ತನ್ನ ಸರಲಷ್ಕರನಾದ ನಿಂಬಾಳಕರ ಹುಯಪತರಾಯನನ್ನು ಚಂದ್ರಸೇನರಾಯನಿಗಿದುರಾಗಲಿಕ್ಕೆ ಕಳುಹಿದನು. ಅವರಿಬ್ಬರಿಗೂ ದೇವಪೂರಲ್ಲಿ ಕದನವಾಯಿತು (೧೭೧೧). ಇವರಲ್ಲಿ ಚಂದ್ರಸೇನನು ಸೋಲ್ತುದರಿಂದ ಅವನೂ ಘಾತಗೆ ಸರ್ಜಿರಾಯನೂ ‡ ಕೊಲ್ಹಾಪುರದಲ್ಲಿದ್ದ ತಾರಾಬಾಯಿಯ

---

* ಇವನು ಹೆಸರಿನಿಂದ ಕನ್ನಡಿಗನಿದ್ದಂತೆ ತೋರುತ್ತದೆ.

‡ ಇವನೇ ತಾಗಲ್ಮನೆತನದ ಮೂಲಪುರುಷನು.

ಮಗನಾದ ಸಂಭಾಜಿಮಹಾರಾಜನೆಡೆಗೆ ಹೋದರು. ಮುಂದೆ ಚಂದ್ರಸೇನನು ಹೈದರಾಬಾದಿನ ನಿಜಾಮನಾದ ಚಿಕ್ಕಕುಲಿಜ್ಖಾನನ (ನಿಜಾಮುಲ್ಮುಲ್ಕ್) ಆಶ್ರಯಕ್ಕೆ ಹೋಗಿ, ಅಲ್ಲಿ ಚಿಟ್ಟತೋದೆ ಬಾಲಕಿಯೆಂಬೂರುಗಳನ್ನು ಉಂಬಳಿಪಡೆದು ಅಲ್ಲೇ ನಿಂತುಕೊಂಡನು (೧೭೧೯) *

ಮುಂದೆ ಚಂದ್ರಸೇನನು ನಿಜಾಮುಲ್ಮುಲ್ಕನ ದಂಡಿನೊಡನೆ ಪೂನಪ್ರಾಂತವನ್ನೊಳನುಗ್ಗಿದನು. ಅವನಿಗಿದುರಾಗಲಿಕ್ಕೆ ಹೈಪತರಾಯನೂ ಬಾಳಾಜಿಯೂ ಬಂದರು. ಎರಡು ಪಕ್ಷದವರಿಗೂ ಪ್ರತಂದವನ ಹತ್ತಿರವಿದ್ದ ನಾರಾಯಣಪೆಂಬಲ್ಲಿ ಕದನವಾಯಿತು. ಅವರಲ್ಲಿ ಯಾರಿಗೆ ಜಯವಾಯಿತೆಂಬದು ತಿಳಿಯುವದಿಲ್ಲ. ಆದರೂ ಶಾಹುಮಹಾರಾಜನ ಪಕ್ಷದವರು ಹಿಂಜರೆದು ಸಾತ್ವಿಗೆ ಹೋದುದರಿಂದ ಮೊಗಲರ ಪಕ್ಷದವರು ಗೆದ್ದಂತೆ ತೋರುತ್ತದೆ. ಬಳಿಕ ಕೆಲವು ದಿವಸದಲ್ಲೇ ಮರಾಟರು ನಿಜಾಮುಲ್ಮುಲ್ಕನೊಡನೆ ಒಪ್ಪಂದ ಮಾಡಿಕೊಂಡುದರಿಂದ ಚಂದ್ರಸೇನನ ಉದ್ದೇಶವು ಪೂರ್ಣವಾಗಲಿಲ್ಲ. ಆದರೂ ಅವನು ಮುಂದೆ ಸಾತಾರೆಯ ಕಡೆಗೆ ಹಣಿಕಿಹಾಕಲಿಲ್ಲ.

ಈ ಕಾಲಕ್ಕೆ ಗುತ್ತಿಯು ಮುರಾರಿರಾಯನ ತಮ್ಮನಾದ ಸಿದ್ದೋಜಿ ಘೋರ್ಪಡೆ, ಸವಣೂರನವಾಬ, ದಾವಾಜಿಥೋರಾತ, ಕೃಷ್ಣರಾವ ಕಟಾವಕರ ಮುಂತಾದವರು ಕೊಲ್ಹಾಪುರದವರ ಬೆಂಬಲದಿಂದ ಶಾಹುಮಹಾರಾಜನ ರಾಜ್ಯದಲ್ಲಿ ಹಾವಳಿ ಮಾಡಹತ್ತಿದರು. ಇವರೊಳಗೆ ದಾವಾಜಿಥೋರಾತನು ಸಾಟಸದ ನೆರೆಯಲ್ಲಿದ್ದ ಹಿಂಗಣಿಗಾವವೆಂಬಲ್ಲಿರುತ್ತಿದ್ದನು. ಆದುದರಿಂದ ಅವನ ಹಾವಳಿಯನ್ನು ತಗ್ಗಿಸುವದು ಅವಶ್ಯವಾಗಿತ್ತು. ಈ ಕೆಲಸವನ್ನು ಬಾಳಾಜಿಯು ಕೈಕೊಂಡು ಅಲ್ಲಿಗೆ ದಂಡೆತ್ತಿ ಹೋದನು. ಆದರೆ ದಾವಾಜಿಯು ಮೋಸಮಾಡಿ, ಅವನನ್ನೂ ಅವನಿಬ್ಬರು ಗಂಡು ಮಕ್ಕಳನ್ನೂ ಪುರಂದರೆ ಅಂಬಾಜಿ ಯೆಂಬವನನ್ನೂ ಹಿಡಿದು ಸೆರೆಯಲ್ಲಿಟ್ಟನು. ಆಗ ಬಲಾಜಿ ಜಾಧವನೆಂಬವನು ದಾವಾಜಿಯು ಕೇಳಿದಷ್ಟು ಹಣವನ್ನು ತಂದುಕೊಟ್ಟು ಬಾಳಾಜಿಯನ್ನೂ ಅವನ ಮಕ್ಕಳನ್ನೂ ಬಿಡಿಸಿಕೊಂಡನು.

ಆರ್. ಹೆಚ್. ದೇಶಪಾಂಡೆ. ಎಂ. ಎ.

---

* ಚಂದ್ರಸೇನನು ನಿಜಾಮನ ಕಡೆಗೆ ಹೋಗುವಾಗ ಸರಲಷ್ಕರನನ್ನು ಸೋಲಿಸಿದ ಹೊರತು ಬೇರೆ ಅರಿವೆಯನ್ನು ಹಾಕಲಿಕ್ಕಿಲ್ಲೆಂತಲೂ ಶಾಹುಮಹಾರಾಜನು ಬಾಳಾಜಿಯನ್ನೊಪ್ಪಿಸಿದ ಹೊರತು ಅವನಿಗೆ ಕಯ್ಯಾಗಿಯಲಿಕ್ಕಿಲ್ಲೆಂತಲೂ ಪ್ರತಿಜ್ಞೆ ಮಾಡಿದುದಲ್ಲದೆ ಅನ್ಯರಂತೆಯೇ ನಡೆದನು. ಮರಾಟಬಖ್ಖರ.

ಮಗನಾದ ಸಂಭಾಜಿಮಹಾರಾಜನಿಡೆಗೆ ಹೋದರು. ಮುಂದೆ ಚಂದ್ರಸೇನನು ಹೈದರಾಬಾದಿನ ನಿಜಾಮನಾದ ಚಿನ್ ಕುಲಿಚ್ ಖಾನನ (ನಿಜಾಮುಲ್ಮುಲ್ಕಿನ) ಆಶ್ರಯಕ್ಕೆ ಹೋಗಿ, ಅಲ್ಲಿ ಚಿಟಕೋದೆ ಬಾಲಕಿಯೆಂಬೂರುಗಳನ್ನು ಉಂಬಳಿಪಡೆದು ಅಲ್ಲೇ ನಿಂತುಕೊಂಡನು (೧೭೧೯) *

ಮುಂದೆ ಚಂದ್ರಸೇನನು ನಿಜಾಮುಲ್ಮುಲ್ಕಿನ ದಂಡಿನೊಡನೆ ಪೂನಪ್ರಾಂತವನ್ನೊಳನುಗ್ಗಿದನು. ಅವನಿಗಿದುರಾಗಲಿಕ್ಕೆ ಹೈಪತರಾಯನೂ ಬಾಳಾಜಿಯೂ ಬಂದರು. ಎರಡು ಪಕ್ಷದವರಿಗೂ ಪುರಂದರವಹತ್ತಿರವಿದ್ದ ನಾರಾಯಣಗಾಂವಬಲ್ಲಿ ಕದನವಾಯಿತು. ಅದರಲ್ಲಿ ಯಾರಿಗೆ ಜಯವಾಯಿತೆಂಬದು ತಿಳಿಯುವದಿಲ್ಲ. ಆದರೂ ಶಾಹುಮಹಾರಾಜನ ಪಕ್ಷದವರು ಹಿಂಜರಿದು ಸಾವ್ನಿಗೆ ಹೋದುದರಿಂದ ಮೊಗಲರ ಪಕ್ಷದವರು ಗೆದ್ದಂತೆ ತೋರುತ್ತದೆ. ಬಳಿಕ ಕೆಲವು ದಿವಸದಲ್ಲೇ ಮರಾಟರು ನಿಜಾಮುಲ್ಮುಲುಖನೊಡನೆ ಒಪ್ಪಂದ ಮಾಡಿಕೊಂಡುದರಿಂದ ಚಂದ್ರಸೇನನ ಉದ್ದೇಶವು ಪೂರ್ಣವಾಗಲಿಲ್ಲ. ಆದರೂ ಅವನು ಮುಂದೆ ಸಾತಾರೆಯ ಕಡೆಗೆ ಹಣಿಕಿಹಾಕಲಿಲ್ಲ.

ಈ ಕಾಲಕ್ಕೆ ಗುತ್ತಿಯ ಮುರಾರಿರಾಯನ ತಮ್ಮನಾದ ಸಿದ್ದೋಜಿ ಘೋರ್ಪಡೆ, ಸವಣೂರನವಾಬ, ದಾವಾಜಿಥೋರಾತ್ ಕೃಷ್ಣರಾವ ಕಟಾವಕರ ಮುಂತಾದವರು ಕೊಲ್ಹಾಪುರದವರ ಬೆಂಬಲದಿಂದ ಶಾಹುಮಹಾರಾಜನ ರಾಜ್ಯದಲ್ಲಿ ಹಾವಳಿ ಮಾಡಹತ್ತಿದರು. ಇವರೊಳಗೆ ದಾವಾಜಿಥೋರಾತನು ಸಾಟಸದ ನೆರೆಯಲ್ಲಿದ್ದ ಹಿಂಗಣಿಗಾವವೆಂಬಲ್ಲಿರುತ್ತಿದ್ದನು. ಇದುದರಿಂದ ಅವನ ಹಾವಳಿಯನ್ನು ತಗ್ಗಿಸುವದು ಅವಶ್ಯವಾಗಿತ್ತು. ಈ ಕೆಲಸವನ್ನು ಬಾಳಾಜಿಯು ಕೈಕೊಂಡು ಅಲ್ಲಿಗೆ ದಂಡೆತ್ತಿ ಹೋದನು. ಆದರೆ ದಾವಾಜಿಯು ಮೋಸಮಾಡಿ, ಅವನನ್ನೂ ಅವನಿಬ್ಬರು ಗಂಡು ಮಕ್ಕಳನ್ನೂ ಪುರಂದರೆ ಅಂಬಾಜಿ ಯೆಂಬವನನ್ನೂ ಹಿಡಿದು ಸೆರೆಯಲ್ಲಿಟ್ಟನು. ಆಗ ಪಿಲಾಜಿ ಜಾಧವನೆಂಬವನು ದಾವಾಜಿಯು ಕೇಳಿದಷ್ಟು ಹಣವನ್ನು ತಂದುಕೊಟ್ಟು ಬಾಳಾಜಿಯನ್ನೂ ಅವನ ಮಕ್ಕಳನ್ನೂ ಬಿಡಿಸಿಕೊಂಡನು.

ಆರ್. ಹೆಚ್. ದೇಶಪಾಂಡೆ. ಎಂ. ಎ.

---

* ಚಂದ್ರಸೇನನು ನಿಜಾಮನ ಕಡೆಗೆ ಹೋಗುವಾಗ ಸರಲಷ್ಕರನನ್ನು ಸೋಲಿಸಿದ ಹೊರತು ಬೇರೆ ಅವಿಯನ್ನು ಹಾಕಲಕ್ಕಿಲ್ಲೆಂತಲೂ ಶಾಹುಮಹಾರಾಜನು ಬಾಳಾಜಿಯನ್ನೊಪ್ಪಿಸಿದ ಹೊರತು ಅವನಿಗೆ ಕಯ್ಯುಗಿಯಲಿಕ್ಕಿಲ್ಲೆಂತಲೂ ಪ್ರತಿಜ್ಞೆ ಮಾಡಿದುದಲ್ಲದೆ ಅನಂತರೆಯೇ ನಡೆದನು. ಮರಾಟಬಖ್ಖರ.

K796
5419

ವಿದ್ಯಾದಾಯಿನಿ.

ಸಿನೋಭಾಗ.

೧೮೯೭.

ಮೈಸೂರು :

ಗಾ್ರಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಪ್ರೆಸ್.

ವಿಷಯಗಳನ್ನು ಬರೆದವರ ಹೆಸರು.

ಎಡಿಟರ್.

ಮಾ॥ ರಾ॥ ಎಲ್. ಜಯರಾವ್, ಬಿ ಎ.

,, ಎಂ. ಹಿರಿಯಣ್ಣ, ಬಿ. ಎ. ಎಲ್. ಟಿ.

,, ಕೆ. ಚಿಂತಾಮಣಿರಾವ್, ಬಿ. ಎ. ಎಲ್. ಟಿ.

,, ಎಸ್. ಶಾಮರಾವ್, ಬಿ. ಎ.

,, ಕೆ. ಸಂಜೀವಸೆಟ್ಟಿ, ಬಿ. ಎ.

,, ಎಂ. ವೆಂಕಟಕೃಷ್ಣಯ್ಯ, ಹೆಡ್‌ಮ್ಯಾಸ್ಟರ್.

,, ಕೆ. ಲಕ್ಷ್ಮೀನಾರಣಪ್ಪ, ಅ| ಮಾ| ಮಹಾರಾಣಿ ಗರ್‌ಸ್ಕೂಲ್.

,, ಕೆ. ಶೇಷಾದ್ರಿಐಂಗಾರ್, ಅಗ್ರಿಕಲ್ಚರ್ ಲೆಕ್ಚರರ್.

,, ಎಚ್. ಲಕ್ಷ್ಮೀನರಸಿಂಹೈಯ್ಯ, ಕ್ರಿಶ್ಚಿಯನ್ ಕಾಲಿಜ್, ಕನ್ನಡಪಂಡಿತರು

,, ಕುಂಡಲಗಿರಿ ಆಚಾರ್ಯರು, ನಾರ್ಮಲ್‌ಸ್ಕೂಲು ಪಂಡಿತರು.

,, ಕೆ. ವರದಾಚಾರ್, ಮಹಾರಾಜಾಕಾಲಿಜ್ ಪಂಡಿತರು.

,, ಕೆ. ರಾಮಸ್ವಾಮಿ ಐಂಗಾರ್.

,, ಕೆ. ನರಸಿಂಹಐಂಗಾರ್.

,, ಕೆ. ಸುಬ್ರಹ್ಮಣ್ಯಶಾಸ್ತ್ರಿಗಳು.

ಇವರೇ ಮುಂತಾದವರು.

ವಿದ್ಯಾದಾಯಿನಿಯ ಐದನೇಭಾಗದ ವಿಷಯಸೂಚನೆ

೧ ಎಡಿಟರವರ ನೋಟ್ಸು.

೨ ಪ್ರಸಿದ್ಧಪುರುಷರು (Eminent Educationists)

ಪೆಸ್ಟಲಾಟ್ಸಿ

ಡಾಕ್ಟರ್ ಮಿಲ್ಲರ್

ವ್ಯಾಂಕ್ಸಾಮಿನರ್‌ನ್ ಫ್ರೋಪ್

೩ ಮಹಾರಾಣಿ ವಿಕ್ಟೋರಿಯ ಚರಿತ್ರೆ

೪ ರಾಯಬಹದ್ದೂರು ಸಾಧುಶೇಷಯ್ಯನವರ

೫ ಪ್ರಾಣಿಶಾಸ್ತ್ರ (Object Lessor)

ನೀರ್ಗುದುರೆ

ರೇಷ್ಮೆಹುಳು

ಮೊಸಳೆ

ಕಾಲ್ನಡೆಗಳು

೬ ವನಸ್ಪತಿಶಾಸ್ತ್ರ

ಬೆಳೆಗಳ ಪರಿವರ್ತನೆ

ತೆಂಗಿನಗಿಡ

ಅಡಿಕೆ

ಸಸ್ಯಗಳು

೭ ಪಾಠಕ್ರಮ ಮತ್ತು ಟಿಪ್ಪಣಿ (Notes of Lessons)

ಸೀಸ

ವ್ಯವಕಲನ

ಪಾಠಶೋಧನೆ

ಸತ್ಯವಾಕ್ಯ

ಉಪ್ಪು

ಬರವಣಿಗೆ

೪ ಭೂವಿವರಣೆ (Geography)

ಕಾವೇರಿನದಿ

ನೈಲ್‌ನದಿ

ಶಿವನಸಮುದ್ರ

ಭೂಮಿಯ ಆಕಾರ

ಭೂಗೋಳ

೯ ಗಣಿತ ಮತ್ತು ಬಾಯಿಪಾಠ Arithmetic, Mental

೧೦ ಹಾಡುಗಳು (Action Songs)

೧೧ ಕಥೆಗಳು (Stories)

೧೨ ಪ್ರಶ್ನಪತ್ರಿಕೆಗಳು (Examination papers)

೧೩ ಸೂಚನೆಗಳು ಮತ್ತು ಸಮಾಚಾರಗಳು (Educational News ond Notes)

೧೪ ವಿದ್ಯಾಭ್ಯಾಸದ ಇಲಾಖೆಯ ಸರ್ಕ್ಯುಲರ್ (EducationalCirculars)

೧೫ ಗ್ರಂಥವಿಮರ್ಸೆ (Reviews of books)

೧೬ ಮೈಸೂರು ದೇಶೀಯ ಪರೀಕ್ಷಕರು (Examiners)

೧೭ (General Articles) ಉದ್ಭಿಜ್ಜಶಾಸ್ತ್ರ, ಭಾಷಾವಿಚಾರ, ಅದ್ಭುತವಾದ ಪೂರಕಾನ್ವೀಕರಣಗಳು, ಆರೋಗ್ಯದೃಢಕಾಯತ್ವ, ಆರ್ಯವೈದ್ಯಶಾಸ್ತ್ರ, ಬಾಲಕರ ದೇಹದಾರ್ಢ್ಯ, ಉಪಾಧ್ಯಾಯಸಂಘ, ಸ್ನೇಹಿತರ ಸಂಭಾಷಣೆ, ವಿದ್ಯಾಭ್ಯಾಸದ ಉದ್ದೇಶ, ಮಿಸೆಸ್ ಅನಿಬಿಸಾಂಟರವರ ಬುದ್ಧಿವಾದ, ವ್ಯಾಸಂಗವಿಧಾನ, ವಿವೇಕಾವಿವೇಕಫಲ, ಹಾರುವುದು ಮತ್ತು ಈಜುವುದು, ದೇಶಭಾಷೆ, ನೀತ್ಯಾನುಶಾಸನ, ಮೈಸೂರುದೇಶದ ಕಾಡುಜನರು, ಸೋಲಿಗರು, ಜೀನುಕುರುಬರು, ಡೈಮಂಡ್‌ಜ್ಯೂಬಿಲಿ; ಕಿಂಡರ್‌ಗಾರ್ಟ್ನ್ (Kindergarten)

ಚಿತ್ರಪಠಗಳು (Illustrations)

೨ ನೀರ್ಗುದುರೆ ೨ ಪೊಸಳೆ